# ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ

# ಆತ್ಮಚರಿತ್ರೆ

# ಮತ್ತು

# ಕಾರ್ಯಾಲಯದ ಇತಿಹಾಸ

## ಭಾಗ - 2



ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573211 08175-273820
2007

# ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ

## ಭಾಗ - 2

ಸಂಗ್ರಹ : ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಮತ್ತು ಮಾಸ ಪತ್ರಿಕೆಯಿಂದ

ಕ್ರಮಾಂಕ 230

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211
☎ : 08175-273820
2007

ಮೊದಲನೆಯ ಮುದ್ರಣ : 2007 - 1000 ಪ್ರತಿಗಳು

ಪುಟಗಳು : (ಭಾಗ-1) 28+483 = 511
ಪುಟಗಳು : (ಭಾಗ-2) 10+340 = 350

ಬೆಲೆ : ರೂ. 125/-

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :

**ಶ್ರೀಮತಿ ಸುಧಾ**
ನಂ. 1, 11ನೇ ಅಡ್ಡರಸ್ತೆ
6ನೇ ಮುಖ್ಯರಸ್ತೆ, ನ.ರಾ. ಕಾಲೋನಿ
ಬೆಂಗಳೂರು - 560 019
☎ : 65990721

ಮುದ್ರಣಕಾರರು :

**ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
☎ : 26766342

# ಪ್ರಕಾಶಕರ ಬಿನ್ನಹ

ದೈವ ಚಿತ್ತದ ಪ್ರವಾಹ, ಅದರಲ್ಲಿ ಮೈಮನವನ್ನು ಒಪ್ಪಿಸಿಕೊಂಡವನನ್ನು ಹೇಗೆ ತೇಲಿಸಿ, ಹಾರಿಸಿ ವಿಸ್ಮಯಕರವಾದ ತನ್ನದೇ ಗುರಿಗೆ ಕರೆದೊಯ್ಯುತ್ತದೆ. ಎಂತಹ ಅತಿ ಶ್ರೇಷ್ಠತೆಯ ಮೆರುಗನ್ನು ನೀಡುತ್ತದೆ ಎಂಬುದೇ ನೀವು ಓದಿರುವ ಶ್ರೀಶ್ರೀಗಳವರ ಆತ್ಮಚರಿತ್ರೆ (ಭಾಗ-1) ಕಥೆಯ ಸ್ವಾರಸ್ಯ. ಅದರಲ್ಲಿ ಕಾಣುವ ಜೀವರಸವನ್ನು, ಈಗ ಕಾರ್ಯಾಲಯದ ಇತಿಹಾಸವೆಂದು ಮುಂದುವರೆಸಿರುವ ಈ ಭಾಗದಲ್ಲಿ ಅಷ್ಟಾಗಿ ಕಾಣದಿರಬಹುದು. ಕಾರಣ, ತಮ್ಮ ಸಂನ್ಯಾಸ ಸ್ವೀಕಾರದೊಡನೆ ಶ್ರೀಶ್ರೀಗಳವರು ಆಶ್ರಮಧರ್ಮಕ್ಕೆ, ಮೊದಲಿನಿಂದಲೂ ಸಹಜವಾಗಿದ್ದ ತಮ್ಮ ನಡೆಗೆ, ಅನುಗುಣವಾಗಿ ತೆರೆಯ ಹಿಂದೆ ಸರಿದರು. ಆದರೂ, ತಮ್ಮದ್ದಾದ ಯಾವ ಕರ್ತೃತ್ವವಿಲ್ಲದಿದ್ದರೂ ಅವರ ಅಪಾರ ಲೌಕಿಕ ಅನುಭವ ಮತ್ತು ವಿಶೇಷ ನೀತಿ-ಧರ್ಮ ಪ್ರಜ್ಞೆಯು ಮಾರ್ಗ ದರ್ಶನದ ರೂಪವಾಗಿ ಹರಿಯುತ್ತಲೇ ಬಂತು. ಅವರ ಜೀವನವೇ ಕಾರ್ಯಾ ಲಯದ ಭಾಗವಾಗಿ ನಿಂತ ಕಾಲ, ಹಿಂದಿನಂತೆ ಪ್ರಮುಖವಾದ ನೂಲಿನಂತಲ್ಲ, ಹಿನ್ನೆಲೆಯಂತೆ ತೆಳುವಾದ ರಂಗಿನ ಲೇಪ ನೀಡುವ ಎಳೆಯಾಗಿ. ಇದರಿಂದಲೇ ಕಾರ್ಯಪಟ್ಟಿಯಾಗಿ ನೀರಸವಿವರಗಳಿರಬಹು ದಾದಲ್ಲಿಯೂ ಒಂದು ತೆರನ ಆಸಕ್ತಿಯನ್ನುಳಿಸಿರುತ್ತದೆ, ಮನವರಳಿ ಓದುವವರಿಗೆ.

ಒಳ್ಳೆಯ ವಿಷಯ ಎಲ್ಲೇ ಇರಲಿ, ಯಾರಿಂದಲೇ ಬರಲಿ (ಬಾಲಾದಪಿ ಶುಕಾದಪಿ) ವೃದ್ಧಾಪ್ಯ ಆಯಾಸವನ್ನು ಪರಿಗಣಿಸದೆ ತತ್ತ್ವ ಸಂಪಾದನೆಯ ಉತ್ಸುಕತೆ - ಇಳಿ ವಯಸ್ಸಿನಲ್ಲೂ ಈಗ್ಗೆ ಹಿಂದಿನ ಐವತ್ತು ವರ್ಷಗಳಲ್ಲಿ ಪ್ರಯಾಣಕ್ಕಿದ್ದ ಅನಾನುಕೂಲತೆಯನ್ನು ಮನಸ್ಸಿಗೇತಾರದೆ ಪಶ್ಚಿಮ, ಉತ್ತರ, ದಕ್ಷಿಣ ಭಾರತದ, ಪೂರ್ವದಲ್ಲಿ ಕೊಲ್ಕತ್ತಾವರೆಗಿನ ಪ್ರವಾಸವನ್ನು ಕೈಗೊಂಡ ಕಾರ್ಯಶ್ರದ್ಧೆ, ಸಕಲ ಜನೋಪಕಾರಿಯಾಗಿರುವ ತಮ್ಮ ಜೀವನ ಗುರಿಯಾದ ಅಧ್ಯಾತ್ಮ ಮಾರ್ಗವನ್ನು ಎಲ್ಲೆಡೆ ಪ್ರಸರಿಸುವ ಜೀವನೋದ್ದೇಶ-ತತ್ತ್ವನಿಷ್ಠೆ, ಕಾಶಿಯಲ್ಲಿ ಪ್ರೊ. ಟಿ.ಆರ್.ವಿ. ಮೂರ್ತಿಯವರೊಡನೆ ಸಮಾಲೋಚನೆ ವಿಚಾರ ವಿನಿಮಯಗಳಿಂದ ಸಂಗ್ರಹಿಸಿದ ಉತ್ತಮ ವಿಷಯಗಳನ್ನು ತಮ್ಮ ಮಾಂಡೂಕ್ಯ ರಹಸ್ಯ ವಿವೃತಿಯ ಉದ್ದಾಮ ಪೀಠಿಕೆಗೆ ಬಳಸುವ ತೆರೆದ ಮನಸ್ಸು, ಹಿಡಿದ ಗುರಿಯನ್ನು ಸಾಧಿಸುವ ಛಲ, 93-94ನೆ ವಯಸ್ಸಿನವರೆಗೂ ಒಬ್ಬನೇ ವಿದ್ಯಾರ್ಥಿ ಎಂದು ಉಪೇಕ್ಷೆ ಮಾಡದೆ ಆಸಕ್ತಿಯಿಂದ ಪಾಠ ಹೇಳುತ್ತಿದ್ದ ಅವರ ಕರ್ತವ್ಯಪ್ರಜ್ಞೆ, ಲೇಖನಗಳಲ್ಲಿನ ಸರಳತೆ, ಗ್ರಂಥಗಳಲ್ಲಿನ ನಿಖರತೆ, ಅದಕ್ಕೆ ಸಹಾಯಕವಾಗುವ ಅಂಶಗಳನ್ನು ಪರಿಶಿಷ್ಟ- ಟಿಪ್ಪಣಿ-ವಿಷಯ ಸೂಚಿಗಳಲ್ಲಿ ಜೋಡಣೆ - ಇಂತಹ ಅನೇಕ ಹಿರಿಮೆಗಳನ್ನು ಈ ಭಾಗದಲ್ಲಿ ಸಹಜವಾಗಿ ಎತ್ತಿ ತೋರಿಸುವ ಅವರ ಅಪರೂಪದ ವ್ಯಕ್ತಿತ್ವವನ್ನು ಇತಿಹಾಸದ ಅಂತರಂಗ ವನ್ನು ಕಾಣುವವರಿಗೆ, ಇದು ಸ್ವಾರಸ್ಯವಿಲ್ಲದ ಬರಡೆನಿಸಲಾರದು.

ಅವರ ನಿರ್ಯಾಣದನಂತರ ಕಾರ್ಯಾಲಯದ ನಡೆ, ದೇಹ ಮರೆಯಾದರೂ ಶ್ರೀಗಳವರ ಚೈತನ್ಯದ ಹರಿವನ್ನು, ಅದು ಮಾಡಿಸಿದ ಕಾರ್ಯ ಸಾಧನೆಯನ್ನು ಪ್ರಸ್ತಾಪಿಸಿದೆ. ಕಾರ್ಯಾಲಯದ ಇತಿಹಾಸವನ್ನು ಹೇಳುವದೇ ಶ್ರೀಶ್ರೀಗಳವರ ಇಚ್ಛೆಯಾಗಿತ್ತು. ಹಾಗೆಂದೇ ಶ್ರೀಶ್ರೀಗಳು ಪೀಠಿಕೆಯಲ್ಲಿ (ಭಾಗ-1) ಸ್ಪಷ್ಟಪಡಿಸಿದ್ದಾರೆ. ಉಪಸಂಹಾರ (ಪುಟ 5, ಭಾಗ-1)ದಲ್ಲಿರುವ "ಮುಂದೆ ಕೆಲಸ ಮಾಡುವವರಿಗೆ ಉತ್ಸಾಹಜನಕವಾದ ಒಂದು ಸಾಧನವಾಗಿರುವದು ; ಕಾರ್ಯಾಲಯದ ಕ್ರಮದಲ್ಲಿ ದೋಷವನ್ನು ಕಂಡುಹಿಡಿದು ಇನ್ನೂ ಉತ್ತಮವಾದ ರೀತಿಯಲ್ಲಿ ಇಂತಹ ಕಾರ್ಯವನ್ನು ಮಾಡಬಹುದೆಂದು ಬಗೆಯುವವರಿಗೆ ಸ್ಫೂರ್ತಿದಾಯಕವಾಗಿರುವದು ; ಅಧ್ಯಾತ್ಮ ವಿದ್ಯೆಯಲ್ಲಿ ಸಾಧಕರಾಗಿರುವವರಿಗೆ ಉಪಯೋಗವಾಗುವ ಹಲವು ಸೂಚನೆಗಳನ್ನೂ ಒಳಗೊಂಡ ಒಂದು ಕೈಪಿಡಿಯಾಗಿರುವದು ಎಂಬ ಆಶೆಯೂ ನನಗೆ ಇದೆ" - ಈ ಮಾತುಗಳನ್ನು ನೆನಪಿಸಿಕೊಳ್ಳಬಹುದು.

ಈ ಇತಿಹಾಸದಲ್ಲಿ ಶ್ರೀಶ್ರೀಗಳವರ ಮುಂದಾಳತ್ವದಲ್ಲಿ ನಡೆದು ಬಂದ ದಾರಿ, ಅವರು ಆಚರಿಸಿದ ಧ್ಯೇಯ, ಮಾರ್ಗದರ್ಶನಗಳ ಸ್ಮರಣೆ ಪುಸ್ತಕದುದ್ದಕ್ಕೂ ತಾನಾಗಿಯೇ ಜೊತೆಗೂಡಿ ಬರುತ್ತದೆ. ಅಷ್ಟೇ ಮಟ್ಟಿಗೆ ಶ್ರೀಗಳವರ ವಿಚಾರ ಹಿರಿಮೆ, ಮೇಲ್ಮೆಗಳು ಸೂಚಿತವಾಗುತ್ತಾ ಇರುತ್ತವೆ, ಅವರ ನಡೆಯ ಒಂದೊಂದು ಮುಖ ಗೋಚರವಾಗುತ್ತದೆ. ಇವು ಅವರ ಚರಿತ್ರೆಗೆ ಪೂರಕವಾಗಿಯೇ, ಗುಣವಿಮರ್ಶೆ ಸಹಜ ಪ್ರಶಂಸೆಗಳೊಂದಿಗೆ ಮೂಡುತ್ತವೆ. ಬಹುಶಃ ಇದು ಶ್ರೀಶ್ರೀಗಳ ಆತ್ಮಕಥೆಯ ಸಮಗ್ರತೆಗೆ ಒಪ್ಪಾಗುತ್ತದೆ.

ಇದೆಲ್ಲಕ್ಕೂ ಶಿಖರ ಪ್ರಾಯವಾಗಿರುವದು ವಿದ್ವಾಂಸರ ಲೇಖನಗಳು, ಎಲೆಮರೆಯಲ್ಲೇ ನಿಂತ ಅಸಾಧಾರಣ ಶ್ರೇಷ್ಠ ಶಿಷ್ಯರೊಬ್ಬರ ಹೆಚ್ಚಳ, ವೈಶಿಷ್ಟ್ಯಗಳನ್ನು ಅನೇಕ ದೃಷ್ಟಿಗಳಿಂದ ಅಳೆದಿವೆ. ಅವರ ವ್ಯಕ್ತಿ ವಿಶೇಷ , ಹಿರಿಮೆ ಬರವಣಿಗೆಯ ಶೈಲಿಯ ಸೊಗಸು, ಅವರ ಧ್ಯೇಯ, ಮಾನವೀಯತೆಯ ಗುಣಗಳು - ಇವೆಲ್ಲವನ್ನೂ ಕಣ್ಣ ಮುಂದಿಡುತ್ತವೆ. ಕೆಲವು ಮಹನೀಯರಿಂದಾದ ಸಹಾಯ, ಕಾರ್ಯಾಲಯದ ಬೆಳವಣಿಗೆಗೆ ಆಗಿರುವ ಉಪಕಾರಗಳಿಂದ ಅವರ ಕಿರುಪರಿಚಯವಿದೆ. ಕೆಲವು ಬೆಳವಣಿಗೆಯ ಸೂಚ್ಯಂಕಗಳೆಂದು ಕೇವಲ ಅಂಕಿಅಂಶಗಳನ್ನು ಜೋಡಿಸಿದೆ.

ಈ ಭಾಗದಲ್ಲಿ ಗೆಲುವಿನ ಅಂಶಗಳನ್ನು ಬರೆದಂತೆ, ಕಾರ್ಯಾಲಯದ ಅಶಕ್ತತೆ, ಮಾನವ ಸಹಜ ತಪ್ಪುಗಳು, ಅನಾನುಕೂಲಗಳು ಇತಿಮಿತಿಗಳನ್ನು ಪ್ರಾಂಜಲವಾಗಿ ಒಪ್ಪಿ ತೋರಿಸುವ ಪ್ರಯತ್ನವೂ ಇದೆ. ಇತಿಹಾಸವೆಂದು ಬರೆಯ ಹೊರಟಾಗ, ಹಿನ್ನೋಟದಲ್ಲಿ ಕೆಲವು ದೋಷಗಳು ಸಾಮಾನ್ಯವಾಗಿಯೇ ತೋರಿಕೊಳ್ಳುತ್ತವೆ. ಆದರೆ ಹೀಗೆ ಕೆಲವು ತೊಡರುಗಳ ಸೂಚನೆಯಲ್ಲಿ ಯಾರನ್ನೂ ಉದ್ದೇಶಿಸಿರುವದಿಲ್ಲ. ಅವೆಲ್ಲ ಕಾರ್ಯ

ವ್ಯವಸ್ಥೆಯ, ನಡೆಸುವವರ ಸನ್ನಿವೇಶ ಲೋಪದೋಷಗಳೆಂದು ಎಣಿಸುವ ಬದಲಿಗೆ ವಿಪರೀತಾರ್ಥವನ್ನು ಕಲ್ಪಿಸಬಾರದೆಂದು ಓದುಗರಲ್ಲಿ ಪ್ರಾರ್ಥನೆ. ಹಾಗೆಯೇ, ಇಲ್ಲಿಯ ಯಾವದೇ ಬರವಣಿಗೆಯಲ್ಲಾಗಲೀ ಉತ್ಪ್ರೇಕ್ಷೆ, ವಿನಾ ಪ್ರಶಂಸೆಗಾಗಲಿ ಪ್ರಯತ್ನಪೂರ್ವಕ ವಾಗಿ ಅವಕಾಶವನ್ನು ಕೊಟ್ಟಿಲ್ಲ.

ಗ್ರಂಥಭಾಗ ಉದ್ದವಾದರೆ ಓದುಗರಿಗೆ ಬೇಸರ ಬಂದೀತೆಂದು, ಅನೇಕ ಬಾರಿ ಪುಸ್ತಕದ ಪುನರ್ವಿಮರ್ಶೆ, ಚರ್ಚೆಗಳನ್ನು ಮಾಡಿ, ಕೆಲವೊಂದು ಪುಟಗಳನ್ನು ಮೊಟಕು ಮಾಡಿದೆ. ಆದರೆ ಮೂಲ ಉದ್ದೇಶಕ್ಕೆ ವಿರೋಧವಾಗದಂತೆ, ಇತಿಹಾಸದ ಭಾಗ ತುಂಡಾಗದಂತೆ ಸಾಧ್ಯವಾದಷ್ಟೂ ಸಮತೋಲನವನ್ನು ಕಾಪಾಡುವ ಯತ್ನವೂ ನಡೆದಿದೆ. ಎಷ್ಟರ ಮಟ್ಟಿಗೆ ಈ ಕಾರ್ಯ ಸಫಲವಾಗಿದೆ ಎಂಬುದು, ಓದುಗರ ಅಭಿಪ್ರಾಯದಂತೆ. ಇಷ್ಟಾದರೂ ಸಾಕಷ್ಟು ಪುಟ ಸಂಖ್ಯೆ ಹೆಚ್ಚಿದೆ ಎನಿಸಿದರೆ, ಅದು ಕಾರ್ಯಾಲಯದಲ್ಲಿ ಏನು, ಹೇಗೆ ನಡೆಯಿತು ಎಂಬುದನ್ನು ತಿಳಿಸುವ ಉದ್ದೇಶ ಕಾರಣದಿಂದ ಅನಿವಾರ್ಯವಾಗಿತ್ತು.

ಶ್ರೀಶ್ರೀಗಳವರ ಸ್ವಹಸ್ತ ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ (ಭಾಗ 1+2) ಪ್ರಕಟಣೆಯ ಮಹತ್ಕಾರ್ಯವನ್ನು ತಮ್ಮದೇ ಕರ್ತವ್ಯ ಎಂಬಂತೆ ವರ್ಷಕಾಲ ಹಗಲಿರುಳೂ ಹಸ್ತಪ್ರತಿಸಂಗ್ರಹ, ಡಿ.ಟಿ.ಪಿಯನ್ನು ನಿಂತು ಮಾಡಿಸುವದು, ತಾವೇ ಕರಡು ತಿದ್ದುವದಲ್ಲದೆ ಉಪಯುಕ್ತವಾದವರಿಂದಲೂ ಎರಡು, ಮೂರು ತಿದ್ದುಪಡಿಗಳನ್ನು ಮಾಡಿಸಿ ಕಾರ್ಯಾಲಯಕ್ಕೆ 10-12 ವರ್ಷಗಳಿಂದಲೂ ಸಲ್ಲಿಸಿರುವ ಅಪ್ರತಿಮ ಸೇವೆಗೆ ಶಿಖರರೂಪಿಯಾಗಿ ನಡೆಸಿಕೊಟ್ಟ ಶ್ರೀ ಹೆಚ್. ವೆಂಕಟನರಸಪ್ಪನವರಿಗೆ; ಆರೇಳು ಕರಡು ತಿದ್ದುಪಡಿಯನ್ನು ಮಾಡಿ ಸಮಯೋಚಿತ ಸಲಹೆಗಳನ್ನು ನೀಡಿರುವ ವಿಶ್ವಾಸಿಗಳು ಪ್ರಧಾನವಾಗಿ ಶ್ರೀ ಕೆ. ರಾಮಮೋಹನ್‌ರವರು ; ನಾಲ್ಕಾರು ಬಾರಿ ಬರೆದದ್ದನ್ನು ತುಂಡು ಮಾಡಿ ಸೇರಿಸಿ ತಿದ್ದುಪಡಿಗಳನ್ನು ಕೆಲವೊಮ್ಮೆ ಏಳು ಕರಡುಗಳವರೆಗೂ ಶ್ರಮಸಾಧ್ಯ ವಾದರೂ ಬೇಸರವಿಲ್ಲದೆ ಶ್ರದ್ಧೆಯಿಂದಲೇ ಅಳವಡಿಸುತ್ತ ಸುಂದರ ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀಮತಿ ಸುಧಾರವರು ; ವಿಚಕ್ಷಣೆಯಿಂದ ಮುದ್ರಿಸಿರುವ ಮಾರುತಿ ಪ್ರಿಂಟರ್ಸ್‌ನ ಶ್ರೀ ಶಾರದಾ ಪ್ರಸಾದ್‌ರವರು ; ಪುಸ್ತಕವನ್ನು ಪ್ರಕಟಣೆಗೆ ತರಲು ಉಪಕಾರ ಮಾಡಿದ ಉದಾರಮನಸ್ಕ ದಾನಿಗಳು, ಮತ್ತು ಯಾವದೇ ರೀತಿಯಲ್ಲಾದರೂ ಸಹಾಯ ಮಾಡಿದ ಎಲ್ಲ ಬಾಂಧವರಿಗೂ ಕಾರ್ಯಾಲಯದ ಕೃತಜ್ಞತೆಗಳು. ಅವರೆಲ್ಲರ ಒಳಿತಿಗಾಗಿ, ಶ್ರೇಯಸ್ಸಿಗಾಗಿ, ಸದ್ಗುರುವಿನ ಆಶೀರ್ವಾದಕ್ಕಾಗಿ ಭಗವಂತನಲ್ಲಿ ಪ್ರಾರ್ಥನೆ.

ಸರ್ವಜಿತು ಸಂವತ್ಸರ ಪ್ರಕಾಶಕರು
ಚೈತ್ರ ಬಹುಳ ಷಷ್ಠಿ, ಭಾನುವಾರ
8-4-2007

# ವಿಷಯಾನುಕ್ರಮಣಿಕೆ

ವಿ.ಸೂ. (ಕಂಸದಲ್ಲಿರುವ ಸಂಖ್ಯೆಗಳು ( ) ಪುಟ ಸಂಖ್ಯೆಯನ್ನು ಸೂಚಿಸುತ್ತವೆ)

## ಭಾಗ - 2

## ಅಧ್ಯಾಯ - 1

## ಸಂನ್ಯಾಸದ ಅನಂತರ ಮಹಾನಿರ್ಯಾಣದವರೆಗೆ (1948-1975)

ಪುಟ

ಪ್ರಕಾಶಕರ ಬಿನ್ನಹ 3

ತೆರೆಯ ಹಿಂದೆ ಸರಿದ ವಿರಕ್ತರು 1

1) ಪುರೋಭಿವೃದ್ಧಿ (1949-54) 2

ಶ್ರೀ ದಿಗ್ವಿಜಯ ರಾಮದೇವರ ಪ್ರತಿಷ್ಠೆ (2) ; ಶ್ರೀಶ್ರೀಗಳವರ ಪ್ರವಾಸ (3) ; ಗ್ರಂಥ ಪ್ರಕಟನೆ (6) ; ವಿದ್ಯಾನಿಲಯ (7) ; ಪಂಡಿತರು (9) ; ಪುರಾಣ ಶ್ರವಣ (9) ; ಸ್ವಂತ ಮುದ್ರಣಾಲಯ (11) ; ಮಾಸಪತ್ರಿಕೆ (12) ; ಕಟ್ಟಡದ ಬೆಳವಣಿಗೆ (12) ; ಗದ್ದೆಯನ್ನು ಕೊಂಡದ್ದು (12) ; ಭಾವಚಿತ್ರಗಳ ಅನಾವರಣೋತ್ಸವ (13) ; ವಿದ್ಯಾ ಇಲಾಖೆಯವರ ಪ್ರೋತ್ಸಾಹ (13).

2) ಪ್ರಗತಿಯ ಪಥದಲ್ಲಿ (1955-60) 14

ಶ್ರೀಶ್ರೀಗಳವರ ಉತ್ತರ-ಪಶ್ಚಿಮ ಭಾರತ ಪ್ರವಾಸ (14) ; ದಕ್ಷಿಣ ದೇಶ ಪ್ರವಾಸ (16) ; ವೇದಾಂತ ವಿಚಾರ ಗೋಷ್ಠಿ (18) ; ಗ್ರಂಥಗಳು (20) ; ಅಧ್ಯಾತ್ಮ ವಿದ್ಯಾಲಯ (22) ; ಲೆಕ್ಕ ಪತ್ರಗಳ ತನಿಖೆ (23) ; ಶಾಖಾ ಕಾರ್ಯಾಲಯ (25) ; ಭೂದಾನ (26) ; ಕಟ್ಟಡ (27) ; ಮುದ್ರಣಾಲಯ (27).

3. ವಿಶೇಷಾಭಿವೃದ್ಧಿಯ ಮಾರ್ಗದಲ್ಲಿ (1961-67) 28

ಶ್ರೀಶ್ರೀಗಳವರ ಪ್ರವಾಸ (28) ; ವಿಶ್ವಭಾರತ ಪ್ರವಾಸ (30) ; ಶ್ರೀಶ್ರೀಗಳವರ ಅನಾರೋಗ್ಯ-ಪರಿಹಾರ (33) ; ಅನುಷ್ಠಾನಗಳು : ಹರೇರಾಮ ಮಂತ್ರ ಜಪಾನುಷ್ಠಾನ (36) ; ಶ್ರೀ ಶೃಂಗೇರಿ ಜಗದ್ಗುರು ಪೀಠಾಧೀಶ್ವರರ ಭೇಟಿ (38) ; ಗ್ರಂಥಪ್ರಕಟನೆ (38) ; ಭಾರತ ಸರ್ಕಾರದ ಪ್ರೋತ್ಸಾಹ (42) ; ಅಧ್ಯಾತ್ಮ ವಿದ್ಯಾನಿಲಯ (43) ; ಪತ್ರಿಕೆ (43) ; ಶ್ರೀ ಶಂಕರ ಶಿಲಾಮೂರ್ತಿಯ ಚಲ ಪ್ರತಿಷ್ಠೆ (45) ; ಪ್ರೈವೇಟ್ ಟ್ರಸ್ಟ್ (45) ; ಸಂದರ್ಶಕರು (46).

4. ಮುನ್ನಡೆಯ ಹಾದಿಯಲ್ಲಿ (1967-72) 47

ಗುರುಗಳ ಆರೋಗ್ಯ (47) ; ಶ್ರೀಶ್ರೀಗಳವರ ಪ್ರವಾಸ (47) ; ಭಾಗವತ ಸಪ್ತಾಹ (51) ; ಗ್ರಂಥಪ್ರಕಟಣೆ (51) ; ವಿದ್ಯಾಲಯ (52) ; ಸಂನ್ಯಾಸದೀಕ್ಷೆ (53) ; ಪತ್ರಿಕೆ (55) ; ಕಟ್ಟಡ (55) ; ಶಾಖಾಕಾರ್ಯಾಲಯದ ಸ್ಥಾಪನೆ-ಮುನ್ನಡೆ (56).

5. ಕೊನೆಯ ಮೂರು ವರ್ಷಗಳು (1973-75) 59

ಪ್ರವಾಸ (59) ; ಗ್ರಂಥ ಪ್ರಕಟಣೆ (59) ; ಪತ್ರಿಕೆ (60) ; ಶಾಖಾಕಾರ್ಯಾಲಯದ ಉಪನ್ಯಾಸ ಮಂದಿರ (61).

6. ಶ್ರೀಶ್ರೀಗಳವರ ಮಹಾನಿರ್ಯಾಣ (5-8-1975) 64

ಶ್ರೀಶ್ರೀಗಳವರ ಕೊನೆಯ ದಿನಗಳು (64) ; ಮಹಾನಿರ್ಯಾಣ (66) ; ಶೇಷ ವಿಷಯ (71) ; ಶ್ರೀಶ್ರೀಗಳವರ ಆರಾಧನೆಗಳು (73) ; ಪ್ರಥಮವಾರ್ಷಿಕಾ ರಾಧನೆ (73) ; ದ್ವಿತೀಯ ವಾರ್ಷಿಕಾರಾಧನೆ (75) ; ತೃತೀಯ ಆರಾಧನೋತ್ಸವ (76)

## ಅಧ್ಯಾಯ - 2

ಕಾರ್ಯಾಲಯದ ಹೊಸ ಶಕೆಯ ಮಂದಕಿರಣಗಳು (1975-2006) 77

1 ಪೀಠಿಕೆ (77) ; ಗುರುಮಂದಿರ (77)

2. ಕಾರ್ಯಾಲಯದ ಮುಂದುವರಿಕೆ 80

ಹಿನ್ನೋಟ (80) ; ಹೊಸವ್ಯವಸ್ಥೆ (80).

3. ಶ್ರೀಶ್ರೀಗಳವರ ನಿಯಮ ಬದ್ಧ ಕ್ರಮವರಿತ ನಡೆ. 83

4. ಆಡಳಿತ 92

ಟ್ರಸ್ಟಿನ ಕರ್ತವ್ಯ (92) ; ಕಾರ್ಯಾಲಯದ ಸಮಿತಿ (94) ;
ಕೆಲವು ತೀರ್ಮಾನಗಳು (95).

5. ಸಾರಸ್ವತ ಮಹಾಯಜ್ಞ 98

ಪ್ರವಚನಾದಿಗಳು (100) ; ಸಪ್ತಾಹ, ಶಿಬಿರಗಳು (103) ; ಅನುಷ್ಠಾನ ಪೂಜಾದಿಗಳು (107) ; ಅಧ್ಯಾತ್ಮ ಪ್ರಚಾರ (109) ; ಪತ್ರಿಕೆ (110) ; ಪತ್ರಿಕೆಯ ವಿಷಯಕ್ಕೆ ಶ್ರೀಗಳವರ ಪೀಠಿಕಾಲೇಖನ (110) ; ವಿಶೇಷಾಂಕಗಳು (127) ; ಗ್ರಂಥಗಳು (129) ; ವಿದ್ಯಾರ್ಥಿಗಳು-ಪಾಠಗಳು (135) ; ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯ (139).

6. ಸಂನ್ಯಾಸ ದೀಕ್ಷೆ ಪಡೆದ ಶಿಷ್ಯರು 149

ಶ್ರೀ ವಿಠಲ ಶಾಸ್ತ್ರಿಗಳು (149) ; ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು (151) ; ಶ್ರೀ ಪ್ರೇಮಾನಂದ ಸ್ವಾಮಿಗಳು (152) ; ಮತ್ತೂರು ಸುಬ್ರಾಯಾವಧಾನಿಗಳು (152) ; ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು (152) ; ಶ್ರೀಮತಿ ಅಂಬುಜಮ್ಮನವರು (153) ; ಶ್ರೀ ಪ್ರಬೋಧಾನಂದ ಸರಸ್ವತಿಗಳು (153) ; ಶ್ರೀ ಕೈವಲ್ಯಾನಂದರು (153) ; ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಸ್ವಾಮಿಗಳು (154).

7. ಇತರ ವಿಷಯಗಳು 155

ಸನ್ಮಾನ-ಪ್ರಶಸ್ತಿಗಳು (155) ; ಕಾರ್ಯಾಲಯಕ್ಕೆ ಸಂದರ್ಶಕರು (158) ; ಮುಖ್ಯವಾದುದು (162) ; ಮುದ್ರಣಾಲಯ (165).

8. ಬೆಂಗಳೂರು ಶಾಖಾ ಕಾರ್ಯಾಲಯ 167

ಪೀಠಿಕೆ (167) ; ನಿವೇಶನ (168) ; ಗೃಹಪ್ರವೇಶ (169) ; ಕಾರ್ಯಸ್ವರೂಪ (171) ; ಸಪ್ತಾಹಗಳು (176) ; ಅಧ್ಯಾತ್ಮಪ್ರಸಾರ (181) ; ಸಂತಾಪ (182) ; ಟ್ರಸ್ಟ್ ಸಮಿತಿ (184) ; ಶ್ರೀಗಳವರು ಹೇಳಿದ ವಿಷಯಗಳು (185) ; ಪ್ರತ್ಯೇಕ ಟ್ರಸ್ಟ್ (188) ; ಪಬ್ಲಿಕ್ ಟ್ರಸ್ಟ್ ಮಾಡುವ ವಿಚಾರ (189) ; ಶಂಕರ ಭಾಸ್ಕರ ಉಗಮ (192) ; ಚಂದಾದಾರರು (199).

9. ಶಾಖಾ ಕಾರ್ಯಾಲಯಗಳು 202

ಮೈಸೂರಿನಲ್ಲಿ (202) ; ಮತ್ತೂರಿನಲ್ಲಿ (204) ; ರಾಯದುರ್ಗದಲ್ಲಿ (205).

10. ಉಪಸಂಹಾರ 207

ಕಾರ್ಯಾಲಯದ ಉದ್ದೇಶ-ಸಾಧನೆ (207) ; ಈಗ - ಈವರೆಗೆ ನಡೆದು ಬಂದ ಮಾರ್ಗ (207) ; ಮುಂದೆ ಆಗಬೇಕಾದ ಕಾರ್ಯ ವ್ಯವಸ್ಥೆಯ ಕಿರುನೋಟ (208).

## ಅಧ್ಯಾಯ-3

## ವಿದ್ವಾಂಸರ ಲೇಖನಗಳು - ಸಚ್ಚಿದಾನಂದ ಜ್ಯೋತಿ

1. ಅಪೂರ್ವ ಅದ್ವೈತ ಜ್ಯೋತಿ - ವಿದ್ವಾನ್ ಎನ್. ರಂಗನಾಥ ಶರ್ಮಾ 213

2. ಅಭಿನವ ಶಂಕರರ ಸಾರಸ್ವತ ಸೇವೆ - ವಿದ್ವಾನ್ ಎಸ್.ಕೆ. ರಾಮಚಂದ್ರರಾವ್ 218

3. ವೇದಾಂತಕ್ಕೆ ಶ್ರೀಶ್ರೀಗಳವರ ಅಸಾಧಾರಣ ಕೊಡುಗೆ - ವಿದ್ವಾನ್ ಎಸ್.ಕೆ. ರಾಮಚಂದ್ರರಾವ್ 222

4. ಶ್ರೀಗಳ ಸಾರಸ್ವತ ಸೇವೆ - ಡಾ|| ಎನ್.ಎಸ್. ಅನಂತರಂಗಾಚಾರ್ಯರು 228

5. ಗುರುಗಳು - ನಾ ಕಂಡಂತೆ - ಶ್ರೀಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು 230
6. ಶಂಕರ ವೇದಾಂತದ ಪುನರುದ್ಧಾರ - ಡಾ|| ಕೆ.ಬಿ. ರಾಮಕೃಷ್ಣರಾವ್, 232
7. ಅನನ್ಯ ಜ್ಞಾನ ತಪಸ್ವಿಗಳು - ಡಾ|| ಎ.ಎಸ್. ವೇಣುಗೋಪಾಲರಾವ್ 235
8. ವೇದಾಂತ ವಿಜ್ಞಾನ ಸುನಿಶ್ಚಿತಾರ್ಥರು - ಹೆಚ್.ಎಸ್. ಲ.ನ. ಮೂರ್ತಿಗಳು 242
9. ಶ್ರೀ ಶಂಕರ ರೂಪಿ ಶ್ರೀಶ್ರೀಗಳವರು - ಎಸ್. ವಿಠಲ ಶಾಸ್ತ್ರಿಗಳು 244
10. ಪರಿಶುದ್ಧ ಶಾಂಕರಾದ್ವೈತ ವೇದಾಂತಸೂರ್ಯ - ಕೆ.ಜಿ. ಸುಬ್ರಾಯಶರ್ಮಾ 245
11. ಓಮ್. ನಾರಾಯಣ - ಎಂ. ಹನುಮಂತರಾವ್, ಆದೋನಿ 246
12. ಅಭಿನವ ಶಂಕರ ನಮೋ ನಮಃ - ಬಿ. ವೆಂಕಟರಾಮ ಶರ್ಮಾ 249
13. ಉತ್ತಮ ಬೋಧಕ - ಬ್ರಹ್ಮಜ್ಞಕವಿ ದೇವರಾಯ ಕುಲಕರ್ಣಿಗಳು 250
14. ತಿಳಿದದ್ದು ಹೇಗೆ - ಬ್ರಹ್ಮಜ್ಞಕವಿ ದೇವರಾಯ ಕುಲಕರ್ಣಿಗಳು 251

## ವ್ಯಕ್ತಿವಿಶಿಷ್ಟರು

15. ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು - ಡಾ|| ಡಿ.ವಿ. ಗುಂಡಪ್ಪ 253
16. ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸದ್ಗುರುಭ್ಯೋ ನಮಃ - ಬಿ.ಎನ್. ಶ್ರೀನಿವಾಸ ಭಟ್ಟರು 258
17. ಪರಮಾರ್ಥ ಪಥದಲ್ಲಿ - ದೇವರಾಯ ಕುಲಕರ್ಣಿಗಳು 267
18. ನಾನು ಕಂಡ ದೇವರು - ಮತ್ತೂರು ಲಕ್ಷ್ಮೀದೇವಮ್ಮ 273
19. ಯತಿವರೇಣ್ಯರು - ಶ್ರೀಮತಿ ಓ.ಆರ್. ಲಲಿತಮ್ಮ, ಮದನಪಲ್ಲಿ 275
20. ಸಾಕ್ಷಾತ್ ಪರಮಾತ್ಮನೇ - ಶ್ರೀಶ್ರೀ ಭಗವತ್ಪಾದ ಸ್ವಾಮೀಜಿ 276
21. ವೈರಾಗ್ಯ ಚಕ್ರವರ್ತಿಗಳ ಮೆಚ್ಚುಗೆ - ದೇವರಾಯ ಕುಲಕರ್ಣಿಗಳು 279
22. ಶಂಕರ ಸಿದ್ಧಾಂತದ ಹಕ್ಕುದಾರರು - ಗೊರೂರು ರಾಮಸ್ವಾಮಯ್ಯಂಗಾರ್ಯರು 281
23. ಉನ್ನತ ಮೌಲ್ಯ ಕೇಂದ್ರ - ಡಾ|| ಹಾ.ಮಾ. ನಾಯಕ್ 281
24. ದರ್ಶನ : ಒಡನಾಟ - ವೇ|| ಹೆಚ್.ಎಸ್. ಚಂದ್ರಶೇಖರ ಶಾಸ್ತ್ರಿ ಮೈಸೂರು 282
25. ನಿಷ್ಠಾವಿಶೇಷರು - ಓ.ವಿ. ರಾಮಯ್ಯ 285
26. ವೈಶಿಷ್ಟ್ಯ ಏಕಾಗ್ರತೆ - ಸಮೀಪವರ್ತಿ 287
27. ಅಂತರಂಗ - ಆರ್. ಬಿ. ಕಂಠಿ, ಧಾರವಾಡ 287
28. The Maha Tapasvi - Swamy Brahmanandendra Saraswati 288

29. In Touch with an Ancient Tradition - Chaitanya & Mohan 289

30. Abhinava Shankara who Transformed my life - D.B. Gangolli 290

## ಪರಿಶಿಷ್ಟ - 1

### ಕಾರ್ಯಾಲಯದ ಸ್ಮರಣೀಯ ವ್ಯಕ್ತಿಗಳ ಕಿರುಪರಿಚಯ

### ಶ್ರೀಶ್ರೀಗಳವರು ಬರೆದುದು

1. ಮಹಾಪುರುಷ (294) ; 2. ವೇದಾಂತಿ ಚಿಕ್ಕಲಿಂಗಣ್ಣನವರು (298) ; 3. ಕೃಷ್ಣಸ್ವಾಮಿ ಅಯ್ಯರ್‌ರವರು (300) ; 4. ಹೊಸಕೆರೆ ಚಿದಂಬರಯ್ಯನವರು (305).

### ಶ್ರೀ ಹೆಚ್.ಎಸ್. ಲ.ನ. ಮೂರ್ತಿಗಳು ಬರೆದುದು.

ವಿ. ಸುಬ್ರಹ್ಮಣ್ಯ ಅಯ್ಯರ್‌ರವರು (311) ; ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು (311) ; ಪಂಡಿತ ಬಿ.ಹೆಚ್. ರಾಮನಾಥ ಸ್ವಾಮಿಗಳು (312) ; ಗರಡಿ ರಾಚಪ್ಪನವರು (313) ; ದೇವರಾಯ ಕುಲಕರ್ಣಿಯವರು (314) ; ನುಲೇನೂರು ಶ್ರೀಮೂರ್ತಿಗಳು (315) ; ಹೊಸಕೆರೆ ಅನಂತಮೂರ್ತಿ ಶಾಸ್ತ್ರಿಗಳು (317) ; ಪರಕ್ಕಜೆ ಸುಬ್ರಹ್ಮಣ್ಯ ಭಟ್ಟರು (319) ; ಮತ್ತೂರು ಸುಬ್ರಾಯಾವಧಾನಿಗಳು (320) ; ಮತ್ತೂರು ಅಶ್ವತ್ಥನಾರಾಯಣ ಅವಧಾನಿಗಳು (320) ; ಮಾತಾಜಿ ಲಕ್ಷ್ಮೀದೇವಮ್ಮನವರು (321) ; ಆರಕಲಗೂಡು ಶ್ರೀಕಂಠಯ್ಯನವರು (322) ; ಪಿ.ಎನ್. ನರಸಿಂಹಯ್ಯನವರು (323) ; ವೈ. ನರಸಪ್ಪನವರು (323) ; ಸಂತೆ ಬಾಚಳ್ಳಿ ಸುಬ್ರಾಯರು (324) ; ಖೋಡೆಯವರು (324) ; ಬಿ.ಎನ್. ಶ್ರೀನಿವಾಸ ಭಟ್ಟರು (326) ; ನಿಖಿಲಾನಂದ ಗುಪ್ತರು (326) ; ಎ.ಆರ್. ನಾಗೇಶ್ವರಯ್ಯನವರು (327) ; ಕೆ.ಎನ್. ವಿಶ್ವೇಶ್ವರಯ್ಯನವರು (327) ; ಜೆ.ಎಸ್. ತಿಮ್ಮಪ್ಪಯ್ಯನವರು (328) ; ಸಿ.ಎನ್. ಯಜ್ಞನಾರಾಯಣ ಶಾಸ್ತ್ರಿಗಳು (328) ; ಬೊಂಬಾಯಿ ಎಂ. ವೆಂಕಟರಾಮಯ್ಯನವರು (329) ; ಮಹಿಳಾ ಭಕ್ತರು (329) ; ಅಗ್ರಹಾರದ ಶೇಷಮ್ಮನವರು (330).

## ಪರಿಶಿಷ್ಟ - 2

1-4-1996 ರಿಂದ 14-12-06 (10 ವರ್ಷಗಳು)ರವರೆಗೆ ಕಾರ್ಯಾಲಯದ ಮೂಲಕ ಪ್ರಕಟಿತವಾದ ಗ್ರಂಥಗಳ ವಿವರ. 331

## ಪರಿಶಿಷ್ಟ - 3

19-3-1995ರಿಂದ 18-12-06ರ ವರೆಗೆ ಹೊಳೆನರಸೀಪುರ ಮತ್ತು ಇತರ ಸ್ಥಳಗಳಲ್ಲಿ ನಡೆದ ವೇದಾಂತ ಸಪ್ತಾಹ / ಶಿಬಿರಗಳ ವಿವರ. 337

**ಭಾಗ 2**

## ಅಧ್ಯಾಯ - 1

# ಸಂನ್ಯಾಸದ ಅನಂತರ ಮಹಾನಿರ್ಯಾಣದವರೆಗೆ

## (1948 – 1975)

## ತೆರೆಯ ಹಿಂದೆ ಸರಿದ ವಿರಕ್ತರು

ಸಂನ್ಯಾಸ ಸ್ವೀಕಾರದೊಡನೆ ರಾಯರ ಜೀವನದಲ್ಲಿ ಪ್ರಮುಖ ತಿರುವೊಂದು ಬಂತು. ಇದು ಅವರ ಜೀವನದ ದ್ವಿತೀಯ ವಿರಕ್ತಿ ಘಟ್ಟ - ಮೊದಲನೆಯ ವಿರಕ್ತ ಜೀವನ ಅಧ್ಯಾತ್ಮದ ಗುಂಗು ಹಿಡಿದಾಗಲೇ ಇದರ ಪ್ರಾರಂಭ, ಅನಂತರ ಪತ್ನೀ ವಿಯೋಗದಿಂದ ಸಂಸಾರದ ಸ್ವಲ್ಪ ಜಂಜಾಟ ಮಕ್ಕಳ ಯೋಗಕ್ಷೇಮ ಪಾಲನೆಯಲ್ಲಿ, ಸರ್ಕಾರಿ ಕೆಲಸದ ಓಡಾಟ ಇವುಗಳಿಂದ ಬಲವಾಗಿತ್ತು. ಆದರೆ 1937ರಲ್ಲಿ, ಸರ್ಕಾರಿ ಸೇವೆಯಿಂದ ನಿವೃತ್ತರಾದಾಗ, ಆಧ್ಯಾತ್ಮಿಕತೆಯದೇ ಮೇಲುಗೈಯಾಗಿದ್ದರೂ ಲೌಕಿಕವ್ಯಾಪಾರ ಕಡಿಮೆಯಾಗಿದ್ದರೂ, ಕಾರ್ಯಾಲಯವೇ ಅವರ ದೊಡ್ಡ ಸಂಸಾರವಾಗಿತ್ತಲ್ಲ ! ಅದು ಅಂಟಿಕೊಂಡೇ ಇತ್ತು. ರಾಯರು, ಕಾರ್ಯಾಲಯ ಇಲ್ಲಿಯವರೆಗೂ ಪರಸ್ಪರ ಅವಿಭಾಜ್ಯ ಅಂಗಗಳಾಗಿ ಒಂದರೊಳಗೊಂದು ಹುದುಗಿದ್ದವು. ಈಗ ಅವೆರಡೂ ಪ್ರತ್ಯೇಕವಾದ ಘಟ್ಟ.

ಇಲ್ಲಿಂದ ಮುಂದೆ, ರಾಯರ ಐತಿಹಾಸಿಕ ಬರವಣಿಗೆ ವಿರಮಿಸಿ, ಅವರ ಉತ್ತಮ ಶಿಷ್ಯರಾಗಿ ಅವರ ಮಾದರಿಯನ್ನೇ ಅನುಸರಿಸಿ ತಮ್ಮದೇ ವಿಶಿಷ್ಟ ಸ್ಥಾನಕ್ಕೇರಿರುವ ಕಾರ್ಯಾಲಯದ ಪಂಡಿತರು ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಲೇಖನಿಯಿಂದ ಕಾರ್ಯಾಲಯದ ಮುಂದಿನ ಇತಿಹಾಸ ಬರಲು ಅನುವಾಯಿತು. ಅದೇ ಧಾಟಿ ರಾಗವಾದರೂ ಪಲ್ಲವಿ ಒಂದೇ ಆದರೂ ಇಲ್ಲಿಂದ ಮುಂದೆ ಅದೇ ಹೊಸಚರಣ, ಅದೇತೆರನ ಇತಿಹಾಸ ಘಟನೆಗಳು ಕಾಲಾನುಗುಣವಾಗಿ ಹೊಸ ರೂಪದಲ್ಲಿ, ಹೊಸ ಬರವಣಿಗೆಯಲ್ಲಿ ಬರುತ್ತದೆ. ಕೇವಲ ಕಾರ್ಯಾಲಯಕ್ಕೇ ಬಹುಭಾಗ ಸೀಮಿತ, ಇನ್ನು ಶ್ರೀಗಳವರು ತೆರೆಯ ಹಿಂದೆ ಮಾತ್ರ ; ಅವರ ಆಶಯವೇ ಅದಾಗಿತ್ತು.

# 1. ಪುರೋಭಿವೃದ್ಧಿ
## (1949-54)

**ಶ್ರೀರಾಮದೇವರ ಸ್ಥಾಪನೆಯ ನಿಶ್ಚಯ :** ಕಾರ್ಯಾಲಯ ನೆಲೆಯಾಗಲು ಭೂದಾನ ಮಾಡಿದ್ದವರೂ ಶ್ರೀರಾಮದೇವರ ಭಕ್ತರೂ, ಸಂಸ್ಥೆಯ ಉಪಾಧ್ಯಕ್ಷರೂ, ಕಾಂಗ್ರೆಸ್ ಸಂಸ್ಥೆಯಲ್ಲಿ ನಿಷ್ಠರೂ ಆದ ಶ್ರೀ ಅರಕಲಗೂಡು ಶ್ರೀಕಂಠಯ್ಯನವರು ಪ್ರಪ್ರಥಮವಾಗಿ ಪೂಜಾಮಂದಿರಕ್ಕೆ ಸಹಾಯಧನವನ್ನು ಒದಗಿಸಿದ್ದರು. ಆಗ್ಗೆ ಗಾಂಧೀಜಿಯವರ ರಾಮಭಕ್ತಿಯ ಪ್ರಭಾವವು ಜನರ ಮೇಲೆ ಇನ್ನೂ ಮುಂದುವರೆದಿತ್ತು. ಸ್ವಾತಂತ್ರ್ಯವು ಬಂದ ತಾರುಣ್ಯವಾದದ್ದರಿಂದ ಜನರೆಲ್ಲರೂ ರಾಮರಾಜ್ಯದ ಕನಸನ್ನು ಕಾಣುತ್ತಿದ್ದರು. ಇದಕ್ಕಿಂತ ಹೆಚ್ಚಾಗಿ ಶ್ರೀಗಳವರು ಬಾಲ್ಯದಿಂದಲೂ ರಾಮಭಕ್ತಿಯ ರುಚಿಯುಳ್ಳವರಾಗಿದ್ದು ರಾಮೋಪಾಸಕರೂ ಮಾರುತಿಯ ಅವತಾರವೆಂದು ಸುಪ್ರಸಿದ್ಧವೂ ಆಗಿದ್ದ ಶ್ರೀಗೋಂದಾವಳಿ ಬ್ರಹ್ಮಚೈತನ್ಯ ಮಹಾರಾಜರ ಶಿಷ್ಯರಾಗಿದ್ದು ಅವರಿಂದಲೇ ರಾಮಮಂತ್ರೋಪದೇಶವನ್ನು ಪಡೆದಿದ್ದರು. ಮಹಾರಾಜರ ಪಾದುಕೆಗಳೂ ಶ್ರೀಶ್ರೀಗಳವರಲ್ಲಿದ್ದವು. ಜೊತೆಗೆ ಕಾರ್ಯಾಲಯದವರು ಸ್ಥಾಪಿಸಿದ್ದ ಅಧ್ಯಾತ್ಮ ವಿದ್ಯಾನಿಲಯದಲ್ಲಿ ಪ್ರಧಾನವಾಗಿ ಶಾಂಕರಭಾಷ್ಯ ಗ್ರಂಥಗಳನ್ನೂ ಗುಣಗ್ರಹಣ ದೃಷ್ಟಿಯಿಂದ ಹಾಗೂ ಜನಸಾಮಾನ್ಯರಿಗೆಲ್ಲ ಹೊಂದುವಂತೆ ತತ್ತ್ವೋಪದೇಶ ಮಾಡುವ ದೃಷ್ಟಿಯಿಂದ ರಾಮಾನುಜಮಧ್ವಾದಿ ಭಾಷ್ಯಗ್ರಂಥಗಳನ್ನೂ ವಿದ್ಯಾರ್ಥಿಗಳಿಗೆ ಪಾಠಹೇಳುವ ಏರ್ಪಾಡಿತ್ತು. ಆದ್ದರಿಂದ ಮತತ್ರಯದವರಿಗೂ ಪೂಜ್ಯವಾದ, ಭೇದಭಾವನೆಗೆ ಅವಕಾಶವಿಲ್ಲದೆ, ಶ್ರೀರಾಮದೇವರನ್ನೇ ಪ್ರತಿಷ್ಠಿಸುವದು ಹೊಂದುವಂತಿತ್ತು. ಅದಕ್ಕೆ ತಕ್ಕಂತೆ ಆಗಿನ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ರಜಕಾರರೆಂಬ ಮುಸ್ಲಿಮರ ಹಾವಳಿಯು ಹೆಚ್ಚಾಗಿದ್ದು, ಹಿಂದೂಧರ್ಮವನ್ನು ಕಾಪಾಡಿಕೊಳ್ಳಲು ಎಲ್ಲರೂ ಬದ್ಧಕಂಕಣರಾಗಬೇಕೆಂಬ ಸನ್ನಿವೇಶವು ಒದಗಿತ್ತು. ಧರ್ಮೋದ್ಧಾರಕ್ಕೆ ಪ್ರೇರಣೆಯನ್ನು ನೀಡಿ ಚೈತನ್ಯವನ್ನುಂಟು ಮಾಡಲು ಶ್ರೀಕೋದಂಡರಾಮನ ಉಪಾಸನೆಯೆ ಅವಶ್ಯವಾಗಿತ್ತು. ಆದ್ದರಿಂದ ಶ್ರೀಶ್ರೀಗಳವರು ಧರ್ಮಜಾಗೃತಿಗಾಗಿ "ಶ್ರೀದಿಗ್ವಿಜಯ ರಾಮ"ನೆಂಬ ಕೋದಂಡ ಜಟಾಧಾರಿಯಾದ ವನವಾಸಕ್ಕೆ ಹೊರಟಿರುವ ಶ್ರೀರಾಮನನ್ನು ಸೂಚಿಸುವಂಥ - ರಾಣೆಬೆನ್ನೂರಿನಲ್ಲಿ ಶ್ರೀಪಾಂಡುರಂಗಿ ಹನುಮಂತಾಚಾರ್ಯರೆಂಬ ಬ್ರಾಹ್ಮಣ ಶಿಲ್ಪಿಯಿಂದ ಶ್ರೀರಾಮ, ಸೀತಾ-ಲಕ್ಷ್ಮಣ, ಆಂಜನೇಯ ಈ ನಾಲ್ಕು ವಿಗ್ರಹಗಳನ್ನು - ಕೃಷ್ಣ ಶಿಲೆಯಲ್ಲಿ ಸಮಿತಿಯವರ ಮೂಲಕ ತಯಾರಿಸುವ ಏರ್ಪಾಡುಮಾಡಿದರು.

**ಶ್ರೀ ದಿಗ್ವಿಜಯರಾಮರ ಪ್ರತಿಷ್ಠೆ :** ಶ್ರೀವಿಕೃತಿಸಂವತ್ಸರದ ಚೈತ್ರ ಶುಕ್ಲ ದಶಮೀ ಬುಧವಾರ ತಾ. 29-3-50ರಂದು ಶ್ರೀ ದಿಗ್ವಿಜಯರಾಮದೇವರ

ಪ್ರತಿಷ್ಠೆಯ ಮುಹೂರ್ತವು ನಿಶ್ಚಯಿಸಲ್ಪಟ್ಟಿತು. ರಾಮನವರಾತ್ರಿಯ ಅಂಗವಾಗಿ ವಿಶೇಷಪೂಜಾಪಾರಾಯಣ ಜಪಾದಿಗಳಲ್ಲದೆ ಪ್ರತಿಷ್ಠಾಂಗವಾದ ಕಾರ್ಯಕಲಾಪ-ಗಳೂ ಪ್ರಾರಂಭವಾಗಿ ಶ್ರೀಶ್ರೀಗಳವರ ಅಮೃತಹಸ್ತದಿಂದ ಮೊದಲೇ ಗೊತ್ತಾಗಿದ್ದ ಶುಭಮುಹೂರ್ತದಲ್ಲಿ ಶ್ರೀರಾಮದೇವರ ಪ್ರತಿಷ್ಠೆಯು 29-03-1950ರಂದು ನೆರವೇರಿತು. ಜೊತೆಗೆ ಅಧ್ಯಾತ್ಮಪ್ರಕಾಶಕಾರ್ಯಾಲಯದ ನೂತನ ಸಭಾಂಗಣದ ಪ್ರವೇಶೋತ್ಸವವೂ ನಡೆಯಿತು. ಬಂದಿದ್ದ ಭಕ್ತಾದಿಗಳಿಗೂ ಸ್ಥಳೀಯ ಮಹಾ ಜನರಿಗೂ ಸಂತರ್ಪಣೆಯನ್ನು ನಡೆಯಿಸಲಾಯಿತು. ಅನೇಕ ಭಕ್ತರುಗಳು ದೇವರಿಗೆ ಬೆಳ್ಳಿಯ ಪೂಜಾಸಾಮಗ್ರಿಗಳನ್ನೂ, ವಸ್ತ್ರಾದಿಗಳನ್ನೂ, ಕೆಲವರು ಒಡವೆಗಳನ್ನೂ ಸಹ ಅರ್ಪಿಸಿದರು. ಇದಾದಮೇಲೆ ಉತ್ಸವಕ್ಕೆ ಬಂದಿದ್ದ ಪರಸ್ಥಳದ ವಿದ್ವಾಂಸರುಗಳಿಗೂ ವೈದಿಕರಿಗೂ ಶ್ರೀಶ್ರೀಗಳವರು ಪ್ರಸಾದ ಮಂತ್ರಾಕ್ಷತೆ ಸಂಭಾವನೆಗಳನ್ನು ಅನುಗ್ರಹಿಸಿ ದರು. ಪ್ರತಿಷ್ಠಾಮಹೋತ್ಸವದ ಖರ್ಚು ಕಳೆದು ಉಳಿದ ಮೊಬಲಗನ್ನು ಶ್ರೀರಾಮ ದೇವರ ನಿತ್ಯಪೂಜಾದಿಗಳಿಗೆ ಶಾಶ್ವತವಾದ ನಿಧಿಯನ್ನು ಏರ್ಪಡಿಸುವ ಸದುದ್ದೇಶ ದಿಂದ "ಪೂಜಾಮಂದಿರ ಮೂಲನಿಧಿ" ಎಂಬ ಹೆಸರಿನಿಂದ ಬ್ಯಾಂಕಿನಲ್ಲಿ ಡಿಪಾ ಜಿಟ್ ಮಾಡಲಾಯಿತು. ಈ ನಿಧಿಯು ಮಹಾಜನರ ಔದಾರ್ಯದಿಂದ ಅಭಿವೃದ್ಧಿ ಯಾಗುತ್ತ ಬಂತು.

**ಶ್ರೀಶ್ರೀಗಳವರ ಪ್ರವಾಸ :** ಶ್ರೀರಾಮಪ್ರತಿಷ್ಠೆಯ ವ್ಯವಸ್ಥೆಯಾಗುತ್ತಿರು-ವಾಗಲೇ, ಶ್ರೀಶ್ರೀಗಳವರು ಅರಸೀಕೆರೆಯಲ್ಲಿ ಒಂದುವಾರ ಉಪನ್ಯಾಸಗಳನ್ನು ಅನುಗ್ರಹಿಸಿದರು. ಆಗ್ಗೆ ವೇ|| ಎಸ್. ವಿಠ್ಠಲಶಾಸ್ತ್ರಿಗಳೂ ಜೊತೆಯಲ್ಲಿದ್ದು ಪುರಾಣ ಶ್ರವಣಾದಿಗಳಲ್ಲಿ ಸಹಕರಿಸಿದರು. ಶ್ರೀರಾಮ ಪ್ರತಿಷ್ಠೆಯಾದ ಬಳಿಕ ಶ್ರೀಗಳವರು ಪ್ರವಾಸಕ್ಕೆ ಹೊರಟು ಕೃಷ್ಣರಾಜನಗರ, ಮೈಸೂರುಗಳಿಗೆ ದಯಮಾಡಿಸಿದರು. ಅಲ್ಲಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸಿ ಮುಂದೆ ಬೆಂಗಳೂರಿಗೆ ಪ್ರಯಾಣ ಮಾಡಿದರು. ಸಪ್ತಾಹದ ಅಂಗವಾದ ಪ್ರವಚನ, ಉಪನ್ಯಾಸಾದಿಗಳು ನಿಯೋಜಿತ ಕಾರ್ಯಕ್ರಮದಂತೆ ನಡೆದವು. ಸಪ್ತಾಹವಾದ ಬಳಿಕವೂ ಶ್ರೀಶ್ರೀಗಳು ಬೇರೆಬೇರೆ ಸ್ಥಳಗಳಲ್ಲಿ ಕೆಲವು ಉಪನ್ಯಾಸಗಳನ್ನು ನಡೆಯಿಸಿ ಊರಿಗೆ ಹಿಂತಿರುಗಿದರು. 1951ನೆಯ ಫೆಬ್ರವರಿಯಲ್ಲಿ ದಾವಣಗೆರೆಯ ಶ್ರೀಶಿವಾನಂದತೀರ್ಥಗುರು ಅಧ್ಯಾತ್ಮಮಂದಿರದ ಪ್ರವೇಶೋತ್ಸವಕ್ಕಾಗಿ ಶ್ರೀಶ್ರೀಗಳವರು ನಾಲ್ಕು ದಿನಗಳಕಾಲ ದಾವಣಗೆರೆಗೆ ದಯಮಾಡಿಸಿ, ಕೆಲವು ಉಪನ್ಯಾಸಗಳನ್ನು ಅನುಗ್ರಹಿಸಿದರು. 1951ನೆಯ ಡಿಸೆಂಬರ್ ತಿಂಗಳಿನಲ್ಲಿ ಶ್ರೀಶ್ರೀಗಳವರಿಗೆ ಸಂಧಿವಾತ, ಚಳಿ, ಜ್ವರ - ಮುಂತಾದ ವ್ಯಾಧಿಗಳಿಂದ ತುಂಬ ತೊಂದರೆಯಾಯಿತು. ಆಗ್ಗೆ ಡಾಕ್ಟರುಗಳೂ ಭಕ್ತರೂ ಮಾಡಿದ ಔಷಧೋಪಚಾರಗಳು ಭಗವದನುಗ್ರಹದಿಂದ ಸಾರ್ಥಕವಾಗಿ

ಗುರುಗಳಿಗೆ ಆರೋಗ್ಯವು ಕೂಡಿಬಂದಿತು. ಆಮೇಲೆ ಹವಾಬದಲಾವಣೆಗಾಗಿ ಶ್ರೀಶ್ರೀಗಳವರು ಸುಮಾರು ಒಂದು ತಿಂಗಳಕಾಲ ಚಿತ್ರದುರ್ಗಕ್ಕೆ ದಯಮಾಡಿಸಿ ಶ್ರೀ ಬಂಗ್ಲೆ ಸಿ. ಚೌಡಯ್ಯನವರ ಒಂದು ಪ್ರತ್ಯೇಕ ಮನೆಯಲ್ಲಿ ಬಿಡಾರಮಾಡಿದ್ದರು. ವಿದ್ಯಾರ್ಥಿಗಳಿಗೆ ಅಲ್ಲಿಯೇ ಪಾಠಪ್ರವಚನಗಳು ನಡೆಯುತ್ತಿದ್ದವು. ಶ್ರೀಶ್ರೀಗಳವರ ಸಹಾಯಕ್ಕೆ ಮೈಸೂರು ಕಾವೇರಮ್ಮನವರೂ ಇದ್ದರು. ಆಗ್ಗೆ ನಡುವೆ ಒಂದು ದಿನ ಶ್ರೀಶ್ರೀಗಳವರು ಆ ಸಮಯದಲ್ಲಿ ಅಲ್ಲಿಯೇ ಇದ್ದ ಶ್ರೀಮಜ್ಜಗದ್ಗುರು ಕೂಡ್ಲಿ ಶೃಂಗೇರಿಪೀಠಾಧಿಪರಾದ ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳವರ ದರ್ಶನವನ್ನು ಮಾಡಿಕೊಂಡು ವೇದಾಂತದ ವಿಷಯಕ್ಕೆ ಮಾತುಕತೆಗಳನ್ನು ನಡೆಯಿಸಿದರು. ಚಿತ್ರದುರ್ಗದಲ್ಲಿ ಕೆಲವು ಭಕ್ತರು ಶ್ರೀಶ್ರೀಗಳವರಿಗೆ ಸತ್ಕಾರ ನಡೆಸಿದರು. ಆಮೇಲೆ ಶ್ರೀಗಳು ವಾಪಸು ಹೊಳೆನರಸೀಪುರಕ್ಕೆ ದಯಮಾಡಿಸಿದರು. **1952**ನೆಯ ನವೆಂಬರ್ ಮಾಹೆಯಲ್ಲಿ ಶ್ರೀಶ್ರೀಗಳವರು ಅರಸೀಕೆರೆ, ದಾವಣಗೆರೆ, ಹರಿಹರ, ಗದಗ್, ಬಾಗಲಕೋಟೆ, ಇಳಕಲ್-ಮುಂತಾದ ಊರುಗಳಲ್ಲಿ ಪ್ರವಾಸ ಮಾಡಿಕೊಂಡು ಗೋಕರ್ಣ, ಶಿವಮೊಗ್ಗ ಮಾರ್ಗವಾಗಿ ಹೊಳೆನರಸೀಪುರಕ್ಕೆ ದಯಮಾಡಿಸಿದರು. ಈ ಕಾಲದಲ್ಲಿ ಕಾರ್ಯಾಲಯದಲ್ಲಿ ನಡೆಯಬೇಕಾಗಿದ್ದ ಗೀತಾಜಯಂತಿ, ಬ್ರಹ್ಮಚೈತನ್ಯಾರಾಧನೆ - ಅನುಷ್ಠಾನಗಳನ್ನು ಪಂಡಿತರ ಸಹಾಯ ದಿಂದ ನಡೆಸಲಾಯಿತು. ಸಪ್ತಾಹಕ್ಕೆ ಮುಂಚೆ **1953**ರಲ್ಲಿ ಶ್ರೀಶ್ರೀಗಳವರು ಒಂದುವಾರದ ಕಾಲ ಹಾನಗಲ್‌ಗೆ ದಯಮಾಡಿಸಿ ದತ್ತಭಜನೆಯ ಸಪ್ತಾಹಕಾಲದಲ್ಲಿ ಸಾಧನಗಳ ವಿಷಯವಾಗಿ ಉಪದೇಶಗಳನ್ನು ಅನುಗ್ರಹಿಸಿ ಹಿಂತಿರುಗಿದರು. ಆ ಬಳಿಕ ಮತ್ತೆ ಹಾವೇರಿಯಲ್ಲಿ ಮಹಾಜನರ ಪ್ರಾರ್ಥನೆಯಂತೆ ಮೂರುದಿನಗಳ ಕಾಲ ದತ್ತಭಜನ ಸಪ್ತಾಹದಲ್ಲಿ ಉಪನ್ಯಾಸಗಳನ್ನು ನಡೆಯಿಸಿದರು. **1954**ನೆಯ ಜೂನ್ ಮಾಹೆಯಲ್ಲಿ ಶ್ರೀಶ್ರೀಗಳವರು ಹಾವೇರಿಗೆ ದತ್ತಭಜನ ಸಪ್ತಾಹಕ್ಕಾಗಿ ಎರಡನೆಯ ಬಾರಿಗೆ ದಯಮಾಡಿಸಿದ್ದರು. ಒಂದು ವಾರಕಾಲ ಅಲ್ಲಿ ಉಪಾಸನಾ ಪ್ರಧಾನವಾದ ಉಪನ್ಯಾಸಗಳನ್ನು ಅನುಗ್ರಹಿಸಿದರು. ಬರುವಾಗ ರಾಣೆಬೆನ್ನೂರು, ದಾವಣಗೆರೆ ಗಳಲ್ಲೂ ಅಧ್ಯಾತ್ಮೋಪದೇಶಗಳನ್ನು ಅನುಗ್ರಹಿಸಿ ಹಿಂತಿರುಗಿದರು.

**ಚಾತುರ್ಮಾಸ್ಯಸಂಕಲ್ಪ :** ಶ್ರೀಶ್ರೀಗಳವರು ಸಂನ್ಯಾಸಸ್ವೀಕಾರವನ್ನು ಮಾಡಿದ ಮೇಲೆ **1948** ರಿಂದ **1952**ರ ಪೂರ ಚಾತುರ್ಮಾಸ್ಯ ಸಂಕಲ್ಪವನ್ನು ಹೊಳೆನರಸೀಪುರದಲ್ಲಿಯೇ ನೆರವೇರಿಸಿದರು. ಆಗ್ಗೆ ಬರವಣಿಗೆಯ ಕೆಲಸಗಳನ್ನೂ ವಿದ್ಯಾರ್ಥಿಗೆ ಪಾಠಪ್ರವಚನಗಳನ್ನೂ ಶ್ರೀಗಳವರೇ ಮಾಡಬೇಕಾಗಿದ್ದುದರಿಂದ ವಿಶೇಷ ಉಪನ್ಯಾಸಗಳನ್ನು ನಡೆಸುತ್ತಿರಲಿಲ್ಲ. ಬೆಳಗಿನ ವೇಳೆಯಲ್ಲಿ ವಿಶೇಷಾನುಷ್ಠಾನ ಜಪಗಳಲ್ಲಿರುತ್ತಿದ್ದರು. ಈ ಅವಧಿಯಲ್ಲಿ ''ಶಂಕರವೇದಾಂತಸಾರ''ವೆಂಬ ಗ್ರಂಥ

ರಚಿಸಿದರು. 1952ರಲ್ಲಿ ಹೃಷಿಕೇಶದಿಂದ ದಯಮಾಡಿಸಿದ್ದ ಶ್ರೀಶಂಕರಾನಂದ ಸರಸ್ವತೀಸ್ವಾಮಿಗಳು ಇಲ್ಲಿಯೇ ಚಾತುರ್ಮಾಸ್ಯವನ್ನು ನೆರವೇರಿಸಿದರು. ಶ್ರೀಸ್ವಾಮಿಗಳು ಈ ಅವಧಿಯಲ್ಲಿ ತಮ್ಮ ವಿರಾಮಕಾಲದಲ್ಲಿ ಕಾರ್ಯಾಲಯದ ಲೈಬ್ರರಿ ವಿಭಾಗವನ್ನು ಚೆನ್ನಾಗಿ ವಿಂಗಡಿಸಿ ವ್ಯವಸ್ಥೆಮಾಡಿ ಗ್ರಂಥಗಳ ಪಟ್ಟಿಯೊಂದನ್ನು ಸಹ ಬರೆದುಕೊಟ್ಟು ಉಪಕಾರ ಮಾಡಿದರು. 1953ರಲ್ಲಿ ಶ್ರೀಶ್ರೀಗಳವರು ಪರಸ್ಥಳದಲ್ಲಿ ಮೊದಲಬಾರಿಗೆ ಹುಬ್ಬಳ್ಳಿಯಲ್ಲಿ ಶ್ರೀಶಿವಾನಂದ ಮಂದಿರದಲ್ಲಿ ನೆರವೇರಿಸಿದರು. ಶ್ರೀಶ್ರೀಗಳು ನೆರವೇರಿಸಿದ ವ್ಯಾಸಪೂಜಾಕಾಲಕ್ಕೆ ಗೋಕರ್ಣದ ಶ್ರೀ ದೇವರಾತ ಗಜಾನನ ಶರ್ಮರು ಬಂದಿದ್ದರು. ಜೊತೆಯಲ್ಲಿದ್ದ ಒಬ್ಬ ವಿದ್ಯಾರ್ಥಿಗೆ ಬೆಳಗಿನ ವೇಳೆಯಲ್ಲಿ ಅಲ್ಲಿಯೇ ಪಾಠಗಳನ್ನು ನಡೆಯಿಸಲಾಗುತ್ತಿತ್ತು. ಸಂಜೆಯವೇಳೆಗಳಲ್ಲಿ ಉಮಾಮಹೇಶ್ವರ ದೇವಾಲಯದಲ್ಲಿ 'ಶ್ರೀಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು' ಎಂಬ ವಿಷಯದ ಮೇಲೆ ಉಪನ್ಯಾಸ ಮಾಲೆಯನ್ನು ಶ್ರೀಗಳು ಅನುಗ್ರಹಿಸಿದರು. ಹುಬ್ಬಳ್ಳಿಯ ಮಹಾಜನರೆಲ್ಲರೂ ಅತ್ಯಂತಶ್ರದ್ಧಾಭಕ್ತಿಗಳಿಂದ ಬಂದು ಉಪನ್ಯಾಸಗಳನ್ನು ಕೇಳುತ್ತಿದ್ದರು. ಶ್ರೀಯೋಗೀಶ್ವರ ದತ್ತಮೂರ್ತಿ ದೀಕ್ಷಿತರೂ, ಹೋರಾಭೂಷಣ ಪಂ. ರಾಮಭಟ್ಟ ಜ್ಯೋತಿಷಿಯವರೂ ಶ್ರೀಗಳವರ ಸೇವೆಯನ್ನು ಆದರಪೂರ್ವಕವಾಗಿ ನೆರವೇರಿಸಿದರಲ್ಲದೆ ಅನೇಕ ಮಹನೀಯರುಗಳಿಂದ ಪಾದಪೂಜೆ, ಕಾಣಿಕೆ - ಮುಂತಾದ ರೂಪದಲ್ಲಿ ಧನಸಹಾಯವನ್ನೂ ಒದಗಿಸಿಕೊಟ್ಟು ಸಹಾಯಮಾಡಿದರು. ಭಕ್ತಾದಿಗಳು ಸೀಮೋಲ್ಲಂಘನದ ದಿನ ಶ್ರೀಶ್ರೀಗಳವರು ಅನುವಾದ ಮಾಡಿರುವ ಶಾಂಕರಭಾಷ್ಯಗ್ರಂಥಗಳ ಸಮೇತವಾಗಿ ಬ್ಯಾಂಡುವಾದ್ಯಾದಿಗಳಿಂದೊಡಗೂಡಿದ ಮೆರವಣಿಗೆಯಲ್ಲಿ ವಿಶ್ವರೂಪಯಾತ್ರೆಯ ಉತ್ಸವದಿಂದ ಹುಬ್ಬಳ್ಳಿಯ ಪ್ರಮುಖ ಬೀದಿಗಳಲ್ಲಿ ಹೊರಟು ಹಳೆಹುಬ್ಬಳ್ಳಿಯ ಶ್ರೀಕೃಷ್ಣೇಂದ್ರ ಮಠಕ್ಕೆ ಶ್ರೀಶ್ರೀಗಳವರನ್ನು ಕರೆತಂದರು. ಅಲ್ಲಿ ಶ್ರೀಗಳವರಿಂದ ಉಪಸಂಹಾರ ಭಾಷಣವೂ ಫಲಮಂತ್ರಾಕ್ಷತೆಗಳ ವಿನಿಯೋಗವೂ ಆಯಿತು. ಈ ಚಾತುರ್ಮಾಸ್ಯದ ಉತ್ಸವವು ಸರ್ವರೀತಿಯಿಂದಲೂ ಯಶಸ್ವಿಯಾಯಿತು. ಅನಂತರ ಶ್ರೀಗಳವರು ಧಾರವಾಡಕ್ಕೂ ಭೇಟಿಕೊಟ್ಟು ಹೊಳೆನರಸೀಪುರಕ್ಕೆ ದಯಮಾಡಿಸಿದರು. 1954ರ ಚಾತುರ್ಮಾಸ್ಯ ಸಂಕಲ್ಪವನ್ನು ಶ್ರೀಗಳು ಹೊಳೆನರಸೀಪುರದಲ್ಲೇ ನೆರವೇರಿಸಿದರು.

**ಶಂಕರಸಪ್ತಾಹ : 1948, 1949, 1951, 1953**ರಲ್ಲಿ ಹೊಳೆನರಸೀಪುರದಲ್ಲಿ, 1950 ಶ್ರೀ ವಿಕೃತಿ ಸಂವತ್ಸರದಲ್ಲಿ ಬೆಂಗಳೂರು ಬಸವನಗುಡಿಯ ಕರಣಿಕರ ಪಾಠಶಾಲೆಯಲ್ಲಿ, 1952ರ ಶ್ರೀ ನಂದನ ಸಂವತ್ಸರದಲ್ಲಿ ಮತ್ತು 1954ರಲ್ಲಿ ಮೈಸೂರಿನ ಶ್ರೀ ಪ್ರಸನ್ನ ವಿಶ್ವೇಶ್ವರ ದೇವಾಲಯದಲ್ಲಿ ನಡೆದುವು.

ಶ್ರೀರಾಮನವಮಿ, ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆಗಳು, ಹೊಳೆನರಸೀಪುರದ ಕಾರ್ಯಾಲಯದಲ್ಲೇ ಎಂದಿನಂತೆ ನೆರವೇರಿದವು.

**ವೇದಾಂತಸಪ್ತಾಹ :** ಶಂಕರಸಪ್ತಾಹದ ಮಾದರಿಯಲ್ಲಿ ಕರ್ಣಾಟಕದ ಬೇರೆಬೇರೆಯ ಸ್ಥಳಗಳಲ್ಲಿ ಅಧ್ಯಾತ್ಮವಿಚಾರದ ಪ್ರಚಾರಕ್ಕೆ ಮೊದಲಬಾರಿಗೆ ವೇದಾಂತಸಪ್ತಾಹವೆಂಬ ಉತ್ಸವವನ್ನು 1954ನೆಯ ಫೆಬ್ರವರಿ ಮಾಹೆಯಲ್ಲಿ ಬೆಂಗಳೂರಿನಲ್ಲಿ ದೇವಾಂಗಸಂಘ ಸಿಲ್ವರ್‌ಜ್ಯೂಬಿಲಿ ಕಟ್ಟಡದಲ್ಲಿ ಶ್ರೀ ಟಿ.ಹೆಚ್. ಹನುಮಂತಪ್ಪನವರೇ ಮುಂತಾದ ಭಕ್ತಜನರ ಪ್ರೋತ್ಸಾಹದಿಂದ ಏರ್ಪಡಿಸಲಾಯಿತು. ಶಂಕರಸಪ್ತಾಹದಂತೆಯೇ ಬೆಳಗ್ಗೆ ಭಾಷ್ಯಪ್ರವಚನ, ಮಧ್ಯಾಹ್ನ ಪುರಾಣಶ್ರವಣ, ಸಾಯಂಕಾಲ ಉಪನ್ಯಾಸಗಳು - ಹೀಗೆ ಕಾರ್ಯಕ್ರಮಗಳು ನೆರವೇರಿದವು. ಶ್ರೀಶ್ರೀಗಳವರು ಅನುವಾದವನ್ನೂ ಸಂಜೆಯ ಉಪನ್ಯಾಸಗಳನ್ನೂ ನಡೆಯಿಸಿದರು. ಸಪ್ತಾಹವಾದ ಬಳಿಕವೂ ಶ್ರೀಗಳವರು ಶ್ರೀಚಾಮರಾಜೇಂದ್ರ ಸಂಸ್ಕೃತಪಾಠಶಾಲೆಯಲ್ಲಿ ಮೂರು ದಿನಗಳ ಕಾಲ ವೇದಾಂತೋಪನ್ಯಾಸಗಳನ್ನು ಮಾಡಿದರು.

**ಗ್ರಂಥಪ್ರಕಟಣೆ :** ಶ್ರೀಜಯರಾಮರಾಜೇಂದ್ರ ಗ್ರಂಥರತ್ನಮಾಲೆಯ ಪ್ರಕಟನ ಕಾರ್ಯವೇ ಈ ಅವಧಿಯಲ್ಲಿ ಪ್ರಧಾನವಾಗಿ ಮುಂದುವರೆಯಿತು. 1948ರ ಕೊನೆಯವೇಳೆಗೆ ಉಪನಿಷದ್ಭಾಷ್ಯಗಳು, (ಈಶ, ಕೇನ, ಕಠ) ಸಂಪುಟ-1, (ಐತರೇಯ, ತೈತ್ತಿರೀಯ) ಸಂಪುಟ-2, ಉಪನಿಷದ್ಭಾಷ್ಯಗಳು (ಮುಂಡಕ, ಪ್ರಶ್ನ, ಮಾಂಡೂಕ್ಯ) ಸಂಪುಟ-3, ಶ್ರೀಮದ್ಭಗವದ್ಗೀತಾ ಭಾಷ್ಯ ಎರಡು ಸಂಪುಟಗಳು - ಈ ರೀತಿ ಐದು ಸಂಪುಟಗಳು ಪ್ರಕಟವಾಗಿದ್ದವು. 1951ನೆಯ ಮಾರ್ಚಿ ಮಾಹೆಯ ವೇಳೆಗೆ ಬ್ರಹ್ಮಸೂತ್ರಭಾಷ್ಯದ ಒಂದನೆಯ ಸಂಪುಟವು ಸಿದ್ಧವಾಯಿತು. 1949ರಲ್ಲು ಪ್ರಕರಣಗಳು 1ನೆಯ ಸಂಪುಟ ಎಂಬ ಹೆಸರಿನಿಂದ ಉಪದೇಶಸಾಹಸ್ರಿ ಗದ್ಯ-ಪದ್ಯ, ಅಪರೋಕ್ಷಾನುಭೂತಿ-ಅದ್ವೈತಾನುಭೂತಿ - ಇಷ್ಟು ಪ್ರಕರಣಗಳು ಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಅಚ್ಚಾಗಿದ್ದವು. ಅಲ್ಲಿಂದೀಚೆಗೆ ಬ್ರಹ್ಮಸೂತ್ರಭಾಷ್ಯ ಮುದ್ರಣ ಕೆಲಸವು ಮೈಸೂರಿನಲ್ಲಿ ಎರಡು ಪ್ರೆಸ್‌ಗಳಲ್ಲಿ ನಡೆದರೂ ಪೂರ್ಣವಾಗಿ ಅಚ್ಚಾಗದೆ ಕೊನೆಗೆ ಕಾರ್ಯಾಲಯದ ಮುದ್ರಣಾಲಯದಲ್ಲಿಯೇ ಅಚ್ಚಾಗಿ ಸಿದ್ಧವಾಯಿತು. 'ಶ್ರೀರಾಮಹೃದಯ' ಎಂಬ ಚಿಕ್ಕಪುಸ್ತಕವನ್ನೂ ಪುನರ್ಮುದ್ರಿಸಲಾಯಿತು. 1951ರಲ್ಲಿ ಅನುಶಾಂಕರ ವೇದಾಂತ ಗ್ರಂಥಾವಳಿಯಲ್ಲಿ 'ನೈಷ್ಕರ್ಮ್ಯಸಿದ್ಧಿ' ಗ್ರಂಥವನ್ನು ಟಿಪ್ಪಣಿಗಳೊಡನೆ ಪ್ರಕಟಿಸಲಾಯಿತು. ಈ ಗ್ರಂಥದ ಮುದ್ರಣ ವೆಚ್ಚಕ್ಕಾಗಿ ಹಿಂದೆ ಶ್ರೀಶ್ರೀಗಳವರಲ್ಲಿ ಇದೇ ಗ್ರಂಥವನ್ನು ಪಾಠ ಹೇಳಿಸಿಕೊಂಡಿದ್ದ ವೇ|| ಬ್ರ|| ಶ್ರೀ ಮತ್ತೂರು ಸುಬ್ರಾಯಾವಧಾನಿಗಳವರು ಐದುನೂರು ರೂಪಾಯಿಗಳನ್ನೂ ಶ್ರೀ ಅರಕಲಗೂಡು ಸೀತಾರಾಮಯ್ಯನವರು, ಅಡ್ವೋಕೇಟ್, ಮೈಸೂರು - ಇವರು

ಐದುನೂರು ರೂ.ಗಳನ್ನೂ ಸಹಾಯವಾಗಿ ಸಮರ್ಪಿಸಿದರು. ಶ್ರೀಜಯಚಾಮ ರಾಜೇಂದ್ರ ಗ್ರಂಥಮಾಲೆಯ ಬ್ರಹ್ಮಸೂತ್ರ ಭಾಷ್ಯ 2ನೆಯ ಭಾಗ 1952ರಲ್ಲಿ, ಬೃಹದಾರಣ್ಯಕೋಪನಿಷದ್‌ಭಾಷ್ಯ 1ನೆಯ ಸಂಪುಟ 1953ರ ಸೆಪ್ಟೆಂಬರ್ ವೇಳೆಗೆ, 2ನೆಯ ಸಂಪುಟವನ್ನು 1954ರ ಅಕ್ಟೋಬರ್ ವೇಳೆಗೆ ಪ್ರಕಟಿಸಲಾಯಿತು. ಆತ್ಮಬೋಧ, ಆತ್ಮವಿದ್ಯಾವಿಲಾಸಗಳನ್ನು 1952ರಲ್ಲಿ, ಮುಕುಂದಮಾಲಾ ಸ್ತೋತ್ರ, ಮೋಹಮುದ್ಗರ ಪುಸ್ತಕಗಳನ್ನು 1954ರಲ್ಲಿ ಪುನರ್ಮುದ್ರಣ ಮಾಡಿಸಲಾಯಿತು. ಬೆಂಗಳೂರಿನಲ್ಲಿ ನಡೆದ ವೇದಾಂತಸಪ್ತಾಹದ ಕೊನೆಯಲ್ಲಿ ಶ್ರೀಗಳು ಮಾಡಿದ ಮೂರು ಉಪನ್ಯಾಸಗಳನ್ನು 'ವೇದಾಂತವೂ ಆಧುನಿಕ ಜನಜೀವನವೂ' ಎಂಬ ಹೆಸರಿನ ಸಣ್ಣಗ್ರಂಥದ ರೂಪದಲ್ಲಿ ಹೊರತರಲಾಯಿತು. ಹುಬ್ಬಳ್ಳಿಯಲ್ಲಿ ನಡೆದ ಚಾತುರ್ಮಾಸ್ಯದ ಉಪನ್ಯಾಸಗಳನ್ನು 'ಶಂಕರಭಗವತ್ಪಾದರ ಸರ್ವಸಮ್ಮತೋಪ-ದೇಶಗಳು' ಎಂಬ ಹೆಸರಿನಿಂದ ಪತ್ರಿಕೆಯಲ್ಲಿ ಸ್ವತಂತ್ರಪುಟಗಳಾಗಿ ಅನಂತರ ಪುಸ್ತಕ-ರೂಪವಾಗಿಯೂ ಪ್ರಕಟಿಸಲಾಯಿತು. ಪತ್ರಿಕೆಯಲ್ಲಿ ಸಣ್ಣ ಸಣ್ಣ ಲೇಖನಗಳನ್ನು ಹೆಚ್ಚಿಸುವ ಉದ್ದೇಶದಿಂದ ಎಂಟು ಪುಟಗಳನ್ನು ಸೇರಿಸಲಾಯಿತು.

ಶ್ರೀಶೃಂಗೇರಿ ಜಗದ್ಗುರುಶಾರದಾಪೀಠವನ್ನಲಂಕರಿಸಿ ಸುವಿಖ್ಯಾತರಾಗಿದ್ದ ಪೂಜ್ಯ ತಪಸ್ವಿ ಶ್ರೀಶ್ರೀಚಂದ್ರಶೇಖರಭಾರತೀಮಹಾಸ್ವಾಮಿಗಳು 28.9.1954 ರಂದು ಪ್ರಾತಃಕಾಲ ಜಲಸಮಾಧಿಯನ್ನು ಹೊಂದಿ ಬ್ರಹ್ಮೀಭೂತರಾದರೆಂಬ ವಾರ್ತೆಯು ಎಲ್ಲೆಲ್ಲಿಯೂ ಹರಡಿತು. ಇದರಿಂದ ಶಿಷ್ಯಕೋಟಿಯೆಲ್ಲ ದುಃಖಸಾಗರದಲ್ಲಿ ಮುಳುಗಿತು. ಆಗ್ಗೆ ಶ್ರೀಶ್ರೀಗಳವರು ಬ್ರಹ್ಮೀಭೂತರಾದ ಜಗದ್ಗುರುಗಳ ಬಗ್ಗೆ ಈ ರೀತಿ ತಿಳಿಸಿದರು : "ಬ್ರಹ್ಮನಿಷ್ಠರಾದ ಮಹನೀಯರು ಶರೀರದಲ್ಲಿರುವಾಗಲೂ ಜ್ಞಾನದೃಷ್ಟಿಯಿಂದ ಅಶರೀರರೇ ಎಂದು ವೇದಾಂತವು ಸಾರುತ್ತಿರುವದು. ಈ ಜಗದ್ಗುರುಗಳು ಅವ್ಯಕ್ತರೂಪದಿಂದ ಅಖಿಲರ ಹೃದಯದಲ್ಲಿಯೂ ಇದ್ದುಕೊಂಡು ಸನ್ಮಾರ್ಗಕ್ಕೆ ಪ್ರೇರಕರಾಗಿರಲಿ - ಎಂದು ನಾವು ಪ್ರಾರ್ಥಿಸುವೆವು". ಮುಂದೆ ಶ್ರೀಗಳವರ ಕರಕಮಲ ಸಂಜಾತರಾದ ಶ್ರೀಮದಭಿನವವಿದ್ಯಾತೀರ್ಥ ಮಹಾಸ್ವಾಮಿಗಳು ತಾ. 16.10.54 ರಂದು ಜಗದ್ಗುರು ಪೀಠದಲ್ಲಿ ಪಟ್ಟಾಭಿಷಿಕ್ತರಾದರು. ಇವರು ತಾ. 21.9.89ರಲ್ಲಿ ಬ್ರಹ್ಮೀಭೂತರಾದ ಮೇಲೆ ಈಗ ಶ್ರೀಭಾರತೀತೀರ್ಥ ಸ್ವಾಮಿಗಳು ಜಗದ್ಗುರು ಪೀಠವನ್ನು ಅಲಂಕರಿಸಿದ್ದಾರೆ.

**ವಿದ್ಯಾನಿಲಯ :** ವೇ|| ಕೃಷ್ಣಜೋಯಿಸರು ಗೀತಾಭಾಷ್ಯ, ವೇದಾಂತ ಪರಿಭಾಷೆ ಪಾಠಗಳನ್ನು ನಡೆಸಿದರು. ಬ್ರಹ್ಮಸೂತ್ರಭಾಷ್ಯಪಾಠವೂ ಪ್ರಾರಂಭ-ವಾಯಿತು. 1951ರ ವರೆಗೂ ಹೊಸ ವಿದ್ಯಾರ್ಥಿಗಳು ಯಾರೂ ಸೇರಿರಲಿಲ್ಲ, ಕಳೆದ

ಐದುವರ್ಷಗಳಿಂದಲೂ ವಿದ್ಯಾನಿಲಯದಲ್ಲಿ ಅಭ್ಯಾಸಮಾಡುತ್ತಿದ್ದ ವಿದ್ಯಾರ್ಥಿ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಯ ವಿದ್ಯಾಭ್ಯಾಸದ ಅವಧಿಯು **1952**ನೆಯ ಮೇ ಮಾಹೆಗೆ ಪೂರೈಸಿತು. ಈ ವೇಳೆಗೆ ಈತನಿಗೆ ಸೂತ್ರಭಾಷ್ಯಪಾಠವು ಪೂರ್ತಿಯಾಗಿದ್ದು ಪ್ರಸ್ಥಾನತ್ರಯಭಾಷ್ಯಗಳ ಅಧ್ಯಯನವೂ ಇತರ ಪಾಠಗಳೂ ಮುಗಿದಿದ್ದವು. ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ಲಿಖಿತಪರೀಕ್ಷೆಯನ್ನೂ ನಡೆಸ-ಲಾಗಿತ್ತು. ಪುರಾಣಪ್ರವಚನ, ಉಪನ್ಯಾಸಗಳನ್ನು ಮಾಡುವದಲ್ಲದೆ ಕಾರ್ಯಾಲ-ಯದ ಲೆಕ್ಕಪತ್ರಗಳ ವ್ಯವಹಾರದಲ್ಲಿಯೂ ಮುದ್ರಣಾಲಯದ ಕೆಲಸಗಳಲ್ಲಿಯೂ ಈತನು ಸಾಕಾದಷ್ಟು ಪರಿಶ್ರಮವನ್ನು ಪಡೆದಿದ್ದನು. ಆದ್ದರಿಂದ ಈತನನ್ನು ಕಾರ್ಯಾಲಯದಲ್ಲಿಯೇ ಉಳಿಸಿಕೊಂಡು ವಿದ್ಯಾನಿಲಯದಲ್ಲಿ ಪಂಡಿತನನ್ನಾಗಿ ನಿಯಮಿಸಬೇಕೆಂದು ಶ್ರೀಶ್ರೀಗಳವರು ಸೂಚನೆಯನ್ನು ಕೊಟ್ಟರು. ಸಮಿತಿಯವರು **1952**ನೆಯ ಜೂನ್‌ನಲ್ಲಿ ಘಟಿಕೋತ್ಸವವನ್ನು ಏರ್ಪಡಿಸಿದ್ದರು. ವಿದ್ವಾನ್ ಎಸ್. ವಿಠಲಶಾಸ್ತ್ರಿಗಳು, ವಿದ್ವಾನ್ ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳು, ಆಸ್ಥಾನಮಹಾ-ವಿದ್ವಾನ್ ಶ್ರೀ ವೈ. ಚಂದ್ರಶೇಖರಶಾಸ್ತ್ರಿಗಳ ಸಮ್ಮುಖದಲ್ಲಿ ಶ್ರೀಶ್ರೀಗಳವರ ಅಧ್ಯಕ್ಷತೆ-ಯಲ್ಲಿ, ವಿದ್ಯಾರ್ಥಿ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗೆ 'ಅಧ್ಯಾತ್ಮವಿದ್ಯಾ-ಪ್ರವೀಣ' ಎಂಬ ಪ್ರಶಸ್ತಿಯನ್ನೂ ಯೋಗ್ಯತಾಪತ್ರವನ್ನೂ ವಿದ್ವಾಂಸರುಗಳು ದಯಪಾಲಿದರು. "ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರು ಸ್ಥಾಪಿಸಿರುವ 'ಅಧ್ಯಾತ್ಮವಿದ್ಯಾನಿಲಯ'ವೆಂಬ ಈ ಮಹಾಪಾಠಶಾಲೆಯಲ್ಲಿ ಶ್ರೀ ಹೊರಂಟೂರು ಶ್ರೀಕಂಠಘನಪಾಠಿಗಳ ಮಗ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ-ಮೂರ್ತಿ ಎಂಬ ವಿದ್ಯಾರ್ಥಿಯು ಶ್ರೀನಂದನ ಸಂವತ್ಸರದ ಚೈತ್ರದವರೆಗಿನ ಐದು ವರ್ಷಗಳು ಪೂರ ಅಭ್ಯಾಸಮಾಡಿ ಶಾಂಕರಪ್ರಸ್ಥಾನತ್ರಯಭಾಷ್ಯಗಳ ವಿಶೇಷ ಪರಿಚಯವನ್ನೂ ವ್ಯಾಖ್ಯಾನಪ್ರಸ್ಥಾನಗಳ ಸಾಮಾನ್ಯ ಪರಿಚಯವನ್ನೂ ದ್ವೈತ-ವಿಶಿಷ್ಟಾದ್ವೈತ ಸಿದ್ಧಾಂತಗಳ ಪರಿಚಯವನ್ನೂ ಮಾಡಿಕೊಂಡು ಈ ವಿಷಯಗಳಲ್ಲಿ ಪ್ರವಚನಾದಿಗಳನ್ನು ಮಾಡಲು ಸಮರ್ಥನಾಗಿರುತ್ತಾನೆಂದು ನಾವುಗಳು ಈ ಮೂಲಕ ದೃಢಪಡಿಸುತ್ತೇವೆ. ಈತನ ಯೋಗ್ಯತೆಯನ್ನು ಒಪ್ಪಿ 'ಅಧ್ಯಾತ್ಮವಿದ್ಯಾ-ಪ್ರವೀಣ' ಎಂಬ ಪ್ರಶಸ್ತಿಯನ್ನು ಸಭೆಯಲ್ಲಿ ಕೊಟ್ಟಿರುತ್ತೇವೆ". ಶ್ರೀಜಯಚಾಮ-ರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದ ಒಂದು ಸೆಟ್ ಗ್ರಂಥಗಳನ್ನೂ ವಿದ್ವತ್ ಪಾರಿತೋಷಿಕವಾಗಿ ಕೊಡಲಾಯಿತು.

**1952**ರಲ್ಲಿ ವಿದ್ಯಾನಿಲಯದ ಒಬ್ಬನೇ ವಿದ್ಯಾರ್ಥಿ, ಸಾಗರದ ಕಡೆಯ ಶ್ರೀ ಬಿ.ಕೆ. ಮಂಜಯ್ಯನಿಗೆ ವೇದಪಾಠ, ವೇದಾಂತ ಡಿಂಡಿಮ ಪಾಠವೂ ನಡೆಯುತ್ತಿತ್ತು. ಹೈಸ್ಕೂಲು ವಿದ್ಯಾರ್ಥಿಗಳಿಗೆ ಪ್ರತಿಭಾನುವಾರವೂ ಸಂಸ್ಕೃತ ಭಾಷಾಪರಿಚಯ ಹಾಗೂ

ಮತನೀತಿಬೋಧಕ ತರಗತಿಗಳನ್ನು ಆರಂಭಿಸಿ ನಡೆಸಲಾಗುತ್ತಿತ್ತು. ವೇ॥ ಮತ್ತೂರು ಸುಬ್ರಾಯಾವಧಾನಿಗಳ ಪುತ್ರ ಚಿ. ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಹೊಸದಾಗಿ ಸೇರಿದನು. ಈಗ ಇಬ್ಬರು ವಿದ್ಯಾರ್ಥಿಗಳಿಗೂ ಪಾಠಪ್ರವಚನಗಳನ್ನು ಜೊತೆಯಾಗಿ ಮುಂದುವರೆಸಲಾಯಿತು. 1953ರಲ್ಲಿ ಇಬ್ಬರು ವಿದ್ಯಾರ್ಥಿಗಳಿಗೂ, ಉಪನಿಷದ್ಭಾಷ್ಯ ಪಾಠಗಳು ನಡೆಯುತ್ತಿದ್ದವು.

**ಪಂಡಿತರು :** ಕಳೆದ ನಾಲ್ಕು ವರ್ಷಗಳಿಂದ ಕಾರ್ಯಾಲಯದಲ್ಲಿ ತೃಪ್ತಿಕರವಾಗಿ ಕೆಲಸಮಾಡಿಕೊಂಡಿದ್ದ ಶ್ರೀ ಕೆ. ಕೃಷ್ಣಜೋಯಿಸರು ಕಾರ್ಯಾಲಯವು ಕೊಡುತ್ತಿದ್ದ ಅಲ್ಪವೇತನವು ಸಾಲದೆ ಬೇರೊಂದು ಉದ್ಯೋಗಕ್ಕೆ ಪ್ರಯತ್ನಿಸ-ಲಾರಂಭಿಸಿದರು. 1949ರ ಮೊದಲಲ್ಲಿ ಕಾರ್ಯಾಲಯದ ಕೆಲಸದಿಂದ ನಿವೃತ್ತರಾಗಿ ಶೃಂಗೇರಿಗೆ ದಯಮಾಡಿಸಿದರು. ಮುಂದೆ ಒಂದೆರಡು ತಿಂಗಳಲ್ಲೇ ವಿದ್ಯಾರ್ಥಿ ಶ್ರೀ ಸಿ. ಎನ್. ಯಜ್ಞನಾರಾಯಣಶಾಸ್ತ್ರಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿ-ಕೊಂಡು ಊರಿಗೆ ಹೊರಟುಹೋದರು. ಉಳಿದ ಒಬ್ಬನೇ ವಿದ್ಯಾರ್ಥಿಗೆ ಶ್ರೀಗಳವರೇ ಪಾಠಗಳನ್ನು ಮುಂದುವರಿಸಿದರು.

ನಂಜನಗೂಡಿನಿಂದ ದಯಮಾಡಿಸಿದ ಶ್ರೀ ಚೆನ್ನಕೇಶವಯ್ಯನವರೆಂಬ ವಿದ್ವಾಂಸರನ್ನು ಕಾರ್ಯಾಲಯದ ಪಂಡಿತರನ್ನಾಗಿ 1949ನೆಯ ಜುಲೈ ಮಾಹೆಯಲ್ಲಿ ನೇಮಕ ಮಾಡಲಾಯಿತು. ಈ ಮಹಾಶಯರು ವೇದಾಂತಪಾಠಗಳ ಜೊತೆಗೆ ಲೆಕ್ಕಪತ್ರವ್ಯವಹಾರಗಳನ್ನೂ ನಿರ್ವಹಿಸಲಾರಂಭಿಸಿದರು. ಇದರಿಂದ ವಿದ್ಯಾ ನಿಲಯದ ಕೆಲಸಕಾರ್ಯಗಳೂ ಆಫೀಸು ಲೆಕ್ಕಪತ್ರಗಳ ವ್ಯವಹಾರದ ಕೆಲಸವೂ ಸುಗಮವಾಗಿ ನಡೆಯಲಾರಂಭಿಸಿದವು. ಆದರೆ ದುರದೃಷ್ಟದಿಂದ ಕಾರ್ಯಾಲಯದ ಕಾರ್ಯದರ್ಶಿಗಳ ಹಾಗೂ ವಿದ್ಯಾನಿಲಯದ ಪಂಡಿತರ ಸ್ಥಾನವನ್ನು ಅಲಂಕರಿಸಿ ಒಂದೂವರೆ ವರ್ಷಗಳಿಂದ ಉತ್ತಮವಾದ ಕೆಲಸಮಾಡಿ ಶ್ರೀಶ್ರೀಗಳವರ ಮೆಚ್ಚುಗೆಗೂ ಮಹಾಜನರ ಆದರಕ್ಕೂ ಪಾತ್ರರಾಗಿದ್ದ ಶ್ರೀ ಚೆನ್ನಕೇಶವಯ್ಯನವರು ಅಕಾಲಮರಣಕ್ಕೆ ತುತ್ತಾಗಿ ಪರಗತಿಯನ್ನು ಪಡೆದರು. ಇದರಿಂದ ಕಾರ್ಯಾಲಯದ ಚಟುವಟಿಕೆಗಳೆಲ್ಲವೂ ತತ್ಕಾಲಕ್ಕೆ ಸ್ತಬ್ಧವಾದವು. 1952ನೆಯ ಜೂನ್ 1ನೆಯ ತಾರೀಖಿನಿಂದ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳನ್ನು ವಿದ್ಯಾನಿಲಯದ ಪಂಡಿತರನ್ನಾಗಿ ಕಾರ್ಯಕಾರಿ ಸಮಿತಿಯವರು ನೇಮಿಸಿದರು.

**ಪುರಾಣಶ್ರವಣ - ಉಪನ್ಯಾಸಗಳು - ಪಾಠಪ್ರವಚನಗಳು :** ವಿದ್ಯಾರ್ಥಿ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು ಹಾಗೂ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಇವರುಗಳಿಗೆ ಶ್ರೀಗಳವರು ಕ್ರಮವಾಗಿ ಉಪನಿಷ-

ದ್ಭಾಷ್ಯಗಳು, ದರ್ಶನಗಳ ಪರಿಚಯ, ಇಂಗ್ಲಿಷು, ಗಣಿತ, ರಾಮಾನುಜಭಾಷ್ಯ, ಮಾಧ್ವಭಾಷ್ಯ - ಮುಂತಾದ ಪಾಠಗಳನ್ನೂ, ನಡುವೆ ಪುರಾಣ, ಉಪನ್ಯಾಸಗಳನ್ನು ಮಾಡುವ ಕ್ರಮವನ್ನೂ ಅಭ್ಯಾಸಮಾಡಿಸುತ್ತಿದ್ದರು. ಆಗ್ಗೆ ಪಂಡಿತರಾಗಿದ್ದ ವೇ|| ಕೊ. ಕೃಷ್ಣಜೋಯಿಸರು ಭಾಗವತಪುರಾಣವನ್ನು ಮುಗಿಸಿ ಮಹಾಭಾರತವನ್ನು ಪ್ರಾರಂಭಿಸಿ ವನಪರ್ವದವರೆಗೆ ಶ್ರವಣಮಾಡಿಸಿದ್ದರು. ಮುಂದೆ ವಿರಾಟ ಪರ್ವವನ್ನು ವಿದ್ಯಾರ್ಥಿ ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳೇ ಶ್ರವಣ ಮಾಡಿಸುತ್ತಿದ್ದರು. ವೇ|| ಕೃಷ್ಣಜೋಯಿಸರು ವಿದ್ಯಾರ್ಥಿಗಳಿಗೆ ಗೀತಾಭಾಷ್ಯ, ವೇದಾಂತ ಪರಿಭಾಷೆ ಮುಂತಾದ ಪಾಠಗಳನ್ನು ನಡೆಸಿದ್ದರು. ವಿಷ್ಣುಪುರಾಣವನ್ನು ಪಂಡಿತರೇ (ಲ.ನ. ಮೂರ್ತಿಗಳು) ನಡೆಸುತ್ತಿದ್ದರು. ಅದು ಮುಗಿದನಂತರ ವಾಸಿಷ್ಠ ರಾಮಾಯಣವು ಪ್ರಾರಂಭವಾಯಿತು. ಶ್ರೀಗಳು ಗೀತೋಪನ್ಯಾಸಗಳಾದ ಮೇಲೆ, ಕಠೋಪನಿಷತ್ತಿನ ಮೇಲೆ, ಪ್ರತಿಭಾನುವಾರವೂ ಉಪನ್ಯಾಸಗಳನ್ನು ನೀಡುತ್ತಿದ್ದರು.

ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಯ ಸ್ಥಾನದಲ್ಲಿ ವಿದ್ಯಾರ್ಥಿ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಯು ಮಹಾಭಾರತ ಪುರಾಣವನ್ನು ಉದ್ಯೋಗಪರ್ವದಿಂದ ಮುಂದಕ್ಕೆ ಶ್ರವಣಮಾಡಿಸಲಾರಂಭಿಸಿದನು. **1948**ನೆಯ ಶರನ್ನವರಾತ್ರಿಯ ಅನುಷ್ಠಾನ ಕಾಲದಲ್ಲಿ ಈತನು 'ರಾಮಾನುಜಸಿದ್ಧಾಂತ'ದ ಮೇಲೆ ಮಾಡಿದ ಪ್ರಪ್ರಥಮ ಉಪನ್ಯಾಸವೇ ಸಭಿಕರ ಮೆಚ್ಚುಗೆಯನ್ನು ಗಳಿಸಿತು. ಅಂದಿನಿಂದ ಕಾರ್ಯಾಲಯದ ಅನುಷ್ಠಾನಗಳಲ್ಲಿ ಹಾಗೂ ಶ್ರೀಶ್ರೀಗಳವರ ಪ್ರವಾಸಕಾಲದಲ್ಲಿ ಈತನೇ ಉಪನ್ಯಾಸಗಳನ್ನು ನಡೆಯಿಸುತ್ತಾ ಬಂದನು. ಶ್ರೀಶ್ರೀಗಳವರು ಈ ಕಾಲದಲ್ಲಿ ಭಗವದ್ಗೀತೆಯ ಮೇಲೆ ಪ್ರತಿಭಾನುವಾರವೂ ನಡೆಯಿಸುತ್ತಿದ್ದ ಉಪನ್ಯಾಸಗಳನ್ನು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ **16**ನೆಯ ಸಂಪುಟದಿಂದ **21**ನೆಯ ಸಂಪುಟದ-ವರೆಗಿನ ಸಂಚಿಕೆಗಳಲ್ಲಿ ಸ್ವತಂತ್ರ ಪುಟಗಳಾಗಿ ಪ್ರಕಟವಾದದ್ದಲ್ಲದೆ ಪುಸ್ತಕಗಳ ರೂಪದಲ್ಲೂ ಹೊರಬಿದ್ದು ಜನಾನುರಾಗಕ್ಕೆ ಪಾತ್ರವಾಗಿರುತ್ತದೆ.

**ಇತರ ವಿಷಯಗಳು : ಆಡಳಿತ :** ಶ್ರೀಶ್ರೀಗಳವರ ಸಂನ್ಯಾಸಸ್ವೀಕಾರ-ದಿಂದೀಚೆಗೆ ಕಾರ್ಯಕಾರಿ ಸಮಿತಿಯವರು ಶ್ರೀ ವೈ. ನರಸಪ್ಪನವರ ಅಧ್ಯಕ್ಷತೆಯಲ್ಲಿ ಸಂಸ್ಥೆಯ ಆಡಳಿತವನ್ನು ವಹಿಸಿಕೊಂಡು ನಡೆಯಿಸಲಾರಂಭಿಸಿದರು. ಪ್ರಾರಂಭದಲ್ಲಿ ಆರು ತಿಂಗಳಕಾಲ ಸುಗಮವಾಗಿ ನಡೆಯಿತು. ಅನಂತರ ಕಾರ್ಯದರ್ಶಿ ಶ್ರೀ ನಂ. ಭಾಗವತರು ಅನಾರೋಗ್ಯ ನಿಮಿತ್ತ ತಮ್ಮ ಸ್ಥಾನಕ್ಕೆ ರಾಜಿನಾಮೆಯಿತ್ತು ಅರಸೀಕೆರೆಗೆ ಹೊರಟುಹೋದರು. ಮುಂದೆ ಅಧ್ಯಕ್ಷರೇ ಎಲ್ಲಾ ಜವಾಬ್ದಾರಿಯನ್ನೂ ನಿರ್ವಹಿಸ-ಲಾರಂಭಿಸಿದರು. ಅವರಿಗೆ ಸಹಾಯಕರಾಗಿ ವಿದ್ಯಾನಿಲಯದ ವಿದ್ಯಾರ್ಥಿಗಳೂ ಕೆಲಸಮಾಡಲಾರಂಭಿಸಿದರು.

**ಕಾರ್ಯಾಲಯಕ್ಕೆ ಸ್ವಂತ ಮುದ್ರಣಾಲಯ :** ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯ ಪುಸ್ತಕಗಳೂ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯೂ ಈವರೆಗೆ ಮೈಸೂರಿನಲ್ಲಿಮುದ್ರಣವಾಗುತ್ತಿದ್ದವು. ರಾಯರು ಸಂನ್ಯಾಸಿಗಳಾದ ಅನಂತರ ಅವರು ಪರಸ್ಥಳಗಳಿಗೆ ಓಡಾಡುವದು ಕಷ್ಟವಾಯಿತು. ಜೊತೆಗೆ ಗ್ರಂಥಕರ್ತರು ಒಂದು ಕಡೆ, ಮುದ್ರಣಾಲಯವು ಒಂದು ಕಡೆ ಹೀಗೆ ಆಗಿ ಮುದ್ರಣಕಾರ್ಯದಲ್ಲಿ ವಿಳಂಬವೂ ಸ್ಖಾಲಿತ್ಯಗಳೂ ಅನಿವಾರ್ಯವಾಗಿದ್ದವು. ಆದ್ದರಿಂದ ಕಾರ್ಯಾಲಯಕ್ಕೇ ಒಂದು ಸ್ವಂತ ಮುದ್ರಣಾಲಯವಿರತಕ್ಕದ್ದು ಸೂಕ್ತವೆಂದು ಯೋಚಿಸಿ ಶ್ರೀ ವೈ. ನರಸಪ್ಪನವರ ಮುದ್ರಣಾಲಯವನ್ನು ಅಸಲು ಖರೀದಿಗೆ **1948**ನೆಯ ಜುಲೈ ಮಾಹೆಯಲ್ಲಿ ಕಾರ್ಯಾಲಯಕ್ಕೆ ವಹಿಸಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀ ವೈ. ನರಸಪ್ಪ ನವರು ಎರಡು ಸಾವಿರ ರೂಪಾಯಿಗಳನ್ನು ಕಾರ್ಯಾಲಯಕ್ಕೆ ಸೋಡಿಯಾಗಿ ಬಿಟ್ಟು ಕೊಟ್ಟರು. ಈ ಮೊಬಲಗನ್ನು ಮುದ್ರಣಾಲಯ ನಿಧಿಗೆ ದಾನವಾಗಿ ಸ್ವೀಕರಿಸ-ಲಾಯಿತು. ಕಾರ್ಯಾಲಯವು ಮುದ್ರಣಯಂತ್ರವನ್ನು ವಹಿಸಿಕೊಂಡಾಗ ಕೈಯಲ್ಲಿ ಹಣವಿರಲಿಲ್ಲ. ಆದರೂ ಹಣವು ಒದಗಿದಾಗ ವಾಪಸ್ಸು ತೆಗೆದುಕೊಳ್ಳುವ ಷರತ್ತಿನ ಮೇಲೆ ಉದಾರವಾಗಿ ಶ್ರೀ ವೈ. ನರಸಪ್ಪನವರು ಮುದ್ರಣಾಲಯವನ್ನು ಕಾರ್ಯಾ ಲಯಕ್ಕೆ ಮಾರಿಬಿಟ್ಟರು. ಅಂದಿನಿಂದ ಶ್ರೀ ವೈ. ನರಸಪ್ಪನವರನ್ನು ಕೇವಲ **60** ರೂ. ಮಾಹೆಯಾನ ವೇತನದ ಮೇಲೆ ಪ್ರೆಸ್ ಮ್ಯಾನೇಜರ್‌ರನ್ನಾಗಿ ನಿಯಮಿಸಲಾಯಿತು. ಇನ್ನು ಮುಂದೆ ಕಾರ್ಯಾಲಯದ ಮಾಸಪತ್ರಿಕೆ ಹಾಗೂ ಗ್ರಂಥಗಳು ಸ್ವಂತ ಮುದ್ರಣಾಲಯದಲ್ಲಿಯೇ ಅಚ್ಚಾಗಲು ಆರಂಭವಾದವು.

**ಸಭಾಂಗಣದ ಉಪಯೋಗ, ಮುದ್ರಣಾಲಯಕ್ಕೆ ಹೊಸ ಸ್ಥಾನ :** ಕಾರ್ಯಾಲಯದ ಹೊಸ ಸಭಾಂಗಣವು ಸಿದ್ಧವಾದ ಅನಂತರ ಕಾರ್ಯಾಲಯದ ಚಟುವಟಿಕೆಗಳನ್ನೆಲ್ಲ ಅಲ್ಲಿಯೇ ನಡೆಯಿಸಲಾರಂಭಿಸಲಾಯಿತು. ಬರುಬರುತ್ತಾ ಸಭಾಂಗಣವೊಂದೇ ಪುರಾಣ, ಪುಸ್ತಕಭಂಡಾರ, ವಾಚನಾಲಯ, ಶ್ರೀಶ್ರೀಗಳವರ ಬರವಣಿಗೆಯ ಸ್ಥಾನ, ವಿದ್ಯಾನಿಲಯದ ಪಾಠಪ್ರವಚನಗಳ ಸ್ಥಾನ, ವಿದ್ಯಾರ್ಥಿಗಳ ವಾಸಕ್ಷೇತ್ರ, ಆಗಂತುಕರ ವಿಶ್ರಾಮಸ್ಥಾನ, ಪುಸ್ತಕಗಳ ಉಗ್ರಾಣ-ಇಷ್ಟೂ ಆಗಿತ್ತು.

ಈವರೆಗೂ ಕಾರ್ಯಾಲಯದ ಚಟುವಟಿಕೆಗಳು ನಡೆಯುತ್ತಿದ್ದ ಕುಟೀರವನ್ನು ತೆರವುಮಾಡಿ ಹೊಸ ಜಿಂಕುಷೀಟುಗಳನ್ನು ಹೊದಿಸಿ ರಿಪೇರಿಮಾಡಿಸಿ ಮುದ್ರಣಾ ಲಯವನ್ನು ಅಲ್ಲಿ ಸ್ಥಾಪಿಸಲಾಯಿತು. ಮುದ್ರಣಾಲಯಕ್ಕೆ ಸ್ವಲ್ಪ ಹೆಚ್ಚು ಸ್ಥಳಾವಕಾಶವು ದೊರೆತದ್ದರಿಂದ ಕೆಲವು ಹೊಸ ಸಾಮಾನುಗಳನ್ನೂ ಟೈಪುಗಳನ್ನೂ ಕೊಂಡು ಮುದ್ರಣಾಲಯವನ್ನು ವಿಸ್ತರಿಸಲಾಯಿತು.

1954ರಲ್ಲಿ ಸಂಸ್ಕೃತ ದೇವನಾಗರೀ ಟೈಪುಗಳನ್ನು ಕೊಂಡು ಕಂಪೋಜಿಂಗ್ ಶಾಖೆಯನ್ನು ವಿಸ್ತರಿಸಲಾಯಿತು. ಸಂಸ್ಕೃತಭಾಷೆಯಲ್ಲಿ ಶ್ರೀಶ್ರೀಗಳವರು ಬರೆದಿದ್ದ 'ಸುಗಮಾ' ಎಂಬ ಗ್ರಂಥವನ್ನು ಪ್ರಕಟಿಸಲು ಆರಂಭಿಸಲಾಯಿತು. ಕಾರ್ಯಾಲಯವು ಪ್ರಾರಂಭವಾದಂದಿನಿಂದ 1954ರ ಸಮಾಪ್ತಿಯವರೆಗೆ ನಡೆದಿರುವ ಕೆಲಸಗಳ ವಿವರ ಹಾಗೂ ಅಭಿವೃದ್ಧಿಯನ್ನು ತೋರಿಸುವ ಒಂದು ವರದಿಯನ್ನೂ ಈ ವರ್ಷದಲ್ಲಿ (1954) ಪ್ರಕಟಿಸಲಾಯಿತು.

**ಮಾಸಪತ್ರಿಕೆ :** ಇದುವರೆಗೂ ರಾಯರ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಮಾಸಪತ್ರಿಕೆಯು ಇನ್ನು ಮುಂದೆ ಕಾರ್ಯಾಲಯದ ಪತ್ರಿಕಾಸಂಪಾದಕಮಂಡಲಿ-ಯವರ ನೇತೃತ್ವದಲ್ಲಿ ಪ್ರಕಟವಾಗಲು ಆರಂಭವಾಯಿತು. ಶ್ರೀ ವೈ. ನರಸಪ್ಪನವರು ವ್ಯವಸ್ಥಾಪಕ ಸಂಪಾದಕರಾಗಿ ನೇಮಿಸಲ್ಪಟ್ಟರು.

**ಕಟ್ಟಡದ ಬೆಳವಣಿಗೆ – ಪ್ರಗತಿ :** 1949ನೆಯ ಅಕ್ಟೋಬರ್ ಮಾಹೆಯ ವೇಳೆಗೆ ಸಭಾಂಗಣದ ಕೆಲಸವೂ ಶ್ರೀರಾಮದೇವರ ಗರ್ಭಗುಡಿಯ ನಿರ್ಮಾಣವೂ ಪೂರೈಸುತ್ತಾ ಬಂದವು. ಕಟ್ಟಡಗಳಿಗೆಲ್ಲ ವಿದ್ಯುದ್ದೀಪಗಳನ್ನು ಅಳವಡಿಸಲಾಯಿತು. ನೆಲಗಟ್ಟನ್ನು ನಿರ್ಮಿಸಿ ಉಳಿದ ಸಾಮಾನುಗಳನ್ನು ಸಿದ್ಧಗೊಳಿಸಲಾಗುತ್ತಿತ್ತು. ಈ ನಡುವೆ ಬೆಂಗಳೂರಿನ ಭಕ್ತಮಹಾಶಯರಾದ ಶ್ರೀ ಅಡ್ವೋಕೇಟ್ ಬಿ. ನಂಜುಂಡಯ್ಯನವರ ಔದಾರ್ಯದಿಂದ ಒಂದು ಕೊಠಡಿಯನ್ನೂ ಶ್ರೀ ಭೈರಪ್ಪ ಹನುಮಂತಪ್ಪ ಇವರ ಔದಾರ್ಯದಿಂದ ಒಂದು ಕೊಠಡಿಯನ್ನೂ ಕಟ್ಟಿಸಲಾಯಿತು. ಪೂಜಾಮಂದಿರಕ್ಕೆ ಗರ್ಭಗೃಹವನ್ನು ನಿರ್ಮಾಣ ಮಾಡಿಸಲು ಮೈಸೂರಿನ ಶ್ರೀ ಜಿ. ಕೃಷ್ಣಸ್ವಾಮಿ ಅವರ ಪ್ರೋತ್ಸಾಹದಿಂದ ಪ್ರಾರಂಭಿಸಲಾಯಿತು. ಶ್ರೀಮತಿ ಸಾಲಿ ಗ್ರಾಮದ ಕಾವೇರಮ್ಮನವರು ಎಂಬ ಮಹಿಳೆಯ ಔದಾರ್ಯದಿಂದ ಒಂದು ಆಗಂತುಕರ ಕೊಠಡಿಯನ್ನು ಸಹ ನಿರ್ಮಿಸಲಾಯಿತು. 1953ರಲ್ಲಿ ಕಾರ್ಯಾಲಯಕ್ಕೆ ಸುತ್ತುಗೋಡೆಯನ್ನು (ಕಾಂಪೌಂಡ್) ಮಹಾಜನರ ಸಹಾಯದಿಂದ ಒಂದು ವರ್ಷದಲ್ಲಿ ಪೂರ್ತಿಗೊಳಿಸಲಾಯಿತು.

**ಗದ್ದೆಯನ್ನು ಕೊಂಡದ್ದು :** ಶ್ರೀದಿಗ್ವಿಜಯರಾಯರ ನಿತ್ಯನೈವೇದ್ಯಕ್ಕೂ ವಿದ್ಯಾನಿಲಯದ ವಿದ್ಯಾರ್ಥಿಗಳ, ಅತಿಥಿಗಳ ಸತ್ಕಾರಕ್ಕೂ ಅನುಷ್ಠಾನಕಾಲದಲ್ಲಿ ಬರಬಹುದಾದ ಪರಸ್ಥಳದ ಭಕ್ತರುಗಳ ಭೋಜನಸೌಕರ್ಯಕ್ಕೂ ಅನುಕೂಲಿಸುವಂತೆ ಒಂದುಎಕರೆ ಗದ್ದೆಯನ್ನು ಕೊಳ್ಳಲಾಯಿತು. ಹೊಸದಾಗಿ ಕೊಂಡಿದ್ದ ಗದ್ದೆಯಿಂದ ಭತ್ತವು ಬರಲು ಆರಂಭವಾದೊಡನೆಯೇ ಹೊಳೆನರಸೀಪುರದ ಮಹಾಜನರ

ಉಪಕಾರದಿಂದ ಈವರೆಗೂ ವಾರಮಾಡಿಕೊಂಡು ಓದುತ್ತಿದ್ದ ವಿದ್ಯಾರ್ಥಿಗಳಿಗೆ ವಾರಗಳ ವ್ಯವಸ್ಥೆಗಳಿಗೆ ಬದಲಾಗಿ ಕಾರ್ಯಾಲಯದಲ್ಲಿಯೇ ಭೋಜನ ಸೌಕರ್ಯ ವನ್ನು ಏರ್ಪಡಿಸಲಾಯಿತು.

**ಭಾವಚಿತ್ರಗಳ ಅನಾವರಣೋತ್ಸವ :** ತಾ|| 4-4-52ನೆಯ ಶುಕ್ರವಾರ ಸಾಯಂಕಾಲ 5 ಘಂಟೆಗೆ ಕಾರ್ಯಾಲಯದ ಸಭಾಂಗಣದಲ್ಲಿ ಅಧ್ಯಾತ್ಮಪ್ರಕಾಶ-ಕಾರ್ಯಾಲಯದ ಪರಿಪಾಲಕರೂ ನಮ್ಮನ್ನಾಳಿದ ಮಹಾಪ್ರಭುಗಳೂ ಆದ ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ, ಮತ್ತು ರಾಜ-ಕಾರ್ಯಪ್ರಸಕ್ತ ಕೆ. ರಾಮಸ್ವಾಮಿಯವರ ಧರ್ಮಪತ್ನೀ ಶ್ರೀಮತಿ ಪುಟ್ಟಮ್ಮ ರಾಮಸ್ವಾಮಿಯವರ ಭಾವಚಿತ್ರಗಳನ್ನು ಆಗ್ಗೆ ಹೊಳೆನರಸೀಪುರದ ಮುನಸೀಫ್ ಮ್ಯಾಜಿಸ್ಟ್ರೇಟರಾಗಿದ್ದ ಶ್ರೀ ವಿ. ನರಸಿಂಹಮೂರ್ತಿ ಎಂ.ಎ., ಎಲ್‌ಎಲ್.ಬಿ., ಇವರು ಅನಾವರಣ ಮಾಡಿದರು.

**ಸಂನ್ಯಾಸಿಗಳು :** ಶ್ರೀಶ್ರೀಪ್ರಕಾಶಾನಂದರೆಂಬ ಯತಿಗಳೊಬ್ಬರು ದಯ-ಮಾಡಿಸಿ ಕೆಲವು ಕಾಲ ತಂಗಿದ್ದರು. ಅನಂತರ ಒರಿಸ್ಸಾಪ್ರಾಂತದಿಂದ ಪ್ರೇಮಾನಂದ-ರೆಂಬ ಸಂನ್ಯಾಸಿಗಳೊಬ್ಬರು ಬಂದರು. ಇವರಿಗೆ ಮುಂದೆ ಕಾಲಕ್ರಮದಲ್ಲಿ ಶ್ರೀಶ್ರೀಗಳವರಿಂದಲೇ ಯಥಾವಿಧಿಯಾಗಿ ಆಶ್ರಮಸ್ವೀಕಾರವು ನೆರವೇರಿಸಲ್ಪಟ್ಟಿತು. ಇವರು 19-4-91 ರಂದು ಹೊಳೆನರಸೀಪುರದಲ್ಲಿಯೇ ಬ್ರಹ್ಮೀಭೂತರಾದರು. ಅವರ ಸಮಾಧಿಯು ಹೊಳೆಯ ತೀರದಲ್ಲಿದೆ. ಇದರ ಪಕ್ಕದಲ್ಲಿಯೇ ಶ್ರೀಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಮಾಧಿಯೂ ಇದೆ.

**ವಿದ್ಯಾ ಇಲಾಖೆಯವರ ಪ್ರೋತ್ಸಾಹ :** ಆಗ್ಗೆ ವಿದ್ಯಾಮಂತ್ರಿಗಳಾಗಿದ್ದ ಶ್ರೀ ಎ.ಜಿ. ರಾಮಚಂದ್ರರಾಯರು ಒಂದುಬಾರಿ ಕಾರ್ಯಾಲಯಕ್ಕೆ ದಯಮಾಡಿಸಿ ಶ್ರೀಶ್ರೀಗಳವರ ಸಂದರ್ಶನವನ್ನು ಪಡೆದು ಸಂಸ್ಥೆಯ ಪುರೋಭಿವೃದ್ಧಿಯನ್ನು ನೋಡಿ ತಮ್ಮ ಸಂತೋಷವನ್ನು ಸೂಚಿಸಿದ್ದರು. ಕಾರ್ಯಾಲಯದವರ ಪ್ರಾರ್ಥನೆಯಂತೆ ಸಂಸ್ಥಾನದ ಎಲ್ಲಾ ಹೈಸ್ಕೂಲು ಮಿಡಲ್‌ಸ್ಕೂಲು ಲೈಬ್ರರಿಗಳಿಗೂ ಶ್ರೀಜಯಚಾಮ-ರಾಜೇಂದ್ರ ಗ್ರಂಥಮಾಲೆಯ ಅಮೋಘಗ್ರಂಥಗಳ ಸೆಟ್ ಒಂದನ್ನು (ಎಂಟು ಗ್ರಂಥಗಳನ್ನು) ಕೊಳ್ಳಬಹುದೆಂದು ವಿದ್ಯಾಇಲಾಖೆಯವರು ಅನುಮತಿಯನ್ನು ನೀಡಿದರು. ಇದರಿಂದ ಗ್ರಂಥಪ್ರಚಾರಕ್ಕೆ ಸ್ವಲ್ಪ ಸಹಾಯವಾಯಿತು.

## 2. ಪ್ರಗತಿಯ ಪಥದಲ್ಲಿ
## (1955-60)

ಶ್ರೀಶ್ರೀಗಳವರ ಪ್ರವಾಸ : ಗುಜರಾತ್‌ಪ್ರಾಂತ್ಯದ ವಲ್ಸಾಡ್ ಎಂಬಲ್ಲಿರುವ ವೇದಾಂತಾಶ್ರಮದ ಶ್ರೀಸ್ವಾಮಿ ಮಾಧವತೀರ್ಥರ ಆಹ್ವಾನದಂತೆ, ಶ್ರೀಶ್ರೀಗಳವರು ಮಿತಪರಿವಾರದೊಡನೆ ಹೊರಟು ಬೊಂಬಾಯಿ, ನಾಸಿಕ, ತ್ರ್ಯಂಬಕ, ಪಂಡರಾಪುರ, ಕೊಲ್ಹಾಪುರ, ನರಸೋಬವಾಡಿ-ಮುಂತಾದ ಸ್ಥಳಗಳಲ್ಲಿ ಸಂಚರಿಸಿಕೊಂಡು ಬಂದರು. ಬೊಂಬಾಯಿನಲ್ಲಿ ಶ್ರೀಮಾಧವತೀರ್ಥರು ಶ್ರೀಶ್ರೀಗಳವರನ್ನು ಒಂದು ವಾರಕಾಲ ಇರಿಸಿಕೊಂಡು ತಮಗೆ ಪರಿಚಯವಿದ್ದವರಲ್ಲೆಲ್ಲ ಶ್ರೀಗಳವರ ವಿಚಾರವನ್ನು ಹರಡಿದರು. ತಮಗೆ 'ಮೂಲಾವಿದ್ಯಾನಿರಾಸ' ಗ್ರಂಥದಲ್ಲಿ ಸಂಶಯವುಂಟಾಗಿದ್ದ ಸ್ಥಳಗಳಲ್ಲಿ ಶ್ರೀಗಳವರೊಡನೆ ಚರ್ಚಿಸಿ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇದರಿಂದ ಗುಜರಾತ್ ಪ್ರಾಂತ್ಯದಲ್ಲಿ ಶ್ರೀಗಳವರ ಅಭಿಪ್ರಾಯಗಳು ಸ್ವಲ್ಪಮಟ್ಟಿಗೆ ಹರಡಲು ಅವಕಾಶವಾಯಿತು. 1956ನೆಯ ಜನವರಿಯಲ್ಲಿ ಒಂದು ವಾರಕಾಲ ತಿಪಟೂರಿನಲ್ಲಿ ಶ್ರೀಶ್ರೀಗಳವರು ವೇದಾಂತಕಾಲಕ್ಷೇಪವನ್ನು ನೆರವೇರಿಸಿದರು. ಬೆಳಗಿನ ವೇಳೆಯಲ್ಲಿ ವೇ।। ಎಸ್. ವಿಠಲಶಾಸ್ತ್ರಿಗಳು ಭಾಷ್ಯಪ್ರವಚನವನ್ನು ಮಾಡುತ್ತಿದ್ದರು. ಸಂಜೆಯ ಹೊತ್ತು ಶ್ರೀಶ್ರೀಗಳವರು ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

ಶ್ರೀಶ್ರೀಗಳವರ ಉತ್ತರ-ಪಶ್ಚಿಮ-ಭಾರತ ಪ್ರವಾಸ : ಶ್ರೀಶ್ರೀಗಳವರಿಗೆ ತಾವು ಬರೆದಿದ್ದ 'ಮಾಂಡೂಕ್ಯರಹಸ್ಯ ವಿವೃತಿಃ' ಗ್ರಂಥವನ್ನು ಓಂಕಾರೇಶ್ವರ ಕ್ಷೇತ್ರದಲ್ಲಿ ಪಠಿಸಿ ಗೌಡಪಾದಾಚಾರ್ಯರಿಗೆ ಸಮರ್ಪಿಸಬೇಕೆಂದು ಆಶೆಯು ಬಹಳ-ವಾಗಿತ್ತು. ಸಾಧ್ಯವಾದರೆ ಕಾಶೀಕ್ಷೇತ್ರಕ್ಕೂ ಹೋಗಿಬರಬೇಕೆಂಬ ಅಭಿಪ್ರಾಯವಿತ್ತು. ಆ ವೇಳೆಗೆ ಭಕ್ತಮಹಾಜನರು ಶ್ರೀಗಳವರ ಸ್ವಂತಖರ್ಚಿಗೆ ಎಂತ ಅರ್ಪಿಸಿದ್ದ ಮೊಬಲಗು ಸ್ವಲ್ಪಮಟ್ಟಿಗೆ ಕೂಡಿದ್ದು ಅದನ್ನು 'ಯಾತ್ರಾನಿಧಿ'ಯೆಂದೇ ಕರೆಯಲಾಗಿತ್ತು. ಅದರ ಸಹಾಯದಿಂದ ಗುರುಗಳು ಮಿತಪರಿವಾರದೊಡನೆ ತಾ. 8-3-56ರಂದು ಹೊಳೆನರಸೀಪುರದಿಂದ ಹೊರಟು ಅರಸೀಕೆರೆ, ಹರಿಹರ, ಹುಬ್ಬಳ್ಳಿ, ಪೂನ-ಮಾರ್ಗವಾಗಿ ಬೊಂಬಾಯಿಗೆ ದಯಮಾಡಿಸಿದರು. ಅಲ್ಲಿ ಶ್ರೀ ಚತುರ್ಭುಜ ಶಿವಜೀ ಎಂಬ ಭಕ್ತರ ಸಹಾಯದಿಂದ ಘಾಟ್‌ಕೋಪರ್‌ನಲ್ಲಿ ನಾಲ್ಕುದಿನ ಬಿಡಾರಮಾಡಿ ಮುಂದೆ ಓಂಕಾರೇಶ್ವರ ಕ್ಷೇತ್ರಕ್ಕೆ ತೆರಳಿದರು. ಅಲ್ಲಿ ತಮ್ಮ ಸಂಕಲ್ಪದಂತೆ 'ಮಾಂಡೂಕ್ಯ ರಹಸ್ಯವಿವೃತಿಃ'ಯನ್ನು ಪಾರಾಯಣಮಾಡಿ ಗೌಡಪಾದಾಚಾರ್ಯರವರಿಗೆ ಅರ್ಪಿಸಿದರು. ಬಳಿಕ ಉಜ್ಜಯನಿ, ಅಲಹಾಬಾದ್ ಮೂಲಕ ಕಾಶೀಕ್ಷೇತ್ರವನ್ನು ತಲುಪಿದರು. ಅಲ್ಲಿ ಒಂಭತ್ತು ದಿನಗಳು ಇದ್ದು ಮುಂದೆ ದೆಹಲಿನಗರಕ್ಕೆ ದಯಮಾಡಿಸಿದರು.

ಅಲ್ಲಿ ಶ್ರೀ ಡಿ.ಎನ್. ಕೃಷ್ಣಮೂರ್ತಿಯವರು (ಇವರು ಶ್ರೀ ಡಿ.ಸಿ. ನಂಜಪ್ಪಭಾಗವತರ ಮಕ್ಕಳು) ಶ್ರೀಶ್ರೀಗಳವರನ್ನು ಕರೆದುಕೊಂಡು ಹೋಗಿ ಸತ್ಕರಿಸಿದರು. ಮುಂದೆ ಕುರುಕ್ಷೇತ್ರವೇ ಮುಂತಾದ ಸ್ಥಳಗಳನ್ನು ನೋಡಿಕೊಂಡು ಮಥುರೆ, ಬೃಂದಾವನ ಇವುಗಳನ್ನೂ ಸಂದರ್ಶಿಸಿ ಅಹಮ್ಮದಾಬಾದ್ ಮೂಲಕ ಶ್ರೀ ಸ್ವಾಮಿಮಾಧವ ತೀರ್ಥಜೀರವರ ಆಶ್ರಮವಿರುವ ವಲ್ಲಾದ್‌ಗೆ ದಯಮಾಡಿಸಿದರು. ಅಲ್ಲಿ ಸ್ವಲ್ಪ ಕಾಲವಿದ್ದು ಮುಂದೆ ದ್ವಾರಕಾಕ್ಷೇತ್ರಕ್ಕೆ ಹೋಗಿ ಆಗ ಅಲ್ಲಿ ಸಂನಿಹಿತರಾಗಿದ್ದ ಶ್ರೀ ದ್ವಾರಕಾಜಗದ್ಗುರು ಪೀಠಾಧ್ಯಕ್ಷರಾದ ಶ್ರೀಸಚ್ಚಿದಾನಂದತೀರ್ಥಸ್ವಾಮಿಗಳನ್ನು ಸಂದರ್ಶಿಸಿದರು. ಶ್ರೀಶ್ರೀಜಗದ್ಗುರುಗಳವರು ಶ್ರೀಗಳು ಬರೆದಿದ್ದ ಮಾಂಡೂಕ್ಯರಹಸ್ಯ ವಿವೃತಿಃ ಗ್ರಂಥವನ್ನು ನೋಡಿ ಸಂತೋಷಗೊಂಡು ಅದರ ಪ್ರಕಟನೆಗಾಗಿ ಯಥೋಚಿತ ಸಹಾಯದ್ರವ್ಯವನ್ನು ನೀಡಿದರು. ಮುಂದೆ ಶ್ರೀಗಳವರು ಅಹಮದಾಬಾದ್, ಬೊಂಬಾಯಿ, ಪೂನ-ಮಾರ್ಗವಾಗಿ ತಾ|| 13-5-56ರ ವೇಳೆಗೆ ಹೊಳೆನರಸೀಪುರಕ್ಕೆ ಸುಖವಾಗಿ ಹಿಂತಿರುಗಿದರು. ಶ್ರೀಶ್ರೀಗಳವರು ಹೋಗಿದ್ದ ಸ್ಥಳಗಳಲ್ಲಿ ಯಥಾವಕಾಶವಾಗಿ ಅಧ್ಯಾತ್ಮವಿಚಾರದ ಪ್ರವಚನಗಳನ್ನೂ ಪಂಡಿತರೊಡನೆ ಸಂಭಾಷಣೆಗಳನ್ನೂ ನಡೆಯಿಸಿದರು.

ಕಾಶಿಯಲ್ಲಿದ್ದಾಗ ಶ್ರೀಶ್ರೀಗಳವರು ಬೆನಾರಸ್ (ವಾರಣಾಸಿಯ) ಹಿಂದೂ ಯೂನಿವರ್ಸಿಟಿಯ ಪ್ರೊಫೆಸರರಾದ ಶ್ರೀ ಟಿ.ಆರ್.ವಿ. ಮೂರ್ತಿ, ಎಂ.ಎ., ಡಿ.ಲಿಟ್‌ರವರನ್ನು ಭೇಟಿಮಾಡಿದುದೊಂದು ವಿಶೇಷಸಂದರ್ಭವಾಗಿತ್ತು. ಶ್ರೀ ಮೂರ್ತಿಯವರು ವಿದ್ಯಾವಂತರು. ಸಂಸ್ಕೃತ, ವೇದಾಂತ, ಪಾಶ್ಚಾತ್ಯ ತತ್ತ್ವಶಾಸ್ತ್ರಗಳನ್ನು ಅಭ್ಯಾಸಮಾಡಿದವರು, ವಿನಯಶೀಲರು. ವೇದಾಂತದ ಶಾಸ್ತ್ರಪರೀಕ್ಷೆ, ವ್ಯಾಕರಣದ ಆಚಾರ್ಯ ಪರೀಕ್ಷೆ, ಪ್ರೌಢಪರೀಕ್ಷೆಗಳಲ್ಲಿಯೂ, ಉತ್ತೀರ್ಣರಾಗಿದ್ದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಭಾಷಣಮಾಡಿದ ಪ್ರೌಢವಿದ್ವಾಂಸರಾಗಿದ್ದರು. **'The Central Philosophy of Buddhism'** ಎಂಬ ಗ್ರಂಥರತ್ನವನ್ನು ಈ ವೇಳೆಗೆ ಶ್ರೀಶ್ರೀಗಳವರು ಓದಿದ್ದರು ; ಅದರ ವಿಮರ್ಶೆಯನ್ನು ಅಧ್ಯಾತ್ಮಪ್ರಕಾಶ ಪತ್ರಿಕೆಯ 1956ನೆಯ ಏಪ್ರಿಲ್ ಸಂಚಿಕೆಯಲ್ಲಿ ಬರೆದಿದ್ದರು. ಈ ಗ್ರಂಥವು ಶ್ರೀ ಮೂರ್ತಿಗಳಿಗೆ ಡಿ.ಲಿಟ್. ಪದವಿಯನ್ನು ದೊರಕಿಸಿದೆ. ಶ್ರೀಗಳು ಇಂಥ ವಿದ್ವಾಂಸರೊಡನೆ ಸಾಕ್ಷಾತ್ತಾಗಿ ಸಂಭಾಷಣೆಯನ್ನು ಮಾಡಿ ಅವರ ಗ್ರಂಥದ ವಿಷಯದಲ್ಲಿ ಅನೇಕ ಪ್ರಶ್ನೋತ್ತರಗಳನ್ನು ನಡೆಯಿಸಿದರು. ಅವರೊಡನೆ ಅಭಿಪ್ರಾಯ ವಿನಿಮಯದಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿದರು. ಇವುಗಳೆಲ್ಲವನ್ನೂ ತಮ್ಮ ಸ್ವಂತ ಚಿಂತನೆಯಲ್ಲಿ ಸೇರಿಸಿಕೊಂಡು ಶ್ರೀಗಳು ವೇದಾಂತ ಮತ್ತು ಬೌದ್ಧಸಿದ್ಧಾಂತಗಳ ತಾರತಮ್ಯದ ವಿಷಯಕ್ಕೆ ತಮ್ಮ ಕೃತಿಯಾದ "ಮಾಂಡೂಕ್ಯರಹಸ್ಯವಿವೃತಿ"ಯಲ್ಲಿ ವಿಚಾರಪ್ರಚೋದಕವಾದ ಇಂಗ್ಲಿಷು ಪೀಠಿಕೆಯನ್ನು ಸಿದ್ಧಗೊಳಿಸಿದರು. ಇದು

ಈಗಲೂ 'ಮಾಂಡೂಕ್ಯರಹಸ್ಯವಿವೃತಿಃ' ಗ್ರಂಥದಲ್ಲಿ ಒಂದು ಮುಖ್ಯ ಭಾಗವಾಗಿ ಪ್ರಕಾಶಿತವಾಗಿದೆ. ಇಂಗ್ಲಿಷು ಬಲ್ಲವರೂ ವೇದಾಂತ ಬೌದ್ಧಸಿದ್ಧಾಂತ ಪ್ರಕ್ರಿಯೆಗಳ ತಾರತಮ್ಯವನ್ನು ತಿಳಿಯಲು ಇಚ್ಛೆಯುಳ್ಳವರೂ ಅವಶ್ಯವಾಗಿ ಓದಬೇಕಾದ ಗ್ರಂಥಭಾಗವಿದು. ಈಚೆಗೆ ಇದನ್ನು ಆಂಗ್ಲ ಭಾಷೆಯಲ್ಲಿ **'Introduction to Vedanta Texts'** ಎಂಬ ಗ್ರಂಥದಲ್ಲಿ ಪ್ರಕಟಿಸಿದೆ.

1957ನೆಯ ಜನವರಿ ಮಾಹೆಯಲ್ಲಿ ಶ್ರೀಗಳವರು ಬೇಲೂರು, ಹಳೇಬೀಡುಗಳನ್ನು ಸಂದರ್ಶಿಸಿ ಹಿಂತಿರುಗಿದರು. ತಾ. 26.1.57ರಿಂದ 15 ದಿನಗಳ ಕಾಲ ಬೆಂಗಳೂರಿಗೆ ದಯಮಾಡಿಸಿ ವಿಶ್ವೇಶ್ವರಪುರದಲ್ಲಿಯೂ ಸಿಟಿಯ ಬೇರೆಬೇರೆ ಬಡಾವಣೆಗಳಲ್ಲಿಯೂ ಉಪನ್ಯಾಸಗಳನ್ನು ಅನುಗ್ರಹಿಸಿದರು.

ತಾ. 3.12.58ರಿಂದ ಎರಡು ವಾರಗಳ ಕಾಲ ತರೀಕೆರೆ, ಭದ್ರಾವತಿ, ಶಿವಮೊಗ್ಗ - ಈ ಪ್ರಾಂತ್ಯಗಳಲ್ಲಿ, ಪುನಃ 1959ನೆಯ ಮಾರ್ಚಿಯಲ್ಲಿ ಚಿಕ್ಕಮಗಳೂರು, ಕಳಸ ಪ್ರಾಂತ್ಯಗಳಲ್ಲಿ ಸಂಚರಿಸಿ ಮಹಾಜನರಿಗೆ ಅಧ್ಯಾತ್ಮೋಪದೇಶಗಳನ್ನು ನೀಡಿದರು.

ಈ ಮೊದಲು ತಾ. 5.2.58ರಿಂದ ಹತ್ತು ದಿನಗಳ ಕಾಲ ಚಿಕ್ಕಮಗಳೂರಿಗೆ ದಯಮಾಡಿಸಿ ಉಪನ್ಯಾಸವೇ ಮುಂತಾದ ಕಾರ್ಯಕ್ರಮಗಳನ್ನು ನಡೆಯಿಸಿದರು. ಅಲ್ಲಿನ ಲಾಯರ್ ಶ್ರೀ ಕೃಷ್ಣಸ್ವಾಮಿರಾಯರೇ ಮುಂತಾದ ಮಹಾಜನರು ಗುರುಗಳನ್ನು ಸ್ವಾಗತಿಸಿ ಭಕ್ತಿಶ್ರದ್ಧೆಗಳಿಂದ ಸೇವೆಯನ್ನು ಸಲ್ಲಿಸಿದರು.

ಶ್ರೀಶ್ರೀಗಳವರ ದಕ್ಷಿಣದೇಶಪ್ರವಾಸ : ಶ್ರೀಶ್ರೀಗಳವರು ಮಿತಪರಿವಾರದೊಡನೆ ಹೊರಟು ತಾ. 22.2.58ರಿಂದ ಸುಮಾರು ಮೂರುವಾರಗಳ ಕಾಲ ಮದ್ರಾಸ್, ಕಂಚಿ, ತಿರುಪತಿ, ಶ್ರೀರಂಗ, ಮಧುರೆ, ರಾಮೇಶ್ವರ, ಪಳನಿ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿಕೊಂಡು ಬಂದರು. ಈ ಪ್ರವಾಸದಲ್ಲಿ ಆಗ್ಗೆ ಮಧುರೆಯಲ್ಲಿ ಬಿಡಾರಮಾಡಿದ್ದ ಶ್ರೀಶೃಂಗೇರಿ ಜಗದ್ಗುರು ಪೀಠಾಧೀಶ್ವರರನ್ನೂ, ಕಂಚಿಯಲ್ಲಿ ಶ್ರೀಕಾಮಕೋಟಿ ಜಗದ್ಗುರು ಪೀಠಾಧ್ಯಕ್ಷರನ್ನೂ ಸಂದರ್ಶಿಸಿದ್ದರು. ಉಭಯ-ಪೀಠಾಧಿಪತಿಗಳಿಗೂ ತಾವು ರಚಿಸಿದ್ದ ನೂತನ ಸಂಸ್ಕೃತಗ್ರಂಥವಾದ ''ಮಾಂಡೂಕ್ಯ-ರಹಸ್ಯವಿವೃತಿ'' ಯನ್ನು ಸಮರ್ಪಿಸಿದರು.

ತಾ. 17.10.59 ರಿಂದ ಸುಮಾರು ಹತ್ತು ತಿಂಗಳು ಬೆಂಗಳೂರಿನಲ್ಲಿಯೇ ನೆಲಸಿದ್ದರು. ನಡುನಡುವೆ ಹೊಳೆನರಸೀಪುರಕ್ಕೆ ಬಂದು ಹೋಗುತ್ತಿದ್ದರು. 1960ನೆಯ ಜನವರಿ ಮಾಹೆಯಲ್ಲಿ ಒಂದುವಾರಕಾಲ ಶ್ರೀಶಂಕರರ ಜನ್ಮಭೂಮಿಯಾದ

ಕಾಲಟಿಕ್ಷೇತ್ರಕ್ಕೆ ಪ್ರವಾಸಹೋಗಿಬಂದರು. ಬೆಂಗಳೂರಿನಲ್ಲಿರುವಾಗ ದಾರ್ಶನಿಕ ಪರಿಷತ್‌ನವರ ಆಶ್ರಯದಲ್ಲಿ ಎರಡು ಪರ್ಯಾಯಗಳಲ್ಲಿ ಸುಮಾರು ಹದಿನೈದು ದಿನಗಳಂತೆ ಅಧ್ಯಾತ್ಮೋಪದೇಶಗಳನ್ನು ಅನುಗ್ರಹಿಸಿದರು.

**ಚಾತುರ್ಮಾಸ್ಯ : 1955, 57**ರಲ್ಲಿ ಮಹಾಜನರ ಆಹ್ವಾನದಂತೆ ದಾವಣಗೆರೆಯ ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮಮಂದಿರದಲ್ಲಿ ನೆರವೇರಿತು. ಪ್ರತಿದಿನ ಸಂಜೆ ಶ್ರೀಶ್ರೀಗಳಿಂದ ಉಪನ್ಯಾಸಗಳಾದುವು. ಬೆಳಗಿನ ಸಮಯದಲ್ಲಿ ಶ್ರೀ ದೇವರಾಯ ಕುಲಕರ್ಣಿಗಳ ಪ್ರವಚನವಿರುತ್ತಿತ್ತು. 1956, 58ರಲ್ಲಿ ಹೊಳೆನರಸೀಪುರದಲ್ಲೇ ನಡೆದುವು. 1959ರಲ್ಲಿ ಶ್ರೀ ಮತ್ತೂರು ಸುಬ್ರಾಯಾವಧಾನಿಗಳ ಸಹಕಾರದಿಂದ ಕಾರ್ಯಕ್ರಮವು ಶಿವಮೊಗ್ಗ ಜಿಲ್ಲೆಯ ಮತ್ತೂರು ಅಗ್ರಹಾರದಲ್ಲಿ ಚೆನ್ನಾಗಿ ನಡೆಯಿತು. ಇದಾದ ನಂತರವೂ ಮುಂದೆ ಎರಡು ತಿಂಗಳಕಾಲ ಶ್ರೀಗಳವರು ಅಲ್ಲಿನ ವೇದಬ್ರಹ್ಮರೂ ಸೇರಿದಂತೆ ಮಹಾಜನರಿಗೆ ವೇದಾಂತ ಪಾಠಗಳನ್ನೂ ಉಪದೇಶಗಳನ್ನೂ ಅನುಗ್ರಹಿಸಿದರು. 1960ರ ಚಾತುರ್ಮಾಸ್ಯವನ್ನು ಧಾರವಾಡದ ಹಿರಿಯರ ಕರೆಯನ್ನು ಮನ್ನಿಸಿ, ಅಲ್ಲಿ ಶ್ರೀಶ್ರೀಗಳವರು ವ್ಯಾಸಪೂರ್ಣಿಮಾದಿನ ಗುರುಪೂಜಾದಿಗಳನ್ನೂ ಉಪನ್ಯಾಸ ಕಾರ್ಯಕ್ರಮಗಳನ್ನೂ ನಡೆಸಿದರು. ಮಧ್ಯಾಹ್ನದ ವೇಳೆಯಲ್ಲಿ ಜಿಜ್ಞಾಸುಗಳಿಗೆ ಭೇಟಿಕೊಟ್ಟು ಅವರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುತ್ತಿದ್ದರು. ಶ್ರೀಶ್ರೀಗಳವರ ವಿದ್ವತ್‌ಪೂರ್ಣವಾದ ಹಾಗೂ ಅನುಭವಪೂರ್ಣವಾದ ಉಪನ್ಯಾಸಗಳಿಗೆ ಧಾರವಾಡ ನಗರದ ಪ್ರತಿಷ್ಠಿತ ವೈದಿಕ ಲೌಕಿಕ ಮಹಾಜನರೂ ಸುಸಂಸ್ಕೃತ ಸುಶಿಕ್ಷಿತ ಮಹನೀಯರುಗಳೂ ಬರುತ್ತಿದ್ದರು. ಕಾರ್ಯಕ್ರಮವೆಲ್ಲವೂ ಧಾರವಾಡದ ತತ್ತ್ವಾನ್ವೇಷಣಮಂದಿರದಲ್ಲಿಯೇ ನಡೆಯುತ್ತಿತ್ತು. ಶ್ರೀ ಸುರೇಂದ್ರ ಶಿವರಾವ ದೇಸಾಯಿ ಎಂ.ಎ., ರವರು ಈ ಉತ್ಸವದ ಮುಖ್ಯಚಾಲಕರಾಗಿದ್ದರು. ಚಾತುರ್ಮಾಸ್ಯ ಉತ್ಸವವು ನಡೆದ ಎರಡು ತಿಂಗಳ ಕಾಲವೂ ಶ್ರೀ ದೇಸಾಯಿಯವರು ಶ್ರೀಶ್ರೀಗಳವರ ಅಧ್ಯಾತ್ಮಗ್ರಂಥಗಳ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಅನೇಕರು ಇದರಿಂದ ಲಾಭವನ್ನು ಪಡೆದು ಶ್ರೀಗಳವರ ಗ್ರಂಥಗಳನ್ನು ಕೊಂಡು ಓದಿ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಿಕೊಂಡರು. ಅಂತೂ ಈ ಉತ್ಸವವು ಬಹಳ ಯಶಸ್ವಿಯಾಗಿ ನೆರವೇರಿತು. ಈ ಉತ್ಸವಸಂದರ್ಭದಲ್ಲಿ ಬೊಂಬಾಯಿನ ಶ್ರೀ ಎಂ. ವೆಂಕಟರಾಮಯ್ಯನವರೆಂಬ ಮಹನೀಯರ ಔದಾರ್ಯದಿಂದ ಕೆಲವು ಭಗವದ್ಗೀತೆಯ ಪ್ರತಿಗಳನ್ನು ಉಚಿತವಾಗಿ ಮಹಾಜನರಲ್ಲಿ ಹಂಚಲಾಯಿತು.

**ಶಂಕರಸಪ್ತಾಹ 1955**ರಲ್ಲಿ ಹೊಸಪೇಟೆಯಲ್ಲಿ ಬಹಳ ಚೆನ್ನಾಗಿ ನಡೆಯಿತು. ವೈಶಾಖ ಶುಕ್ಲದಶಮೀ ಅನಂತರ ಕಾರ್ಯಾಲಯದವರ ಪದ್ಧತಿಯಂತೆ ದ್ವಾದಶೀದಿನ ಕಾರ್ಯಕ್ರಮಗಳು ಸಮಾಪ್ತವಾದರೂ ನಾರಾಯಣದೇವರಕೆರೆ

ಶಂಕರಾಚಾರ್ಯೋತ್ಸವ ಸಭೆಯವರು ಕೇಳಿಕೊಂಡ ಪ್ರಕಾರ ಶ್ರೀಶ್ರೀಗಳವರೂ ಕೆಲವು ವಿದ್ವಾಂಸರೂ ಪೂರ್ಣಿಮೆಯವರೆಗೂ ನಿಂತು ಪ್ರವಚನಾದಿಗಳನ್ನು ಅಮರಾವತಿ (ಹೊಸಪೇಟೆಯ ಒಂದು ಬಡಾವಣೆ)ಯಲ್ಲಿರುವ ಶ್ರೀ ಗೌರೀಪುರ ಚಿಂತಾಮಣಿ ಮಠದಲ್ಲಿ ಶ್ರೀಶ್ರೀಮದವಿರಲಪರಂಜ್ಯೋತಿಃ ಸ್ವರೂಪ ಶ್ರೀ ಶ್ರೀನಿವಾಸ ಸದಾನಂದ ಚಿಂತಾಮಣೀಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಸಿದರು. ಈ ಉತ್ಸವದಲ್ಲಿ ಗೌರೀಪುರ ಮಠಾಧೀಶರು ಕಾರ್ಯಾಲಯದ ಪಂಡಿತ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳಿಗೆ ಅವರ ವಿದ್ವತ್ತನ್ನು ಮೆಚ್ಚಿ ಒಂದು ಶಾಲನ್ನು ಬಹುಮಾನವಾಗಿ ಅನುಗ್ರಹಿಸಿದರು.

**1956**ರಲ್ಲಿ ಹೊಳೆನರಸೀಪುರದಲ್ಲಿಯೇ ನಡೆಯಿತು. ಭಾಷ್ಯಪ್ರವಚನ, ಪುರಾಣ, ಭಜನೆ - ಇವುಗಳು ಎಂದಿನಂತೆ ನಡೆದವು. ಸಪ್ತಾಹದ ನಡುವೆ ಶ್ರೀಶ್ರೀಗಳವರಿಗೆ ಅನಾರೋಗ್ಯವುಂಟಾದ್ದರಿಂದ ಪಂಡಿತರುಗಳೇ ಉಪನ್ಯಾಸಗಳನ್ನು ನಡೆಯಿಸಿದರು. ಮಂಗಳದ ವೇಳೆಗೆ ಶ್ರೀಶ್ರೀಗಳವರಿಗೆ ಆರೋಗ್ಯವು ಸರಿಯಾಯಿತಾದ್ದರಿಂದ ಆಚಾರ್ಯರ ಗುಣಕಥನವನ್ನು ಅವರೇ ನೆರವೇರಿಸಿದರು. ಆ ದಿನ ಶ್ರೀಶ್ರೀಗಳು ಕಾಶಿಯಿಂದ ತಂದಿದ್ದ ಪವಿತ್ರ ಗಂಗಾಜಲದಿಂದ ಶ್ರೀರಾಮರಿಗೂ ಶ್ರೀಶಂಕರಾಚಾರ್ಯರಿಗೂ ಅಭಿಷೇಕಾದಿಗಳನ್ನು ನೆರವೇರಿಸಿ ನೆರೆದಿದ್ದ ಭಕ್ತಮಹಾಜನರಿಗೆಲ್ಲ ಶ್ರೀಗಳವರ ಅಮೃತಹಸ್ತದಿಂದಲೇ ಗಂಗಾತೀರ್ಥ ಪ್ರಾಶನವನ್ನು ಮಾಡಿಸಲಾಯಿತು. ಮಹಾಮಂಗಳಾರತಿಯಾಗಿ ಸಂತರ್ಪಣೆಯೊಡನೆ ಉತ್ಸವವು ಪೂರೈಸಿತು.

**1957**ರಲ್ಲಿ ಬೆಂಗಳೂರಿನಲ್ಲಿ ಅಲಸೂರು ಪೇಟೆ ಶ್ರೀಸೀತಾರಾಮಮಂದಿರದಲ್ಲಿ ನಡೆದ ಉಪನ್ಯಾಸಗಳನ್ನು 'ಅನುಭವಪರ್ಯಂತವಾದ ಆತ್ಮವಿಚಾರ' ಎಂಬ ಹೆಸರಿನ ಗ್ರಂಥರೂಪದಲ್ಲಿ ಪ್ರಕಟಿಸಲಾಯಿತು. ಇದರ ಪೂರ್ಣ ಖರ್ಚು ವೆಚ್ಚಗಳನ್ನು ಶ್ರೀ ಗರಡಿರಾಚಪ್ಪನವರು, ಬೆಂಗಳೂರು - ಇವರು ವಹಿಸಿದ್ದರು.

**1958**ರಲ್ಲಿ ಹಾಸನದಲ್ಲಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ನಡೆಯಿತು. ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಎಂ.ಆರ್. ನಾರಾಯಣರಾಯರು ಎಲ್ಲಾ ವ್ಯವಸ್ಥೆಗಳನ್ನೂ ಮಾಡಿದ್ದರು.

**1960**ರ ಶಂಕರಸಪ್ತಾಹವೂ ಬೆಂಗಳೂರಿನಲ್ಲಿಯೇ ಎಂದಿನಂತೆ ಜರುಗಿತು.

**ಇತರ ಸಪ್ತಾಹಗಳು** - ಈ ಅವಧಿಯಲ್ಲಿ ಶ್ರೀರಾಮನವಮಿ, ಶರನ್ನವರಾತ್ರಿ, ಗೀತಾಜಯಂತಿ, ಬ್ರಹ್ಮಚೈತನ್ಯರ ಆರಾಧನೆಗಳು, ಭಾಷ್ಯಪ್ರವಚನ - ಪುರಾಣ ಉಪನ್ಯಾಸಗಳೊಡನೆ ವಿದ್ವಾಂಸರುಗಳ ಸಹಕಾರದಿಂದ ಸಾಂಗವಾಗಿ ನೆರವೇರಿದುವು.

**ವೇದಾಂತವಿಚಾರಗೋಷ್ಠಿ :** ವೇದಾಂತವಿಚಾರಗಳನ್ನು ಹೆಚ್ಚಿನ ಮಟ್ಟದಿಂದ ಮತ್ತು ವಿಶಾಲವಾದ ವ್ಯಾಪಕವಾದ ದೃಷ್ಟಿಯಿಂದ ಚರ್ಚಿಸುವ ಉದ್ದೇಶ-

ದಿಂದ ವೇದಾಂತವಿಚಾರ ಗೋಷ್ಠಿಯನ್ನು ಏರ್ಪಡಿಸಬೇಕೆಂಬ ಶ್ರೀಶ್ರೀಗಳವರ ಸೂಚನೆಯಂತೆ 18.2.58 ಮತ್ತು 19.2.58 ರಲ್ಲೂ ಕಾರ್ಯಾಲಯದಲ್ಲಿ ಪ್ರಪ್ರಥಮ ವಾಗಿ ಒಂದು ಗೋಷ್ಠಿಯನ್ನು ಏರ್ಪಡಿಸಲಾಗಿತ್ತು. "ಅಹಂಪ್ರತ್ಯಯಗಮ್ಯನಾದ ಆತ್ಮ" ಎಂಬ ವಿಷಯದಲ್ಲಿ ನೆರೆದಿದ್ದ ಎಲ್ಲಾ ಪಂಡಿತರುಗಳೂ ತಮ್ಮ ತಮ್ಮ ದೃಷ್ಟಿ ಕೋನದಿಂದ ಭಾಷಣ ಮಾಡಿದರು. ಗೋಷ್ಠಿಯಲ್ಲಿ ನಾಲ್ಕು ಜನ ಪಂಡಿತರುಗಳು ಮಾತ್ರ ಭಾಗವಹಿಸಿದ್ದರು. ವೇದಾಂತದ ಬೇರೆ ಬೇರೆ ವಿಷಯಗಳಲ್ಲೂ ಪಂಡಿತರುಗಳು ಮಾತನಾಡಿದರು. ಈ ಗೋಷ್ಠಿಯಲ್ಲಿ ಸಭಿಕರು ಉಪನ್ಯಾಸಕರಿಗೆ ಪ್ರಶ್ನೆಗಳನ್ನು ಹಾಕಿ ಸಂಶಯಗಳನ್ನು ಪರಿಹಾರಮಾಡಿಕೊಳ್ಳುವ ಏರ್ಪಾಡು ಮಾಡಲಾಗಿತ್ತು. ಶ್ರೀಶ್ರೀಗಳ ವರು ತಮ್ಮ ಉಪಸಂಹಾರಭಾಷಣದಲ್ಲಿ ಈ ರೀತಿಯಾದ ಗೋಷ್ಠಿಗಳಿಗೆ ಬೇರೆ ಬೇರೆಯ ದರ್ಶನಗಳ ಪರಿಚಯವುಳ್ಳ ಪಂಡಿತರುಗಳು ಬಂದು ಸೇರಿ ಸಹಾನು ಭೂತಿಯಿಂದ ತತ್ತ್ವನಿರ್ಣಯಕ್ಕಾಗಿಯೇ ವಾದಮಾಡಿ ಸರ್ವಸಮ್ಮತವಾದ ಸಿದ್ಧಾಂತ ವನ್ನು ಹೊರತಂದು ಜನತೆಗೆ ವೇದಾಂತಶಾಸ್ತ್ರದ ಆವಶ್ಯಕತೆಯನ್ನೂ ಪ್ರಯೋಜನ ವನ್ನೂ ಮನವರಿಕೆ ಮಾಡಿಕೊಡಬೇಕೆಂದು ಅಪ್ಪಣೆಮಾಡಿದರು. ಪ್ರಪ್ರಥಮವಾಗಿ ನಡೆದ ಈ ಗೋಷ್ಠಿಯು ಹೆಚ್ಚು ವ್ಯಾಪಕವಾಗಿಯೂ ಪ್ರಯೋಜನಕರವಾಗಿಯೂ ನಡೆಯಲು ಸಾಕಷ್ಟು ಅವಕಾಶವಿರಲಿಲ್ಲವಾಗಿ ಸಾಮಾನ್ಯರೀತಿಯಲ್ಲಿ ಜರುಗಿತು.

ಎರಡನೆಯ ಬಾರಿಗೆ ವೇದಾಂತಗೋಷ್ಠಿಯು ವೇ॥ ಎಸ್. ವಿಠಲಶಾಸ್ತ್ರಿಗಳವರ ಪರಿಶ್ರಮದಿಂದ ಮೈಸೂರಿನಲ್ಲಿ ಅಭಿನವಶಂಕರಾಲಯದಲ್ಲಿ ತಾ. 29.9.58 ರಿಂದ ನಾಲ್ಕು ದಿನಗಳಕಾಲ ನಡೆಯಿತು. ಈ ಬಾರಿ ಹೆಚ್ಚು ಪಂಡಿತರುಗಳು ಭಾಗವನ್ನು ವಹಿಸಿ, ಭಾಷಣಗಳು ಆದವು. ಶ್ರೀಶ್ರೀಗಳವರು ತಮ್ಮ ಉಪದೇಶದಲ್ಲಿ ಇಂಥ ಗೋಷ್ಠಿ ಗಳಲ್ಲಿ ಹೆಚ್ಚು ಪಂಡಿತರುಗಳು ಭಾಗವಹಿಸಿ ಈಗಿನ ಕಾಲಕ್ಕೆ ವೇದಾಂತವಿಚಾರವು ಹೇಗೆ ಆಗಬೇಕು ? ಈಗಿನ ಸಮಸ್ಯೆಗಳಿಗೆ ವೇದಾಂತದಲ್ಲಿ ಉತ್ತರವಿದೆಯೆ ? - ಇಂಥ ವಿಚಾರಗಳಲ್ಲಿ ಚರ್ಚಿಸಿ ನಿರ್ಣಯಕ್ಕೆ ಬರುವ ಏರ್ಪಾಡಾಗಬೇಕು, ಇದರಿಂದ ಎಲ್ಲರಿಗೂ ಪ್ರಯೋಜನವುಂಟೆಂದು ತಿಳಿಸಿದರು.

**ಅನುಷ್ಠಾನಗಳಿಗೆ ಮೂಲನಿಧಿ :** ಅನುಷ್ಠಾನಗಳನ್ನು ಶಾಶ್ವತವಾಗಿ ನಡೆಯಿಸಿಕೊಂಡು ಹೋಗಲು ನಿಧಿಯನ್ನು ಏರ್ಪಾಡುಮಾಡಲಾಯಿತು. ಆಗ್ಗೆ ಕಾರ್ಯಾಲಯದ ಉಪಾಧ್ಯಕ್ಷರಾಗಿದ್ದ ಶ್ರೀ ಅರಕಲಗೂಡು ಶ್ರೀಕಂಠಯ್ಯನವರ ಪ್ರೋತ್ಸಾಹದಿಂದ ಚನ್ನರಾಯಪಟ್ಟಣದ ಸಾಹುಕಾರ್ ವೆಂಕಟರಮಣಯ್ಯನವರು ಶಂಕರಸಪ್ತಾಹದ ಮೂಲನಿಧಿಗೆ ಎಂದು ಎರಡು ಸಾವಿರರೂಪಾಯಿಗಳನ್ನು ಉದಾರವಾಗಿ ದಾನಮಾಡಿದರು. ಇದನ್ನು ಮೂಲಧನವಾಗಿಟ್ಟು ಇದರ ಬಡ್ಡಿಯಿಂದ ಶಂಕರಸಪ್ತಾಹ ಉತ್ಸವವನ್ನು ನಡೆಯಿಸುವ ವ್ಯವಸ್ಥೆ ಮಾಡಲಾಯಿತು.

1957ನೆಯ ಡಿಸೆಂಬರ್ ಮಾಹೆಯಲ್ಲಿ ಕೋಲಾರದಲ್ಲಿ ಆಗ್ಗೆ ಎಂಜಿನಿಯ-ರಾಗಿದ್ದ ಶ್ರೀ ಆರ್.ಎಸ್. ಗೋವಿಂದಪ್ಪಶೆಟ್ಟರು ಕಾರ್ಯಾಲಯದಲ್ಲಿ ಪ್ರತಿವರ್ಷವೂ ನಡೆಯುತ್ತಿರುವ ಗೀತಾಜಯಂತಿಯ ಅನುಷ್ಠಾನ ಮತ್ತು ಗೀತಾಪುಸ್ತಕಗಳನ್ನು ಧರ್ಮಾರ್ಥವಾಗಿ ಯೋಗ್ಯರಿಗೆ ಹಂಚುವ ಸಲುವಾಗಿ ಒಂದು ಸಾವಿರ ರೂಪಾಯಿ ಗಳ ಮೂಲಧನವನ್ನು ಉದಾರವಾಗಿ ಅರ್ಪಿಸಿದರು. ಈ ಮಹನೀಯರು ಈಚೆಗೆ ಮೈಸೂರು ಕುವೆಂಪುನಗರದಲ್ಲಿ ನಿರ್ಮಿಸಿರುವ ರಮಣಮಹರ್ಷಿ ಕೇಂದ್ರದಲ್ಲಿ 1996ನೇ ಮಾರ್ಚಿ ಮಾಹೆಯಲ್ಲಿ ವೇದಾಂತಸಪ್ತಾಹವನ್ನು ನಡೆಯಿಸಿದರು.

**ಗ್ರಂಥಗಳು :** 1955ರ ವೇಳೆಗೆ ವೇದಾಂತಪ್ರವೇಶಿಕೆ, ದೃಗ್‌ದೃಶ್ಯವಿವೇಕ, ಮೋಹಮುದ್ಗರ, ಶಂಕರಮಹಾಮನನ, ಮುಕುಂದಮಾಲಾ, ಸಮುದ್ರ-ಮಥನ - ಈ ಕನ್ನಡ ಗ್ರಂಥಗಳು ಪುನರ್ಮುದ್ರಿತವಾದವು. ಡಿಸೆಂಬರ್ ವೇಳೆಗೆ ಶ್ರೀಶ್ರೀಗಳವರು ಬ್ರಹ್ಮಸೂತ್ರ ಅಧ್ಯಾಸ ಭಾಷ್ಯದಮೇಲೆ ಬರೆದಿದ್ದ 'ಸುಗಮಾ' ಎಂಬ ಸಂಸ್ಕೃತವ್ಯಾಖ್ಯಾನಗ್ರಂಥವು ಪ್ರಕಟವಾಯಿತು. ಶ್ರೀಶ್ರೀಗಳು ದಾವಣಗೆರೆ ಚಾತು ರ್ಮಾಸ್ಯ ಕಾಲದಲ್ಲಿ ಬರೆದಿದ್ದ 'ಶಾಂಕರವೇದಾಂತಪ್ರಕ್ರಿಯೆ' ಎಂಬ ಕನ್ನಡ ಪುಸ್ತಕ ವೊಂದು ಪತ್ರಿಕೆಯ ಮೂಲಕ ಹೊರಬಿದ್ದಿತು. ಈ ಪುಸ್ತಕದ ಸುಮಾರು 800 ಪ್ರತಿಗಳನ್ನು ಪ್ರಚಾರದೃಷ್ಟಿಯಿಂದ ಮೂಲಬೆಲೆಗೆ ಮಹಾಜನರಿಗೆ ಹಂಚಲಾಯಿತು.

1956ರಲ್ಲಿ ಉಪದೇಶಸಾಹಸ್ರಿ 18, 19ನೆಯ ಪ್ರಕರಣಗಳ ಭಾಗವನ್ನು ಒಂದು ಗ್ರಂಥವಾಗಿ ಪ್ರಕಟಿಸಿ "ಮಾಂಡೂಕ್ಯರಹಸ್ಯವಿವೃತಿಃ" ಮುದ್ರಣವನ್ನು ಆರಂಭಿಸಲಾಯಿತು. ಶ್ರೀ ಎಂ. ವಿ. ಶರ್ಮ-ಎಂಬ ಮಹಾಶಯರ ಪ್ರೋತ್ಸಾಹದಿಂದ "ಗೀತಾಸಾರ್ಥ" ಪುಸ್ತಕವನ್ನು ಸಂಸ್ಕರಿಸಿ ಪುನರ್ಮುದ್ರಣಮಾಡಿಸಲಾಯಿತು. ಪುಸ್ತಕಭಂಡಾರಕ್ಕೆ ಕೆಲವು ಅಮೂಲ್ಯ ಗ್ರಂಥಗಳನ್ನೂ ಕೊಳ್ಳಲಾಯಿತು.

ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ಶ್ರೀಜಯಚಾಮ-ರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟವಾಗುತ್ತಿದ್ದ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಕೊನೆಯ (6ನೆಯ) ಸಂಪುಟವಾದ ಛಾಂದೋಗ್ಯೋಪನಿಷದ್ಭಾಷ್ಯದ ಮುದ್ರ ಣವು ಪೂರ್ಣವಾಯಿತು. ಆ ವೇಳೆಗೆ ಸರಿಯಾಗಿ ಅರಮನೆಯಿಂದ ಬಂದ ನಿರೂಪದಲ್ಲಿ ಇನ್ನು ಮುಂದೆ ಮತ್ತೆ ಆಜ್ಞೆಯನ್ನು ಕೊಡುವವರೆಗೆ ಈ ಗ್ರಂಥ ಮಾಲೆಗಾಗಿ ಯಾವ ಪುಸ್ತಕವನ್ನೂ ಸಿದ್ಧಗೊಳಿಸಬೇಕಾದದ್ದಿಲ್ಲವೆಂತ ತಿಳಿಸ ಲಾಗಿತ್ತು. ಇದರಿಂದ ಪ್ರಕಟನ ಶಾಖೆಗೆ ಇದ್ದ ದೊಡ್ಡಬೆಂಬಲವು ಇನ್ನುಮುಂದೆ ಇಲ್ಲದಂತಾಯಿತು. ಆದರೂ ಮಹಾಜನರ ನೆರವಿನಿಂದ ಉಳಿದ ಪ್ರಕರಣ ಗ್ರಂಥಗಳನ್ನು ಅಚ್ಚುಮಾಡಿಸುವ ಏರ್ಪಾಡು ಮಾಡಬೇಕೆಂದು ಯೋಚಿಸಲಾಯಿತು.

ಈವರೆಗೆ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳು ಮತ್ತು ಕೆಲವೇ ಪ್ರಕರಣಗಳು ಸಹ ಅರಮನೆಯವರ ಪ್ರೋತ್ಸಾಹ ದಿಂದ ಪ್ರಕಟವಾಗಿದ್ದವು.[1] 1944ನೆಯ ಶರನ್ನವರಾತ್ರಿಯಲ್ಲಿ ಪ್ರಾರಂಭವಾದ ಈ ಮಹಾಕಾರ್ಯವು ಹನ್ನೆರಡು ವರ್ಷಕಾಲ ನಡೆದು 1956ನೆಯ ಶರನ್ನವರಾತ್ರಿಯ ಹೊತ್ತಿಗೆ ಒಂದು ಘಟ್ಟಕ್ಕೆ ನಿಂತಿತು. ಇದರ ಸಂತೋಷಕ್ಕಾಗಿ ಈ ಅನುಷ್ಠಾನದ ನಡುವೆ ಸರಸ್ವತೀಪೂಜೆಯ ದಿನ ಪ್ರಸ್ಥಾನತ್ರಯಕನ್ನಡಭಾಷ್ಯಗ್ರಂಥಗಳು ಮತ್ತು ಶ್ರೀಶಂಕರಾ ಚಾರ್ಯರ ಭಾವಚಿತ್ರದ ಉತ್ಸವವನ್ನು ಏರ್ಪಡಿಸಿ ಹೂವಿನಪಲ್ಲಕ್ಕಿಯಲ್ಲಿ ಗ್ರಂಥ ಗಳನ್ನಿಟ್ಟು ಅಲಂಕರಿಸಿ ಹೊಳೆನರಸೀಪುರದ ಪ್ರಮುಖ ರಾಜಬೀದಿಗಳಲ್ಲಿ ಓಲಗ, ವೇದ ಪಾರಾಯಣಗಳೊಡನೆ ಮೆರವಣಿಗೆ ಮಾಡಲಾಯಿತು.

1956ರಲ್ಲಿ ಛಾಂದೋಗ್ಯೋಪನಿಷದ್ಭಾಷ್ಯ - (ಶ್ರೀಜಯಚಾಮ-ರಾಜೇಂದ್ರ ಗ್ರಂಥ ಮಾಲೆಯದು) ಪ್ರಕಟವಾಗಿ ಮಾರಾಟಕ್ಕೆ ಸಿದ್ಧವಾಯಿತು. 'ರಸನಿಮಿಷಗಳು'- ಎಂಬ ಚಿಕ್ಕಪುಸ್ತಕವೊಂದನ್ನು ಹೊರತರಲಾಯಿತು.

1958ರಲ್ಲಿ ಶ್ರೀಶ್ರೀಗಳವರು ಮಾಂಡೂಕ್ಯೋಪನಿಷತ್ತು, ಗೌಡಪಾದಕಾರಿಕೆ ಗಳ ಮೇಲೆ ಶ್ರೀಶಂಕರಾಚಾರ್ಯರು ಬರೆದಿರುವ ಅಮೋಘಭಾಷ್ಯವನ್ನು ಅನುಸರಿಸಿ ಸ್ವತಂತ್ರವಾದ ವಿಸ್ತಾರವಾದ ಸಂಸ್ಕೃತವ್ಯಾಖ್ಯಾನವನ್ನು ಬರೆದು ಅದಕ್ಕೆ ಆಂಗ್ಲ ಭಾಷೆಯಲ್ಲಿ ವಿಮರ್ಶಾತ್ಮಕವಾದ ಪೀಠಿಕೆಯನ್ನೂ ಬರೆದಿದ್ದರು. "ಮಾಂಡೂಕ್ಯ-ರಹಸ್ಯವಿವೃತಿಃ" ಅಮೋಘಗ್ರಂಥವು 1958ನೆಯ ಮಾರ್ಚಿಯಲ್ಲಿ ಪ್ರಕಟ-ವಾಯಿತು. 'ಅಧ್ಯಾತ್ಮವೆಂದರೇನು ?', 'ಲಕ್ಷಣಶಾಸ್ತ್ರ ಉರುಫ್ ಹುಸೇನ್' - ಎಂಬ ಎರಡು ಪುಸ್ತಕಗಳನ್ನು, ಡಿಸೆಂಬರ್ ವೇಳೆಗೆ 'ಶಿವಕವಚ'ವನ್ನು ಮತ್ತೆ ಅಚ್ಚು ಮಾಡಿಸಿ ಪ್ರಕಟಿಸಲಾಯಿತು. ಸಂಸ್ಕೃತಭಾಷಾಭ್ಯಾಸ 1ನೆಯ ಭಾಗ ಎಂಬ ಗ್ರಂಥವನ್ನು ಪತ್ರಿಕೆಯ ಮೂಲಕ ಪ್ರಕಟಿಸಲಾಯಿತು. ಶ್ರೀಶ್ರೀಗಳು ಬರೆದಿದ್ದ ಶಾಂಕರ ವೇದಾಂತ ಪ್ರಕ್ರಿಯೆ ಎಂಬ ಕನ್ನಡ ಗ್ರಂಥದ ತೆಲುಗು ಅನುವಾದವು ಗೀತಾಸಾಹಿತ್ಯ ಸೇವಾಸಮಿತಿ, ಅಳ್ಳಗಡ್ಡ - ಇವರಿಂದ ಪ್ರಕಾಶಿತವಾಯಿತು.

1959ನೆಯ ಸೆಪ್ಟೆಂಬರ್‌ವೇಳೆಗೆ ಕನ್ನಡದಲ್ಲಿ ಶಂಕರವೇದಾಂತಸಾರ, ಸಂಸ್ಕೃತಭಾಷಾಭ್ಯಾಸ 2ನೆಯ ಭಾಗ-ಈ ಗ್ರಂಥಗಳು-ಪತ್ರಿಕೆಯ ಮೂಲಕ ಪ್ರಕಟ ವಾದವು. ಸಂಸ್ಕೃತದಲ್ಲಿ ವೇದಾಂತಬಾಲಬೋಧಿನೀ, ಕೇನೋಪನಿಷದ್ಭಾಷ್ಯ

---

1. 1925ರಿಂದ 2005ರ ವರೆಗೆ ಕಾರ್ಯಾಲಯದ ಮೂಲಕ ಪ್ರಕಾಶನಗೊಂಡಿರುವ ಗ್ರಂಥಗಳ ಕೈಪಿಡಿಯಲ್ಲಿ ಹೆಚ್ಚಿನ ವಿವರಗಳಿವೆ. ಈ ಗ್ರಂಥವು ಕಾರ್ಯಾಲಯದಲ್ಲಿ ದೊರಕುತ್ತದೆ.

(ಸಟಿಪ್ಪಣಿ) ಇವುಗಳು ಸಿದ್ಧವಾದವು. ಶಂಕರಭಾಷ್ಯಗಳ ಮಾದರಿಯಲ್ಲಿಯೇ ಮೂಲ, ಅನುವಾದ, ಟಿಪ್ಪಣಿ, ಪೀಠಿಕೆ, ಶಬ್ದಾನುಕ್ರಮಣಿಕೆಗಳೊಡನೆ ಈ ವೇಳೆಗಾಗಲೇ ಶ್ರೀಗಳವರು ಬರೆದುಸಿದ್ಧಪಡಿಸಿದ್ದ ಶ್ರೀರಾಮಾನುಜಾಚಾರ್ಯರ ವೇದಾರ್ಥ ಸಂಗ್ರಹವು ಸ್ವತಂತ್ರವಾಗಿಯೇ ಪ್ರಕಟವಾಗಿ ಮಾರಾಟಕ್ಕೆ ಸಿದ್ಧವಾಯಿತು. ಈ ವಿಚಾರವನ್ನು ಶ್ರೀವೈಷ್ಣವಮಹಾಜನರಲ್ಲಿ ಪ್ರಸ್ತಾಪಿಸಲಾಗಿ ಗೊರೂರಿನ ಒಬ್ಬ ಭಕ್ತರು ಈ ಗ್ರಂಥಪ್ರಕಟನೆಯ ವೆಚ್ಚದಲ್ಲಿ ನಾಲ್ಕನೆಯ ಒಂದು ಭಾಗವನ್ನು ಉದಾರ ಮನಸ್ಸಿನಿಂದ ವಹಿಸಿಕೊಂಡರು. ಉಳಿದ ಭಾಗಕ್ಕೆ ಮಹಾಜನರ ಸಹಾಯದಿಂದಲೂ ಕಾರ್ಯಾಲಯದ ಪ್ರಕಟನನಿಧಿಯಿಂದಲೂ ಹಣವನ್ನು ಒದಗಿಸಿಕೊಂಡು ಈ ಅಮೋಘಗ್ರಂಥವನ್ನು ಪ್ರಕಾಶಗೊಳಿಸಲಾಯಿತು. ಶ್ರೀರಾಮಾನುಜಾಚಾರ್ಯರ ಉಳಿದ ಗ್ರಂಥಗಳೂ ಶಂಕರಭಾಷ್ಯಗಳಂತೆಯೇ ಕನ್ನಡದಲ್ಲಿ ಬರಬೇಕಾದ ಅಗತ್ಯವು ಬಹಳವಾಗಿದೆ. ಕಾರ್ಯಾಲಯದವರು ವೇದಾರ್ಥಸಂಗ್ರಹ, ವೇದಾಂತಸಾರ (ಬ್ರಹ್ಮಸೂತ್ರ 1ನೆಯ ಅಧ್ಯಾಯದ 2 ಪಾದಗಳು), ಶ್ರೀಭಾಷ್ಯ (ಜಿಜ್ಞಾಸಾಧಿಕರಣ) ಈ ಮೂರು ಗ್ರಂಥಗಳನ್ನು ಮಾತ್ರ ಈವರೆಗೆ ಹೊರತಂದಿರುತ್ತಾರೆ.

**ಪುರಾಣ ಪ್ರವಚನ :** ಪುರಾಣ ಪ್ರವಚನದಲ್ಲಿ ವಾಸಿಷ್ಠ ರಾಮಾಯಣವು ಪೂರೈಸಿ, **13.6.56**ರಂದು ಮಂಗಳವಾಯಿತು. ಅಲ್ಲಿಂದ ಪ್ರಾರಂಭವಾದ ಮತ್ಸ್ಯ-ಪುರಾಣವು **1957**ರಲ್ಲಿ ಕೊನೆಗೊಂಡು, ಕೂರ್ಮಪುರಾಣ, **11.10.57**ರಿಂದ ಲಿಂಗಪುರಾಣ, **23.6.58**ರಿಂದ ದೇವೀಭಾಗವತ, ಅನಂತರ ವಿಷ್ಣುಧರ್ಮೋತ್ತರ ಪುರಾಣ, **24.8.60**ರಿಂದ ಬ್ರಹ್ಮವೈವರ್ತಪುರಾಣ ಪ್ರವಚನಗಳನ್ನೂ ಶ್ರವಣ ಮಾಡಿಸಲಾಯಿತು. ಪಾಠಪ್ರವಚನಗಳೂ, ಭಾನುವಾರದ ಉಪನ್ಯಾಸಗಳೂ ಯಥಾ ಕ್ರಮದಂತೆ ನೆರವೇರಿದುವು.

**ಅಧ್ಯಾತ್ಮವಿದ್ಯಾಲಯ :** ಸುಮಾರು ಏಳು ವರ್ಷಗಳಿಂದಲೂ ವಿದ್ಯಾಭ್ಯಾಸ ಮಾಡಿಕೊಂಡಿದ್ದ ಶ್ರೀ ಮತ್ತೂರು ರಾಮಸ್ವಾಮಿ ಅವಧಾನಿ ಎಂಬ ವಿದ್ಯಾರ್ಥಿಯು ವಿದ್ಯಾನಿಲಯವನ್ನು ಬಿಟ್ಟರು. ಮುಂದೆ **1959**ನೆಯ ಸೆಪ್ಟೆಂಬರ್ ವೇಳೆಗೆ ಶ್ರೀ ಬಿ.ಕೆ. ಮಂಜಯ್ಯನೆಂಬ ವಿದ್ಯಾರ್ಥಿಯೂ ಎಂಟುವರ್ಷಗಳ ಶಿಕ್ಷಣವನ್ನು ಪೂರೈಸಿಕೊಂಡು ಊರಿಗೆ ಹೊರಟುಹೋದರು. ಇದರಿಂದ ಕೆಲವುಕಾಲ ವಿದ್ಯಾನಿಲಯವನ್ನು ವಿದ್ಯಾರ್ಥಿಗಳಿಲ್ಲದೆ ಮುಚ್ಚಬೇಕಾಗಿಬಂತು. ಶಿಕ್ಷಣವನ್ನು ಪೂರ್ಣಗೊಳಿಸಿದಮೇಲೆ ಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಯೋಗ್ಯತಾಪತ್ರಗಳನ್ನು ಕೊಡಬೇಕೆಂದು ಸಮಿತಿಯವರು ಆಲೋಚಿಸಿದ್ದರು. ಆದರೆ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರಲಿಲ್ಲವಾಗಿ ಪ್ರಶಸ್ತಿಪತ್ರಪ್ರದಾನ ಸಮಾರಂಭವನ್ನು ನಡೆಯಿಸಲು ಸಾಧ್ಯವಾಗಲಿಲ್ಲ.

ವಿದ್ಯಾನಿಲಯಕ್ಕೆ 1960ನೆಯ ಮೇ ಮಾಹೆಯ ವೇಳೆಗೆ ಶ್ರೀ ಕಿಕ್ಕೇರಿ ಗುಂಡಪ್ಪ ನವರ ಪುತ್ರರುಗಳಾದ ಚಿ.ರಾ. ಲಕ್ಷ್ಮೀನರಸಿಂಹಯ್ಯ ಮತ್ತು ಚಿ.ರಾ. ಕೆ.ಜಿ. ಸುಬ್ರಾಯ ಶರ್ಮ-ಎಂಬ ಇಬ್ಬರು ಬಾಲ್ಯಪಾಠದ ವಿದ್ಯಾರ್ಥಿಗಳು ಸೇರಿದರು. ಇವರುಗಳಿಗೆ ಸಂಧ್ಯಾವಂದನೆಯ ಮಂತ್ರಗಳಿಂದ ಪ್ರಾರಂಭಿಸಿ ಕಾಲೋಚಿತವೇದಪಾಠಗಳು ಮತ್ತು ಸಂಸ್ಕೃತಭಾಷೆಯನ್ನು ಹೇಳಿಕೊಡುವ ಏರ್ಪಾಡು ಮಾಡಲಾಯಿತು.

**ಪಂಡಿತರು :** ವೇ|| ಸಿ.ಎನ್. ಯಜ್ಞನಾರಾಯಣ ಶಾಸ್ತ್ರಿಗಳೆಂಬುವರನ್ನು (ಕಾರ್ಯಾಲಯದ ವಿದ್ಯಾರ್ಥಿಗಳಾಗಿದ್ದವರು) ಸಹಾಯಕ ಪಂಡಿತರನ್ನಾಗಿ ನೇಮಿಸಿ ಕೊಳ್ಳಲಾಯಿತು. ಆದರೆ ಶ್ರೀಯುತರು ಅನಿವಾರ್ಯ ತೊಂದರೆಗಳಿಂದ ನಾಲ್ಕು ತಿಂಗಳ ಅನಂತರ ನಿವೃತ್ತರಾದರು.

**ಆಡಳಿತ :** ಕಾರ್ಯ್ಯಾಲಯದ ಮುಖ್ಯವಾದ ವ್ಯವಹಾರಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ 15.8.55ರಿಂದ ಶ್ರೀ ಎ. ನಾರಾಯಣಮೂರ್ತಿ ಎಂಬುವ ರನ್ನು ಮ್ಯಾನೇಜರಾಗಿ ನೇಮಿಸಲಾಯಿತು. ಇವರು ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೆಲವು ಇಂಗ್ಲಿಷ್ ಪಾಠಗಳನ್ನು ಹೇಳುತ್ತಿದ್ದರು. ಆದರೆ ಆರ್ಥಿಕ ಅಡಚಣೆಯ ನಿಮಿತ್ತ ನಾಲ್ಕು ತಿಂಗಳ ಕೊನೆಯಲ್ಲಿ ನಿವೃತ್ತಿಗೊಳಿಸಲಾಯಿತು.

**ಲೆಕ್ಕಪತ್ರಗಳ ತನಿಖೆ :** ಕಾರ್ಯಾಲಯವು ಪ್ರಾರಂಭವಾದಾಗಿನಿಂದ 1948ರ ಜೂನ್ ಮಾಹೆಯವರೆಗೆ ಈ ಸಂಸ್ಥೆಗೆ ಶ್ರೀಶ್ರೀಗಳವರೇ ಅಧ್ಯಕ್ಷರಾಗಿದ್ದುದರಿಂದ ಲೆಕ್ಕ ಪತ್ರಗಳನ್ನೇನೋ ಇಡಲಾಗಿತ್ತಾದರೂ ಯಾವರೀತಿಯಾದ ಪರಿಶೋಧನೆಯಾಗಲಿ ತನಿಖೆಯಾಗಲಿ ಅನವಶ್ಯವೆಂತ ಭಾವಿಸಿ ಆಡಿಟ್ ಮಾಡಿಸಿರಲಿಲ್ಲ. ಆಡಳಿತವು ಕಾರ್ಯಕಾರಿಸಮಿತಿಯವರ ವಶಕ್ಕೆ ಬಂದಮೇಲೆ ಸರಿಯಾದ ಅಕೌಂಟೆಂಟರು ಯಾರೂ ಇಲ್ಲದೆ ಲೆಕ್ಕಗಳೆಲ್ಲ ಅಪೂರ್ಣವಾಗಿದ್ದು ಬಹಳ ಅಸಮಗ್ರಸ್ಥಿತಿಯಲ್ಲಿದ್ದವು. ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಪಂಡಿತರಾಗಿ ನೇಮಿಸಲ್ಪಟ್ಟ ಮೇಲೆ ಕಾರ್ಯಾ ಲಯದ ಮುಖ್ಯವಾದ ಕಾಲದ ಪತ್ರ ವ್ಯವಹಾರಗಳನ್ನೂ ಲೆಕ್ಕಪತ್ರಗಳ ನಿರ್ವಹಣೆ ಯನ್ನೂ ಸಮಿತಿಯವರು ಇವರಿಗೆ ವಹಿಸಿದರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಈ ಕೆಲಸಗಳಲ್ಲಿ ಸಾಕಷ್ಟು ಪರಿಶ್ರಮವನ್ನು ಪಡೆದಿದ್ದರು. ಆಮೇಲೆ ಕಾರ್ಯಾಲಯಕ್ಕೆ ದಯಮಾಡಿಸಿದ್ದ ಶ್ರೀಶ್ರೀಗಳವರ ಪೂರ್ವಾಶ್ರಮದ ಸ್ನೇಹಿತರಾದ ಶ್ರೀ ಟಿ. ರಾಮಕೃಷ್ಣಯ್ಯನವರು, ಎಂ.ಎ., ಎಂ.ಕಾಂ., ಆಡಿಟರ್‌ರವರು, ಇವರಿಗೆ ಸೂಕ್ತ ಸಲಹೆಗಳನ್ನೂ ಸೂಚನೆಗಳನ್ನೂ ಕೊಟ್ಟು ಲೆಕ್ಕಪತ್ರಗಳನ್ನು ಕ್ರಮವಾಗಿ ಬರೆದು ಬ್ಯಾಲೆನ್ಸ್‌ಷೀಟು ಮಾಡುವ ಕ್ರಮಗಳನ್ನು ತಿಳಿಯಿಸಿಕೊಟ್ಟರು. ಇದರಿಂದ ಕಾರ್ಯಾ ಲಯದ ಲೆಕ್ಕಗಳೆಲ್ಲ ಒಂದು ನಿಷ್ಕೃಷ್ಟವಾದ ರೂಪಕ್ಕೆ ಬರಲು ಸಾಧ್ಯವಾಯಿತು.

1955ನೆಯ ಆಗಸ್ಟ್ ಮಾಹೆಯವೇಳೆಗೆ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಶ್ರಮವನ್ನುವಹಿಸಿ ಎಲ್ಲಾ ಲೆಕ್ಕಗಳನ್ನೂ ಪರಿಶೀಲಿಸಿ ಕೆಲವನ್ನು ಹೊಸದಾಗಿಯೂ ಬರೆದು ತಯಾರಿಸಿ ಲೋಪದೋಷಗಳನ್ನು ಸರಿಪಡಿಸಿ ಪ್ರಪ್ರಥಮವಾಗಿ ಬ್ಯಾಲೆನ್ಸ್ ಷೀಟನ್ನು ಸಿದ್ಧಗೊಳಿಸಿದರು. ಬೆಂಗಳೂರಿನಲ್ಲಿ ಶ್ರೀ ಟಿ. ರಾಮಕೃಷ್ಣಯ್ಯನವರು ಸುಮಾರು 12 ದಿನಗಳ ಕಾಲ ಆಮೂಲಾಗ್ರವಾಗಿ ಎಲ್ಲಾ ಲೆಕ್ಕಗಳನ್ನೂ ಶೋಧಿಸಿ, ಸರ್ಟಿಫೈ ಮಾಡಿದರು. ಅವರು ತಾ. 20-8-55ರಲ್ಲಿ ಶ್ರೀಶ್ರೀಗಳವರಿಗೆ ಬರೆದಿರುವ ಪತ್ರದಲ್ಲಿ ಈ ರೀತಿ ತಿಳಿಸಿದ್ದಾರೆ.

"Revered Swamiji, Just now I have completed the audit of accounts of Adhyatma Prakasha Karyalaya....satisfied myself, and then certified it. Mr. Narasimha Murthy, though a lay-man for this kind of work, has done exeedingly good work and has earned my appreciation. Hope this finds you in good state of health.

It is beyond my scope to say what a grand work you have done and have been doing for the benefit of mankind."

ಈ ಮಹನೀಯರು ಯಾವ ಗೌರವಧನವನ್ನೂ ಸ್ವೀಕರಿಸಲಿಲ್ಲ. ಅವರ ಅನುಮೋದನೆ ಪಡೆದ ಬ್ಯಾಲೆನ್ಸ್‌ಷೀಟಿನ ಅಂಕಿ ಅಂಶಗಳ ಪ್ರಕಾರ ಕಾರ್ಯಾಲಯದ ಒಟ್ಟುಆಸ್ತಿಯು ಆಗ್ಗೆ ಒಂದುಲಕ್ಷರೂಪಾಯಿಗಳಿಗೂ ಮೀರಿತ್ತು.

ಶ್ರೀಶ್ರೀಗಳವರ ಮೇಲ್ವಿಚಾರಣೆಯಲ್ಲಿಯೇ ಕಾರ್ಯಾಲಯವು ಸಾಗಿಬಂದಿ-ತ್ತಾದ್ದರಿಂದ ಈವರೆಗೆ ಮಹಾಜನರು ಸಮರ್ಪಿಸಿದ್ದ ಯಾವದೇ ಮೊಬಲಿಗಾಗಲಿ ಲುಪ್ತವಾಗುವ ಅವಕಾಶವೇ ಇರಲಿಲ್ಲ. ಆದರೆ ಲೆಕ್ಕಪತ್ರಗಳನ್ನು ಇಡುವ ಕ್ರಮವು ಗೊತ್ತಿಲ್ಲದಿರುವದು, ಅನನುಭವಿಗಳಾದ ಒಬ್ಬಿಬ್ಬರು ಗುಮಾಸ್ತರು ಚಿಕ್ಕಚಿಕ್ಕ ಅವಧಿಯಲ್ಲಿದ್ದು ಕೆಲಸವನ್ನು ಅಪೂರ್ಣವಾಗಿ ಮಾಡಿ ಕೈಬಿಟ್ಟಿದ್ದು, ಕೆಲವು ಕಾಲ ಯಾರೂ ಗುಮಾಸ್ತರುಗಳೇ ಇಲ್ಲದೆ ಹೋದದ್ದು ಇಂಥ ಕಾರಣಗಳಿಂದ ಲೆಕ್ಕಗಳ ಇಡುವಿಕೆಯಲ್ಲಿ ಅಪೂರ್ಣಸ್ಥಿತಿಯು ಇತ್ತೇ ಹೊರತು ಮತ್ತೇನೂ ಲೋಪದೋಷಗಳು ಸಂಭವಿಸಿರಲಿಲ್ಲ. ಇಂಥ ಅಸಮಗ್ರ ಪರಿಸ್ಥಿತಿಯನ್ನೂ ಸಹ ಈ ವೇಳೆಗೆ ಪರಿಹರಿಸಿ ಕಾರ್ಯಾಲಯದ ಲೆಕ್ಕಗಳನ್ನು ಕನ್ನಡಿಯಂತೆ ಚೊಕ್ಕವಾಗಿ ಅಚ್ಚುಕಟ್ಟಾಗಿ ಇಡುವ ವ್ಯವಸ್ಥೆಯು ಆಚರಣೆಗೆ ಬಂದಿತು. ಇದರಿಂದ ಮಹಾಜನರಿಗೆ ಸಂಸ್ಥೆಯಲ್ಲಿ ಹೆಚ್ಚಿನ ವಿಶ್ವಾಸವೂ ಆದರವೂ ಉಂಟಾಗುವದಕ್ಕೆ ಕಾರಣವಾಯಿತು.

1959ನೆಯ ವರ್ಷದಲ್ಲಿ ಸುಮಾರು ಏಳೆಂಟು ತಿಂಗಳಕಾಲ ವಿದ್ಯಾರ್ಥಿಗಳಾಗಲಿ, ಆಫೀಸುಗುಮಾಸ್ತರಾಗಲಿ ಯಾರೂ ಇರಲಿಲ್ಲ. ಇದರಿಂದ ಪಂಡಿತರೇ

ದೇವರಪೂಜೆ, ಲೆಕ್ಕಪತ್ರವ್ಯವಹಾರ, ಪತ್ರಿಕೆಪುಸ್ತಕಗಳ ರವಾನೆ, ಪ್ರೂಫ್ ನೋಡುವದು ಇತ್ಯಾದಿ ಎಲ್ಲಾ ಕೆಲಸಗಳನ್ನೂ ನಿರ್ವಹಿಸಬೇಕಾಗಿತ್ತು. ಶ್ರೀಶ್ರೀಗಳವರೂ ಪರಸ್ಥಳಗಳಲ್ಲಿದ್ದುದರಿಂದ ಭಾನುವಾರದ ಉಪನ್ಯಾಸಗಳು, ಪುರಾಣಶ್ರವಣ ಇವುಗಳನ್ನೂ ಪಂಡಿತರೊಬ್ಬರೇ ನಡೆಸುತ್ತಿದ್ದರು. ಆದ್ದರಿಂದ ಮತ್ತೇನೂ ವಿಶೇಷ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. 1958ರಿಂದೀಚೆಗೆ ಆಫೀಸಿಗೆ ಸರಿಯಾದ ಗುಮಾಸ್ತರು ಯಾರೂ ಸಿಕ್ಕದೆ ಸಾಮಾನ್ಯ ಎಸ್.ಎಸ್.ಎಲ್.ಸಿ. ಆಗಿರುವ ಹುಡುಗರು ಒಬ್ಬಿಬ್ಬರನ್ನು ಕೆಲವುಕಾಲ ಇಟ್ಟುಕೊಂಡು ಕೆಲಸವನ್ನು ನಡೆಸಲಾಗುತ್ತಿತ್ತು. ಈ ಪರಿಸ್ಥಿತಿಯು ಮುಂದುವರೆದು 1963ನೆಯ ಜನವರಿ ಮಾಹೆಯಲ್ಲಿ ಶ್ರೀ ಡಿ. ವೆಂಕಟೇಶಯ್ಯ ಎಂ.ಎ., (ರಿಟೈರ್ಡ್ ಶಿರಸ್ತೇದಾರ್) ಎಂಬ ಮಹನೀಯರನ್ನು ಅಕೌಂಟೆಂಟರಾಗಿ ನೇಮಿಸಲಾಯಿತು. ಇವರು ಬಂದಮೇಲೆ ಆಫೀಸುಕೆಲಸವು ನಿರಾತಂಕವಾಗಿ ಮುಂದುವರಿಯಲು ಸಾಧ್ಯವಾಯಿತು.

**ಜನರಲ್‌ಬಾಡಿ ಮೀಟಿಂಗ್ :** ಶ್ರೀಶ್ರೀಗಳವರು ಸಂನ್ಯಾಸಸ್ವೀಕಾರ-ಮಾಡಿದ ಬಳಿಕ ಕಾರ್ಯಾಲಯದ ಆಡಳಿತವನ್ನು ಕಾರ್ಯಕಾರಿಸಮಿತಿಯವರು ವಹಿಸಿಕೊಂಡಮೇಲೆ ಮೊದಲನೆಯಬಾರಿಗೆ ಒಂದು ಜನರಲ್‌ಬಾಡಿ ಮೀಟಿಂಗನ್ನು ತಾ. 19.5.59ರಂದು ಮೈಸೂರಿನ ಪ್ರಸಿದ್ಧ ಅಡ್ವೋಕೇಟ್ ಶ್ರೀ ಕೆ. ಪುಟ್ಟೂರಾಯರ ಅಧ್ಯಕ್ಷತೆಯಲ್ಲಿ ನಡೆಯಿಸಲಾಯಿತು. ಶ್ರೀಶ್ರೀಗಳವರ ಸಲಹೆಯಂತೆ ಹಿಂದಿನ ನಿಯಮ-ನಿಬಂಧನೆಗಳಿಗೆ ಅವಿರೋಧವಾಗಿ ವಿಸ್ತಾರ ಹಾಗೂ ವ್ಯಾಪಕ, ಹೊಸ ನಿಯಮ ನಿಬಂಧನೆಗಳನ್ನು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲೂ ಪ್ರಕಟಿಸಲಾಯಿತು.

**ಶಾಖಾಕಾರ್ಯಾಲಯ :** ಶ್ರೀಶ್ರೀಗಳವರು ಬೆಂಗಳೂರಿನಲ್ಲಿದ್ದಾಗ 1959ನೆಯ ಡಿಸೆಂಬರ್ ತಿಂಗಳಲ್ಲಿ 'ಅಧ್ಯಾತ್ಮಪ್ರಕಾಶಕಾರ್ಯಾಲಯದ ಬೆಂಗಳೂರು ಶಾಖೆ'ಯು ಪ್ರಾರಂಭವಾಯಿತು. ನರಸಿಂಹರಾಜಾಕಾಲೋನಿಯಲ್ಲಿ ಒಂದು ಬಾಡಿಗೆ ಮನೆಯಲ್ಲಿ ಸುಮಾರು ಎಂಟುತಿಂಗಳಕಾಲ ನಡೆದ ಈ ಶಾಖೆಯನ್ನು ಶ್ರೀಶ್ರೀಗಳವರೇ ಸ್ವತಃ ತಮ್ಮ ಪಾಠಪ್ರವಚನಗಳಿಂದಲೂ ಸಾನ್ನಿಧ್ಯದಿಂದಲೂ ಪೋಷಿಸಿಕೊಂಡು ಬಂದರು. ಬರುಬರುತ್ತಾ ಮಹಾಜನರ ಉತ್ಸಾಹವು ಇಳಿಮುಖವಾದ್ದರಿಂದಲೂ ಶ್ರೀಗಳವರು ಮುಂದೆ ಧಾರವಾಡಕ್ಕೆ ಚಾತುರ್ಮಾಸ್ಯಕ್ಕೆ ಹೋಗಬೇಕಾಗಿ ಬಂದಿದ್ದರಿಂದಲೂ ಈ ಶಾಖೆಯು ಸರಿಯಾದ ಸಂಚಾಲಕರಿಲ್ಲದೆ ಮುಚ್ಚಲ್ಪಟ್ಟಿತು.

**ಗಣಪತಿ, ವಾಗ್ದೇವಿ ವಿಗ್ರಹ ಪ್ರತಿಷ್ಠೆ :** ತಾ. 18-5-56ನೆಯ ಸೋಮವಾರ ಕಾರ್ಯಾಲಯದಲ್ಲಿರುವ ಶ್ರೀದಿಗ್ವಿಜಯರಾಮ ದೇವಸ್ಥಾನದ

ಮುಂಭಾಗದ ಬಲಗಡೆಯ ಆವರಣದಲ್ಲಿ ಶ್ರೀವಿಘ್ನೇಶ್ವರ ಸ್ವಾಮಿಯವರ ಪ್ರತಿಷ್ಠಾ ಮಹೋತ್ಸವವನ್ನು ಬೆಂಗಳೂರಿನ ನಿವೃತ್ತ ಸೀನಿಯರ್ ಸರ್ಜನ್ ಡಾ. ಬಿ.ಕೆ. ನಾರಾಯಣರಾಯರ ಕುಟುಂಬ ಶ್ರೀಮತಿ ನಾಚಾರಮ್ಮನವರ ನೆರವಿನಿಂದ ನೆರವೇರಿಸಲಾಯಿತು. ಶ್ರೀಮತಿಯವರು ಶ್ರೀ ವಿಘ್ನೇಶ್ವರ ದೇವರಿಗೆ ಒಂದು ಬೆಳ್ಳಿಯ ಕವಚವನ್ನೂ ಮಾಡಿಸಿಕೊಟ್ಟು ನಿತ್ಯಪೂಜೆಗೆ ಏರ್ಪಾಡುಮಾಡಿರುತ್ತಾರೆ.

ಅನಂತರ ಶ್ರೀರಾಮದೇವಸ್ಥಾನದ ಎಡಭಾಗದಲ್ಲಿ ವಾಗ್ದೇವಿಯನ್ನು ಸ್ಥಾಪಿಸಲು ಮೈಸೂರಿನಲ್ಲಿ ವಾಗ್ದೇವೀವಿಗ್ರಹವನ್ನು ಆರ್ಡರ್‌ಕೊಟ್ಟು ಸಿದ್ಧಗೊಳಿಸಿ ತಾ. 24-2-57ರಂದು ಈ ಪ್ರತಿಷ್ಠಾಪನಾಮಹೋತ್ಸವವನ್ನು ಚೆನ್ನಾಗಿ ನೆರವೇರಿಸಲಾಯಿತು.

**ಭೂದಾನ : 1955**ರಲ್ಲಿ ಶ್ರೀ ಸ್ವಾಮಿಗಳವರ ಪ್ರೇರಣೆಯಂತೆ ಅವರ ಶಿಷ್ಯರಾದ ಶ್ರೀ ಎ. ವೆಂಕೋಬರಾಯರೆಂಬ ಸದ್‌ಗೃಹಸ್ಥರು ಹೊಸಪೇಟೆಯಲ್ಲಿ ಸುಮಾರು ಒಂದು ಎಕರೆಯಷ್ಟು ತರೀಜಮೀನನ್ನು ಹಾಗೂ ಕಾರ್ಯಾಲಯದ ಕಾರ್ಯಕಾರಿ ಸಮಿತಿಯ ಸದಸ್ಯರೂ ಪ್ರಸಿದ್ಧ ವಕೀಲರೂ ಆದ ಶ್ರೀ ಸಂತೇಬಾಚಹಳ್ಳಿ ಸುಬ್ರಾಯರು ತಮ್ಮ ಎಪ್ಪತ್ತನೆಯ ವರ್ಷದ ಭೀಮರಥಶಾಂತಿ ಕಾಲದಲ್ಲಿ ಶ್ರೀರಾಮರ ನೈವೇದ್ಯಕ್ಕಾಗಿ ಎಂಟುಗುಂಟೆ ತರೀ ಜಮೀನನ್ನು ಉದಾರವಾಗಿ ದಾನವಾಗಿಕೊಟ್ಟರು. ಇದನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ದೇವರ ಸೇವೆಗೆ ವಿನಿಯೋಗಿಸುವ ಏರ್ಪಾಡು ಮಾಡಲಾಯಿತು.

ಕಾರ್ಯಾಲಯದ ನೈರುತ್ಯದಿಕ್ಕಿನಲ್ಲಿದ್ದ ಒಂದು ಸೈಟು ಕಾರ್ಯಾಲಯದ ಸೈಟುಗಳಿಗೆ ಹೊಂದಿಕೊಂಡಿದ್ದು ಈವರೆಗೂ ಆಶ್ರಮಕ್ಕೆ ಸೇರದೆ ಇದ್ದು ಮಾಲೀಕರಿಂದ ಕೊಂಡದ್ದರಿಂದ ಕಾರ್ಯಾಲಯದ ಆವರಣವು ಚೌಕವಾದ ಆಕಾರವನ್ನು ಹೊಂದಿ ನಾಲ್ಕುದಿಕ್ಕು ಗಳಲ್ಲಿಯೂ ರಸ್ತೆಯನ್ನು ಹೊಂದಿದಂತಾಯಿತು.

**ಗೋಶಾಲೆ : 1959**ನೆಯ ಜನವರಿ ಮಾಹೆಯಲ್ಲಿ ಶ್ರೀ ಕಿಕ್ಕೇರಿ ಗುಂಡಪ್ಪನವರೆಂಬ ಭಕ್ತರು ಕಾರ್ಯಾಲಯದಲ್ಲಿ ಶ್ರೀರಾಮದೇವರಿಗೆ ಅಭಿಷೇಕ ಹಾಗೂ ನೈವೇದ್ಯಾದಿಗಳಿಗೆ ಮತ್ತು ಶ್ರೀಶ್ರೀಗಳವರ ಸತ್ಕಾರಕ್ಕೆ ಅನುಕೂಲಿಸುವಂತೆ ಒಂದು ಹಸು, ಕರು ಮತ್ತು ಇತರ ಸಲಕರಣೆಗಳನ್ನೂ ದಾನಮಾಡಿದ್ದರು. ಆದ್ದರಿಂದ ಒಂದು ಗೋಶಾಲೆಯನ್ನು ಪ್ರಾರಂಭಿಸಲಾಯಿತು.

**ಅತಿಥಿಗಳು :** ಕಾರ್ಯಾಲಯದ ಆಹ್ವಾನದಮೇಲೆ ಅಹಮ್ಮದಾಬಾದ್ ಪ್ರಾಂತ್ಯದ ವಲ್ಸಾದ್ ವೇದಾಂತ ಆಶ್ರಮದಿಂದ ಶ್ರೀಸ್ವಾಮಿ ಮಾಧವತೀರ್ಥರು ತಮ್ಮ

ಶಿಷ್ಯರುಗಳೊಡನೆ ತಾ. 21.1.57ರಂದು ಕಾರ್ಯಾಲಯಕ್ಕೆ ದಯಮಾಡಿಸಿ ಮೂರುದಿನಗಳು ತಂಗಿದ್ದರು. ಶ್ರೀಸ್ವಾಮಿಗಳು ಶ್ರೀಮದ್ಭಾಗವತ ಕಥೆಗಳನ್ನು ತೆಗೆದುಕೊಂಡು ಅಧ್ಯಾತ್ಮಪರವಾಗಿ ಸಮನ್ವಯಗೊಳಿಸಿ ಇಂಗ್ಲಿಷ್‌ನಲ್ಲಿ ಉಪನ್ಯಾಸ ಗಳನ್ನು ಮಾಡಿದರು. ಶ್ರೋತೃಗಳು ಕೇಳಿ ಸಂತೋಷಪಟ್ಟರು.

**ಕಟ್ಟಡ :** 1956ರಲ್ಲಿ ಅಡಿಗೆ ಮನೆಯನ್ನೂ ಎರಡು ಶೌಚಗೃಹಗಳನ್ನೂ ನಿರ್ಮಿಸಲಾಯಿತು. ಭಜನಮಂದಿರದ ಕಟ್ಟಡಕ್ಕೆ ಎಸ್ಟಿಮೇಟು ಪ್ಲಾನುಗಳನ್ನು ತಯಾರಿಸಿ ಗುದ್ದಲಿಪೂಜೆಯನ್ನು 7-10-56ರಂದು ನೆರವೇರಿಸಲಾಯಿತು. ಆರ್.ಸಿ.ಸಿ. ರೂಫಿಂಗ್ ಕೆಲಸವು 1960ನೆಯ ಡಿಸೆಂಬರ್ ವೇಳೆಗೆ ಪೂರೈಸಿ ಗಿಲಾವು ಮುಂತಾದ ಚಿಲ್ಲರೆ ಕೆಲಸಗಳು ಮಾತ್ರ ಉಳಿದವು. ಹಣದ ಅಭಾವದಿಂದ ಈ ಕೆಲಸ ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ದಿವಂಗತ ಸಂತೇಬಾಚಳ್ಳಿ ಸುಬ್ರಾಯರ ಮಕ್ಕಳಾದ ಡಾ. ಸದಾಶಿವರಾವ್ ಮತ್ತು ಸಹೋದರರು ಶ್ರೀರಾಮರ ಗರ್ಭಗುಡಿ ಮೇಲೆ ಗೋಪುರವನ್ನು ನಿರ್ಮಿಸಲು ಪ್ರಪ್ರಥಮವಾಗಿ ಐದುನೂರು ರೂಪಾಯಿ ಗಳನ್ನು ಸಹಾಯದ್ರವ್ಯವಾಗಿ ಅರ್ಪಿಸಿದ್ದನ್ನು ಗೋಪುರದ ನಿರ್ಮಾಣಕ್ಕಾಗಿಯೇ ಕಾದಿರಿಸಲಾಯಿತು.

**ಮುದ್ರಣಾಲಯ :** ಡೆಮಿಸೈಜಿನ Chandler & Price ಎಂಬ ಹೆಸರಿನ ಹೊಸ ಮುದ್ರಣಯಂತ್ರವನ್ನು ಆರುಸಾವಿರ ರೂಪಾಯಿಗಳಿಗೆ ಕೊಳ್ಳಲಾಯಿತು. ಸಂಸ್ಕೃತ ವಿಭಾಗಕ್ಕೆ ಒಬ್ಬ ಹೊಸ ಕಂಪಾಜಿಟರನ್ನು ನೇಮಿಸಲಾಯಿತು.

**ಮುಕ್ತಾಯ :** ಅಂತೂ 1960ನೆಯ ವರ್ಷವು ಪೂರೈಸುವ ವೇಳೆಗೆ ಕಾರ್ಯಾಲಯವು ಆರ್ಥಿಕವಾಗಿಯೂ ಉಳಿದ ವಿಷಯಗಳಲ್ಲೂ ಪ್ರಗತಿ-ಪರವಾಗಿಯೇ ಹೆಜ್ಜೆಯನ್ನು ಹಾಕಿತ್ತು. ಕೆಲವು ಅನಿವಾರ್ಯ ಕೊರತೆಗಳು ತೋರಿ ಕೊಂಡಿದ್ದವಾದರೂ ಬುದ್ಧಿವಂತಿಕೆಯಿಂದ ಅವುಗಳನ್ನು ಪರಿಹರಿಸಿ ಪ್ರಗತಿಗೆ ಅಡ್ಡಿಯಾಗದಂತೆ ಏರ್ಪಾಡುಮಾಡಲಾಯಿತು. ಮುಖ್ಯವಾಗಿ ಎಲ್ಲಾ ಸಂದರ್ಭ-ಗಳಲ್ಲೂ ಶ್ರೀಶ್ರೀಗಳವರ ಅಮೋಘವಾದ ಸೂಚನೆಗಳು ಅವರ ಶ್ರಮದಾನ, ತ್ಯಾಗ-ಇವುಗಳ ಫಲವಾಗಿ ಸಂಸ್ಥೆಯು ದೃಢವಾಗಿ ತನ್ನ ಕಾಲುಗಳ ಮೇಲೆ ತಾನು ನಿಲ್ಲುವಂತಾದರೂ ಅದನ್ನು ಪೋಷಿಸಿಬೆಳೆಸುವ ಹೊಣೆಗಾರಿಕೆಯು ಶ್ರೀಶ್ರೀಗಳವರಿಗೆ ಇದ್ದೇ ಇತ್ತು ಎಂದು ಹೇಳಬಹುದಾಗಿದೆ.

# 3. ವಿಶೇಷಾಭಿವೃದ್ಧಿಯ ಮಾರ್ಗದಲ್ಲಿ
## (1961-67)

**ಶ್ರೀಶ್ರೀಗಳವರ ಪ್ರವಾಸ : 1961**ನೆಯ ಜನವರಿ ಮಾಹೆಯಲ್ಲಿ ಶ್ರೀಶ್ರೀಗಳವರು ದಾವಣಗೆರೆಯಲ್ಲಿ ಒಂದು ತಿಂಗಳಕಾಲ ಶ್ರೀಶಿವಾನಂದ ಆಧ್ಯಾತ್ಮಮಂದಿರದಲ್ಲಿ ಉಪನ್ಯಾಸಗಳನ್ನು ನೆರವೇರಿಸಿದರು. ದಾವಣಗೆರೆಯಲ್ಲಿದ್ದಾಗ ನೂಲೇನೂರು, ಮಲ್ಲಾಡಿಹಳ್ಳಿ, ಕೊಮಾರನಹಳ್ಳಿ, ರಾಣೆಬೆನ್ನೂರುಗಳಿಗೂ ಭೇಟಿ ಕೊಟ್ಟಿದ್ದರು.

ಶ್ರೀಶ್ರೀಗಳವರು 1961ನೆಯ ಮೇನಲ್ಲಿ ತಲಕಾವೇರಿಕ್ಷೇತ್ರದ ಕಾವೇರಿ ಮೂಲವನ್ನು ಸಂದರ್ಶನಮಾಡಿಕೊಂಡು ಬಂದರು. ಅನಂತರ ತಾ. 17.5.61 ರಂದು ಹೊಳೆನರಸೀಪುರದಿಂದ ಪ್ರಯಾಣ ಬೆಳೆಸಿ ಗುಂತಕಲ್ ಮಾರ್ಗವಾಗಿ ಶ್ರೀಶೈಲಕ್ಷೇತ್ರವನ್ನು ಸಂದರ್ಶಿಸಿದರು. ಮುಂದೆ ಮದ್ರಾಸ್ ಮಾರ್ಗವಾಗಿ ಕಾರೈಕುಡಿ ಎಂಬಲ್ಲಿಗೆ ಬಂದು ಆಗ್ಗೆ ಅಲ್ಲಿ ಬಿಡಾರಮಾಡಿದ್ದ ಶ್ರೀ ಕಾಂಚಿಕಾಮಕೋಟಿ ಶ್ರೀಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ದರ್ಶನವನ್ನು ಪಡೆದರು. ಆ ಸಂದರ್ಭದಲ್ಲಿ ಜಗದ್ಗುರುಗಳವರು ಶ್ರೀಶ್ರೀಗಳವರ ಜೊತೆಯಲ್ಲಿದ್ದ ವೇ॥ ಎಸ್. ವಿಠಲಶಾಸ್ತ್ರಿಗಳನ್ನು ಕುರಿತು "ಶಾಸ್ತ್ರಿಗಳೆ, 'ಆ ಸುಪ್ತೇರಾಮೃತೇಃ ಕಾಲಂ ನಯೇದ್ ವೇದಾನ್ತಚಿನ್ತಯಾ' ಎಂಬ ಅಭಿಯುಕ್ತೋಕ್ತಿಯ ಅಭಿಪ್ರಾಯವೇನು ?" ಎಂದು ಕೇಳಿದರು. ಅದಕ್ಕೆ ಶಾಸ್ತ್ರಿಗಳು "ಮನುಷ್ಯನು ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಮತ್ತು ಹುಟ್ಟಿದಾಗಿನಿಂದ ಸಾಯುವವರೆಗೂ ವೇದಾಂತಚಿಂತನೆಯಲ್ಲಿಯೇ ಕಾಲವನ್ನು ಕಳೆಯಬೇಕು" ಎಂದರ್ಥ ಎಂತ ವಿಜ್ಞಾಪಿಸಿಕೊಂಡರು. ಕೂಡಲೆ ಜಗದ್ಗುರುಗಳು 'ಆ ವಾಕ್ಯಕ್ಕೆ ಜೀವಂತಉದಾಹರಣೆ ಇದೊ, ಈ ನಿಮ್ಮ ಸ್ವಾಮಿಗಳು' ಎಂದು ನಮ್ಮ ಸ್ವಾಮಿಗಳ ಕಡೆಗೆ ತೋರಿಸಿದರಂತೆ. ಅನಂತರ ಶ್ರೀಗಳವರ ಯೋಗಕ್ಷೇಮವನ್ನು ವಿಚಾರಿಸಿ ಅವರಿಗೆ ಬೇಕಾದ ಸೌಕರ್ಯಗಳೆಲ್ಲವನ್ನೂ ಒದಗಿಸಿಕೊಡುವಂತೆ ಮಠಾಧಿಕಾರಿಗಳಿಗೆ ಅಪ್ಪಣೆಮಾಡಿದರು. ನಾಲ್ಕುದಿನಗಳ ಕಾಲ ಶ್ರೀಗಳವರನ್ನು ನಿಲ್ಲಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಶ್ರೀಗಳವರು ಭಾಷ್ಯಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನಗಳಿಗೂ ಇರುವ ವೈಲಕ್ಷಣ್ಯವನ್ನು ಕುರಿತು ವಿದ್ವಾಂಸರಮುಂದೆ ಸಾಲೋಚನೆಗಾಗಿ ಹೊರಡಿಸಿದ್ದ ಪ್ರಶ್ನಾವಳಿಯೊಂದನ್ನು ಅರ್ಪಿಸಿ ಇದನ್ನು ತಮ್ಮ ಪಂಡಿತ ಶಿಷ್ಯವೃಂದದಲ್ಲಿ ಪ್ರಸ್ತಾಪಿಸಿ ಉತ್ತರಗಳನ್ನು ಬರೆಯುವಂತೆ ಅಪ್ಪಣೆಮಾಡಬೇಕೆಂದು ಕೇಳಿಕೊಂಡರು. ಜಗದ್ಗುರುಗಳು ಸಾವಧಾನವಾಗಿ ಎಲ್ಲಾ ವಿಚಾರಗಳನ್ನೂ ಕೇಳಿ ವಿದ್ವಾಂಸರುಗಳ ವಿಳಾಸಗಳನ್ನು ಕೊಡಿಸಿದ್ದಲ್ಲದೆ ಇಂಥ ವಿಚಾರಗಳಲ್ಲಿ ವಿದ್ವದ್ಗೋಷ್ಠಿಗಳನ್ನು

ನಡೆಯಿಸಿ ತತ್ತ್ವನಿರ್ಣಯಗಳನ್ನು ಮಾಡಬೇಕಾದದ್ದು ಅವಶ್ಯವೆಂದೂ ಅಂತಹ ಏರ್ಪಾಡನ್ನು ತಾವು ಸ್ವಾಗತಿಸುವದಾಗಿಯೂ ಸೂಚಿಸಿದರು. ಜಗದ್ಗುರುಗಳ ಆಜ್ಞೆಯಂತೆ 40-50 ಜನ ಪಂಡಿತರುಗಳಿಗೆ ಮೇಲ್ಕಂಡ ಪ್ರಕಟನೆಯನ್ನು ಕಳುಹಿಸಿ ಉತ್ತರವನ್ನು ಬರೆಯಬೇಕೆಂದು ಪ್ರಾರ್ಥಿಸಲಾಯಿತು. ಆದರೆ ಇದಕ್ಕೆ ಸರಿಯಾದ ಪ್ರತಿಫಲವು ಮಾತ್ರ ದೊರೆಯಲಿಲ್ಲ. ಶ್ರೀಶ್ರೀಗಳವರು ಹೊರಡುವಾಗ ಜಗದ್ಗುರುಗಳು ಎರಡು ನೂರು ರೂಪಾಯಿಗಳ ಸಹಾಯದ್ರವ್ಯವನ್ನೂ ಶ್ರೀಶ್ರೀಗಳವರಿಗೆ ಒಂದು ವ್ಯಾಘ್ರಾಜಿನವನ್ನೂ ದಯಪಾಲಿಸಿದರು. ಶ್ರೀಗಳು ರೇಷ್ಮೆಜರತಾರಿ ಬಟ್ಟೆಗಳನ್ನು ಉಪಯೋಗಿಸು ವವರಲ್ಲವೆಂಬುದನ್ನು ತಿಳಿದೇ ಜಗದ್ಗುರುಗಳು ಬೆಲೆಬಾಳುವ ಒಂದು ವ್ಯಾಘ್ರಾಜಿನವನ್ನು ಕೊಟ್ಟದ್ದು ಬಹಳ ಸಮಂಜಸವಾಗಿತ್ತು. ಶ್ರೀಶ್ರೀಗಳವರು ಕೊಯಮತ್ತೂರು, ಚಾಮರಾಜನಗರ ಮಾರ್ಗವಾಗಿ ಹಿಂದಿರುಗಿದರು.

ತಾ. 2.12.61 ರಿಂದ ಒಂದು ವಾರದಕಾಲ ಶ್ರೀಗಳವರು ಬೆಂಗಳೂರಿನ ಪ್ರಸಿದ್ಧ ಆರ್ಕಿಟೆಕ್ಟ್ ಮತ್ತು ಇಂಜನಿಯರಾದ ಶ್ರೀ ಎ. ರಾಮಮೂರ್ತಿಯವರೊಡನೆ ಮಂಗಳೂರಿನ ಬಳಿಯಿರುವ ರಾಮನಗರದ ಶ್ರೀರಾಮದಾಸಸ್ವಾಮಿಗಳ ಆಶ್ರಮಕ್ಕೆ (ಕನ್ಹಂಗಾಡ್) ಬಂದಾಗ ಶ್ರೀರಾಮದಾಸಸ್ವಾಮಿಗಳು ಶ್ರೀಗಳವರನ್ನು ಗೌರವದಿಂದ ಬರಮಾಡಿಕೊಂಡು ಬಹಳ ಪ್ರೇಮಪೂರ್ವಕವಾಗಿ ಉಪಚರಿಸಿ ಸತ್ಕರಿಸಿದರು. ಶ್ರೀಗಳವರು ಶ್ರೀರಾಮದಾಸರವರ ಶಾಂತಚಿತ್ತತೆ, ಸಮತೆ, ಸರ್ವಭೂತಪ್ರೇಮಗಳನ್ನೂ ಆಶ್ರಮದ ಶಿಸ್ತು, ಶುಚಿತ್ವವನ್ನೂ ಮೆಚ್ಚಿ ಬಹಳವಾಗಿ ಕೊಂಡಾಡಿದರು.

1963ನೆಯ ನವೆಂಬರ್‌ನಲ್ಲಿ (ಅಂದರೆ 83ನೆಯ ವಯಸ್ಸಿನಲ್ಲಿ) ಶ್ರೀಶ್ರೀಗಳವರು ಮಿತಪರಿವಾರದೊಡನೆ ಸುಮಾರು 40 ದಿನಗಳಕಾಲ ಆಂಧ್ರಪ್ರದೇಶದಲ್ಲಿ ಪ್ರವಾಸಮಾಡಿ ಮದ್ರಾಸು, ವಿಜಯವಾಡ, ಗುಂಟೂರು, ಪೆನುಗೊಂಡ, ಪೀಠಾಪುರ, ವಿಶಾಖಪಟ್ಟಣ, ವಿಜಯನಗರ, ಕಾಕಿನಾಡ, ಅನಕಾಪಲ್ಲಿ ಮುಂತಾದ ಸ್ಥಳಗಳಿಗೆ ಭೇಟಿಕೊಟ್ಟಿದ್ದರು. ಜೊತೆಯಲ್ಲಿ ಶ್ರೀ ದೇವರಾಯಕುಲಕರ್ಣಿಯವರೂ ಇದ್ದರು. ಈ ಪ್ರವಾಸದ ವಿಸ್ತಾರವಾದ ವಾರ್ತೆಯನ್ನು ಶ್ರೀ ದೇವರಾಯಕುಲಕರ್ಣಿಯವರು ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಅಧ್ಯಾತ್ಮಪ್ರಕಾಶಪತ್ರಿಕೆಯ 1964ನೆಯ ಜನವರಿಯಿಂದ ಡಿಸೆಂಬರ್‌ವರೆಗಿನ ಸಂಚಿಕೆಗಳಲ್ಲಿ ವರ್ಣಿಸಿರುತ್ತಾರೆ. ಶ್ರೀಶ್ರೀಗಳವರು ಹೋದೆಡೆಯಲ್ಲೆಲ್ಲಾ ಸ್ವಾಗತಗಳೂ ಪೂಜಾದಿಗಳೂ ಗುರುಗಳಿಂದ ಉಪದೇಶಾದಿಗಳೂ ನಡೆದವು. ವಿಶೇಷವಾಗಿ ಸ್ಮರಿಸಬೇಕಾದ ಸ್ಥಳವೆಂದರೆ ವಿಜಯವಾಡ. ಈ ಊರು ಸುಪ್ರಸಿದ್ಧ ವಿದ್ವಾಂಸರುಗಳಿಂದ ತುಂಬಿದ್ದು ವಿದ್ಯಾಸ್ಥಾನವಾಗಿದೆ. ಇಲ್ಲಿ ಶ್ರೀಶ್ರೀಗಳವರಿಗೂ ಉಳಿದ ಪಂಡಿತರಿಗೂ "ಮೂಲಾವಿದ್ಯಾವಾದ"ದ

ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಚರ್ಚೆಗಳು ನಡೆದವು. ಶ್ರೀಗಳು ಸಾವಧಾನವಾಗಿ "ಪಂಡಿತರುಗಳು ಶಂಕರಭಾಷ್ಯ ಮೂಲಗ್ರಂಥವನ್ನೂ ಭಾಮತ್ಯಾದಿ ವ್ಯಾಖ್ಯಾನಗಳನ್ನೂ ಪ್ರತ್ಯೇಕವಾಗಿ ಓದಿನೋಡಿ ಪ್ರಸ್ಥಾನಭೇದ-ವಿರುವದು ನಿಜವೆ ?"- ಎಂಬುದನ್ನು ಪರಿಶೀಲಿಸಬೇಕು ಮತ್ತು ಪೂರ್ವಾ-ಗ್ರಹವಿಲ್ಲದೆ ನಿಷ್ಪಕ್ಷಪಾತವಾಗಿ ತತ್ತ್ವನಿರ್ಧಾರಣಾ ದೃಷ್ಟಿಯಿಂದಲೇ ವಿಚಾರ ಮಾಡಬೇಕೆಂದು ತಿಳಿಸಿದರು. ಆದರೆ ಪಂಡಿತರುಗಳ ಹೃದಯವು ಇಂಥ ವಿಚಾರ ಸರಣಿಗೆ ಇನ್ನೂ ಪಕ್ವವಾಗಿರಲಿಲ್ಲವಾಗಿ ಚರ್ಚೆಯಲ್ಲಿ ಮಾತ್ರವೇ ಈ ಪ್ರಸಂಗವು ಮುಕ್ತಾಯವಾಯಿತು. ಶ್ರೀಗಳವರಿಗೆ ಕೊಂಚಕಾಲ ಅದೇ ಊರಿನಲ್ಲಿ ನಿಂತು ಪಂಡಿತರುಗಳನ್ನು ಮನವೊಲಿಸುವಷ್ಟು ಕಾಲ ವ್ಯವಧಾನವೂ ಇರಲಿಲ್ಲವಾದ್ದರಿಂದ ಈ ಭೇಟಿಯಿಂದ ನಿರೀಕ್ಷಿಸಿದಷ್ಟು ಪ್ರಯೋಜನವಾಗಲಿಲ್ಲ. ಆದರೂ ಆ ಊರಿನ ಸುಪ್ರ ಸಿದ್ಧವಿದ್ವಾಂಸರಾದ ವೇ. ಮುದಿಗೊಂಡ ವೆಂಕಟರಾಮಾಶಾಸ್ತ್ರಿಗಳೆಂಬವರ ಪರಿ ಚಯವೂ ಅವರ ಮೂಲಕ ಅನೇಕ ವಿದ್ವಾಂಸರುಗಳ ಪರಿಚಯಲಾಭವೂ ಶ್ರೀಗಳ ವರಿಗೆ ದೊರೆಯಿತು. ಆ ಊರಿನ ಪಂಡಿತರುಗಳಿಗೆ ಶಾಂಕರಪ್ರಸ್ಥಾನಕ್ಕೂ ವ್ಯಾಖ್ಯಾನ ಪ್ರಸ್ಥಾನಕ್ಕೂ ವೈಲಕ್ಷಣ್ಯವಿದೆಯೆಂಬ ಹೊಸ ವಿಚಾರಸರಣಿಯೊಂದು ತಿಳಿದಂತೆ ಆಯಿತು. ಮುಂದೆ ಅವರುಗಳು ಶ್ರೀಗಳವರು ಸಂಸ್ಕೃತದಲ್ಲಿ ರಚಿಸಿರುವ ಗ್ರಂಥಗಳನ್ನು ನೋಡಬೇಕೆಂಬ ಕುತೂಹಲವುಳ್ಳವರಾದರು. ಅಂತೂ ಅಲ್ಪಕಾಲದ ವಿಜಯವಾಡದ ಸಂದರ್ಶನದಿಂದ ಸಾಕಷ್ಟು ಸುವಿಚಾರ ಪ್ರಚಾರಲಾಭವಾಯಿತೆನ್ನಬಹುದು.

ಅನಂತರ ಶ್ರೀಗಳವರು ತಾ|| 12-1-64ರಿಂದ ನಾಲ್ಕು ದಿನಗಳ ಕಾಲ ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ ಮುಂತಾದ ಸ್ಥಳಗಳಲ್ಲೂ ಸಂಚಾರ ಮಾಡಿದರು.

ಶ್ರೀಶ್ರೀಗಳವರು ತಾ. 10-11-65 ರಿಂದ 15 ದಿನಗಳ ಕಾಲ ಬೆಂಗಳೂರು, ಮದ್ರಾಸ್ ಪ್ರಾಂತ್ಯದ ತಪೋವನಂ ಕ್ಷೇತ್ರ, ಚಿದಂಬರ, ಕುಂಭಕೋಣ, ತಂಜಾ ವೂರು, ಮಹಾದಾನಪುರ, ಮಧುರೆ, ಕನ್ಯಾಕುಮಾರಿ, ತ್ರಿವೇಂಡ್ರಂ, ಕೊಟ್ಟಾಯಂ, ಕೊಯಮತ್ತೂರು, ಮೈಸೂರು-ಪ್ರಾಂತಗಳಲ್ಲಿ ಸಂಚಾರ ಮಾಡಿದರು. ಈ ಪ್ರವಾಸಕ್ಕೆ ಪೂರ್ತಿಯಾಗಿ ಬೆಂಗಳೂರಿನ ಒಬ್ಬ ಭಕ್ತರು ಒಂದು ಕಾರನ್ನು ಶ್ರೀಗಳವರಿಗೆ ಏರ್ಪಡಿಸಿ ದ್ದರು. ವೇ|| ಬ್ರ|| ಶ್ರೀ ಎಸ್. ವಿಠಲಶಾಸ್ತ್ರಿಗಳೂ ಜೊತೆಯಲ್ಲಿದ್ದರು. (ವಿವರ : 1965 ಡಿಸೆಂಬರ್-1966 ಮಾರ್ಚ್ ಅ.ಪ್ರ. ಪತ್ರಿಕೆಗಳು).

ಶ್ರೀಶ್ರೀಗಳವರ ವಿಶ್ವಭಾರತಪ್ರವಾಸ : ಶ್ರೀಶ್ರೀಗಳವರು ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದ 'ಪಂಚಪಾದಿಕಾಪ್ರಸ್ಥಾನಮ್' ಎಂಬ

ಸಂಸ್ಕೃತಗ್ರಂಥವನ್ನು ವಿದ್ವಾಂಸರುಗಳ ಮುಂದಿಟ್ಟು ಅಭಿಪ್ರಾಯಗಳನ್ನು ಸಂಗ್ರಹಿಸ ಬೇಕೆಂಬ ಉದ್ದೇಶವುಳ್ಳವರಾಗಿದ್ದರು. ವಿಶೇಷವಾಗಿ ಈ ಗ್ರಂಥದಲ್ಲಿ 'ಪಂಚಪಾದಿಕೆ' ಯೆಂಬ ವ್ಯಾಖ್ಯಾನವನ್ನು ಶಂಕರಾಚಾರ್ಯರ ಭಾಷ್ಯಾಭಿಪ್ರಾಯಗಳಿಗೆ ವಿರುದ್ಧವಾಗಿ ಯಾರೋ ಬರೆದು ಪದ್ಮಪಾದರ ಹೆಸರಿನಲ್ಲಿ ಪ್ರಚಾರಮಾಡಿರಬೇಕು, ಅಥವಾ ಈ ಗ್ರಂಥವೇ ಪ್ರಮಾಣವೆಂದೂ ಇದನ್ನು ಪದ್ಮಪಾದರೇ ಬರೆದರೆಂದೂ ಸಾಂಪ್ರದಾಯಿಕ ವಾದ ಕಥೆಗಳ ಆಧಾರದಿಂದ ನಂಬುವದಾದರೆ ಪದ್ಮಪಾದನು ಆಚಾರ್ಯರ ಸಾಕ್ಷಾತ್ ಶಿಷ್ಯನಂತೂ ಆಗಿರಲಾರನು ; ಹಾಗಿದ್ದರೆ ಅವನು ಶಂಕರಾಚಾರ್ಯರಿಗೆ ವಿರುದ್ಧವಾಗಿ ಬರೆಯುತ್ತಿರಲಿಲ್ಲ ಎಂಬ ಅಭಿಪ್ರಾಯ ಪ್ರಕಟವಾಗಿತ್ತು. ಆದ್ದರಿಂದ ಈ ಶೋಧನೆ ಯನ್ನು ಪಂಡಿತರುಗಳ ಅವಗಾಹನೆಗೆ ತಂದು ಭಾಷ್ಯಪ್ರಸ್ಥಾನಕ್ಕೂ ವ್ಯಾಖ್ಯಾನಪ್ರಸ್ಥಾನ ಗಳಿಗೂ ವೈಲಕ್ಷಣ್ಯವಿರುವದರಿಂದ ಸಂಸ್ಕೃತಕಾಲೇಜುಗಳಲ್ಲಿಯೂ ಯೂನಿವರ್ಸಿಟಿ ಗಳಲ್ಲಿಯೂ ಶಾಂಕರವೇದಾಂತವನ್ನು ಬೋಧಿಸುವಾಗ ವಿದ್ಯಾರ್ಥಿಗಳಿಗೆ ಭಾಷ್ಯ ಪ್ರಸ್ಥಾನವನ್ನೂ ವ್ಯಾಖ್ಯಾನಪ್ರಸ್ಥಾನವನ್ನೂ ಬೇರೆಬೇರೆಯಾಗಿಯೇ ಬೋಧಿಸುವ ವ್ಯವಸ್ಥೆಮಾಡುವಂತೆ ಅಲ್ಲಲ್ಲಿ ಪ್ರೊಫೆಸರುಗಳನ್ನೂ ಪಂಡಿತರುಗಳನ್ನೂ ಭೇಟಿಮಾಡಿ ವಿಷಯವನ್ನು ತಿಳಿಸತಕ್ಕದ್ದು - ಹೀಗೆಯೇ ಶುದ್ಧಶಾಂಕರವೇದಾಂತವನ್ನೇ ಹೇಳುತ್ತಾ, ಬರೆಯುತ್ತಾ, ಪ್ರಚಾರಮಾಡುತ್ತಾ ದೇಹಪಾತವಾದರೂ ಆಗಲಿ, ಶ್ರೀಕಾಶಿಕ್ಷೇತ್ರದ ವರೆಗೂ ಕೊನೆಯಬಾರಿಗೆ ಹೋಗಿಬರಬೇಕು ಎಂದು ಶ್ರೀಗಳು ದೃಢಸಂಕಲ್ಪಮಾಡಿ ಸೀಮೋಲ್ಲಂಘನದ ದಿನ ಹಾಸನದ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ವೇ|| ಬ್ರ|| ಎಸ್. ವಿಠಲಶಾಸ್ತ್ರಿಗಳೂ ಶ್ರೀಮತಿ ಮತ್ತೂರು ಲಕ್ಷ್ಮೀ ದೇವಮ್ಮನವರೂ ಜೊತೆಯಲ್ಲಿ ಹೊರಟರು. ಹೊಳೆನರಸೀಪುರದಿಂದ ಹೊರಡು ವಾಗ ಮಹಾಜನರೆಲ್ಲರೂ ಗುರುಗಳು ಇಂಥ ವಾರ್ಧಕ್ಯದಲ್ಲಿ (ಸುಮಾರು 86 ವರ್ಷ) ಉತ್ತರಭಾರತದವರೆಗೂ ಹೋಗಿಬರುವದು ಸಾಧ್ಯವೆ ! ರೈಲುಪ್ರಯಾಣವು ಇವರಿಗೆ ಕಷ್ಟಕರವಾದೀತಲ್ಲವೆ ? ಹೇಗೋ ದೊಡ್ಡವರು ! ಸತ್ಯಸಂಕಲ್ಪವುಳ್ಳವರು, ಈ ಪ್ರವಾಸ ವನ್ನು ಸುಖವಾಗಿ ಪೂರೈಸಿಕೊಂಡು ಶ್ರೀಗಳು ಹಿಂದಿರುಗುವಂತೆ ದೇವರು ಅನುಗ್ರಹಿ ಸಲಿ ! ಎಂದು ಪ್ರಾರ್ಥಿಸಿಕೊಂಡರು. ಅನಂತರ 29-9-66ರಂದು ಸಂಜೆ ಹಾಸನ ತಲುಪಿ ಅಲ್ಲಿ ಮೂರು ದಿನಗಳಿದ್ದು ಮುಂದೆ ಬೆಂಗಳೂರಿಗೆ ದಯಮಾಡಿಸಿದರು.

ಬೆಂಗಳೂರು ನಗರದಲ್ಲಿ ಶ್ರೀ ಅನಂತಸ್ವಾಮಿ ಆಶ್ರಮದಲ್ಲಿ ಭಕ್ತರ ಅಪೇಕ್ಷೆ ಯಂತೆ ಒಂದು ವಾರಕಾಲ ತಂಗಿದ್ದು ವೇದಾಂತೋಪದೇಶಗಳನ್ನು ಅನುಗ್ರಹಿಸಿದರು. ಆ ಸಂದರ್ಭದಲ್ಲಿ ಬೆಂಗಳೂರಿನ ಉದಾರಬುದ್ಧಿಯ ಭಕ್ತಮಹಾಶಯರೊಬ್ಬರು ಶ್ರೀಶ್ರೀಗಳವರಿಗೆ ಇಳಿವಯಸ್ಸಿನಲ್ಲಿ ಬೇರೆಬೇರೆಯ ಸ್ಥಳಗಳಲ್ಲಿ ಹತ್ತುವದು,

ಇಳಿಯುವದು ಮುಂತಾದ ಕಾರಣದಿಂದ ರೈಲು ಪ್ರಯಾಣವು ಬಹಳ ಕಷ್ಟಕರವೆಂದು ಭಾವಿಸಿ ಪ್ರವಾಸಕ್ಕೆಲ್ಲ ಅನುಕೂಲವಾಗುವಂತೆ ಮೂರು ತಿಂಗಳ ಅವಧಿಗೆ ಒಂದು ಕಾರನ್ನು ಗೊತ್ತುಮಾಡಿಕೊಟ್ಟರು. ದೈವಾನುಗ್ರಹದಿಂದ ಒದಗಿದ ಈ ಸೌಕರ್ಯವನ್ನು ಉಪಯೋಗಿಸಿಕೊಂಡು ತಾ. **12-10-66**ರಂದು ಬೆಂಗಳೂರಿನಿಂದ ಶ್ರೀಶ್ರೀಗಳವರು ಹೊರಟರು. ಆಗ್ಗೆ ಶ್ರೀ ನಿಖಿಲಾನಂದಗುಪ್ತ ದಂಪತಿಗಳು ಇಡೀ ಪ್ರವಾಸ ಪೂರ್ತಿ ಶ್ರೀಗಳೊಡನೆ ಇರಲು ಒಪ್ಪಿ ಹೊರಟರು. ಗುರುಗಳು ಅರಸೀಕೆರೆ, ತರೀಕೆರೆ, ಶಿವಮೊಗ್ಗ, ಸಾಗರ, ಶಿರಸಿ, ಗೋಕರ್ಣ, ಹುಬ್ಬಳ್ಳಿ, ಧಾರವಾಡ, ಗದಗ್, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ, ನರಸೋಬವಾಡಿ, ಮಿರಜ್, ಪೂನಾ ಮಾರ್ಗವಾಗಿ ಬೊಂಬಾಯಿಗೆ ದಯಮಾಡಿಸಿದರು. ಹುಬ್ಬಳ್ಳಿಯಿಂದ ಬೊಂಬಾಯಿಯವರೆಗಿನ ಪ್ರವಾಸದಲ್ಲಿ ಶ್ರೀ ದೇವರಾಯರೂ ಶ್ರೀಗಳೊಡನೆ ಇದ್ದರು. ಅಲ್ಲಿಂದ ನಾಸಿಕಮಾರ್ಗವಾಗಿ ಭೂಪಾಲ್, ಮುಂದೆ ಶ್ರೀಕಾಶಿಕ್ಷೇತ್ರವನ್ನು ತಲುಪಿ ಅಲ್ಲಿ ಒಂದು ವಾರಕಾಲ ತಂಗಿದ್ದರು. ಕಲ್ಕತ್ತ, ಆಂಧ್ರಪ್ರದೇಶದ ವಿಜಯನಗರ, ವಿಶಾಖಪಟ್ಟಣ, ಅನಕಾಪಲ್ಲಿ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ಕೋಲಾರಮಾರ್ಗವಾಗಿ ಬೆಂಗಳೂರಿಗೆ ಬಂದು ತಾ. **12-1-67**ನೆಯ ಗುರುವಾರ (**12-10-66**ರಿಂದ **12-1-67** - **3** ತಿಂಗಳು) ಹೊಳೆನರಸೀಪುರಕ್ಕೆ ದಯಮಾಡಿಸಿದರು. ಊರಿನ ಮಹಾಜನರು ಆ ದಿನ ಗುರುಗಳನ್ನು ಭಕ್ತಿಶ್ರದ್ಧೆಗಳಿಂದ ಬರಮಾಡಿಕೊಂಡು ಉತ್ಸವದ ಮೂಲಕ ಕಾರ್ಯಾಲಯಕ್ಕೆ ಕರೆದುಕೊಂಡು ಬಂದರು. ಮಾರನೆಯದಿನ ಶ್ರೀದಿಗ್ವಿಜಯರಾಮರಿಗೆ ಗಂಗಾಭಿಷೇಕಮಹಾಪೂಜಾದಿಗಳನ್ನು ಗಂಗಾ ಸಮಾರಾಧನೆಯನ್ನೂ ನೆರವೇರಿಸಲಾಯಿತು.

ವಿಶೇಷವಾಗಿ ಈ ಪ್ರವಾಸದಲ್ಲಿ ಶ್ರೀಶ್ರೀಗಳವರು ಪೂನಾ, ಬೊಂಬಾಯಿ, ಕಾಶೀ, ಕಲ್ಕತ್ತನಗರಗಳಲ್ಲಿ ಕೆಲವು ವಿದ್ವಾಂಸರುಗಳನ್ನೂ ಪ್ರೊಫೆಸರುಗಳನ್ನೂ ಭೇಟಿ-ಮಾಡಿ 'ಪಂಚಪಾದಿಕಾ' ಗ್ರಂಥದ ವಿಚಾರವಾಗಿಯೂ ಭಾಷ್ಯವ್ಯಾಖ್ಯಾನಪ್ರಸ್ಥಾನಗಳ ವೈಲಕ್ಷಣ್ಯವಿಚಾರವಾಗಿಯೂ ಚರ್ಚೆಗಳನ್ನು ನಡೆಯಿಸಿದರು. ಕೆಲವರು ಈ ವೈಲಕ್ಷಣ್ಯವನ್ನು ಕುರಿತು ಇನ್ನೂ ವಿಮರ್ಶಿಸಬೇಕಾಗಿದೆ ಎಂದರು. ಕೆಲವರು ಈ ಅಭಿಪ್ರಾಯ ಸರಿಯಲ್ಲವೆಂದೇ ಹಠದಿಂದ ವಾದಿಸಿದರು. ಹೇಗೇ ಇರಲಿ ಅದ್ವೈತ ವೇದಾಂತವನ್ನು ಆದರಲ್ಲೂ ಶಂಕರಭಾಷ್ಯವನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿರುವ ಪಂಡಿತರ ಸಂಖ್ಯೆ ಬಹಳ ಕಡಿಮೆಯಾಗಿದ್ದುದರಿಂದಲೂ ಕಾಲಸಂಕೋಚದಿಂದ ಕೆಲವು ಪಂಡಿತರುಗಳ ಭೇಟಿಯು ಶ್ರೀಗಳವರಿಗೆ ಆಗಲಿಲ್ಲವಾದುದರಿಂದಲೂ ಶ್ರೀಗಳವರು ನಿರೀಕ್ಷಿದಷ್ಟು ಫಲವಾಗಲಿಲ್ಲ. ಹಾಗಿದ್ದರೂ ಇಡೀ ಭಾರತದಲ್ಲೆಲ್ಲ ಮುಖ್ಯಸ್ಥಳಗಳಲ್ಲಿ ಈ ವಿಷಯದ ಪ್ರಚಾರವಾಯಿತು. ಒಂದೆರಡು ವಿಶ್ವವಿದ್ಯಾ-

ನಿಲಯಗಳವರು ಶಾಂಕರಭಾಷ್ಯವನ್ನೂ ವ್ಯಾಖ್ಯಾನಗಳನ್ನೂ ಬೇರೆಬೇರೆಯಾಗಿಯೇ ಬೋಧಿಸುವ ಯೋಜನೆಯನ್ನು ಜಾರಿಗೆ ತರುವದಾಗಿ ಭರವಸೆ ನೀಡಿದರು. ಕಾರ್ಯಾಲಯದ ಆರ್ಥಿಕ ದೃಷ್ಟಿಯಿಂದ ಹೇಳುವದಾದರೆ ಶ್ರೀಶ್ರೀಗಳವರು ಹೋದಕಡೆಗಳಲ್ಲೆಲ್ಲ ಭಕ್ತಮಹಾಜನರು ಆದರಪೂರ್ವಕವಾಗಿ ಸತ್ಕರಿಸಿ ನೀಡಿದ ಯಥೋಚಿತ ಕಾಣಿಕೆಗಳಿಂದ ಸಂಸ್ಥೆಗೆ ತಕ್ಕಮಟ್ಟಿಗೆ ಧನಸಹಾಯವು ಒದಗಿತು. ಗ್ರಂಥಗಳ ಹಾಗೂ ಮಾಸಪತ್ರಿಕೆಯ ಪ್ರಚಾರವೂ ಆಯಿತು. ಒಟ್ಟಿನಲ್ಲಿ ಶ್ರೀಶ್ರೀಗಳವರ ಈವರೆಗಿನ ಎಲ್ಲಾ ಪ್ರವಾಸಗಳಿಗಿಂತಲೂ ಈ ಪ್ರವಾಸವು ಎಲ್ಲಾ ಮಟ್ಟದಲ್ಲಿಯೂ ಅತ್ಯುತ್ತಮ ಫಲವನ್ನೇ ಕೊಟ್ಟಿತು ಎಂದು ಧಾರಾಳವಾಗಿ ಹೇಳಬಹುದು.

**ಶ್ರೀಶ್ರೀಗಳವರ ಅನಾರೋಗ್ಯ, ಪರಿಹಾರ: 1966**ರಲ್ಲಿ ಬೆಂಗಳೂರಿಗೆ ಶಂಕರಸಪ್ತಾಹ ಉತ್ಸವಕ್ಕಾಗಿ ದಯಮಾಡಿಸಿದ್ದ ಶ್ರೀಗಳವರಿಗೆ ಉತ್ಸವದ ಆರಂಭದ ದಿನವೇ ಮೂತ್ರವಿಸರ್ಜನೆಯಲ್ಲಿ ಅಡಚಣೆಯುಂಟಾಗಿ ಡಾಕ್ಟರುಗಳು ಚಿಕಿತ್ಸೆ ಮಾಡಿದರು. ಆದರೂ ಪ್ರಯೋಜನವಾಗಲಿಲ್ಲವಾಗಿ ಆಸ್ಪತ್ರೆಯಲ್ಲಿ ಒಂದು ಸಣ್ಣ ಆಪರೇಷನ್ ಸಹ ಆಯಿತು. ಆಮೇಲೆ ಸುಮಾರು ಒಂದು ತಿಂಗಳಕಾಲ ಕಳೆದರೂ ಆರೋಗ್ಯವು ಸರಿಯಾಗಲಿಲ್ಲವಾಗಿ ಮತ್ತೊಂದು ಪ್ರಧಾನವಾದ ಶಸ್ತ್ರಚಿಕಿತ್ಸೆಯನ್ನೇ ಶ್ರೀಗಳು ಎದುರಿಸಬೇಕಾಗಿ ಬಂದಿತು. ಡಾಕ್ಟರುಗಳ ಸಾಹಸ ಹಾಗೂ ಒಬ್ಬ ಭಕ್ತ ಮಹನೀಯರ ಔದಾರ್ಯವಿಶಿಷ್ಟವಾದ ಸೇವೆಯಿಂದ ಸುಮಾರು ಜುಲೈ 20ರ ವೇಳೆಗೆ ಶ್ರೀಗಳು ಗುಣಮುಖರಾದರು. ಈ ಪರ್ವಕಾಲದಲ್ಲಿ ಶ್ರೀಶ್ರೀಗಳ ದೇಹಸ್ಥಿತಿಯು ತುಂಬ ಆತಂಕಕ್ಕೇ ಕಾರಣವಾಗಿತ್ತು, ಭಗವದನುಗ್ರಹದಿಂದ ಅಪಾಯಗಳೆಲ್ಲ ಪರಿಹಾರವಾಗಿ ಶ್ರೀಗಳು ಆರೋಗ್ಯವಂತರಾದರು, ಭಕ್ತಜನರೆಲ್ಲರೂ ಹರ್ಷಿತರಾದರು.

**ಚಾತುರ್ಮಾಸ್ಯ ಸಂಕಲ್ಪವನ್ನು 1961**ರಲ್ಲಿ ಶ್ರೀಶ್ರೀಗಳವರು ಮೈಸೂರಿನಲ್ಲಿ ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರ ಮನೆಯಲ್ಲಿ ನೆರವೇರಿಸಿ ವ್ಯಾಸಪೂಜಾದಿಗಳನ್ನು ಮಾಡಿದರು. ಮೈಸೂರಿನಲ್ಲಿ ಎರಡು ತಿಂಗಳು ಕಾಲವೂ ಬೆಳಿಗ್ಗೆ ಛಾಂದೋಗ್ಯ ಭಾಷ್ಯ ಪ್ರವಚನವನ್ನೂ ಸಂಜೆಯ ವೇಳೆ ಶ್ರೀರಾಮ ದೇವಸ್ಥಾನದಲ್ಲಿ ವೇದಾಂತೋಪನ್ಯಾಸಗಳನ್ನೂ ನಡೆಯಿಸಿದರು.

**1962**ನೆಯ ವರ್ಷದಲ್ಲಿ ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿ ಬುಲ್‌ಟೆಂಪಲ್ ರಸ್ತೆಯಲ್ಲಿರುವ ಡಾ. ನಾರಾಯಣರಾಯರ ಮನೆಯಲ್ಲಿ ಶ್ರೀಶ್ರೀಗಳವರು ಚಾತುರ್ಮಾಸ್ಯವನ್ನು ಆಚರಿಸಿದರು. ಎರಡು ತಿಂಗಳ ಕಾಲವೂ ಬೆಳಗ್ಗೆ ಭಾಷ್ಯಪ್ರವಚನಾದಿ ಗಳನ್ನೂ ಸಂಜೆ ಉಪನ್ಯಾಸಗಳನ್ನೂ ಗುರುಗಳು ಅನುಗ್ರಹಿಸಿದರು.

ಈ ಉಪನ್ಯಾಸಗಳನ್ನೆಲ್ಲ 'ಜೀವಂತವೇದಾಂತ' ಎಂಬ ಗ್ರಂಥ ರೂಪದಲ್ಲಿ ಅಧ್ಯಾತ್ಮ ಪ್ರಕಾಶಪತ್ರಿಕೆಯ ಮೂಲಕ ಪ್ರಕಟಿಸಲಾಯಿತು. **1963-64**ರ ಚಾತುರ್ಮಾಸ್ಯ ಸಂಕಲ್ಪಗಳು ಹೊಳೆನರಸೀಪುರದಲ್ಲಿಯೇ ನೆರವೇರಿದವು. ಆಗ್ಗೆ ಪ್ರತಿ ಗುರುಶನಿಭಾನು ವಾರಗಳಲ್ಲಿ ಶ್ರೀಶ್ರೀಗಳವರು ವಿಶೇಷ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

**1965**ರಲ್ಲಿ ಶ್ರೀಶ್ರೀಗಳವರು ಮೈಸೂರು ಭಕ್ತಮಹಾಜನರ ಅಪೇಕ್ಷೆಯಂತೆ ಮೈಸೂರು ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ 'ಅನಾಥಾಲಯ'ದಲ್ಲಿ ಚಾತುರ್ಮಾಸ್ಯವನ್ನು ನೆರವೇರಿಸಿದರು. ಎರಡು ತಿಂಗಳ ಕಾಲವೂ ಅಲ್ಲಿ ಬೆಳಗ್ಗೆ ಬ್ರಹ್ಮಸೂತ್ರಭಾಷ್ಯ ಪಾಠವನ್ನೂ ಸಂಜೆವೇಳೆಯಲ್ಲಿ ಉಪದೇಶಗಳನ್ನೂ ಅನು-ಗ್ರಹಿಸುತ್ತಿದ್ದರು. ಭಕ್ತಮಹಾಜನರು ಶ್ರೀಶ್ರೀಗಳವರಿಗೆ ಭಿಕ್ಷೆ, ಹಾಗೂ ಪಾದಪೂಜೆ-ಗಳನ್ನು ಏರ್ಪಡಿಸಿದ್ದರು. ಶ್ರೀಶ್ರೀಗಳವರು ಬರೆದ ಗ್ರಂಥಗಳ ಪ್ರದರ್ಶನವೊಂದನ್ನು ಸಹ ಏರ್ಪಡಿಸಲಾಗಿತ್ತು. ಈ ಅವಧಿಯಲ್ಲಿ ಸುಪ್ರಸಿದ್ಧ ವೇದಾಂತಪ್ರಚಾರಕರೂ ದೇಶವಿದೇಶಗಳಲ್ಲಿ ಸಂಚರಿಸಿ ಜನಪ್ರಿಯರಾದ ಅಧ್ಯಾತ್ಮೋಪದೇಶಕರೂ ಆದ ಶ್ರೀಚಿನ್ಮಯಾನಂದಸ್ವಾಮಿಗಳೂ ಬೊಂಬಾಯಿನ ಶ್ರೀ ಎಂ. ವರದರಾಜ್‌ರವರೂ ಶ್ರೀ ತಿಲಕ್ ಮಹಾರಾಜರೂ ಶ್ರೀಶ್ರೀಗಳವರನ್ನು ಭೇಟಿ ಮಾಡಿದ್ದರು.

**1966**ರ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಹೊಳೆನರಸೀಪುರ-ದಲ್ಲಿಯೇ ನೆರವೇರಿಸಿದರು. ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸಗಳ ಏರ್ಪಾಡು ಇರಲಿಲ್ಲ. ಶ್ರೀಶ್ರೀಗಳವರು ಸೀಮೋಲ್ಲಂಘನದ ದಿನ ಹೊಳೆನರಸೀಪುರದಿಂದ ಹೊರಟು ವಿಶ್ವಭಾರತಪ್ರವಾಸಮಾಡುವ ಇಷ್ಟವುಳ್ಳವರಾಗಿದ್ದರು. ಅದಕ್ಕೆ ತಕ್ಕ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ವೇದಾಂತಶ್ರವಣಕ್ಕಾಗಿ ಶ್ರೀಭಗವತ್ಪಾದರು, ಶ್ರೀಕೃಷ್ಣಪಾದರು ಎಂಬ ಇಬ್ಬರು ಸಂನ್ಯಾಸಿಗಳು ಕಾರ್ಯಾ-ಲಯದಲ್ಲಿ ತಂಗಿದ್ದರು. ಅನಂತರ ತಮ್ಮ ಸ್ಥಳಗಳಿಗೆ ದಯಮಾಡಿಸಿದರು.

**1967**ರಲ್ಲಿ ಶ್ರೀಗಳವರು ಬೆಂಗಳೂರು ಬಸವನಗುಡಿಯಲ್ಲಿರುವ 'ಲಕ್ಷ್ಮೀ-ವಾಸಂ' ಎಂಬ ಕಟ್ಟಡದಲ್ಲಿ ನೆರವೇರಿಸಿದರು. ಈ ಚಾತುರ್ಮಾಸ್ಯದಲ್ಲಿ ಆರೋಗ್ಯ ಸುಧಾರಣೆಯ ದೃಷ್ಟಿಯಿಂದ ವಿಶ್ರಾಂತಿಯಲ್ಲಿಯೇ ಇದ್ದದ್ದರಿಂದ ಯಾವ ಪ್ರವಚನಾದಿ ಗಳನ್ನೂ ನಡೆಯಿಸಲಿಲ್ಲ. ಆಮೇಲೆ ಹೊಳೆನರಸೀಪುರಕ್ಕೆ ದಯಮಾಡಿಸಿದರು. ಈ ಸಂದರ್ಭದಲ್ಲಿಯೇ ಶ್ರೀ ಡಿ.ವಿ.ಜಿ.ಯವರು ಅವರ ದರ್ಶನಕ್ಕೆ ಬಂದಿದ್ದರು.

**ಶಂಕರಸಪ್ತಾಹ : 1961, 63**ರಲ್ಲಿ ಹೊಳೆನರಸೀಪುರದಲ್ಲಿ ಶ್ರೀಶ್ರೀಗಳವರ ಉಪನ್ಯಾಸಗಳೊಡನೆ, **1962** ಮೈಸೂರಿನಲ್ಲಿ ಶ್ರೀ ಸೀತಾರಾಮರ ದೇವಸ್ಥಾನದಲ್ಲಿ

ನಡೆದವು. 1964ರಲ್ಲಿ ಶ್ರೀಶಂಕರಸಪ್ತಾಹ ಮಹೋತ್ಸವವು ಮಧುಗಿರಿಯಲ್ಲಿ ಬಹಳ ವೈಭವದಿಂದ ನಡೆಯಿತು. ಮಧುಗಿರಿಯ ಶ್ರೀಶಂಕರ ಸೇವಾಸಂಘದವರು ಏರ್ಪಾಡುಗಳನ್ನೆಲ್ಲ ಸಮರ್ಪಕವಾಗಿ ಮಾಡಿದ್ದರು. ಭಾಷ್ಯಪ್ರವಚನ, ಪುರಾಣ-ಶ್ರವಣಗಳಿಗೆ ಬಹಳ ಜನರು ಸೇರುತ್ತಿದ್ದರು. ಈ ಉತ್ಸವಕ್ಕೆ ಪರಸ್ಥಳಗಳಿಂದ ಹೆಚ್ಚು ಜನ ಪಂಡಿತರು ಬರಲಿಲ್ಲ. ಶ್ರೀಶ್ರೀಗಳವರು ಪ್ರತಿಯೊಂದು ಕಾರ್ಯಕ್ರಮದ ಕೊನೆಯಲ್ಲೂ ಅನುವಾದ ಮಾಡುತ್ತಿದ್ದರಲ್ಲದೆ ಉಪನ್ಯಾಸಗಳನ್ನು ಅವರೇ ನಡೆಯಿಸಿ-ದರು. ಕೊನೆಯದಿನ ಊರಿನವರು ದೊಡ್ಡ ಸಂತರ್ಪಣೆಯನ್ನು ಏರ್ಪಡಿಸಿದ್ದರು. ಅಂತೂ ಉತ್ಸಾಹದಿಂದ ಕಾರ್ಯವು ನಡೆಯಿತು. ಶ್ರೀಗಳವರು ಹಿಂದಿರುಗಿ ಬರುವಾಗ ತುಮಕೂರಿನಲ್ಲಿಯೂ ತಿಪಟೂರಿನಲ್ಲಿಯೂ ನಿಂತು ಭಕ್ತರುಗಳಿಗೆ ಉಪದೇಶಗಳನ್ನು ಅನುಗ್ರಹಿಸಿ ಹೊಳೆನರಸೀಪುರಕ್ಕೆ ದಯಮಾಡಿಸಿದರು.

1965ನೆಯ ಶ್ರೀಶಂಕರಸಪ್ತಾಹಮಹೋತ್ಸವವು ಮಾತ್ರ ಮೊದಲು ಹೊಳೆನರಸೀಪುರದಲ್ಲೇ ನಡೆಯಲು ನಿಶ್ಚಯವಾಗಿದ್ದು ಅನಂತರ ಕೇವಲ ಒಂದು ವಾರದ ಅವಧಿಯಲ್ಲಿ ಕಾರ್ಯಕ್ರಮವು ಬದಲಾವಣೆಯಾಗಿ ಬೆಂಗಳೂರಿನಲ್ಲಿ ಗವೀಪುರಂ ಬಡಾವಣೆಯಲ್ಲಿದ್ದ ಶ್ರೀ ದೇವರಾಯಕುಲಕರ್ಣಿಯವರ ಮನೆಯ ಮುಂಭಾಗದಲ್ಲಿ ನೆರವೇರಿತು. ಬೆಂಗಳೂರಿನ ಪ್ರಸಿದ್ಧ ವಿದ್ವಾಂಸರುಗಳು ಭಾಷ್ಯ ಪ್ರವಚನಪುರಾಣಶ್ರವಣಗಳಲ್ಲಿ ಭಾಗವಹಿಸಿದ್ದರು. ಶ್ರೀಶ್ರೀಗಳವರು ಉಪನ್ಯಾಸ, ಅನುವಾದಗಳನ್ನು ನಡೆಸಿದರು. ಶ್ರೀ ದೇವರಾಯಕುಲಕರ್ಣಿಯವರಿಂದ ಕೀರ್ತ ನೆಯೂ, ಸಂಗೀತ ವಿದ್ವಾಂಸರುಗಳಿಂದ ವೀಣಾವಾದನ, ವೇಣುವಾದನಗಳೂ ಬೇರೆ ಬೇರೆಯ ದಿನಗಳಲ್ಲಿ ನಡೆದವು. ಕಾರ್ಯಾಲಯದ ಗ್ರಂಥಗಳ ಪ್ರದರ್ಶನ (ಎಗ್ಜಿಬಿಷನ್) ವೊಂದನ್ನು ಉತ್ಸವಸಮಿತಿಯವರು ಏರ್ಪಡಿಸಿದ್ದರು.

1966ರಲ್ಲಿ ದಾವಣಗೆರೆಯಿಂದ ಬಂದ ಆಹ್ವಾನದಂತೆ ಆ ಊರಿನ ಶ್ರೀಶಿವಾನಂದ ಅಧ್ಯಾತ್ಮಮಂದಿರದಲ್ಲಿ ಶಂಕರ ಸಪ್ತಾಹಮಹೋತ್ಸವವು ಬಹಳ ಚೆನ್ನಾಗಿ ನಡೆಯಿತು. ದಾವಣಗೆರೆಯ ಪ್ರಮುಖ ವರ್ತಕರಲ್ಲೊಬ್ಬರಾದ ಶ್ರೀ ಮುದಗಲ್ ಚಿಕ್ಕಣ್ಣಶೆಟ್ಟರು ಹೆಚ್ಚಿನ ಉತ್ಸಾಹದಿಂದ ಕೂಡಿ ಉತ್ಸವದ ಸಕಲ ಏರ್ಪಾಡುಗಳನ್ನೂ ಮಾಡಿಸಿದ್ದರು. ಈ ಉತ್ಸವದ ವ್ಯವಸ್ಥೆಗಾಗಿಯೇ ಶ್ರೀ ದೇವರಾಯಕುಲಕರ್ಣಿಯರು ಬೆಂಗಳೂರಿನಿಂದ ಬಂದು ದಾವಣಗೆರೆಯಲ್ಲಿ ಉಳಿದುಕೊಂಡಿದ್ದರು. ಶ್ರೀಶ್ರೀಗಳವರು ಅಲ್ಲಿನ ಭಕ್ತರ ಕೋರಿಕೆಯಂತೆ ಉತ್ಸವಕ್ಕೆ ಹದಿನೈದು ದಿನಗಳ ಮುಂಚಿತವಾಗಿಯೇ ದಯಮಾಡಿಸಿ ಕೆಲವು ಉಪನ್ಯಾಸಗಳನ್ನು ಅನುಗ್ರಹಿಸಿದರು. ಪರಸ್ಥಳಗಳಿಂದ ಅಧಿಕಸಂಖ್ಯೆಯಲ್ಲಿ ಭಕ್ತರು ಬಂದಿದ್ದರು.

ವಿದ್ವಾಂಸರುಗಳು ಭಾಷ್ಯಪ್ರವಚನ ಪುರಾಣ ಶ್ರವಣಗಳಲ್ಲಿ ಭಾಗವಹಿಸಿದ್ದರು. ಶ್ರೀಶ್ರೀಗಳವರು ಪ್ರತಿ ಕಾರ್ಯಕ್ರಮದ ಕೊನೆಯಲ್ಲಿ ಅನುವಾದವನ್ನು ನೀಡಿದರು, ದಿನವೂ ಉಪನ್ಯಾಸಗಳನ್ನು ಮಾಡಿದರು. 1966ರ ದಾವಣಗೆರೆಯ ಶಂಕರ ಸಪ್ತಾಹದ ಉಪನ್ಯಾಸಗಳನ್ನು, ''ಶಾಂಕರವೇದಾಂತದ ಮೂಲತತ್ತ್ವಗಳು'' ಎಂಬ ಹೆಸರಿ ನಿಂದ ಕನ್ನಡಗ್ರಂಥ ರೂಪವಾಗಿ ಪ್ರಕಟಿಸಲಾಯಿತು.

1967ನೆಯ ವರ್ಷದ ಸಪ್ತಾಹದಲ್ಲಿ ಶ್ರೀಗಳವರು ಭಾಗವಹಿಸಲು ಸಾಧ್ಯವಾಗದೆ ಹೋದರೂ ಕಾರ್ಯಕ್ರಮದಂತೆ ಶ್ರೀಸದ್ಗುರು ಅನಂತಸ್ವಾಮಿ ಆಶ್ರಮದಲ್ಲಿ ಈ ಉತ್ಸವವು ನೆರವೇರಿತು. ಸ್ಥಳಪರಸ್ಥಳಗಳಿಂದ ಭಕ್ತರುಗಳು ಬಂದು ನೆರೆದಿದ್ದರು. ಶ್ರೀಗಳವರ ಅಪ್ಪಣೆಯಂತೆ ವೇ. ಎಸ್. ವಿಠಲಶಾಸ್ತ್ರಿಗಳೇ ಉಪನ್ಯಾಸಗಳನ್ನು ನಡೆಸಿದರು. ಭಾಷ್ಯಪ್ರವಚನ ಪುರಾಣಗಳಲ್ಲಿ ಪಂಡಿತರುಗಳು ಎಂದಿನಂತೆ ಭಾಗವನ್ನು ವಹಿಸಿದ್ದರು. ಭಕ್ತಮಂಡಲಿಯವರು ಎಲ್ಲಾ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಿದ್ದರು.

ಇತರ ಎಲ್ಲಾ ವಾರ್ಷಿಕ ಸಪ್ತಾಹಗಳೂ - ಶ್ರೀರಾಮನವಮಿ, ಶ್ರೀ ಶರನ್ನವರಾತ್ರಿ, ಗೀತಾಜಯಂತಿ, ಶ್ರೀ ಬ್ರಹ್ಮಚೈತನ್ಯಾರಾಧನೆಗಳೂ ಎಂದಿನ ರೀತಿಯಲ್ಲಿ ಹೊಳೆನರಸೀಪುರದಲ್ಲೇ ಪಂಡಿತರಿಂದ ಪೂಜಾ-ಪಾರಾಯಣ-ಪ್ರವಚನ- ಉಪ ನ್ಯಾಸಗಳೊಡನೆ ಮಹಾಜನರ ಸಹಕಾರದಿಂದ ನಡೆದುವು

**ಅನುಷ್ಠಾನಗಳು : ಹರೇರಾಮಮಂತ್ರ ಜಪಾನುಷ್ಠಾನ :** ಕಲಿಯುಗದಲ್ಲಿ ಶಾಸ್ತ್ರದಲ್ಲಿ ಅಶ್ರದ್ಧೆ, ವೇದೋಕ್ತ ಕರ್ಮಾಚರಣೆಯ ಅಭಾವ, ಅನಾಚಾರ, ದುರಾಚಾರ - ಮುಂತಾದವುಗಳ ನಿಮಿತ್ತದಿಂದ ಜನರ ಚಿತ್ತವು ಅತ್ಯಂತ ಕಲುಷಿತ-ವಾಗಿರುವದರಿಂದ ಅವರಿಗೆ ತತ್ತ್ವಜ್ಞಾನದಲ್ಲಿ ಅಭಿರುಚಿಯಾಗಲಿ, ಅಭಿರುಚಿ-ಯಿದ್ದರೂ ಅದರ ಪ್ರಾಪ್ತಿಯಾಗಲಿ ದೊರಕುವದು ಕಡುಕಷ್ಟವಾಗಿರುವದರಿಂದ ಚಿತ್ತಶುದ್ಧಿಗೂ ಇಹಪರಗತಿಗೂ ಸುಲಭವಾದ ಸಾಧನವು ದೊರಕಲೆಂಬ ಉದ್ದೇಶದಿಂದ ಭಗವನ್ನಾಮಸ್ಮರಣೆಯೆಂಬ ಸುಲಭೋಪಾಯವನ್ನು ಪ್ರಾಚೀನ ಋಷಿಗಳು ಉಪದೇಶಿಸಿರುತ್ತಾರೆ. ಈ ಸಾಧನದ ಲಾಭವು ಸರ್ವರಿಗೂ ದೊರಕಲೆಂಬ ಉದ್ದೇಶದಿಂದಲೂ 1962ನೆಯ ಫೆಬ್ರವರಿಯಲ್ಲಿ ಸಂಭವಿಸಲಿದ್ದ ಅಷ್ಟಗ್ರಹಕೂಟ ದುರ್ಯೋಗದ ಅರಿಷ್ಟ ನಿವಾರಣೆಗಾಗಿಯೂ ಹರೇರಾಮ ಮಂತ್ರಜಪಾನು-ಷ್ಠಾನವನ್ನು 1960ನೆಯ ನವೆಂಬರ್ 29ನೆಯ ದಿನಾಂಕ ಮಾರ್ಗಶಿರ ಶುಕ್ಲ ಏಕಾದಶಿಯಿಂದ. ಪ್ರಾರಂಭಿಸಲಾಯಿತು ; ಮಹಾಜನರು ತಮ್ಮ ಊರುಗಳಲ್ಲೇ

ತಾವಿರುವ ಸ್ಥಳದಲ್ಲಿಯೇ ಪ್ರಾರಂಭಿಸಿ ವೈಶಾಖ ಶುಕ್ಲ ಏಕಾದಶೀವರೆಗೂ ಅನುಷ್ಠಾನ-ಮಾಡಿ ಜಪಸಂಖ್ಯೆಯನ್ನು ಕಾರ್ಯಾಲಯಕ್ಕೆ ತಿಳಿಯಿಸಬೇಕೆಂದು ಪ್ರಾರ್ಥಿಸ-ಲಾಯಿತು. ಪ್ರತಿದಿನವೂ ಶುಚಿರ್ಭೂತರಾಗಿ ನಿಯಮವಾಗಿ ಒಂದು ಮಾಲೆಯನ್ನು ಜಪಿಸಿ ಅನಂತರ ಎಷ್ಟು ಬೇಕಾದರೂ ಜಪಿಸಬಹುದೆಂತ ಕೋರಲಾಯಿತು. ಮುಂದೆ ಜಪದ ಅವಧಿಯನ್ನು ಜ್ಯೇಷ್ಠಶುಕ್ಲ ಪೂರ್ಣಿಮೆಯವರೆಗೂ ವಿಸ್ತರಿಸಲಾಯಿತು. ಹೀಗೆ ಏಳು ತಿಂಗಳು ಐದು ದಿನಗಳ ಕಾಲ (ಎರಡು ಕೋಟಿ ಇಪ್ಪತ್ತೈದು ಲಕ್ಷಕ್ಕೂ ಮೀರಿದ) ಜಪಗಳನ್ನು ನೆರವೇರಿಸಿ 1.7.61 ಮತ್ತು 2.7.61ರಂದು ಮಂಗಳವನ್ನು ಆಚರಿಸ ಲಾಯಿತು. ಮಂಗಳಕಾಲದಲ್ಲಿ ಶ್ರೀದಿಗ್ವಿಜಯರಾಮರ ಸನ್ನಿಧಿಯಲ್ಲಿ ಅಷ್ಟೋತ್ತರ, ಶತಪುರುಷಸೂಕ್ತಾಭಿಷೇಕ, ಸಹಸ್ರನಾಮಾರ್ಚನೆ, ಸಾಮೂಹಿಕವಾಗಿ ಹರೇರಾಮ ಮಂತ್ರಕೀರ್ತನೆಗಳನ್ನೂ ಶ್ರೀಶ್ರೀಗಳವರಿಂದ ಉಪದೇಶವನ್ನೂ ಏರ್ಪಡಿಸಲಾಗಿತ್ತು. 'ಹರೇರಾಮಮಂತ್ರ' ಎಂಬ ಲೇಖನವೊಂದನ್ನು ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು. ಬೇರೆಬೇರೆಯ ಊರುಗಳ ಸುಮಾರು 42 ಕೇಂದ್ರಗಳಲ್ಲಿ ನಡೆದ ಈ ಜಪಯಜ್ಞದಲ್ಲಿ ಒಟ್ಟು 250ಕ್ಕೂ ಮೇಲ್ಪಟ್ಟು ಜನರು ಭಾಗವಹಿಸಿದ್ದರು.

ಶ್ರೀರಾಮಮಂತ್ರಜಪಯಜ್ಞವು ತಾ. 14.9.61 ರಿಂದ 13.4.62ರ ವರೆಗೆ ಸುಮಾರು ಏಳು ತಿಂಗಳ ಕಾಲ ಕರ್ನಾಟಕ ಮುಖ್ಯಸ್ಥಳಗಳಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚಿನ ಕೇಂದ್ರಗಳಲ್ಲಿ ನಡೆದು ಎಂಭತ್ತಕ್ಕೂ ಹೆಚ್ಚಿನ ಸ್ತ್ರೀಪುರುಷರು ಭಾಗವಹಿಸಿದ್ದು, ಈ ಜಪಯಜ್ಞವು ವಿಜೃಂಭಣೆಯಿಂದ ನೆರವೇರಿತು. ಈ ಅವಧಿ ಯಲ್ಲಿ ನಾಲ್ಕುಕೋಟಿ ಇಪ್ಪತ್ತು ಲಕ್ಷ ಜಪವು ನಡೆಯಿತು. 45 ಸಾವಿರ ಲಿಖಿತಜಪವೂ ನಡೆಯಿತು. ತಾ. 36.4.62ನೆಯ ಗುರುವಾರ ಮಹಾಮಂಗಳವನ್ನು ಆಚರಿಸ-ಲಾಯಿತು. ಆದಿನ ಶ್ರೀರಾಮದೇವರಿಗೆ ಚತುಃಶತಾವರ್ತನ ಪುರುಷಸೂಕ್ತಾಭಿಷೇಕ, ಸಹಸ್ರನಾಮಾರ್ಚನಪೂಜಾದಿಗಳನ್ನು ನೆರವೇರಿಸಲಾಯಿತು. 'ಶ್ರೀರಾಮನಾಮದ ಜಪ' ಎಂಬ ಕರಪತ್ರವನ್ನೂ ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು.

1962ನೆಯ ಅಕ್ಟೋಬರ್‌ನಲ್ಲಿ ಚೈನಾದೇಶದವರು ಭಾರತದ ಮೇಲೆ ಪ್ರಾರಂಭಿಸಿದ ಯುದ್ಧದಿಂದ ಉಂಟಾದ ಅಶಾಂತಿಯನ್ನೂ ಜನಗಳ ಕಷ್ಟಾರ್ಪಣ್ಯ ಗಳನ್ನೂ ಪರಿಹಾರಮಾಡುವಂತೆ ಭಗವಂತನನ್ನು ಪ್ರಾರ್ಥಿಸುವ ಉದ್ದೇಶದಿಂದ ಎರಡನೆಯಬಾರಿಗೆ ಹರೇರಾಮಮಂತ್ರಜಪಾನುಷ್ಠಾನವನ್ನು 7.12.62ರಿಂದ ಪ್ರಾರಂಭಿಸಲಾಯಿತು. ಆದರೆ ಇದಕ್ಕೆ ಮೊದಲನೆಯ ಬಾರಿಯ ಅನುಷ್ಠಾನದಷ್ಟು ಪ್ರೋತ್ಸಾಹವು ಮಹಾಜನರಿಂದ ದೊರೆಯಲಿಲ್ಲ. ಸುಮಾರು ಹದಿನೆಂಟುಕೇಂದ್ರಗಳಲ್ಲಿ ನಲವತ್ತು ಜನರಿಂದ ನಲವತ್ತುನಾಲ್ಕುಸಾವಿರ ಮಾಲೆಗಳ ಜಪವು ಮಾತ್ರ ನಡೆಯಿತು.

2-3-63ರಂದು ಮಂಗಳವನ್ನು ಆಚರಿಸಲಾಯಿತು. "ಹರೇರಾಮಮಂತ್ರಮಹಿಮೆ" ಎಂಬ ಕರಪತ್ರವೊಂದನ್ನು ಪ್ರಕಟಿಸಿ ಧರ್ಮಾರ್ಥವಾಗಿ ಹಂಚಲಾಯಿತು.

## ಶ್ರೀಶೃಂಗೇರಿಜಗದ್ಗುರು ಪೀಠಾಧೀಶ್ವರರ ಭೇಟಿ:

ಶ್ರೀಶೃಂಗೇರಿ ಜಗದ್ಗುರು ಪೀಠಾಧಿಪರಾದ ಪರಮಹಂಸ ಶ್ರೀಶ್ರೀಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರು ಸಂಚಾರಕ್ರಮದಿಂದ ತಾ. 3-5-62ರಂದು ಹೊಳೆನರಸೀಪುರಕ್ಕೆ ದಯಮಾಡಿಸಿದ್ದರು. ಆಗ್ಗೆ ಶ್ರೀಶ್ರೀಗಳವರು ಅವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ನಿಕಟಪರಿಚಯವನ್ನು ಮಾಡಿಕೊಂಡರು. ಸುಮಾರು ಒಂದು ಘಂಟೆಯಕಾಲ ಅಧ್ಯಾತ್ಮವಿಚಾರಪ್ರಧಾನವಾದ ಸಂಭಾಷಣೆಗಳನ್ನು ನಡೆಯಿಸಿದರು. ನಮ್ಮ ಶ್ರೀಗಳು ಆಗತಾನೆ ಬರೆದು ಸಿದ್ಧಪಡಿಸಿದ್ದ "ವೇದಾಂತಪ್ರಕ್ರಿಯಾ-ಪ್ರತ್ಯಭಿಜ್ಞಾ" ಗ್ರಂಥದ ಕೆಲವು ವಿಷಯಗಳನ್ನು ಜಗದ್ಗುರುಗಳಿಗೆ ವಿವರಿಸಿ ಹೇಳಿದರು. ಜಗದ್ಗುರುಗಳು ಇಂಥ ಅಪೂರ್ವಸಾಧನೆಯನ್ನು ಮೆಚ್ಚಿ ಬಹಳ ಸಂತೋಷಗೊಂಡು ಆ ಗ್ರಂಥಪ್ರಕಟನೆಗಾಗಿ ರೂ. 250 ಸಹಾಯ ದ್ರವ್ಯವನ್ನೂ ಅನುಗ್ರಹಿಸಿದರು, ಅಧ್ಯಾತ್ಮಪ್ರಕಾಶಕಾರ್ಯಾಲಯದ ಚಟುವಟಿಕೆಗಳನ್ನು ವೀಕ್ಷಿಸಿದರು. "ಶಂಕರ-ಸಿದ್ಧಾಂತಪ್ರಚಾರಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟು ಈ ವಾರ್ಧಕ್ಯ-ದಲ್ಲಿಯೂ ಉತ್ಸಾಹದಿಂದ ಕೆಲಸಮಾಡುತ್ತಿರುವ ನಿಜವಾದ ಶಂಕರಭಕ್ತರು ನೀವು" ಎಂದು ನಮ್ಮ ಶ್ರೀಗಳವರನ್ನು ಹೊಗಳಿದರು. 'ಪ್ರತ್ಯಕ್ಷಸಮಾಗಮದಿಂದ ನಮ್ಮ ಅನೇಕ ಸಂಶಯಗಳೂ ಪರಿಹಾರವಾದವು' ಎಂದೂ ತಿಳಿಸಿದರು. ಹೀಗೆ ಜಗದ್ಗುರುಗಳ ಆಗಮನದಿಂದ ಕಾರ್ಯಾಲಯಕ್ಕೆ ಪ್ರೋತ್ಸಾಹವು ದೊರೆತಂತಾಯಿತು.

**ಪುಸ್ತಕರಚನೆ, ಸಹಾಯ, ಪ್ರಕಟನೆ : 1961**ರಲ್ಲಿ ಕನ್ನಡದಲ್ಲಿ ಕಾಠಕೋಪನ್ಯಾಸಮಂಜರಿ, ಶ್ರೀಶಂಕರಾಚಾರ್ಯರ ಪ್ರಕರಣಗಳು - (4ನೆಯ ಸಂಪುಟ), ಸಂಸ್ಕೃತಭಾಷಾಭ್ಯಾಸ-3ನೆಯ ಭಾಗ, ಪತ್ರಿಕೆಯ ಮೂಲಕ, ಸಂಸ್ಕೃತ ದಲ್ಲಿ ತೈತ್ತಿರೀಯೋಪನಿಷತ್ (ಶಿಕ್ಷಾವಲ್ಲೀ) ಭಾಷ್ಯವನ್ನು ಟಿಪ್ಪಣ್ಯಾದಿಗಳೊಡನೆ, ಶ್ರೀಶ್ರೀಗಳವರ ಶಂಕರಸಪ್ತಾಹಕಾಲದ ಉಪನ್ಯಾಸಗಳನ್ನು ಪರಿಪೂರ್ಣದರ್ಶನ ಗ್ರಂಥವಾಗಿ ಪ್ರಕಟಿಸಲಾಯಿತು.

**ಗ್ರಂಥಪ್ರಕಟನೆಗೆ ಸಹಾಯ :** ಶ್ರೀಶ್ರೀಗಳವರು ಸಂಸ್ಕೃತಭಾಷೆಯಲ್ಲಿ ರಚಿಸಲು ಸಂಕಲ್ಪಿಸಿದ್ದ 'ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ' ಎಂಬ ಗ್ರಂಥದ ಪ್ರಕಟನೆಗೆ ಸಹಾಯವಾಗಿ ಮೈಸೂರಿನಲ್ಲಿರುವ ಕಾಫಿಪ್ಲಾಂಟರ್ ಶ್ರೀ ಟಿ. ಮಂಜುನಾಥಯ್ಯರ್

ರವರೂ, ಬೆಂಗಳೂರಿನ ಶ್ರೀ ವಿ. ರಾಮಮೂರ್ತಿಯವರೂ ತಲಾ ಒಂದು ಸಾವಿರ ರೂಪಾಯಿಗಳನ್ನು ಉದಾರವಾಗಿ ಸಮರ್ಪಿಸಿದರು. ಇದರಿಂದ ಆ ಮಹಾಗ್ರಂಥವನ್ನು ಮುಂದೆ ಬೆಳಕಿಗೆ ತರಲು ಬಹಳ ಅನುಕೂಲವಾಯಿತು.

"ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಗ್ರಂಥರಚನೆ : ಶ್ರೀಶ್ರೀಗಳವರ ಸಂಸ್ಕೃತಗ್ರಂಥಗಳಲ್ಲಿ ಅನರ್ಘ್ಯವೂ ಅಮೋಘವೂ ಆದ ಈ ಮೇರುಕೃತಿಯ ರಚನೆಯ ಹಿನ್ನೆಲೆಯನ್ನು ವಾಚಕರಿಗೆ ತಿಳಿಸುವದು ಅತ್ಯವಶ್ಯ. ಶ್ರೀಗಳವರು 1961ನೆಯ ವರ್ಷದಲ್ಲಿ ಮೈಸೂರಿನಲ್ಲಿ ಚಾತುರ್ಮಾಸ್ಯಸಂಕಲ್ಪಕ್ಕೆ ಕುಳಿತಿದ್ದಾಗ ಕೆಲವು ವಿದ್ವಾಂಸರು ಶ್ರೀಗಳು ಹೊರಡಿಸಿದ್ದ ಪ್ರಶ್ನಾವಳಿಯ ಸಮಾಲೋಚನೆಯ ವಿಷಯದಲ್ಲಿ ವಾದವು ನಡೆಯಬೇಕೆಂದು ಪತ್ರವ್ಯವಹಾರ ಮಾಡಿದ್ದರು. ಆದರೆ ಶ್ರೀಗಳವರು ಬಹಿರಂಗವಾಗಿ ಎಲ್ಲರೂ ಸೇರಿ ವಾದಮಾಡುವಾಗ ರಾಗದ್ವೇಷಗಳಿಗೆ ಅವಕಾಶವಾಗಿ ಯಾವ ನಿರ್ಣಯವೂ ಆಗದೆ ಹೋಗಬಹುದೆಂದೂ ಆದ್ದರಿಂದ ವಿದ್ವಾಂಸರುಗಳು ಹೀಗೆ ಸಭೆಸೇರುವ ಮುಂಚೆ ತಮ್ಮ ಅಭಿಪ್ರಾಯಗಳನ್ನು ಲಿಖಿತ ಮೂಲಕವಾಗಿ ತಿಳಿಸಿ ಆಮೇಲೆ ಹೆಚ್ಚಿನ ವಿಷಯಗಳಿಗೆ ಮಾತನಾಡಬಹುದೆಂದೂ, ಹೀಗೆ ಚರ್ಚಿಸುವಾಗ ಒಬ್ಬೊಬ್ಬರೇ ಮಾತನಾಡಬೇಕೆಂದೂ, ಗಡಿಬಿಡಿಗೆ ಅವಕಾಶ ವಿರಬಾರದೆಂದೂ ಸೂಚಿಸಿದರು. ಬರೆದುಕೊಡಬೇಕೆಂದು ಕೇಳಿದಾಗ ಅದೇಕೊ, ವಿದ್ವಾಂಸರು ಯಾರೂ ಮುಂದೆ ಬರಲಿಲ್ಲ. ಸಭೆಯೂ ನಡೆಯಲಿಲ್ಲ. ನಂಜನ ಗೂಡಿನಿಂದ ಒಬ್ಬರು ಹೊರಡಿಸಿದ್ದ ಪ್ರಕಟನೆಯೊಂದರಲ್ಲಿ ಶ್ರೀಶ್ರೀಗಳವರನ್ನು ಸಂನ್ಯಾಸಸಂಪ್ರದಾಯ ತಿಳಿಯದವರೆಂದು ದೂಷಿಸಿ ಬರೆದಿದ್ದರು. ವೇದಾಂತಸಿದ್ಧಾಂತ ವಿಷಯದಲ್ಲಿ ನಿರ್ಣಯಿಸಬೇಕಾದ ಕೆಲವು ವಿಚಾರಗಳನ್ನು ಕುರಿತು **"An Appeal to Thoughtful Vedantins"** (ವಿದುಷಾಂ ಸವಿಧೇ ಸಮಾಲೋಚನಾರ್ಥಂ ವಿಜ್ಞಪ್ತಿಃ) ಎಂಬ ಆಂಗ್ಲಸಂಸ್ಕೃತ ಭಾಷಾರೂಪವಾದ ಪ್ರಶ್ನಾವಳಿಯ ಹೊತ್ತಗೆಯನ್ನು ವಿದ್ವಾಂಸರಲ್ಲಿ ಹಂಚಿದಾಗ ಮದ್ರಾಸ್ ಸಕಲವಿದ್ಯಾನಿಲಯದ ಶ್ರೀ ಸುಬ್ರಹ್ಮಣ್ಯಶಾಸ್ತ್ರಿ-ಎಂಬುವರು ಗೀತಾಭಾಷ್ಯದಲ್ಲಿರುವ "ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ" ಎಂಬ ವಾಕ್ಯವನ್ನು ಉದಾಹರಿಸಿದ್ದರು. ಶ್ರೀಶ್ರೀಗಳವರಿಗೆ ಆ ಬರಹಗಳನ್ನು ನೋಡಿದಾಗ ಶ್ರೀಮಚ್ಛಂಕರಭಗವತ್ಪಾದರ ವೇದಾಂತಸಂಪ್ರದಾಯವು ನಿಜವಾಗಿ ಯಾವದು ? ಎಂಬುದನ್ನೇ ಸ್ಪಷ್ಟಗೊಳಿಸಿ ಎಲ್ಲಾ ಪಂಡಿತರಿಗೂ ಒಪ್ಪಾಗುವಂತೆ ಒಂದು ಹೊಸ ಗ್ರಂಥವನ್ನೇ ಏಕೆ ಬರೆಯಬಾರದು ? ಎಂಬ ಯೋಚನೆಯು ಮನಸ್ಸಿನಲ್ಲಿ ಅಂಕುರಿಸಿತು. ಕೂಡಲೆ ಶ್ರೀಗಳವರು ಭಗವತ್ಪಾದರ ಸ್ಮರಣಪೂರ್ವಕವಾಗಿ ಗ್ರಂಥಾರಂಭಮಾಡುವ ವೇಳೆಗೆ ಸ್ಫುರಿಸಿದ

"ತಥಾ ಚ ಸಂಪ್ರದಾಯವಿದಾಂ ವಚನಮ್ । ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ" ಎಂಬ ಆಚಾರ್ಯರ ಗೀತಾಭಾಷ್ಯವಾಕ್ಯವನ್ನೇ ಆಧಾರ ವಾಗಿಟ್ಟುಕೊಂಡು ಶ್ರೀಶಂಕರಭಗವತ್ಪಾದರ ಭಾಷ್ಯಗಳನ್ನು ಪರಿಶೀಲನೆಮಾಡಿ ಆಚಾರ್ಯರಿಗೆ ಸಮ್ಮತವಾದ ವೇದಾಂತಸಿದ್ಧಾಂತವು ಅನಾದಿಕಾಲದಿಂದಲೂ ಹೇಗೆ ಈ ಅಧ್ಯಾರೋಪಾಪವಾದ ಪ್ರಕ್ರಿಯೆಯನ್ನೇ ಅವಲಂಬಿಸಿ ವಿವರಿಸ ಲ್ಪಟ್ಟಿದೆ, ಉಳಿದ ಪ್ರಕ್ರಿಯೆಗಳೆಲ್ಲವೂ ಹೇಗೆ ಇದೊಂದೇ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿವೆ ?' ಇದೇ ಸಂಪ್ರದಾಯಾಗತವಾದ ಪ್ರಕ್ರಿಯೆಯೆಂಬುದು ಹೇಗೆ ? ಇದಕ್ಕೆ ಭಾಷ್ಯಾಧಾರವೇನು ?' ಇಂಥ ಸಂಪ್ರದಾಯಿತ ಪ್ರಕ್ರಿಯೆಯ ಆಧಾರವಿಲ್ಲದೆ ಬರಿಯ ತರ್ಕದಿಂದ ವಿಚಾರಮಾಡಿದ್ದರಿಂದ ಹೇಗೆ ವ್ಯಾಖ್ಯಾನ ಕಾರರೂ ಇತರ ಭಾಷ್ಯಕಾರರೂ ಪರಮಾರ್ಥಜ್ಞಾನನಿರ್ಣಯ ಮಾರ್ಗವನ್ನು ಬಿಟ್ಟು ಸೀಳು ಹಾದಿಯಲ್ಲಿ ಹೊರಟರು ? ಬೀಗದಕೈ ಕಳೆದುಕೊಂಡು ರತ್ನದ ಪೆಟ್ಟಿಗೆಯನ್ನು ತೆರೆಯಲಾರದ ಪೇಚಾಡಿದ ನಿರ್ಭಾಗ್ಯನಂತೆ ಆತ್ಮತತ್ತ್ವ ರಹಸ್ಯವನ್ನು ಅರಿಯದೆ ಈ ಸಂಪ್ರದಾಯವನ್ನು ತಿಳಿಯದೆ ವಾದಿಗಳು ಹೇಗೆ ವಂಚಿತರಾದರು ? ಎಂಬ ವಿಷಯಗಳನ್ನು ಅಧಿಕರಿಸಿ "ವೇದಾಂತಪ್ರಕ್ರಿಯಾ ಪ್ರತ್ಯಭಿಜ್ಞಾ" ಎಂಬ ಮಹಾಪ್ರಬಂಧ ಗ್ರಂಥವೊಂದನ್ನು ರಚಿಸಿದರು. ಇದರಲ್ಲಿ ಮೊದಲು ವೇದಾಂತಪ್ರಕ್ರಿಯಾ ನಿರ್ಧಾರಣಾವಶ್ಯಕತೆಯನ್ನು ತಿಳಿಸಿ ಅನಂತರ ಆಚಾರ್ಯರ ಭಾಷ್ಯಪರಿಶೀಲನೆಯಿಂದ ಪ್ರಕ್ರಿಯಾನಿರ್ಧಾರಣೆಯನ್ನು ಮಾಡಿ ಮುಂದೆ ಉಳಿದ ಅದ್ವೈತಸಿದ್ಧಾಂತ ವ್ಯಾಖ್ಯಾನಕಾರರುಗಳು ಹೇಗೆ ಎಷ್ಟರಮಟ್ಟಿಗೆ ಒಬ್ಬೊಬ್ಬರೂ ವೇದಾಂತಸಂಪ್ರದಾಯದಿಂದ ದೂರವಾಗಿದ್ದಾರೆ ? ಈ ದೃಷ್ಟಿಯಿಂದ ವೇದಾಂತ ಸಂಪ್ರದಾಯಕ್ಕೆ ನಿಜವಾಗಿ ಹತ್ತಿರವಿರುವವರು ಯಾರು ? ಎಂಬುದನ್ನೆಲ್ಲ ವಿವರಿಸಿ ಬರೆದರು. ವ್ಯಾಖ್ಯಾನಕಾರರುಗಳ ಮೂಲಗ್ರಂಥಭಾಗಗಳನ್ನೇ ಪ್ರಮಾಣ ವಾಗಿ ಉದಾಹರಿಸಿ ಭಾಷ್ಯಪ್ರಕ್ರಿಯೆಗೂ ವ್ಯಾಖ್ಯಾನಗಳಿಗೂ ಇರುವ ವೈಲಕ್ಷಣ್ಯವನ್ನು ಇಲ್ಲಿ ತೋರಿಸಲಾಗಿತ್ತು. ಇಂತಹ ಮಹಾಪ್ರಯತ್ನವು ವೇದಾಂತಗ್ರಂಥವಾಙ್ಮಯ ದಲ್ಲೇ ಈವರೆಗೂ ನಡೆದಿರಲಿಲ್ಲ. ಅಂತೂ ಸುಮಾರು 800 ಪುಟಗಳಷ್ಟು ಕೈಬರವಣಿಗೆಯ ಈ ಮಹಾಗ್ರಂಥವು ಶ್ರೀಶ್ರೀಗಳವರ ಲೇಖನಿಯಿಂದ ಹೊರಬಿದ್ದು 1962ನೆಯ ಮೇ ವೇಳೆಗೆ ಮುದ್ರಣಯೋಗ್ಯವಾಗಿ ಸಿದ್ಧವಾಯಿತು. ಶ್ರೀಶ್ರೀಗಳ ವಿಚಾರಸರಣಿಯ ಮೇಲೆ ವಿಮರ್ಶಕರು ಮಾಡಿದ ದೂಷಣೆಯು ಇಂಥದ್ದೊಂದು ಉದ್‌ಗ್ರಂಥರಚನೆಗೆ ಕಾರಣವಾಗುವಂತೆ ಜೋಡಿಸಿದ ಭಗವಂತನ ಅಘಟಿತ ಘಟನಾಸಾಮರ್ಥ್ಯವನ್ನು ಏನೆನ್ನಬೇಕು ?

ಶ್ರೀಶ್ರೀಗಳವರು ವಿದ್ವಾಂಸರುಗಳಲ್ಲಿ ಸಮಾಲೋಚನೆಗಾಗಿ ಹೊರಡಿಸಿದ್ದ "ವಿಜ್ಞಪ್ತಿ"ಗೆ ಉತ್ತರರೂಪವಾಗಿ ಬಂದ ಹನ್ನೊಂದು ಜನ ಬೇರೆಬೇರೆಯ ವಿದ್ವಾಂಸರುಗಳ ಲೇಖನಗಳನ್ನು ಕೂಡಿಸಿ ಸ್ವಲ್ಪಮಟ್ಟಿಗೆ ಆಯಾ ಲೇಖನಗಳ ಅಭಿಪ್ರಾಯವನ್ನು ಇಂಗ್ಲಿಷಿನಲ್ಲಿಯೂ ಬರೆದು ವೇದಾಂತವಿದ್ವದ್‌ಗೋಷ್ಠೀ ಎಂಬ ಸಂಸ್ಕೃತ ಪುಸ್ತಕವೊಂದು ; ಆನಂದವಲ್ಲೀ, ಭೃಗುವಲ್ಲಿಗಳ ಮೇಲೆ ಸಂಸ್ಕೃತದಲ್ಲಿ ಬರೆದಿದ್ದ ಭಾಷ್ಯಾರ್ಥವಿಮರ್ಶಿನೀ - ಎಂಬ ವ್ಯಾಖ್ಯಾನ ಸಮೇತವಾದ ಶಾಂಕರಭಾಷ್ಯ ಸಹಿತವಾದ ತೈತ್ತಿರಿಯೋಪನಿಷತ್ತೂ ; ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟವಾಗಿದ್ದ ಗೀತಾಭಾಷ್ಯದ ಪ್ರತಿಗಳು ಮುಗಿದು ಹೋಗಿದ್ದುದರಿಂದ ಅದನ್ನು ತಿದ್ದಿದ ಪುನರ್ಮುದ್ರಣವೂ ; ಪಂಚಪಾದಿಕಾ (ಒಂದನೆಯ ವರ್ಣಕ), ಸರ್ವವ್ಯವಹಾರಾತೀತವಾದ ಪರಮಾರ್ಥ (ಶ್ರೀಗಳವರ ಶಂಕರಸಪ್ತಾಹಕಾಲದ ಉಪನ್ಯಾಸಗಳು) ಶಾಂಕರಭಾಷ್ಯಸಹಿತ ಶ್ರೀಗಳ ಟಿಪ್ಪಣಿಗಳೊಡನೆ ಕಾಠಕೋಪನಿಷತ್-ಎಂಬ ಸಂಸ್ಕೃತಗ್ರಂಥವೂ ಪ್ರಕಟವಾಯಿತು. ಪತ್ರಿಕೆಯ ಮೂಲಕ ಶಂಕರ ಭಗವತ್ಪಾದವೃತ್ತಾಂತಸಾರಸರ್ವಸ್ವ ಎಂಬ ಗ್ರಂಥವನ್ನೂ ಶಿವಾನಂದಲಹರೀ ಎಂಬ ಸ್ತೋತ್ರಗ್ರಂಥವನ್ನೂ ಹೊರತರಲಾಯಿತು. 1963ರಲ್ಲಿ ಬ್ರಹ್ಮವಿದ್ಯೆ (ಶ್ರೀ ಶ್ರೀಗಳವರ ಉಪನ್ಯಾಸಗಳು) ಪ್ರಶ್ನೋಪನ್ಯಾಸಮಂಜರಿ ಹೊಸ ಗ್ರಂಥಗಳನ್ನೂ ಪರಿಶುದ್ಧವೇದಾಂತಸಾರ ಗ್ರಂಥದ ಪುನರ್ಮುದ್ರಣ ಮಾಡಿ ಪ್ರಕಟಿಸಲಾಯಿತು.

1964ರ ಚಾತುರ್ಮಾಸ್ಯ ಸಂಕಲ್ಪದಲ್ಲಿ ಶ್ರೀಶ್ರೀಗಳವರು ಮಾಡಿದ ಉಪನ್ಯಾಸಗಳನ್ನೆಲ್ಲ ಸೇರಿಸಿ "ಅಧ್ಯಾತ್ಮವಿದ್ಯೆ" ಎಂಬ ಹೆಸರಿನ ಕನ್ನಡಗ್ರಂಥ ; ಶ್ರೀಶ್ರೀಗಳವರ ಮೇರುಕೃತಿಯಾದ ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ-ಎಂಬ ಸಂಸ್ಕೃತಗ್ರಂಥವೂ, **'How to Recognize the Method of Vedanta'** ಎಂಬ ಇಂಗ್ಲಿಷು ಗ್ರಂಥವೂ, ಶುದ್ಧಶಾಂಕರಪ್ರಕ್ರಿಯಾಭಾಸ್ಕರದ ಮೂರು ಭಾಗಗಳು, ಸೂತ್ರಭಾಷ್ಯಾರ್ಥತತ್ತ್ವವಿವೇಚನೀ ಜಿಜ್ಞಾಸಾಧಿಕರಣ ಎಂಬ ಸಂಸ್ಕೃತ ಗ್ರಂಥಗಳೂ, ಅಧ್ಯಾಸಭಾಷ್ಯಾರ್ಥವಿಮರ್ಶೆ ಎಂಬ ಕನ್ನಡಗ್ರಂಥವೂ, ವಾಗ್ದೇವೀಸ್ತೋತ್ರ, ತತ್ತ್ವಸಮಾಸಗಳನ್ನೂ ಪುನರ್ಮುದ್ರಣ ಮಾಡಿಸಿ ಪ್ರಕಟಿಸಲಾಯಿತು.

ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಪೂಜ್ಯರೂ ಗುರುಸ್ಥಾನೀಯರೂ ಆಗಿದ್ದ ದಿ. ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ **"Vedanta or Science of Reality"** ಇಂಗ್ಲಿಷ್ ಗ್ರಂಥದ ಪ್ರತಿಗಳೆಲ್ಲ ಬಹಳ ಹಿಂದೆಯೇ ಮಾರಾಟವಾಗಿ ಮುಗಿದಿದ್ದು ವೇದಾಂತವಿಚಾರ ರಸಿಕರನೇಕರಿಗೆ ಈ ಪುಸ್ತಕವು ದುರ್ಲಭವಾಗಿತ್ತು. ಈ

ವೇಳೆಗೆ ಶ್ರೀ ಎಸ್.ವಿ. ಗಣಪತಿ, (ದಿ. ಅಯ್ಯರರ ಅಳಿಯಂದಿರು) ಮದ್ರಾಸ್ ಎಂಬು ವರು ಈ ಪುಸ್ತಕವನ್ನು ಶೋಧಿಸಿ, ಸಂಸ್ಕರಿಸಿ ಪುನರ್ಮುದ್ರಣಕ್ಕೆ ಶ್ರೀಶ್ರೀಗಳವರನ್ನು ಕೇಳಿಕೊಂಡಿದ್ದರು. ಜೊತೆಗೆ ದಿ. ಅಯ್ಯರರ ಮಕ್ಕಳಿಂದ ಈ ಗ್ರಂಥದ ವಿಶಿಷ್ಟ ಹಕ್ಕುಬಾಧ್ಯತೆಗಳನ್ನೂ ಯಾವ ಪ್ರತಿಫಲವೂ ಇಲ್ಲದೆ ಕಾರ್ಯಾಲಯಕ್ಕೆ ಒಪ್ಪಿಸಿ ಬರೆದುಕೊಂಡಿದ್ದ ಪ್ರತಿಜ್ಞಾಪತ್ರವನ್ನೂ ಕಳುಹಿಸಿ ಕೊಟ್ಟಿದ್ದರು. ಇದರಂತೆ, ಹಾಗೂ ಶ್ರೀ ಕೃ. ಅಯ್ಯರ್‌ರವರ ಮೇಲಿನ ಗೌರವದಿಂದ ಶ್ರೀಶ್ರೀಗಳವರು ಈ ದೊಡ್ಡಗ್ರಂಥದ ಪ್ರಕಟನೆಯನ್ನು ಕಾರ್ಯಾಲಯದವರೇ ಕೈಗೊಳ್ಳಬೇಕೆಂದು ತಾವೇ ಗ್ರಂಥವನ್ನೆಲ್ಲ ಶೋಧಿಸಿ ಸಂಸ್ಕರಿಸಿ ಪುನರ್ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟರು. ದೈವಾನುಗ್ರಹದಿಂದ ಬೆಂಗಳೂರಿನ ಭಕ್ತಮಹಾಜನರು ಶ್ರೀಶ್ರೀಗಳವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಈ ಗ್ರಂಥದ ಬಗ್ಗೆ ಗುರುಗಳಿಂದ ಉಪನ್ಯಾಸಗಳನ್ನು ಏರ್ಪಡಿಸಿ ಮುದ್ರಣಕ್ಕೆ ಅಗತ್ಯವಾದ ಧನಸಹಾಯವನ್ನು ಒದಗಿಸಿಕೊಟ್ಟರು. ಗ್ರಂಥವು ಪೂರ್ಣವಾಗಿ ಅಚ್ಚಾಗಿ 1965ನೆಯ ಜೂನ್ ತಿಂಗಳವೇಳೆಗೆ ಮಾರಾಟಕ್ಕೆ ಸಿದ್ಧವಾಯಿತು.

ಸೂತ್ರಭಾಷ್ಯಾರ್ಥತತ್ತ್ವವಿವೇಚನೀ ತತ್ರ ಜನ್ಮಾದ್ಯಧಿ ಕರಣಮ್ ಎಂಬ ಸಂಸ್ಕೃತಗ್ರಂಥವೂ **'Suddha Sankara Prakriya Bhaskara, I Part'** ಎಂಬ ಇಂಗ್ಲಿಷು ಪುಸ್ತಕವೂ, ಈಶಾವಾಸ್ಯೋಪನಿಷತ್ತು (ಶಾಂಕರಭಾಷ್ಯ ಮೂಲ ಅನುವಾದ ಸಹಿತ) ಎಂಬ ಕನ್ನಡಪುಸ್ತಕವೂ 1965ರಲ್ಲಿ ಪ್ರಕಟವಾದವು.

1966ನೆಯ ವರ್ಷದಲ್ಲಿ ಗೀತಾಶಾಸ್ತ್ರಾರ್ಥ ವಿವೇಕಃ ಮತ್ತು ಪಂಚಪಾದಿ-ಕಾಪ್ರಸ್ಥಾನಮ್ ಎಂಬ ಸಂಸ್ಕೃತಗ್ರಂಥಗಳೂ ಸವಾರ್ತಿಕಪಂಚೀಕರಣ, ಪರಮಾರ್ಥಚಿಂತಾಮಣಿ, ಸಂಸ್ಕೃತಭಾಷಾಭ್ಯಾಸ-1ನೆಯ ಭಾಗ ಈ ಕನ್ನಡ ಗ್ರಂಥಗಳ ಹೊಸ ಸಂಸ್ಕರಣಗಳೂ ಹೊರಕ್ಕೆ ಬಂದವು. 1966ರ ದಾವಣಗೆರೆಯ ಶಂಕರ ಸಪ್ತಾಹದ ಉಪನ್ಯಾಸಗಳನ್ನು "ಶಾಂಕರವೇದಾಂತದ ಮೂಲತತ್ತ್ವಗಳು" ಎಂಬ ಹೆಸರಿನಿಂದ ಕನ್ನಡಗ್ರಂಥರೂಪವಾಗಿ ಪ್ರಕಟಿಸಲಾಯಿತು.

ಭಾರತಸರಕಾರದವರ ಪ್ರೋತ್ಸಾಹ : ಶ್ರೀಶ್ರೀಗಳವರು ವಿಶ್ವಭಾರತ-ಪ್ರವಾಸದಿಂದ ಹಿಂತಿರುಗಿದ ಬಳಿಕ ಭಾರತ ಸರ್ಕಾರದವರಿಂದ ಬಂದ ಪತ್ರದಲ್ಲಿ ಶ್ರೀಗಳವರ ಮೇರುಕೃತಿಯಾದ 'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ' ಗ್ರಂಥವನ್ನು ದೇಶದ ಮುಖ್ಯಭಾಗಗಳಲ್ಲಿರುವ ಕೆಲವು ವಿದ್ಯಾಸಂಸ್ಥೆಗಳಿಗೆ ಕೊಳ್ಳಲು ಒಪ್ಪಿರುವ ದಾಗಿಯೂ ಒಂದುನೂರು ಪ್ರತಿಗಳನ್ನು ಸಿದ್ಧಗೊಳಿಸಿ ಬೇರೆಬೇರೆ ಸಂಸ್ಥೆಗಳಿಗೆ, ಲೈಬ್ರರಿಗಳಿಗೆ ಪಟ್ಟಿಯಲ್ಲಿರುವ ವಿವರದಂತೆ ಕಳುಹಿಸಿಕೊಟ್ಟು ಒಟ್ಟು ಬಿಲ್‌ನ್ನು

ಸರ್ಕಾರಕ್ಕೆ ರವಾನಿಸಬೇಕೆಂದೂ ತಿಳಿಸಲಾಗಿತ್ತು. ಅದರಂತೆಯೇ ಕಳುಹಿಸಲಾಗಿ, ಹಣವೂ ಪಾವತಿಯಾಯಿತು. ಇದರಿಂದ ಶ್ರೀಗಳ ಅಭಿಪ್ರಾಯವು ಭಾರತದೇಶದ ಮೂಲೆಮೂಲೆಗಳಿಗೂ ತಲುಪಲು ಹೆಚ್ಚಿನ ಸಹಾಯವಾಯಿತು.

**ಅಧ್ಯಾತ್ಮವಿದ್ಯಾನಿಲಯ : 1962ರಿಂದೀಚೆಗೆ** ಹೊಸ ವಿದ್ಯಾರ್ಥಿಗಳು ಯಾರೂ ಸೇರದೆ ಇದ್ದರೂ ಒಬ್ಬನೇ ವಿದ್ಯಾರ್ಥಿಯಾದ ಚಿ. ಕೆ.ಜಿ. ಸುಬ್ರಾಯನಿಗೆ ಪಂಡಿತರು ಅಗತ್ಯವಾದ ವೇದಭಾಗಪ್ರಯೋಗಭಾಗಗಳ, ಹಾಗೂ ಸಾಹಿತ್ಯಪಾಠ ಗಳನ್ನೂ ನಡೆಸಿ ವಿದ್ಯಾರ್ಥಿಯ ಭಾಷ್ಯಾಭಿವೃದ್ಧಿಗೆ ನೆರವಾದರು. ಶ್ರೀಶ್ರೀಗಳವರು ವೇದಾಂತ, ಇಂಗ್ಲಿಷು, ಗಣಿತ ಮುಂತಾದ ಪಾಠಗಳನ್ನು ಹೇಳುತ್ತಿದ್ದರು. 1964ರ ಕೊನೆಯವೇಳೆಗೆ ಗೀತಾಭಾಷ್ಯ ಪೂರ್ತಿ ಮುಗಿದು ತೈತ್ತಿರೀಯಭಾಷ್ಯ (ಆನಂದ ವಲ್ಲೀಭಾಷ್ಯಾರ್ಥವಿಮರ್ಶಿನೀ ಸಹಿತ) ಪಾಠವು ನಡೆಯುತ್ತಿತ್ತು.

**ನೂತನವಿದ್ಯಾರ್ಥಿಗಳು : 1965ನೆಯ** ಡಿಸೆಂಬರ್ ಸುಮಾರಿನಲ್ಲಿ ಶ್ರೀ ವಿ.ಎನ್. ಕೇಶವಮೂರ್ತಿ ಎಂಬ (ಇಂಗ್ಲಿಷ್ ಬಲ್ಲ ಗ್ರಾಜುಯೇಟ್) ಅಧ್ಯಾತ್ಮ ಜಿಜ್ಞಾಸುಗಳೊಬ್ಬರು ಕಾರ್ಯಾಲಯಕ್ಕೆ ಬಂದರು. ಶ್ರೀ ಚಿದಾನಂದರೆಂಬ ಸಂನ್ಯಾಸಿ ಗಳೊಬ್ಬರೂ ಸೇರಿದರು. ಆದ್ದರಿಂದ ಶ್ರೀಶ್ರೀಗಳವರು ಹಳೆಯ ವಿದ್ಯಾರ್ಥಿಯನ್ನೂ ಸೇರಿಸಿಕೊಂಡು ಇವರುಗಳಿಗೆ ವಿಶೇಷ ಪಾಠ ಪ್ರವಚನಗಳನ್ನು ನಡೆಯಿಸಲಾರಂಭಿಸಿ ದರು. ಗೀತಾ ಭಾಷ್ಯಪಾಠವನ್ನು ಎಲ್ಲರಿಗೂ ಹೇಳುತ್ತಿದ್ದರಲ್ಲದೆ ಶಾಂಕರವೇದಾಂತದ ಮೂಲತತ್ತ್ವಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಮಾತ್ರ ಉಪನ್ಯಾಸಗಳನ್ನು ಕೊಡು ತ್ತಿದ್ದರು. ಬಹಳ ಉತ್ಸಾಹದಿಂದ ಈ ಪಾಠಗಳು ಮುಂದುವರೆದು ಸದ್ಯದಲ್ಲೇ ಬ್ರಹ್ಮಸೂತ್ರಭಾಷ್ಯದ ಮೇಲೆ ಉಪನ್ಯಾಸಗಳು ಪ್ರಾರಂಭವಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ಶ್ರೀ ಚಿದಾನಂದರು ತಮ್ಮ ಸ್ವಸ್ಥಳಕ್ಕೆ ಹಿಂತಿರುಗಿಬಿಟ್ಟರು. ಶ್ರೀಗಳವರೂ ಸಹ ದಾವಣಗೆರೆಗೆ ಪ್ರವಾಸಕ್ಕೆ ಹೊರಟರಾದ್ದರಿಂದ ಈ ಪ್ರಯತ್ನವು ಅಷ್ಟಕ್ಕೇ ನಿಂತಿತು. ಮತ್ತೆ ಈ ಸನ್ನಿವೇಶವು ಕೂಡಲಿಲ್ಲವಾದ್ದರಿಂದ ಪಾಠಗಳು ಹಿಂದಿನ ದಾರಿಯನ್ನೇ ಹಿಡಿದು ನಡೆಯಲಾರಂಭಿಸಿದವು. ಒಬ್ಬನೇ ವಿದ್ಯಾರ್ಥಿಯು ಉಳಿದು ಕೊಂಡನು. ಅವನಿಗೆ ಗೊತ್ತಾಗಿದ್ದ ಪಾಠಗಳು ಮಾತ್ರ ಮುಂದುವರೆದವು. ಬಾಲ್ಯ ಪಾಠದ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಾಠಗಳಾಗುತ್ತಿದ್ದವು. ಬ್ರಹ್ಮವೈವರ್ತ ಪುರಾಣದ ನಂತರ **20.10.61**ರಿಂದ ಪದ್ಮಪುರಾಣ, **10.3.64** ರಿಂದ ಶಿವಮಹಾಪುರಾಣ, **28.3.66**ರಿಂದ ಬ್ರಹ್ಮಾಂಡ ಪುರಾಣಗಳ ಶ್ರವಣವಾಯಿತು.

**ಅಧ್ಯಾತ್ಮಪ್ರಕಾಶಪತ್ರಿಕೆ : ಮಹಾಪೋಷಕರು :** ಪತ್ರಿಕೆಗೆ ಯಾವ ಶಾಶ್ವತ ನಿಧಿಯೂ ಇಲ್ಲದುದನ್ನು ಮನದಂದುಕೊಂಡು 101 ರೂ.ಗಳು ಮತ್ತು ಅದಕ್ಕಿಂತ

ಹೆಚ್ಚಿಗೆ ಅವರ ಇಚ್ಛಾನುಸಾರ ಮೊಬಲಗನ್ನು ಪಾವತಿಮಾಡುವವರನ್ನು "ಮಹಾ ಪೋಷಕ"ರೆಂದು ಪರಿಗಣಿಸಿ ಅವರಿಗೆ ಆಜೀವವಾಗಿ ಪತ್ರಿಕೆಯನ್ನು ಕಳುಹಿಸಲಾಗುವದೆಂದೂ ಪತ್ರಿಕೆಯಲ್ಲಿ ಮಹಾಪೋಷಕರ ಹೆಸರನ್ನು ಪ್ರತಿತಿಂಗಳೂ ಪ್ರಕಟಿಸಲಾಗುವದೆಂದೂ ಬಿನ್ನವಿಸಿಕೊಳ್ಳಲಾಯಿತು. ಇದಕ್ಕೆ ಪ್ರತಿಫಲವಾಗಿ 1961ನೆಯ ಡಿಸೆಂಬರ್ ವೇಳೆಗೆ ಐದುಜನ ಮಹಾಪೋಷಕರು, 1973ರ ವೇಳೆಗೆ ಈ 175ಕ್ಕೂ ಮೀರಿ ಬೆಳೆದು, 2006ನೇ ಮಾರ್ಚ್‌ರವರೆಗೆ 2673 ಮಹಾಪೋಷಕರಿದ್ದಾರೆ.

**ಬೆಲೆ ಏರಿಕೆ :** ಕಾರ್ಯಾಲಯದಿಂದ ಪ್ರಕಟವಾಗುತ್ತಿರುವ ಗ್ರಂಥಗಳ ಮತ್ತು ಮಾಸಪತ್ರಿಕೆಯ ಖರ್ಚುವೆಚ್ಚಗಳು ಕಾಲಪರಿಸ್ಥಿತಿಗೆ ಅನುಗುಣವಾಗಿ ಏರಿಬಿಟ್ಟಿದ್ದರಿಂದ ಸಮಿತಿಯವರ ಸಲಹೆಯಂತೆ 1965ನೆಯ ಮೇ ತಿಂಗಳಿನಿಂದ ಕೆಲವು ಗ್ರಂಥಗಳ ಬೆಲೆಯನ್ನು ಶೇ. 20ರಷ್ಟು ಹೆಚ್ಚಿಸಲಾಯಿತು. ಮಾಸಪತ್ರಿಕೆಯ ಚಂದಾ ಮೊಬಲಗನ್ನು 3-50 ರೂ. ಗಳಿಂದ 4 ರೂ. ಗಳಿಗೆ ಏರಿಸಿ ಪೋಷಕರಿಗೆ 6 ರೂ. ಎಂದು ಗೊತ್ತು ಮಾಡಲಾಯಿತು. ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಗೆ ಈವರೆಗೂ ಉಪಯೋಗಿಸುತ್ತಿದ್ದ ನ್ಯೂಸ್‌ಪ್ರಿಂಟ್ ಕಾಗದವನ್ನು ರದ್ದುಮಾಡಿ ಉತ್ತಮವಾದ ಗ್ಲೇಜುಪೇಪರನ್ನೇ 1965 ನೆಯ ಸೆಪ್ಟೆಂಬರ್‌ನಿಂದ ಉಪಯೋಗಿಸುವ ವ್ಯವಸ್ಥೆಯಾಯಿತು.

**ಪೂಜಾಮಂದಿರ :** ಶ್ರೀದಿಗ್ವಿಜಯರಾಮದೇವರಿಗೂ ಸೀತಾಂಬೆಯವರಿಗೂ ಒಂದೊಂದು ಬೆಳ್ಳಿಯ ಕಿರೀಟವನ್ನು ಹೊಳೆನರಸೀಪುರದ ಶ್ರೀ ಕೆ.ಆರ್. ವೆಂಕಟಕೃಷ್ಣ ಶೆಟ್ಟರೆಂಬ ಭಕ್ತರು 1962ನೆಯ ಆಕ್ಟೋಬರ್‌ನಲ್ಲಿ ಸಮರ್ಪಿಸಿದರು. ಇದೇ ಮಹನೀಯರು ಸಮರ್ಪಿಸಿದ್ದ ಸ್ವಲ್ಪ ಬೆಳ್ಳಿಯನ್ನು ಸ್ವೀಕರಿಸಿ, 1963ನೆಯ ಏಪ್ರಿಲ್ ತಿಂಗಳಲ್ಲಿ ಮೈಸೂರಿನ ಮಹನೀಯರು ಶ್ರೀ ಆರ್. ರಂಗರಾಯರು ಎಂಬವರ ಸಹಾಯದಿಂದ ಲಕ್ಷ್ಮಣದೇವರಿಗೂ ಹನುಮಂತದೇವರಿಗೂ ಬೆಳ್ಳಿಯ ಕಿರೀಟಗಳನ್ನು ಮಾಡಿಸಿದ್ದರಿಂದ ದೇವರ ಅಲಂಕಾರಕ್ಕೆ ಅನುಕೂಲವಾಯಿತು.

ಬೆಂಗಳೂರಿನ ಇಬ್ಬರು ಭಕ್ತಮಹಾಶಯರ ಸಹಕಾರದಿಂದ ಶ್ರೀದಿಗ್ವಿಜಯ ರಾಮದೇವರಿಗೆ ಹಿತ್ತಾಳೆಯ ಉತ್ತಮನಕಾಶೆಯಿಂದ ಕೂಡಿದ ಪ್ರಭಾವಳಿಯೊಂದನ್ನು ನಾಗಮಂಗಲದ ಶಿಲ್ಪಿ ಶ್ರೀ ಎನ್.ಸಿ. ವೆಂಕಟಾಚಾರ್ಯರು ಸುಂದರವಾಗಿ ತಯಾರಿಸಿ ಕೊಟ್ಟರು. ಶ್ರೀರಾಮದೇವಸ್ಥಾನದ ಮುಂಭಾಗದಲ್ಲಿ ಮೈಸೂರಿನ ಒಬ್ಬ ಮಹಿಳಾ ಭಕ್ತರ ಸಹಾಯದಿಂದ ತುಳಸೀಬೃಂದಾವನವೊಂದನ್ನು ನಿರ್ಮಿಸಲಾಯಿತು. 21 ಅಡಿಗಳ ಎತ್ತರದ ವಿಮಾನ (ಶ್ರೀ ದಿಗ್ವಿಜಯರಾಮದೇವರ ಗರ್ಭಗುಡಿ ಮೇಲಿನ ಗೋಪುರ) ನಿರ್ಮಾಣಕಾರ್ಯವನ್ನು ಮೂರು ಸಾವಿರ ರೂಪಾಯಿಗಳ ಕಂಟ್ರಾಕ್ಟಿಗೆ ಮೈಸೂರಿನ

ಸುಪ್ರಸಿದ್ಧ ಶಿಲ್ಪಿಗಳಾದ ಶ್ರೀ ಎಂ. ಪುಟ್ಟಯ್ಯನವರು 1966ನೆಯ ಜುಲೈ ವೇಳೆಗೆ ಪೂರ್ಣಗೊಳಿಸಿದರು. ಇವೆಲ್ಲವುಗಳಿಂದ ದೇವಸ್ಥಾನಕ್ಕೆ ಒಂದು ವಿಶೇಷ ಕಳೆಯು ಬಂದಿತು.

**ಶ್ರೀಶಂಕರ ಚಲಪ್ರತಿಷ್ಠಾಮಹೋತ್ಸವ :** ಶ್ರೀಶ್ರೀಗಳವರ ವಿಶ್ವಭಾರತ ಪ್ರವಾಸಕಾಲದಲ್ಲಿ ಬೆಂಗಳೂರಿನ ಭಕ್ತ ಶ್ರೀ ನಿಖಿಲಾನಂದಗುಪ್ತರು ಶ್ರೀಶಂಕರರ ಅಮೃತಶಿಲಾಮೂರ್ತಿಯನ್ನು (ಬಹಳ ಚಿಕ್ಕದು) ಕೊಂಡು ಶ್ರೀಶ್ರೀಗಳವರಿಗೆ ಅರ್ಪಿಸಿದ್ದರು. ತಾ. 17-4-1967ರಂದು ಶ್ರೀರಾಮದೇವಸ್ಥಾನದ ಆವರಣ ದಲ್ಲಿಯೇ ಚಲಪ್ರತಿಷ್ಠೆಯನ್ನು ನೆರವೇರಿಸಲಾಯಿತು. ಅಂದಿನಿಂದ ಶ್ರೀಶಂಕರರ ಪೂಜೆಯು ನಡೆಯುತ್ತಾ ಬಂದಿದೆ.

**ಪ್ರೈವೇಟ್ ಟ್ರಸ್ಟ್ :** ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಕೆಲಸಮಾಡುತ್ತಿತ್ತು. 1948ರಲ್ಲಿ ಶ್ರೀಶ್ರೀಗಳವರು ಸಂನ್ಯಾಸವನ್ನು ಸ್ವೀಕರಿಸಿದನಂತರ ಅವರೇ ರಚಿಸಿದ ಕಾರ್ಯಕಾರಿ ಸಮಿತಿಯ ಆಡಳಿತಕ್ಕೆ ಒಳಪಟ್ಟು ಕೆಲಸಮಾಡಿಕೊಂಡುಬಂದಿತು. 1965ನೆಯ ವರ್ಷದ ವೇಳೆಗೆ ಸಂಸ್ಥೆಯ ಆಸ್ತಿಗಳೂ ಜವಾಬ್ದಾರಿಯೂ ಕೆಲಸಗಳೂ ಸರ್ವ ತೋಮುಖವಾಗಿ ಅಭಿವೃದ್ಧಿಯಾದುದರಿಂದ ಇದರ ರಕ್ಷಣೆಗೆ ಕಾರ್ಯಕಾರಿ-ಸಮಿತಿಗೆ ಮೇಲ್ಪಟ್ಟು ಒಂದು ಟ್ರಸ್ಟ್ ಇರುವದು ಅವಶ್ಯವೆಂದು ಕಂಡುಬಂದಿತು. ಕಾರ್ಯಾಲಯದ ಕೆಲವು ಅಭಿಮಾನಿಗಳು ಈ ವಿಷಯವನ್ನು ಶ್ರೀಶ್ರೀಗಳವರಲ್ಲಿ ವಿಜ್ಞಾಪಿಸಿದರು. ಆದರಂತೆ ಶ್ರೀಶ್ರೀಗಳವರು ಸದ್ಯಕ್ಕೆ ಏಳು ಜನ ಟ್ರಸ್ಟಿಗಳುಳ್ಳ ಒಂದು ಮಂಡಳಿಯನ್ನು ನಿರ್ಮಿಸಿ ಕಾರ್ಯಾಲಯದ ವಿಶಿಷ್ಟ ಆಡಳಿತವೂ ಸಮಸ್ತ ಹಕ್ಕುಬಾಧ್ಯತೆಗಳೂ, ಆಸ್ತಿಜವಾಬ್ದಾರಿಗಳ ಸಮೇತ ಪ್ರೈವೇಟ್ ಟ್ರಸ್ಟ್ ಸಮಿತಿಯ ಅಧೀನದಲ್ಲಿರತಕ್ಕದ್ದೆಂದೂ ಈಗಿನ ಕಾರ್ಯಕಾರಿಸಮಿತಿಯು ಅಸ್ತಿತ್ವದಲ್ಲಿದ್ದು-ಕೊಂಡು ಟ್ರಸ್ಟ್‌ಗೆ ಅಧೀನವಾಗಿ ಕೆಲಸಮಾಡತಕ್ಕದ್ದೆಂದೂ, ಟ್ರಸ್ಟಿಗಳ ಕರ್ತವ್ಯವನ್ನೂ, ಘೋಷಿಸಿದರು. ಆದರಂತೆ ನ್ಯಾಸಪತ್ರ (ಟ್ರಸ್ಟ್ ಡೀಡ್)ವನ್ನು ಬರೆದು ತಾ. 17-2-65ರಂದು ರಿಜಿಸ್ಟರು ಮಾಡಿಸಲಾಯಿತು. ಅನಂತರ ತಾ. 21-3-65 ಮತ್ತು 10-7-65ರಲ್ಲಿ ನಡೆದ ಮೀಟಿಂಗ್‌ನಲ್ಲಿ ಟ್ರಸ್ಟ್‌ಕಮಿಟಿಯವರು ತಮ್ಮ ಕೆಲಸಕಾರ್ಯಗಳಿಗೆ ಸಹಾಯಕವಾದ ನಿಯಮನಿಬಂಧನೆಗಳನ್ನು ಏರ್ಪಡಿಸಿ ಕೊಂಡು ಕಾರ್ಯಕಾರಿಸಮಿತಿಯವರಿಂದ ವಿಶಿಷ್ಟ ಅಧಿಕಾರವನ್ನೂ ವಹಿಸಿಕೊಂಡರು; ಮತ್ತೆ ಕಾರ್ಯಕಾರಿಸಮಿತಿಯವರಿಗೇ ಆಡಳಿತವನ್ನೂ ಮುಂದುವರಿಸುವ ಅಧಿಕಾರ ವನ್ನು ಕೊಟ್ಟರು. ಟ್ರಸ್ಟ್ ಕಮಿಟಿಗೆ ವೇ. ವೇದಾಂತಶಿರೋಮಣಿ ಎಸ್. ವಿಠಲ ಶಾಸ್ತ್ರಿ

ಗಳು ಅಧ್ಯಕ್ಷರಾಗಿಯೂ, ಅಡ್ವೋಕೇಟ್ ಎ. ವೆಂಕಟೇಶಯ್ಯ, ಮೈಸೂರು ಇವರು ಉಪಾಧ್ಯಕ್ಷರಾಗಿಯೂ ಡಾಕ್ಟರ್ ಎಸ್. ಸದಾಶಿವರಾವ್, ಹೊಳೆನರಸೀಪುರ ಇವರು ಕನ್‌ವೀನರಾಗಿಯೂ ಚುನಾಯಿತರಾದರು. ಈಚೆಗೆ ಇದು 23.9.90 ರಿಂದ ಪಬ್ಲಿಕ್ ಛಾರಿಟಬಲ್ ಟ್ರಸ್ಟ್ ಆಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

**ಉಳಿದ ಚಟುವಟಿಕೆಗಳು :** 1963ನೆಯ ವರ್ಷದಲ್ಲಿ ಮುದ್ರಣಾಲಯಕ್ಕೆ ಅಗತ್ಯವಾದ ಕೆಲವು ಸಾಮಾನುಗಳನ್ನು ಕೊಳ್ಳಲಾಯಿತು. ಪುಸ್ತಕಗಳ ಉಗ್ರಾಣಕ್ಕೆ ಕಬ್ಬಿಣದ ರ್‍ಯಾಕುಗಳನ್ನು ತರಿಸಲಾಯಿತು. ಶ್ರೀ ಡಿ. ವೆಂಕಟೇಶಯ್ಯ, ಆಕೌಂಟೆಂಟರಿಂದ 1957-58 ರಿಂದ 62-63ರವರೆಗಿನ ಐದು ವರ್ಷಗಳ ಸಿದ್ಧಗೊಳಿಸಿದ ಲೆಕ್ಕಗಳನ್ನೆಲ್ಲ ಬೆಂಗಳೂರಿನಲ್ಲಿರುವ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಸೀತಾರಾಮಯ್ಯನವರಿಂದ 1963ನೆಯ ನವೆಂಬರ್‌ನಲ್ಲಿ ಆಡಿಟ್ ಮಾಡಿಸಿ ಸರ್ಟಿಫಿಕೇಟು ಪಡೆಯಲಾಯಿತು.

**ಸಂದರ್ಶಕರು :** (ಅ) 1965ರಲ್ಲಿ ಶ್ರೀಶ್ರೀಗಳವರು ಮೈಸೂರಿನ ಅನಾಥಾಲಯದಲ್ಲಿ ಚಾತುರ್ಮಾಸ್ಯ ಸಂಕಲ್ಪದಲ್ಲಿದ್ದಾಗ ಮೈಸೂರಿನಲ್ಲಿ ಗೀತಾಜ್ಞಾನಯಜ್ಞವನ್ನು ನಡೆಯಿಸುತ್ತಿದ್ದ ಪೂಜ್ಯ ಚಿನ್ಮಯಾನಂದ ಸ್ವಾಮಿಗಳು ಅನಾಥಾಲಯಕ್ಕೆ ಬಂದು ಸ್ವಾಮಿಗಳೊಡನೆ ವೇದಾಂತ ವಿಷಯಗಳನ್ನು ಚರ್ಚಿಸಿ ಸಂತೋಷಪಟ್ಟರು. ಕೇರಳದ ಪರ್ಲಿಕಾಡ್ ಜ್ಞಾನಾಶ್ರಮದ ಶ್ರೀ ಪೂರ್ಣಾನಂದ ತೀರ್ಥಜೀರವರೂ, ರಿಟೈರ್ಡ್, ಕರ್ನಾಟಕ ಹೈಕೋರ್ಟ್ ಜಸ್ಟಿಸ್ ಟಿ.ಎನ್. ಮಲ್ಲಪ್ಪನವರೂ ಶ್ರೀಶ್ರೀಗಳವರ ಸಂದರ್ಶನವನ್ನು ಪಡೆದರು. (ಆ) ಶ್ರೀ ಕುಪ್ಪಳ್ಳಿ ಮಂಜೇಗೌಡರೆಂಬ ಭಕ್ತಮಹಾಶಯರು ತಾ. 1-6-66 ಮತ್ತು 2-6-66ರಂದು ಶ್ರೀರಾಮದೇವರ ಸನ್ನಿಧಿಯಲ್ಲಿ ಲಕ್ಷಾರ್ಚನೆ, ಸೀತಾಕಲ್ಯಾಣ ಮಹೋತ್ಸವ, ರಾಮತಾರಕಮಂತ್ರಹವನ ಮುಂತಾದ ಸೇವೆಗಳನ್ನು ನಡೆಯಿಸಿದರು. (ಇ) ಪುಸ್ತಕಗಳ ಉಗ್ರಾಣಕ್ಕೆ ಕೆಲವು ಕಬ್ಬಿಣದ ರ್‍ಯಾಕುಗಳನ್ನು ಕೊಳ್ಳಲಾಯಿತು. (ಈ) ಶ್ರೀ ದೇವರಾಯಕುಲಕರ್ಣಿಯವರು ಬೆಂಗಳೂರು ವಿಶ್ವೇಶ್ವರಪುರದ ಪರಮಾರ್ಥ ವಿಚಾರಸಂಘದ ಸದಸ್ಯರೊಡನೆ 24-7-66ರಂದು ಬಂದು ಕಾರ್ಯಾಲಯಕ್ಕೆ ತಮ್ಮ ಕೃತಿಯಾದ 'ಶಂಕರದರ್ಶನ' ಗ್ರಂಥವನ್ನು ವಿಶಿಷ್ಟಹಕ್ಕುಬಾಧ್ಯತೆಗಳ ಸಮೇತ ಅರ್ಪಿಸಿದರು. ಸಂಘದ ಸದಸ್ಯರು ಗ್ರಂಥದ ಮುದ್ರಣವೆಚ್ಚಕ್ಕಾಗಿ ಯಥೋಚಿತಧನ ಸಹಾಯವನ್ನೂ ನೀಡಿದರು. ಮುಂದೆ ಆ ಗ್ರಂಥವನ್ನು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಾಶಗೊಳಿಸುವ ವ್ಯವಸ್ಥೆಯಾಯಿತು.

# 4. ಮುನ್ನಡೆಯ ಹಾದಿಯಲ್ಲಿ
## (1967-1972)

**ಗುರುಗಳ ಆರೋಗ್ಯ :** 1967ನೆಯ ಶಂಕರ ಸಪ್ತಾಹಕ್ಕೆ ಬೆಂಗಳೂರಿಗೆ ದಯಮಾಡಿಸಿದ್ದ ಗುರುಗಳಿಗೆ ಮೂತ್ರವಿಸರ್ಜನೆ ತೊಂದರೆಗೆ ಶಸ್ತ್ರಚಿಕಿತ್ಸೆಯಾದ ಮೇಲೆ ಗುಣಮುಖರಾಗಿ ಹೊಳೆನರಸೀಪುರಕ್ಕೆ ದಯಮಾಡಿಸಿದಮೇಲೆ ಗುರುಗಳ ಆರೋಗ್ಯವು ಚೆನ್ನಾಗಿ ಸುಧಾರಿಸುತ್ತಾ ಬಂದಿತು. ಶ್ರೀಗಳವರ ಜೀವಮಾನದಲ್ಲೇ ಇಂಥ ದೀರ್ಘವ್ಯಾಧಿಯುಂಟಾಗಿರಲಿಲ್ಲ. ದೇವರ ದಯೆಯಿಂದ ಗುರುಗಳು ಎಲ್ಲ ಸಂಕಟಗಳನ್ನೂ ದಾಟಿ ಗುಣಮುಖರಾಗಿ ಎಂದಿನಂತೆ ಶಿಷ್ಯೋದ್ಧಾರಕ್ಕೆ ಸಿದ್ಧರಾದರು ; ಬರವಣಿಗೆ, ಪಾಠಪ್ರವಚನಗಳು, ಉಪನ್ಯಾಸಗಳು - ಇವುಗಳನ್ನು ಒಂದೊಂದಾಗಿ ಆರಂಭಿಸಿದರು. 1967ನೆಯ ವರ್ಷದ ಶರನ್ನವರಾತ್ರಿಯ ಉತ್ಸವವೂ ಸಾಂಗವಾಗಿ ನಡೆಯಿತು. ಶ್ರೀಶ್ರೀಗಳವರೂ ಉಪನ್ಯಾಸಗಳಲ್ಲಿ ಭಾಗವನ್ನು ವಹಿಸಿದ್ದರು.

**ಅಭಿನಂದನೆ :** 1967ನೆಯ ಮೇನಿಂದ ಅಕ್ಟೋಬರ್‌ವರೆಗಿನ ಆರು ತಿಂಗಳ ಕಾಲ ಶ್ರೀಶ್ರೀಗಳವರು ರುಗ್ಣಾವಸ್ಥೆಯಲ್ಲಿ ಬೆಂಗಳೂರಿನಲ್ಲಿದ್ದಾಗ, ಮತ್ತು ಅವರು ಗುಣಮುಖರಾದಮೇಲೆ ಸಹ ಚಾತುರ್ಮಾಸ್ಯದ ಅವಧಿಯಲ್ಲಿ ಬೆಂಗಳೂರು ಭಕ್ತಮಹಾಜನರು ಬಹಳವಾಗಿ ಸಹಕರಿಸಿ ಶ್ರೀಶ್ರೀಗಳವರ ಸೇವೆಯನ್ನು ಮಾಡಿದರು. ಆಪತ್ಕಾಲದಲ್ಲಿ ಅನೇಕಭಕ್ತರು ಪರಸ್ಥಳಗಳಿಂದಲೂ ಬಂದು ಶ್ರೀಶ್ರೀಗಳವರನ್ನು ವಿಚಾರಿಸಿಕೊಂಡು ಹೋಗುತ್ತಿದ್ದರಲ್ಲದೆ ಧನಸಹಾಯವನ್ನೂ ನೀಡುತ್ತಿದ್ದರು. ಶ್ರೀಶ್ರೀಗಳವರು ಚಿಕಿತ್ಸೆಗಾಗಿ ಸೇರಿದ್ದ "ಬೆಂಗಳೂರು ನರ್ಸಿಂಗ್ ಹೋಮ್" ಎಂಬ ಚಿಕಿತ್ಸಾಲಯದ ಎಲ್ಲಾ ಡಾಕ್ಟರುಗಳೂ ಸಹಚರರೂ ಗುರುಗಳನ್ನು ಬಹಳ ಶ್ರದ್ಧೆಯಿಂದ ನೋಡಿಕೊಂಡು ಚಿಕಿತ್ಸೆ ಉಪಚಾರಗಳನ್ನು ಮಾಡಿದರು. ಒಬ್ಬ ಭಕ್ತಮಹಾಶಯರು ಶ್ರೀಶ್ರೀಗಳವರ ಔಷಧೋಪಚಾರ, ಆಪರೇಷನ್ ಮುಂತಾದ ಆಸ್ಪತ್ರೆಯ ಎಲ್ಲಾ ಖರ್ಚುವೆಚ್ಚಗಳನ್ನೂ (ಆಗ ರೂ. 5,000ಗಳಾಗಿರಬೇಕು) ತಾವೊಬ್ಬರೇ ವಹಿಸಿ ಕೊಂಡು ಸೇವೆ ಸಲ್ಲಿಸಿದರು. ಶ್ರೀಶ್ರೀಗಳವರನ್ನು ಬದುಕಿಸಿದ ಮಹಾಪುಣ್ಯವೇ ಅವರದ್ದಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಮಹನೀಯರು ಎಷ್ಟು ಜನರಿದ್ದಾರು ? ಹೀಗೆ ಸರ್ವಭಕ್ತರ ಸಹಕಾರದಿಂದ ಗುರುಗಳ ಆರೋಗ್ಯವು ಚೆನ್ನಾಗಿ ಸುಧಾರಿಸಿತು. ಆಪತ್ಕಾಲದಲ್ಲಿ ಸಹಾಯಮಾಡಿದ ಈ ಎಲ್ಲಾ ಮಹನೀಯರಿಗೂ ಕಾರ್ಯಾಲಯದ ಕೃತಜ್ಞತಾಪೂರ್ವಕ ಅಭಿನಂದನೆಗಳು ಸಲ್ಲುತ್ತವೆ.

**ಶ್ರೀಶ್ರೀಗಳವರ ಪ್ರವಾಸ :** 1969ನೆಯ ಜೂನ್‌ನಲ್ಲಿ ಶ್ರೀಶ್ರೀಗಳವರು ಶಾಖಾಕಾರ್ಯಾಲಯ ಸ್ಥಾಪನೆಯ ಉದ್ದೇಶದಿಂದ ಬೆಂಗಳೂರಿಗೆ ದಯಮಾಡಿಸಿ

ಕೆಲಕಾಲ ಜಯನಗರದ ಒಂದು ಬಂಗಲೆಯಲ್ಲಿ ತಂಗಿದ್ದರು. ಈ ಅವಧಿಯಲ್ಲಿ ಹೊಸಪೇಟೆಗೆ ತೆರಳಿ ಅಲ್ಲಿಯ ಗೌರೀಪುರಮಠಾಧೀಶರನ್ನು ಸಂದರ್ಶಿಸಿದರು.

ಶಾಖಾಕಾರ್ಯಾಲಯದ ಕಟ್ಟಡನಿಧಿಗೆ ಸಹಾಯವನ್ನು ಕೋರಿದ್ದ ಸಂದರ್ಭದಲ್ಲಿ ತಿಪಟೂರು ಭಕ್ತಮಹಾಜನರು 25-1-70ರಿಂದ ಒಂದು ವಾರಕಾಲ ಶ್ರೀಶ್ರೀಗಳವರಿಂದ "ವೇದಾಂತಸಪ್ತಾಹ"ವನ್ನು ನೆರವೇರಿಸಿ ನೀಡಿದ ಯಥೋಚಿತ ಕಾಣಿಕೆಗಳಿಂದ ಕಟ್ಟಡದ ಕೆಲಸಗಳಿಗೆ ಸಹಾಯವಾಯಿತು.

1971ನೆಯ ನವೆಂಬರ್ ತಿಂಗಳಿನಲ್ಲಿ ಶ್ರೀಶ್ರೀಗಳವರು ಕೊಳ್ಳೇಗಾಲದ ಮಹಾಜನರ ಆಹ್ವಾನವನ್ನು ಅಂಗೀಕರಿಸಿ ಶಿಷ್ಯಪರಿವಾರ ಸಮೇತರಾಗಿ ಮೂರು ದಿನಗಳ ಕಾಲ ಅಲ್ಲಿ ಬಿಡಾರಮಾಡಿ ಶ್ರೀಕನ್ಯಕಾಪರಮೇಶ್ವರಿ ದೇವಾಲಯದ ಛತ್ರದಲ್ಲಿ ಭಕ್ತ ಮಹಾಜನರಿಗೆ ಪ್ರವಚನೋಪದೇಶಾದಿಗಳನ್ನು ಅನುಗ್ರಹಿಸಿದರು. ಶ್ರೀ ದೇವರಾಯ ಕುಲಕರ್ಣಿಯವರೂ, ಕಾರ್ಯಾಲಯದ ಪಂಡಿತರೂ, ಶ್ರೀ ನಿಖಿಲಾನಂದಗುಪ್ತ ದಂಪತಿಗಳೂ ಉಪಸ್ಥಿತರಾಗಿದ್ದರು. ಶ್ರೀಶ್ರೀಗಳವರು ಬರೆದಿರುವ ಗ್ರಂಥಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು, ಮಹಾಜನರು ಗ್ರಂಥಗಳನ್ನೂ ಮಾಸಪತ್ರಿಕೆಯನ್ನೂ ಕೊಂಡು ಪ್ರೋತ್ಸಾಹಿಸಿದರು.

ಶ್ರೀಶ್ರೀಗಳವರು ತುಮಕೂರು ಭಕ್ತಮಹಾಜನರ ಅಪೇಕ್ಷೆಯಂತೆ 1972ನೆಯ ಜನವರಿಯಲ್ಲಿ ತಮ್ಮ ಪರಿವಾರ ಹಾಗೂ ಸಹಾಯಕ ಪಂಡಿತರುಗಳೊಡನೆ ತುಮಕೂರಿಗೆ ದಯಮಾಡಿಸಿ ಶ್ರೀಮತಿ ಸಾವಿತ್ರಮ್ಮನವರ ಕಲ್ಯಾಣಮಂದಿರದಲ್ಲಿ ಬಿಡಾರಮಾಡಿ ಒಂದು ವಾರಕಾಲ 'ವೇದಾಂತ ಸಪ್ತಾಹ'ದ ಅಂಗವಾಗಿ ಭಾಷ್ಯ ಪ್ರವಚನ ಉಪನ್ಯಾಸಾದಿಗಳನ್ನು ನಡೆಯಿಸಿದರು. ಇಲ್ಲಿಯೂ ಶ್ರೀಗಳವರು ಬರೆದಿರುವ ಗ್ರಂಥಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪುರಪ್ರಮುಖರಾದ ಶ್ರೀ ಟಿ. ಅನಂತರಾಮಶೆಟ್ಟರು, ವೇ|| ಶೃಂಗೇರಿ ಸೀತಾರಾಮಭಟ್ಟರು, ವೇ. ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು ಮುಂತಾದವರು ಬಹಳ ಉತ್ಸಾಹದಿಂದ ಜನರನ್ನು ಕೂಡಿಸಿ ಕಾರ್ಯಕ್ರಮಗಳೆಲ್ಲ ಬಹುಯಶಸ್ವಿಯಾಗುವಂತೆ ಮಾಡಿದರು.

ಈ ಹಲವಾರು ವರ್ಷಗಳ ಶ್ರೀಶ್ರೀಗಳವರ ಎಲ್ಲ ಪ್ರವಾಸಗಳ ಪ್ರವಚನ, ಸಪ್ತಾಹಗಳ ಕಾಲದಲ್ಲಿ ಆಯಾ ಊರಿನವರು ಉಪನ್ಯಾಸ, ವೇದಾಂತ ಸಪ್ತಾಹಗಳನ್ನೇರ್ಪಡಿಸಿ ಶ್ರೀಗಳವರಿಗೆ ಆದರಗೌರವಪೂರ್ವಕ ಸತ್ಕಾರ, ಪೂಜಾದಿಗಳನ್ನು ನಡೆಯಿಸಿ, ಕಟ್ಟಡ ನಿಧಿಗೆ, ಗ್ರಂಥಪ್ರಕಟಣೆಗೆ, ಕಾರ್ಯಾಲಯದ ಉತ್ಸವಗಳಿಗೆ, ಅನುಷ್ಠಾನ ಧಾರ್ಮಿಕ

ಕೆಲಸ ಇತ್ಯಾದಿಗಳಿಗೆ ಯಥೋಚಿತ ಕಾಣಿಕೆಗಳನ್ನು ಸಮರ್ಪಿಸಿ ಕೃತಕೃತ್ಯರಾಗಿದ್ದಾರೆ. ಈ ಎಲ್ಲ ಉದಾರಾಶಯರಾದ ಮಹಾಜನಗಳಿಗೂ ಕಾರ್ಯಾಲಯವು ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸಿ, ಶ್ರೀಗಳವರ ಅನುಗ್ರಹದಿಂದ, ದೈವಕೃಪೆಯಿಂದ ಅವರೆಲ್ಲರಿಗೂ, ಅವರ ಸಂಸಾರವರ್ಗಗಳಿಗೆಲ್ಲ ಸುಖ, ಶಾಂತಿ, ಸಮಾಧಾನಗಳು ದೊರಕಿ ಅವರ ಅಧ್ಯಾತ್ಮಸಾಧನೆಯು ಫಲಿತವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

1968 ಕೀಲಕಸಂವತ್ಸರ ಚಾತುರ್ಮಾಸ್ಯ ಸಂಕಲ್ಪವು ಬೆಂಗಳೂರು ನಗರದಲ್ಲಿ ನೆರವೇರಿತು. ಅದಕ್ಕೆ ಸ್ವಲ್ಪ ಮುಂಚೆ ಬೆಂಗಳೂರು ಬಸವನಗುಡಿ ವಾಸವೀ ಧರ್ಮಶಾಲಾ ಹಿಂಭಾಗದಲ್ಲಿ ನೂತನವಾಗಿ ನಿರ್ಮಿತವಾಗಿದ್ದ "ಶ್ರೀ ಜಟಂಗಿ ವೆಂಗನ್ನಶ್ರೇಷ್ಠಿ ರಾಮಲಕ್ಷ್ಮಮ್ಮನವರ ಅಧ್ಯಾತ್ಮ ಮಂದಿರ"ದ ಪ್ರಾರಂಭೋತ್ಸವವನ್ನು ತಾ. 23-6-68ರಂದು ಗುರುಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಭಕ್ತಮಂಡಳಿಯವರು ಗುರುಗಳಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿ ಚಾತುರ್ಮಾಸ್ಯ ಉತ್ಸವಕ್ಕೆ ಆಹ್ವಾನಿಸಿದ್ದರು. ಅದರಂತೆ ಶ್ರೀಶ್ರೀಗಳವರು ಬೆಂಗಳೂರಿಗೆ ದಯಮಾಡಿಸಿ ತಾ. 10-7-68ನೆಯ ಪೂರ್ಣಿಮಾ ಬುಧವಾರ ಚಾತುರ್ಮಾಸ್ಯ ಸಂಕಲ್ಪ ತದಂಗ ವ್ಯಾಸಪೂಜಾದಿಗಳನ್ನು ನೆರವೇರಿಸಿದರು. ತಾ. 6-9-68ರವರೆಗೂ ಶ್ರೀಶ್ರೀಗಳವರು ಅಧ್ಯಾತ್ಮ ಮಂದಿರದಲ್ಲಿಯೇ ತಂಗಿದ್ದು ಪ್ರತಿದಿನವೂ ಬೆಳಗಿನ ವೇಳೆಯಲ್ಲಿ "ಬ್ರಹ್ಮಾತ್ಮವಿದ್ಯೆ" ಎಂಬ ವಿಷಯದಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

1969ನೆಯ ಜೂನ್ ಮಾಹೆಯಲ್ಲಿ ಹೊಸಪೇಟೆಯಿಂದ ಬೆಂಗಳೂರಿಗೆ ಹಿಂದೆ ಬಂದಿದ್ದು ಬಸವನಗುಡಿ ಅಧ್ಯಾತ್ಮಮಂದಿರದಲ್ಲಿ ನೆಲೆಸಿ, ಅಲ್ಲಿಯೇ ಚಾತುರ್ಮಾಸ್ಯ ವನ್ನಾಚರಿಸಿ 29-7-69ರಿಂದ ಪ್ರತಿದಿನ ಬೆಳಗ್ಗೆ ಉಪದೇಶವನ್ನು ಅನುಗ್ರಹಿಸು ತ್ತಿದ್ದರು.

1970ನೆಯ ವರ್ಷದ ಚಾತುರ್ಮಾಸ್ಯಾನುಷ್ಠಾನ, ಭಗವದ್ಗೀತಾಜಯಂತೀ ಬ್ರಹ್ಮಚೈತನ್ಯಮಹಾರಾಜರ ಆರಾಧನೋತ್ಸವಗಳು ಪ್ರಪ್ರಥಮವಾಗಿ ಶಾಖಾ ಕಾರ್ಯಾಲಯದಲ್ಲಿಯೇ ಶ್ರೀಶ್ರೀಗಳವರು ಬಿಡಾರಮಾಡಿದ್ದ 'ಲಕ್ಷ್ಮೀವಾಸಂ' ನಿಲಯದಲ್ಲಿ ಯಶಸ್ವಿಯಾಗಿ ನೆರವೇರಿದವು.

1971ನೆಯ ಚಾತುರ್ಮಾಸ್ಯಸಂಕಲ್ಪವನ್ನು ಶ್ರೀಶ್ರೀಗಳವರು ಬೆಂಗಳೂರು ಶಾಖಾಕಾರ್ಯಾಲಯದಲ್ಲಿಯೇ ನೆರವೇರಿಸಿದರು. ಈ ಸಂದರ್ಭದಲ್ಲಿ ವಿಶೇಷಪ್ರವಚನಾದಿಗಳ ಏರ್ಪಾಡಿರಲಿಲ್ಲವಾದರೂ ಪ್ರತಿ ಗುರುವಾರ ಭಾನುವಾರ-ಗಳಲ್ಲಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು.

**ಶಂಕರ ಸಪ್ತಾಹ 1968**ರಲ್ಲಿ ತರೀಕೆರೆಯಲ್ಲಿ ನಡೆಯಿತು. ಶ್ರೀಗಳು ಬೃಹದಾರಣ್ಯಕ ಮೈತ್ರೇಯೀ ಬ್ರಾಹ್ಮಣದ ಸಾರವನ್ನು ಅಧಿಕರಿಸಿ ಉಪನ್ಯಾಸಗಳನ್ನು ಅನುಗ್ರಹಿಸುತ್ತಿದ್ದರು. ಶಾನುಭೋಗರಾದ ಶ್ರೀ ಕೆ. ಶ್ರೀನಿವಾಸಯ್ಯನವರು ಮಹಾಜನರ ಸಹಕಾರದಿಂದ ಉತ್ಸವದ ಸಕಲ ಏರ್ಪಾಡುಗಳನ್ನೂ ವ್ಯವಸ್ಥಿತವಾಗಿ ಮಾಡಿದ್ದರು.

**1969**ರ ಶಂಕರಸಪ್ತಾಹವು ಮೈಸೂರಿನಲ್ಲಿ ವೇ|| ಬ್ರ|| ಶ್ರೀ ಎಸ್. ವಿಠಲ ಶಾಸ್ತ್ರಿಗಳವರ ನೂತನಗೃಹದ ಆವರಣದಲ್ಲಿಯೇ ನೆರವೇರಿತು. ಶ್ರೀಶ್ರೀಗಳವರು "ಶ್ರೀಶಂಕರಭಗವತ್ಪಾದರವರ ಮತದಂತೆ ವೇದಾಂತದ ಮುಖ್ಯಪ್ರಮೇಯಗಳು" ಎಂಬ ವಿಷಯವನ್ನು ಕುರಿತು ಉಪದೇಶಗಳನ್ನು ಅನುಗ್ರಹಿಸಿದರು. ಈ ಉಪನ್ಯಾಸಗಳನ್ನು ಇಂಗ್ಲಿಷ್‌ನಲ್ಲಿ **"Shankara's Clarification of Certain Vedantic Concepts"** ಎಂಬ ಗ್ರಂಥವಾಗಿ ಪ್ರಕಟಿಸಲಾಯಿತು.

**1970**ನೆಯ ಶಂಕರಸಪ್ತಾಹ ಮಹೋತ್ಸವವು ಚಿಕ್ಕಮಗಳೂರಿನಲ್ಲಿ ಬಸವನಹಳ್ಳಿ ಶ್ರೀ ರಂಗಣ್ಣನವರ ಛತ್ರದಲ್ಲಿ ವಿಜೃಂಭಣೆಯಿಂದ ನೆರವೇರಿತು. ಮಹಾಜನರು ಶ್ರದ್ಧಾಭಕ್ತಿಗಳಿಂದ ಉತ್ಸವದಲ್ಲಿ ಭಾಗವನ್ನುವಹಿಸಿದ್ದರು. ವಿದ್ವಾಂಸರುಗಳಿಂದ ಪ್ರವಚನಗಳೂ ಶ್ರೀಶ್ರೀಗಳವರಿಂದ ಶಂಕರರ ಅಸಾಧಾರಣೋಪದೇಶಗಳನ್ನು ಕುರಿತ ಉಪನ್ಯಾಸಗಳೂ ನಡೆದವು. ಸ್ಥಳೀಯ ಕಾಫಿ ಪ್ಲಾಂಟರ್ ಶ್ರೀ ಎಸ್. ರಾಮಚಂದ್ರರಾಯರು ಎಲ್ಲ ವ್ಯವಸ್ಥೆಗಳನ್ನೂ ಸಮರ್ಪಕವಾಗಿ ಏರ್ಪಡಿಸಿದ್ದರು.

**1971**ರ ಶಂಕರಸಪ್ತಾಹ ಅರಕಲಗೂಡಿನಲ್ಲಿ ನಡೆಯಿತು. ಶ್ರೀಶ್ರೀಗಳವರು ಉಪಸ್ಥಿತರಿದ್ದರು. ವಿದ್ವಾಂಸರುಗಳು ಪ್ರವಚನಾದಿಗಳಲ್ಲಿ ಭಾಗವನ್ನು ವಹಿಸಿದ್ದರು. ಪರಸ್ಥಳಗಳಿಂದ ಉತ್ಸವಕ್ಕಾಗಿ ಬಂದಿದ್ದ ಭಕ್ತರುಗಳಿಗೆ ಸ್ಥಳೀಯ ಬ್ರಾಹ್ಮಣಸಮಾಜದವರು ಒಂದೊಂದುದಿನ ಒಬ್ಬೊಬ್ಬರ ಮನೆಯಲ್ಲಿ ಆತಿಥ್ಯವನ್ನು ಏರ್ಪಡಿಸಿದ್ದರು. ಅನಂತರ ಗುರುಗಳು ಹೊಳೆನರಸೀಪುರದ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಇತರ ಎಲ್ಲ ಸಪ್ತಾಹಗಳೂ ಕಾರ್ಯಾಲಯದಲ್ಲೇ ನಡೆದುವು.

**ಶರನ್ನವರಾತ್ರಿ : 1969, 71**ರ ಸಪ್ತಾಹಗಳು, ಶ್ರೀಗಳವರ ಸಮ್ಮುಖದಲ್ಲಿ ನಡೆದುವು. **1971**ರ ಉತ್ಸವದ ನಂತರ, ಶ್ರೀಗಳು ಬೆಂಗಳೂರಿಗೆ ದಯಮಾಡಿಸಿದರು. **1968**ರ ರಾಮೋತ್ಸವದಲ್ಲಿ ಶ್ರೀಗಳ ಪೂರ್ವಾಶ್ರಮದ ಮೊಮ್ಮಕ್ಕಳಾದ ಕೆ. ಸಿ. ಅಶ್ವತ್ಥನಾರಾಯಣರಾಯರು ವೇಣುವಾದನ ಕಛೇರಿಯನ್ನು ಮಾಡಿದರು.

**ಭಾಗವತಸಪ್ತಾಹ :** ಶ್ರೀಶ್ರೀಗಳವರ ಭಕ್ತರಲ್ಲೊಬ್ಬರಾದ ಶ್ರೀ ಕುಪ್ಪಳ್ಳಿ ಮಂಜೇಗೌಡರೆಂಬ ಮಹನೀಯರು 1972ನೆಯ ಜನವರಿ ಕೊನೆಯವಾರದಲ್ಲಿ ಹೊಳೆನರಸೀಪುರದ ಪ್ರಧಾನಕಾರ್ಯಾಲಯದಲ್ಲಿಯೇ "ಭಾಗವತಸಪ್ತಾಹ"ವನ್ನು ಏರ್ಪಡಿಸಿ ಗುರುಗಳನ್ನು ಆಹ್ವಾನಿಸಿದರು. ಶ್ರೀಗಳವರು ಸಪರಿವಾರರಾಗಿ ದಯಮಾಡಿಸಿದ್ದರು. ಈ ಸಪ್ತಾಹದ ಅಂಗವಾಗಿ ಶ್ರೀಮದ್ಭಾಗವತಪಾರಾಯಣ, ಶ್ರೀರಾಮದೇವರಿಗೆ ವಿಶೇಷಾಭಿಷೇಕ ಪೂಜಾದಿಗಳು, ಪ್ರತಿದಿನವೂ ಹೋಮ, ಮಧ್ಯಾಹ್ನದ ವೇಳೆಯಲ್ಲಿ ಭಾಗವತ ಕಥಾನುವಾದ, ಭಜನೆ - ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು. ಕೊನೆಯದಿನ ವಿಶೇಷಹೋಮ, ಪೂರ್ಣಾಹುತಿಗಳಾದನಂತರ ಮಹಾಮಂಗಳಾರತಿ, ಬ್ರಾಹ್ಮಣಪೂಜೆ, ದಾನಧರ್ಮ, ಸಂತರ್ಪಣೆಗಳೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು. ವೇ|| ಎಸ್. ವಿಠಲಶಾಸ್ತ್ರಿಗಳೇ ಮುಂತಾದ ಪಂಡಿತರುಗಳೂ ಪರಸ್ಥಳದ ಅನೇಕ ಭಕ್ತಮಹಾಜನರೂ ಭಾಗವನ್ನು ವಹಿಸಿದ್ದರು. ಶ್ರೀ ಮಂಜೇಗೌಡರು ತಮ್ಮ ಪುತ್ರಕಳತ್ರ ಬಂಧುವರ್ಗಸಮೇತರಾಗಿ ಉತ್ಸವದಲ್ಲಿ ಅನುಷ್ಠಾನದ ಸಂಪೂರ್ಣ ಖರ್ಚುವೆಚ್ಚಗಳನ್ನು ವಹಿಸಿಕೊಂಡರು. ಕಾರ್ಯಾಲಯದಲ್ಲಿ ಈ ವಿಜೃಂಭಣೆಯ ಅನುಷ್ಠಾನವು ನಡೆದು ಎಲ್ಲರೂ ಸಂತೋಷಪಟ್ಟರು. ಅನಂತರ ಗುರುಗಳು ಬೆಂಗಳೂರಿಗೆ ದಯಮಾಡಿಸಿದರು.

ಹೊಳೆನರಸೀಪುರ, ಬೆಂಗಳೂರಿನ ಅನುಷ್ಠಾನ, ಸಪ್ತಾಹದಂತಹ ಎಲ್ಲ ಕಾರ್ಯಕ್ರಮಗಳ ಯಶಸ್ಸಿಗೂ ಕಾರಣರಾದ ವಿದ್ವಾಂಸರುಗಳು ಶ್ರದ್ಧಾಸಕ್ತಿಪೂರ್ವಕವಾಗಿ ಪಾಲ್ಗೊಳ್ಳುತ್ತಿದ್ದುದರಿಂದ, ಸಮಾರಂಭಗಳಿಗೆ ಕಳೆಯೂ, ಗೌರವವೂ ಬರುತ್ತಿತ್ತು; ಅವರೇ ಕಾರ್ಯಕ್ರಮಗಳ ಮುಖ್ಯ ಭಾಗವಾಗಿರುತ್ತಿದ್ದರು.

**ಗ್ರಂಥಪ್ರಕಟಣೆ : 1967-68**ರಲ್ಲಿ ಕೇನೋಪನಿಷದ್ಭಾಷ್ಯ, ಭಗವದ್ಗೀತೆಯ ಪ್ರಧಾನೋಪದೇಶಗಳು, ಶಾಂಕರವೇದಾಂತದ ಮೂಲತತ್ತ್ವಗಳು, ಅಪರೋಕ್ಷಾನುಭೂತಿ ಎಂಬ ಕನ್ನಡ ಗ್ರಂಥಗಳು, **Suddha Shankara Prakriya Bhaskara Part II. ; Salient Features of Shankara Vedanta** ಎಂಬ ಎರಡು ಇಂಗ್ಲಿಷು ಗ್ರಂಥಗಳು ಪ್ರಕಟವಾದವು.

**1968**ರಲ್ಲಿ ಕನ್ನಡದಲ್ಲಿ (1) ಗೌಡಪಾದಹೃದಯ (2) ಕಾಠಕೋಪನಿಷತ್ತು - ಶಾಂಕರ ಭಾಷ್ಯಸಮೇತ (ಪುನರ್ಮುದ್ರಣ) ಇಂಗ್ಲಿಷ್‌ನಲ್ಲಿ (3) **Suddha Shankara Prakriya Bhaskara III Part** (4) ಸಂಸ್ಕೃತದಲ್ಲಿ ವಿಶುದ್ಧವೇದಾಂತಸಾರಃ (5) ನೈಷ್ಕರ್ಮ್ಯಸಿದ್ಧಿಃ-ಕ್ಲೇಶಾಪಹಾರಿಣೀಸಹಿತ ಪ್ರಕಟ

ವಾದವು. ಈ ಪೈಕಿ ಕ್ಲೇಶಾಪಹಾರಿಣೀಸಹಿತ ನೈಷ್ಕರ್ಮ್ಯಸಿದ್ಧಿಃ ಶ್ರೀಶಂಕರಭಗವತ್ಪಾದರ ಸಾಕ್ಷಾತ್ ಶಿಷ್ಯರಾದ ಶ್ರೀಸುರೇಶ್ವರಾಚಾರ್ಯರ ಅಮೋಘಗ್ರಂಥವಾಗಿದೆ. ಇದಕ್ಕೆ ಶ್ರೀಶ್ರೀಗಳವರು ತಮ್ಮ ವಿದ್ವತ್ಪೂರ್ಣವಾದ ವ್ಯಾಖ್ಯಾನವನ್ನು ಬರೆದು ಜಿಜ್ಞಾಸುಗಳಿಗೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ.

**1969**ರಲ್ಲಿ ಕನ್ನಡದಲ್ಲಿ 'ಸರ್ವವೇದಾಂತ ಸಿದ್ಧಾಂತಸಾರಸಂಗ್ರಹ' ಪ್ರಕರಣ ಗ್ರಂಥವೂ ಸಂಸ್ಕೃತದಲ್ಲಿ ಶ್ರೀಶ್ರೀಗಳವರ ಕೃತಿಯಾದ 'ವಿಶುದ್ಧವೇದಾಂತಪರಿಭಾಷಾ' ಎಂಬ ಗ್ರಂಥವೂ, ಇಂಗ್ಲಿಷ್‌ನಲ್ಲಿ **"Collected Works of Sri K.A. Krishnaswamy Iyer"** ಎಂಬ ಗ್ರಂಥವೂ ಪ್ರಕಟವಾದವು. *(ಪುನಃ ಈಗ ಎರಡನೆಯಬಾರಿಗೆ ಮುದ್ರಣವಾಗಿ ಕಾರ್ಯಾಲಯದಲ್ಲಿ ದೊರೆಯುತ್ತಿದೆ).*

**1970**ರಲ್ಲಿ ಕನ್ನಡದಲ್ಲಿ ಶ್ರೀಭಾಷ್ಯ (ಜಿಜ್ಞಾಸಾಧಿಕರಣ), ಭಾಗವತ ಸಂಪ್ರದಾಯ, ಶಂಕರದರ್ಶನ, ಶಂಕರ ಸಂಸ್ಮರಣವೆಂಬ ಚಿಕ್ಕಪುಸ್ತಕ, ಸಂಸ್ಕೃತ ಭಾಷೆಯಲ್ಲಿ ಸೂತ್ರಭಾಷ್ಯಾರ್ಥತತ್ತ್ವವಿವೇಚನೀ 3ನೆಯ ಭಾಗ, ಇಂಗ್ಲಿಷಿನಲ್ಲಿ **'Vision of Atman'** ಎಂಬ ಗ್ರಂಥಗಳೂ ಪ್ರಕಟವಾದುವು.

**1971**ರಲ್ಲಿ ಕನ್ನಡದಲ್ಲಿ (1) ಅನುಭವಗಮ್ಯವೇದಾಂತ (ಶ್ರೀಶ್ರೀಗಳವರ ಉಪನ್ಯಾಸಮಾಲೆ), ಇಂಗ್ಲಿಷಿನಲ್ಲಿ (2) **Essays on Vedanta ;** ಮರಾಠಿ ಭಾಷೆಯಲ್ಲಿ (3) ಶಾಂಕರವೇದಾಂತ ಪ್ರಕ್ರಿಯೆ (ಶ್ರೀಶ್ರೀಗಳವರ ಕನ್ನಡಗ್ರಂಥದ ಅನುವಾದ) - ಈ ಗ್ರಂಥಗಳನ್ನು ಮುದ್ರಿಸಿ ಪ್ರಕಾಶಗೊಳಿಸಲಾಯಿತು.

**ಪುರಾಣ ಪ್ರವಚನಗಳು :** ಬ್ರಹ್ಮಾಂಡ ಪುರಾಣವನ್ನು ಪೂರೈಸಿ **8.11.67**ರಿಂದ ಸ್ಕಾಂದ ಮಹಾಪುರಾಣ, **3.4.68**ಕ್ಕೆ ಮುಕ್ತಾಯವಾಯಿತು. ಅನಂತರದ ಪುರಾಣ ಪ್ರವಚನಗಳನ್ನು ಕಾರ್ಯಾಲಯದ ಪಂಡಿತರೇ ನಡೆಸಿದರು.

**ವಿದ್ಯಾಲಯ :** ಬೆಂಗಳೂರು ಶಾಖಾಕಾರ್ಯಾಲಯದಲ್ಲಿ ಪ್ರಾರಂಭಿಸಿದ ನೂತನ ವಿದ್ಯಾನಿಲಯಕ್ಕೆ ಕಲ್ಕತ್ತ ನಗರದಿಂದ, ದಕ್ಷಿಣದೇಶದ ಮದ್ರಾಸ್ ಪ್ರಾಂತದವರೇ ಆಗಿದ್ದ, ಇಂಗ್ಲಿಷ್ ವಿದ್ಯೆಯಲ್ಲಿ ಎಂ.ಕಾಂ., ಎಲ್‌ಎಲ್.ಬಿ., ಪ್ಯಾಸ್ ಮಾಡಿರುವ ಶ್ರೀ ರಾಜಗೋಪಾಲ್ ಎಂಬ ಜಿಜ್ಞಾಸುವು ಆಧ್ಯಾತ್ಮವಿದ್ಯೆಯನ್ನು ಕಲಿಯುವ ಉದ್ದೇಶದಿಂದ ಗುರುಗಳ ಸನ್ನಿಧಿಯನ್ನು ಬಂದುಸೇರಿ ವಿದ್ಯಾಭ್ಯಾಸವನ್ನು ಮಾಡಿದರು. ಗುರುಗಳೇ ಇವರಿಗೆ ಸಂಸ್ಕೃತ, ವೇದಾಂತ ಪಾಠಗಳನ್ನು ಹೇಳಿದರು. ಶ್ರೀಶ್ರೀಗಳವರು ಮುಕ್ತರಾದ ಮೇಲೆ ಒಂದು ವರ್ಷವಿದ್ದು ಉತ್ತರ ಕಾಶಿಗೆ ಹೋದರು.

ಅನಂತರ ಸ್ವತಂತ್ರರಾಗಿ ಬೆಂಗಳೂರಿನಲ್ಲೇ ಇದ್ದಾರೆ. 26 ನವೆಂಬರ್ 2006ದಿಂದ ಕಾರ್ಯಾಲಯದ ಬೆಳಗಿನ ಪ್ರವಚನಗಳನ್ನು, ಸಪ್ತಾಹಗಳನ್ನು ನಡೆಸಿದರು.

**ಅಧ್ಯಾತ್ಮವಿದ್ಯಾಪ್ರಚಾರ :** ಶ್ರೀಶ್ರೀಗಳವರ ಶಿಷ್ಯರಲ್ಲೊಬ್ಬರಾದ ಶ್ರೀ ದೇವರಾಯ ಕುಲಕರ್ಣಿಯವರು ಚಿಕ್ಕಮಗಳೂರು, ಶಿವಮೊಗ್ಗ, ಬೊಂಬಾಯಿ - ಈ ಸ್ಥಳಗಳಲ್ಲಿ ಉಪನ್ಯಾಸಗಳ ಮೂಲಕ ವೇದಾಂತಪ್ರಚಾರವನ್ನು ಮಾಡಿದರು. ಶ್ರೀಯುತರು ವಿಶೇಷವಾಗಿ ಬೊಂಬಾಯಿಯಲ್ಲಿ ಶ್ರೀಚಿತ್ರಾಪುರಮಠದ ಆಶ್ರಮದಲ್ಲಿ ಮರಾಠಿ ಭಾಷೆಯಲ್ಲಿಯೇ ಉಪನ್ಯಾಸಗಳನ್ನು ನಡೆಯಿಸಿ ಕಾರ್ಯಾಲಯದ ಮಾಸ ಪತ್ರಿಕೆ ಹಾಗೂ ಗ್ರಂಥಗಳ ಪ್ರಚಾರಕ್ಕೆ, ಕಾರ್ಯಾಲಯದ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳೂ ಚಿಕ್ಕಮಗಳೂರಿನಲ್ಲಿ ಗೀತಾಸಪ್ತಾಹ ವನ್ನು 1970ನೆಯ ನವೆಂಬರ್‌ನಲ್ಲಿ ನಡೆಸಿ ವೇದಾಂತ ಪ್ರಚಾರಕ್ಕೆ ನೆರವಾದರು.

1971ನೆಯ ಜೂನ್‌ನಲ್ಲಿ ಪಂಡಿತ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ-ಮೂರ್ತಿಗಳು ಚಿಕ್ಕಮಗಳೂರಿನಲ್ಲಿ ಒಂದು ವಾರಕಾಲ ಬೆಳಗಿನ ವೇಳೆಯಲ್ಲಿ ಬೃಹದಾರಣ್ಯಕೋಪನಿಷತ್ತು, ಸಂಜೆವೇಳೆಯಲ್ಲಿ 'ಗೀತೋಕ್ತಭಕ್ತಿ' ಎಂಬ ವಿಷಯ ಗಳಲ್ಲಿ ಪ್ರವಚನಗಳನ್ನು ನಡೆಯಿಸಿದರು. ಆಗ ಶ್ರೀಯುತರು ಬರೆದಿದ್ದ 'ಆತ್ಮಪ್ರತಿ ಬೋಧ' ಪುಸ್ತಕವನ್ನೂ ಪ್ರಕಟಿಸಿ ಬಿಡುಗಡೆ ಮಾಡಲಾಯಿತು. ಪ್ರಕಾಶಕರಾದ ಶ್ರೀ ಎಂ.ಜೆ. ಕೋದಂಡರಾಮಶೆಟ್ಟರು ಈ ಗ್ರಂಥದ 500 ಪ್ರತಿಗಳನ್ನು ಕಾರ್ಯಾಲಯಕ್ಕೆ ಉದಾರವಾಗಿ ಸಮರ್ಪಿಸಿದರು.

**ಸಂನ್ಯಾಸದೀಕ್ಷೆ:** ಸುಮಾರು ಒಂದು ವರ್ಷದಿಂದ ಕಾರ್ಯಾಲಯದಲ್ಲಿಯೇ ಇದ್ದು ಅಧ್ಯಾತ್ಮಸಾಧನ ತತ್ಪರರಾಗಿದ್ದ ವಿ.ಎನ್. ಕೇಶವಮೂರ್ತಿಯವರು, ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಸಮೀಪದ ವಿಠಲಾಪುರ ಗ್ರಾಮದ ಕೌಶಿಕ ಸಂಕೇತಿ ವೇ. ನಾರಾಯಣಾವಧಾನಿಗಳ ಪುತ್ರರು. ಕೇಂದ್ರ ಸರ್ಕಾರದ ಉನ್ನತ ಹುದ್ದೆಯನ್ನು ವೈರಾಗ್ಯದಿಂದ ಬಿಟ್ಟು ಬಂದವರು. ಬೆಂಗಳೂರು ದಕ್ಷಿಣದ ಸೋಮನಹಳ್ಳಿಯಲ್ಲಿದ್ದ ಎರಡು ಎಕರೆ ಖುಷ್ಕಿ ಜಮೀನನ್ನು ಕಾರ್ಯಾಲಯಕ್ಕೆ ಸಮರ್ಪಿಸಿ, ಲೌಕಿಕ ವ್ಯವಹಾರವನ್ನು ಕಳೆದುಕೊಂಡರು. ಶ್ರೀಗಳವರು ಇವರ ಪೂರ್ವೋತ್ತರಗಳನ್ನು ವಿಚಾರಿಸಿ, ಕೆಲವುಕಾಲ ಪರೀಕ್ಷಿಸಿ ಇವರ ಧರ್ಮಪತ್ನಿಯವರಿಂದ ಅನುಮತಿಪಡೆದು ಬಂದ ಮೇಲೆಯೇ, ಸಂನ್ಯಾಸಾಂಗವಾದ ಪೂರ್ವವಿಧಿಗಳನ್ನೆಲ್ಲ ಪೂರೈಸಿದ ಮೇಲೆ, 14.2.68ರಂದು ಪವಿತ್ರ ಹೇಮಾವತಿ ನದೀ ತೀರದಲ್ಲಿ ಬ್ರಾಹ್ಮಣ ಸಮ್ಮುಖದಲ್ಲಿ ಪರಮಹಂಸ ಪರಿವ್ರಾಜ್ಯವನ್ನು ಸ್ವೀಕರಿಸಿದನಂತರ ಶ್ರೀಶ್ರೀಗಳವರು ಇವರಿಗೆ ಯೋಗ

ಪಟ್ಟವನ್ನು, ಉಪದೇಶವನ್ನು ಅನುಗ್ರಹಿಸಿದರು. ಶ್ರೀ ಬ್ರಹ್ಮಾನಂದೇಂದ್ರ ಸರಸ್ವತೀ ಎಂಬ ಹೆಸರನ್ನೂ ಇವರು ಪಡೆದರು. ಕೆಲವರ್ಷಗಳು ಕಾರ್ಯಾಲಯದಲ್ಲಿದ್ದು ಅನಂತರ 14.4.74ರಂದು ಕಾರ್ಯಾಲಯವನ್ನು ತ್ಯಜಿಸಿದರು.

2) ಎನ್.ಎಸ್. ರಂಗಸ್ವಾಮಿಯವರು 1969 ಏಪ್ರಿಲ್‌ನಲ್ಲಿ ಸಾಧಕರಾಗಿ ಕಾರ್ಯಾಲಯವನ್ನು ಸೇರಿ, ಶ್ರೀಗಳವರ ಸನ್ನಿಧಿಯಲ್ಲಿ ಆಧ್ಯಾತ್ಮವಿಚಾರ ಶ್ರವಣ, ಸತ್ಕಾಲಕ್ಷೇಪ, ಜ್ಞಾನ ಸಾಧನಗಳನ್ನು ಮಾಡುತ್ತಿದ್ದರು. ಶ್ರೀಯುತರು ಬೆಂಗಳೂರು ನಗರದಲ್ಲಿರುವ ಶ್ರೀ ಎನ್.ಡಿ. ಸುಬ್ಬರಾಯರ ಮೂರನೆಯ ಮಕ್ಕಳು. ಮೈಸೂರು ವಿಶ್ವವಿದ್ಯಾನಿಲಯದಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿಯನ್ನು ಪಡೆದು ಕೆಲಕಾಲ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಆಮೇಲೆ ಬೆಳಗೊಳದಲ್ಲಿರುವ ಕಾರ್ಖಾನೆಯೊಂದರಲ್ಲಿ ಪರಿಶೋಧನೆಯಲ್ಲಿ ತೊಡಗಿದ್ದರು. 1948-49ನೆಯ ವರ್ಷದಲ್ಲಿ ನಡೆದ ಕೇಂದ್ರ ಸ್ಪರ್ಧಾಪರೀಕ್ಷೆಯಲ್ಲಿ (I.A.S.) ತೇರ್ಗಡೆಹೊಂದಿ 1950ರಿಂದ 1968ನೆಯ ಅಕ್ಟೋಬರ್‌ವರೆಗೆ ಕೇಂದ್ರಸರ್ಕಾರದ ಅಧೀನದಲ್ಲಿ ಕೆಲಸಮಾಡಿ ಆ ತಿಂಗಳಲ್ಲಿ ಕೆಲಸಕ್ಕೆ ರಾಜಿನಾಮೆಕೊಟ್ಟು ಅಧ್ಯಾತ್ಮಮಾರ್ಗಕ್ಕೆ ತಿರುಗಿದರು. ಮುಂದೆ ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಸ್ಥಾಪನೆಯ ಪ್ರಯತ್ನಕ್ಕಾಗಿ ಬೆಂಗಳೂರಿಗೆ ಬಿಜಯಮಾಡಿಸಿದಾಗ ಶ್ರೀಯುತರನ್ನೂ ತಮ್ಮ ಜೊತೆಯಲ್ಲಿ ಕರೆದೊಯ್ದರು. ಕಾರ್ಯಾಲಯದಲ್ಲಿದ್ದಷ್ಟು ಕಾಲವೂ ಶ್ರೀಯುತರು ಕಾರ್ಯಾಲಯದ ಚಟುವಟಿಕೆಗಳಲ್ಲಿ ಸಹಾಯಮಾಡಿದರು. 1970ನೆಯ ಮಾರ್ಚಿ ಕೊನೆಯಲ್ಲಿ ಇವರು ಏಕಾಂತಸಾಧನೆಗಾಗಿ ಉತ್ತರಕಾಶಿಗೆ ಹೋದರು. 1972ನೆಯ ಫೆಬ್ರವರಿ ತಿಂಗಳಲ್ಲಿ ಮತ್ತೆ ಶ್ರೀಶ್ರೀಗಳವರ ಸನ್ನಿಧಿಯನ್ನು ಸೇರಿ ಸಂನ್ಯಾಸಾಶ್ರಮವನ್ನು ದಯಪಾಲಿಸಲು ಪ್ರಾರ್ಥಿಸಿಕೊಂಡಂತೆ ಶ್ರೀಶ್ರೀಗಳವರು ಅನುಗ್ರಹಮಾಡಿದ್ದರಿಂದ 1972ನೆಯ ಏಪ್ರಿಲ್ 8ನೆಯ ತಾರೀಖು ಶನಿವಾರದ ದಿನ ಪವಿತ್ರ ತುಂಗಾತೀರದ ಮತ್ತೂರು ಅಗ್ರಹಾರದಲ್ಲಿ ದೊಡ್ಡ ಶ್ರೋತ್ರೀಯ ಮಂಡಲಿಯ ಸಮ್ಮುಖದಲ್ಲಿ ಸಂನ್ಯಾಸಾಶ್ರಮವನ್ನು ಹೊಂದಿದರು. ಮಾರನೆಯ ದಿನ (9-4-1972 ನೆಯ ಭಾನುವಾರ) ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು ಇವರಿಗೆ ಉಪದೇಶವನ್ನೂ ಸಂಪ್ರದಾಯ ರೀತಿಯಿಂದ ಆತ್ಮಾನಂದೇಂದ್ರ ಸರಸ್ವತೀ ಎಂಬ ಹೆಸರನ್ನೂ ದಯಪಾಲಿಸಿದರು. ಇವರು ಪುನಃ ಉತ್ತರ ಕಾಶಿಗೆ ಹಿಂದಿರುಗಿದರು. 1995ರಿಂದ ಈಚೆಗೆ ಇವರು ಉತ್ತರ ಕಾಶಿಯಿಂದ ಹಿಂದಿರುಗಿ ಮೈಸೂರಿನ ಹೊರವಲಯದ ಬನ್ನೂರು ರಸ್ತೆಯಲ್ಲಿರುವ ಹಲಗಯ್ಯನ ಹುಂಡಿ ಎಂಬಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ಅಧ್ಯಾತ್ಮ ಪ್ರಚಾರವನ್ನು ಮುಂದುವರೆಸಿದ್ದಾರೆ.

**ಪತ್ರಿಕೆ** : ಅಧ್ಯಾತ್ಮಪ್ರಕಾಶಪತ್ರಿಕೆಯ ಖರ್ಚುವೆಚ್ಚಗಳು, ರವಾನೆ ವೆಚ್ಚ - ಇವುಗಳು ಬಹಳವಾಗಿ ಏರಿದ್ದರಿಂದ 1968ನೆಯ ಸೆಪ್ಟೆಂಬರ್‌ನಿಂದ ವಾರ್ಷಿಕ ಚಂದಾವನ್ನು 5 ರೂ.ಗಳಿಗೆ ಏರಿಸಲಾಯಿತು. ಈ ಹಿಂದೆ ಪ್ರಾರಂಭಿಸಿದ್ದ ತ್ರೈವಾರ್ಷಿಕ ಚಂದಾಕ್ರಮವನ್ನೂ ತೆಗೆದುಹಾಕಲಾಯಿತು. ಮಹಾಪೋಷಕರ ಸಂಖ್ಯೆ ಈ ವೇಳೆಗೆ 64ಕ್ಕೆ ಏರಿತ್ತು. ಶ್ರೀ ರಾಮಾನುಜಾಚಾರ್ಯರ ಗ್ರಂಥರತ್ನವಾದ "ಶ್ರೀಭಾಷ್ಯ-ಜಿಜ್ಞಾಸಾಧಿಕರಣ"ವನ್ನು ಸ್ವತಂತ್ರಪುಟಗಳಾಗಿ ಪತ್ರಿಕೆಯಲ್ಲಿ ಪ್ರಕಟಿಸಿತು.

**ಕಟ್ಟಡ** : ಕಾರ್ಯಾಲಯಕ್ಕೆ ಈಚೆಗೆ ಸೇರಿದ್ದ ನೈಋತ್ಯಭಾಗದ ಹೊಸ ಸೈಟನ್ನೂ ಸೇರಿಸಿಕೊಂಡು ಎತ್ತರವಾದ ಕಲ್ಲಿನ ಕಾಂಪೌಂಡನ್ನು ಹಾಕಿಸಿ ಆವರಣವನ್ನೆಲ್ಲ ಭದ್ರಗೊಳಿಸಲಾಯಿತು.

**ಆಗಂತುಕಗೃಹ** : ಶ್ರೀಶ್ರೀಗಳವರು ಚಾತುರ್ಮಾಸ್ಯಕಾಲದಲ್ಲಿ ಬೆಂಗಳೂರಿನಲ್ಲಿ ತಂಗಿದ್ದಾಗ ಶ್ರೀ ಎ.ವಿ. ಕೃಷ್ಣಸ್ವಾಮಿ ಎಂಬ ಭಕ್ತಮಹಾಶಯರೊಬ್ಬರು, ತಾವು ಉದ್ಯೋಗದಿಂದ ನಿವೃತ್ತಿಯಾದಮೇಲೆ ಕಾರ್ಯಾಲಯದಲ್ಲಿಯೇ ಸತ್ಕಾಲಕ್ಷೇಪವನ್ನು ಮಾಡುತ್ತಾ ವಾಸಮಾಡುವ ಸಂಕಲ್ಪವನ್ನು ಮಾಡಿ ಕಾರ್ಯಾಲಯದ ಆವರಣದಲ್ಲಿ ಒಂದು ಆಗಂತುಕರಗೃಹ ಕಟ್ಟಲು ಕಟ್ಟಡಕ್ಕಾಗಿ ರೂ. 5,000ಗಳನ್ನು ಸಮರ್ಪಿಸಿಯೇಬಿಟ್ಟರು. 23-10-69ರಂದು ಹೊಸಕಟ್ಟಡದ ಪ್ರವೇಶೋತ್ಸವವು ಶ್ರೀಶ್ರೀಗಳವರ ಅಮೃತಹಸ್ತದಿಂದ ನೆರವೇರಿತು. ಆದರೆ ದಾನಿಗಳು ಮಾತ್ರ ಒಮ್ಮೆಯೂ ಇಲ್ಲಿ ವಾಸಮಾಡಲಿಲ್ಲ. ಬೇರೆ ಬೇರೆಯ ಜಿಜ್ಞಾಸುಗಳಿಗೆ ಇದು ಉಪಯೋಗವಾಗುತ್ತಿದೆ.

**ಇತರ ಚಟುವಟಿಕೆಗಳು** : ಭಂಡಾರಕ್ಕೆ ಕನ್ನಡ ರಾಮಾಯಣ - ಬೃಹದನುವಾದಚಂದ್ರಿಕಾ ಮುಂತಾದ ಕೆಲವು ಗ್ರಂಥಗಳನ್ನು ಕೊಳ್ಳಲಾಯಿತು. ಅರಸೀಕೆರೆ ತಾ. ಗೊಲ್ಲರಹಳ್ಳಿಯ ಶ್ರೀ ರಾಮಸ್ವಾಮಿಯವರು "ಶಬ್ದಕಲ್ಪದ್ರುಮ" ಮಹಾಗ್ರಂಥದ ಐದು ಸಂಪುಟಗಳನ್ನು ಕಾಣಿಕೆಯಾಗಿ ಒಪ್ಪಿಸಿದರು. 1997ರಲ್ಲಿ ಮೈಸೂರಿನ ಮಹಿಳಾ ಭಕ್ತರೊಬ್ಬರು ಕಾರ್ಯಾಲಯಕ್ಕೆ ಒಂದು ಕರೆಯುವ ಹಸುವನ್ನು ಸಮರ್ಪಿಸಿದರು.

**ಆಪ್ತಕಾರ್ಯದರ್ಶಿ** : ಸಮಿತಿಯವರು ಶ್ರೀ ಕೆ.ಜಿ. ಸುಬ್ರಾಯಶರ್ಮರನ್ನು 1-12-69 ರಿಂದ ಶ್ರೀಶ್ರೀಗಳವರ ಆಪ್ತಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದರು. ಶ್ರೀಗಳವರ ಕಾಲಾನಂತರ ಇವರೇ ಶಾಖಾಕಾರ್ಯಾಲಯದ ಪಂಡಿತರೂ ಕಾರ್ಯದರ್ಶಿಯೂ ಆಗಿ 21.5.01ರ ವರೆಗೆ ಮುಂದುವರೆದರು.

**ಅನುತಾಪ :** (1) ಶ್ರೀಶ್ರೀಗಳವರ ವೇದಾಂತಜೀವನದಲ್ಲಿ ಹೆಚ್ಚಿನ ಪರಿಣಾಮ ವನ್ನು ಬೀರಿದ್ದ ಹಾಗೂ ಕರವೀರಪೀಠಾಧಿಪರಾಗಿದ್ದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳು (ಡಾ. ಕುರ್ತಕೋಟಿ) ತಾ. 29.8.67ರಂದು ನಾಸಿಕದಲ್ಲಿ ಬ್ರಹ್ಮೀ ಭೂತರಾದರು. ಶ್ರೀಗಳವರು ಈ ವೃತ್ತಾಂತವನ್ನು ತಿಳಿದು ಬಹಳ ಪಶ್ಚಾತ್ತಾಪಪಟ್ಟರು. ಜಗದ್ಗುರು ಶ್ರೀ ಕರವೀರ ಪೀಠಶಂಕರಾಚಾರ್ಯರ ಬಗ್ಗೆ ಒಂದು ಚರಮಲೇಖನವನ್ನು ಬರೆದು ಅಧ್ಯಾತ್ಮಪ್ರಕಾಶಪತ್ರಿಕೆಯ 1968ನೆಯ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸಿದರು.

1969ರ ಅವಧಿಯಲ್ಲಿ ಕಾರ್ಯಾಲಯದ ಕಾರ್ಯಕಾರಿ ಸಮಿತಿಯ ಸದಸ್ಯರೂ ಶ್ರೀಶ್ರೀಗಳವರ ಆಪ್ತಶಿಷ್ಯರುಗಳೂ ಆಗಿದ್ದ, ಬಹಳವಾಗಿ ಗುರುಸೇವೆಯನ್ನು ಸಲ್ಲಿಸಿದ ಶ್ರೀ ಡಿ.ಸಿ. ನಂಜಪ್ಪಭಾಗವತರು ಮತ್ತು ಕಾರ್ಯಾಲಯದ ಕಟ್ಟಡಗಳ ನಿರ್ಮಾಣಕ್ಕೆ ಶ್ರಮಿಸಿದ ಶ್ರೀ ಎನ್. ಜನಾರ್ದನಶೆಟ್ಟರು ಎಂಬ ಮಹನೀಯರುಗಳು ನಿಧನರಾದರು. ಇಂಥವರ ನಿಧನವು ಸಂಸ್ಥೆಗೆ ದೊಡ್ಡನಷ್ಟವಾಗಿ ಪರಿಣಮಿಸಿತು.

**ಶಾಖಾಕಾರ್ಯಾಲಯದ ಸ್ಥಾಪನೆಗೆ ಪ್ರಯತ್ನ :** ಶ್ರೀಗಳವರು ಭಕ್ತಮಹಾಜನರ ಇಚ್ಛೆಯಂತೆ ಕಾರ್ಯಾಲಯದ ಶಾಖೆಯನ್ನು ಬೆಂಗಳೂರು ನಗರದಲ್ಲಿ ಪ್ರಾರಂಭಿಸುವ ಉದ್ದೇಶದಿಂದ 15-12-69ರಂದು ಹೊಳೆನರಸೀಪುರ-ದಿಂದ ದಯಮಾಡಿಸಿ ಬೆಂಗಳೂರು ಬಸವನಗುಡಿ ಶ್ರೀಕೃಷ್ಣರಾಜೇಂದ್ರ ರಸ್ತೆಯಲ್ಲಿರುವ 'ಲಕ್ಷ್ಮೀವಾಸಂ' ಎಂಬ ಕಟ್ಟಡದಲ್ಲಿ ಬಿಡಾರಮಾಡಿದರು. 30-12-69ರಂದು ಶಾಖಾಕಾರ್ಯಾಲಯದ ಕಟ್ಟಡನಿರ್ಮಾಣಕ್ಕಾಗಿ ತಾತಾಸಿಲ್ಕ್‌ಫಾರಂನಲ್ಲಿ 388 ಚ.ಗಜ ವಿಸ್ತಾರವುಳ್ಳ ಸೈಟನ್ನು ಹತ್ತುಸಾವಿರ ರೂಪಾಯಿಗಳಿಗೆ ಸಂಸ್ಥೆಯ ಟ್ರಸ್ಟ್‌ಕಮಿಟಿ ಅಧ್ಯಕ್ಷರ ಹೆಸರಿನಲ್ಲಿ ಕೊಳ್ಳಲಾಯಿತು. ಗುರುಗಳು ತಾವಿದ್ದ ಸ್ಥಳದಲ್ಲೇ ಕೆಲವು ಚಟುವಟಿಕೆಗಳನ್ನು ಪ್ರಾರಂಭಿಸಿ ಮಹಾಜನರನ್ನು ಪ್ರೋತ್ಸಾಹಿಸಿದರು. ಶ್ರೀಶ್ರೀಗಳವರು ಬೆಂಗಳೂರಿನಲ್ಲಿ ತಂಗಿದ್ದಾಗ ಜಯನಗರದಲ್ಲಿರುವ ಕಂಟ್ರಾಕ್ಟರ್ ಶ್ರೀ ಎಸ್. ರಾಮರಾಯರೆಂಬವರು ಶಾಖಾಕಾರ್ಯಾಲಯದ ಸ್ಥಾಪನೆಗೆ ನಾಂದಿಯಾಗಿ ಬೆಂಗಳೂರು ದಕ್ಷಿಣ ಹೊಸಕೆರೆಹಳ್ಳಿ ದತ್ತಾತ್ರೇಯ ನಗರ ಬಡಾವಣೆಯಲ್ಲಿ 50'x40' ಅಳತೆಯ ಒಂದು ಸೈಟನ್ನು ದಾನಮಾಡಿದರು. ಹೀಗೆ ಶಾಖಾಕಾರ್ಯಾಲಯವನ್ನು ಸ್ಥಾಪಿಸಲು ಪ್ರೋತ್ಸಾಹವಾಯಿತು.

**ಶಾಖಾಕಾರ್ಯಾಲಯದ ಕಟ್ಟಡ :** ತಾತಾ ಸಿಲ್ಕ್‌ಫಾರಂನಲ್ಲಿ (ಸುಬ್ಬರಾಮಚೆಟ್ಟಿ ಲೇಔಟ್) ಹೊಸದಾಗಿ ಕೊಂಡಿದ್ದ ನಿವೇಶನದಲ್ಲಿ ಶ್ರೀಶ್ರೀಗಳವರ

ವಸತಿಗೆ ಆಗತ್ಯವಾದಷ್ಟು ಕಟ್ಟಡದ ಭಾಗದ ನಿರ್ಮಾಣಕ್ಕೆ ಪ್ರಪ್ರಥಮವಾಗಿ ತಾ. 10-5-70ರಂದು ಗುದ್ದಲಿಪೂಜೆಯನ್ನು ಮಾಡಿ ಪ್ರಾರಂಭಿಸಲಾಯಿತು. ಬೆಂಗಳೂರಿನ ಭಕ್ತಮಹಾಜನಗಳ ಸಹಕಾರದಿಂದ ಈ ಕಟ್ಟಡನಿರ್ಮಾಣವಾಗಿ 1971ನೆಯ ಜನವರಿ ಕೊನೆಯವೇಳೆಗೆ ಸಿದ್ಧವಾಯಿತು.

**ಶಾಖಾಕಾರ್ಯಾಲಯದ ಗೃಹಪ್ರವೇಶೋತ್ಸವ :** ಬೆಂಗಳೂರು ಶಾಖೆಯು ಸ್ಥಾಪಿತವಾದ ಕೇವಲ ಒಂದು ವರ್ಷದ ಅವಧಿಯೊಳಗಾಗಿ ಮಹಾಜನರ ಸಹಕಾರದಿಂದ ಅಧ್ಯಾತ್ಮಪ್ರಕಾಶ ಕಾರ್ಯಾಲಯವು ತನ್ನ ಸ್ವಂತಕಟ್ಟಡವನ್ನು ಹೊಂದುವ ಸುಯೋಗವನ್ನು ಪಡೆಯಿತು. ಶ್ರೀಶ್ರೀಗಳವರ ನಿವಾಸಕ್ಕೆ ಸಿದ್ಧಗೊಳಿಸಲ್ಪಟ್ಟ ಈ ಕಟ್ಟಡದ ಭಾಗಕ್ಕೆ ಮಹಡಿಯನ್ನೂ ನಿರ್ಮಿಸಲಾಯಿತು. ಹೀಗೆ ಸಿದ್ಧವಾದ ಕಟ್ಟಡದ ಪ್ರವೇಶೋತ್ಸವವು ತಾ. 5-2-71ರಂದು ಶ್ರೀಶ್ರೀಗಳವರ ಅಮೃತಹಸ್ತದಿಂದಲೇ ನೆರವೇರಿತು. ಆ ದಿನ ನಡೆದ ಸಭೆಯಲ್ಲಿ ಶ್ರೀಶ್ರೀಗಳವರು ಕಾರ್ಯಾಲಯವು ತನ್ನ ಶಾಖೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದರ ಉದ್ದೇಶವನ್ನೂ ಆವಶ್ಯಕತೆಯನ್ನೂ ವಿವರಿಸಿ ಈ ಶಾಖೆಯು ಚೆನ್ನಾಗಿ ಪುರೋಭಿವೃದ್ಧಿಯನ್ನು ಹೊಂದಿ ಚಿರಕಾಲ ಬಾಳಲೆಂದು ಹರಸಿದರು. ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಈ ಸ್ವಂತ ಕಟ್ಟಡದಲ್ಲಿಯೇ ನೆಲಸಿದ್ದು ತಮ್ಮ ಬರವಣಿಗೆ, ಪಾಠಪ್ರವಚನಗಳು, ಉಪನ್ಯಾಸಗಳು-ಭಜನೆ ಮುಂತಾದ ಚಟುವಟಿಕೆಗಳನ್ನು ಅಲ್ಲಿಯೇ ಮುಂದುವರೆಸಿದರು.

**ಸಪ್ತಾಹ :** 1971ನೆಯ ವರ್ಷದ ರಾಮನವರಾತ್ರಿಯ ಅನುಷ್ಠಾನವನ್ನು ಪ್ರಪ್ರಥಮವಾಗಿ ಶಾಖಾಕಾರ್ಯಾಲಯದ ಸ್ವಂತಕಟ್ಟಡದಲ್ಲಿ ನಡೆಯಿಸಲಾಯಿತು. ಗೀತಾಜಯಂತೀ, ಬ್ರಹ್ಮಚೈತನ್ಯಾರಾಧನೆ ಅನುಷ್ಠಾನಗಳೂ ಶಾಖಾಕಾರ್ಯಾಲಯದಲ್ಲೂ ಪ್ರಧಾನಕಾರ್ಯಾಲಯದಲ್ಲೂ ಬೇರೆಬೇರೆಯಾಗಿ ನೆರವೇರಿದವು. ಪ್ರಧಾನ ಕಾರ್ಯಾಲಯದ ಮುಖ್ಯ ಚಟುವಟಿಕೆಗಳನ್ನೆಲ್ಲ ಶಾಖಾ ಕಾರ್ಯಾಲಯಕ್ಕೂ ವಿಸ್ತರಿಸಿ ಶಾಖೆಯನ್ನು ಪುರೋಭಿವೃದ್ಧಿಯ ಮಾರ್ಗದಲ್ಲಿ ಒಯ್ಯಲಾಯಿತು.

**ಶಾಖಾಕಾರ್ಯಾಲಯದ ಮುನ್ನಡೆ :** 1969ನೆಯ ನವೆಂಬರ್ ಮಾಹೆಯಲ್ಲಿ ಶ್ರೀಶ್ರೀಗಳವರಿಂದ ಪ್ರಾರಂಭಿಸಲ್ಪಟ್ಟ ಶಾಖಾಕಾರ್ಯಾಲಯವು 1972ನೆಯ ಜನವರಿ ಮಾಹೆಯ ವೇಳೆಗೆ ಬಹುತೃಪ್ತಿಕರವಾಗಿ ಮುಂದುವರೆದು ಪುರೋಭಿವೃದ್ಧಿಯನ್ನು ಪಡೆಯಿತು. ಬೆಂಗಳೂರಿನಂಥ ದಿವ್ಯನಗರದಲ್ಲಿ ಶಾಖೆಯು ತನ್ನದೇ ಆದ ಸುಮಾರು ಎಪ್ಪತ್ತು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ಸ್ವಂತಕಟ್ಟಡಗಳನ್ನು ನಿರ್ಮಿಸಿಕೊಂಡಿತ್ತು. ಕಟ್ಟಡಕ್ಕೆ ಬೇಕಾದ ಸಮಸ್ತಸಲಕರಣೆಗಳ

ಸಮೇತ ಪಟ್ಟಣವಾಸದ ಆವಶ್ಯಕತೆಗಳಿಗೆ ತಕ್ಕ ಎಲ್ಲಾ ಸಾಮಗ್ರಿಗಳಿಂದಲೂ ಅದನ್ನು ಸಜ್ಜುಗೊಳಿಸಿ ಪರಿಪೂರ್ಣವಾಗಿ ಮಾಡಲಾಯಿತು. ಪಾಠಪ್ರವಚನಗಳು, ಉಪನ್ಯಾಸ ಗಳು, ಗ್ರಂಥಭಂಡಾರ, ಅನುಷ್ಠಾನಗಳು, ಭಜನೆ, ಆಡಳಿತಕಚೇರಿ - ಮುಂತಾದ ಚಟುವಟಿಕೆಗಳಿಂದ ಜನರನ್ನು ಆಕರ್ಷಿಸಲಾಯಿತು. ಕಟ್ಟಡದ ಬಡಾವಣೆ ಪುರೋಭಿ ವೃದ್ಧಿಗಳಿಗಾಗಿ ಮಹಾಜನರಿಂದ ಧನಸಹಾಯವನ್ನು ಪ್ರಾರ್ಥಿಸಿ ಕಟ್ಟಡದ ನಿಧಿಯನ್ನು ಬೆಳೆಸಲಾಯಿತು. ಎಲ್ಲವೂ ವ್ಯವಸ್ಥಿತವಾದನಂತರ 1971ನೆಯ ಅಕ್ಟೋಬರ್ ಮಾಹೆಯಲ್ಲಿ ಈ ಶಾಖೆಯ ಆಡಳಿತ ನಿರ್ವಹಣೆಗಾಗಿ ಒಂದು ಕಾರ್ಯಕಾರಿ ಸಮಿತಿ ಯನ್ನು ರಚಿಸಿ ಅಸ್ತಿತ್ವಕ್ಕೆ ತರಲಾಯಿತು. ಪ್ರಧಾನಕಾರ್ಯಾಲಯಕ್ಕೂ ಶಾಖಾ ಕಾರ್ಯಾಲಯಕ್ಕೂ ಇರಬೇಕಾದ ಸಂಬಂಧ ರೀತಿ-ನೀತಿಗಳನ್ನು ಪರಿಷ್ಕರಿಸಿ ಘೋಷಿಸಲಾಯಿತು.

ಮುಖ್ಯವಾಗಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಶಾಖಾ ಕಾರ್ಯಾಲಯದಲ್ಲೇ ಬಹಳಮಟ್ಟಿಗೆ ನೆಲೆಸಿದ್ದು ಈ ಸಂಸ್ಥೆಯ ಪುರೋಭಿವೃದ್ಧಿಗಾಗಿ ಇನ್ನೂ ಶ್ರಮಿಸಿದರು. ಹೀಗೆ ತಮ್ಮ 89ನೆಯ ವಯಸ್ಸಿನಲ್ಲಿ (1969) ಹೊಸದೊಂದು ಶಾಖೆಯನ್ನು ಸ್ಥಾಪಿಸಿ, 93ನೆಯ ವಯಸ್ಸಿನೊಳಗೆ ಕೇವಲ ಅಲ್ಪಕಾಲಾವಧಿಯಲ್ಲಿ ಅದನ್ನು ಬಹಳ ಉನ್ನತಮಟ್ಟಕ್ಕೆ ಅಭಿವೃದ್ಧಿಗೊಳಿಸಿದ ಪ್ರಯತ್ನವನ್ನು ನೋಡಿದರೆ ಇದೊಂದು ಶ್ರೀಶ್ರೀಗಳವರ ಅದ್ಭುತ ಪವಾಡವೆಂದು ಯಾರುಬೇಕಾದರೂ ನೋಡಿದವರು ಹೇಳಬಹುದಾಗಿದೆ. ಮುಖ್ಯವಾಗಿ ಶಾಖಾಕಾರ್ಯಾಲಯದ ಪುರೋಭಿವೃದ್ಧಿಗೆಲ್ಲ ಹಿಂತಡಿಕೆಯಾಗಿ ನಿಂತು ಸಮಯೋಚಿತವಾಗಿ ಸಹಕರಿಸು ತ್ತಿರುವ ಉದಾರಮನಸ್ಸಿನ ಭಕ್ತಮಹನೀಯರು ಗುರುಗಳ ಸಂಕಲ್ಪಕ್ಕೆ ಅನುಸಾರವಾಗಿ ಅವರ ಉದ್ದೇಶಗಳನ್ನು ಕಾರ್ಯಗತವಾಗಿ ಮಾಡುತ್ತಾ ಎಲೆಮರೆಯ ಕಾಯಿಯಂತೆ ಪ್ರೋತ್ಸಾಹಿಸಿದರು. ಶ್ರೀಶ್ರೀಗಳವರು ಜೀವಮಾನವಿಡೀ ಅಭ್ಯಸಿಸಿದ ಅನುಷ್ಠಿಸಿದ ಅಧ್ಯಾತ್ಮವಿದ್ಯೆಯ ಪ್ರಭಾವದಿಂದಲೇ ಅಪ್ರಾರ್ಥಿತವಾಗಿ ಭಗವದನುಗ್ರಹದಿಂದ ಈ ಸಹಾಯವು ದೊರೆತಿದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

# 5. ಕೊನೆಯ ಮೂರು ವರ್ಷಗಳು
## (1973-75)

1969ರಲ್ಲಿ ಶ್ರೀಶ್ರೀಗಳವರು ಶಾಖಾಕಾರ್ಯಾಲಯದ ಸ್ಥಾಪನೆಗಾಗಿ ಬೆಂಗಳೂರಿಗೆ ದಯಮಾಡಿಸಿದ ಅನಂತರ 1972ರಲ್ಲಿ ನಡೆದ ಭಾಗವತ ಸಪ್ತಾಹಕ್ಕೆ ದಯಮಾಡಿಸಿದ್ದೇ ಕಡೆಯ ಭೇಟಿಯಾಗಿತ್ತು. ಅನಂತರ ಅವರು ಹೊಳೆನರಸೀಪುರಕ್ಕೆ ಬರಲಾಗಲಿಲ್ಲ. ಆದ್ದರಿಂದ ಹೊಳೆನರಸೀಪುರದ ಕಾರ್ಯಾಲಯದ ವಿಶಿಷ್ಟ ಜವಾಬ್ದಾರಿಗಳನ್ನೂ ಶ್ರೀ ವೈ. ನರಸಪ್ಪನವರು ಮತ್ತು ಪಂಡಿತ ಶ್ರೀ ಲಕ್ಷ್ಮೀ-ನರಸಿಂಹಮೂರ್ತಿಗಳೇ ನಿರ್ವಹಿಸಬೇಕಾಯಿತು. ಅದರಂತೆಯೇ ಚಟುವಟಿಕೆಗಳು ಮುಂದುವರೆದವು. ಶ್ರೀ ನರಸಪ್ಪನವರು ಮುದ್ರಣಾಲಯದ ಸಂಪೂರ್ಣ ಜವಾಬ್ದಾರಿಯನ್ನೂ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಸಂಸ್ಥೆಯ ಆಡಳಿತ ಜವಾಬ್ದಾರಿಯನ್ನೂ ನಿರ್ವಹಿಸಲಾರಂಭಿಸಿದರು.

1972ನೇ ಏಪ್ರಿಲ್ 7ರಂದು ಆಗಿನ ಕೇಂದ್ರಸರ್ಕಾರದ ರೈಲ್ವೆ ಮಂತ್ರಿಗಳಾಗಿದ್ದ ಶ್ರೀಕೆಂಗಲ್ ಹನುಮಂತಯ್ಯನವರು ಶ್ರೀಶ್ರೀಗಳವರನ್ನು ಭೇಟಿಮಾಡಿ ಪ್ರಸಾದ ಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಕೆಲವು ವಿದೇಶೀಯ ಜಿಜ್ಞಾಸುಗಳು ಗುರುಗಳ ಸನ್ನಿಧಿಗೆ ಬಂದು ಕೆಲವು ದಿನಗಳ ಕಾಲ ಸಂಭಾಷಣೆ, ಪ್ರಶ್ನೋತ್ತರಗಳ ಮೂಲಕ ವೇದಾಂತ ವಿಚಾರಗಳನ್ನು ವಿನಿಮಯಮಾಡಿ ಕೊಂಡರು.

1974ರ ಚಾತುರ್ಮಾಸ್ಯವ್ರತವನ್ನು ಶ್ರೀಶ್ರೀಗಳವರು ಬೆಂಗಳೂರು ಕಾರ್ಯಾಲಯದಲ್ಲಿಯೇ ನೆರವೇರಿಸಿದರು. ಈ ವರ್ಷದ ಶಂಕರಸಪ್ತಾಹ ಮಹೋತ್ಸವವು ಬೆಂಗಳೂರು ಶಾಖಾಕಾರ್ಯಾಲಯದಲ್ಲಿಯೇ ನೆರವೇರಿತು. ಅನಂತರ ವೈಶಾಖ ಮಾಸವು ಅಧಿಕ ಮಾಸವಾಗಿ ಬಂದಿದ್ದರಿಂದ ನಿಜವೈಶಾಖ ಮಾಸದ ಸಪ್ತಾಹ ಮಹೋತ್ಸವವು ಮೈಸೂರಿನಲ್ಲಿ ನೆರವೇರಿತು.

ಪ್ರವಾಸ : ಏಪ್ರಿಲ್, ಮೇ ತಿಂಗಳುಗಳಲ್ಲಿ ಶ್ರೀ ದೇವರಾಯ ಕುಲಕರ್ಣಿಗಳು ಆಂಧ್ರದಲ್ಲಿ ಪ್ರವಾಸ ಮಾಡಿ ಶಾಂಕರ ವೇದಾಂತ ಪ್ರಚಾರವನ್ನು ಮಾಡಿದರು.

ಗ್ರಂಥಪ್ರಕಟಣೆ : 1972ನೇ ಜನವರಿಯಲ್ಲಿ ಸ್ತುತಿಪುಷ್ಪಾಂಜಲಿ, ಸಂಸ್ಕೃತ ಭಾಷಾಭ್ಯಾಸ 3ನೇ ಭಾಗ, ಭಕ್ತಿಚಂದ್ರಿಕೆ, ಈಶಾವಾಸ್ಯೋಪನಿಷದ್‌ಭಾಷ್ಯ (ಇಂಗ್ಲಿಷ್ ಅನುವಾದದೊಡನೆ) ಭಕ್ತಿಚಂದ್ರಿಕೆ, ಈಶಾವಾಸ್ಯೋಪನಿಷತ್

(Eng. Translation) ಎಂಬ ಎರಡು ಗ್ರಂಥಗಳು, ವಿಷ್ಣುಸಹಸ್ರನಾಮಭಾಷ್ಯ , 1973ನೇ ಜನವರಿ ವೇಳೆಗೆ ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸ- ಎಂಬ ಗ್ರಂಥವೂ **Intuition of Reality,** ತೈತ್ತಿರಿಯೋಪನಿಷತ್ ಭಾಷ್ಯ, ಮಾನಸೋಲ್ಲಾಸ, 1974ನೇ ಜೂನ್ ವೇಳೆಗೆ 'ವಿಷ್ಣುಸಹಸ್ರನಾಮಭಾಷ್ಯ'ವು, ಡಿಸೆಂಬರ್ ಮಾಹೆಯಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾಮಯವಾದ ಶಾಂಕರ ವೇದಾಂತ ಮೀಮಾಂಸಾ ಭಾಷ್ಯಂಎಂಬ ಗ್ರಂಥಗಳು ಏಪ್ರಿಲ್‌ನಲ್ಲಿ, ಸಂಸ್ಕೃತ ಭಾಷಾಭ್ಯಾಸ, **Upanishadic approach to Reality** ಎಂಬ ಗ್ರಂಥಗಳು ಪ್ರಕಟವಾದವು. ಬೆಂಗಳೂರು ನರಸಿಂಹಾರಾಜಾಕಾಲೋನಿ ಶ್ರೀರಾಮಮಂದಿರದ ಕಾರ್ಯದರ್ಶಿ ಶ್ರೀ ಡಿ.ಸಿ. ಅನಂತರಾಮಯ್ಯನವರು ಶ್ರೀಶ್ರೀಗಳ ಭಗವದ್ಗೀತೋಪನ್ಯಾಸಗಳು ಎಂಬ ಗ್ರಂಥವನ್ನು ಸಂಕ್ಷಿಪ್ತಗೊಳಿಸಿ ಎರಡು ಸಂಪುಟಗಳಲ್ಲಿ ಪ್ರಕಾಶಗೊಳಿಸಿದರು.

ಬೆಂಗಳೂರಿನ ರಾಮಾಯಣ ಪ್ರಕಾಶನ ಸಮಿತಿಯವರು ಪ್ರಕಟಿಸಿದ ಶ್ರೀಶ್ರೀಗಳ 'ಭಗವದ್ಗೀತೆಯ ಉಪನ್ಯಾಸಗಳು-ಭಾಗ ೨' ಗ್ರಂಥವು 23.2.75ರಂದು ಕರ್ನಾಟಕದ ಮುಖ್ಯನ್ಯಾಯಾಧೀಶರಾದ ಶ್ರೀ ಗೋವಿಂದ ಭಟ್‌ರಿಂದ ನೂತನ ಉಪನ್ಯಾಸ ಮಂದಿರದಲ್ಲಿ ಬಿಡುಗಡೆಯಾಯಿತು. ಅಧ್ಯಕ್ಷ ಪೀಠದಿಂದ ಅವರು ಹಿಂದೂಧರ್ಮದ ವೈಶಿಷ್ಟ್ಯವನ್ನೂ ಅದರ ಮೆರುಗು, ಸತ್ತ್ವವನ್ನೂ ಕಂಡುಕೊಂಡ ಪಾಶ್ಚಾತ್ಯರಿಂದ ಬಂದಿರುವ ಶ್ಲಾಘನೆಯನ್ನು ತಿಳಿಸಿದರು. ಪಂಡಿತರಾದ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು ಗೀತೆಯಲ್ಲಿರುವ ಸಾಧನತ್ರಯಗಳ ಸಾಮರಸ್ಯವನ್ನು ವಿವರಿಸಿದರು. ಗ್ರಂಥಪ್ರಕಟಣೆಯಲ್ಲಿ ಮುಖ್ಯಪಾತ್ರವಹಿಸಿದ ಶ್ರೀ ಡಿ.ಸಿ. ಅನಂತರಾಮಯ್ಯನರಿಗೆ, ವಿಧಾನಸಭಾ ಸದಸ್ಯ ಶ್ರೀ ಟಿ.ಆರ್. ಶಾಮಣ್ಣನವರು ಶಾಲುಹೊದಿಸಿ ಗೌರವಿಸಿದರು.

**ಪತ್ರಿಕೆ :** 1972ನೇ ಜನವರಿಯಿಂದ ಡಿಸೆಂಬರ್ ಪೂರ ಒಂದುವರ್ಷ ಕಾಲದಲ್ಲಿ ಹೊಳೆನರಸೀಪುರದ ಕಾರ್ಯಾಲಯದ ಪುರೋಭಿವೃದ್ಧಿ ಹೀಗಿತ್ತು : ಅಧ್ಯಾತ್ಮಪ್ರಕಾಶಮಾಸಪತ್ರಿಕೆಯ 41ನೆಯ ಸಂಪುಟವು ಮುಂದುವರೆಯಿತು. ಈ ಸಂಪುಟವು ಪೂರೈಸುವ ವೇಳೆಗೆ ಮಹಾಪೋಷಕರ ಸಂಖ್ಯೆ 175ಕ್ಕೆ ಏರಿತ್ತು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯವು ಜನ್ಮವನ್ನು ತಾಳಿ ಐವತ್ತು ವರ್ಷಗಳು ಪೂರೈಸಿದ ನೆನಪಿಗಾಗಿ ಬೆಂಗಳೂರು ಕಾರ್ಯಾಲಯದಲ್ಲಿಯೇ ಮೇ 13ರಿಂದ ಮೂರು ದಿನಗಳ ಕಾಲ ಸುವರ್ಣಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ವಿಶೇಷ ಸಂಸ್ಮರಣ ಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು.

**ಅನುತಾಪ :** ತಾ. 30-7-73ರಂದು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮಹಾಶ್ರಯದಾತರೂ ಉದಾರದಾನಿಗಳೂ ಗುರುಭಕ್ತರೂ ಬೆಂಗಳೂರು ಶಾಖಾ ಕಾರ್ಯಾಲಯದ ಸ್ಥಾಪನೆಗೂ ಬೆಳವಣಿಗೆಗೂ ಮುಖ್ಯ ಕಾರಣರಾಗಿದ್ದ ಶ್ರೀ ಖೋಡೆ ಲಕ್ಷ್ಮಣಸಾರವರು ನಿಧನರಾದರು. ಇವರ ನಿಧನವು ಸಂಸ್ಥೆಗೆ ತುಂಬಲಾರದ ನಷ್ಟವಾಯಿತು.

ಕಾರ್ಯಾಲಯದ 'ಪರಿಪಾಲಕ'ರೆನಿಸಿ ಶಂಕರ ಭಗವತ್ಪಾದರ ಪ್ರಸ್ಥಾನತ್ರಯ ಭಾಷ್ಯಗಳನ್ನೆಲ್ಲ ಕನ್ನಡಾನುವಾದದೊಡನೆ ಪ್ರಕಟಿಸಲು ಸಂಪೂರ್ಣ ಧನಸಹಾಯವನ್ನು ನೀಡಿದ್ದ ಕರ್ನಾಟಕ ಸಿಂಹಾಸನಾಧೀಶ್ವರರೆನಿಸಿದ್ದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಹದ್ದೂರ್‌ರವರು ತಾ. 23-9-74ರಲ್ಲಿ ದೈವಾಧೀನರಾದರು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಸಂತಾಪವನ್ನು ಸೂಚಿಸಲಾಯಿತು.

**ಉಪನ್ಯಾಸ ಮಂದಿರ :** 8-2-73ರಂದು ಬೆಂಗಳೂರು ಕಾರ್ಯಾಲಯದ ಉಪನ್ಯಾಸಮಂದಿರದ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿತು. 1973ನೇ ಸೆಪ್ಟೆಂಬರ್‌ನಿಂದ ಉಪನ್ಯಾಸಮಂದಿರ ಕಟ್ಟಡದ ನಿರ್ಮಾಣವನ್ನು ಕೈಗೊಂಡಿತು. ದಿ|| ಲಕ್ಷ್ಮಣಸಾರವರ ಪುತ್ರರುಗಳು ಈ ಮಹಾಕಾರ್ಯಕ್ಕೆ ಉದಾರವಾದ ಸಹಾಯವನ್ನು ನೀಡಿ ಪ್ರೋತ್ಸಾಹಿಸಿದರು. ಪೂಜ್ಯಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳವರೂ ಗುರುಭಕ್ತಿಪ್ರೇರಿತರಾಗಿ ವಾಕ್ಸಹಾಯವನ್ನು ಮಾಡಿ ದಾನಿಗಳನ್ನು ಪ್ರೋತ್ಸಾಹಿಸಿದ್ದರ ಫಲವಾಗಿ ಕಟ್ಟಡನಿರ್ಮಾಣಕಾರ್ಯವು ಸುಲಭವಾಯಿತು.

**ಶಾಖಾ ಕಾರ್ಯಾಲಯದ ಉಪನ್ಯಾಸ ಮಂದಿರ :** ಆನಂದನಾಮ ಸಂವತ್ಸರದ ಮಾರ್ಗಶೀರ್ಷ ಕೃಷ್ಣ ಪಂಚಮೀ, 18.12.74 ಬುಧವಾರ ಬೆಳಿಗ್ಗೆ 11.33 ಘಂಟೆಗೆ ಬೆಂಗಳೂರು ಶಾಖಾ ಕಾರ್ಯಾಲಯದ ಉಪನ್ಯಾಸ ಮಂದಿರದ ಪ್ರವೇಶೋತ್ಸವವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ನೆರವೇರಿಸಿದರು. 17ರ ಸಂಜೆಯಿಂದಲೂ ವಾಸ್ತು ಹೋಮಾದಿ ಮೊದಲಾದ ಕಾರ್ಯಕ್ರಮಗಳನ್ನೂ, 18ರ ಬೆಳಗಿನಲ್ಲೂ ಪ್ರಾರಂಭಿಕ ಶಾಸ್ತ್ರಕಾರ್ಯಗಳನ್ನೂ ಸಕಾಲಿಕವಾಗಿ ಸಾಂಗವಾಗಿ ನೆರವೇರಿಸಲಾಯಿತು. ಪ್ರವೇಶೋತ್ಸವದ ಮುಹೂರ್ತಕ್ಕೆ ಸರಿಯಾಗಿ ಪೂಜ್ಯ ಶ್ರೀಶ್ರೀಗಳವರನ್ನು ಮಂಗಳವಾದ್ಯ, ವೇದಘೋಷಗಳ ಸಮೇತ ಶಿಷ್ಯ ಸಮೂಹದೊಡನೆ ಕರೆತರಲಾಯಿತು. ಅವರ ಅಮೃತ ಹಸ್ತದಿಂದ ಉದ್ಘಾಟನೆಯಾದ ಬಳಿಕ ಉಚ್ಚಾಸನದಲ್ಲಿ ಅವರು ಮಂಡಿಸಿದರು. ಅವರ ಜೀವನದ ಪರಮೋ

ದ್ದೇಶವೂ, ಅವರ ಅಂತರಂಗದ ತಿರುಳೂ ಮತ್ತು ಸಂಸ್ಕೃತಿಯೂ ಅವರ ಚಿಕ್ಕ, ಚೊಕ್ಕ ಅನುಗ್ರಹ ಆಶೀರ್ವಾದ ಭಾಷಣವನ್ನು ತುಂಬಿ ಹರಿಯಿತು :

**"ಈ ಭವ್ಯ ಭವನವು ನನ್ನ ನಿಮಿತ್ತವಾಗಿ ನಿರ್ಮಾಣಮಾಡಲ್ಪಟ್ಟಿದೆ ಯಾದರೂ ಇದು ನನಗೊಬ್ಬನಿಗೇ ಮೀಸಲಲ್ಲ. ಇದು ಮಾನವ ಜನಾಂಗದ ಸರ್ವಸಮ್ಮತವಾದ ತತ್ತ್ವಗಳ ಸಮನ್ವಯದ ದೇವಾಲಯವಾಗಿದೆ. ಇಲ್ಲಿ ಸದಾ ಕಾಲವೂ ಅಧ್ಯಾತ್ಮವಿಚಾರ, ಚಿಂತನೆ, ಪ್ರವಚನಾದಿಗಳು ನಡೆಯುತ್ತಿರಬೇಕು. ಹೀಗೆ ಲೋಕಸೇವೆಯನ್ನು ಮಾಡುತ್ತಾ ಈ ಸಂಸ್ಥೆಯು ಚಿರಕಾಲ ಬಾಳಲಿ."**

ಶ್ರೀಶ್ರೀಗಳವರ ಪ್ರಮುಖ ಶಿಷ್ಯರೂ ಕಾರ್ಯಾಲಯದ ಟ್ರಸ್ಟ್‌ನ ಆಗಿನ ಅಧ್ಯಕ್ಷರೂ ಆಗಿದ್ದ ಶ್ರೀ ವಿಠಲಶಾಸ್ತ್ರಿಗಳು, "ಈ ಕಲ್ಯಾಣನಗರಿಗೆ ಶ್ರೀಶ್ರೀಗಳು ದಯ ಮಾಡಿಸಿದ ಅಲ್ಪಕಾಲದಲ್ಲೇ ಇಂಥ ಭವ್ಯಭವನದ ನಿರ್ಮಾಣಕ್ಕೆ ಮುಖ್ಯ ಕಾರಣ ಕರ್ತರಾಗಿರುವ ಮತ್ತು ಸಂಸ್ಥೆಯನ್ನು ಸರ್ವವಿಧದಿಂದಲೂ ಪೋಷಣೆ ಮಾಡುತ್ತಾ, ಖ್ಯಾತಿ ಲಾಭಗಳ ಆಶೆಯಿಲ್ಲದೆ ಉದಾರ ಹೃದಯದಿಂದ ಭಕ್ತಿ ಪೂರ್ವಕವಾಗಿ ಸೇವೆಯನ್ನು ಸಲ್ಲಿಸುತ್ತಿರುವ ಖೋಡೆ ಕುಟುಂಬ ಪುತ್ರ ಬಂಧು ವರ್ಗದವರಿಗೆ ಭಗವಂತನು ಇತೋಪ್ಯತಿಶಯವಾದ ಆಯುರಾರೋಗ್ಯ ಐಶ್ವರ್ಯಾದಿಗಳನ್ನೂ ಧಾರ್ಮಿಕ ಬುದ್ಧಿ ಸಂತಾನವನ್ನೂ ನೀಡಿ ನಿರಂತರ ಕಾಪಾಡಲಿ" ಎಂದು ಪ್ರಾರ್ಥಿಸಿದರು.

ಮರುದಿನ ಶ್ರೀಶ್ರೀಗಳ ಆಯುರಾರೋಗ್ಯಾದಿಗಳನ್ನೂ ಮಹಾಜನರ ಕಲ್ಯಾಣವನ್ನೂ ಕೋರಿ ಮೃತ್ಯುಂಜಯ ಹೋಮ, ಆಯುಷ್ಯ ಹೋಮಾದಿಗಳನ್ನು ನಡೆಸಲಾಯಿತು. ಸಂಜೆ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು "ಮೋಕ್ಷ ಸಾಧನ ಗಳು" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು.

ಮುಂದೆ ಗುರುವಾರ, ಭಾನುವಾರದ ಉಪನ್ಯಾಸಗಳು ಈ ಮಂದಿರದಲ್ಲೇ ನಡೆಯಲು ಪ್ರಾರಂಭವಾಯಿತು. ನಿಧಾನವಾಗಿ ಕೆಲವಾರು ತಿಂಗಳಲ್ಲೇ ವೇದಾಂತ ಪ್ರವಚನಾದಿ ಮುಖ್ಯ ಕಾರ್ಯಕ್ರಮಗಳು, ಕ್ರಮೇಣ ಶಂಕರಸಪ್ತಾಹಗಳು ಆರಂಭ ವಾದವು. ನಾಲ್ಕೇ ತಿಂಗಳಲ್ಲಿ ಹೊಸಚಟುವಟಿಕೆಗಳು ಚಿಗುರಿಬಂದವು. ಮಧ್ಯಾಹ್ನ ಪುರಾಣಶ್ರವಣ, ಭಾನುವಾರ ಉಪನ್ಯಾಸ, ಭಜನೆಗಳಿಂದ ಮೊದಲ್ಗೊಂಡು, ಅತ್ಯಲ್ಪ ಸಮಯದಲ್ಲೇ ಉಳಿದ ಪ್ರವಚನ ಮಾಲಿಕೆಗಳೂ, ಬೆಳಿಗ್ಗೆ ವೇದಾಂತ ಭಾಷ್ಯಪಾಠ, ಮಧ್ಯಾಹ್ನ ವಿಷ್ಣುಪುರಾಣ, ಪ್ರತಿ ಭಾನುವಾರ ದಕ್ಷಿಣಾಮೂರ್ತಿ ಸ್ತೋತ್ರ, ಗೀತಾ

13ನೇ ಅಧ್ಯಾಯದ ಉಪನ್ಯಾಸ ಹೀಗೆ ವಿಸ್ತಾರಗೊಂಡವು. ಜೊತೆಜೊತೆಗೆ ಸಂಸ್ಕೃತ ಬಾಲ್ಯ ಪಾಠಗಳೂ ಆರಂಭವಾದವು. ಮೊದಲೇ 30 ವಿದ್ಯಾರ್ಥಿಗಳು ಸೇರಿ, ಅನಂತರದಲ್ಲಿ 75ರ ವರೆಗೂ ಸಂಖ್ಯೆ ಹಿಗ್ಗಿತು. ಇವರನ್ನು ಸುರಸರಸ್ವತೀ ಸಭಾದ ಪರೀಕ್ಷೆ, ಭಾರತೀಯ ವಿದ್ಯಾಭವನದ ಪರೀಕ್ಷೆಗಳಿಗೂ ತಯಾರು ಮಾಡಲಾಗಿ, ಈ ಪರೀಕ್ಷೆಗಳಲ್ಲಿ ಕೆಲವರು ಚಿನ್ನದ ಪದಕಗಳನ್ನೂ, ಅನೇಕರು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದದ್ದೂ ಪ್ರಗತಿಯ ದ್ಯೋತಕವಾಯಿತು. ರಾಮನವರಾತ್ರಿ ಅನುಷ್ಠಾನ ಏಪ್ರಿಲ್‌ನಲ್ಲಿ, ಶಂಕರಸಪ್ತಾಹ ಮೇ ತಿಂಗಳಲ್ಲಿ ಹೊಸ ಮೆರುಗನ್ನು ತಂದವು. ಪೂಜಾ ಪಾರಾಯಣಾದಿಗಳು, ಉಪನ್ಯಾಸ, ಭಜನೆ, ಪುರಾಣ ಶ್ರವಣಗಳು ತ್ರಿಕಾಲಗಳಲ್ಲೂ ನಡೆದು ಭಕ್ತರನ್ನು ಅಧಿಕ ಸಂಖ್ಯೆಯಲ್ಲಿ ಆಕರ್ಷಿಸಿದವು. ಜೊತೆಗೆ ಶ್ರೀ ಹೆಚ್.ವಿ. ಶ್ರೀನಿವಾಸ ಮೂರ್ತಿಗಳ ನೇತೃತ್ವದಲ್ಲಿ ಯೋಗಾಸನ ತರಪೇತಿ ತರಗತಿಗಳು ಉತ್ಸಾಹದ ಶಿಕ್ಷಣ ನೀಡಿದವು. ಹೀಗೆ ಬೆಂಗಳೂರಿನಲ್ಲಿ ಈ ಕಾರ್ಯಾಲಯವೂ ಒಂದು ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿ ಬಹು ಶೀಘ್ರದಲ್ಲೇ ಬೆಳೆದುನಿಂತಿತು. ಈ ಅಭ್ಯುದಯವೆಲ್ಲಕ್ಕೂ ಕಾರ್ಯಾಲಯದ ಜೀವಾಳವಾಗಿ ನಿಲ್ಲಲೂ ಶ್ರೀಶ್ರೀಗಳವರ ಕೃಪಾನುಗ್ರಹವೇ ಕಾರಣ. ಹೀಗೆ ಉಪನ್ಯಾಸ ಮಂದಿರದ ಉದ್ಘಾಟನೆಯ ಸಮಯದಲ್ಲಿ ಶ್ರೀಶ್ರೀಗಳು ಮಾಡಿದ ಆಶೀರ್ವಾದ ಅವರ ಶುಭ ಸಂಕಲ್ಪದಂತೆ ಚಿಗುರಿ, ಕ್ಷಿಪ್ರಸಮಯದಲ್ಲೇ ಮಂದಪರಿಮಳ ಸೂಸುವ ಮೊಗ್ಗಾಯಿತು.

## 6. ಶ್ರೀಶ್ರೀಗಳವರ ಮಹಾನಿರ್ಯಾಣ
## (5-8-1975)

**ಶ್ರೀಶ್ರೀಗಳವರ ಕೊನೆಯ ದಿನಗಳು :** ಪೂಜ್ಯ ಶ್ರೀಗಳವರು 1975 ಜನವರಿಯಿಂದ ಸಂಪೂರ್ಣ ದೇಹಾಲಸ್ಯಕ್ಕೆ ಒಳಗಾಗಿದ್ದರು. ಸ್ಮೃತಿ ಕಡಿಮೆಯಾಗಿ, ಕಣ್ಣುಗಳ ಶಕ್ತಿ ತೀರ ಕುಂದಿತ್ತು. ಸಂಪೂರ್ಣ ವಿಶ್ರಾಂತಿ ಅವಶ್ಯಕವಾಯಿತು. ಪಾಠಪ್ರವಚನಗಳು, ಬರವಣಿಗೆ, ಉಪನ್ಯಾಸಾದಿಗಳು ಮುಂತಾಗಿ ಎಲ್ಲಾ ಚಟುವಟಿಕೆಗಳನ್ನೂ ನಿಲ್ಲಿಸಬೇಕಾಯಿತು. ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರ ಸಂಪೂರ್ಣ ಸೇವೆ, ಉಪಚಾರದಿಂದ ಏಪ್ರಿಲ್ ತಿಂಗಳ ವೇಳೆಗೆ ಅವರ ದೇಹಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತ್ತು. ಈಗ ಬೆಂಗಳೂರು ಶಾಖೆಯ ಆಡಳಿತ, ಪ್ರವಚನ ಮುಂತಾದ ಪಂಡಿತ ಕರ್ತವ್ಯಗಳನ್ನು ಶ್ರೀ ಕೆ.ಜಿ. ಸುಬ್ರಾಯಶರ್ಮರು ವಹಿಸಿ ಕೊಂಡರು. ಅವರ ಸಹಾಯಕ್ಕಾಗಿ ಕಾರ್ಯಕಾರಿ ಸಮಿತಿಯೊಂದು ನೇಮಕ ವಾಗಿತ್ತು. ಅಸ್ವಸ್ಥತೆಯಿಂದಾಗಿ ಶ್ರೀಶ್ರೀಗಳು, ಬೆಂಗಳೂರಿನಲ್ಲೇ ಆಚರಿಸಿದ ಶ್ರೀರಾಮ ನವರಾತ್ರೆ ಅನುಷ್ಠಾನ, ಶಂಕರಸಪ್ತಾಹ ಕಾರ್ಯಕ್ರಮಗಳಲ್ಲಿ ಉಪಸ್ಥಿತರಾಗುವದೂ ಸಾಧ್ಯವಾಗಲಿಲ್ಲ. ಆದರೂ ಸಂದರ್ಶಕರೊಡನೆ ಸ್ವಲ್ಪ ಮಾತನಾಡುತ್ತಿದ್ದರು. ಇದೂ ಕೆಲವೇ ದಿನಗಳು ಮಾತ್ರ. ಅನಂತರದಲ್ಲಿ, ಬಹುಶಃ ಅವರಿಗೆ ಆ ಇಚ್ಛೆಯೂ ಇರಲಿಲ್ಲವೇನೋ ಎನಿಸುತ್ತೆ.

ಏಪ್ರಿಲ್‌ನಿಂದ ಮುಂದಕ್ಕೆ ಬರುಬರುತ್ತಾ ಶ್ರೀಗಳವರ ದೈಹಿಕ ಸ್ಥಿತಿಯು ಕುಗ್ಗುತ್ತಾ ಬಂದಿತು. ಇಷ್ಟಾದರೂ ಸಂನ್ಯಾಸಾಶ್ರಮ ಧರ್ಮಗಳನ್ನು ಬಹಳ ಕಷ್ಟಸಾಹಸದಿಂದ ಪಾಲಿಸುವ ಯತ್ನವಿದ್ದೇ ಇತ್ತು. 23.7.75ರಲ್ಲಿ ಚಾತುರ್ಮಾಸ್ಯ ನಿಮಿತ್ತ ವ್ಯಾಸಪೂಜೆ ನಡೆಸಲು ಇಚ್ಛೆಯುಳ್ಳವರಾಗಿದ್ದರು. ಇದೂ ಸಾಧ್ಯವಾಗಲಿಲ್ಲ. ಬಂದವರನ್ನು ಗುರು ತಿಸುವುದೂ ಸಾಧ್ಯವಾಗಲಿಲ್ಲ. ಆಗಾಗ ಬಲವಂತವಾಗಿ ನೀಡುತ್ತಿದ್ದ ಹಾಲನ್ನು ಗುಟುಕರಿಸುವದು ಬಿಟ್ಟು ಯಾವ ಆಹಾರವನ್ನೂ ಸೇವಿಸಲಾಗಲಿಲ್ಲ. ಜೂನ್ ಕೊನೆಯಲ್ಲಿ ಶ್ರೀ ಶ್ರೀಗಳವರ ದೇಹಸ್ಥಿತಿ ಗಾಬರಿಗೆ ಕಾರಣವಾಗೇ ಇತ್ತು. ವೈದ್ಯರು ಗಳಾಗಲೀ, ಜ್ಯೋತಿಷ್ಯರಾಗಲೀ ಪರಿಹಾರ ಹೇಳಲು, ನೀಡಲು ಶಕ್ತರಾಗಲಿಲ್ಲ. ಈಗ ಹಾಲನ್ನು ಚಮಚದ ಮೂಲಕವೇ ಕೊಡಬೇಕಾಗುತ್ತಿತ್ತು. ಅದನ್ನೂ ಎಷ್ಟೋ ಬಾರಿ ನಿರಾಕರಿಸುತ್ತಿದ್ದರು. ಚಮಚ ಬಾಯಿವರೆಗೆ ಬಂದಾಗ ಒಮ್ಮೊಮ್ಮೆ ಭದ್ರವಾಗಿ ಮುಚ್ಚಿಕೊಂಡಿದ್ದ ಬಾಯಿ ತೆರೆಯಲೇ ಇಲ್ಲ. ಕೇವಲ ಒಂದು ಚಾಪೆಯ ಮೇಲೆ ಗುಬ್ಬಚ್ಚಿಯಂತೆ ಮುದುರಿಕೊಂಡು ಮಲಗಿದ್ದ ಶ್ರೀಶ್ರೀಗಳವರ ಸ್ಥಿತಿ ಭಕ್ತರಿಗೆ ದುಃಖಕಾರಕವಾಗಿತ್ತು.

ಮೊದಲಿನಿಂದಲೂ ಆಹಾರ-ವಿಹಾರಗಳ ವಿಷಯದಲ್ಲಿ ಶ್ರೀಶ್ರೀಗಳವರಿಗೆ ಕಟ್ಟೆಚ್ಚರ. ಅದರಂತೆ ಇಳಿ ವಯಸ್ಸಿನಲ್ಲಿಯೂ ಸಹ ಸಾಯಂಕಾಲ ಸ್ವಲ್ಪ ನಡಿಗೆಯೂ ಅವರ ಅಭ್ಯಾಸಕ್ರಮದಲ್ಲೊಂದು. 1968ರಲ್ಲಿ ಬೆಂಗಳೂರಿಗೆ ಬಂದಾಗ ಬಸವನಗುಡಿ ಟ್ಯಾಕ್ಸಿ ಸ್ಟಾಂಡ್ ಪಕ್ಕದಲ್ಲಿ (ಬಸವನಗುಡಿ ಹೆಣ್ಣು ಮಕ್ಕಳ ಹೈಸ್ಕೂಲ್ - ಈಗ ಕಾಲೇಜೂ ಆಗಿದೆ - ಎದುರು) ಶ್ರೀ ದ್ವಾರಕಾ ಸಂಸ್ಥಾನದ ಕಟ್ಟಡದಲ್ಲಿ (ಈಗ ಆ ಹಳೆಯ ಕಟ್ಟಡದ ಬದಲು, ಇಂದಿನ ರೀತಿಗನುಗುಣವಾಗಿ ಬಹುಮಹಡಿ ಕಟ್ಟಡವಿದೆ) ಮುಂಭಾಗದ ಕಾಂಪೌಂಡ್‌ನ ಒಳಭಾಗದ 20 ಅಡಿ ಜಾಗದಲ್ಲೇ, ನಿಶ್ಶಕ್ತರಾಗಿ ಪೂರ್ಣ ಎದ್ದು ನಡೆಯಲು ಸಾಧ್ಯವಿಲ್ಲದಾಗ, ಸಾಧ್ಯವಾದಷ್ಟೂ ತೆವಳಿಕೊಂಡೇ ಕಾಲಿಗೆ ಸ್ವಲ್ಪ ವ್ಯಾಯಾಮ ಕೊಡುವಂತೆ ಅಲ್ಲಿ ಹತ್ತಾರು ಸುತ್ತು ತಿರುಗುವದೂ ಇತ್ತು. ಇಷ್ಟಾದರೂ, ಮೊದಲಿನಿಂದಲೂ ಅವರ ದೇಹಧರ್ಮ ಸೂಕ್ಷ್ಮವೇ. ಕಾರ್ಯಾಲಯದ ಸುದ್ದಿಯಲ್ಲಿ (ಅಧ್ಯಾತ್ಮಪ್ರಕಾಶ ಪತ್ರಿಕೆ) ಆಗಾಗ ಅವರ ಆರೋಗ್ಯ - ಅನಾರೋಗ್ಯ ಪ್ರಸ್ತಾಪದಲ್ಲಿ ಕಾಣುವಂತೆ, ಸಂಪೂರ್ಣ ದೃಢಕಾಯರಾಗಿ, ಶಕ್ತಿ ಸಂಪನ್ನರಾಗಿದ್ದರು ಎಂದೇನೂ ಇಲ್ಲ. ಚಿಕ್ಕಂದಿನಲ್ಲಿ ನಿತ್ಯರೋಗಿಯೆಂಬಂತಿದ್ದರು. ಅವರೇ ಬರೆದಿರುವಂತೆ ಆಗಾಗ ಕಾಡುವ ಅನಾರೋಗ್ಯವಿತ್ತು, ತಾಯಿ ತಂದೆಗಳ ಶುಶ್ರೂಷೆಯೇ ಆಗೊಂದು ರಕ್ಷೆ. ಈಗ ಅವರಿಗೆ ರೋಗಕ್ಕಿಂತ ಹೆಚ್ಚಾಗಿ ದಣವೇ ಪ್ರಧಾನವಾಗಿತ್ತೆನ್ನಬಹುದು. ಏಕೆಂದರೆ ಅವರ ದಿನಚರಿಯಲ್ಲಿ ಒಂದು ಕ್ಷಣವಾದರೂ ವಿಶ್ರಾಂತಿಯಲ್ಲಿದ್ದರು, ಹರಟೆ ಹೊಡೆದರು ಎಂಬುದಕ್ಕೆ ಜಾಗವೇ ಇಲ್ಲ. ಸಂನ್ಯಾಸ ಸ್ವೀಕಾರಕ್ಕೆ (ಆಗ 68 ವಯಸ್ಸು) ಮೊದಲು, ಅನಂತರದ ತರುಣದಲ್ಲಿ ಮಧ್ಯಾಹ್ನದಲ್ಲಿ ಅಥವಾ ಸ್ವಲ್ಪ ಮುಂಚೆ ಅವರನ್ನು ಸಂದರ್ಶಿಸಲು ಬಂದವರು ಅವರು ಗ್ರಂಥಾಲಯ ದಲ್ಲಿ ಯಾವದೋ ಪುಸ್ತಕವನ್ನು ಹಿಡಿದು ನಿಂತುಕೊಂಡೇ ಅದರ ವಿಷಯದಲ್ಲಿ ಸಂಪೂರ್ಣವಾಗಿ ಮಗ್ನರಾಗಿರುತ್ತಿದ್ದ ದೃಶ್ಯ ಕಾಣುವದು ಸಾಮಾನ್ಯವೇ. ಮಿಕ್ಕಂತೆ ಕಾಲುಮಣೆಯ ಮುಂದೆ ಸುಲಭಾಸನದಲ್ಲಿ ಕುಳಿತು ಬರವಣಿಗೆಯಲ್ಲಿ ತೊಡಗಿರು ತ್ತಿದ್ದರು. ಒಂದೇ ಸಮನೆ ಕುಳಿತಿರುವುದು, ತೀವ್ರವಾದ ಚಿಂತನೆ, ಬರವಣಿಗೆ, ನಿಂತು ಕೊಂಡೇ ಗ್ರಂಥಪಠಣ ಮುಂತಾದ - ಎದ್ದಾಗಿನಿಂದ ಮಲಗುವವರೆಗಿನ ಮಾನಸಿಕ ಕಾರ್ಯದ ಹೊರೆ ಆರೋಗ್ಯಕ್ಕೆ ತೊಂದರೆ ಮಾಡುವುದು ಸಹಜವೇ. ಅದರಿಂದ ದಣಿವೂ ಹೆಚ್ಚಾಗುತ್ತದೆ. ಜೊತೆಗೆ ಸರಿಯಾದ ಆಹಾರವಾಗಲೀ, ಪೌಷ್ಟಿಕಾಂಶವೇ ಸೇರದಿದ್ದಾಗ ನಿತ್ರಾಣವಾಗುವದು ಸಾಮಾನ್ಯ. 95 ವರ್ಷದ ವೃದ್ಧಾಪ್ಯವೂ ಸೇರಿದಾಗ, ದಿನಕ್ಕೆ ಬರೀ ಒಂದು ಲೋಟದಷ್ಟು ಹಾಲನ್ನು ಮಾತ್ರ ಸೇವಿಸಿದಾಗ, ಹೀಗೆ ಮುದುಡಿ ಮಲಗುವದು ದೇಹಧರ್ಮವೇ ಆಯಿತು. ಕೊನೆ ಕೊನೆಗೆ ಕೇವಲ ಚಮಚಗಳಷ್ಟು ಹಾಲು ಏತಕ್ಕೆ ಸಾಕಾದೀತು ?

**ಮಹಾನಿರ್ಯಾಣ :** ಅಂತೂ 5.8.75ರ ದಿನ ಬಂತು. ಅದು ರಾಕ್ಷಸನಾಮ ಸಂವತ್ಸರದ ಆಷಾಢ ಬಹುಳ ತ್ರಯೋದಶಿ, ಮಂಗಳವಾರ. ಎಂದಿನಂತೆ, ಬೆಳಿಗ್ಗೆ ಶ್ರೀಶ್ರೀಗಳವರಿಗೆ ಸ್ನಾನವನ್ನು ಮಾಡಿಸಲಾಯಿತು. ಜೀವ ಮುಂದಿನ ಪಯಣಕ್ಕೆ ಹೊರಡಲು ತಯಾರಾದಂತಿತ್ತು. ಈ ಗಳಿತ ಶರೀರ ಬಂಧನ ಸಾಕೆನಿಸಿತ್ತು. ಬೆಳಿಗ್ಗೆ 10 ಘಂಟೆ 05 ನಿಮಿಷಕ್ಕೆ ಶ್ರೀ ಶ್ರೀ ಪರಮಹಂಸ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಬೆಂಗಳೂರು ನಗರದ ತ್ಯಾಗರಾಜನಗರದಲ್ಲಿರುವ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಅಖಂಡ ಜ್ಯೋತಿಯಲ್ಲಿ ಲೀನವಾದರು.

ಕೂಡಲೆ ಮುಖ್ಯಸ್ಥರಿಗೆಲ್ಲಾ ವರ್ತಮಾನವನ್ನು ತಿಳಿಸಲಾಯಿತು. ಸುದ್ದಿ ಮಿಂಚಿನಂತೆ ಬಹು ಬೇಗನೆ ಎಲ್ಲೆಲ್ಲಿಯೂ ಹರಡಿತು. ಬೆಂಗಳೂರಿನ ಭಕ್ತರೆಲ್ಲರೂ ಗುಂಪುಗುಂಪಾಗಿ ಧಾವಿಸಿ ಶ್ರೀಗಳ ಭೌತಿಕ ದೇಹ ದರ್ಶನ ಮಾಡಿ, ಅವರ ನುಡಿ ಸಂದೇಶಗಳನ್ನು ಮನದಲ್ಲಿ ನೆನೆದು, ತಮ್ಮ ದುಃಖವನ್ನು ಈ ಚಿಂತನದಿಂದ ಸ್ವಲ್ಪ ಮಟ್ಟಿಗಾದರೂ ಮರೆತು, ಭಕ್ತಿ ಪ್ರೀತಿಯಿಂದ ತಮ್ಮ ಅಂತಿಮ ನಮನವನ್ನು ಸಲ್ಲಿಸಿದರು. ಮಧ್ಯಾಹ್ನದಿಂದ ಸಂಜೆಯವರೆಗೂ ಸುತ್ತಮುತ್ತಲಿನ ಭಕ್ತರೂ ಬಂದರು. ಸಂಜೆ ಹಾಗೂ ಮಾರನೆಯ ಬೆಳಿಗ್ಗೆಯೂ ಆಕಾಶವಾಣಿಯು ಈ ಸುದ್ದಿಯನ್ನು ಬಿತ್ತರಿಸಿತು. ಪ್ರಮುಖ ವರ್ತಮಾನ ಪತ್ರಿಕೆಗಳೂ ವಿವರ ಪ್ರಕಟಿಸಿದವು.

ಶ್ರೀಶ್ರೀಗಳವರ ಪಾರ್ಥಿವ ಶರೀರಕ್ಕೆ ಸ್ನಾನ ಮಾಡಿಸಿ, ಸುಗಂಧಗಳಿಂದಲೂ ಪುಷ್ಪಗಳಿಂದಲೂ ಅಲಂಕರಿಸಿ, ಅಂತ್ಯದರ್ಶನಕ್ಕಾಗಿ ಕುರ್ಚಿಯಲ್ಲಿ ಕೂರಿಸಲಾಗಿತ್ತು. ಆ ದಿನ ಸಂಜೆ 5.00 ಘಂಟೆಯವರೆಗೂ ಭಕ್ತರುಗಳು ಬಂದು ಸೇರುತ್ತಲೇ ಇದ್ದರು. ಅನಂತರ ಪುಷ್ಪಾಲಂಕೃತ ಜೀಪಿನಲ್ಲಿ ಪಾರ್ಥಿವ ಶರೀರವನ್ನಿಡಲಾಯಿತು. ಆಗ ಕಾರ್ಯಾಲಯದ ಅಂಗಳದಲ್ಲಿ ಸೇರಿದ್ದ ಆಪ್ತರು, ಅವರ ವೇದಾಂತ ಪ್ರಸಾರದಿಂದ ಭಕ್ತರಾದವರು, ತಮ್ಮ ಅರಿವನ್ನೂ ಮೀರಿದಂತೆ ಅಶ್ರುತರ್ಪಣ ಮಾಡಿದರು. ವೇದಘೋಷ ಭಜನೆ - ಮುಂತಾದವುಗಳೊಡನೆ ಉತ್ಸವಕ್ಕಾಗಿ ಜೀಪು ಚಲಿಸಿದಾಗ, ಎಲ್ಲರೂ ಗದ್ಗದ ಕಂಠದಿಂದ ಜಯಘೋಷ ಮಾಡಿದರು. ಸಾಧ್ಯವಿದ್ದಷ್ಟು ದೂರ ಅದರೊಡನೆ ಹೆಜ್ಜೆ ಹಾಕಿದರು. ಶ್ರೀ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು ಪಾರ್ಥಿವ ಶರೀರದ ಸನ್ನಿಧಿಯಲ್ಲೇ ಆಸೀನರಾಗಿದ್ದರು. ಉತ್ಸವವು ಮುಂದೆ ಹೊರಟು, ಬೆಂಗಳೂರಿನ ಕೆಲವು ಪ್ರಮುಖ ರಾಜ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬಂತು. ಸುಮಾರು ರಾತ್ರಿ 8 ಘಂಟೆ ವೇಳೆಗೆ ಬೆಂಗಳೂರನ್ನು ಬಿಟ್ಟು ಮೆರವಣಿಗೆಯು ದುಃಖ ಗೌರವಗಳೊಡನೆ ಶ್ರೀ ಶ್ರೀಗಳ ಗುಣಾತಿಶಯಗಳನ್ನು, ಜೀವನವನ್ನು ಸ್ಮರಿಸುತ್ತಾ,

ತಮ್ಮ ತಮ್ಮಲ್ಲೇ ಮಾತನಾಡುತ್ತಾ ಹಿಂಬಾಲಿಸುವ ಸ್ಪೆಷಲ್ ಬಸ್ಸುಗಳು, ಕಾರಿನಲ್ಲಿ, ಇತರ ವಾಹನಗಳಲ್ಲಿ ತುಂಬಿದ್ದ ಭಕ್ತರೊಡಗೂಡಿ ರಾತ್ರೆ ಸುಮಾರು 11.30ಕ್ಕೆ ಹೊಳೆನರಸೀಪುರದ ಪವಿತ್ರ ಹೇಮಾವತೀ ನದಿಯ ತೀರವನ್ನು ತಲುಪಿತು.

ರಾತ್ರೆ 9 ಘಂಟೆಯಿಂದಲೂ ನದಿಯ ತೀರದಲ್ಲಿ ಗುರುಗಳ ಅಂತ್ಯದರ್ಶನಕ್ಕಾಗಿ ಕಾದಿದ್ದ ಅಸಂಖ್ಯಾತ ಭಕ್ತವೃಂದವು ಶ್ರೀಶ್ರೀಗಳವರ ಪಾರ್ಥಿವ ಶರೀರವನ್ನು ಕಾಣುತ್ತಲೆ ಜಯಘೋಷ ಮಾಡಿದರು. ಆ ವೇಳೆಗೆ ಭಜನೆಯ ವೃಂದದವರೆಲ್ಲರೂ ಸ್ಥಳವನ್ನು ತಲುಪಿದ್ದರು. ಹೊಳೆನರಸೀಪುರದ ಪ್ರಮುಖರಾಜಬೀದಿಗಳಲ್ಲಿ ಹೊರಟ ಉತ್ಸವವು ಭಕ್ತರುಗಳ ಒತ್ತಡದಿಂದ ನಿಧಾನವಾಗಿ ಸಾಗಿತು. ಒಂದೊಂದು ಮನೆಯ ಮುಂದೆಯೂ ಸುಮಂಗಲಿಯರು ಆರತಿಗಳನ್ನು ಬೆಳಗಿದರು. ಪುಷ್ಪವೃಷ್ಟಿಯನ್ನು ಕರೆದರು. ಶ್ರೀಶ್ರೀಗಳು ಕುಳಿತಿದ್ದ ಭಂಗಿಯಂತೂ ಉಪನ್ಯಾಸಮಾಡುತ್ತಾ ಜೀವಂತ ರಾಗಿ ಕುಳಿತಿರುವಂತೆಯೇ ಇತ್ತು. ಮುಖವು ಹೆಚ್ಚು ಕಳೆಯಿಂದ ಕೂಡಿದ್ದು ಕೇಸರಿಯ ಬಣ್ಣವನ್ನು ಹೋಲುತ್ತಿತ್ತು. ನೋಡುತ್ತಿದ್ದವರಿಗೂ ಶ್ರೀಗಳು ದೇಹತ್ಯಾಗ ಮಾಡಿದ್ದಾರೆಂದು ಅನ್ನಿಸಲೇ ಇಲ್ಲ. ಚಿಕ್ಕ ಚಿಕ್ಕ ಮಕ್ಕಳೂ ಕೂಡ ಮುಟ್ಟಿ ನಮಸ್ಕಾರ ಮಾಡಿದರು. ಎಷ್ಟು ಹೊತ್ತು ನೋಡಿದರೂ ತೃಪ್ತರಾಗದೆ ಜನರು ಮೆರವಣಿಗೆಯನ್ನು ಹಿಂಬಾಲಿಸುತ್ತಿದ್ದರು. ಹೀಗೆ ಹೊರಟ ಮೆರವಣಿಗೆಯು ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ತಲುಪಲು ಮೂರು ಘಂಟೆಗಳ ಕಾಲವನ್ನು ತೆಗೆದುಕೊಂಡಿತು.

ಕಾರ್ಯಾಲಯದ ಮುಖ್ಯಸಭಾಂಗಣದ ವರಾಂಡದಲ್ಲಿ ಉಚ್ಚಾಸನದಲ್ಲಿ ಬೆಳಗಿನವರೆಗೂ ಅಂತ್ಯದರ್ಶನಕ್ಕಾಗಿ ಶರೀರವನ್ನಿಡಲಾಗಿತ್ತು. ರಾತ್ರೆಯೆಲ್ಲ ಅಖಂಡ ಭಜನೆಯಾಯಿತು. ಪ್ರಾತಃಕಾಲ 7 ಘಂಟೆಗೆ ಶ್ರೀಶ್ರೀಗಳ ಪೂರ್ವಾಶ್ರಮದ ಔರಸ ಪುತ್ರರಾದ ಶ್ರೀ ವೈ. ನರಸಪ್ಪನವರು ದೀಕ್ಷಾವಿಸರ್ಜನಪೂರ್ವಕ ನದೀಸ್ನಾನವನ್ನು ಮಾಡಿಕೊಂಡು ಬ್ರಾಹ್ಮಣರೊಡಗೂಡಿ ಗಂಗೆಯನ್ನು ತಂದರು. ಹೊಳೆನರಸೀಪುರದ ಕೆಲವು ಮಹಾಜನರ ಅಪೇಕ್ಷೆಯಂತೆ ಮತ್ತೊಮ್ಮೆ 6ನೆಯ ತಾರೀಖು ಬೆಳಗ್ಗೆ 7-30 ಘಂಟೆಗೆ ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಶ್ರೀಶ್ರೀಗಳವರ ಪಾರ್ಥಿವಶರೀರವನ್ನು ಊರಿನ ಕೋಟೆಯ ರಾಜಬೀದಿಗಳಲ್ಲಿ ಮೆರವಣಿಗೆಮಾಡಲಾಯಿತು. ಅನಂತರ ವೈದಿಕವಿದ್ವನ್ಮಣಿಗಳು ಮಂತ್ರಪಠನಮಾಡುತ್ತಿದ್ದಂತೆಯೇ ಸಾಲಿಗ್ರಾಮ, ಶಿವಲಿಂಗ ಗಳನ್ನು ಸಮೀಪದಲ್ಲಿಟ್ಟುಕೊಂಡು ಪಾರ್ಥಿವಶರೀರಕ್ಕೆ ಪಂಚಾಮೃತಾಭಿಷೇಕ ಪೂರ್ವಕ ಪೂಜೆಯನ್ನು ನೆರವೇರಿಸಲಾಯಿತು. (ಸಮಾಧಿ ಸ್ಥಳವನ್ನು ಮುಂದಾಗಿಯೇ ಗೊತ್ತುಮಾಡಿ ಮೊದಲೇ ಸಿದ್ಧಗೊಳಿಸಲಾಗಿತ್ತು.) ಶಾಸ್ತ್ರೋಕ್ತ ರೀತಿಯಿಂದ ಬ್ರಾಹ್ಮಣರು ಗರ್ತ(ಗುಂಡಿ)ವನ್ನು ಸಂಸ್ಕರಿಸುತ್ತಿದ್ದಂತೆ ಗರ್ತದಲ್ಲಿ ಜಲೋದ್ಭವ-

ವಾಯಿತು. ಇದೊಂದು ಆಶ್ಚರ್ಯಕರವಾದ ಸಂಗತಿಯಾಗಿತ್ತು. ವಿಧಿಗಳೆಲ್ಲ ಮುಗಿದ ಅನಂತರ ಪಾರ್ಥಿವಶರೀರವನ್ನು ಗರ್ತದೊಳಕ್ಕೆ ಇಳಿಸಲಾಯಿತು. ತಲೆಯಮೇಲೆ ತೆಂಗಿನಕಾಯಿಗಳನ್ನು ಒಡೆಯಲಾಯಿತು. ಕರ್ಪೂರ, ಸುಗಂಧ-ದ್ರವ್ಯಗಳು, ಉಪ್ಪು - ಮುಂತಾದವುಗಳನ್ನು ಹರಡಿ 6ನೇ ತಾರೀಖು ಬೆಳಗ್ಗೆ 10 ಘಂಟೆಗೆ ಸರಿಯಾಗಿ ಮಹಾಸಮಾಧಿಯನ್ನು ಮಾಡಲಾಯಿತು ; ಅನಂತರ ಮಂಗಲಾರತಿ, ನಮಸ್ಕಾರಗಳಿಂದ ಬೀಳ್ಕೊಡಲಾಯಿತು. ಪರಸ್ಥಳಗಳಿಂದ ಬಂದಿದ್ದ ಸಮಸ್ತಭಕ್ತವೃಂದಕ್ಕೂ ಆ ದಿನ ಭೋಜನ ಸೌಕರ್ಯವನ್ನೇರ್ಪಡಿಸಲಾಗಿತ್ತು.

7ನೆಯ ತಾರೀಖು ಗುರುವಾರದಿಂದ ಪ್ರತಿದಿನವೂ ಬೆಳಗ್ಗೆ 9 ಘಂಟೆಯಿಂದ ಸಮಾಧಿಯ ಸಮೀಪದಲ್ಲಿ ಋತ್ವಿಜರುಗಳು ವೇದಪಾರಾಯಣ, ಪ್ರಸ್ಥಾನತ್ರಯ ಭಾಷ್ಯಪಾರಾಯಣ, ಗೀತಾವಿಷ್ಣುಸಹಸ್ರನಾಮಗಳ ಪಠನ, ಭಜನೆ, ಜಪಾದಿಗಳನ್ನು ನಡೆಯಿಸುತ್ತಿದ್ದರು. ವೇದಿಕೆಯಮೇಲೆ ಪ್ರತಿದಿನವೂ ಶಾಲಗ್ರಾಮಾದಿಗಳನ್ನಿರಿಸಿ ಪಂಚಾಮೃತಾಭಿಷೇಕ, ರುದ್ರಾಭಿಷೇಕಪೂರ್ವಕ ಪೂಜಾರಾಧನೆಯನ್ನು ಪರಮಾನ್ನ ನೈವೇದ್ಯದೊಡನೆ ನಡೆಯಿಸಲಾಯಿತು. ಋತ್ವಿಜರಿಗೂ ಪರಸ್ಥಳದ ಭಕ್ತವೃಂದ ದವರಿಗೂ ಪ್ರತಿನಿತ್ಯವೂ ಭೋಜನವನ್ನು ಏರ್ಪಡಿಸಲಾಗಿತ್ತು.

8ನೆಯ ತಾರೀಖು ಶುಕ್ರವಾರ ಸಂಜೆ ಹೊಳೆನರಸೀಪುರದ ಕೋಟೆಯಲ್ಲಿರುವ ಶ್ರೀ ಶಾರದಾಂಬಾ-ಶಂಕರಾಚಾರ್ಯದೇವಾಲಯದಲ್ಲಿ ಪುರಪ್ರಮುಖರೆಲ್ಲ ಸಭೆಸೇರಿ ಶ್ರೀಶ್ರೀಗಳವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಶ್ರೀ ಶಂಕರ ಜಗದ್ಗುರು ಸೇವಾಸಂಘದವರು ಈ ಸಮಾರಂಭವನ್ನೇರ್ಪಡಿಸಿದ್ದರು. ವೇ|| ಬ್ರ|| ಶ್ರೀ ಎಸ್. ವಿಠಲಶಾಸ್ತ್ರಿಗಳು, ವೇ|| ಪರಕ್ಕಜೆ ಸುಬ್ರಹ್ಮಣ್ಯಭಟ್ಟರು, ವೇ|| ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು - ಶ್ರೀಶ್ರೀಗಳ ಗುಣಗಾನವನ್ನು ಮಾಡಿದರು.

9ನೆಯ ತಾರೀಖು ಶನಿವಾರ ಶ್ರೀದಿಗ್ವಿಜಯ ರಾಮದೇವರಿಗೆ ಮಹಾಭಿಷೇಕ, ಪೂಜೆ, ವಿಶೇಷಾಲಂಕಾರ, ಮಂಗಲಾರತಿ, ಪ್ರಸಾದವಿನಿಯೋಗಗಳನ್ನು ಶ್ರೀಶ್ರೀಮಹಾ ಸಮಾಧಿಗೆ ಪುಷ್ಪಹಾರವನ್ನರ್ಪಿಸಿ ಭಕ್ತಿಸಮರ್ಪಣೆಯನ್ನು ಕಾರ್ಯಾಲಯದ ನೌಕರ ವರ್ಗದವರು ಮಾಡಿದರು. ಸಮಸ್ತ ಭಕ್ತರೂ ಶ್ರೀಶ್ರೀಗಳವರ ದಿವ್ಯಾತ್ಮಕ್ಕೆ ಪ್ರಣಾಮ ಗಳನ್ನು ಸಲ್ಲಿಸಿದರು.

ತಾ|| 15-8-75ನೇ ಶುಕ್ರವಾರದಿಂದ ವಿಶೇಷ ಆರಾಧನಾಕಾರ್ಯಕ್ರಮಗಳು ಆರಂಭವಾದವು. ಈ ವೇಳೆಗಾಗಲೇ 18ನೇ ತಾ|| ಸೋಮವಾರ ನಡೆಯಲು ಏರ್ಪಾಡಾಗಿದ್ದ ಮುಖ್ಯಾರಾಧನೆಗೆ ದಯಮಾಡಿಸುವಂತೆ ಅಧ್ಯಾತ್ಮಪ್ರಕಾಶ ಪತ್ರಿಕೆಯ

ಎಲ್ಲಾ ಚಂದಾದಾರರು, ಪೋಷಕರು, ಮಹಾಪೋಷಕರುಗಳಿಗೂ ಅಂಚೆಯ ಮೂಲಕ ತಿಳಿಸಲಾಗಿತ್ತು. ಶುಕ್ರವಾರದ ದಿನ ಶ್ರೀ ವೈ. ನರಸಪ್ಪನವರು ತಮ್ಮ ಬ್ರಹ್ಮೀಭೂತ ಪೂಜ್ಯಪಿತೃಗಳಿಗೆ ನಡೆಯಿಸಬೇಕಾದ ಶ್ರಾದ್ಧಕರ್ಮವನ್ನು ಶಾಸ್ತ್ರೋಕ್ತ ರೀತಿಯಿಂದ ನಡೆಯಿಸಿದರು. ಐದು ಜನ ಬ್ರಾಹ್ಮಣರನ್ನು ಆಹ್ವಾನಿಸಲಾಗಿತ್ತು. ಶ್ರೀಯುತರ ಬಂಧುಬಳಗದವರೆಲ್ಲ ಇದರಲ್ಲಿ ಭಾಗವನ್ನುವಹಿಸಿ ಪ್ರಸಾದವನ್ನು ಸ್ವೀಕರಿಸಿದರು. 16ನೆಯ ತಾ|| ಶನಿವಾರ ಹದಿಮೂರು ಜನ ಬ್ರಾಹ್ಮಣರನ್ನು ಆಹ್ವಾನಿಸಿ 'ನಾರಾಯಣಬಲಿ' ಎಂಬ ಕರ್ಮವನ್ನು ವಿಧಿವತ್ತಾಗಿ ನೆರವೇರಿಸಲಾಯಿತು.

17ನೇ ತಾ|| ಭಾನುವಾರ ಮಹಾಸಮಾಧಿಯನ್ನು ಚಪ್ಪರ ತೋರಣಗಳಿಂದ ಅಲಂಕರಿಸಲಾಗಿತ್ತು. ಏಕಾದಶಿಯಾದ್ದರಿಂದ ಆ ದಿನ ಮಹಾಸಮಾಧಿಯ ಬಳಿ ಏಕಾದಶವಾರ ರುದ್ರಾಭಿಷೇಕ, ಸಹಸ್ರನಾಮಾರ್ಚನೆಗಳನ್ನೂ ಭಕ್ತರೊಬ್ಬರ ಇಚ್ಛೆಯಂತೆ ಗಾಯತ್ರೀ ಹೋಮವನ್ನೂ ನಡೆಯಿಸಲಾಯಿತು. ಶ್ರೀ ದಿಗ್ವಿಜಯ ರಾಮದೇವರನ್ನು ಆಭರಣಗಳಿಂದಲೂ ಪುಷ್ಪಮಾಲಿಕೆಗಳಿಂದಲೂ ಭವ್ಯವಾಗಿ ಅಲಂಕರಿಸಲಾಗಿತ್ತು. ಸಂಜೆ ಐದು ಘಂಟೆಗೆ ಸೇರಿದ ಮಹಾಸಭೆಯಲ್ಲಿ ವೇ|| ಬ್ರ|| ಶ್ರೀ ಎಸ್. ವಿಠಲಶಾಸ್ತ್ರಿಗಳು, ವೇ|| ಪರಕ್ಕಜೆ ಸುಬ್ರಹ್ಮಣ್ಯ ಭಟ್ಟರು, ವೇ|| ಕೆ. ಜಿ. ಸುಬ್ರಾಯಶರ್ಮರು, ವೇ|| ಹೆಚ್. ಅನಂತಮೂರ್ತಿಶಾಸ್ತ್ರಿಗಳು, ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು, ವೇ|| ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು, ಶ್ರೀ ಸಜ್ಜನಘಡ ರಾಮಸ್ವಾಮಿಗಳು ಸಹ ಶ್ರೀಶ್ರೀಗಳವರ ಜೀವನಾದರ್ಶಗಳು, ಗ್ರಂಥಗಳು, ತಪಸ್ಸು – ಜ್ಞಾನನಿಷ್ಠೆಗಳನ್ನು ವಿವರಿಸಿ ಭಾಷಣಗಳನ್ನು ಮಾಡಿದರು. ಬೆಂಗಳೂರಿನಿಂದ ದಯಮಾಡಿಸಿದ್ದ ಶ್ರೀ ನಿಖಿಲಾನಂದಗುಪ್ತರು ತೆಲುಗಿನಲ್ಲಿಯೂ ದಕ್ಷಿಣ-ದೇಶದಿಂದ ದಯಮಾಡಿಸಿದ್ದ ಶ್ರೀ ನಟರಾಜಶಾಸ್ತ್ರಿಗಳು ಸಂಸ್ಕೃತಭಾಷೆಯಲ್ಲಿಯೂ ಮಾತನಾಡಿದರು. ಸಭೆಯು ಪೂರೈಸಿದ ಅನಂತರ ಸಂಜೆ 8 ಘಂಟೆಗೆ ಸರಿಯಾಗಿ ಮಹಾಸಮಾಧಿಯ ಬಳಿ ಅಖಂಡಭಜನೆಗೆ ಆರಂಭವಾಯಿತು. ಆ ವೇಳೆಗೆ ಮಹಾಸಮಾಧಿಸ್ಥಳವನ್ನು ವಿದ್ಯುದ್ದೀಪಗಳಿಂದ ಅಲಂಕೃತವಾದ ಭವ್ಯಪುಷ್ಪಮಂಟಪ-ವಾಗಿ ಪರಿವರ್ತಿಸಿ ಅಲಂಕರಿಸಲಾಗಿತ್ತು. ಶ್ರೀಶ್ರೀಗಳವರ ಭಾವಚಿತ್ರವು ನಡುವೆ ವಿರಾಜಮಾನವಾಗಿತ್ತು. ಸಮಸ್ತಭಕ್ತರ ಹೃದಯದಲ್ಲಿಯೂ ಶ್ರೀಶ್ರೀಗಳವರ ಅಖಂಡಾತ್ಮವೇ ತುಂಬಿ ಹೋಗಿತ್ತು. ಬೆಂಗಳೂರಿನಿಂದ ಬಂದಿದ್ದ ಪಂಡರಿ ಭಜನಸಂಘದವರು ನಡೆಯಿಸಿದ ಪಕ್ಕವಾದ್ಯಗಳ ಸಮೇತವಾದ ಅಖಂಡ ಭಜನೆಯು ಎಲ್ಲರ ಮನಸ್ಸನ್ನೂ ಸೂರೆಗೊಂಡಿತ್ತು. ರಾತ್ರಿಯೆಲ್ಲ ಅವಿಚ್ಛಿನ್ನವಾಗಿ ನಡೆದ ಈ ಭಜನೆಯಲ್ಲಿ ಭಕ್ತರುಗಳು ಪಾಲ್ಗೊಂಡು ಒಂದೊಂದು ಗುಂಪಾಗಿ ಸಮಾಧಿ ಸ್ಥಳವನ್ನು ಪ್ರದಕ್ಷಿಣೆಮಾಡುತ್ತಾ ತಾಳಹಾಕುತ್ತಾ ಭಗವನ್ನಾಮಕೀರ್ತನೆಮಾಡುತ್ತಿದ್ದ ದೃಶ್ಯವು

ಅಪೂರ್ವವಾಗಿತ್ತು. ಒಂದುಕಡೆ ಮಾರನೆಯ ದಿನದ ಸಂತರ್ಪಣೆಗೂ ಸಿದ್ಧತೆಗಳು ನಡೆಯುತ್ತಿತ್ತು. ವಿಶ್ವಾಮಿತ್ರಸೃಷ್ಟಿಯಂತೆ ಬಹುಕ್ಷಿಪ್ರವಾಗಿ ನಿರ್ಮಿತವಾದ ಅಡುಗೆ ಮನೆ, ಊಟದ ಚಪ್ಪರ, ಜನರ ಸಂಭ್ರಮ, ಆಹಾರಪದಾರ್ಥಗಳ ರಾಶಿಗಳು, ಆಳೆತ್ತರಕ್ಕೂ ಮೀರಿದ ಪಾತ್ರೆಗಳ ಗುಂಪು – ಮುಂತಾದವನ್ನು ನೋಡಿ ಜನರು ಬೆರಗಾದರು. ಶ್ರೀಶ್ರೀಗಳವರು ಒಬ್ಬ ಅದ್ಭುತಪವಾಡಪುರುಷರೆಂಬುದು ಆಗಿನ ಸನ್ನಿವೇಶವನ್ನು ನೋಡಿದವರಿಗೆಲ್ಲ ನೆನಪಾಗುತ್ತಿತ್ತು. ಶಿಷ್ಟಾಚಾರಪದ್ಧತಿಗೆ ಮೀರದಂತೆ ಬೇರೆ ಬೇರೆಯ ಜನಾಂಗದ ಭಕ್ತರುಗಳಿಗೆ ಗೊತ್ತಾದ ಸ್ಥಳಗಳಲ್ಲಿ ಪ್ರಸಾದಕ್ಕೆ ಏರ್ಪಾಡಾಗಿದ್ದು ಎಲ್ಲರ ಮನಸ್ಸನ್ನೂ ಸಂತೋಷಗೊಳಿಸಿತ್ತು. ಶ್ರೀಶ್ರೀಗಳವರ ಸಮಸ್ತಭಕ್ತವೃಂದವನ್ನೂ ಪ್ರಸಾದಕ್ಕೆ ಆಹ್ವಾನಿಸಲಾಗಿತ್ತು.

18ನೇ ತಾರೀಖು ಸೋಮವಾರ ಬೆಳಿಗ್ಗೆ 7 ಘಂಟೆಗೆ ಮುಖ್ಯಾರಾಧನ ಅಂಗವಾಗಿ ಮಹಾಸಮಾಧಿಯ ಬಳಿ ರುದ್ರಾಭಿಷೇಕ, ವಿಶೇಷ ಪೂಜಾದಿಗಳು ನೆರವೇರಿದವು. ಭಕ್ತರುಗಳಿಂದ ಭಜನೆಯೂ ಪೂಜಾದಿಗಳೂ ಉಪನ್ಯಾಸಗಳೂ ನಿರಂತರವಾಗಿ ನಡೆಯುತ್ತಿತ್ತು. 9 ಘಂಟೆಗೆ ಸರಿಯಾಗಿ ಶ್ರೀರಾಮ ದೇವಾಲಯದ ಮಡಿಯಾದ ಆವರಣದಲ್ಲಿ ಆರಾಧನೆಯ ಕಾರ್ಯಕ್ರಮಗಳು ಆರಂಭವಾದುವು. ಈ ಸಂದರ್ಭಕ್ಕಾಗಿಯೇ ಮೈಸೂರು, ಬೆಂಗಳೂರು, ಹಾಸನ, ಚಿಕ್ಕಮಗಳೂರು, ಸಾಲಿಗ್ರಾಮ ಮುಂತಾದ ಕಡೆಗಳಿಂದ ವೇದಮೂರ್ತಿಗಳಾದ ವಿದ್ವಾಂಸರುಗಳನ್ನು ಕರೆಯಿಸಲಾಗಿತ್ತು. ಈ ವೈದಿಕರು 9 ಘಂಟೆಯಿಂದ ಪ್ರಾರಂಭಿಸಿ ಆರಾಧನಾ ಕಾರ್ಯವು ಮುಗಿಯುವವರೆಗೂ ವೇದ ಪಾರಾಯಣಾದಿಗಳನ್ನು ನಡೆಸಿದರು. ಒಳಗಡೆಯ ಮಡಿ ಆವರಣದಲ್ಲಿ ಹದಿನಾರು ಜನ ಬ್ರಾಹ್ಮಣರನ್ನು ಆಹ್ವಾನಿಸಿ ಕೂಡಿಸಲಾಯಿತು. ಪುರೋಹಿತರ ನೇತೃತ್ವದಲ್ಲಿ ಸಕಾಲಕ್ಕೆ ಆರಾಧನಾ ಕಾರ್ಯಗಳು ಉಪಕ್ರಿಯವಾದವು. ಶಾಸ್ತ್ರೋಕ್ತವಾದ ವೈದಿಕಾರಾಧನೆಯಲ್ಲಿ ಬ್ರಾಹ್ಮಣ ಭೋಜನಾ ನಂತರ ತೀರ್ಥರಾಜಪೂಜೆಯೂ ಫಲತಾಂಬೂಲಗಳು ದಾನ-ಧರ್ಮಗಳೂ ನೆರವೇರಿಸಲ್ಪಟ್ಟವು. ಕೊನೆಯಲ್ಲಿ ವೇ|| ಎಸ್. ವಿಠಲಶಾಸ್ತ್ರಿಗಳು ಮತ್ತು ಪಂಡಿತ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳಿಂದ ಭಾಷಣ, ವಂದನಾರ್ಪಣೆಗಳಾದವು. ಅನಂತರ ಶ್ರೀ ದಿಗ್ವಿಜಯ ರಾಮದೇವರಿಗೂ ಮಹಾಮಂಗಲಾರತಿಯಾಯಿತು. ಬ್ರಾಹ್ಮಣರಿಂದ ವೇದಘೋಷ ಆಶೀರ್ವಚನಗಳಾದವು. ಸರ್ವರಿಗೂ ತೀರ್ಥವಿನಿ ಯೋಗದೊಡನೆ ಆರಾಧನೆಯ ಕಾರ್ಯವು ಸಮಾಪ್ತಿಯಾಯಿತು.

11-30 ಘಂಟೆಯಿಂದ ಅನ್ನದಾನವೂ ಮಹಾಸಂತರ್ಪಣೆಯೂ ನಡೆಯಿತು. ಗೊತ್ತಾದ ಸ್ಥಳಗಳಲ್ಲಿ ನಡೆದ ಈ ಮಹಾಸಂತರ್ಪಣೆಯಲ್ಲಿ ಸಂಜೆ ಆರು ಘಂಟೆಯ ವರೆಗೂ ಅವಿಚ್ಛಿನ್ನವಾಗಿ ಅನ್ನದಾನವು ನೆರವೇರಿತು. ಸುಮಾರು ಹತ್ತು ಹನ್ನೆರಡು

ಸಹಸ್ರ ಜನಗಳಿಗೆ ಜಾತಿಮತಭೇದವಿಲ್ಲದೆ ಶ್ರೀ ಸದ್ಗುರು ಪ್ರಸಾದವು ಲಭ್ಯವಾಯಿತು. ಅಂತೂ ಈ ಮಹಾಕಾರ್ಯವು ಸದ್ಗುರುಗಳವರ ಕೃಪೆಯಿಂದಲೂ ಮಹಾಜನರ ಉದಾರ ಸಹಾಯದಿಂದಲೂ ಯಾವ ಆತಂಕವೂ ಇಲ್ಲದೆ ತುಂಬ ವಿಜೃಂಭಣೆಯಿಂದ ನೆರವೇರಿತು. ನೆರೆದಿದ್ದ ಭಕ್ತಮಹಾಜನರೆಲ್ಲರೂ ಗುರುಸ್ಮರಣೆಯನ್ನು ಮಾಡುತ್ತಾ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಮಾಡಿದರು.

ಈ ದಿನಕ್ಕೆ ಆಹ್ವಾನಿತರಲ್ಲಿ ಮುಖ್ಯರಾಗಿ ಬೆಂಗಳೂರಿನ ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳಾದ ಶ್ರೀ ಖೋಡೆ ಈಶ್ವರಸಾ ಅಂಡ್ ಸನ್ಸ್‌ರವರ ಕುಟುಂಬವರ್ಗದವರು ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು. ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಖೋಡೆ ಕೃಷ್ಣಸಾರವರು, ಶ್ರೀ ಖೋಡೆ ರಾಮಚಂದ್ರಸಾರವರು, ಶ್ರೀ ಖೋಡೆ ಹರಿಸಾರವರು ಮತ್ತು ಅವರ ಬಂಧುವರ್ಗದವರು ಉಪಸ್ಥಿತರಾಗಿದ್ದರು. ಬೆಂಗಳೂರು ಶಾಖಾ ಕಾರ್ಯಾಲಯದ ಸ್ಥಾಪನೆಗೆ, ಕಟ್ಟಡಗಳಿಗೆ ತಮ್ಮದೇ ಪೂರ್ಣ ಸಹಾಯವನ್ನೊದಗಿಸಿದ ಈ ಮಹನೀಯರು, ಗುರುಗಳವರಲ್ಲಿ ವಿಶೇಷವಾದ ಪ್ರೇಮಾದರದ ಭಕ್ತಿಯುತರಾಗಿದ್ದವರು, ಈ ಕಾರ್ಯಕ್ಕೆ ಆಗಮಿಸಿದ್ದುದು ಯಥೋಚಿತವೇ ಆಗಿತ್ತು. ಹೀಗೆಯೇ ಈ ಶಾಖೆಯ ಮೂಲಪ್ರವರ್ತಕ, ಕಾರಣರಾದ ನೂಲೇನೂರು ದತ್ತಾಶ್ರಮದ ಪೂಜ್ಯ ಶ್ರೀ ಶ್ರೀನಿವಾಸಮೂರ್ತಿಗಳೂ ಅವರೊಡನೆ ದಯಮಾಡಿಸಿದ್ದರು. ಬೆಂಗಳೂರು ಶಂಕರಾಶ್ರಮದ ಶ್ರೀ ಸ್ವಾಮಿ ಹರತೀರ್ಥರು ಮುಂತಾಗಿ ಅನೇಕ ಸಾಧುಸತ್ಪುರುಷರು, ಕಾರ್ಯಾಲಯದ ದಾನಿ ಅಭಿಮಾನಿ ಗಣ್ಯರೂ, ವಿದ್ವಜ್ಜನರೂ, ಭಕ್ತಮಹಾಶಯರುಗಳೂ ಬಂದಿದ್ದರು. ಗುರುಭಕ್ತರಾದ ಶ್ರೀ ಖೋಡೆ ರಾಮಚಂದ್ರಸಾ ಮತ್ತು ಅವರ ಸಹೋದರರು ಈ ದಿನದ ಸಂತರ್ಪಣೆ, ಅನ್ನದಾನ, ಆರಾಧನಾದಿಗಳ ಎಲ್ಲಾ ಖರ್ಚುಗಳನ್ನೂ ವಹಿಸಿಕೊಂಡು ಉತ್ತಮ ವ್ಯವಸ್ಥೆಗಳನ್ನು ಮಾಡಿದ್ದರು.

ಶೇಷ ವಿಷಯ : ಈ ಮಹಾಕಾರ್ಯದ ಎಲ್ಲಾ ವ್ಯವಸ್ಥೆಗಳನ್ನೂ ಏರ್ಪಾಡುಗಳನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯದ (ಪ್ರೈವೇಟ್ ಟ್ರಸ್ಟ್) ಸಮಿತಿಯ ಅಧ್ಯಕ್ಷರಾದ ವೇ|| ಬ್ರ|| ಶ್ರೀ ಆಸ್ಥಾನವಿದ್ವಾನ್ ಎಸ್. ವಿಠಲಶಾಸ್ತ್ರಿಗಳವರ ನೇತೃತ್ವದಲ್ಲಿ ಕಾರ್ಯಕಾರಿ ಸಮಿತಿಯವರು ಸಮರ್ಪಕವಾಗಿ ಮಾಡಿದ್ದರು. ಸಮಿತಿಯ ಕಾರ್ಯದರ್ಶಿಗಳಾದ ಹಾಗೂ ಶ್ರೀ ಶಂಕರಜಗದ್ಗುರುಸೇವಾಸಂಘದ ಉಪಾಧ್ಯಕ್ಷರಾದ ಸ್ಥಳೀಯ ನ್ಯಾಯವಾದಿ ಮ|| ರಾ|| ಶ್ರೀ ಅರಕಲಗೂಡು ತಾಂಡವೇಶ್ವರ್‌ರವರು ಪ್ರಮುಖಪಾತ್ರವನ್ನು ವಹಿಸಿ ಎಲ್ಲಾ ಕಾರ್ಯಗಳೂ ಯಶಸ್ವಿಯಾಗಿ ನಡೆಯುವಂತೆ ಸಹಕರಿಸಿದರು. ಕಾರ್ಯಾಲಯದ ಪಂಡಿತರೂ ಶ್ರೀಶ್ರೀಗಳವರ ಪ್ರಮುಖ ಶಿಷ್ಯರಲ್ಲೊಬ್ಬರೂ ಮತ್ತು ಸ್ಥಳೀಯ ಶಂಕರಜಗದ್ಗುರುಸೇವಾಸಂಘದ ಅಧ್ಯಕ್ಷರೂ ಆದ

ಅಧ್ಯಾತ್ಮವಿದ್ಯಾಪ್ರವೀಣ ವೇ|| ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಖುದ್ದು ಎಲ್ಲಾ ಕೆಲಸಗಳಲ್ಲಿಯೂ ಹಾಜರಿದ್ದು ತಮ್ಮ ಸೇವೆಯನ್ನು ಸಲ್ಲಿಸಿದರು. ಕಾರ್ಯಾಲಯ ಹಾಗೂ ಮುದ್ರಣಾಲಯದ ಎಲ್ಲಾ ನೌಕರವರ್ಗದವರೂ ಬೆಂಗಳೂರು ಶಾಖಾ ಕಾರ್ಯಾಲಯದ ಪಂಡಿತ ಶ್ರೀ ಕೆ.ಜಿ. ಸುಬ್ರಾಯಶರ್ಮರು ಹಾಗೂ ಕಾರ್ಯಕರ್ತರಾದ ಶ್ರೀ ರಾಜಗೋಪಾಲ್, ಶ್ರೀಮತಿ ಲಕ್ಷ್ಮೀದೇವಮ್ಮನವರು ಮುಂತಾಗಿ ಸರ್ವರೂ ಮತ್ತು ಶಾಖಾಕಾರ್ಯಾಲಯದ ಸಮಿತಿಯ ಸದಸ್ಯರುಗಳೂ ಈ ಮಹಾ ಕಾರ್ಯದಲ್ಲಿ ಶಕ್ತಿಮೀರಿ ಸಹಕರಿಸಿದರು. ಅನ್ನದಾನಾದಿಕಾರ್ಯಗಳಲ್ಲಿ ಸ್ಥಳೀಯ ಪುರಸಭೆಯ ಅಧ್ಯಕ್ಷರಾದ ಶ್ರೀ ಸಿಂಗರಿಗೌಡರು, ಮಾಜಿ ಪುರಸಭಾಧ್ಯಕ್ಷರಾದ ಶ್ರೀ ಎ.ಕೆ. ಅಣ್ಣಯ್ಯನವರು ಮತ್ತು ಮಿತ್ರರು ಸಹಕರಿಸಿದರು.

ಶ್ರೀಶ್ರೀಗಳವರ ಮಹಾಸಮಾಧಿಯ ಸಮಯಕ್ಕೂ ಆರಾಧನೆಯ ಸಮಯಕ್ಕೂ ಪರಸ್ಥಳಗಳಿಂದ ಅನೇಕಭಕ್ತರುಗಳು ದಯಮಾಡಿಸಿದ್ದರು. ಶ್ರೀಶ್ರೀಗಳವರ ಪೂರ್ವಾಶ್ರಮದಿಂದಲೂ ಪರಿಚಿತರಾದವರು, ಬಂಧುಬಾಂಧವರು, ಶಿಷ್ಯರುಗಳು, ಅಭಿಮಾನಿಗಳು, ಸ್ನೇಹಿತರು – ಮುಂತಾದ ವರ್ಗದವರೆಲ್ಲ ಈ ಸಂದರ್ಭದಲ್ಲಿ ಸೇರಿದ್ದರು. ಮತ್ತೆ ಕೆಲವು ಮಹನೀಯರು ಪತ್ರಗಳಮೂಲಕ ತಮ್ಮ ಶ್ರದ್ಧಾಂಜಲಿಯನ್ನು ಸೂಚಿಸಿ ತಮ್ಮ ಭಕ್ತಿಪೂರ್ವಕವಾದ ಕಾಣಿಕೆಗಳನ್ನೂ ಕಳುಹಿಸಿ ಕೊಟ್ಟಿದ್ದರು. ಕೆಲವು ಊರುಗಳಲ್ಲಿ ಶ್ರೀಶ್ರೀಗಳವರ ಭಕ್ತವೃಂದದವರು ಸಭೆಸೇರಿ ಅನುತಾಪವನ್ನು ಸೂಚಿಸುವ ನಿರ್ಣಯಗಳನ್ನು ಕೈಗೊಂಡು ಕಾರ್ಯಾಲಯಕ್ಕೆ ಅವನ್ನು ತಿಳಿಸಿದ್ದರು.

ಇದೇ ಸಂದರ್ಭದಲ್ಲಿ ತಾ|| **17-8-75**ನೆಯ ಭಾನುವಾರ ರಾತ್ರೆ 8 ಘಂಟೆಗೆ ಕಾರ್ಯಾಲಯದಲ್ಲಿ ಟ್ರಸ್ಟ್ ಕಮಿಟಿಯವರು, ಉಭಯಕಾರ್ಯಾಲಯಗಳ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಹಾಗೂ ಮುಖ್ಯಶಿಷ್ಯರುಗಳು ಸಭೆಸೇರಿ ಶ್ರೀಶ್ರೀಗಳವರು ಸ್ಥಾಪಿಸಿರುವ ಎರಡೂ ಕಾರ್ಯಾಲಯಗಳು ಮುಂದೆ ಯಾವ ರೀತಿಯಾಗಿ ಮುಂದುವರೆಯಬೇಕೆಂಬ ವಿಷಯಕ್ಕೂ ಕೆಲಸಕಾರ್ಯಗಳನ್ನು ನಿರ್ವಹಿಸಬೇಕೆಂಬುದಕ್ಕೂ ಕೆಲವು ನಿರ್ಣಯಗಳನ್ನು ಕೈಗೊಂಡರು. ಮುಖ್ಯವಾಗಿ ಶ್ರೀಶ್ರೀಗಳವರು ಕೈಗೊಂಡಿದ್ದ ಅಧ್ಯಾತ್ಮವಿದ್ಯಾಪ್ರಸಾರ ಕಾರ್ಯವನ್ನು ತಡೆಯಿಲ್ಲದಂತೆ ಮುಂದುವರಿಸಿಕೊಂಡು ಹೋಗತಕ್ಕದ್ದೆಂತಲೂ ಇದಕ್ಕೆ ಮಹಾಜನರ ಸಹಾಯವನ್ನು ಕೇಳಿಕೊಳ್ಳತಕ್ಕದ್ದೆಂತಲೂ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಹಕರಿಸಿದ ಭಕ್ತಮಹನೀಯ-ರೆಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆ-ಗಳನ್ನು ಅಧ್ಯಾತ್ಮಪ್ರಕಾಶ ಪತ್ರಿಕೆಯ ಮೂಲಕ ಸಮರ್ಪಣೆ ಮಾಡಲಾಯಿತು.

**ಶ್ರೀಶ್ರೀಗಳವರ ಆರಾಧನೆಗಳು :** ಶ್ರೀಶ್ರೀಗಳವರ ಮಾಸಿಕಾರಾಧನೆಗಳು ಸೆಪ್ಟೆಂಬರ್‌ನಿಂದ (ಶ್ರಾವಣದಿಂದ) ಮುಂದೆ ಪ್ರತಿತಿಂಗಳ ಬಹುಳ ತ್ರಯೋದಶೀ ದಿನ ನಡೆದುವು. 3.9.75ರಂದು ಹೊಳೆನರಸೀಪುರದಲ್ಲಿ ವಿಧಿವತ್ತಾಗಿ ಪ್ರಥಮ ಮಾಸಿಕಾರಾಧನೆ ನಡೆಯಿತು. ಬೆಂಗಳೂರಿನಲ್ಲಿ 2 ಮತ್ತು 3 ಎರಡು ದಿನಾಂಕಗಳಲ್ಲೂ ಆರಾಧನೆಯ ಅಂಗವಾಗಿ 24 ಘಂಟೆಗಳ ಅಖಂಡಭಜನೆ, ಉಪನ್ಯಾಸಗಳು, ರುದ್ರಾಭಿಷೇಕ ಪೂಜಾದಿಗಳು ವೈದಿಕಕ್ರಮದಿಂದ ಆರಾಧನಾನುಷ್ಠಾನವೂ ಭಕ್ತರಿಗೆ ಅನ್ನದಾನವೂ ನೆರವೇರಿದವು. ಅನಂತರದ ಮಾಸಿಕಾರಾಧನೆಗಳಲ್ಲಿಯೂ ಎರಡು ಕಾರ್ಯಾಲಯಗಳಲ್ಲಿಯೂ ವಿಶೇಷ ಪೂಜೆ, ಪಾರಾಯಣ, ಉಪನ್ಯಾಸಗಳು ನಡೆದವು. ಹೊಳೆನರಸೀಪುರದಲ್ಲಿ ಪೇಟೆ ಮಹಿಳಾ ಭಕ್ತಮಂಡಳಿಯವರು ಆರಾಧನೆಯ ಸಂಜೆ ವೇಳೆಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಕಾರ್ಯಾಲಯದ ಪಂಡಿತರೂ ಶ್ರೀ ನಿತ್ಯಾನಂದೇಂದ್ರಸ್ವಾಮಿಗಳೂ ಇರುತ್ತಿದ್ದರು.

ಪ್ರಥಮ ವಾರ್ಷಿಕ ಆರಾಧನಾ ಮಹೋತ್ಸವವು ಹೊಳೆನರಸೀಪುರದಲ್ಲಿ 24.7.76, ಶನಿವಾರದಿಂದ ಆರಂಭವಾಯಿತು. ಬೆಳಿಗ್ಗೆ 9 ಘಂಟೆಗೆ ಮಹಾಸಮಾಧಿಯ ಸನ್ನಿಧಿಯಲ್ಲಿ ಪಂಚಾಮೃತಾಭಿಷೇಕ, ರುದ್ರಾಭಿಷೇಕ ಪೂರ್ವಕವಾಗಿ ಮಹಾಪೂಜೆ ನೆರವೇರಿತು. ಅನಂತರ ಶ್ರೀರಾಮದೇವರ ಸಮ್ಮುಖದಲ್ಲಿ ಶಾಸ್ತ್ರೋಕ್ತ ವೈದಿಕಾನುಷ್ಠಾನಗಳನ್ನು ಶ್ರೀಶ್ರೀಗಳವರ ಔರಸಪುತ್ರರಾದ, (ಕಾರ್ಯಾಲಯದ ಅಧ್ಯಕ್ಷರೂ ಸಹ) ಶ್ರೀ ವೈ. ನರಸಪ್ಪನವರು ಶ್ರದ್ಧಾಭಕ್ತಿಪೂರ್ವಕವಾಗಿ ನೆರವೇರಿಸಿದರು. ಅದೇ ಮಧ್ಯಾಹ್ನ 11 ಘಂಟೆಗೆ ಪೇಟೆಯಲ್ಲಿರುವ ಭಕ್ತಮಹಿಳೆ ಶ್ರೀಮತಿ ಯಲ್ಲಮ್ಮನವರ ಮನೆಯಲ್ಲಿ ಎಲ್ಲ ಆರ್ಯವೈಶ್ಯ ಮಹಿಳಾ ಭಕ್ತರೂ ಸೇರಿ ಶ್ರೀಶ್ರೀ ಆರಾಧನಾಂಗವಾಗಿ ಶ್ರೀರಾಮ ದೇವರಿಗೆ ವಿಶೇಷ ಪೂಜಾದಿಗಳು, ಭಜನೆ, ಉಪನ್ಯಾಸ, ಗುರುಪಾದುಕೆಗಳಿಗೆ ಅರ್ಚನೆ, ವಸ್ತ್ರಫಲಪುಷ್ಪಧನ ಸಮರ್ಪಣೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗವನ್ನೂ ಮಾಡಿದರು. ಪಂಡಿತ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು, ಶ್ರೀಶ್ರೀ ನಿತ್ಯಾನಂದೇಂದ್ರರ ಸಮ್ಮುಖದಲ್ಲಿ ಈ ಎಲ್ಲಾ ಕಾರ್ಯಗಳನ್ನೂ ನಡೆಸಿಕೊಟ್ಟರು. ಸಂಜೆ 5 ಘಂಟೆಗೆ ಶ್ರೀಶ್ರೀಗಳವರ ಗುಣಗಾನ ರೂಪದ ಉಪನ್ಯಾಸಗಳು, ಅಖಂಡಭಜನೆ (ಮರು ಬೆಳಿಗ್ಗೆ 7 ಘಂಟೆಯವರೆಗೆ) ನಡೆಯಿತು.

25 ದಿನಾಂಕ ಭಾನುವಾರ ಬೆಳಿಗ್ಗೆ 8 ಘಂಟೆಯಿಂದ ಶ್ರೀ ದಿಗ್ವಿಜಯ ರಾಮದೇವರಿಗೆ ಮಹಾಭಿಷೇಕ, ವಿಶೇಷಾಲಂಕಾರ, ಸಮಾಧಿಸನ್ನಿಧಿಯಲ್ಲಿ ಏಕಾದಶ

ವಾರ ರುದ್ರಾಭಿಷೇಕ, ಸಹಸ್ರನಾಮಾರ್ಚನೆಗಳು, ಅನಂತರದಲ್ಲಿ ಶ್ರೀರಾಮ ದೇವಾಲಯದ ಆವರಣದಲ್ಲಿ ವೈದಿಕಾನುಷ್ಠಾನಗಳು ನೆರವೇರಿದವು. ಅದೇ ಸಮಯಕ್ಕೆ ಸಮಾಧಿಯ ಮುಂದೆ ಶ್ರೀಶ್ರೀಗಳವರಿಗೆ ಅತಿ ಪ್ರಿಯವಾದ ಭಜನೆಯು ಕರ್ಣಾನಂದಕರವಾಗಿ ಸ್ಥಳೀಯ ಕಾಲೇಜ್ ಅಧ್ಯಾಪಕ ಶ್ರೀ ಹೆಚ್. ಸತ್ಯನಾರಾಯಣ ರವರ ನೇತೃತ್ವದಲ್ಲಿ ನಡೆಯಿತು. ಹೆಚ್ಚು ಸಂಖ್ಯೆಯ ಸ್ತ್ರೀಪುರುಷರು, ಮಕ್ಕಳೂ ನಾಮಕೀರ್ತನೆಯನ್ನು ಭಾವಾವೇಶದಿಂದ ಮಾಡಿದರು. ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ, ಅನ್ನದಾನವೂ ಆಯಿತು. ಈ ಸಂದರ್ಭದಲ್ಲಿ ಆಗಸ್ಟ್ 76ರ ಅಧ್ಯಾತ್ಮಪ್ರಕಾಶ ಸಂಚಿಕೆಯನ್ನು ಎಂದಿನ 24 ಪುಟಗಳ ಜೊತೆಗೆ 9 ಕನ್ನಡದ ಲೇಖನಗಳು, ಇಂಗ್ಲಿಷ್ ಲೇಖನ ಮತ್ತು ಆರಾಧನೆಯ ವಿವರಗಳನ್ನೊಳಗೊಂಡ 60 ಪುಟಗಳ ವಿಶೇಷಾಂಕವನ್ನೂ ಹೊರತರಲಾಯಿತು.

ಸಂಜೆ 7 ಘಂಟೆಗೆ ಸ್ಥಳೀಯ ಶಂಕರ ಸದ್ಗುರು ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಶಾರದಾಂಬಾ ಶಂಕರಾಚಾರ್ಯ ದೇವಾಲಯದ ಆವರಣದಲ್ಲಿ ಶ್ರೀಶ್ರೀಗಳವರ ಗುಣಗಾನ, ಭಕ್ತಿರೂಪದಲ್ಲಿ ನಡೆದ ಸಭೆಗೆ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಮುಖ್ಯಅತಿಥಿಗಳಾಗಿದ್ದರು. ಲಕ್ಷ್ಮೀನರಸಿಂಹ ಮೂರ್ತಿಗಳು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಲಯದ ಟ್ರಸ್ಟಿಗಳಾದ ಶ್ರೀ ಎ. ಎಸ್. ರಾಮಾನುಜಯ್ಯಂಗಾರ್ಯರೂ, ಶ್ರೀದೇಶಿಕಾಚಾರ್ಯರೂ ಶ್ರೀಶ್ರೀಗಳವರ ವಿಷಯವಾಗಿ ಮಾತನಾಡಿದರು. ಅನಂತರ ಶ್ರೀ ಗೊರೂರರು ಶ್ರೀಶ್ರೀಗಳವರನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಕಾರ್ಯಾಲಯದ ಸಮಿತಿ ಸದಸ್ಯರಾದ ಶ್ರೀ ಹೆಚ್.ಬಿ. ಸತ್ಯನಾರಾಯಣಶೆಟ್ಟರು ವಂದನಾರ್ಪಣೆ ಮಾಡಿದರು. ಕಾರ್ಯಯಶಸ್ಸಿಗಾಗಿ ಕಾರ್ಯಾಲಯ ಸಮಿತಿ ವೈಸ್ ಛೇರ್‌ಮನ್‌ರಾದ ಶ್ರೀ ಎ. ತಾಂಡವೇಶ್ವರರು ತುಂಬ ಶ್ರಮವಹಿಸಿದ್ದರು. ಹೀಗೆ ತನುಮನಧನಗಳಿಂದ ಸೇವೆ ಸಲ್ಲಿಸಿದ ಸಮಸ್ತ ಭಕ್ತಮಹಾಜನರಿಗೂ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿದೆ.

ಬೆಂಗಳೂರು ಶಾಖಾ ಕಾರ್ಯಾಲಯದಲ್ಲಿ ಈ ಉತ್ಸವವನ್ನು 18.7.76 ರಿಂದಲೇ ಸಪ್ತಾಹ ರೂಪದಲ್ಲಿ ಆಚರಿಸಲಾಯಿತು. ಬೆಳಿಗ್ಗೆ ಶ್ರೀಶ್ರೀಗಳವರ ಪಾದುಕೆಗಳಿಗೆ ಏಕಾದಶವಾರ ರುದ್ರಾಭಿಷೇಕ, ಗೀತಾ-ವಿಷ್ಣುಸಹಸ್ರನಾಮ ಪಾರಾಯಣ, ಶ್ರೀಶ್ರೀ ವಿರಚಿತ ಸಂಸ್ಕೃತ ಗ್ರಂಥಗಳ ಪ್ರವಚನ, ಅನಂತರ ಗುರು-ಭಕ್ತರುಗಳಿಂದ ಶ್ರೀಶ್ರೀಗಳವರಿಗೆ ಪಾದುಕಾಪೂಜೆ, ಜೊತೆಜೊತೆಗೇ ಭಜನೆ, ಕೊನೆಯಲ್ಲಿ ಮಹಾಮಂಗಲಾರತಿ, ತೀರ್ಥಪ್ರಸಾದ ವಿನಿಯೋಗ.

ಮಧ್ಯಾಹ್ನ ಶ್ರೀಶ್ರೀಗಳವರ ಗುಣಗಾನರೂಪದ ಸ್ವಂತ ಅನುಭವಗಳ ಬಿತ್ತರಣೆ, ಪುನಃ ಶ್ರೀಶ್ರೀಗಳವರ ಗ್ರಂಥಗಳನ್ನು ಕುರಿತು ಉಪನ್ಯಾಸ. ರಾತ್ರಿ ಗಮಕವಾಚನ, ವೀಣಾವಾದನ, ಸಂಗೀತ ಕಛೇರಿ (ಇವಿಷ್ಟೂ ಪ್ರತಿದಿನದ ಕಾರ್ಯಕ್ರಮಗಳು). **25.7.76**ರಂದು ಆರಾಧನಾ ಮಹೋತ್ಸವದ ಮಂಗಳ. ಆ ದಿನದ ಹಿಂದಿನ ರಾತ್ರೆಯೆಲ್ಲ ಅಖಂಡ ಭಜನೆ, ಬೆಳಿಗ್ಗೆ 6.30ರ ವರೆಗೆ. ಆಮೇಲೆ, ವಿಶೇಷ ಪೂಜೆ, ಪಾರಾಯಣ, ಭಜನೆ, ಪ್ರವಚನಾದಿ ಕಾರ್ಯಕ್ರಮಗಳು, ಮಹಾಮಂಗಲಾರತಿ, ತೀರ್ಥಪ್ರಸಾದ ವಿನಿಯೋಗ ; ಸಂಜೆ 5 ಗಂಟೆಗೆ 'ವೇದಾಂತಾರ್ಥ ಸಾರಸಂಗ್ರಹ' ಗ್ರಂಥವನ್ನು ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳು ಬಿಡುಗಡೆ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎನ್. ರಂಗನಾಥಶರ್ಮರು ಶ್ರೀಶ್ರೀಗಳವರ ಪ್ರವಚನ ವೈಖರಿ, ಪ್ರವಚನ ವೈಶಿಷ್ಟ್ಯಗಳ ಮೂಲಕ ಅವರ ಸಾಹಿತ್ಯಸೇವೆ, ಅಧ್ಯಾತ್ಮ ವಿದ್ಯಾಸೇವೆಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು. ವಿಜೃಂಭಣೆಯಿಂದ ನೆರವೇರಿದ ಕಾರ್ಯವು ಭಕ್ತಮಹಾಶಯರ ತನುಮನಗಳನ್ನು ತಣಿಸಿ, ಹೃದಯಸ್ಪರ್ಶಿಯಾಗಿತ್ತು.

ದ್ವಿತೀಯ ವಾರ್ಷಿಕೋತ್ಸವವು : ಹೊಳೆನರಸೀಪುರದಲ್ಲಿ 3 ದಿನಗಳ ಕಾರ್ಯಕ್ರಮಗಳಾದುವು. ಆರಾಧನೆಯ ಮುಖ್ಯದಿನವಾದ ತ್ರಯೋದಶೀ ಶುಕ್ರವಾರ **12.8.77**ರಂದು, ಬೆಳಿಗ್ಗೆ 7 ಘಂಟೆಯಿಂದ ಶ್ರೀ ದಿಗ್ವಿಜಯ ರಾಮದೇವರಿಗೆ ಪಂಚಾಮೃತಾಭಿಷೇಕ, ವಿಶೇಷಾಲಂಕಾರ ಪೂಜಾದಿಗಳು ನೆರವೇರಿದವು. 9.00 ಘಂಟೆಯಿಂದ ಶ್ರೀ ವಿಠಲಶಾಸ್ತ್ರಿಗಳು ಶ್ರೀಶ್ರೀವಿರಚಿತ 'ಮಾಂಡೂಕ್ಯರಹಸ್ಯವಿವೃತಿಃ' ಗ್ರಂಥದ ಪ್ರವಚನವನ್ನು ಮಾಡಿದರು. 10 ಘಂಟೆಯಿಂದ ಮಹಾಸಮಾಧಿಯ ಸನ್ನಿಧಿಯಲ್ಲಿ ರುದ್ರಾಭಿಷೇಕ ಪೂಜಾದಿಗಳು, ಅಷ್ಟಾವಧಾನ ಸೇವಾದಿಗಳಾದ ಬಳಿಕ ಮೈಸೂರಿನ ಸುಪ್ರಸಿದ್ಧ ಕಲಾವಿದ ಶ್ರೀ ಎನ್.ಎಸ್. ಸುಬ್ಬಕೃಷ್ಣರವರು ಬರೆದ ಶ್ರೀಶ್ರೀಗಳವರ '3×4'ಯ ವರ್ಣರಂಜಿತ ಭಾವಚಿತ್ರವನ್ನು ಪ್ರತಿಷ್ಠಿಸಿ ಪೂಜಾದಿಗಳನ್ನು ಸಲ್ಲಿಸಲಾಯಿತು. 11.30 ರಿಂದ ಶ್ರೀ ರಾಮದೇವಾಲಯದಲ್ಲಿ ವೈದಿಕಾರಾಧನೆಯು ಶ್ರೀ ವಿಠಲಶಾಸ್ತ್ರಿಗಳ ನೇತೃತ್ವದಲ್ಲಿ ವಿಧ್ಯುಕ್ತವಾಗಿ ನಡೆಯಿತು. ಮಹಾಮಂಗಲಾರತಿ ನಂತರ ತೀರ್ಥಪ್ರಸಾದ ವಿನಿಯೋಗ, ಸಂತರ್ಪಣೆ ಆಯಿತು.

ಸಂಜೆ 7.30ಕ್ಕೆ ಕೋಟೆಯ ಅಲಂಕೃತ ಶ್ರೀ ಶಾರದಾದೇವಿ, ಶಂಕರಾಚಾರ್ಯರ ದೇವಾಲಯದಲ್ಲಿ ಶ್ರೀ ವಿಠಲಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶ್ರೀ ಆತ್ಮಾನಂದೇಂದ್ರ ಸರಸ್ವತೀ, ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಮ್ಮುಖದಲ್ಲಿ ಶ್ರೀಶ್ರೀಗಳವರ ಗುಣಗಾನವಾಯಿತು. ಮುಖ್ಯಅತಿಥಿ ಶ್ರೀ ಕೆ. ಬಿ. ರಾಮಕೃಷ್ಣರಾಯರು ಶ್ರೀಶ್ರೀಗಳ

'ಬ್ರಹ್ಮಸೂತ್ರಭಾಷ್ಯಸಾರ'ವನ್ನು ಬಿಡುಗಡೆ ಮಾಡಿ, 'ಶಾಂಕರವೇದಾಂತದ ಪುನರುದ್ಧಾರ'ವೆಂಬಲ್ಲಿ ಶ್ರೀಶ್ರೀಗಳವರ ಪರಮೋಪಕಾರವನ್ನು ಮುಕ್ತಕಂಠದಿಂದ ಹೊಗಳಿದರು.

13, 14ರ ಬೆಳಿಗ್ಗೆ ಶ್ರೀ ವಿಠಲಶಾಸ್ತ್ರಿಗಳಿಂದ ಶ್ರೀಶ್ರೀಗಳ ಗ್ರಂಥಪ್ರವಚನವೂ, 14ರ ಸಂಜೆ ಪಂಡಿತ ಲ. ನ. ಮೂರ್ತಿಗಳ ಉಪನ್ಯಾಸವೂ ಇತ್ತು. 13ರ ಸಂಜೆ 6ರಿಂದ ಬೆಳಗ್ಗಿನವರೆಗೆ ಅಖಂಡ ಭಜನೆಯಾಯಿತು. 14ರಂದು ಶ್ರೀರಾಮರಿಗೂ ಮಹಾ ಸಮಾಧಿಗೂ ಮಂಗಲಾರತಿಯೊಡನೆ ಆರಾಧನಾ ಉತ್ಸವ ಸಮಾಪ್ತಿಯಾಯಿತು.

ಅದಕ್ಕೆ ಮೊದಲು 14.7.77ರಿಂದ ಮೂರು ದಿನ ಅಧಿಕಾಷಾಢದಲ್ಲಿಯೂ ಶ್ರೀಗಳವರ ಆರಾಧನಾ ದಿನ ಪೂಜೆ, ಪ್ರವಚನ, ಸಂತರ್ಪಣೆ ನಡೆಯಿತು.

ಬೆಂಗಳೂರು ಶಾಖಾಕಾರ್ಯಾಲಯದಲ್ಲಿ ಅಧಿಕಾಷಾಢ ಬಹುಳ ತ್ರಯೋದಶೀ ದಿನ (14.7.77) ಶ್ರೀಗಳವರ ಆರಾಧನಾ ನಿಮಿತ್ತವಾಗಿ ಪೂಜಾ ಭಜನಾದಿಗಳೂ, ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳು, ದೇವರಾಯ ಕುಲಕರ್ಣಿಗಳಿಂದ ಪ್ರವಚನಗಳು ಯಥಾಶಕ್ತಿ ಅನ್ನ ಸಂತರ್ಪಣೆಯಾಯಿತು. ನಿಜ ಆಷಾಢಮಾಸದಲ್ಲಿ ಆರಾಧನಾ ಉತ್ಸವವು ಇದೇ ರೀತಿ ನಡೆಯಿತು.

ತೃತೀಯ ಸದ್ಗುರು ಆರಾಧನೋತ್ಸವ : ಹೊಳೆನರಸೀಪುರದಲ್ಲಿ ಆರಾಧನೆಯದಿನದಿಂದಲೇ, ಆಷಾಢ ಬಹುಳ ತ್ರಯೋದಶೀ 1.8.78ರಿಂದಲೇ ಪ್ರಾರಂಭವಾಗಿ, 3.8.78 ಮುಕ್ತಾಯವಾಯಿತು. ಮುಂದೆ ಹಲವಾರು ವರ್ಷಗಳು ಆರಾಧನಾ ಉತ್ಸವವು, ಇದೇ ರೀತಿ – ಹೊಳೆನರಸೀಪುರದಲ್ಲಿ 3 ದಿನಗಳೂ, ಶಾಖಾಕಾರ್ಯಾಲಯದಲ್ಲಿ ಏಳು ದಿನಗಳು ಸಪ್ತಾಹ ರೀತಿಯಲ್ಲಿ, 8ನೇ ದಿನ ಆರಾಧನೆಯ ಕಾರ್ಯವನ್ನೂ ನಡೆಸಿಕೊಂಡು ಬಂದಿತು.

24.7.76ರಂದು ರಾಯದುರ್ಗದ ಅಧ್ಯಾತ್ಮವಿಚಾರ ಸಂಘದವರು ಮೆಚ್ಚೇರಿ ಶ್ರೀ ಶ್ರೀ ಸದಾನಂದಸ್ವಾಮಿಗಳ ಅಧ್ಯಕ್ಷತೆಯಲ್ಲಿ ಆರಾಧನೆಯನ್ನು ಯಥೋಚಿತವಾಗಿ ನಡೆಸಿದರು. ಶ್ರೀಶ್ರೀಗಳವರ ವೇದಾಂತ ಪ್ರಕ್ರಿಯೆಯ ಪ್ರಚಾರದಲ್ಲಿ ತುಂಬ ಉತ್ಸಾಹದಿಂದ ತೆಲುಗು ಪ್ರಾಂತ್ಯದಲ್ಲಿ ಕೆಲಸ ಮಾಡುತ್ತಿರುವ ಶ್ರೀ ಲಕ್ಷ್ಮೀಕಾಂತ ಶರ್ಮರ "ಅನುಭಾವಮು-ಭಾಗ 1" ಎಂಬ ಪುಸ್ತಕವನ್ನು ಬೊಮ್ಮಕ್ಕಪಲ್ಲಿಯ ಶ್ರೀಶ್ರೀ ಸರ್ವೇಶ್ವರಾನಂದ ಸ್ವಾಮಿಗಳು ಪ್ರಕಾಶಗೊಳಿಸಿದರು. 800 ಸಭಿಕರಿದ್ದರು.

# ಅಧ್ಯಾಯ - 2

## 1. ಕಾರ್ಯಾಲಯದ ಹೊಸಶಕೆಯ ಮಂದ ಕಿರಣಗಳು (1975-2006)

**ಪೀಠಿಕೆ :** ಶ್ರೀಶ್ರೀಗಳವರ ನಿರ್ಯಾಣದೊಡನೆ, ಕಾರ್ಯಾಲಯದ ಒಂದು ಶಕೆಯೇ ಮುಗಿದಂತಾಯಿತು. ಇಲ್ಲಿಯವರೆಗಿನ ಚರಿತ್ರೆಯ ಸೊಬಗು, ಮನ ಸೆಳೆಯುವ ಆಕರ್ಷಣೆ ಎಲ್ಲಕ್ಕೂ ಕೇಂದ್ರ ಶ್ರೀಗಳವರೇ ಆಗಿದ್ದರು. ಅವರು ತುಳಿದದ್ದು ಹೊಸಭೂಮಿ, ಅವರ ಉಳುಮೆ ನೇಗಿಲ ಹೊಸ ಸಾಲು, ಬೆಳೆದದ್ದು ಮಹತ್ತರವಾದ ಜೀವನ ಶ್ರೇಯಸ್ಸಿಗೆ ಪರಮ ಸೌಭಾಗ್ಯವಾದ ವೇದಾಂತದ ರಸದಾಳಿ. ಸಹಜವಾಗಿಯೇ ಅದೇನೂ ಸುಲಭವಾದ ಕೆಲಸವಾಗಿರಲಿಲ್ಲ, ಹೂವು ಎತ್ತಿದಂತೆ ಹಗುರವಾಗಿರಲಿಲ್ಲ. ಅವರ ಅಪೂರ್ವ ಸಂಸ್ಕಾರದಿಂದ, ತೀಕ್ಷ್ಣಮತಿಯ ಸುಂದರ ವಿಕಾಸದಿಂದ ಯಾವ ಅಡೆತಡೆಗಳಿಗೂ ಹಿಂಜರಿಯದೆ ತಮ್ಮ ಆಯ್ಕೆಯ ಪಥದಲ್ಲೇ ದೃಢ ನಿರ್ಧಾರದಿಂದ ಗಮನವನ್ನೆಲ್ಲಾ ತಮ್ಮ ನಿರ್ದಿಷ್ಟ ಗುರಿಯಾದ ಸುರಲೋಕದ ಆಧ್ಯಾತ್ಮಿಕ ಸೌಗಂಧಿಕಾ ಪುಷ್ಪವನ್ನು ತಂದು ಅದರ ಚೇತೋಹಾರಿ ಪರಿಮಳವನ್ನು ಕನ್ನಡ ಜನತೆಗೆ, ಪ್ರಥಮವಾಗಿ, ಹಾಗೆಯೇ ಉಳಿದ ಜನತಾಲೋಕಕ್ಕೂ ಹರಡಿ ಅವರನ್ನೂ ಶ್ರೇಯಸ್ಕರನ್ನಾಗಿ ಮಾಡುವ ಪ್ರಯತ್ನದಲ್ಲಿ ಸಫಲತೆಯನ್ನು ಕಂಡ ಅವರ ಯಶೋಗಾಥೆ. ಇಲ್ಲಿಂದ ಮುಂದೆ, ಅವರ ಕಾರ್ಯರಥ ಅವರ ಸಂಕಲ್ಪದಂತೆ ಮುಂದುವರೆದು ಸಾಗಿದ ದಾರಿಯನ್ನು ಮಾತ್ರ ತಿಳಿಸುವ ಕ್ರಮಪಟ್ಟಿಯಾಗಿದೆ, ಈ ಇತಿಹಾಸ.

ಮೊದಲಿಗೆ ಶ್ರೀಗಳವರ ಚರಿತ್ರೆಯಲ್ಲಿ ಉಳಿದ ಮುಖ್ಯಾಂಶಗಳನ್ನೇ ಪ್ರಾರಂಭದ ಪರಿಚಯವನ್ನಾಗಿ ಮಾಡಿಕೊಂಡು, ಆ ಮೂಲಕವೇ ಶ್ರೀ ಗುರುಸ್ಮರಣೆ, ವಂದನೆಗಳನ್ನು ಸಲ್ಲಿಸಿ ಮುಂದುವರೆಯುವ, ಈಚಿನ ಮೂವತ್ತು ವರ್ಷಗಳ (1975- 2006ರವರೆಗಿನ) ನಡೆಯನ್ನು ಸ್ಥೂಲವಾಗಿ ವಿಭಾಗಿಸಿ, ವಿಷಯ ನಿರೂಪಣೆಯನ್ನು ಸಂಗ್ರಹವಾಗಿ ಹೇಳುವದು ಇಲ್ಲಿಯ ಉದ್ದೇಶ. ಇಲ್ಲಿನ ವಿಚಾರಗಳು ಪ್ರಧಾನವಾಗಿ 'ಅಧ್ಯಾತ್ಮಪ್ರಕಾಶ ಪತ್ರಿಕೆಯ' ಕಾರ್ಯಾಲಯದ ಸುದ್ದಿಗಳು, ಹಾಗೂ ಕೆಲವರ ನೆನಪುಗಳ ಆಧಾರದಿಂದ ಬರೆದಿರುತ್ತದೆ.

**ಗುರುಮಂದಿರ :** ಶ್ರೀಶ್ರೀಗಳವರ ಸಮಾಧಿಯ ಮೇಲೆ - ಶ್ರೀಗಳವರ ಸರಳ ಜೀವನ, ಉನ್ನತ ವೇದಾಂತಾದರ್ಶಗಳಂತೆ ಆಡಂಬರ-ವಿಜೃಂಭಣೆಗಳಿಗೆ ಮನ ಸೋಲದಿರುವ ಅದಕ್ಕನುಗುಣವಾದ ಸರಳ ಮಂದಿರದ ಸೂಕ್ತ ವಿನ್ಯಾಸದೊಡನೆ,

ಡಿಸೆಂಬರ್ 75ರಲ್ಲಿ ಗುರುಮಂದಿರದ ಕಟ್ಟೋಣವು ಪ್ರಾರಂಭವಾಯಿತು. ಮೊದಲ ಹಂತದಲ್ಲಿ, ಮಹಾಸಮಾಧಿಯ ಪವಿತ್ರ ಸ್ಥಳದಲ್ಲಿ ಶ್ರೀಶ್ರೀಗಳವರ ಸ್ಮರಣಾರ್ಥವಾಗಿ ಸ್ಮಾರಕ ಮಂದಿರದ 8×8 ಅಡಿ ಅಳತೆಯ ಗರ್ಭಗುಡಿ, ಮಹಾಸಮಾಧಿಗೆ ಪೂಜೋಪಚಾರಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಭಕ್ತರು ನಿಂತುಕೊಳ್ಳುವದಕ್ಕೂ, ಸಮಾಧಿಯ ಸುತ್ತಲೂ ಪ್ರದಕ್ಷಿಣೆ ಮಾಡುವದಕ್ಕೂ, ಸಮಾಧಿಯ ಆವರಣದಲ್ಲಿ ಕುಳಿತು ಆಹ್ನಿಕಜಪಾದಿಗಳನ್ನು ನೆರವೇರಿಸುವದಕ್ಕೂ ಅನುಕೂಲಿಸುವಂತೆ ಒಂದು ವರಾಂಡ, ಮೇಲೊಂದು ಸಣ್ಣ ಗೋಪುರವನ್ನು ನಿರ್ಮಿಸಿ, ಕಟ್ಟಡಕ್ಕೆ ಅಲಂಕಾರವಾಗಿ ಬಣ್ಣವನ್ನು ಹಾಕುವ ಕಾರ್ಯಗಳಿಂದ ಸುಮಾರು ಮೂರು ವರ್ಷಗಳ ಅವಧಿಯಲ್ಲಿ ಹದಿಮೂರು ಸಾವಿರ ರೂಪಾಯಿಗಳ ಖರ್ಚಿನಿಂದ ಸಿದ್ಧವಾಗಿರುವ ಮಂದಿರವು ಭಕ್ತರುಗಳನ್ನು ಆಕರ್ಷಿಸುವ ಸ್ಥಿತಿಗೆ ಬಂದಿತು.

ಗುರುಗಳು ತಮ್ಮ ಜೀವಿತ ಕಾಲದಲ್ಲಿಯೇ ಸೂಚಿಸಿದ್ದಂತೆ ಅವರ ಸಮಾಧಿಯ ಸ್ಥಳದಲ್ಲಿ ಒಂದು ವೇದಿಕೆಯನ್ನು ನಿರ್ಮಿಸಿ, ಅದರ ಮೇಲೆ ಶ್ರೀ ಶಂಕರಭಗವತ್ಪೂಜ್ಯ ಪಾದರ ಚಿಕ್ಕ ಮೂರ್ತಿಯನ್ನು ಇಡಲಾಯಿತು. ಇದರ 'ಚಲಪ್ರತಿಷ್ಠೆ'ಯು ಹಿಂದೆಯೇ ಶ್ರೀಗಳ ಜೀವಿತಕಾಲದಲ್ಲಿಯೇ ನೆರವೇರಿತ್ತು. ಶ್ರೀಗಳವರ ವರ್ಣರಂಜಿತ ಭಾವಚಿತ್ರವೊಂದನ್ನು, ಮೈಸೂರಿನ ಸುಪ್ರಸಿದ್ಧ ಕಲಾವಿದರಾದ ಶ್ರೀ ಸುಬ್ಬಕೃಷ್ಣರವರ ಮೂಲಕ ಬರೆಯಿಸಿದ್ದನ್ನು, ಸಮಾಧಿಯ ಗರ್ಭಗೃಹದಲ್ಲಿ ಅಳವಡಿಸಲಾಯಿತು. ಗುರುಮಂದಿರದ ನಿತ್ಯಪೂಜಾವಿಧಿಗಳಿಗಾಗಿ ಒಂದು ಮೂಲನಿಧಿಯನ್ನು ತೆರೆಯುವ ಏರ್ಪಾಡು ಮಾಡಲಾಯಿತು.

11.8.78ರ ಶ್ರಾವಣ ಶುಕ್ಲ ಸಪ್ತಮೀ ಶುಕ್ರವಾರ, ವರಮಹಾಲಕ್ಷ್ಮೀ ವ್ರತದ ದಿನ ಮಂಗಳಾಷ್ಟಕ ಪಠಣದೊಡನೆ ಶ್ರೀಶ್ರೀ ಪರಮಹಂಸ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು ತಮ್ಮ ಅಮೃತ ಹಸ್ತದಿಂದ ಮಂದಿರವನ್ನು ಉದ್ಘಾಟಿಸಿದರು. 12ನೇ ತಾ॥ ಬೆಳಿಗ್ಗೆ ಶ್ರೀ ದಿಗ್ವಿಜಯ ರಾಮದೇವರಿಗೆ ಮಹಾಭಿಷೇಕ, ಮಹಾನ್ಯಾಸಪೂರ್ವಕ ಶತಾವೃತ್ತ ರುದ್ರಪಾರಾಯಣ, ಆದಿತ್ಯಾದಿ ನವಗ್ರಹ ಪುರಸ್ಸರ ರುದ್ರಕಲಶ, ಶ್ರೀಶ್ರೀಗಳ ರಜತಪಾದುಕಾ ಪ್ರತಿಷ್ಠಾಂಗ ಕಲಶ - ಈ ಕಲಶ ದೇವತೆಗಳ ಆವಾಹನಪೂರ್ವಕ ಪ್ರತಿಷ್ಠಾನ, ಪೂಜಾ ಜಪಾದಿಗಳು ನಡೆದವು. ಸಾಯಂಕಾಲ 5 ಘಂಟೆಯಿಂದ ರುದ್ರಮಹಿಮೆಯನ್ನು ಕುರಿತು ವಿದ್ವಾನ್ ಶ್ರೀ ಮೈಸೂರು ಸೀತಾರಾಮಶಾಸ್ತ್ರಿಗಳು, ರುದ್ರಭಾಷ್ಯಗ್ರಂಥದ ವಿಷಯವಾಗಿ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು ಉಪನ್ಯಾಸ ಮಾಡಿದರು.

13ನೇ ತಾ॥ ರುದ್ರಹೋಮ, ನವಗ್ರಹ, ವಾಸ್ತು ಪಾದುಕಾದೇವತಾ ಹೋಮಗಳು ನಡೆದವು. ಬೆಳಿಗ್ಗೆ 11 ಘಂಟೆಗೆ ಮೈಸೂರಿನ ಶ್ರೀ ತಿಮ್ಮಪ್ಪಯ್ಯ ದಂಪತಿಗಳು (ರಜತ ಪಾದುಕೆಗಳನ್ನು ಅರ್ಪಿಸಿದವರು) ಸಮಾಧಿಯ ಸನ್ನಿಧಿಯಲ್ಲಿ ಪಾದುಕಾಪ್ರತಿಷ್ಠಾನಂತರ, ಪಾದಪೂಜೆಯನ್ನು ನೆರವೇರಿಸಿದರು. ಯಡತೊರೆ ಯೋಗಾನಂದೇಶ್ವರ ಮಠಾಧೀಶ ಶ್ರೀಶ್ರೀ ಪರಮಹಂಸ ಗಣಪತಿ ಭಾರತಿ ಸ್ವಾಮಿಗಳ ಉಪದೇಶ ಭಾಷಣಾನಂತರ, ಪೂರ್ಣಾಹುತಿ, ಮಂಗಲಾರತಿ, ತೀರ್ಥಪ್ರಸಾದ ವಿನಿಯೋಗ, ಅನ್ನಸಂತರ್ಪಣೆಯಾಯಿತು. ಸಂಜೆಯ ಕಾರ್ಯಕ್ರಮದಲ್ಲಿ ವಿದ್ವಾನ್ ಶ್ರೀ ರಂಗನಾಥಶರ್ಮರು ಪುಷ್ಪಾಲಂಕೃತ ತೈಲಚಿತ್ರವನ್ನು ಅನಾವರಣ ಮಾಡಿದರು. ಹೊಳೆನರಸೀಪುರವನ್ನು ಕರ್ನಾಟಕದ ಕಾಲಡಿಯಾಗಿ ಪರಿವರ್ತಿಸಿದವರು ಅಭಿನವ ಶಂಕರ ಶ್ರೀಶ್ರೀಗಳು, ಆಧ್ಯಾತ್ಮಜ್ಞಾನಕ್ಕೆ ಭಕ್ತಿ ಸಾಧನವೆಂಬುದನ್ನು ಶ್ರೀಗಳವರ ನಿದರ್ಶನದ ಮೂಲಕ ವಿವರಿಸಿದರು. ಡಾ॥ ಕೆ. ಕೃಷ್ಣಮೂರ್ತಿಗಳು ವಿಜ್ಞಾನ-ವೇದಾಂತಗಳ ಸಮನ್ವಯ ಸಾಮರಸ್ಯಗಳಿಂದಲೇ ಲೋಕಕಲ್ಯಾಣ, ವೇದಾಂತ ಕ್ಕಾಗಿ ಇಡಿಯ ಜನ್ಮವನ್ನೇ ಸವೆಯಿಸಿ ಸಂಶೋಧನಾ ಮಾರ್ಗದಲ್ಲಿ ನಡೆದು, ಅಧ್ಯಾತ್ಮವು ಪ್ರಪಂಚಕ್ಕೆಲ್ಲ ಹರಡುವಂತೆ ಪ್ರಯತ್ನ ಮಾಡಿದ ಶ್ರೀಗಳು ಮಹಾ ದಾರ್ಶನಿಕರೂ, ಋಷಿಗಳೂ ಆಗಿದ್ದರೆಂದರು. ವೇ॥ ತುರುವೇಕೆರೆ ವಿಶ್ವೇಶ್ವರ ದೀಕ್ಷಿತರು 'ರುದ್ರಭಾಷ್ಯ' ಗ್ರಂಥವನ್ನು ಬಿಡುಗಡೆ ಮಾಡಿ, ರಸವತ್ತಾದ ಉಪನ್ಯಾಸ ವನ್ನು ನೀಡಿದರು. ಅನಂತರದ ಘಟಿಕೋತ್ಸವದಲ್ಲಿ ಶ್ರೀ ಸುಬ್ರಾಯಶರ್ಮರಿಗೆ ಪದವೀದಾನ ಮಾಡಲಾಯಿತು.

## 2. ಕಾರ್ಯಾಲಯದ ಮುಂದುವರಿಕೆ

**ಹಿನ್ನೋಟ** : ಶ್ರೀ ಶ್ರೀಗಳವರಿರುವರೆಗಿನ ಕಾಲ ಕಾರ್ಯಾಲಯದ ಸ್ವರ್ಣಯುಗ, ಮರಳಿಬಾರದ ಸತ್ಯಯುಗ. ಮುಂದೆ ಏನು ಸಾಧನೆಯಾಗಿದೆಯೋ ಅದರ ಕೀರ್ತಿಯೆಲ್ಲಾ ಅವರ ಪದತಲಕೇ ಸಮರ್ಪಿತ, ಏಕೆಂದರೆ ಇವೆಲ್ಲಾ ಅವರು ಬಿತ್ತಿ ಬೆಳೆಸಿದ ವೇದಾಂತ ಕಲ್ಪವೃಕ್ಷದ ಫಲ. ಅವರ ಸನ್ನಿಧಿಯಲ್ಲಿ, ಕೃಪಾಛತ್ರದಡಿಯಲ್ಲಿ, ಕರುಣಾದೃಷ್ಟಿಯ ಕಟ್ಟೆಚ್ಚರದಲ್ಲಿ ಕಾರ್ಯಾಲಯದ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆದು ಬಂದವು. ಇದನ್ನೆಲ್ಲ ನಡೆಸುವವರಿಗೂ ಸಹ ಅವರದೇ ಬಲ. ಯಾವ ನಿರ್ಧಾರವನ್ನಾದರೂ ಅವರಿಗೆ ಒಪ್ಪಿಸಿ, ಅರ್ಪಿಸಿ, ಅವರು ಒಪ್ಪಿದ ಮೇಲೆಯೇ ಕಾರ್ಯಗತ. ಶ್ರೀಗಳವರು ತಮ್ಮ ಮುಪ್ಪಿನ ಕೊನೆಗಾಲದಲ್ಲಿ ಒಂದೆರಡು ಕ್ರಮಕ್ಕೆ ಶಿಷ್ಯರ ಒತ್ತಾಯಕ್ಕೆ ಮಣಿದದ್ದೂ ಇದೆ. ಹೀಗೆ ಅವರ ಸಮ್ಮತಿಯ ಕ್ರಮ ಅವರ ಆಶೀರ್ವಾದದಿಂದ ಕಾರ್ಯಗತವಾಗುವದೆಂಬ ಧೈರ್ಯ.

**ಹೊಸ ವ್ಯವಸ್ಥೆ** : ಸಂನ್ಯಾಸ ಸ್ವೀಕಾರದ ಸಮಯದಲ್ಲಿ ತಾನೇ ಏಕಾಂಗಿಯಾಗಿ ಕಟ್ಟಿಬೆಳೆಸಿದ ಕಾರ್ಯಾಲಯದ ಲೌಕಿಕ ಹೊರೆ - ಸಾಂಸಾರಿಕ ಹೊರೆ ಕಳಚುವಾಗಲೂ -ಹೆಗಲ ಮೇಲಿರಬಾರದು ಎಂಬ ವಿಚಾರದಿಂದ ಕಾರ್ಯಾಲಯ ಮುಂದುವರೆದು ತನ್ನ ಉನ್ನತ ಉದ್ದೇಶ ಸಾಧನೆಯಿಂದ ಲೋಕ ಕಲ್ಯಾಣದ ಸಾಧನವಾಗಲಿ ಎಂಬ ಇಚ್ಛೆಯಿಂದ, ತಾವೇ ಸದಸ್ಯರನ್ನು ಆರಿಸಿದ ಕಾರ್ಯಕಾರಿ ಸಮಿತಿಗೆ ಕಾರ್ಯಾಲಯದ ಆಸ್ತಿ, ಆಡಳಿತವನ್ನೆಲ್ಲಾ ವಹಿಸಿದರು ; ಅದು ಸರಿಯಾಗಿ ನಡೆಯಲು ನಿಬಂಧನೆಗಳನ್ನು ಬರೆದರು. ಅಂದರೆ, ಶ್ರೀಶ್ರೀಗಳವರೇ ಕಾರ್ಯಾಲಯದ ಯಾವ ಅಧಿಕಾರವನ್ನೂ ಸಂನ್ಯಾಸದನಂತರ ಇಟ್ಟುಕೊಳ್ಳದ್ದರಿಂದ ಅವರ ಉತ್ತರಾಧಿಕಾರಿಯಾಗಿ ಅವರ ಶಿಷ್ಯರು-ಸಂನ್ಯಾಸಿಗಳಾಗಲೀ, ಸಂಸಾರಸ್ಥರಾಗಲಿ-ಯಾರಿಗೂ ಯಾವ ವಿಶೇಷ ಅಧಿಕಾರವೂ ಇರುವುದಲ್ಲ ; ಹೊಣೆಗಾರಿಕೆ ವರ್ಗವಾದದ್ದು 1948 ರಿಂದ ಸಮಿತಿಗೆ ; 1959ರಲ್ಲಿ ಪುನಃ ಕಾರ್ಯಕಾರಿ ಸಮಿತಿಯ ಪುನರ್ರಚನೆ, ಅದರ ವಿಸ್ತಾರವಾದ ನ್ಯಾಯಬದ್ಧ ನಿಯಮಾವಳಿಗಳ ಅನ್ವಯಕ್ಕೆ ಕಾರಣರಾಗಿ ಅನಂತರ ಇದರ ಕಾರ್ಯವ್ಯವಸ್ಥೆ ಮತ್ತಷ್ಟು ಭದ್ರವಾಗಿರಲೆಂಬ ಕಾರಣದಿಂದ 1965ರಲ್ಲಿ ಅದನ್ನು ಪ್ರೈವೇಟ್ ಟ್ರಸ್ಟ್ ಆಗಿ ಪರಿವರ್ತಿಸಿದರು. ಈ ಟ್ರಸ್ಟಿಗೆ ಮಾತ್ರವೇ ಕಾರ್ಯಾಲಯವನ್ನು, ಅದರ ಆಸ್ತಿಯ ವ್ಯವಸ್ಥೆಯನ್ನು, ಕಾರ್ಯಗಳನ್ನು ಅಂದರೆ ಆಡಳಿತವನ್ನು ನಡೆಸುವ ಮೇಲ್ವಿಚಾರಣೆಯ ಪೂರ್ಣ ಅಧಿಕಾರ ವರ್ಗಾವಣೆಯಾಗಿದೆ ; ಇಲ್ಲಿಯ ಶಿಷ್ಯ ಸಂನ್ಯಾಸಿಗಳಾಗಲಿ, ಇತರ ಬಿಡಿ

ಸಂನ್ಯಾಸಿಗಳಾಗಲಿ ಅಥವಾ ಸೇವಾಮನೋಭಾವದ ಶಿಷ್ಯರಾಗಲಿ ಕಾರ್ಯಾಲಯಕ್ಕೆ ನೆರವಾಗುವವರೆಗೂ ಇದ್ದು ಸೇವೆ ಸಲ್ಲಿಸಲು ಅವಕಾಶವಿದೆ, ಅಲ್ಲಿಯವರೆಗೆ ಅವರ ಯೋಗಕ್ಷೇಮದಭಾರ ಕಾರ್ಯಾಲಯಕ್ಕಿದೆ. ಮುಖ್ಯವಾಗಿ ಕಾರ್ಯಾಲಯವು ಮಠವಲ್ಲ, ಮಠಾಧಿಪತ್ಯವೂ ಇಲ್ಲ. ಅದನ್ನು ಕುಟೀರ-ಆಶ್ರಮವೆನ್ನಲಿಲ್ಲ, ಪೀಠವೂ ಅಲ್ಲ ; ಕುಟೀರದ ಸಾಧುಗಳಾಗಲೀ ಆಶ್ರಮವೆನ್ನಲು ಬಿಡಿ ಸಂನ್ಯಾಸಿಯಾಗಲೀ, ಸಂತರಾಗಲೀ ಪೀಠಾಧಿಪತಿಯಾಗಲೀ, ಇಲ್ಲದ ಸಂಸ್ಥೆ-ಕೇವಲ ಕಾರ್ಯಾಲಯ, ವರ್ಕ್‌ಷಾಪ್ ಮಾತ್ರ. ಟ್ರಸ್ಟ್ ಮಾತ್ರವೇ ಆಯಾ ಶಾಖಾ ಸಮಿತಿ, ಹೊಳೆನರಸೀಪುರದ ಪ್ರಧಾನ ಸಮಿತಿ, ಹಾಗೂ ಪಂಡಿತರ ಮೂಲಕವೇ ಶ್ರೀ ಶ್ರೀಗಳವರ ಮೂಲ ಉದ್ದೇಶಗಳು, ಇಂಗಿತ ಮತ್ತು ನಿಯಮಗಳಂತೆ ಪ್ರಧಾನ ಉದ್ದೇಶವಾದ ಅಧ್ಯಾತ್ಮ ಪ್ರಸಾರವನ್ನು ಮಾಡುವವರು, ಕಾರ್ಯಾಲಯವನ್ನು ನಡೆಸುವವರು. ಹಾಗೆಂದ ಮಾತ್ರಕ್ಕೆ ಸ್ವತಂತ್ರವಾಗಿ ಅಂದರೆ, ಯಾವದೇ ಅಧ್ಯಾತ್ಮ ಪ್ರಸಾರ ಕಾರ್ಯ, ಕೆಲಸಗಳ ನಿರ್ವಹಣೆ ಹೊಳೆನರಸೀಪುರ, ಬೆಂಗಳೂರಿನಲ್ಲಿನ ಕಾರ್ಯ ಸಮಿತಿಗಳದು ; ಕಾರ್ಯಕ್ರಮಗಳ ನಿರೂಪಣೆ, ಅದರಂತೆ ಪ್ರವಚನ, ಸಪ್ತಾಹಗಳು, ವಿದ್ಯಾಶಿಕ್ಷಣ ಇವುಗಳು ಸಮಿತಿಯ ಹೊಣೆ. ಇವುಗಳಲ್ಲಿ ಹೊಳೆನರಸೀಪುರದ ಸಮಿತಿ ಒಂದೇ ಇದ್ದು ಮೊದಲಿನಿಂದ ಈ ಕೆಲಸಗಳಲ್ಲಿ ನಿರತವಾಗಿದ್ದುದರಿಂದ, ಇದು ಪ್ರಧಾನ ಕಾರ್ಯಾಲಯವೆನಿಸಿತು, ಬೆಂಗಳೂರು ಶಾಖಾ ಕಾರ್ಯಾಲಯವಾಯಿತು. ಟ್ರಸ್ಟ್ ವಹಿಸಿಕೊಂಡ ಸ್ವತಂತ್ರ ಕೆಲಸವೆಂದರೆ ಗ್ರಂಥಪ್ರಕಟಣೆ ಮತ್ತು ಹೊರ ಊರುಗಳಲ್ಲಿ ಸಪ್ತಾಹ, ಶಿಬಿರಗಳು, ಮುಖ್ಯವಾಗಿ ಕಾರ್ಯಸಮಿತಿಗಳ ಮೇಲ್ವಿಚಾರಣೆ, ಸಮಯೋಚಿತವಾದ ನಿಯಮಗಳ ರಚನೆ. ಇದರಿಂದ ಸಮಿತಿಗಳ ಮೇಲೆ ಟ್ರಸ್ಟ್ ಅನ್ನುವದು ತಪ್ಪು ಗ್ರಹಿಕೆ, ನಿಜವಾಗಿ ಟ್ರಸ್ಟ್, ಸಮಿತಿಗಳು ಸಮಾನವೇ. ಹೆಚ್ಚಿನ ಹೊಣೆಯಿರುವದಾದರೂ ಟ್ರಸ್ಟ್ ಉತ್ತರಾಧಿಕಾರಿಯಲ್ಲ, ಅಥವಾ ಸಮಿತಿಗಳಾಗಲೀ, ಪಂಡಿತರುಗಳಾಗಲೀ ಅಲ್ಲ. ಇವರೆಲ್ಲಾ ಶ್ರೀ ಶ್ರೀಗಳವರು ವಿಶ್ವಾಸವಿಟ್ಟು, ಅವರಿಂದ ನೇಮಕಗೊಂಡವರು. ಅವರ ನಡೆಯಂತೆ, ಅನುಜ್ಞೆಯಂತೆ ನಡೆವ ಸೇವಾಕರ್ತರು ಮಾತ್ರವೇ. ವ್ಯಾವಹಾರಿಕವಾಗಿ, ಸಂದರ್ಭೋಚಿತವಾಗಿ ಇಲ್ಲಿ ವ್ಯತ್ಯಾಸವಾದರೂ ದಡವನ್ನು ಮೀರಿ ಹರಿದಿರುವುದು ಬಹಳವಾಗಿ ಕಡಿಮೆಯೇ. ಕಾರ್ಯಾಲಯ ಈ 86 ವರ್ಷಗಳು ಉಳಿದುಕೊಂಡು, ಏಕರೀತಿಯಲ್ಲಿ ನಡೆದು ಬಂದಿರುವದಾದರೂ ಶ್ರೀಶ್ರೀಗಳವರ ಅಪಾರ ದೂರದೃಷ್ಟಿಯ ಫಲವೇ !

ಮೊದಲು ಆಡಳಿತ, ಸಾರಸ್ವತ ಕೆಲಸವಷ್ಟನ್ನೂ ಶ್ರೀಶ್ರೀಗಳೇ ನಡೆಸುತ್ತಿದ್ದರು. 1947ರಲ್ಲಿ ವಿದ್ಯಾರ್ಥಿಯಾಗಿ ಬಂದು ಸೇರಿದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ

ಮೂರ್ತಿಗಳೂ, ತಮ್ಮ ವಿದ್ಯಾಭ್ಯಾಸ ಮುಗಿದ ಮೇಲೂ, ಶ್ರೀ ಶ್ರೀಗಳವರಲ್ಲೇ ನಿಂತು ಅವರ ಅನುಮೋದನೆಯಂತೆ ಲೇಖನಗಳನ್ನು ಬರೆಯುವ, ಪ್ರವಚನಗಳನ್ನು ನೀಡುವ ಕಾರ್ಯಕ್ಕೂ ಕೈ ಹಾಕಿ ಶ್ರೀಶ್ರೀಗಳವರ, ವಾಚಕರ, ಶ್ರೋತೃಗಳ ಮೆಚ್ಚುಗೆಗೂ ಪಾತ್ರರಾದರು, ಪೂರ್ಣಾವಧಿಯ ಪಂಡಿತರಾಗಿ ನಿಂತರು. ಜೊತೆಗೆ ಕಛೇರಿಯ ಕೆಲಸಗಳು, ಹಣಕಾಸಿನ ಲೆಕ್ಕ ಮತ್ತು ಕಾಗದ ಪತ್ರಗಳ ಕೆಲಸವನ್ನೂ ಶ್ರೀಗಳವರ ಮಾರ್ಗದರ್ಶನದಲ್ಲಿ ಕಲಿತು, ಕಾರ್ಯಾಲಯಕ್ಕೆ ಬಹುಪರಿಯಲ್ಲಿ ಉಪಯೋಗವನ್ನು ಮಾಡಿಕೊಡುವ ಸಹೃದಯಿಗಳೂ, ನಿಗರ್ವಿಗಳೂ, ಮೃದು ಭಾಷಿಗಳೂ ಆಗಿದ್ದರು. ಅವರಂತೆ ಬೆಂಗಳೂರಿನ ಕಾರ್ಯಾಲಯದಲ್ಲಿ ಬಂದಾಗಿ ನಿಂದಲೂ ಶ್ರೀಗಳವರ ಜೊತೆಯಲ್ಲಿ ಇದ್ದು ಅವರ ಸೇವೆ ಮತ್ತು ಲೇಖನ-ಪ್ರವಚನ ಗಳಲ್ಲಿ ತಯಾರಾಗಿದ್ದವರು, ಶ್ರೀ ಕೆ. ಜಿ. ಸುಬ್ರಾಯಶರ್ಮರು.

ಈ ರೀತಿಯಲ್ಲಿ ಟ್ರಸ್ಟ್ ಮತ್ತು ಪಂಡಿತರಾಗಿ ತಯಾರಾದ ಶಿಷ್ಯವರ್ಗ-ಎರಡು ಭುಜಗಳೂ ಶ್ರೀಶ್ರೀಗಳವರು ಮುಕ್ತರಾದಾಗ ಸಕ್ರಿಯವಾಗಿ ಸಮರ್ಥವಾಗಿ ದ್ದುದರಿಂದ ಶ್ರೀಶ್ರೀಗಳ ಐಹಿಕ-ದೈಹಿಕ ಮರೆಯ ಅಸಾಧಾರಣ ಕೊರತೆಯಿದ್ದರೂ, ಶ್ರೀ ಶ್ರೀಗಳ ನಂತರ ಮುಂದೇನು ಎಂಬ ಪ್ರಶ್ನೆಯೇ ಬರಲಿಲ್ಲ. ಅದಕ್ಕೂ ಒಂದು ಕಾರಣವೆಂದರೆ, ಸುಮಾರು 1970ರ ವೇಳೆಗೆ ಆಗಲೇ ದೈಹಿಕ ಶಕ್ತಿ ಕುಂದಿದ ಸ್ವಾಮಿಗಳಿರುವಾಗಲೇ ನುರಿತ ಸದಸ್ಯರಿಂದ ಟ್ರಸ್ಟ್ ಕ್ರಿಯಾತ್ಮಕವಾಗಿ ಕೆಲಸ ಮಾಡುತ್ತಿತ್ತು ; ಅಧ್ಯಾತ್ಮ ಪ್ರಸಾರದ ಕೆಲಸ ಪಂಡಿತರ ಪಾಲಿಗಿತ್ತು. ಹೀಗೆ ಸ್ವಾಮಿಗಳ ಸುವ್ಯವಸ್ಥೆ ಸಂಸ್ಥೆಯನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಿದ್ದರಿಂದ, ಕಾರ್ಯಾಲಯ ಸುಗಮವಾಗಿ ಅದೇ ರೀತಿ ಮುಂದುವರೆಯಲು ಸಾಧ್ಯವಾಯಿತು. 1975ರ ಡಿಸೆಂಬರ್ ಪತ್ರಿಕೆಯಲ್ಲಿ ಬಂದ :- "ಶ್ರೀ ಶ್ರೀಗಳವರು ಬ್ರಹ್ಮೀಭೂತರಾಗಿರು ವುದರಿಂದ ಕಾರ್ಯಾಲಯಗಳನ್ನು ಮುಂದುವರಿಸಿಕೊಂಡು ಹೋಗುವ ಹೆಚ್ಚಿನ ಜವಾಬ್ದಾರಿಯು ಮಹಾಜನರ ಮೇಲೆಯೇ ಇದೆಯೆಂಬುದನ್ನು ಹೇಳಬೇಕಾಗಿಲ್ಲ. ಶ್ರೀಶ್ರೀಗಳವರ ಆಸ್ತಿಕ ಶಿಷ್ಯವೃಂದವೇ ಇದರ ಬಂಡವಾಳ." ಎಂಬ ಮಾತುಗಳು ಇಂದಿಗೂ ಸತ್ಯ. ಇದಕ್ಕೆಲ್ಲಾ ಮುಖ್ಯವಾಗಿ ದೈವಕೃಪೆ, ಶ್ರೀಶ್ರೀಗಳವರ ಸತ್ಯಸಂಕಲ್ಪ, ಪರೋಕ್ಷಪ್ರೇರಣೆ ಮತ್ತು ಅನುಗ್ರಹವೂ ಚಾಲನಶಕ್ತಿ ಎಂಬುದೂ ಸತ್ಯ.

ಕಾರ್ಯಾಲಯದ ಮುಂದಿನ ಎಲ್ಲ ಆಚರಣೆಗಳೂ ಸಾಮಾನ್ಯವಾಗಿ ಶ್ರೀಗಳವರ ಲಿಖಿತಬರವಣಿಗೆ, ಅವರು ನಡೆದ ರೀತಿಯಂತೆ ಸಾಕಷ್ಟು ಅದೇ ಕ್ರಮದಲ್ಲಿ ನಡೆಸಿದ ಪ್ರಯತ್ನ, ಅದರಂತೆ ಹೇಗೆ ಮುಂದುವರೆಯಿತು ಎಂಬುದು ಈ ಮುಂದಿನ ಪುಟಗಳ ಕಥೆ.

## 3. ಶ್ರೀಶ್ರೀಗಳವರ ನಿಯಮಬದ್ಧ ಕ್ರಮವರಿತ ನಡೆ

ಶ್ರೀಶ್ರೀಗಳವರು ಸ್ಥಾಪಿಸಿ ಬೆಳೆಸಿದ್ದು 'ಕಾರ್ಯಾಲಯ'ವನ್ನು, ಅಧ್ಯಾತ್ಮ ಪ್ರಸಾರವನ್ನು ಸದಾ ನಡೆಸುವ ಸಂಸ್ಥೆಯನ್ನು. ಅದನ್ನೇ ಸಂನ್ಯಾಸ ಸ್ವೀಕಾರದ ನಂತರವೂ ಮುಂದುವರೆಸಿದರು, ಹೆಸರೂ ಬದಲಾಗಲಿಲ್ಲ.

ಯಾವ ಕಾರ್ಯಕ್ರಮವಾದರೂ, ನಡೆಸಲಿರುವ ಕೆಲಸವೇ ಮುಖ್ಯವೇ ಹೊರತು, ಪ್ರಚಾರ, ಆಡಂಬರ, ಆಕರ್ಷಣೆಯ ಮಾತುಗಳು, ಡಂಭಾಚಾರಗಳಿಗೆ ಶ್ರೀಗಳವರಲ್ಲಿ ಅವಕಾಶವಿರಲಿಲ್ಲ. ಏಕೆಂದರೆ, ಇವೆಲ್ಲ ಲೌಕಿಕ ಕ್ಷೇತ್ರಕ್ಕೆ ಸಂಬಂಧಪಟ್ಟವು, ಧಾರ್ಮಿಕ ಕ್ಷೇತ್ರಕ್ಕೆ ಅದರಲ್ಲೂ ಅಧ್ಯಾತ್ಮ ಕ್ಷೇತ್ರದಲ್ಲಂತೂ ಅದು ಸಲ್ಲ, ಎಂಬುದು ಅವರ ಮನದಿಂಗಿತ. ವಿದ್ಯಾಭ್ಯಾಸದ ಕಾಲಕ್ಕೆ ಮತ್ತು ಸಂಸಾರ ನಿರ್ವಹಣೆಯಲ್ಲಿಯೂ ಅವರು ಆಗಾಗ ಹಣದ ಕೊರತೆಯನ್ನು ವಿಶೇಷವಾಗಿ ಅನುಭವಿಸಿದವರಾಗಿದ್ದರು. ಇಂತಹ ಲೋಕಾನುಭವ ಉಳ್ಳವರಿಗೆ ಆಡಂಬರಾದಿಗಳು ದುಂದುವೆಚ್ಚ ಎನಿಸುವುದು ಸಹಜವೇ. ಈ ರೀತಿ ಹಣದ ಬೆಲೆ ತಿಳಿದವರಿಗೆ ಸಾರ್ವಜನಿಕ ಹಣವನ್ನು ಆದಷ್ಟು ಜತನದಿಂದ ಕಾಪಾಡಿ ಉಳಿದ ಅವಶ್ಯಕ ಕಾರ್ಯ ಗಳಿಗೆ ಉಪಯೋಗಿಸಬೇಕೇ ವಿನಹ ಅನವಶ್ಯ ಕಾರ್ಯಗಳಿಗೆ ಖರ್ಚು ಮಾಡುವುದು ತಪ್ಪು ಎಂಬುದು ಅನುಭವದಿಂದ ಹಣ್ಣಾದ ವಿವೇಕಿಗಳಿಗೆ ಇರುತ್ತದೆ. ಮೇಲಾಗಿ, ಅಧ್ಯಾತ್ಮಕ್ಷೇತ್ರಕ್ಕೆ ಸರಳತೆಯೇಮುಖ್ಯ, ತತ್ತ್ವಕ್ಕೆ ಮನ್ನಣೆ, ಮಾನ್ಯತೆ, ಮತ್ತು ಅನುಷ್ಠಾನಕ್ಕೆ ಪ್ರಾಧಾನ್ಯತೆ ಎಂಬುದು ಶ್ರೀಗಳವರಿಗೆ ಒಪ್ಪಿ, ಜೀವನ ಕ್ರಮದ ಭಾಗವಾಗಿತ್ತು ಎಂಬುದನ್ನು ಮನಸ್ಸಿನಲ್ಲಿಡಬೇಕು. ಇಂತಹ ರೀತಿ ನೀತಿಗಳು ಕಾರ್ಯಾಲಯದ ಅಂಗ ವಾಗಿಯೇ ಉಳಿದಿದ್ದವು. ಅಲ್ಲಿಂದೀಚೆಗೆ ಅನೇಕ ಕಡೆ ಇದು ಕೆಲವು ಸಂದರ್ಭಗಳಲ್ಲಿ ಅಲ್ಲಿಯ ಒತ್ತಡದಿಂದ ಸಡಿಲವಾಗಿದ್ದರೂ, ಸಾಮಾನ್ಯವಾಗಿ ಪ್ರಯತ್ನವೆಲ್ಲ ಶ್ರೀಶ್ರೀಗಳ ವರ ಮೇಲು ಪಂಙ್ತಿಯನ್ನು ಅನುಸರಿಸುವುದೇ ಆಗಿದೆ, ಮುಂದುವರೆದಿರುತ್ತದೆ. ಈ ನಡೆ ಯಾವದು, ಅದು ಬೇಕಾಗುವದಾದರೂ ಏಕೆ ? ಅವರು ರೂಪಿಸಿದ ನಿಯಮಗಳು, ಬರೆದ ನಿಬಂಧನೆಗಳೇ ಅಲ್ಲ ; ಅವರು ನಡೆದ ರೀತಿ, ಆಚರಣೆಗಳು ತೋರಿಸುವದು ಇದಕ್ಕಿಂತ ಹೆಚ್ಚಿನ ಮಾರ್ಗವನ್ನು ; ಧಾರ್ಮಿಕ (ಆಧ್ಯಾತ್ಮಿಕ ಕ್ಷೇತ್ರದ ಈ ಹಿರಿಯ ಸಂಸ್ಥೆಯ ಮುನ್ನಡೆಗೆ ಇವುಗಳೇ ಪ್ರಧಾನ. ಇವುಗಳು ಯಾವಾಗಲೂ ನೆನಪಿನಲ್ಲಿರಬೇಕಾದದ್ದು ಇದನ್ನು ನಡೆಸಲು ಚುಕ್ಕಾಣಿ ಹಿಡಿದವರಲ್ಲಿ).

ಸಂಸ್ಥೆಯ ಮುನ್ನಡೆಯಾದರೂ ಮಹಾಜನರಿಂದ ; ಅವರ ಧನಸಹಾಯ, ದಾನದಿಂದ, ಅವಕಾಶವಿರುವಾಗ ಕೊಂಡಿರುವ ಆಸ್ತಿಗಳು, ಬಂದಿರುವ ಕಾಣಿಕೆಗಳು,

ಇವುಗಳು ವಿದ್ಯಾರ್ಥಿಗಳಿಗೆ, ಪಂಡಿತರಿಗೆ, ಆಗಂತುಕರಿಗೆ, ಎರಡು ದಿನ ನಿಲ್ಲುವ ಅಥವಾ ವಿದ್ಯಾದಾನಕ್ಕೆ ಉಪಯೋಗವಿರುವ ಸಂನ್ಯಾಸಿಗಳಿಗೆ ವಸತಿ ಭೋಜನಾದಿ ಗಳಿಗೆ ಸೌಕರ್ಯ ಕಲ್ಪಿಸಿಕೊಡುವ ಸಾಧನಗಳು. ಹೀಗೆ ಬಂದ ಎಲ್ಲಾ ಸಹಾಯವನ್ನು ಮಹಾಜನರ ತಿಳುವಳಿಕೆಗಾಗಿ ಪ್ರತಿ ತಿಂಗಳೂ ತಪ್ಪದೆ ಬರುವ 'ಉಪಕಾರ ಸ್ಮರಣೆ' ಯಲ್ಲಿ ಒಂದು ಪುಟ ಮೀಸಲಿಟ್ಟಂತೆ ಪತ್ರಿಕೆಯಲ್ಲಿ ಮೊದಲಿನಿಂದಲೂ ಬರುತ್ತಿದೆ. ಲೆಕ್ಕಗಳೆಲ್ಲ ಆಡಿಟ್ ಆಗುತ್ತವೆ. ಶಾಖಾ ಕಾರ್ಯಾಲಯದವರೂ ಸಹ, ಆರ್ಥಿಕ ಸ್ವಾತಂತ್ರ್ಯವಿದೆ ಎಂದಿದ್ದರೂ, ವಾರ್ಷಿಕ ಲೆಕ್ಕ ಪತ್ರಗಳ ವಿವರವನ್ನು ಆಡಿಟ್ ಆದ ಬ್ಯಾಲೆನ್ಸ್ ಶೀಟನ್ನು ಪ್ರಧಾನಕಾರ್ಯಾಲಯಕ್ಕೆ ಕಳಿಸಬೇಕೆಂಬ ನಿಯಮ ವಾಯಿತು. 1990ರಿಂದ ಈಚೆಗೆ, ಸಾರ್ವಜನಿಕ ಟ್ರಸ್ಟ್ ಆಗಿ ಪರಿವರ್ತನೆಯಾದ ಮೇಲೆ, ಪ್ರತಿವರ್ಷವೂ ಬ್ಯಾಲೆನ್ಸ್ ಶೀಟನ್ನು ವರಮಾನ ತೆರಿಗೆ ಕಛೇರಿಗೆ ಕಳಿಸು ವುದೂ ಪದ್ಧತಿ, ನಿಯಮ. ಸ್ವೀಕೃತ ಎಲ್ಲಾ ಹಣ, ಇತರ ರೂಪದಲ್ಲಿ ಬಂದ ದಾನ (ರಸೀದಿ ಕೊಟ್ಟಿದ್ದರೂ ಸಹ) ಪುನಃ ಸಾರ್ವಜನಿಕ ಅವಗಾಹನೆಗಾಗಿ, ಪತ್ರಿಕೆಯ ಲ್ಲಿಯೂ ಒಂದಲ್ಲದಿದ್ದರೆ ಹೆಚ್ಚಿನ ಪುಟಗಳಲ್ಲಾದರೂ, ಅಚ್ಚು ಮಾಡಿಸುವುದರಿಂದ ಅಭಿಮಾನಿಗಳಿಗೂ, ಬೇರೆಯವರಿಗೂ ಸಂಸ್ಥೆಯಲ್ಲಿ ವಿಶ್ವಾಸ ಮೂಡುತ್ತದೆ. ಇಂತಹ ನುಡಿ, ನಡತೆಗಳು ಶ್ರೀ ಶ್ರೀಗಳವರಿಂದಲೇ ಪ್ರಾರಂಭಿಸಲ್ಪಟ್ಟು, ಈಗಲೂ ಮುಂದು ವರೆಯುತ್ತಿದೆ ಎನ್ನುವುದು ಉಲ್ಲೇಖನಾರ್ಹ. ಇದು ಧಾರ್ಮಿಕ ಸಂಸ್ಥೆಗಳು ಹೇಗೆ ನಡೆಯಬೇಕೆನ್ನುವ ನೈಜ ರೀತಿ ಮತ್ತು ಮಾದರಿ.

ಈ ಹಲವಾರು ಕಾರಣಗಳೇ ಪತ್ರಿಕೆ, ಗ್ರಂಥಗಳ ಸಾಮಾನ್ಯ ನೋಟದ ಹೊರಕವಚಕ್ಕೆ ಕಾರಣ. ಕಾಲ ಬದಲಾದರೂ ಉತ್ತಮ ಮಾದರಿಯ ಅಕ್ಷರಗಳು (ಜೋಡಿಸಿಕೊಂಡು ಬರುವ ಹಿಂದಿನ ಮೊಳೆಗಳ ಬದಲು, ಈಗಿನ ಕಂಪ್ಯೂಟರ್, ಡಿ.ಟಿ.ಪಿ. ಅವಕಾಶದಿಂದ ಸುಂದರವಾಗಿ ಬರುವ ಅಕ್ಷರಗಳು), ಸ್ವಚ್ಛ ಬಿಳಿಯ ಹಾಳೆಗಳನ್ನೇ ಮುದ್ರಣಕ್ಕೆ ಉಪಯೋಗಿಸಿದರೂ, ಅದರಲ್ಲಿ ಆಡಂಬರ, ಆಕರ್ಷಣೆ ಎಂದು ವೃಥಾ ಹೆಚ್ಚಿನಹಣದ ವ್ಯಯವಾಗುವಂತಿಲ್ಲ, ಇತರ ವಿಷಯಗಳಲ್ಲೂ ಬದಲಾವಣೆಯಿಲ್ಲ, ಈಗೀಗ ಪುಸ್ತಕಗಳು ಕೆಲವನ್ನು ಹೆಚ್ಚು ಕಾಲ ನಿಲ್ಲುವಂತಿರಲಿ ಎಂದು ಉತ್ತಮ ಬೈಂಡಿನಲ್ಲಿ ಸ್ವಲ್ಪ ಸುಂದರವಾಗಿ ಕಾಣುವ ಆದರೆ ಹೆಚ್ಚಿನ ಅಲಂಕಾರಕ್ಕೆ ಎಳೆಯದ ಹೊರ ಕವಚದಲ್ಲಿ ಪ್ರಕಟಮಾಡುತ್ತಿದೆ. ಇದಕ್ಕೆ ಮತ್ತೊಂದು ಕಾರಣ ಶ್ರೀ ಶ್ರೀಗಳವರೇ ಹಿಂದಿನಿಂದ ತಂದದ್ದನ್ನು ಹೀಗೆಯೇ ಉಳಿಸಿರುವುದು, ಅವರ ನೆನಪಿನ ಸದಾ ಮುಂದುವರಿಕೆಗಾಗಿ.

ಅನುಷ್ಠಾನ ಪೂಜಾದಿಗಳೂ ಸಹಿತ ಅತಿ ಸರಳವಾದ, ಸುಲಭಮಾರ್ಗದ ಭಕ್ತಿಗೆ ಪ್ರಾಶಸ್ತ್ಯವಿರುವ ಕಾರ್ಯಗಳು. ಆದಕ್ಕಾಗಿಯೇ ದಿಗ್ವಿಜಯ ಶ್ರೀ ರಾಮರನ್ನು ಬಿಟ್ಟರೆ ಬೇರೆ ದೇವಾಲಯವಿಲ್ಲ (ರಾಮನೇ ಎಲ್ಲ ರೂಪಗಳನ್ನೂ ಒಳಗೊಂಡ ಮಹಾಮಹಿಮ ಪರಬ್ರಹ್ಮ ರೂಪನಲ್ಲವೇ!) ತಾವೇ ಪೂಜೆ ಮಾಡುವ ವಿಗ್ರಹ ಗಳಾಗಲೀ, ಊರಲ್ಲಾಗಲೀ, ಪ್ರವಾಸದ ಹೊರ ಸ್ಥಳದಲ್ಲಾಗಲೀ ಭಕ್ತಾದಿಗಳಿಗೆ ಶ್ರೀಗಳವರು ತೀರ್ಥಪ್ರಸಾದ ವಿತರಣೆ ಮಾಡುವದಾಗಲೀ, ಇರಲಿಲ್ಲ. ಹೀಗೆ ಮಾಡಿದ್ದರೆ, ಹೆಚ್ಚಾಗಿ ಜನ-ಧನ ಸಂಗ್ರವಾಗುತ್ತಿತ್ತಾದರೂ ಇದು ಅವರ ಆಚರಣೆಯಲ್ಲ. ಹಾಗೆಂದು ಶ್ರೀ ಗಳವರು ಪೂಜಾದಿಗಳನ್ನು, ಜಪ ಹೋಮಗಳನ್ನು ದೂರ ಮಾಡಿದರು, ನಂಬಲಿಲ್ಲ ಎಂದಲ್ಲ. ಪೂರ್ವಾಶ್ರಮದಲ್ಲಿ ಸ್ವತಃ ಬಿಡದೆ ನಡೆಸುತ್ತಿದ್ದ ರುದ್ರಾಭಿಷೇಕ, ಸೂರ್ಯನಮಸ್ಕಾರ ಪಾರಾಯಣಗಳ ವಿಷಯವನ್ನು ಅವರೇ ಬರೆದಿದ್ದು ಈ ಗ್ರಂಥದ ಮೊದಲಲ್ಲಿ ಕಾಣಸುತ್ತದೆ. ಆದರೆ ಆಗಲೂ ಯಾವುದೇ ಸಾರ್ವಜನಿಕವಾದ ದೊಡ್ಡ ರೀತಿಯದಲ್ಲ; ಕೇವಲ ತಮ್ಮ ಸ್ವಂತಿಕೆಗಾಗಿ. ಕರ್ಮಮಾರ್ಗ ಕೇವಲ ಚಿತ್ತ ಶುದ್ಧಿಗಾಗಿ, ಅದು ಮೊದಲ ಹಂತ ; ಮುಂದೆ ಜ್ಞಾನ ಭಕ್ತಿಗಳ ಸಂಗಮ-ಅವರ ಆಚರಣೆಯಿಂದ ತಿಳಿಯುವ ಅಂಶ. ಉಪಾಸನೆಯ ಅಂಗವಾಗಿ ವಿಷ್ಣು ಸಹಸ್ರನಾಮ ಸ್ತೋತ್ರ ಪಾರಾಯಣ, ಭಜನಾದಿಗಳಲ್ಲೂ ಭಕ್ತರನ್ನು ಭಾಗವಹಿಸಲು ಉತ್ತೇಜನ ಮಾಡಿ, ತಾವೂ ಅವರೊಡನೆ ಸೇರುತ್ತಿದ್ದುದುಂಟು, ಸ್ವತಃ ಮುಂದಾಳಾಗುತ್ತಿದ್ದುದು ಉಂಟು. ಬೆಂಗಳೂರಿನಲ್ಲಿ ತಮ್ಮ ಕಡೆಯ ವರ್ಷಗಳಲ್ಲಿ, ಒಂದು ಆಪರೇಷನ್ ಆಗಿ ಆಸ್ಪತ್ರೆಯಲ್ಲಿದ್ದು ಹಿಂದಿರುಗಿದಾಗ ದೇಹ ಶುದ್ಧಿಗಾಗಿ ಒಂದು ಹೋಮವನ್ನು ನಡೆಸಿದ್ದೂ ಉಂಟು. ಆದರೆ, ತಮ್ಮ ಪಾಲಿನ ಜಪತಪ ಹೋಮ ಗಳನ್ನು, ತಮ್ಮ ಇಚ್ಛೆಯಂತೆ ಆಚರಿಸಿ ವೇದಾಂತದ ಮುಂದಿನ ಗುರಿಯಾಗಿ ಉಪಾಸನಾ ಕ್ರಮಗಳೊಡನೆ ಪರಮಾರ್ಥಸಾಧನಕ್ಕಾಗಿ ನಡೆಸುವ ಸೋಪಾನ ಗಳನ್ನು, ಅನಂತರ ಭಾಷ್ಯಗಳ ಮೂಲಕ ಆತ್ಮಸ್ವರೂಪವನ್ನು ತಿಳಿಸಿಕೊಡುವುದೇ ಅವರ ಮುಖ್ಯ ವಿಚಾರ. ಹಾಗಾಗಿಯೇ ಕಾರ್ಯಾಲಯದಲ್ಲಿ ವಿಶೇಷ ಕಾರ್ಯ ಗಳೆಂದೂ ಸಹ ಹಲವಾರು ದಿನವಿರಲಿ, ಒಂದೇ ದಿನವಿರಲಿ ಜಪಾನುಷ್ಠಾನಗಳು, ದೊಡ್ಡ ದೊಡ್ಡ ಹೋಮಗಳು ಅತಿ ವಿರಳ.

ಇದೆಲ್ಲ ನಡೆವಳಿಕೆಗಳಿಂದ ಅರಿಯಬೇಕಾದುದೇನು ? ಕರ್ಮ ತ್ಯಾಜ್ಯವಲ್ಲವೇ ಅಲ್ಲ, ಪರಮಾರ್ಥ ಸಾಧನೆಯಲ್ಲಿ ಕರ್ಮವೂ ಮುಖ್ಯವೇ, ಆದರೆ ಅದೇ ಎಲ್ಲವೂ ಅಲ್ಲ. ಸಾಮಾನ್ಯರಿಗೆ, ಕರ್ಮ, ಸೋಪಾನವನ್ನೇರಿದ ಮೇಲೆಯೇ ಉಳಿದ ಸೋಪಾನ ಗಳು. ಹಾಗೆಂದೇ, ಅವರು ಲೋಕ ಸಂಗ್ರಹಕ್ಕಾಗಿಯೇ, ತಮಗೆ ವಿಧಿಸಿದಂತೆ

ಆಹ್ನಿಕಗಳು, ಜಪ,ತಪಗಳನ್ನು , ಮಡಿ-ಮೈಲಿಗೆ ಆಚರಣೆಯನ್ನು ಸತತವಾಗಿ ಅನುಸರಿಸಿದರು, ಅದೂ ಬಹಳ ಕಟ್ಟುನಿಟ್ಟಾಗಿ. ಅನಂತರವೇ ತಮ್ಮ ಜ್ಞಾನತಪಸ್ಸು, ಜೊತೆಯಲ್ಲಿ ಆಚರಣೆಯಲ್ಲಿ ಭಕ್ತಿ ವಿಶೇಷ. ಆದರೆ, ಅವರಿಗೆ ಮುಖ್ಯವಾದದ್ದು, ಪ್ರಿಯವಾದ್ದು ತಾವು ಕಂಡ ಜ್ಞಾನ-ಭಕ್ತಿಗಳ ಸಮ್ಮಿಲನದಿಂದ ಆತ್ಮೋದ್ಧಾರದ ಮಾರ್ಗವನ್ನು, ಅದನ್ನು ಸುತ್ತಲಿನ ಜನತೆಗೆ ಪ್ರಸಾರ ಮಾಡುವ ಹಂಬಲ, ಕರ್ತವ್ಯ.

ಇದರಿಂದಲೇ ಶ್ರೀಶ್ರೀಗಳವರ ಆರಾಧನೆ, ಜಯಂತಿಯಲ್ಲಿ ಸಪ್ತಾಹವೆ ಮುಖ್ಯ. ಕೆಲವಾರು ವರ್ಷ ಕರ್ಮಾಂಗವಾಗಿ ಪವಮಾನ ಹೋಮವೂ, ಇತರ ಪೂಜಾ ವಿಶೇಷ ದಿನಗಳಂತೆ ರುದ್ರಾಭಿಷೇಕ, ಅಲಂಕಾರ ಪೂಜೆಗಳಾದವು. ಇದು ಆ ದಿನ ಮಾತ್ರವಾದರೆ, ಆ ಸಂಜೆ ಮತ್ತು ಜೊತೆಯ ಆರು ದಿನಗಳು ಕೇವಲ ಪ್ರವಚನ ಗಳೇ ವಿಶೇಷ -ಶಂಕರ ಭಾಷ್ಯ ವಿಚಾರ ಅಥವಾ ಶ್ರೀಗಳವರ ಗ್ರಂಥ ಭಾಗ.

ಶ್ರೀ ಶ್ರೀಗಳವರಿಗೆ ಸಮ್ಮತವಾಗಿ ಅವರು ಅನುಮೋದಿಸಿದ್ದುದು "ಭೋಜನ ವ್ಯವಸ್ಥೆಗಿಂತ, ವೇದಾಂತ ವಿಚಾರಗಳ ಪ್ರವಚನವೇ ಮುಖ್ಯ" ಎಂಬುದು. ಅವರ ಕಾಲದಲ್ಲೇ ಶಂಕರ ಸಪ್ತಾಹದ ಏರ್ಪಾಡಿನ ಸಮಯದಲ್ಲಿ ಅವರ ಆತ್ಮೀಯ ಶಿಷ್ಯರೂ, ಸಹಕಾರಿಗಳಾದವರೊಬ್ಬರೂ ಸೂಚಿಸಿದಂತೆ ತಿಳಿಸಿದರೂ, ಇದು ಶ್ರೀ ಶ್ರೀಗಳವರದೇ ಒಂದು ನಿಯಮ, ಸೂತ್ರ. ಅಂದರೆ ಪ್ರವಚನಗಳಿಗೆ ಬರುವವರಿಗೆ 'ಪ್ರಸಾದ'ವೆಂಬ ಅನ್ವಯವಾಗದ ಹೆಸರಿನಿಂದ ಹಂಚುವ ಅಂಗಡಿಯಿಂದ ತರುವ ಮಾರಿಗೆ ತಿಂಡಿಗಳು, ಅಲ್ಲೇ ತಯಾರಿಸಿದರೂ ನೈವೇದ್ಯವಾಗದೆ, ಮಂಗಳಾರತಿಗೆ ಮುಂಚೆಯೇ ರುಚಿನೋಡಲು ವಿನಿಯೋಗವಾಗುವ ಚರ್ಪಿನ ತಿಂಡಿಗಳು, ಭೋಜನಗಳು ಆಕರ್ಷಣೆಯಾಗಬಹುದೇ ವಿನಹ ಅಂಗುಳಿಗೆ ಅಂಟದ ಹೊಟ್ಟೆ ತುಂಬದ ಚರ್ಪು ಅಷ್ಟೆ. ಇದಕ್ಕಾಗಿ ಹಣದ ಖರ್ಚಿನ ಅವಶ್ಯಕತೆಯಿಲ್ಲ. ಏಕೆಂದರೆ ಶ್ರೋತೃಗಳಿಗೆ - ಎಲ್ಲರೂ ಸ್ಥಳೀಯರೇ - ಪ್ರವಚನಗಳ ನಡುವೆ ಊಟಕ್ಕೆ ಹೋಗಿ ಬರುವ ಅವಕಾಶವಿದ್ದೇ ಇತ್ತು. ಅದರಿಂದ, ಒಂದು, ಪ್ರವಚನಗಳಲ್ಲಿ ವೇದಾಂತವಾಣಿಯೇ ಪ್ರಸಾದ, ಮತ್ತೊಂದು ಮಹಾಜನರ ದಾನ ಕಾಣಿಕೆಗಳಿಂದಲೇ ನಡೆಯುವ ಸಂಸ್ಥೆಯಲ್ಲಿ ಇದೊಂದು ದುಂದು ವೆಚ್ಚ-ಸಾರ್ವಜನಿಕ ಹಣ ಹೀಗೆ ವೆಚ್ಚವಾಗಬಾರದು ಎನ್ನುವುದು ಈ ಸೂತ್ರದಹಿನ್ನಲೆ. ಬಹುಶಃ ಈ ಕಾರಣದಿಂದಲೇ ಇರಬೇಕು, ಶ್ರೀಗಳವರ ಕಾಲದಲ್ಲಿ ವಿಶೇಷ ಸಂದರ್ಭಗಳಲ್ಲಿ ಹೊರತು, ಸಾಮಾನ್ಯವಾಗಿ ಈ ತೆರನ 'ಪ್ರಸಾದ' ವಿತರಣೆ, ಭೋಜನಗಳ ವಿಷಯ, ಸಪ್ತಾಹ, ಪ್ರವಚನಗಳ ಕಾಲದಲ್ಲಿ ಆದದ್ದೆಂದು ಉಲ್ಲೇಖವಿಲ್ಲ. ಇದಕ್ಕೆ ಹೊರತೆಂದರೆ ಪರಸ್ಥಳಗಳಿಂದ ಬಂದವರಿಗೆಂದು ಮಾಡುತ್ತಿದ್ದ, ಅವಶ್ಯಕವಾಗಿ ಮಾಡಬೇಕಾದ ಊಟದ ಏರ್ಪಾಡು. ಆದರೆ ಈಚೆಗೆ ಸನ್ನಿವೇಶದ ಕಾರಣ ಆಗೊಮ್ಮೆ, ಈಗೊಮ್ಮೆ ಅಪರೂಪವಾಗಿಯೇ ನಡೆದಿರುವದಿದೆ.

1995ರಿಂದ ಪ್ರಾರಂಭವಾದ ವಿಶೇಷ ಸಪ್ತಾಹಗಳು - ಶಿಬಿರಗಳಲ್ಲಿ ಹೊಳೆನರಸೀಪುರದಲ್ಲಿ ವಸತಿ, ಭೋಜನೋಪಚಾರ ವ್ಯವಸ್ಥೆಗಳಿವೆ. ಕಾರಣ ಇವುಗಳಿಗೆ ಬರುವ ಬಹುಪಾಲು ಭಕ್ತರು-65ರಿಂದ 70-ಹೊರಗಿನಿಂದ ಬಂದವರೇ ಆಗಿ, ಕೇವಲ ಜಿಜ್ಞಾಸುಗಳಿಗಾಗಿ ಒಂದೆಡೆ ಸೇರಿ, ಪಂಡಿತರು - ವಿದ್ವಾಂಸರುಗಳ ಸಹಾಯದಿಂದ, ತಮ್ಮಲ್ಲೇ ವೇದಾಂತ ವಿಚಾರದ ವಿನಿಮಯ, ಸಂದೇಹಗಳಿಗೆ ಪರಿಹಾರ ಕಾಣುವ ಸನ್ನಾಹದಲ್ಲೇ ಇದ್ದು ದಿನದ ಕಾಲವನ್ನೆಲ್ಲಾ ಹೆಚ್ಚು ಉಪಯುಕ್ತ ವಾಗಿರುವಂತೆ, ಪರಮಾರ್ಥದಲ್ಲಿ ತೊಡಗಿಸಿಕೊಂಡವರು.

ಇಲ್ಲೊಂದು ಮುಖ್ಯ ಅಂಶವಿದೆ. ಅನ್ನದಾನವೂ ಮಹಾತ್ಕಾರ್ಯವೇ ! ಅನ್ನ ಉದರಂಭರಣಕ್ಕೆ, ದೇಹ ರಕ್ಷಣೆಗೆ, ಅದಿದ್ದರೇ ಅವನ ಆಧ್ಯಾತ್ಮಿಕ ಪ್ರಗತಿಯೂ ಕೂಡ. ಆದರೆ ಇಂತಹ ಅಧ್ಯಾತ್ಮ ಚಿಂತನೆ ನೆಲೆ ನಿಂತು, ಆತ್ಮೋದ್ಧಾರವಾಗುವುದು-ಇದೇ ಜೀವನದ ಗುರಿ- ಕೇವಲ ಬ್ರಹ್ಮ ವಿದ್ಯೆಯಿಂದಲೇ. ಆದರೆ ಬ್ರಹ್ಮ ವಿದ್ಯಾದಾನದ ಕ್ಷೇತ್ರಗಳು ಕಡಿಮೆ, ಪರಮಾರ್ಥ ಬ್ರಹ್ಮನನ್ನು ಅರಿಯಲೇ ಇರುವುದು ಅಧ್ಯಾತ್ಮವಿದ್ಯೆ, ಬ್ರಹ್ಮವಿದ್ಯೆ. ಶ್ರೀ ಶ್ರೀಗಳವರು "ದಾನಗಳಲ್ಲಿ ಬ್ರಹ್ಮ ವಿದ್ಯಾದಾನಕ್ಕಿಂತ ಹೆಚ್ಚಿನದು ಯಾವುದೂ ಇಲ್ಲವೆಂದು ಶೃತಿ ಸ್ಮೃತಿ ಪುರಾಣಗಳಲ್ಲಿ ಹೇಳಿರುತ್ತದೆ" ಎಂಬುದನ್ನು ಹಲವು ಕಡೆ ಪುನರುಚ್ಚರಿಸಿದ್ದಾರೆ." ಈ ಪುಣ್ಯಕಾರ್ಯಕ್ಕೆ ತಮ್ಮ ಹಣವು ವಿನಿಯೋಗ ವಾಗಲೆಂಬ ಹಂಬಲಿಕೆಯಿರುವವರು ಮಾತ್ರ ತಮಗೆ ತೋರಿದಷ್ಟು ಧನ ಸಹಾಯವನ್ನು ಪರಮೇಶ್ವರ ಪ್ರೀತ್ಯರ್ಥವಾಗಿ ಕೊಡಬಹುದು" ಎನ್ನುವುದು ಅವರ ಅಭಿಪ್ರಾಯ. ಅವರು ಧನವಂತರು, ರಾಜಮಹಾರಾಜರ ಆಶ್ರಯಕ್ಕೆ ಕೈಯೊಡ್ಡಲಿಲ್ಲ. ಆದರಿಂದ ಕಾರ್ಯಾಲಯಕ್ಕೆ ಬರುವ ದಾನ ಸ್ವಇಚ್ಛೆಯಿಂದ, ಸಂತೋಷದಿಂದ ಕೊಡುವ ಮಹಾಜನಗಳಿಂದಲೇ. ಜ್ಞಾನಿಗಳೂ, ಪರಮಾರ್ಥವನ್ನರಿತ ಯತಿಗಳ ಮಾತೂ ಇದೆ, "ನಿರುಪಾಧಿಕವಾಗಿದ್ದರೆ ಮಾತ್ರ ಹಣ ಕೊಡಬಹುದು, ಹಾಗಿದ್ದರೆ ಮಾತ್ರ ಸ್ವೀಕಾರ". ಇದಕ್ಕೇನು ಕಾರಣ ಎಂದರೆ, "ನೀವು ಸಂಸಾರಸ್ಥರು, ಸಂಸಾರ ವ್ಯವಸ್ಥೆಗೆ ಬೇಕಾಗುವ ಹಣವನ್ನು, ದಾನಕ್ಕೆ ವಿನಿಯೋಗಿಸಿ ತೊಂದರೆ ಮಾಡಿಕೊಳ್ಳ ಬಾರದು" ಎನ್ನುವದು. ಶ್ರೀಶ್ರೀಗಳವರ ಕೋರಿಕೆಯಲ್ಲಿ ಎಂತಹ ಔದಾರ್ಯ, ಮೇಲ್ತರದ ವಿಚಾರ, ಆಚಾರ ! ಯಾರಿಗೂ ಯಾವ ವಿಧವಾದ ಒತ್ತಾಯವೂ ಇಲ್ಲ, ತಮ್ಮ ಇಚ್ಛೆಯಂತೆ ಕೊಡುವ ಧನಸಹಾಯಕ್ಕೆ ಮಾತ್ರ ಮಾನ್ಯತೆ. ಆದುದರಿಂದ ಸಂತೋಷದಿಂದ ಸತ್ಕಾರ್ಯಕ್ಕೆ ದಾನವಾಗಿ ಬಂದುದನ್ನು ದುಂದು ವೆಚ್ಚ ಮಾಡುವದು, ಪಾಪಸಂಘಟನೆಯ ಅನುಚಿತ ಕಾರ್ಯ, ಸಲ್ಲ. ಇಂತಹ ಅತ್ಯುತ್ತಮ ಮನೋಭಾವ ಶ್ರೀಗಳವರದು. ಹಾಗೆಂದಾಗ, ಯಾವುದೇ ಸಂಸ್ಥೆಯಾಗಲೀ, ವ್ಯಕ್ತಿಯಾಗಲೀ ಸಹಾಯಕ್ಕೆಂದು ಕೇಳುವದರ ಜೊತೆಗೆ ಒತ್ತಾಯ ಹೇರಿ ಕೊಡುವವನ

ಮನಸ್ಸಿಗೆ ನೋವುಂಟು ಮಾಡುವುದು, ಅವನ ಧನ ಸಂಕೋಚವಿದ್ದಾಗ ತೊಂದರೆಗೆ ಈಡು ಮಾಡುವುದು, ನಿಜವಾಗಿಯೂ ಯಾರಿಗೂ ನಿಷಿದ್ಧ ಕಾರ್ಯ, ಅನಾಚಾರ ಮತ್ತು ಒಳಿತನ್ನು ತಾರದ ರೀತಿಯೇ. ಧಾರ್ಮಿಕ ಕ್ಷೇತ್ರಕ್ಕಾಗಲೀ, ಗುಡಿ ಗೋಪುರ ಗಳಿಗೆ, ದೇವಪೂಜಾದಿಗಳಿಗೆ ಆಡಂಬರವಿಲ್ಲದ ಅವಶ್ಯಕ ಕಾರ್ಯಗಳಿಗೆ ನೀಡುವ ದಾನಗಳೂ ಉತ್ತಮವೇ, ಆದರೆ ಇಂತಹ ನೀತಿಯನ್ನು ಅನುಸರಿಸಿದಾಗ.

''ಮನುಷ್ಯನಲ್ಲಿ ಸದ್ಗುಣಗಳು ಇದ್ದುದ್ದೇ ಆದರೆ ಅವು ತಾವಾಗಿಯೇ ಹರಡಿಕೊಂಡು ಬಿಡುತ್ತವೆ. ಕಸ್ತೂರಿಯನ್ನು ಎಷ್ಟು ಬಚ್ಚಿಟ್ಟರೂ, ಅದರ ಸುವಾಸನೆಯು ಹರಡಿಯೇ ತೀರುವುದು. ಯಾರಾದರೂ ಹಟಕ್ಕೆ 'ಇದು ಸುವಾಸನೆಯಲ್ಲ' ಎಂದು ಸಾರಿದರೂ ಅದು ಸುವಾಸನೆಯಿಲ್ಲದೆ ಹೋಗುವುದಿಲ್ಲ. ಈ ಕವಿವಾಣಿಯಂತೆ ನಾವು ನಮ್ಮ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕೇ ಹೊರತು, ಜಾಹೀರು ಮಾಡಿಕೊಳ್ಳ-ಬೇಕಾದದ್ದಿಲ್ಲ'' - ಇದೂ ಅವರದೇ ಮಾತು. ''ವಿದ್ಯೆಯ ಮಹತ್ವವು ಪದವಿಯ ಕುಂದಣವಿಲ್ಲದೆಯೆ ಪ್ರಕಾಶವಾಗಬೇಕು.'' ''ಶಾಸ್ತ್ರಪಾರಂಗತರಿಗೂ, ಅದರಲ್ಲಿಯೂ ಮುಖ್ಯವಾಗಿ ವೇದಾಂತಪ್ರವಚನ ನಿರತರಾಗಿರುವವರಿಗೂ ಸಂಭಾವನೆಯನ್ನು ಕೊಟ್ಟು ಪ್ರೋತ್ಸಾಹಿಸಬೇಕು, ಅದಲ್ಲದೆ ದಂಭಕ್ಕಾಗಿ ಶಾಲುಗಳನ್ನೂ, ಬಿರುದು ಬಾವಲಿಗಳನ್ನೂ ಕೊಡುವ ಚಟವನ್ನು ನಿಲ್ಲಿಸಬೇಕು.''

''ಕಾರ್ಯಾಲಯದ ಕಟ್ಟಡಗಳನ್ನು ಕಾರ್ಯಾಲಯದ ಕೆಲಸಕ್ಕಲ್ಲದೆ ಮತ್ತೆ ಯಾವ ಕಾರ್ಯಕ್ಕೂ ಬಳಸತಕ್ಕದ್ದಲ್ಲ. ಅನುಷ್ಠಾನದ ಕಾಲದಲ್ಲಿ ಬರುವ ಅತಿಥಿಗಳಿಗೂ, ಆಗಂತುಕರಿಗೂ ಅವರವರ ಆವಶ್ಯಕತೆ, ಕಾರ್ಯಾಲಯಕ್ಕೆ ಸಹಾನುಭೂತಿ ಮುಂತಾದದ್ದನ್ನು ಪರಿಶೀಲಿಸಿ ಎರಡು ಮೂರು ದಿನಗಳವರೆಗೆ ಸ್ಥಳವನ್ನು ಕೊಡಬಹುದು. ಸಂನ್ಯಾಸಿಗಳು, ಸಾಧುಗಳು ಮುಂತಾದವರಿಗೆ ಇಲ್ಲಿ ಅವಕಾಶವಿರಬೇಕು. ಕಾರ್ಯಾಲಯಕ್ಕೆ ಪ್ರಯೋಜನಕರವಾದ ಸೇವೆಯನ್ನು ಮಾಡುವದಕ್ಕೆ ಸಿದ್ಧರಾಗಿರುವ ವಿದ್ವಾಂಸರಾದ ಯೋಗ್ಯ ಸಂನ್ಯಾಸಿಗಳೇ ಮುಂತಾದ ವರಿಗೆ ವಿನಾ ಯಾವ ಗೃಹಸ್ಥರಿಗೂ ಯಾವ ಕಾರಣದಿಂದಲೂ ಶಾಶ್ವತವಾಗಿ ಕಟ್ಟಡವನ್ನು ಉಪಯೋಗಿಸುವದಕ್ಕೆ ಕೊಡತಕ್ಕದ್ದಲ್ಲ. ಕಟ್ಟಡವೇ ಮುಂತಾದ ಯಾವ ಬಾಬಿಗೇ ಆಗಲಿ ಸಾಲ ಮಾಡದೇ ಇರುವಂತೆ ನೋಡಿಕೊಳ್ಳತಕ್ಕದ್ದು. ಖಾಯಂ ಠೇವಣಿ ಅಸಲು ಮೊಬಲಗನ್ನು ಟ್ರಸ್ಟ್ ಒಪ್ಪಿಗೆಯಿಲ್ಲದೆ ಯಾವ ಶಾಖೆಯವರೂ withdraw ಅಥವಾ ಖರ್ಚು ವಗೈರೆ ಹೊರಳೆ ಮಾಡತಕ್ಕದ್ದಲ್ಲ.''

ಕಾರ್ಯಾಲಯದ ನೀತಿ ನಿಬಂಧನೆ ನಡೆಗಳಲ್ಲಿರುವ, ವ್ಯಕ್ತವಾಗಿರುವ ಶ್ರೀಶ್ರೀ ಗಳವರ ವಿಚಾರಗಳು ಅವರ ಮುಂದಾಲೋಚನೆ, ಪ್ರಾಜ್ಞತೆಯನ್ನು ವ್ಯಕ್ತಪಡಿಸುತ್ತವೆ.

'ಭಾರತೀಯ ಸಂಸ್ಕೃತಿಯ ತಿರುಳೂ, ಅಕ್ಷಯ ನಿಧಿಯೂ ಆಗಿರುವ ಅಧ್ಯಾತ್ಮವಿದ್ಯೆಯ ಪ್ರಚಾರಕ್ಕಾಗಿ ಕಾರ್ಯಾಲಯದ ಸ್ಥಾಪನೆ ; ಅದರ ಮುಖ್ಯಉದ್ದೇಶ, ಉಪನಿಷತ್ತುಗಳಲ್ಲಿಯೂ ತತ್ಸಂಬಂಧವಾದ ವಾಙ್ಮಯದಲ್ಲೂ ಉಪದಿಷ್ಟವಾಗಿರುವ ಅಧ್ಯಾತ್ಮ ವಿದ್ಯಾ ಚಿಂತನೆಯಲ್ಲಿಯೂ ಸಾಧನದಲ್ಲಿಯೂ ಜನರಿಗೆ ಹೆಚ್ಚಿನ ಆದರವನ್ನುಂಟು ಮಾಡುವದು. ಕಾರ್ಯಾಲಯದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ-ಈ ಮೂರನ್ನು ಬೋಧಿಸುವದಕ್ಕೆ ತಕ್ಕಂತೆ ಮೂರು ಜನ ವಿದ್ವಾಂಸರನ್ನು ಆರ್ಥಿಕ ಸೌಕರ್ಯವು ಉಂಟಾದಂತೆ ಇಟ್ಟುಕೊಳ್ಳುವ ಹೆಗ್ಗುರಿ ಇರಬೇಕು. ವಿರಕ್ತರಾದ ಬ್ರಹ್ಮಚಾರಿಗಳು ಅಥವಾ ವಿದ್ಯಾವಂತರು, ಲೋಕೋಪಕಾರ ಬುದ್ಧಿಯವರು ಆದ ಸಂನ್ಯಾಸಿಗಳು ದೊರೆತರೆ ಅವರನ್ನು ಪ್ರಾರ್ಥನಾ ಮೂಲಕ ಸ್ವಾಗತಿಸಿ ಅವರ ಜೀವನ ಯಾತ್ರೆಗೆ ಬೇಕಾದ ಸೌಕರ್ಯವನ್ನೆಲ್ಲ ಏರ್ಪಡಿಸಿಕೊಟ್ಟು ಅವರ ಸಹಾಯವನ್ನು ಪಡೆಯಬೇಕು.' ಇವೆಲ್ಲವುಗಳನ್ನು ಸ್ಪಷ್ಟೀಕರಿಸುವಂತೆ 'ಕಾರ್ಯಾಲಯದ ನೀತಿ ನಿಬಂಧನೆಗಳಿಗೆ, ಶ್ರೀಗಳವರ ಸ್ಪಷ್ಟವಾದ ಪೂರ್ಣವಾದ ಅಭಿಪ್ರಾಯಗಳಿಗೆ, ಉದ್ದೇಶಕ್ಕೆ ವಿರುದ್ಧವಾಗಿ ಕಾರ್ಯಾಲಯದ ನೀತಿಯನ್ನು ಮಾರ್ಪಡಿಸಲು ಯಾರಿಗೂ ಅಧಿಕಾರವಿರುವದಿಲ್ಲ.'

ನಿಂದಾಸ್ತುತಿಯನ್ನು ಸಮಚಿತ್ತರಾಗಿ ಸ್ವೀಕರಿಸುವ ನಿಜವಿರಕ್ತರು, ಅಂಥ ಸಂದರ್ಭಗಳನ್ನು ವೇದಾಂತ ಚಿಂತನೆ, ಬರವಣಿಗೆಗೆ ಉಪಯೋಗ ಮಾಡಿಕೊಳ್ಳುತ್ತಿದ್ದವರು, ಶ್ರೀಗಳು. ಇಂತಹದೊಂದು ಪ್ರಸಂಗ: "ಹೊಸಪೇಟೆಯಿಂದ ಹೊರಡಿಸಿದ ಕರಪತ್ರದಲ್ಲಿ ಶ್ರೀಗಳು (1) ಕಲಿಮಹಾರಾಜನ ಪ್ರೇರಣೆಯಿಂದ ಗ್ರಂಥವನ್ನು ಬರೆದಂತೆ (ಮೂಲಾವಿದ್ಯಾನಿರಾಸ ವಿಚಾರಗಳು, ಅಲ್ಲಿಂದ ಮುಂದಿನ ಕೆಲವು ಬರಹಗಳು) (2) ರಾವಣ ದುರ್ಯೋಧನಾದಿಗಳಂತೆ ಹಟಹಿಡಿದು ವ್ಯಾಖ್ಯಾನಕಾರರನ್ನು ದೂಷಿಸಿರುತ್ತಾರೆ. (3) ತಮ್ಮ ವಾದವನ್ನು ನಿರ್ಮಿಸುವ ಧ್ಯೇಯದಿಂದ ಶ್ರೀಪಾದ ಶ್ರೀವಲ್ಲಭ ಶ್ರೀಗುರುನರಸಿಂಹ ಯೋಗಿಯಾಗಿದ್ದಾರೆನ್ನುವಂತೆ (4) ಭಾಷ್ಯ ಪಂಜ್ತಿಗಳನ್ನು ಸ್ವಾನುಕೂಲವಾಗುವಂತೆ ತಿರುಚಿ ಅಪಾರ್ಥ ಮಾಡುತ್ತಾ 'ಸಂಪ್ರದಾಯ'ವನ್ನು ಉಲ್ಲಂಘನೆ ಮಾಡಿರುತ್ತಾರೆ," ಎಂದು ಆರೋಪಿಸಿದ್ದರು.

"ಈ ಬಯ್ಗುಳು, ಆರೋಪಗಳು ಎಷ್ಟರ ಮಟ್ಟಿಗೆ ಅವರಿಗೆ ಅನ್ವಯವಾಗುತ್ತದೆನ್ನುವದನ್ನು ತುಲನಾತ್ಮಕ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ವಿಚಾರಮಾಡಬಲ್ಲ ವಿಮರ್ಶಕರೇ ನಿರ್ಣಯಿಸಬೇಕು" ಎಂಬುದು ಅವರ ನಿಲುವು. ಆದರೆ ನಿಂದಾಸ್ತುತಿಗಳ ಮಾತನ್ನು ಬಿಟ್ಟು, ನಿಜವಾದ ಶಂಕರ ಸಿದ್ಧಾಂತವು ಯಾವದು ? ಅದೇ ಶಂಕರ ಸಿದ್ಧಾಂತವೆಂಬುದನ್ನು ಹೇಗೆ ಗೊತ್ತು ಪಡಿಸಬೇಕು ಎಂಬ ವಿಷಯದಲ್ಲಿ 10-12 ಲೇಖನಗಳ ಮಾಲೆಯನ್ನು (ಅಧ್ಯಾತ್ಮ ಪ್ರಕಾಶ ಸಂಪುಟ 41ರಲ್ಲಿವೆ) ಬರೆದರು. ಅಂದರೆ ಯಾವದನ್ನೂ ಕ್ರಿಯಾತ್ಮಕವಾಗಿ ಪರಿಗಣನೆ ಮಾಡುವದೇ ಅವರ ರೀತಿ.

ಪತ್ರಿಕೆಯಲ್ಲಿ ಹೀಗೊಂದು ಪ್ರಕಟಣೆ : "ಈ ತಿಂಗಳ ಪತ್ರಿಕೆಯು ಹಲವು ಕಾರಣದಿಂದ ಅಪೂರ್ಣವಾಗಿ ಹೊರಕ್ಕೆ ಬರಬೇಕಾಯಿತು. ನಮಗೆ ಈಗ ಕಾಗದದ ಕೊರತೆಯು ಹೆಚ್ಚಾಗಿರುತ್ತದೆ. ಆದರೂ ಪತ್ರಿಕೆಯಲ್ಲಿ ಕೊಡಬೇಕಾಗಿರುವಷ್ಟು ಪುಟಗಳನ್ನು ವರ್ಷದ ಅಂತ್ಯದೊಳಗೆ ಪೂರೈಸಿಕೊಡುವೆವು. ಕಾಲವಿಲಂಬವನ್ನು ಕ್ಷಮಿಸಬೇಕೆಂದು ಪ್ರಾರ್ಥನೆ." ಈ ತೆರನ ನಡೆ ಅವರ ಜೀವನಾದ್ಯಂತ ಬೇಕಾದಷ್ಟು ತುಂಬಿವೆ. ಇವೆಲ್ಲ ಧರ್ಮದಂತೆ ನಡೆವ ಅತಿಶಯವಾದ ಮಾರ್ಗ ಸೂಚಿಗಳು. ಇಲ್ಲಿರುವದು ಕರ್ತವ್ಯ ಪ್ರಜ್ಞೆಯ ತುಣುಕೊಂದು. ಇಂತಹ ಚಿನ್ನದ ಹಳುಕುಗಳು, ಪತ್ರಿಕೆಗಳುದ್ದಕ್ಕೂ ಕಾಣಬರುತ್ತವೆ.

ಜೀವನದ ಉತ್ಕೃಷ್ಟ ಆದರ್ಶಗಳು, ಉನ್ನತ ಮೌಲ್ಯಗಳನ್ನು ಎತ್ತಿ ಬೆಳಗಿ, ಆಚರಣೆಯಲ್ಲಿ ತಂದು ತಮ್ಮ ಬಾಳನ್ನೇ ಉತ್ತಮ ಮಾದರಿಯನ್ನಾಗಿ ಮಾಡಿಕೊಂಡ, ಅದರಲ್ಲೂ ಈಗಿನ ಕಾಲಕ್ಕೆ ಅಪರೂಪದ ವ್ಯಕ್ತಿಯಾದರು. ಅದೇ ರೀತಿಯಲ್ಲಿ ವಿಚಕ್ಷಣೆಯಿಂದ ಕಾರ್ಯಾಲಯದ ಮುನ್ನಡೆಯನ್ನು ಏಕಾಂಗಿಯಾಗಿ ಸಾಧಿಸಿದರು. ಅದರಿಂದಲೇ ಕಾರ್ಯಾಲಯ ಅವರ ಕಾಲದ ಹಣದ ಮುಗ್ಗಟ್ಟು, ಸಂಕಷ್ಟಗಳಲ್ಲೂ ಮುಳುಗದಂತೆ ತಲೆ ಎತ್ತಿ ಬರಲು ಸಾಧ್ಯವಾಯಿತು. ಅವರ ಮೇಲ್ಮಟ್ಟದ ನಡೆಯೇ ಅವರ ಬಲ, ಅದೇ ಕಾರ್ಯಾಲಯವನ್ನು ಕಾಪಾಡುವ ಶ್ರೀರಕ್ಷೆ.

ಇಂತಹ ಉತ್ತಮ ವಿಚಾರಗಳು, ಆದರ್ಶಗಳು, ಉನ್ನತ ನಡೆ ; ಅದರಿಂದಾದ ವೇದಾಂತ ಜ್ಞಾನ ಪ್ರಭೆಯ ಅಪೂರ್ವ ಪ್ರಸರಣೆ, ಅವರಿಗೆ ಅಪ್ರಯತ್ನಕವಾಗಿ, ಅಪ್ರಾರ್ಥಿತವಾಗಿ ಸಹಜವಾಗಿಯೇ ಎತ್ತರಕ್ಕೆ ಬೆಳೆದುಬಂದ ಅಪಾರ ಗೌರವ, ಆದರಗಳು – ಇವುಗಳೇ ನಿಜವಾಗಿಯೂ ಕಾರ್ಯಾಲಯದ ಬೆನ್ನೆಲುಬು. ಆ ಕಾರಣವೇ ಅವರ ನಂತರದ ಈ ಮೂವತ್ತೊಂದು ವರ್ಷಗಳೂ ಕಾರ್ಯಾಲಯ ತನ್ನ ಹಾದಿಯಲ್ಲೇ ಮುಂದುವರಿಯಲು ಸಾಧ್ಯವಾದುದು ; ಅದಕ್ಕೆ ಭಗವಂತನ ಕರುಣೆ, ಶ್ರೀಶ್ರೀಗಳವರ ಸಂಕಲ್ಪ ಅನುಗ್ರಹಗಳೂ ಮುಖ್ಯಕಾರಣ. ಮುಂದೆಯೂ ಹೀಗೆಯೇ ನಡೆದು ತನ್ನ ಉದ್ದೇಶ ಸಾಧನೆಯ ಮಾರ್ಗದಲ್ಲಿ ನಡೆಯಲು ಅವರ ಆಚಾರ ವಿಚಾರ ನಡೆಗಳನ್ನನುಸರಿಸುವದರಿಂದ ಮಾತ್ರವೇ ಸಾಧ್ಯ - ಇವೆಲ್ಲ ಹಳೆಯ ಕಾಲದ ಗೊಡ್ಡು ವಿಚಾರ, ಅಪ್ಪ ಹಾಕಿದ ಮುದಿ ಆಲದ ಮರ ಎಂದು, ಶ್ರೀಗಳವರು ನಂಬಿಕೆ ವಿಶ್ವಾಸವಿಟ್ಟ ಕಾರ್ಯಾಲಯದ ನೊಗ ಹಿಡಿದವರು, ಮುಂದರಿಕೆಯ ಉತ್ಸಾಹದಲ್ಲಿ ನಿರ್ದಿಷ್ಟ ಪಥಬಿಟ್ಟು ಹೆಜ್ಜೆ ಹಾಕಲೆಳಸುವ ಕಾರ್ಯ ವಿಶ್ವಾಸ ವಂಚನೆ, ಗುರುದ್ರೋಹ ವಾದೀತು, (ಆಧ್ಯಾತ್ಮಿಕತೆಯನ್ನು ಮರೆತ) ಹೊಸ ಹಾದಿಯನ್ನು ತುಳಿದು ನವೀನತೆ ಯನ್ನು ಅಪ್ಪಿಕೊಳ್ಳುವ ಸಾಹಸ ಕಾರ್ಯಾಲಯಕ್ಕೇ ಎರವಾಗಬಹುದು. ಏಕೆಂದರೆ ವೇದಾಂತ ವಿಚಾರವೇ ಗಣನೆಗೇ ಸಿಲುಕದ ಅತಿ ಪೂರ್ವಕಾಲದ್ದು. ಆದರೆ ಅದರ

ಉಸಿರು, ತತ್ತ್ವ ಮತ್ತು ಶ್ರೇಯೋಮಾರ್ಗ ಇಂದಿಗೂ ಎಂದೆಂದಿಗೂ ವಿಹಿತವೇ, ಸರ್ವಕಾಲಿಕವಾದ ಆತ್ಮೋದ್ಧಾರದ ಸಾಧನ.

1973ರ ಕಾರ್ಯಾಲಯದ ಸುವರ್ಣ ಮಹೋತ್ಸವದ ಸಂಚಿಕೆಯ ಸಂಪಾದಕೀಯದಲ್ಲಿರುವ ಈ ಮಾತುಗಳು ಗಮನಾರ್ಹ : "ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ನಿಜವಾದ ತತ್ತ್ವ, ಹಾಗೂ ಅದನ್ನು ಪಡೆಯುವ ನಿಶ್ಚಿತ ಸಾಧನೆ ಈ ಎರಡನ್ನೇ ಮೆಚ್ಚಿದವರೇ ಹೊರತು, ಎಂದಿಗೂ ಖ್ಯಾತಿ, ಲಾಭ, ಪೂಜೆ, ಆಡಂಬರ ಆರ್ಭಟಗಳನ್ನು ಕನಸಿನಲ್ಲಿಯೂ ಕಂಡವರಲ್ಲ. ಅದರಂತೆಯೇ ಅವರ ಶಿಶುವಾದ ಈ ಕಾರ್ಯಾಲಯವೂ ಇರತಕ್ಕದ್ದು ನ್ಯಾಯವಾಗಿಯೇ ಇದೆ. ಆಡಂಬರ ಅಭಿನಯಗಳಾವುವೂ ಆಗದೆ ಇದ್ದುದರಿಂದ ಇದು ಅಯಶಸ್ವಿಯಾದುದ್ದೇನಲ್ಲ".

ಶ್ರೀಗಳವರ ಬಿನ್ನಹ : ಕಾರ್ಯಾಲಯವನ್ನು ತಮ್ಮದಾಗಿ ಮಾಡಿಕೊಳ್ಳಿ : ಇದು ನಮ್ಮದು, ನಮಗೆ ಬೇಕಾದದ್ದು, ನಮ್ಮೆಲ್ಲರಿಗೂ ಬೇಕಾದದ್ದು. ಇದು ವ್ಯಾಪಾರ ಸಂಸ್ಥೆಯಲ್ಲ. ಅಲ್ಲಿಂದ ಉಪದೇಶಕರು ಹೊರಟು ಸರ್ವಸಮ್ಮತವಾದ ಉಪದೇಶವನ್ನು ಮಾಡುತ್ತಾ ಎಲ್ಲೆಲ್ಲಿಯೂ ಸಂಚರಿಸಲಿ. ಇದಕ್ಕೆ ನನ್ನ ಕೈಯಲ್ಲಾದ ಸಹಾಯವನ್ನು ಮಾಡುವೆನು. ನನ್ನ ಮಿತ್ರರಿಂದಲೂ ಸಹಾಯ ಮಾಡಿಸುವೆನು. (ಅ.ಪ್ರ. 1944 ಫೆಬ್ರವರಿ, ಪುಟ 126) ಇಲ್ಲಿ ನಡೆಯುವ ವಿದ್ಯಾಲಯದಲ್ಲಿ ಸುಶಿಕ್ಷಿತರಾದ ಉಪದೇಶಕರು ಸಜ್ಜಾಗಬೇಕೆಂಬ ಉದ್ದೇಶವಿದೆ. ನನಗೆ ತಿಳಿದಿರುವ ಕೆಲವು ವಿಷಯಗಳನ್ನು ಉತ್ಸಾಹಶಾಲಿಗಳಾದ ತರುಣರಿಗೆ ಕೊಟ್ಟು ಅವರ ಮೂಲಕ ಈ ಕಾರ್ಯವು ಮುಂದುವರಿಯಬೇಕೆಂಬ ಆಸೆಯಿದೆ. ಇದು ಯುಕ್ತವಾಗಿದ್ದರೆ ಕಾಲೋಚಿತವಾಗಿದ್ದರೆ ಭಗವಂತನು 'ಹಾಗೆಯೇ ಆಗಲಿ' ಎಂದು ಹರಸಲಿ" - ಇದು ಶ್ರೀಗಳವರ ಆಶಯ. ಭಗವಂತನು 'ಹಾಗೆ ನಡೆಸಲಿ' ಎಂದು ನಮ್ಮ ಪ್ರಾರ್ಥನೆ.

ಇಷ್ಟು ಹೇಳಿರುವಾಗ ಕಾರ್ಯಾಲಯದಲ್ಲಿರುವ ಎಲ್ಲರ ಮೇಲೂ ಒಂದು ಗುರುತರವಾದ ನೈತಿಕ ಹೊಣೆಯಿದೆ. ಪಂಡಿತರುಗಳೂ, ಅವರ ಶಿಷ್ಯರೂ, ವ್ಯವಸ್ಥಾಪಕರೂ ಅವರ ಆಜ್ಞಾನುವರ್ತಿಗಳಾಗಬೇಕಾದ ವಿಶ್ವಾಸಿಗಳು. ಈ ಶಿಷ್ಯರು ಮತ್ತು ಯಾವದೇ ಕಾರ್ಯವನ್ನು ವಹಿಸಿಕೊಂಡವರು, ಶ್ರೀಶ್ರೀಗಳವರ ಶ್ರೇಯೋಮಾರ್ಗವನ್ನು ಪಾಲಿಸುವುದು ಅವರ ಧರ್ಮ, 'ಗುರುಕಾಣಿಕೆ' ಎಂದಾದರೂ ಪರಿಗಣಿಸಿ ಕರ್ತವ್ಯವೆಂದು ಈ ಪಥದಿಂದ ವಿಚಲಿತರಾಗದೆ ತಮ್ಮ ಶಕ್ತ್ಯಾನುಸಾರ ನಿರ್ವಂಚನೆಯಿಂದ ಕರ್ತವ್ಯ ನಿರ್ವಹಣೆ ಮಾಡುವುದೇ ಅವರವರಿಗೆ ಶ್ರೇಯೋಮಾರ್ಗ ಎಂಬುದು ನಿರೀಕ್ಷೆ. ಹಾಗೆ ಪ್ರಯತ್ನ ನಡೆದಿದೆ, ಶ್ರೀ ದೇವರ ಅನುಗ್ರಹ, ಶ್ರೀಗಳವರ ಆಶೀರ್ವಾದದಿಂದ ಮುಂದೆಯೂ ಚೆನ್ನಾಗಿಯೇ ನಡೆಯಲಿ ಅನ್ನುವುದು ಪ್ರಾರ್ಥನೆ.

## 4. ಆಡಳಿತ

ಶ್ರೀ ಶ್ರೀಗಳವರು ಪ್ರತ್ಯಕ್ಷ ಶಾರೀರಿಕ ರೂಪದಿಂದ ಪರೋಕ್ಷ ತೇಜೋಂಶ ಚೇತನ ರೂಪಿಗಳಾಗಿ ನಿಂತ ಕಾಲಕ್ಕೆ ಕಾರ್ಯಾಲಯದ ಆಡಳಿತ ವ್ಯವಸ್ಥೆ ಹೀಗಿತ್ತು: ಮುಖ್ಯವಾದ ನೀತಿ ನಿಯಮಗಳಿಗೆ ಅನುಗುಣವಾಗಿ ಕಾರ್ಯವ್ಯವಸ್ಥೆ ಸುಗಮವಾಗಲೆಂಬ ಉದ್ದೇಶದಿಂದ ಸಹಾಯಕ ನಿರ್ಣಯಗಳನ್ನು ಮಾಡಿ ಅದರ ಅನುಸರಣೆಗೆ ಶ್ರಮಿಸುವದು ; ಶ್ರೀ ಶ್ರೀಗಳವರ ಮೂಲೋದ್ದೇಶವಾದ ಅಧ್ಯಾತ್ಮ ವಿದ್ಯೆಯ ಪ್ರಚಾರಕ್ಕಲ್ಲದೆ ಮತ್ತೆ ಯಾವ ಕಾರ್ಯಕ್ಕೂ ಕಾರ್ಯಾಲಯದ ಚರಸ್ಥಿರ ಆಸ್ತಿಗಳು, ಅವುಗಳ ಉತ್ಪತ್ತಿಯು (ಗ್ರಂಥಮಾರಾಟ, ಪತ್ರಿಕಾಚಂದಾಹಣ, ಜಮೀನಿನಆದಾಯ ಇತ್ಯಾದಿ) ವಿನಿಯೋಗವಾಗದಂತೆ ನೋಡಿಕೊಳ್ಳುವುದು ; ಆಸ್ತಿ ಸಂರಕ್ಷಣೆ ; ಶ್ರೀ ಶ್ರೀಗಳು ಹಾಕಿ ಕೊಟ್ಟ ಮತ್ತು ಅದೇ ರೀತಿಯ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ನಡೆಯುವಂತೆ ಮೇಲ್ವಿಚಾರಣೆ ; ಇದಕ್ಕೆ ಧಕ್ಕೆ ಬರುವಲ್ಲಿ ಮಾತ್ರ ಮಧ್ಯೆ ಪ್ರವೇಶಿಸಿ ಸರಿ ಮಾಡುವುದು, ಕಾರ್ಯಸಮಿತಿಗಳು ನಿರಂತರವಾಗಿ ಅಧ್ಯಾತ್ಮಪ್ರಸಾರ ಕಾರ್ಯದಲ್ಲಿ ನಿರತವಾಗಿರುವಂತೆ ಬೇಕಾದ ಸಹಾಯ, ಉಸ್ತುವಾರಿ ; ಇದಕ್ಕನುಸಾರವಾಗಿ (ಅ) ಪೂಜಾ ಮಂದಿರ, ಅನುಷ್ಠಾನಗಳು, ಗ್ರಂಥ ಪ್ರಕಟಣೆ, (ಆ) ಪುಸ್ತಕ ಭಂಡಾರದ ಅಭಿವೃದ್ಧಿ (ಇ) ಅಧ್ಯಾತ್ಮೋಪದೇಶ ಕಾರ್ಯಕ್ರಮಗಳು, (ಈ) ಸಂಸ್ಕೃತ ವೇದಾಭ್ಯಾಸ, ವೇದಾಂತ ಪಾಠ ಪ್ರವಚನಗಳನ್ನು ನಡೆಸುವ ವಿದ್ಯಾಲಯ- ಇವುಗಳಿಗಾಗಿ ಮೂಲನಿಧಿಯನ್ನು ಬೆಳೆಸುವುದು ; ಕಾರ್ಯಕಾರಿ ಸಮಿತಿಗಳಿಗೆ ಅವಶ್ಯವಿದ್ದಾಗ ಸೂಕ್ತ ಸಲಹೆ, ಕಾರ್ಯವ್ಯವಸ್ಥೆ, ಸಮರ್ಪಕ ರೀತಿಯ ಮೇಲ್ವಿಚಾರಣೆ ಇವುಗಳೆಲ್ಲಾ ಟ್ರಸ್ಟ್‌ನ ಕರ್ತವ್ಯಗಳೆಂದು ಸ್ಪಷ್ಟವಾಗಿ ಸೂಚಿತವಾಗಿವೆ.

ಟ್ರಸ್ಟಿಯ ಸ್ಥಾನಕ್ಕೆ ಮತ್ತೊಬ್ಬ ಸೂಕ್ತರಾದ, ಕಾರ್ಯಾಲಯದ ವ್ಯವಸ್ಥೆಯಲ್ಲಿ ಅಧ್ಯಾತ್ಮಪ್ರಸಾರದ ಉದ್ದೇಶ ನಿರ್ವಹಣೆಯಲ್ಲಿ ನೆರವಾಗುವ ಮತ್ತೊಬ್ಬರನ್ನು ನೇಮಕ ಮಾಡಲು ಟ್ರಸ್ಟಿಗೆ ಅಧಿಕಾರವಿದೆ. ಇದರಿಂದ ಟ್ರಸ್ಟ್ ಸಮಿತಿಯಲ್ಲಿ ಒಂದೇ ರೀತಿಯ ಮುಂದುವರಿಕೆ, ನಿರಂತರದ ಉದ್ದೇಶವಲ್ಲದೆ, ಯಾವುದೇ ವೈಯುಕ್ತಿಕ ಅಥವಾ ಸಾಮೂಹಿಕ ರಾಜಕೀಯ ದ್ವೇಷ, ಪ್ರೇಮ- ಒಲವುಗಳಿಗೆ ಎಡೆ ಬಹಳ ಕಡಿಮೆ. ಅಧಿಕಾರ ಸ್ಥಾನದ ದುರುಪಯೋಗದಿಂದ ಕಾರ್ಯಾಲಯವನ್ನು ತಮ್ಮದೇ ಸ್ವಾಮ್ಯಕ್ಕೆ ತೆಗೆದುಕೊಂಡು, ಆಸ್ತಿ ಹಣವನ್ನು ದೋಚುವ ಅವಕಾಶ ಕಡಿಮೆ.

ಪ್ರಧಾನ ಮತ್ತು ಶಾಖಾಕಾರ್ಯಾಲಯ ಸಮಿತಿಗಳಿಗೆ ಈ ಎಲ್ಲ ವಿಧ್ಯುಕ್ತ, ವಿಹಿತ, ನಿಯೋಜಿತ ಕಾರ್ಯಗಳನ್ನು ರೂಪಕ್ಕಿಳಿಸುವ ಗುರುತರ ಜವಾಬ್ದಾರಿಯನ್ನು

ನಿರ್ದೇಶನ ಮಾಡಲಾಗಿತ್ತು. ಈ ಪ್ರಯತ್ನದಲ್ಲಿ ತಮಗೆ ಉಚಿತವೆನಿಸುವ-ಕಾರ್ಯಾಲಯದ ಉದ್ದೇಶ, ನಿಯಮಗಳು, ಮತ್ತು ಟ್ರಸ್ಟ್ ನಿರ್ಣಯಗಳಿಗೆ ವಿರುದ್ಧವಾಗದಂತೆ, ಎಲ್ಲ ಕ್ರಮಗಳನ್ನೂ ಸೂಕ್ತ ನಿರ್ಧಾರಗಳನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಯಂತೆ ಕೈಗೊಳ್ಳುವದು, ಬೇಕಾದ ಹಣಕಾಸು ವ್ಯವಸ್ಥೆಯನ್ನು ತಾವೇ ಮಾಡಿಕೊಂಡು, ಸರಿಯಾದ ರೀತಿಯಲ್ಲಿ ಲೆಕ್ಕ-ಪತ್ರಗಳನ್ನಿಟ್ಟು ಪ್ರತಿ ವರ್ಷವೂ ಆಡಿಟ್ ಮಾಡಿಸಿ, ಆಡಿಟ್‌ನ ವರದಿಯನ್ನು ಟ್ರಸ್ಟಿಗೆ ಕಳುಹಿಸಿಕೊಡುವದೂ ಅವರ ಕರ್ತವ್ಯಗಳು. ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವಿದ್ದರೂ ಅದಕ್ಕೆ ಟ್ರಸ್ಟ್‌ನ ಅನುಮೋದನೆ ಪಡೆಯುವುದು, ಸದಸ್ಯರೇ ಅಧ್ಯಕ್ಷರನ್ನು ಆರಿಸುವುದು, ಆಗಾಗ ಸಮಿತಿಯ ಕಾರ್ಯ, ನಿರ್ಣಯಗಳನ್ನು ಟ್ರಸ್ಟ್‌ಗೆ ವರದಿ ಮಾಡುವುದು, ಕಾಣಿಕೆಗಳ ವಿವರವನ್ನು ಪ್ರತಿ ಸಂಚಿಕೆಯಲ್ಲೂ ಕೊಡುವುದು, ಇಂತಹ ಅನೇಕ ನಿರ್ದೇಶನಗಳಿಂದ ಶ್ರೀ ಶ್ರೀಗಳವರು ಕಾರ್ಯಾಲಯ ಎಷ್ಟು ಸುವ್ಯವಸ್ಥಿತವಾಗಿ ನಡೆಯಬೇಕೋ ಅಷ್ಟನ್ನೂ ಮಾಡಿದ್ದರು ; ಕಾರ್ಯಸಮಿತಿಗಳಿಗೆ ಕಾರ್ಯ ವಿವೇಚನಾ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದ್ದರು. ನಿಜ, 1975ರಲ್ಲಿ, ಕೈಗೆ ಬಂದ ಆಸ್ತಿ-ಹಣದ ರೂಪದಲ್ಲಾಗಲೀ, ಚರಸ್ಥಿರ ರೂಪದಲ್ಲಾಗಲೀ ಇದ್ದುದೇನೂ ಬಹಳವಲ್ಲ. ಅನೇಕ ಸ್ಥಿರ ಆಸ್ತಿಯೆಲ್ಲ 1948ರ ವೇಳೆಗೆ ಶ್ರೀ ಶ್ರೀಗಳವರಿಂದ ಬಂದಿತ್ತು. ಆರ್ಥಿಕ ಸಹಾಯ ಸಮರ್ಪಕ ಅಧ್ಯಾತ್ಮ ಪ್ರಸಾರ ಕಾರ್ಯಕ್ಕೇ ವಿನಿಯೋಗವಾಗುತ್ತಿತ್ತು. ಅದೆಲ್ಲಕ್ಕಿಂತ ಹೆಚ್ಚಾದದ್ದು ಅವರು ಬೆಳೆಸಿ ಬಿಟ್ಟು ಹೋದ ಪರಂಪರೆ. ಇದಾದರೂ ಸಾಮಾನ್ಯವೇನಲ್ಲ, ಬೇರೆಯ ಕ್ಷೇತ್ರದ ಕಾರ್ಯವೂ ಅಲ್ಲ, ಪ್ರತಿಶತ ಹೆಚ್ಚೆಂದರೆ ಹತ್ತು ಜನರೂ ಪರಿಚಯ ಮಾಡಿಕೊಳ್ಳದ ಅಧ್ಯಾತ್ಮ ಕ್ಷೇತ್ರದಲ್ಲಿನ ಹೆಚ್ಚಳವನ್ನು, ಸರಳವಾದ ಭಾಷೆಯಲ್ಲಿ ಅನುಭವದಿಂದ ವಿವರಿಸಿದ ವಿಶೇಷವನ್ನು, ಇಂತಹ ಭವ್ಯ ಪರಂಪರೆಯನ್ನು ಬೆಳೆಸುವುದಿರಲಿ, ಹಾಗೆಯೇ ಕಾಪಾಡಿಕೊಂಡು ಮುಂದುವರೆಯುವುದೂ ಸಾಹಸದ ಕಾರ್ಯವೇ.

ಇಂತಹ ಮೇಲ್ಮಟ್ಟದ ಕಾರ್ಯಕ್ಷೇತ್ರದಲ್ಲಿ ವ್ಯವಹಾರಸ್ಥರು ಹೆಜ್ಜೆಯಿಡುವಾಗ, ಅತಿ ಎಚ್ಚರ, ಮೃದುವಾದ ಚಿಂತನೆ, ಸರಿ ತಪ್ಪುಗಳನ್ನು ಕಂಡು ಮಾರ್ಗದರ್ಶನ ಮಾಡುವುದು ಅವಶ್ಯ. ಪುಣ್ಯವಶಾತ್, ಆ ಸಮಯದಲ್ಲಿ ಹಲವು ಕಾಲ ಶ್ರೀಗಳೊಡನೆ ಓಡಾಡಿ, ಮಾತನಾಡಿ ಅವರ ನಿಕಟ ಪರಿಚಯದಿಂದ ಅವರ ಮನೋಗತವನ್ನರಿತವರಾಗಿದ್ದ ಅಂತಹ ಯೋಗ್ಯರು, ಸಮರ್ಥರು ಟ್ರಸ್ಟಿಗಳಾಗಿದ್ದುದು, ದಕ್ಷರಾದ ಪಂಡಿತರುಗಳಿದ್ದುದೇ ಒಂದು ವಿಶೇಷ. ಹೀಗಾಗಿ ಆಡಳಿತವಾಗಲೀ, ಸಾರಸ್ವತ ಕಾರ್ಯಗಳಾಗಲೀ ಅವಿಚ್ಛಿನ್ನವಾಗಿ ನಡೆಯಿತು.

ಮೊದಲ ಬಾರಿಗೆ ರಾಯರ ಸಂನ್ಯಾಸ ಸ್ವೀಕಾರದ ವೇಳೆ ರೂಪಗೊಂಡ ಕಾರ್ಯಕಾರಿ ಸಮಿತಿಗೆ 1948ರಲ್ಲಿ ನೇಮಕರಾದ ಶ್ರೀ ವೈ. ನರಸಪ್ಪನವರು ತಮ್ಮ ಜೀವನಾಂತ್ಯದವರೆಗೂ (12.4.1977) ಹೊಳೆನರಸೀಪುರದ ಕಾರ್ಯಸಮಿತಿಯ ಅಧ್ಯಕ್ಷ ರಾಗಿದ್ದರು. ಅವರ ಅನಂತರ ಇಲ್ಲಿಯವರೆಗೆ ಶ್ರೀ ಅರಕಲಗೂಡು ತಾಂಡವೇಶ್ವರರು ಅಧ್ಯಕ್ಷರಾಗಿದ್ದಾರೆ. ಅಲ್ಲಿನ ಕಾರ್ಯಾಲಯದ ಎಲ್ಲ ಕೆಲಸಗಳೂ ಆಧ್ಯಾತ್ಮ ಕಾರ್ಯಗಳೂ ಇವರ ನೇತೃತ್ವದಲ್ಲಿ ಚೆನ್ನಾಗಿ ನಡೆಯುತ್ತ ಬಂದಿದೆ.

ಟ್ರಸ್ಟ್‌ನ ಪ್ರಥಮಾಧ್ಯಕ್ಷರಾಗಿ 1965ರಲ್ಲಿ (17.2.65) ಆಡಳಿತ ಹೊಣೆಯನ್ನು ಹೊತ್ತ ಶ್ರೀ ವಿಠಲಶಾಸ್ತ್ರಿಗಳು, ತಮ್ಮ ಸಂನ್ಯಾಸ ಸ್ವೀಕಾರದ ನಿರ್ಧಾರದ ಮೇಲೆ (ಸ್ವೀಕಾರಕ್ಕೆ ಮೊದಲು) 6.7.80ರವರೆಗೆ. ಅಲ್ಲಿಯವರೆಗೂ ಉಪಾಧ್ಯಕ್ಷರಾಗಿದ್ದ ಶ್ರೀ ಎ. ವೆಂಕಟೇಶಯ್ಯನವರು ಅಧ್ಯಕ್ಷ ಸ್ಥಾನಕ್ಕೆ, ಆಮೇಲೆ ಶ್ರೀ ಎಂ.ಜೆ. ಕೋದಂಡರಾಮ ಶೆಟ್ಟರು (1985 ರಿಂದ 17.3.96ರವರೆಗೆ), ಅನಂತರ ಶ್ರೀ ಹೆಚ್. ವೆಂಕಟನರಸಪ್ಪ ನವರು 17.3.96ರಿಂದ ನವೆಂಬರ್ 2002ರ ವರೆಗೂ, ಅಲ್ಲಿಂದ ಈ ವರೆಗೆ ಶ್ರೀ ಕೆ. ಶ್ರೀನಿವಾಸ್‌ರವರು ಅಧ್ಯಕ್ಷರಾಗಿದ್ದಾರೆ. ಶ್ರೀ ತಾಂಡವೇಶ್ವರವರು 1965ರಿಂದಲೂ ಟ್ರಸ್ಟ್‌ನ ಕನ್‌ವೀನರಾಗಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. 1965ರಿಂದ ಈವರೆಗೆ ಟ್ರಸ್ಟಿಗಳಾಗಿ ಸೇವೆ ಸಲ್ಲಿಸಿದ, ಮತ್ತು ಈಗ ಸೇವಾನಿರತರಾದವರೆಲ್ಲರನ್ನೂ ಕಾರ್ಯಾಲಯವು ಅವರ ಸೇವೆಯನ್ನು ಪ್ರಶಂಸಿಸಿ, ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತದೆ.

**ಕಾರ್ಯಾಲಯದ ಸಮಿತಿ, ಟ್ರಸ್ಟ್‌ಗಳ ಕೆಲವು ಮುಖ್ಯ ನಡೆಗಳು :** ಶ್ರೀಶ್ರೀಗಳಿರುವಾಗಲೇ ಮೊದಲಿಗೆ 1959ರಲ್ಲಿ ಹೆಚ್ಚಿನ ಕಾಣಿಕೆಗಳನ್ನು ಕೊಟ್ಟು ಕಾರ್ಯಾಲಯವನ್ನು ಸ್ಥಿರಗೊಳಿಸಲು ಸಹಾಯ ಮಾಡಿರುವವರನ್ನೆಲ್ಲಾ ಸೇರಿಸಿದ ಜನರಲ್ ಬಾಡಿಯ ಮೀಟಿಂಗ್ ಕರೆಯಬೇಕು, ಅವರಿಗೆ ನಡೆದಿರುವ ಕಾರ್ಯಗಳ ವಿವರಗಳ ವರದಿ ಕೊಡಬೇಕು, ಅವರ ಸಲಹೆ ಕೇಳಬೇಕು, ಅಂದರೆ ನಿಯಮದ ಚೌಕಟ್ಟಿನಲ್ಲಿ ಸರ್ವಜನ ಸಮ್ಮತರಾಗಿರಬೇಕು ಎನ್ನುವುದು ಅವರ ಆಶಯ. ಆದರೆ, ಕಾರ್ಯ ಸಮಿತಿಗೆ ಚುನಾವಣೆ ಎಂಬುದಿರಲಿಲ್ಲ. ಇದಕ್ಕೆ ಮುಖ್ಯ ಕಾರಣ, ಕಾರ್ಯ ಸಮಿತಿ ಸರಿಯಾದ ರೀತಿಯಲ್ಲಿ ನಡೆಸಲು ಯೋಗ್ಯರಾದವರನ್ನೇ ಆರಿಸುವುದೇ ಆಗತ್ಯ. ಚುನಾವಣೆ ಎಂದಾಗ ಮೊದಲಿಗೆ ಹೇಗೋ, ಆದರೆ ಅನಂತರ ರಾಜಕೀಯದ ಚುನಾವಣೆ ಎಂಬಂತೆ ಆದರ ಮಟ್ಟ ಇಳಿಯುವುದೇ ಹೆಚ್ಚು ಸಾಮಾನ್ಯ.

1959ರ ಜನರಲ್ ಬಾಡಿ ಮೀಟಿಂಗ್ ಎಂದು ಕರೆಸಿಕೊಂಡದ್ದು ಇದು ಮೊದಲು, ಕೊನೆಯದೂ ಹೌದು. 36 ಸದಸ್ಯರು ಬಂದಿದ್ದರು. ಇಲ್ಲಿಯೇ 1959ರ

ನಿಯಮಾವಳಿಗಳು, ಕೆಲವು ಮಾರ್ಪಾಡುಗಳೊಂದಿಗೆ, ಅಂಗೀಕೃತವಾಯಿತು. ಶ್ರೀ ಎಂ.ಎಸ್. ಸೀತಾರಾಮಯ್ಯನವರು ಇದನ್ನು ಟ್ರಸ್ಟ್ ಆಗಿ ಮಾಡಬೇಕು ಎಂದು ಸಲಹೆ ಮಾಡಿದರು. ಆದರೆ, ಈ ಸಲಹೆ ಬಗ್ಗೆ ಕೆಲವು ಸಂದೇಹಗಳನ್ನು ಆ ಮೀಟಿಂಗ್‌ನ ಅಧ್ಯಕ್ಷರಾದ ಶ್ರೀ ಕೆ. ಪುಟ್ಟೂರಾಯರು ವ್ಯಕ್ತಪಡಿಸಿ, ಕಾರ್ಯಸಮಿತಿ ಮುಂದುವರೆಯುವುದೇ ಲೇಸು ಎಂದು ಅಭಿಪ್ರಾಯಪಟ್ಟರು. ಬಹುಶಃ ಆವೇಳೆ ಗಾಗಲೇ ಶ್ರೀ ಶ್ರೀಗಳವರು ಈ ವಿಚಾರವನ್ನು ಕುರಿತು ಯೋಚನೆ ಮಾಡಿದ್ದರು ಎಂದು ಕಾಣುತ್ತದೆ. 1965ರಲ್ಲಿ ಟ್ರಸ್ಟ್ ಕಾರ್ಯರೂಪಕ್ಕೆ ಬಂತು. 1990ರಲ್ಲಿ ಸಾರ್ವಜನಿಕ ಧರ್ಮಾರ್ಥ ಸಂಸ್ಥೆ (Public Charitable Trust)ಯಾಗಿ ಪರಿವರ್ತನೆಯನ್ನು ಟ್ರಸ್ಟ್ ಸಮಿತಿಯು ಸರ್ವಾನುಮತದಿಂದ ಅಂಗೀಕರಿಸಿತು. 1992ರಲ್ಲಿ ನೂತನ ಪರಿಷ್ಕೃತ ನಿಯಮ ನಿಬಂಧನೆಗಳನ್ನು ಕೆಲವು ಸೂಕ್ತ ತಿದ್ದುಪಡಿ ಮತ್ತೆ ಕೆಲವನ್ನು ಅಳವಡಿಸುವುದರೊಡನೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ಕೆಲವು ತೀರ್ಮಾನಗಳು :** 1948ರಲ್ಲಿ ಶ್ರೀ ಶ್ರೀಗಳವರು ರೂಪಿಸಿದ ನಿಯಮಾವಳಿಯನ್ನು ಇಲ್ಲಿಯ ಮೂಲೋದ್ದೇಶವನ್ನು ಬದಲಾಯಿಸಲು ಯಾರಿಗೂ ಅಧಿಕಾರವಿಲ್ಲ ಎಂದು ಘೋಷಿಸಿದ್ದನ್ನು, 1967ರ (11.2.67) ಟ್ರಸ್ಟ್ ಮೀಟಿಂಗ್‌ನಲ್ಲಿ ಪುನಃ ಸ್ಪಷ್ಟಪಡಿಸಿದೆ. ಶ್ರೀ ಬ್ರಹ್ಮಾನಂದೇಂದ್ರರು ಬರೆದ ಕಾಗದದಲ್ಲಿ ಎತ್ತಿರುವ ಅಂಶವೊಂದರ ಬಗ್ಗೆ ಟ್ರಸ್ಟ್ ಭಿನ್ನಾಭಿಪ್ರಾಯವನ್ನು ಹೊಂದಿ, ಅದು ಯತಿ ಧರ್ಮಕ್ಕೆ ಹೊಂದಲಾರದು ಎಂದು ತಿಳಿಸಿತು. ಈ ವಿಷಯದಿಂದಾಗಿ ಶ್ರೀ ಬ್ರಹ್ಮಾನಂದೇಂದ್ರರು ಕಾರ್ಯಾಲಯವನ್ನು ಬಿಟ್ಟು ತೆರಳಿದರು (1974ರಲ್ಲಿ). ಶ್ರೀ ಶ್ರೀಗಳವರಲ್ಲಿ ವಿದ್ಯಾರ್ಥಿಯಾಗಿ ಬಂದು ನಿಂತ ಶ್ರೀ ಟಿ.ಎಸ್. ರಾಜಗೋಪಾಲ್ ಅವರು ವಿದ್ಯಾಭ್ಯಾಸದ ಪೂರ್ಣಾವಧಿ ಮುಗಿದ ನಂತರ ಸಂನ್ಯಾಸ ಸ್ವೀಕರಿಸಿ, ಶಾಖಾ ಕಾರ್ಯಾಲಯದಲ್ಲೇ ನಿಂತು ಅದರ ಪ್ರಗತಿಗೆ ಸಹಾಯಕರಾಗಿರುವುದಾಗಿ ತಿಳಿಸಿದ್ದರೆಂದು, ಹಾಗೂ ಸ್ವಾಮಿಗಳಿರುವಾಗಲೇ ಅವರ 4½ ವರ್ಷದ ವಿದ್ಯಾಭ್ಯಾಸ ಮುಗಿದಿದೆಯೆಂದು ಶ್ರೀ ಶ್ರೀಗಳವರೇ ಶ್ರೀ ವಿಠಲ ಶಾಸ್ತ್ರಿಗಳಿಗೆ ಶ್ರುತಪಡಿಸಿದ್ದರೆಂಬ ವಿಚಾರ ಟ್ರಸ್ಟ್‌ನಲ್ಲಿ 1976 ಏಪ್ರಿಲ್‌ನಲ್ಲಿ ಬಂದಿತ್ತು, ಅಂದರೆ ಶ್ರೀಶ್ರೀಗಳವರಿಗೂ ಅದು ಸಮ್ಮತವೇ ಆಗಿದ್ದು ಅವರೇ ಬೆಂಗಳೂರು ಶಾಖಾ ಕಾರ್ಯಾಲಯದಲ್ಲಿ ಮಾರ್ಗ ದರ್ಶಕರಾಗಿ ಮುಂದುವರೆಯಬೇಕೆಂಬ ಇಚ್ಛೆಯು ಶ್ರೀ ಶ್ರೀಗಳವರದ್ದಾಗಿತ್ತು ಎಂಬ ಇಂಗಿತ ಬಂದಿತು. ಅದರಂತೆ, ಶ್ರೀಶ್ರೀಗಳವರ ಇಚ್ಛೆಯಂತೆ ರಾಜಗೋಪಾಲರು ಹೊಳೆನರಸೀಪುರದಲ್ಲಿ ಸಂನ್ಯಾಸ ಸ್ವೀಕರಿಸಿ, ತರ್ಕ, ವ್ಯಾಕರಣ, ಮೀಮಾಂಸಾ ಮುಂತಾದ ಪಾಠಗಳನ್ನು ಕಲಿಯಬಹುದೆಂದು ಟ್ರಸ್ಟ್‌ನಿಂದ ಅವರಿಗೆ ಪತ್ರ ಬರೆದಿತ್ತು.

(ಟ್ರಸ್ಟ್ ಸಭೆಯ ನಡವಳಿಕೆ ಪುಸ್ತಕ, ಸಂಪುಟ 1, ಪುಟ 155, 156), ಅವರು ಒಪ್ಪಿಗೆಯನ್ನು ತಿಳಿಸಿದ್ದಾರಾದರೂ, ಆ ಸಮಯದಲ್ಲೇ ಅವರ ವಿಷಯದಲ್ಲಿ ಶಾಖಾ ಕಾರ್ಯಾಲಯದಲ್ಲಿ ಭಿನ್ನಾಭಿಪ್ರಾಯಗಳಿದ್ದದ್ದರಿಂದ ಅವರು 1976ರಲ್ಲಿ ಕಾರ್ಯಾಲಯವನ್ನು ಬಿಟ್ಟು ಉತ್ತರ ಕಾಶಿಗೆ ಪ್ರಯಾಣ ಮಾಡಿದರು.

1970ರಲ್ಲೇ ಶ್ರೀ ಶ್ರೀಗಳಿರುವಾಗಲೇ ಶಾಖಾಕಾರ್ಯಾಲಯಗಳು ಹಣಕಾಸಿನ ವಿಷಯದಲ್ಲಿ ಸ್ವಾಯತ್ತತೆಯನ್ನು ಹೊಂದಿರುವುವು, ಆದರಿಂದ ಆಯಾಯಾ ಶಾಖೆಯವರ ಹಣಕಾಸು ಆಡಳಿತ ಆಯಾಯಾ ಶಾಖೆಗೆ ಸಂಬಂಧಪಟ್ಟಂತೆ ಕಾರ್ಯಸಮಿತಿಯವರು ಒಳನಿಬಂಧನೆಗಳನ್ನು ಮಾಡಿಕೊಂಡು ಮುಂದುವರೆಯುವಂತೆ ಟ್ರಸ್ಟ್ ತೀರ್ಮಾನಮಾಡಿತು.

1979ರಲ್ಲಿ ಶ್ರೀ ಶಾಂತಾನಂದ ವಿನಾಯಕ ಸ್ವಾಮಿ ದೇವಾಲಯ, ಶ್ರೀ ದತ್ತ ಗುರು ಶಾಂಕರ ವೇದಾಂತನಿಲಯದ ಟ್ರಸ್ಟ್‌ನಿಂದ ಬಂದ ಪತ್ರಕ್ಕೆ ಉತ್ತರವಾಗಿ ಟ್ರಸ್ಟ್ ಸಮಿತಿಯು ಶ್ರೀಗಳವರ ಗ್ರಂಥಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿ ಪ್ರಕಟಿಸುವ ವಿಚಾರವನ್ನು ಕೆಲವು ಸಣ್ಣ ಷರತ್ತುಗಳೊಡನೆ ಒಪ್ಪಿಕೊಂಡಿತು. ಅದರಲ್ಲಿ ರಾಯಲ್ಟಿ ಎಂದೇನೂ ನಿರೀಕ್ಷಿಸದೆ, ಆ ಸಂಸ್ಥೆಯವರು ನೀಡುವ ಯಾವುದೇ ಕಾಣಿಕೆಯನ್ನು ಸ್ವೀಕರಿಸುವುದೆಂದು, ಉದಾರವಾದ ನಿರ್ಧಾರ ನೀಡಿತು.

ಅಧ್ಯಾತ್ಮ ಪ್ರಚಾರಕರನ್ನು ತಯಾರು ಮಾಡಲು ಕಾರ್ಯಾಲಯದ ಎಲ್ಲ ಪಂಡಿತರನ್ನೂ-ಶ್ರೀಗಳಾದ ಲಕ್ಷ್ಮೀನರಸಿಂಹ ಮೂರ್ತಿಗಳು, ಸುಬ್ರಾಯಶರ್ಮರು, ಮತ್ತೂರು ಅಶ್ವತ್ಥನಾರಾಯಣ ಅವಧಾನಿಗಳು, ಕೇಶವ ಅವಧಾನಿಗಳು - ಇವರನ್ನು ಒಳಗೊಂಡ ಸಮಿತಿಯೊಂದು ಸೂಕ್ತಕ್ರಮವನ್ನು ತೆಗೆದುಕೊಂಡು, ಈ ಕಾರ್ಯ ಯಶಸ್ವಿಯಾಗುವಂತೆ ಸಹಕರಿಸಬೇಕೆಂದೂ ಅವರನ್ನು ಪ್ರಾರ್ಥನೆ ಮಾಡಲಾಯಿತು ; ಹಿರಿಯರಾದ ಶ್ರೀ ಯಜ್ಞನಾರಾಯಣಶಾಸ್ತ್ರಿಗಳನ್ನೂ ಈ ಕಾರ್ಯದಲ್ಲಿ ಸೇರಿಸಿಕೊಂಡು ಆಗಿಂದಾಗ ಅವರಿಗೆ ತಮ್ಮ ಕೆಲಸದ ಪ್ರಗತಿಯನ್ನೂ ತಿಳಿಸಿ, ಅವರ ಸಲಹೆಯನ್ನು ತೆಗೆದುಕೊಳ್ಳಬೇಕೆಂದೂ, 21.5.2000ದಲ್ಲಿ ಸೂಚಿಸಲಾಯಿತು. (ಕಾರಣಾಂತರಗಳಿಂದ ಈ ಕಾರ್ಯ ಪ್ರಾರಂಭವಾಗಲೇ ಇಲ್ಲ).

ಆಗತಾನೆ ಬಂದಿದ್ದ, ವೇದಾಂತಾಭ್ಯಾಸವನ್ನು ಸಾಕಷ್ಟು ಮಾಡಿದ್ದ ಶ್ರೀ ಕೆ.ಪಿ. ಗೋಪಾಲಕೃಷ್ಣ ಎಂಬವರನ್ನು, ಹೆಚ್ಚಿನ ಶಿಕ್ಷಣ ನೀಡಿ, ಮೊದಲ ಪ್ರಚಾರಕರಾಗಿ ತರಪೇತು ಮಾಡಲು ನಿರ್ಧರಿಸಿತು. ಅದರಂತೆ ಹೊಳೆನರಸೀಪುರ, ಬೆಂಗಳೂರುಗಳಲ್ಲಿ, ಶ್ರೀ ಗೋಪಾಲಕೃಷ್ಣಭಟ್ಟರಿಗೆ ಪ್ರವಚನದ ಅವಕಾಶಗಳನ್ನೂ ಕಲ್ಪಿಸಲಾಗಿತ್ತು. ಆದರೆ, ಅವರು ಮಧ್ಯದಲ್ಲಿಯೇ ಬಿಟ್ಟುಹೋದರು.

ಆಗಸ್ಟ್ 99ರ ಟ್ರಸ್ಟ್ ಸಭೆಯಲ್ಲಿ ಬೆಂಗಳೂರು ಕಾರ್ಯಾಲಯದ ಕೋರಿಕೆಯಂತೆ, ಅಲ್ಲಿ ಮಾರಾಟವಾಗುವ ಕಾರ್ಯಾಲಯದ ಗ್ರಂಥಗಳಿಗೆ ಶೇ. 5ರಂತೆ ಕಮೀಷನ್ ಶಾಖಾ ಕಾರ್ಯಾಲಯಕ್ಕೆ ಮತ್ತು ಪ್ರಚಾರ ಮತ್ತಿತರ ಕಾರಣಗಳಿಂದ ಶ್ರೀ ಸುಬ್ರಾಯಶರ್ಮರೇ ಕೊಳ್ಳುವ ಪುಸ್ತಕಗಳಿಗೆ, ಶೇ. 33 1/3ರ ರಿಯಾಯಿತಿಯನ್ನು ಅವರಿಗೂ ಕೊಡಬಹುದೆಂದು ಟ್ರಸ್ಟ್ ಒಪ್ಪಿಕೊಂಡಿತು.

19.11.2000ದಲ್ಲಿ ಬೆಂಗಳೂರಿನ ಕಾರ್ಯಾಲಯದಲ್ಲಿ ಕಾಣೆಯಾದ ಹಣದ ವಿಷಯದಲ್ಲಿ (ಸುಮಾರು ರೂ. 41,997.00), ದೀರ್ಘ ಚರ್ಚೆಯನಂತರ ವಿವರವಾದ ಕ್ರಮವನ್ನು ಅನುಸರಿಸಲಾಯಿತು. ಆದರೆ, ಕೊರತೆಗೆ ಕಾರಣಗಳಾಗಲೀ, ಯಾರಿಂದ, ಹೇಗೆ ಎಂಬುದನ್ನು ನಿಖರವಾಗಿ ನಿರ್ಧರಿಸುವುದು ಕಷ್ಟಸಾಧ್ಯವಾದ್ದರಿಂದ, ಏಪ್ರಿಲ್ 8, 2001ರ ಸಭೆಯ ದೀರ್ಘ ವಿಚಾರದನಂತರವೂ ಏನೂ ಹೊರಬರಲಿಲ್ಲವಾಗಿ, ಅಂತರದ ಟ್ರಸ್ಟ್ ಸಭೆಯಲ್ಲಿ, ಶ್ರೀಶ್ರೀಗಳವರ ಕ್ಷಮೆ ಕೇಳಿ, ಸವಿವರವಾದ ಕಾರಣಗಳನ್ನು ಸೂಚಿಸಿ, ಆ ಮೊತ್ತವನ್ನು ಲೆಕ್ಕದಿಂದ ತೆಗೆದುಹಾಕಲಾಯಿತು.

ನಿಯಮಾವಳಿಯಲ್ಲಿಯ ತನ್ನ ಕರ್ತವ್ಯವನ್ನು ಮೊದಲ ಬಾರಿಗೆ ಉಪಯೋಗಿಸುವ ವಿಪರೀತದ ಸಂದರ್ಭ ಉಂಟಾದಾಗ, ಟ್ರಸ್ಟ್ ಸಮಿತಿಯು (ಇದೂ ಶ್ರೀಶ್ರೀಗಳವರ ಸಂಕಲ್ಪವೇ ಎಂದು ಭಾವಿಸಿ) ಬಹಳ ಭಾರವಾದ, ನೊಂದ ಮನಸ್ಸಿನಿಂದ ಬೆಂಗಳೂರು ಶಾಖಾ ಕಾರ್ಯಾಲಯ ಸಮಿತಿಯನ್ನು ವಿಸರ್ಜಿಸಿ ಹೊಸ ಸಮಿತಿಯನ್ನು ರಚಿಸಬೇಕಾದುದು (21.5.01) ಅನಿವಾರ್ಯವಾಯಿತು.

2002, 2003ರಲ್ಲಿ ಕಾರ್ಯಾಲಯಕ್ಕೆ ಅನುಕೂಲವಾಗುವಂತಹ ಅನೇಕ ವಿಷಯಗಳನ್ನು ಕೂಲಂಕಷವಾಗಿ ಚರ್ಚೆ ಮಾಡಲಾಯಿತು. 23.3.03ರಲ್ಲಿ ವಿದ್ಯಾನಿಲಯ ಯೋಜನೆಯೊಂದನ್ನು - ಶ್ರೀಶ್ರೀಗಳವರು 1937-38ರಲ್ಲೇ ವಿವರವಾದ ನೀಲನಕ್ಷೆಯನ್ನನುಸರಿಸಿ ತಯಾರಿಸಿ ಅಂಗೀಕರಿಸಲಾಯಿತು. 1949, 1959, 1965, 1992ರ ನಿಯಮಾವಳಿಯನ್ನೂ, ವಿಶ್ವಸ್ತ ಸಮಿತಿಯ ಮುಖ್ಯ ನಿರ್ಣಯಗಳನ್ನೂ ಒಟ್ಟುಗೂಡಿಸಿ ತಯಾರಿಸಿದ 'ಕ್ರೋಢೀಕೃತ ಆಚಾರ ಸಂಹಿತೆ ಯನ್ನೂ', ಹಾಗೆಯೇ ಶಾಖಾ ಕಾರ್ಯಾಲಯಗಳ ನಿಯಮ ನಿಬಂಧನೆಗಳನ್ನೂ, 23.11.02ರ ಟ್ರಸ್ಟ್ ಮತ್ತು ಬೆಂಗಳೂರು ಶಾಖಾ ಕಾರ್ಯಾಲಯ ಸಮಿತಿಯ ಸಂಯುಕ್ತ ಸಭೆಯಲ್ಲಿ ಅಂಗೀಕರಿಸಲಾಯಿತು. ಇವುಗಳು ಕಾರ್ಯಾಲಯದಲ್ಲಿ ಆಚರಣೆಗೆ ಉಪಯುಕ್ತವಾದ ನಿಯಮಗಳ ಕೈಪಿಡಿ, ಅನುಸರಿಸಬೇಕಾದ ಕ್ರಮಗಳ ವಿಹಿತ ಚೌಕಟ್ಟು ಎಂದು ಪರಿಗಣಿಸಲಾಗಿದೆ.

# 5. ಸಾರಸ್ವತ ಮಹಾಯಜ್ಞ

ಭಾರತೀಯ ಸಂಸ್ಕೃತಿಯ ಗನಿಗಳಾದ ವೇದಗಳಲ್ಲಿನ ಕೊನೆಯ ಭಾಗವೇ ಉಪನಿಷತ್ತುಗಳು, ವೇದಾಂತ. ಹಾಲಿನಿಂದ ಕಡೆದು ತೆಗೆದ ಬೆಣ್ಣೆಯಂತೆ ಇವು ಈ ಜಗತ್ತಿನ ಪರಮಾರ್ಥದ ರಹಸ್ಯಗಳನ್ನು ತಿಳಿಸುವ ಉತ್ಕೃಷ್ಟ ಜ್ಞಾನಭಂಡಾರಗಳಾಗಿವೆ. ಇಂತಹ ಶ್ರೇಷ್ಠ ಹತ್ತು ಉಪನಿಷತ್ತುಗಳಿಗೆ, ಒಂದು ಸಾವಿರದ ಇನ್ನೂರಕ್ಕೂ ಹೆಚ್ಚು ವರ್ಷಗಳ ಹಿಂದೆ ಶ್ರೀ ಶಂಕರಾಚಾರ್ಯರು ಭಾಷ್ಯವನ್ನು ಬರೆದು ಅದರಲ್ಲಿ ಅಡಗಿರುವ ಅಧ್ಯಾತ್ಮ ವಿದ್ಯೆಯನ್ನು ಭರತ ಖಂಡದಲ್ಲೆಲ್ಲ ಪ್ರಚಾರ ಮಾಡಿದರು. ಈ ಅಮೋಘ ಕೃತಿಗಳಿಂದ ಆಕರ್ಷಿತರಾದ ಶ್ರೀಶ್ರೀಸಚ್ಚಿದಾನದೇಂದ್ರಸರಸ್ವತೀಸ್ವಾಮಿಗಳು ಸಂಸ್ಕೃತದಲ್ಲಿ ಬರೆದ ಭಾಷ್ಯಗಳನ್ನೆಲ್ಲ ಕನ್ನಡಕ್ಕೆ ತಂದು ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಟಿಸಿದರು. ಈ ತಮ್ಮ ಅಧ್ಯಾತ್ಮ ಸಾರಸ್ವತ ಸೇವೆಯಿಂದ, ಪರಿಶುದ್ಧವಾದ ಸಚ್ಚಿದಾನಂದತತ್ತ್ವಪ್ರಚಾರದಿಂದ ಅನ್ವರ್ಥವಾಗಿ ಸರಸ್ವತಿಗಳೆನಿಸಿ ರಾರಾಜಿಸಿದರು.

ಅವರು ಕೈಗೊಂಡ ಈ ಮಹಾಯಜ್ಞಕ್ಕೆ (1) ಪ್ರವಚನಗಳು (2) ಪತ್ರಿಕೆ, (3) ಗ್ರಂಥಗಳು ಮತ್ತು (4) ಅಧ್ಯಾತ್ಮ ವಿದ್ಯಾನಿಲಯ (ಗುರುಕುಲ) – ಈ ನಾಲ್ಕನ್ನು ಪ್ರಮುಖ ಅಂಗಗಳಾಗಿ ಪರಿಗಣಿಸಿದರು. ಇವು ಅಧ್ಯಾತ್ಮ ವಿದ್ಯಾ ಪ್ರಸಾರದ ಅವರ ಉದ್ದೇಶಕ್ಕೆ ಬಹಳವಾಗಿ ಸಹಕಾರಿಗಳಾದುವು. ಈ ಎಲ್ಲ ಸಾಧನೆಗಳೂ ಅವರಿಗೆ ಕರತಲಾಮಲಕಗಳಾಗಿದ್ದು, ಅವರು ಮಾಡಿದ ಸೇವೆ ಅನುಪಮವಾದದ್ದು.

ಯಾವದೇ ವಿಷಯ ಬರೆದದ್ದು ಮನದಟ್ಟಾಗಬೇಕಾದರೆ, ಭಾಷೆಯ ಮೇಲಿನ ಹಿಡಿತ ತರ್ಕಬದ್ಧವಾಗಿ ಸುಲಭ ಸರಣಿಯಲ್ಲಿ ಸ್ವಲ್ಪದರಲ್ಲೇ ವಿಷಯ ತುಂಬಿದ ಪ್ರತಿಪಾದನಾ ಶೈಲಿ, ಜೊತೆಗೆ ವಿಷಯವೂ ಬಹಳ ಸ್ಪಷ್ಟವಾಗಿದ್ದು ಹೃದ್ಗತವಾಗಿರಬೇಕು. ಅಷ್ಟಾದರೂ ಸಾಮಾನ್ಯ ಓದುಗರು ಗಮನಕೊಟ್ಟು ಅರ್ಥ ಮಾಡಿಕೊಳ್ಳಲು ಪ್ರಯತ್ನವೇ ಬೇಕು. ಏಕೆಂದರೆ ವಿಷಯವನ್ನು ವಿಸ್ತಾರ ಮಾಡುವ ಸೌಲಭ್ಯ ಇಲ್ಲಿಲ್ಲ.

ಆದರೆ, ಪ್ರವಚನಗಳಲ್ಲಿ ಒಂದೇ ವಿಷಯವನ್ನು ಬಿಡಿಸಿ ಬಿಡಿಸಿ ಹತ್ತು ವಾಕ್ಯಗಳಲ್ಲಿ, ಕೆಲವಾರು ಲೌಕಿಕ ಅನುಭವ, ನಿತ್ಯ ಜೀವನದ ಉದಾಹರಣೆಗಳಿಂದ, ಕಥೆಗಳಿಂದ, ಉಪಮಾನಗಳಿಂದ, ವಿವರಿಸಬಹುದು. ಬರವಣಿಗೆಗೆ ಬೇಕಾದಷ್ಟೇ ಕಾಲದಲ್ಲಿ ಇವೆಲ್ಲವನ್ನೂ ಅಡಕ ಮಾಡಬಹುದು. ಆದಕಾರಣ, ಪ್ರವಚನಗಳನ್ನು ಹೆಚ್ಚು ಬಳಸಿದರು, ಪ್ರತಿದಿನವೂ ನಡೆಸಬೇಕೆಂದು ಅವರ ಅಭಿಲಾಷೆ. ಇದರ ಕೊರತೆ ಎಂದರೆ, ಈಗ ಹೇಳಿದ್ದು, ಒಂದೆರಡು ದಿನಗಳಲ್ಲೇ ಮರೆಯುವ ಸಂಭವವೂ ಇದೆ.

ಇದರಿಂದ ಮುಂದೆ ಪತ್ರಿಕೆ : ಚೊಕ್ಕಟವಾದ ಲೇಖನದಲ್ಲಿ ವಿಷಯ ವಿವರಣೆಯಿದ್ದಾಗ, ಒಂದಲ್ಲದಿದ್ದರೆ ನಾಲ್ಕು ಬಾರಿ ಓದಿದರೆ, ವಿಷಯ ತಿಳಿಯ-ಬಹುದು. ಓದಿದ್ದು -ಕಣ್ಣಿನಿಂದ ನೋಡಿ, ಮನಸ್ಸಿನಿಂದ ಗ್ರಹಣ ಮಾಡುವದಾದ್ದ-ರಿಂದ, ಹೆಚ್ಚು ಗಮನಕ್ಕೆ ಬರುತ್ತದೆ, ನೆನಪಿನಲ್ಲಿ ಉಳಿಯುತ್ತದೆ. ಮರೆತರೆ, ಪುನಃ ಕೈಗೆತ್ತಿ ಓದಬಹುದು. ಆದರೇನು, ಅದೇ ವಿಷಯದಲ್ಲಿ ಹೆಚ್ಚಿನಂಶವನ್ನು ಓದಲು ಅವಕಾಶವಿಲ್ಲ. ಒಂದೇ ಪತ್ರಿಕೆಯಲ್ಲಿ ಹಲವು ಹತ್ತು ವಿಷಯಗಳು ; ಗಮನ ಒಂದೇ ವಿಷಯದ ಮೇಲೆ ಕೇಂದ್ರೀಕೃತವಾಗಲು ಅವಕಾಶಕೊಡದು.

ಈ ಎರಡು ನ್ಯೂನತೆಗಳನ್ನು ಹೋಗಲಾಡಿಸುವದು ಗ್ರಂಥ. ಒಂದೇ ವಿಷಯದ ಹತ್ತಾರು ಮುಖಗಳನ್ನು ಅದರ ಬೆಳವಣಿಗೆಯನ್ನು ವಿಸ್ತಾರವಾಗಿ ಕೊನೆಮುಟ್ಟುವವರೆಗೆ ಕಾಣಿಸುವ ಗ್ರಂಥದಿಂದ ಹೆಚ್ಚು ಪ್ರಯೋಜನ. ಬೇಕೆನಿಸಿದಾಗ, ಮರೆವಿನಿಂದ ಅನುಮಾನ ಬಂದಾಗ ಪುನಃ ಓದಬಹುದು, ತಿಳಿಯದ ಭಾಗವನ್ನು ತಿಳಿದವರಿಂದ ಕೇಳಿ ತಿಳಿಯಬಹುದು.

ವಿದ್ಯಾನಿಲಯದಲ್ಲಿ ತಾನು ಕಲಿತ ವಿದ್ಯೆಯನ್ನು ಯೋಗ್ಯರಿಗೆ ದಾನಮಾಡುವ ಅವಕಾಶವಿದೆ. ಏನಾದರೂ ಗುರುಮುಖೇನ ಕಲಿತದ್ದಕ್ಕಿರುವ ಅನುಕೂಲ್ಯ ಬೇರೆಯಂತೆ ಬರಲಾರದು. ಹೇಳಿಕೊಡುವ ಭಾಗದ ವಿಷಯವನ್ನು ಧ್ವನಿಯಿಂದ, ಅದರ ಏರಿಳಿತದಿಂದ, ಎಲ್ಲಿ ಒತ್ತು ಕೊಡಬೇಕು, ಗಮನವಿಡಬೇಕು ಎಂಬುದು ವಿದಿತವಾಗುತ್ತದೆ. ಇದರಲ್ಲಿ ಪ್ರವಚನದ ಸೌಲಭ್ಯವೂ ಇದೆ, ಗ್ರಂಥದ ಸೊಗಸೂ ಇದೆ. ಒಂದೇ ವಿಷಯವನ್ನು ಗ್ರಂಥಗಳಲ್ಲಿರುವ ಸಾರಭಾಗವನ್ನು ತೆಗೆದು ಹೇಳಿದಂತೆ, ಹತ್ತು ಗ್ರಂಥಗಳ ಸಾರವನ್ನು ಜೋಡಿಸಿ ತಿಳಿಸುವದರಿಂದ ವಿಷಯ ಗ್ರಹಣೆ ಬಹು ಸುಲಭ.

ಈ ಯಾವದೇ ಕ್ರಮವಾದರೂ, ವಿಸ್ತಾರವಾದ ಅಧ್ಯಯನ, ಹೆಚ್ಚಿನ ಪ್ರಪಂಚಜ್ಞಾನ, ಅಸಾಧಾರಣ ಗ್ರಹಣಶಕ್ತಿ-ಜ್ಞಾನಶಕ್ತಿ, ವಿಶ್ಲೇಷಣಾ ವೈಖರಿ, ಸ್ವಂತ ಅನುಭವದ ತಿಳಿವಳಿಕೆ ಇದ್ದಾಗ ಮಾತ್ರವೇ ಯಶಸ್ವಿಯಾಗಬಹುದು. ಇಂತಹ ವಿಶೇಷ ಗುಣಗಳೆಲ್ಲವನ್ನೂ ಹೊಂದಿದ ಶ್ರೀಶ್ರೀಗಳವರಿಗೆ ಅಧ್ಯಾತ್ಮ ಪ್ರಸಾರವನ್ನು ಯಾವ ರೀತಿಯಿಂದ ಮಾಡುವದಕ್ಕೂ ಹೊರೆಯಾಗಲಿಲ್ಲ. ಅವರ ಕಾರ್ಯದ ವಿಚಕ್ಷಣೆ, ಹದವರಿತ ಕ್ರಮಬದ್ಧವಾದ ಮನಸ್ಸಿನ ಓಟ, ಕಾರ್ಯಗಳ ಶಿಸ್ತಿನಿಂದ ಅವರು ಈ ಎಲ್ಲ ವಿಧದಲ್ಲೂ ಗಮನಾರ್ಹವಾದ ಅಪರೂಪದ ಪರಿಣತರಾಗಿದ್ದರು. ಪತ್ರಿಕೆಯಲ್ಲಿನ ವಿಷಯ ವೈವಿಧ್ಯ, ನಿರೂಪಣೆ, ಉದಾರ ಮನೋಭಾವದ ಎಲ್ಲ ಮತಗಳ ಗುಣವನ್ನು ಗುರುತಿಸುವ ವೈಶಾಲ್ಯತೆ, ಕಾರ್ಯ ವಿಚಕ್ಷಣೆಯಿಂದ ಪತ್ರಿಕೆಗೊಂದು ವಿಶೇಷ ಸ್ಥಾನವನ್ನು ಪತ್ರಿಕಾ ವ್ಯವಸಾಯದಲ್ಲಿ, ವೇದಾಂತ ಸಾಹಿತ್ಯದಲ್ಲಿ ತಂದುಕೊಟ್ಟರು.

ಅವರ ಪ್ರವಚನಗಳು ಸಾಮಾನ್ಯರಿಂದ ಪಂಡಿತರವರೆಗೂ ಮಾನ್ಯವಾಗಿದ್ದವು. ಹೇಳುವ ವಿಷಯದ ಸ್ಪಷ್ಟತೆ, ಹೇಳಬೇಕಾದುದದ್ದನ್ನೆಲ್ಲ ನಿಗದಿತ ಕಾಲಮಿತಿಯೊಳಗೆ ಸರಳವಾಗಿ ತಿಳಿಸುವ ಅವರ ವೈಖರಿಯನ್ನು ಹಿಂದೆ ಕೇಳಿದ ಕೆಲವರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದ ಪಾಠಕ್ರಮ, ಅವರ ಶಿಸ್ತು, ಕಲಿಯುವ ಆಸಕ್ತರಿಗೊಂದು ವರಪ್ರದಾನ.

ಸುಲಭವಾಗಿ ಗ್ರಾಹ್ಯವಾಗುವಂತೆ ವಿಷಯ ನಿರೂಪಣೆ, ಸರಳ ಭಾಷೆಯಲ್ಲಿ ಗ್ರಂಥಗಳನ್ನು ಬರೆದರು. ಮುದ್ರಣದ ಕರಡುಗಳನ್ನು ತಿದ್ದಿದರು - (ಆದರೆ ತಾವು ಒಮ್ಮೆ ಬರೆದದ್ದನ್ನು ಪುನಃ ಪರಿಷ್ಕರಿಸಿ ತಿದ್ದುವದೇ ಅನವಶ್ಯಕ), ಅಕ್ಷರಾನುಕ್ರಮಣಿಕೆ, ಗ್ರಂಥ ಸೂಚಿಗಳನ್ನು ತಾವೇ ತಯಾರು ಮಾಡಿ, ವಿಶಿಷ್ಟವಾದ ಜ್ಞಾನವಿಸ್ತರಣೆಯ ಅಡಿ ಟಿಪ್ಪಣಿಗಳನ್ನು ಕಾಣಿಸಿದರು. ಗ್ರಂಥದಲ್ಲಿ ಉಪಯೋಗಿಸಿರುವ ಉದ್ಧರಿತ ವಾಕ್ಯ, ಶ್ಲೋಕಗಳನ್ನು - ಅದರಲ್ಲೂ ಅನುವಾದಿತ ಗ್ರಂಥವಾದರೆ ಅವುಗಳ ಮೂಲವನ್ನೂ ವಿವರಣೆಯನ್ನೂ ಪರಿಶಿಷ್ಟದಲ್ಲಿ ಸೇರಿಸಿದರು. (ಉತ್ತಮ ಉದಾಹರಣೆ ; ಸ್ವಾಮಿ ವಿವೇಕಾನಂದರ ಅನುವಾದಿತ, 'ಭಕ್ತಿಯೋಗ') ಇವೆಲ್ಲವನ್ನು ಯಾರ ಸಹಾಯವೂ ಇಲ್ಲದೆ, ಏಕಾಂಗಿಯಾಗಿ ನಡೆಸಿದರು. ಅವರ ಪುಸ್ತಕಗಳಲ್ಲಿ ಮುದ್ರಣ ದೋಷಗಳು ವಿರಳ ಎಂದು ತಿಳಿವಳಿಕಸ್ಥ ಓದುಗರ ಅಭಿಪ್ರಾಯ. ಅವರ ಮುನ್ನುಡಿ, ವಿಶ್ಲೇಷಣಗಳು, ತರ್ಕಬದ್ಧ ನಿರ್ಧಾರಗಳು ವಿಮರ್ಶಾತ್ಮಕ ಪರಿಚಯ ಲೇಖನಗಳು, ಅನುಪಮ ವಾದವು. ಅವರ ಯಾವ ಕಾರ್ಯವೂ ಶ್ರೇಷ್ಠತೆಯನ್ನೇ ಸೂಚಿಸುತ್ತಿತ್ತು.

ಕಾರ್ಯಾಲಯದ ಆಡಳಿತದಂತೆಯೇ, ಅಧ್ಯಾತ್ಮಪ್ರಸಾರ ಸಾಧನಗಳ ವ್ಯವಸ್ಥೆ ಎಲ್ಲವನ್ನೂ ತಾವು ಅದೇ ಭರದಿಂದ ತಮ್ಮ ಇಳಿವಯಸ್ಸಿನವರೆಗೂ, ಅಂದರೆ ಸುಮಾರು 1972-73ರ ವರೆಗೆ, ನಡೆಸಿದರು. ಮುಂದಿನ ವರ್ಷಗಳಲ್ಲಿ ಅವರ ನಿತ್ರಾಣದಿಂದಾಗಿ, ಇದು ನಿಧಾನ ಗತಿಯಲ್ಲಿ ಸಾಗಿತು. ಅಲ್ಲಿನಿಂದ ಈಚೆಗೆ, ಈ ಮಹಾತ್ಮರು ಕೈಗೊಂಡ ಸಾರಸ್ವತ ಮಹಾಯಜ್ಞವನ್ನು ಈಗಲೂ ಅವರ ಸಮಾಧಿಯ ಸನ್ನಿಧಿಯಲ್ಲಿ ಪೂರ್ಣವಾಗಿ, ಅವರಿದ್ದು ಮುಕ್ತರಾದ ಬೆಂಗಳೂರಿನಲ್ಲಿ ಭಾಗಶಃ ನಡೆಸಿಕೊಂಡು ಬರುತ್ತಿದೆ.

## 1. ಕಾರ್ಯ ವೃತ್ತಾಂತಗಳ ಸಾರಾಂಶ :

**ಅ) ಪ್ರವಚನಾದಿಗಳು :** ಭಾಷ್ಯಪ್ರವಚನ, ವೇದಾಂತೋಪನ್ಯಾಸ ಮತ್ತು ಪುರಾಣ (ವಾಚನಗಳು) ಶ್ರಾವಣಗಳು ಒಂದೇ ವಿಭಾಗಕ್ಕೆ ಸೇರಿದ ಮುಖ್ಯ ಮೂರು ಅಂಶಗಳು. ಶ್ರೀಗಳವರ ಕಾಲದಿಂದಲೂ ಕಾರ್ಯಕ್ರಮಗಳಲ್ಲಿ ಬಹುಮುಖ್ಯಭಾಗ, ಇವು ಮೂರೇ. ಅನುಷ್ಠಾನವೆಂದಾಗಲೂ ಜಪಾನುಷ್ಠಾನ, ಪೂಜಾದಿಗಳ ಜೊತೆ ವಿಶೇಷವಾದದ್ದೂ ಇವು ಮೂರೇ. ತಮ್ಮ ಸರ್ಕಾರಿ ಸೇವೆಯ ಮೊದಲ

ದಿನಗಳಿಂದಲೂ, ಶ್ರೀಗಳವರು ಪೂಜೆ, ಜಪಗಳಲ್ಲಿಯೂ ನಿರತರಾದವರು. ಬರು ಬರುತ್ತಾ ವೇದಾಂತಾಧ್ಯಯನ, ಚಿಂತನ ತಪವೇ ಹೆಚ್ಚಾಗಿ ನಿಂತಿತು. ಈ ನಿರಂತರ ಜ್ಞಾನತಪಸ್ಸಿನ ಫಲವೇ ಬರವಣಿಗೆ, ಪ್ರವಚನಗಳು, ಗುರುಕುಲ ಪದ್ಧತಿಯಂತೆ ವಿದ್ಯಾರ್ಥಿಗಳ ತಯಾರಿ. ಅವರಿದ್ದಾಗ ನಿತ್ಯ ಪ್ರವಚನ, ಉಪನ್ಯಾಸಗಳಲ್ಲದೆ, ವಿಶೇಷ ಉತ್ಸವಗಳೆಂದರೆ ಶ್ರೀ ರಾಮೋತ್ಸವ, ಶ್ರೀ ಶಂಕರ ಸಪ್ತಾಹ, ಶರನ್ನವರಾತ್ರಿ, ಗೀತಾ ಜಯಂತಿ, ಶ್ರೀಬ್ರಹ್ಮಚೈತನ್ಯಾರಾಧನೆಗಳು. ಆದರಲ್ಲಿ ಶಂಕರ ಸಪ್ತಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆ, ಪ್ರತಿದಿನವೂ ವಿದ್ವಾಂಸರು ನೀಡುತ್ತಿದ್ದ ಪ್ರವಚನಗಳ ಸಾರಾಂಶವನ್ನು ಆಯಾಯ ದಿನವೇ ಶ್ರೀಗಳು ವಿಮರ್ಶಾತ್ಮಕವಾಗಿರುತ್ತಿದ್ದ ಉಪನ್ಯಾಸವನ್ನು ಉಪ ಸಂಹಾರವಾಗಿ ನೀಡುತ್ತಿದ್ದರು.

ಪ್ರವಚನ-ಉತ್ಸವಗಳು : ಶ್ರೀಶ್ರೀಗಳವರಿದ್ದಾಗಲೇ ಎರಡೂ ಕಾರ್ಯಾಲಯಗಳಲ್ಲಿ 20-4-75 ರಿಂದ 28-4-75ರ ವರೆಗೆ ಅಂದರೆ ಯುಗಾದಿಯಿಂದ ಶ್ರೀ ರಾಮನವಮಿಯವರೆಗೆ, ಬೆಳಿಗ್ಗೆ ಪೂಜಾ ಪಾರಾಯಣಗಳು, ಸಂಜೆ ಉಪನ್ಯಾಸ ಭಜನೆಗಳೊಡನೆ ಶ್ರೀರಾಮನವಮಿ ಅನುಷ್ಠಾನವು ನಡೆಯಿತು. 29-4-75ರಂದು ಶ್ರೀರಾಮನವಮಿ ಕಾರ್ಯಕ್ರಮವು ಶ್ರೀರಾಮ ಪಟ್ಟಾಭಿಷೇಕದೊಡನೆ ಮಂಗಳ ಗೊಂಡಿತು. ಶ್ರೀ ಶಂಕರ ಜಯಂತಿ ಆಚರಣೆಯು ವೈಶಾಖ ಶುದ್ಧ ಪಂಚಮಿಯಂದು (10-5-75) ಮತ್ತು ಶಂಕರಾಚಾರ್ಯರ ಆರಾಧನಾದಿವಸವೆನ್ನುವ ದ್ವಾದಶಿಯಂದು (22-5-75)- ಈ ಎರಡು ದಿನ ವಿಶೇಷ ಪೂಜೆ, ಮಂಗಳಾರತಿಗಳೊಡನೆ ನಡೆಯಿತು. ಆದರ ನಂತರ, ಶರನ್ನವರಾತ್ರಿಯು 6-10-75 ಆಶ್ವೀಜ ಶುಕ್ಲ ಪಾಡ್ಯ ದಿಂದ, ವಿಜಯದಶಮೀ 14-10-75ರವರೆಗೆ ವಿಶೇಷ ಪೂಜೆ, ಉಪನ್ಯಾಸ, ಭಜನೆ, ಪಾರಾಯಣಗಳೊಡನೆ ಆಚರಿಸಲ್ಪಟ್ಟಿತು. ಇದೇ 14-12-75ರಿಂದ ಮೂರು ದಿನ, 17-12-75ರಂದು ಮಂಗಳದೊಡನೆ ಗೀತಾಜಯಂತಿಯೂ, ಶ್ರೀ ಸದ್ಗುರು ಬ್ರಹ್ಮ ಚೈತನ್ಯಾರಾಧನೆಯು ಭಾಗವತ ಪ್ರವಚನ, ವಿಷ್ಣುಸಹಸ್ರನಾಮ ಪಾರಾಯಣ, ಪೂಜೆ, ಸಂಜೆ ಉಪನ್ಯಾಸ ಭಜನೆಗಳೊಡನೆ 27-12-75 ರಿಂದ ಮೂರು ದಿನ ನಡೆಯಿತು.

ಏಪ್ರಿಲ್ 1976ರಲ್ಲಿ ಶ್ರೀ ರಾಮನವರಾತ್ರಿಯನ್ನು ಎಂದಿನಂತೆ (75ರ ಕಾರ್ಯಕ್ರಮದಂತೆ) ನಡೆಯಿಸಲಾಯಿತು. ಹೊರಗಿನ ವಿದ್ವಾಂಸರು ಒದಗಲಿಲ್ಲ ವಾಗಿ ಪಂಡಿತ ಶ್ರೀ ಲ.ನ. ಮೂರ್ತಿಗಳೊಬ್ಬರೇ ಪ್ರವಚನಗಳನ್ನು ಮಾಡಿದರು. ಶ್ರೀ ಶಂಕರ ಜಯಂತಿ ಆಚರಣೆ, ವೈಶಾಖ ಶುದ್ಧ ಪಂಚಮಿಯಿಂದ ದ್ವಾದಶಿಯವರೆಗೆ, ಶರನ್ನವರಾತ್ರಿ ಉತ್ಸವವು 24-9-76ರಿಂದ 2-10-76ರವರೆಗೆ ವಿಶೇಷ ಪೂಜಾದಿ ಗಳು, ಉಪನ್ಯಾಸ ಭಜನೆಗಳೊಡನೆ ಅನುಷ್ಠಾನವಾಯಿತು. 1-12-76ರಿಂದ ಮೂರು

ದಿನ ಗೀತಾಜಯಂತಿ, 13-12-76ರಿಂದ ಮೂರು ದಿನ ಶ್ರೀ ಬ್ರಹ್ಮಚೈತನ್ಯಾರಾಧನೆಗಳೊಂದಿಗೆ (ಈ ಕೊನೆಯ ಎರಡು ಉತ್ಸವಗಳಲ್ಲಿ ನಾಲ್ಕನೆಯ ದಿನ ಮಂಗಳಾಚರಣೆ) ವರ್ಷದ ವಿಶೇಷ ಆಚರಣೆಗಳು ಕೊನೆಗೊಂಡವು.

1977ರಿಂದ ಪ್ರತಿವರ್ಷವೂ, ಚೈತ್ರಶುದ್ಧ ನವಮಿಯಿಂದ ಒಂಭತ್ತು ದಿನ ಪ್ರತಿದಿನ ಪೂಜೆ, ಪಾರಾಯಣ, ಉಪನ್ಯಾಸ, ಭಜನೆ, ಅನಂತರ ಹತ್ತನೆ ದಿನ ಬೆಳಿಗ್ಗೆ ಮಂಗಳಾರತಿಯೊಡನೆ ಶ್ರೀರಾಮ ನವಮಿ ಉತ್ಸವ ; ವೈಶಾಖ ಶುದ್ಧ ಪಂಚಮಿಯಿಂದ ಐದು ದಿನಗಳು ಮಾತ್ರ ಶಂಕರ ಜಯಂತಿ ಉತ್ಸವ ; ಆಶ್ವೀಜ ಶುದ್ಧ ಪಾಡ್ಯದಿಂದ ದಶಮಿ ಬೆಳಗಿನವರೆಗೆ ನವರಾತ್ರಿಉತ್ಸವ ; ಗೀತಾ ಜಯಂತಿ ಮತ್ತು ಶ್ರೀ ಬ್ರಹ್ಮ ಚೈತನ್ಯಾರಾಧನೆಗಳಲ್ಲಿ ಮೂರು ಮೂರು ದಿನ ಬೆಳಿಗ್ಗೆ ಸಂಜೆ ಕಾರ್ಯಕ್ರಮಗಳು, ನಾಲ್ಕನೆಯ ದಿನ ಮಂಗಳ - ಈ ಕ್ರಮದಲ್ಲಿ ಆಚರಣೆಯಾಗುತ್ತಾ ಬಂತು.

1976ರಲ್ಲಿ ಪ್ರಥಮ ಸದ್ಗುರು ವಾರ್ಷಿಕಾರಾಧನೆ ; ಪ್ರತಿವರ್ಷವೂ ಈ ಆರಾಧನೆ ಕಾರ್ಯಕ್ರಮವು ಹಿಂದಿನ ವರ್ಷಗಳ ವಾರ್ಷಿಕ ಉತ್ಸವಗಳೊಡನೆ ಸೇರಿತು. 1977ರಿಂದ ಇದು 3 ದಿನಗಳು, 79ರಿಂದ 2 ದಿನಗಳ ಕಾರ್ಯಕ್ರಮವಾಗಿ ಮುಂದುವರೆಯಿತು. 1983ರಿಂದ ಆರಾಧನೆಯಂದು ಒಂದೇ ದಿನ ಬೆಳಿಗ್ಗೆ ಶ್ರೀ ದಿಗ್ವಿಜಯ ರಾಮದೇವರಿಗೆ ವಿಶೇಷ ಪೂಜಾಲಂಕಾರ, ರುದ್ರಾಭಿಷೇಕ, ಪವಮಾನ ಹೋಮ, ವೈದಿಕಾರಾಧನೆ, ಭಜನೆ, ಉಪನ್ಯಾಸ, ತೀರ್ಥ-ಪ್ರಸಾದ ಭೋಜನ, ಸಂಜೆಗೆ ವಿದ್ವತ್ಸಭೆ, ಉಪನ್ಯಾಸಗಳು ಹೀಗೆ ಬೆಳಗಿನ 7 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ - ಈ ರೀತಿ 2001ರವರೆಗೂ ಆಚರಣೆಯು ನಡೆದುಕೊಂಡು ಬಂದಿದೆ. ಅನಂತರ 2002 ರಿಂದ ಆಗಾಗ ನಡೆಯುವ ವೇದಾಂತ ಸಪ್ತಾಹ ಅಥವಾ ವೇದಾಂತ ಶಿಬಿರಗಳನ್ನು ಜೊತೆಗೆ ಸೇರಿಸಿ, ಆರಾಧನೆಯು 8ನೇ ದಿನ ನಡೆದಿದೆ.

ಮಾರ್ಗಶಿರ ಬಹುಳ ಅಷ್ಟಮಿಯ ಶ್ರೀ ಸಚ್ಚಿದಾನಂದೇಂದ್ರ ಸದ್ಗುರುಗಳ ಜಯಂತಿ ಆಚರಣೆ ಪ್ರಾರಂಭವಾದದ್ದು 1982ರಲ್ಲಿ. ಇದು ಶ್ರೀ ಬ್ರಹ್ಮಚೈತನ್ಯಾರಾಧನೆ (ದಶಮಿ)ಯೊಡನೆ ಕೂಡಿಕೊಂಡು 3 ದಿನ, ನಾಲ್ಕನೆಯ ದಿನ ಮಂಗಳದೊಡನೆ ನಡೆಯಿತು. 1984ರ ಡಿಸೆಂಬರ್‌ನಲ್ಲಿ ಶ್ರೀಶ್ರೀಗಳವರ 105ನೆ ಜಯಂತಿಯು ವಿಶೇಷವಾಗಿ ಆಚರಣೆಯಾಯಿತು ; ಕಾರ್ಯಕ್ರಮಗಳು ಎಂದಿನಂತೆ 3 ದಿನ ; 4ನೆ ದಿನ ಮಂಗಳವಾಯಿತು.

20.12.84ರಂದು ಶ್ರೀಜ್ಞಾನಾನಂದೇಂದ್ರಸರಸ್ವತೀಸ್ವಾಮಿಗಳವರ ಪ್ರಥಮ ವಾರ್ಷಿಕ ಆರಾಧನೆಯಾಯಿತು. ಈ ಆರಾಧನೆಯು ಸದ್ಗುರು ಶ್ರೀ ಬ್ರಹ್ಮಚೈತನ್ಯಾರಾಧನೆಯನಂತರ ಮಾರ್ಗಶೀರ್ಷ ಬಹುಳ ತ್ರಯೋದಶಿ ದಿನ ಬಿಡಿಯಾಗಿ

ನಡೆಯುತ್ತಾ ಬಂತು. 1999 ಡಿಸೆಂಬರ್‌ನಲ್ಲಿ ಸದ್ಗುರು ಜಯಂತಿ ಕಾರ್ಯಕ್ರಮವನ್ನು ವಿಶೇಷಾನುಷ್ಠಾನಗಳಿಂದ ಐದು ದಿನ, ಆರನೆಯ ದಿನ ಶ್ರೀ ಜ್ಞಾನಾನಂದೇಂದ್ರರ ಆರಾಧನೆಯನ್ನೂ ಸೇರಿಸಿ ನಡೆಸಲಾಯಿತು. 2000ದಲ್ಲಿ ಶ್ರೀ ಸದ್ಗುರು ಜಯಂತಿ, ಶ್ರೀ ಜ್ಞಾನಾನಂದೇಂದ್ರರ ಮತ್ತು ಶ್ರೀ ಬ್ರಹ್ಮಚೈತನ್ಯ ಸದ್ಗುರುಗಳ ಆರಾಧನೆ ಎಲ್ಲವನ್ನೂ ಸೇರಿಸಿ ಒಂದು ವಾರ ಕಾಲದ ವೇದಾಂತ ಸಪ್ತಾಹದಲ್ಲಿ ಪ್ರತಿದಿನವೂ ನಾಲ್ಕು ಪ್ರವಚನಗಳಿರುತ್ತಿದ್ದವು. ಪರಸ್ಥಳದಿಂದ ವಿದ್ವಾಂಸರುಗಳು, ಶ್ರೋತೃಗಳು ಆಗಮಿಸಿದ್ದರು. ಅವರೆಲ್ಲರಿಗೂ ಉಚಿತ ವಸತಿ ಭೋಜನ ಸೌಕರ್ಯಗಳನ್ನೇರ್ಪಡಿಸಿತ್ತು. ತಾ. 17ರಿಂದ 23-10-2000ರ ವರೆಗೂ ನಡೆದ ಕಾರ್ಯಕ್ರಮದ ಕೊನೆಯ ದಿನ, 23.12.2000ರಲ್ಲಿ ಶ್ರೀ ಜ್ಞಾನಾನಂದೇಂದ್ರ ಸರಸ್ವತಿಗಳ ಆರಾಧನೆಯಾದ ಮೇಲೆ ಬ್ರಾಹ್ಮಣ ಸುವಾಸಿನಿಯರಿಗೆ, ಬಂದವರಿಗೆಲ್ಲ ಅನ್ನಸಂತರ್ಪಣೆ ನಡೆಯಿತು. ಈ ಮುಂದೆಯೂ ಅನುಕೂಲವಾದ ಹಾಗೆ, ಈ ರೀತಿ ನಡೆದು ಬಂದಿದೆ. ಸದ್ಗುರುಗಳಿಂದ ಸಂನ್ಯಾಸ ಸ್ವೀಕರಿಸಿದ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳವರ ಆರಾಧನೆಯನ್ನು ಜೂನ್‌ನಲ್ಲಿ 2000ದಿಂದ 2002ರವರೆಗೆ ಪ್ರತಿವರ್ಷ ಮೂರು ದಿನ, ಆರಾಧನೆಯ ದಿನ ಅನ್ನದಾನ, 2003ರಿಂದ ಮುಕ್ತರಾದ ದಿನ ಮಾತ್ರವೇ ಆರಾಧನಾ ಕಾರ್ಯಕ್ರಮಗಳು ನಡೆಯುತ್ತಿವೆ. ಶಂಕರ ಜಯಂತಿ ಪ್ರತಿವರ್ಷವೂ ಐದು ದಿನ ಅನಂತರ ಮಂಗಳ, 1985 ರಿಂದ 3 ದಿನ, 2002 ರಿಂದ ಮತ್ತೆ ಸಪ್ತಾಹವಾಗೇ ಮುಂದುವರೆಯಿತು.

ಸಾರಾಂಶದಲ್ಲಿ, ಈಚೆಗೆ ಶ್ರೀ ರಾಮನವಮಿ ಉತ್ಸವ (ವಸಂತ ನವರಾತ್ರಿ), ಶರನ್ನವರಾತ್ರಿಗಳು 10 ದಿನ ; ಶಂಕರ ಜಯಂತಿ, ಸದ್ಗುರು ಜಯಂತಿ ಉತ್ಸವ, ಆರಾಧನೆಗಳು ಸಪ್ತಾಹದ ರೀತಿ, ಮುಂದೆ ಒಂದು ದಿನ ಮಂಗಳ ; ಗೀತಾ ಜಯಂತಿ, ಮೂರು ದಿನ, ಅನಂತರ ಮಂಗಳ, ಶ್ರೀ ನಿತ್ಯಾನಂದೇಂದ್ರ ಸರಸ್ವತಿಯವರ ಆರಾಧನೆ ಒಂದು ದಿನ ಎಂಬ ರೀತಿಯಲ್ಲಿ ಆಚರಣೆಗಳ ಒಂದು ಮಾದರಿ ಬಂದಿದೆ. ಸದ್ಗುರು ಜಯಂತಿಗೆ ಸೇರಿದಂತೆ ಗೋಂದಾವಲೀ ಶ್ರೀ ಬ್ರಹ್ಮಚೈತನ್ಯ ಮಹಾರಾಜರ ಮತ್ತು ಶ್ರೀ ಜ್ಞಾನಾನಂದೇಂದ್ರ ಸರಸ್ವತೀಗಳವರ ಆರಾಧನೆಗಳೂ ನಡೆಯುತ್ತಿವೆ.

ಆ) **ಸಪ್ತಾಹ, ಶಿಬಿರಗಳು :** ಭಕ್ತಾದಿಗಳ ಉಪಯೋಗಕ್ಕಾಗಿ ಅನೇಕ ವೇದಾಂತ ಸಪ್ತಾಹಗಳನ್ನು, ವೇದಾಂತ ಶಿಬಿರಗಳನ್ನೂ ನಡೆಸಲಾಗುತ್ತಿದೆ. ಈ ಮೂವತ್ತು ವರ್ಷಗಳಲ್ಲಿ ಮೊದಲು ನಡೆದ ವೇದಾಂತ ಸಪ್ತಾಹವನ್ನು 27.7.80 ರಿಂದ 2.8.80ರ ವರೆಗೆ ಶ್ರೀ ಕೆ.ಜಿ. ಸುಬ್ರಾಯಶರ್ಮರು ನಿಯೋಜಿಸಿದ್ದರು. ಇದರಲ್ಲಿ ಒಟ್ಟು 14 ಉತ್ತಮ ವಿದ್ವಾಂಸರಿಂದ 40ಉಪನ್ಯಾಸಗಳಾದುವು. ಸ್ಥಳೀಯವಾಗಿ

ಶ್ರೀ ಲ.ನ. ಮೂರ್ತಿಗಳಿದ್ದರು, ಉಳಿದವರೆಲ್ಲ ಹೊರಗಿನಿಂದ ಬಂದವರು. ಸುಮಾರು 150 ಜನ ಶ್ರೋತೃಗಳು ಬೆಂಗಳೂರಿನಿಂದಲೇ ಬಂದಿದ್ದು ಈ ಮಹೋತ್ಸವ ಬಹಳ ಸಂತೋಷಕರವಾಗಿ ನಡೆಯಿತು. ವಿದ್ವಾಂಸರಿಗೂ ಶ್ರೋತೃಗಳಿಗೂ ಉಚಿತ ವಸತಿ, ಊಟೋಪಚಾರಗಳ ವ್ಯವಸ್ಥೆ ; ಆಸಕ್ತಿ ತಣಿಸುವಂತಹ ವೇದಾಂತ ವಿಷಯಗಳು ಪ್ರಸಾರವಾಗಿ, ಸಪ್ತಾಹ ಯಶಸ್ವಿಯಾಯಿತು.

ಹಾಗೆ ಒಂದು ರೀತಿಯಲ್ಲಿ ಆಚರಿಸಲಾದ ಮತ್ತು ಈಗ ಆಚರಿಸುತ್ತಿರುವ ಎಲ್ಲ ಸಪ್ತಾಹ, ಶಿಬಿರ, ವರ್ಷದ ಎಂದಿನ ಉತ್ಸವಗಳ ರೀತಿ ರಿವಾಜುಗಳೆಲ್ಲ ಶ್ರೀಶ್ರೀಗಳವರಿಂದಲೇ ಬಂದವು. ಮೊದಲ ವೇದಾಂತ ಸಪ್ತಾಹ (1954 ಫೆಬ್ರವರಿ) ವೇದಾಂತ ಶಿಬಿರ, ವೇದಾಂತ ವಿದ್ವದ್‌ಗೋಷ್ಠಿ (1958 ಫೆಬ್ರವರಿ) ಇವುಗಳನ್ನು ಶ್ರೀಗಳವರು ನಡೆಸಿದ್ದರು. ಆಗ ಅವರಿಗಿದ್ದ ಕೆಲವೇ ಸೌಕರ್ಯಗಳಲ್ಲಿ, ಇತರ ಅಸೌಕರ್ಯಗಳಲ್ಲಿ ಅವರು ಆ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಡೆಸಲಾಗಲಿಲ್ಲವಷ್ಟೆ.

1995ರಿಂದ ಮುಂದೆ ಸಪ್ತಾಹಗಳು, ಶಿಬಿರಗಳು ಯಥೇಚ್ಛವಾಗಿ ನಡೆದಿವೆ. 2006ರ ವರೆಗೆ ವಿವಿಧ ದಿನಾಂಕಗಳಲ್ಲಿ 95 ಸಪ್ತಾಹಗಳೂ, (ಶಿಬಿರಗಳೂ, ಜಯಂತಿ ಸಪ್ತಾಹಗಳೂ ಸೇರಿದಂತೆ) ಕಾರ್ಯಕ್ರಮಗಳು ಆಗಿವೆ. (ಪರಿಶಿಷ್ಟ-3ನ್ನು ನೋಡಿ) ಇಷ್ಟೇ ಅಲ್ಲದೆ, ವಿಶೇಷವೆಂದರೆ, ರಾಜ್ಯದ ಹಲವಾರು ಸ್ಥಳಗಳಲ್ಲಿ ಉಪನ್ಯಾಸ, ಸಪ್ತಾಹಗಳನ್ನು ನಡೆಸಿದ್ದರಿಂದ ಅಧ್ಯಾತ್ಮ ಪ್ರಸಾರವೂ, ಕಾರ್ಯಾಲಯದ ಪ್ರಚಾರವೂ ಆಯಿತು. ಜನರಲ್ಲಿ ವೇದಾಂತದ ವಿಷಯದಲ್ಲಿ ಉತ್ಸಾಹವೂ ಮೂಡಿತು. ಸಪ್ತಾಹ ಕಾಲದಲ್ಲಿ ದಿನಕ್ಕೆರಡು ಪ್ರವಚನಗಳು ನಡೆದಿವೆ. ಪರಿಣಾಮವಾಗಿ, ಅನೇಕ ಕಡೆಗಳಲ್ಲಿ ಭಕ್ತರೂ ಪ್ರೀತಿಯಿಂದ ಕಾಣಿಕೆಗಳನ್ನು ಅರ್ಪಿಸಿರುವದರಿಂದ ಕಾರ್ಯಾಲಯದ ಕಟ್ಟಡ, ಪ್ರಕಟಣೆ ಮುಂತಾದ ಅನೇಕ ಕಾರ್ಯಗಳಿಗೆ ಸಹಾಯವಾಯಿತು.

ಶ್ರೀ ದೇವರಾಯ ಕುಲಕರ್ಣಿಯವರ 'ಶಾಂಕರವೇದಾಂತ ಸೌರಭ' ಗ್ರಂಥದ ಅನಾವರಣ ಸಂದರ್ಭದಲ್ಲಿ, 8.2.91 ರಿಂದ 3 ದಿನಗಳ ಕಾಲ 'ವೇದಾಂತ ಶಿಬಿರ'ವು ನಡೆಯಿತು. ಬೆಳಿಗ್ಗೆ ಹಾಗೂ ಸಂಜೆಗಳಲ್ಲಿ, 2½ ಗಂಟೆಗಳ ಕಾಲ ವಿದ್ವಾಂಸರು ಉಪನ್ಯಾಸಗಳನ್ನು ನಡೆಸಿದರು. ಪರಸ್ಥಳಗಳಿಂದ ಸುಮಾರು 25 ಅಭ್ಯರ್ಥಿಗಳು ಬಂದಿದ್ದರು. ಶ್ರೀ ಮತ್ತೂರು ಕೇಶವಾವಧಾನಿಗಳು, ಶ್ರೀ ದೇವರಾಯ ಕುಲಕರ್ಣಿಗಳು, ಶ್ರೀ ಡಿ.ಬಿ. ಗಂಗೊಳ್ಳಿಯವರು, 10ನೇ ತಾ।। ಸಂಜೆ ಶ್ರೀ ವಿಷ್ಣುಪಾದರು, ಶ್ರೀ ಬಿ.ಟಿ. ದಂಡವತಿಯವರು ಉಪನ್ಯಾಸಗಳನ್ನು ಮಾಡಿದರು. 5.4.92 ರಿಂದ 11.4.92ರ ವರೆಗೆ ವೇದಾಂತ ಸಪ್ತಾಹ, ಶ್ರೀ ರಾಮನವರಾತ್ರಿ

ಅಂಗವಾಗಿ ನಡೆದು, 12ರಂದು ಪಟ್ಟಾಭಿಷೇಕದೊಡನೆ ಮಂಗಳವಾಯಿತು. 14.9.92 ರಿಂದ 1ವಾರ ಮಹಾಸಮಾಧಿಯ ಮುಂದೆ 20 ಉಪನ್ಯಾಸಗಳನ್ನೊಳಗೊಂಡ ವೇದಾಂತ ಪ್ರವಚನ ಮಾಲಿಕೆಯಿತ್ತು.

ಈ ನಿತ್ಯಕಾರ್ಯಕ್ರಮಗಳಿಂದ ಭಿನ್ನವಾದದ್ದು ಡಿಸೆಂಬರ್ 89ರಲ್ಲಿ ಮೈಸೂರು ಆಕಾಶವಾಣಿಯಿಂದ ನಾಲ್ಕು ದಿನ ಹರಿದ ಶ್ರೀ ಲ.ನ. ಮೂರ್ತಿಗಳವರ ವೇದಾಂತ ವಿಚಾರಧಾರೆ. ಈ ಮೂಲಕ ವೇದಾಂತ ಪ್ರಸಾರ ಏಕಕಾಲದಲ್ಲಿ ಬಹಳ ಹೆಚ್ಚಿನ ಸಂಖ್ಯೆಯ ಶ್ರೋತೃಗಳಿಗೆ ತಲುಪುವ, ಅವರು ಕೇಳುವ ಅವಕಾಶವಾಯಿತು.

ಪ್ರವಚನ, ಸಪ್ತಾಹಗಳು ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳ ನೇತೃತ್ವದಲ್ಲಿ ನಡೆದುವು. ಅನೇಕ ಹೊರಗಡೆಯ ವಿದ್ವಾಂಸರುಗಳನ್ನು ಆಹ್ವಾನಿಸಿ ನಡೆಸುವದು ವಾಡಿಕೆಯಾಗಿದ್ದರೂ, ಆಹ್ವಾನಿತರು ಬೇರೆ ಕಾರ್ಯಗಳ ನಿಮಿತ್ತ ಬಿಡುವಿಲ್ಲದಾಗಿ ಬರಲು ಅವಕಾಶವಿಲ್ಲದಿದ್ದಾಗ, ಕೆಲವೊಮ್ಮೆ ಕಾರ್ಯಕ್ರಮಗಳನ್ನು ಗೊತ್ತು ಮಾಡುವಲ್ಲಿ ವಿಳಂಬವಾದಾಗ, ಪಂಡಿತ ಲ.ನ. ಮೂರ್ತಿಗಳೊಬ್ಬರೇ ಎಲ್ಲ ಪ್ರವಚನಗಳನ್ನೂ ಮಾಡುತ್ತಿದ್ದರು. ಬೆಂಗಳೂರಿನಂತಹ ನಗರದಲ್ಲಿ ವಿದ್ವಾಂಸರುಗಳಿಗಾಗಲೀ, ಶ್ರೋತೃಗಳಿಗಾಗಲೀ, ಪರದಾಡುವಂತಹ ಕೊರತೆ ಇಲ್ಲದಿರುವದರಿಂದ ವಿಸ್ತಾರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಅನುಕೂಲ. ಈ ಸೌಲಭ್ಯವಿಲ್ಲದ ಹೊಳೆನರಸೀಪುರದಲ್ಲಿ ಕೈ ಅಳತೆಯ ರೀತಿಯಷ್ಟೇ . ಯಾವದೇ ವಿಚಾರದಲ್ಲಿ ಹೋಲಿಕೆ ಮಾಡುವದಾಗಲೀ ದೋಷಗಳನ್ನು ಎಣಿಸುವದಕ್ಕಾಗಲೀ ಮೊದಲು ಈ ಪ್ರಬಲವಾದ ಇತಿಮಿತಿಗಳನ್ನು ಗಮನಿಸಬೇಕು. ಹೀಗಿರುವಾಗ, ಚೆನ್ನಾಗಿಯೇ ನಡೆದಿವೆ ಎಂಬ ಮಾತು ಅಪ್ರಯತ್ನವಾಗಿ ಬರಬಹುದು.

2003ರ ಫೆಬ್ರವರಿ-ಮಾರ್ಚ್‌ನಿಂದ ಶ್ರೀ ಚಂದ್ರಮೌಳಿ ಅವಧಾನಿಗಳು ಶ್ರೀ ಲ.ನ. ಮೂರ್ತಿಗಳವರ ಜೊತೆಗೂಡಿ ಇಲ್ಲಿಯ ಕೆಲಸ, ವಿಷಯ ರೀತಿಗಳನ್ನು ಅರಿತರಲ್ಲದೆ, ಕಾರ್ಯನಿರ್ವಹಣೆಯಲ್ಲಿ ಸಹಾಯಕರಾಗೂ ಇದ್ದು, ಕಾರ್ಯಾಲಯದ ಪತ್ರಿಕೆ, ಪ್ರವಚನಗಳ ಕಾರ್ಯವಷ್ಟನ್ನೂ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಸಹಾಯ ಸರಿಯಾದ ಸಮಯಕ್ಕೊದಗಿದ್ದುದು ದೈವಕೃಪೆ, ಶ್ರೀಶ್ರೀಗಳವರ ಸಂಕಲ್ಪ ಪ್ರೇರಣೆಯಿಂದಲೇ – ಏಕೆಂದರೆ ಶ್ರೀ ಅವಧಾನಿಗಳು ಬಂದುದು ಸ್ವ ಇಚ್ಛೆಯಿಂದಲೇ ಸರಿ. ಭಗವಂತನ ವಿಲಾಸ ಹೇಗೆ ಹರಿಯುತ್ತದೆ, ಹೇಗೆ ವ್ಯಕ್ತಿಗಳನ್ನು ಬರೀ ನಿಮಿತ್ತರನ್ನಾಗಿ ಮಾಡಿ ತನ್ನ ಕಾರ್ಯವನ್ನು ನಡೆಸುತ್ತದೆ ಎಂಬುದಕ್ಕೆ ಇದು ಸಾಕ್ಷಿ, ಅದಕ್ಕೂ ಹೆಚ್ಚಾಗಿ ಸರಿಯಾದ ಸಮಯದಲ್ಲಿ ಯೋಗ್ಯಸಮರ್ಥರನ್ನು ಆರಿಸಿ ನಿರ್ದೇಶಿಸುತ್ತದೆ ಎಂಬುದೂ ವ್ಯಕ್ತವಾಗುತ್ತದೆ.

1995ರಿಂದ ಅತಿಶಯವಾಗಿ ನಡೆಯುತ್ತಿರುವ, ಹೊಳೆನರಸೀಪುರದ ವೇದಾಂತ ಸಪ್ತಾಹ, ಶಿಬಿರಗಳಿಗೆ, ಪರಸ್ಥಳದಿಂದ ಬರುವ ಭಕ್ತರ ಸಂಖ್ಯೆಯೂ ಗಣನೀಯವಾಗಿದೆ. ಈಗ ಅತಿಥಿಗೃಹವಿರುವದರಿಂದ, ಹಲವಾರು ವರ್ಷಗಳಿಂದ ಯಾರಾದರೂ, ನೇಮಕಗೊಂಡ ಅಡುಗೆಯವರು ಸದಾ ಇರುವದರಿಂದ, ಪರಸ್ಥಳ ದಿಂದ ಬಂದವರಿಗೆ ವಸತಿ, ಊಟೋಪಚಾರಗಳ ಸೌಕರ್ಯವನ್ನು ಕಲ್ಪಿಸಲಾಗಿದೆ.

ವೇದಾಂತ ಶಿಬಿರಗಳಲ್ಲಿ ಬರಿಯ ಪ್ರವಚನಗಳೇ ಆಗುವದಿಲ್ಲ, ಪ್ರಶ್ನೋತ್ತರಗಳಿಗೂ ಅವಕಾಶವಿದೆ. ಅದಕ್ಕಾಗಿ ಪ್ರತ್ಯೇಕ ತರಗತಿಯೇ ಇದೆ. ಏನಿದ್ದರೂ, ಶಿಬಿರಾರ್ಥಿಗಳು, ಪಂಡಿತರು ಒಂದೇ ಕಡೆ ಉಳಿಯುವದರಿಂದ, ಪಂಡಿತರುಗಳಲ್ಲಿ ವಿಚಾರಮಾಡಲು, ತಮ್ಮ ಸಂಶಯಗಳಿಗೆ ಸಮಾಧಾನ ಪಡೆಯುವ ಸೌಲಭ್ಯವೂ ದೊರಕುವದು ಒಂದು ವಿಶೇಷ ಅನುಕೂಲ. ಆದರಿಂದಲೂ ಶಿಬಿರಗಳು ವೇದಾಂತಾಭ್ಯಾಸಿಗಳಿಗೆ ಹೆಚ್ಚು ಪ್ರಿಯವಾಗಿದೆ. ಅದನ್ನು ಹಿಗ್ಗಿಸುವ ಮತ್ತೊಂದು, ಈಚಿನ ಕ್ಯಾಸೆಟ್‌ಮತ್ತು ಸಿ.ಡಿ.ಗಳ ರೂಪದಲ್ಲಿ ಪ್ರವಚನಗಳನ್ನು ಹಿಡಿದಿಟ್ಟು ಅನಂತರ ಬೇಕಾದವರಿಗೆ ಒದಗಿಸುವ ವ್ಯವಸ್ಥೆಯೂ ಹೌದು. ಒಂದು ರೀತಿಯಲ್ಲಿ, ಶಿಬಿರಗಳು Spiritual Retreat (ಪಾರಮಾರ್ಥಿಕ ಏಕಾಂತವಾಸ ಸ್ಥಳ) -ಹೊರಗಿನ ಪ್ರಪಂಚ ದಿಂದ ದೂರ ಸರಿದು ಅದರಿಂದ ಬೇರ್ಪಡಿಸಿಕೊಂಡು ಗೊಂದಲದಲ್ಲಿರದಂತೆ, ವೇದಾಂತ ವಿಷಯಕ್ಕೆ ಏಕಾಗ್ರತೆಯನ್ನು ತಂದುಕೊಡುವ ಪ್ರಶಾಂತಧಾಮ. ವಸತಿ, ಊಟೋಪಚಾರಗಳು, ಶಿಬಿರದ ತರಗತಿಗಳು ಎಲ್ಲಾ ಒಂದೇ ಕಡೆಯೇ ಇದ್ದು ಹೊರಕ್ಕೆ ಹೋಗಬೇಕಾದ ಅವಶ್ಯಕತೆಯೇ ಇಲ್ಲದಿರುವದರಿಂದ, ಶಿಬಿರಾರ್ಥಿಗಳಿಗೆ ಹೆಚ್ಚಿನ ಕಾಲ, ಶ್ರಮ ಉಳಿತಾಯವಾಗುತ್ತದೆ. ವಿರಾಮದ ಕಾಲದಲ್ಲಿ ಪರಸ್ಪರ ವಿಚಾರ ವಿನಿಮಯದಿಂದ, ಗ್ರಂಥಾಲಯದ ಗ್ರಂಥಗಳನ್ನು ಓದುವದರಿಂದ ತಮ್ಮ ಕಾಲದ ಪೂರ್ಣ ಉಪಯೋಗವನ್ನು ಪಡೆಯಬಹುದು, ಇವುಗಳೇ ಹೆಚ್ಚಿನ ಆಕರ್ಷಣೆ.

ಇವುಗಳಲ್ಲಿ ವಿಶೇಷವಾದುದೆಂದರೆ, 19.5.96 ರಿಂದ 25.5.96ರ ವರೆಗೆ ವೇದಾಂತ ಸಪ್ತಾಹವು ಅತಿಥಿಗೃಹದ ಉದ್ಘಾಟನಾ ಅಂಗವಾಗಿ ನಡೆಯಿತು. ಭಾನುವಾರ, 19ನೇ ತಾರೀಖು ಅತಿಥಿಗೃಹದ ಉದ್ಘಾಟನೆಯನ್ನು ಪೂಜ್ಯ ಶ್ರೀಶ್ರೀ ಆತ್ಮಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಅಮೃತ ಹಸ್ತದಿಂದ ನೆರವೇರಿಸಿ ದರು. ಬೆಳಿಗ್ಗೆ 8 ಗಂಟೆಗೆ ಗುರುಪಾದುಕಾಪೂಜೆ, 9.00 ಗಂಟೆಗೆ ಉದ್ಘಾಟನೆ, ಪ್ರವಚನಗಳಾದ ಮೇಲೆ ಪುಸ್ತಕಗಳ ಬಿಡುಗಡೆ, ದಾನಿಗಳಿಗೆ ಸನ್ಮಾನ, ಅಧ್ಯಕ್ಷರ ಭಾಷಣದೊಡನೆ ಆ ದಿನದ ಕಾರ್ಯಕ್ರಮವಾಯಿತು. ಮಾರನೆಯ ದಿನದಿಂದ ಬೆಳಿಗ್ಗೆ ಎರಡರಂತೆ, ಸಂಜೆ ಎರಡರಂತೆ ಪ್ರವಚನಗಳು ಪ್ರತಿದಿನ ನಡೆದುವು.

ಉದ್ಘಾಟನೆಗೆ ಪೂರ್ವಾಂಗವಾಗಿ 18ರ ಸಾಯಂಕಾಲದಿಂದಲೇ ಮತ್ತೂರಿನ ವೈದಿಕ ವಿದ್ವನ್ಮಣಿಗಳ ನೇತೃತ್ವದಲ್ಲಿ ವೈದಿಕ ಕಾರ್ಯಕ್ರಮವು ಆರಂಭವಾಗಿ, ಭಾನುವಾರ ಬೆಳಿಗ್ಗೆ 8 ಗಂಟೆಗೆ ಪೂರ್ಣಾಹುತಿಯೊಡನೆ ಮುಕ್ತಾಯವಾಯಿತು. ವೇದಾಂತ ಸಪ್ತಾಹದ ಕಾಲದಲ್ಲಿ ಒಂದು ದಿನ ಯಡತೊರೆ ಯೋಗಾನಂದೇಶ್ವರ ಮಠದ ಜಗದ್ಗುರು ಶ್ರೀ ಶಂಕರಾಚಾರ್ಯರು ದಯಮಾಡಿಸಿ ತಮ್ಮ ದರ್ಶನದಿಂದ, ಅಮೃತ ವಾಣಿಯಿಂದ ಶಿಷ್ಯಕೋಟಿಯನ್ನು ಅನುಗ್ರಹಿಸಿದರು. ಶ್ರೀ ದಿಗ್ವಿಜಯರಾಮರ ಅನುಗ್ರಹ, ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಕೃಪಾಶೀರ್ವಾದದಿಂದ ಈ ಅತಿಥಿಗೃಹವು ಕಾರ್ಯಸಾಧ್ಯವಾಯಿತು. ಟ್ರಸ್ಟ್ ಅಧ್ಯಕ್ಷರಾದ ಶ್ರೀ ವೆಂಕಟ ನರಸಪ್ಪನವರು ಬಹಳ ಶ್ರಮವಹಿಸಿ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳವರ ಸಹಾಯ ದಿಂದ ವೇದಾಂತ ಸಪ್ತಾಹಗಳನ್ನು ಅತಿಶಯವಾಗಿ ನಡೆಸಿದರು.

**ಇ) ಪುರಾಣ-ಉಪನ್ಯಾಸಗಳು :** ಹೊಳೆನರಸೀಪುರದಲ್ಲಿ ಹಲವಾರು ವರ್ಷಗಳಿಂದಲೂ ಉಪನ್ಯಾಸಗಳನ್ನು ಮಾಡುತ್ತಿದ್ದ ಪಂಡಿತರು ಭಾನುವಾರದ ಉಪನ್ಯಾಸಗಳನ್ನು ಮುಂದುವರೆಸಿಕೊಂಡು ಬಂದರು. ಸೂತಸಂಹಿತ ಯಜ್ಞವೈಭವ ಖಂಡ ಬ್ರಹ್ಮಗೀತೆಯು 1975ರಲ್ಲಿ ನಡೆಯುತ್ತಿತ್ತು, 1976ರನಂತರ ಸೂತಸಂಹಿತಾ ಪುರಾಣ, ಸನತ್ಸುಜಾತೀಯ, ಮೋಹಮುದ್ಗರ, ವಿವೇಕ ಚೂಡಾಮಣಿ, ಗೋಕರ್ಣ ಮಹಾತ್ಮ್ಯ, ಗಮಕವಾಚನ, ಗುರು ಸಪ್ತಾಹ ನಿಮಿತ್ತ 'ಗುರುಚರಿತ್ರೆಯ' ಪ್ರವಚನಗಳು, ಕಾವ್ಯವಾಚನ, ಅಧ್ಯಾತ್ಮರಾಮಾಯಣ, ಮುಕುಂದಮಾಲಾ, ಹೀಗೆ ವಿವಿಧ ವಿಷಯ ಗಳನ್ನು ಉಭಯ ಕಾರ್ಯಾಲಯಗಳಲ್ಲೂ ನಡೆಸಿಕೊಂಡು ಬರಲಾಯಿತು. 1975ರ ಅನಂತರ ಶಾಖಾಕಾರ್ಯಾಲಯದಲ್ಲಿ ಪುರಾಣ ಶ್ರವಣವನ್ನು ಮಾಡಿಸಲಾಯಿತು. 1976ರಲ್ಲಿ ಸ್ಯಮಂತಕೋಪಾಖ್ಯಾನ ಪ್ರವಚನ ನಡೆಯಿತು. ಅಧ್ಯಾತ್ಮರಾಮಾಯಣದ ಪುರಾಣಶ್ರವಣ, ಮೋಹಮುದ್ಗರದ ಉಪನ್ಯಾಸಗಳು ಭಾನುವಾರಗಳಲ್ಲಿ ನಡೆದುವು. ಭಾಗವತ ಮಹಾಪುರಾಣ ಪ್ರವಚನ, ವೇದಾಂತ ಡಿಂಡಿಮ ಉಪನ್ಯಾಸಗಳೂ ಆದವು. ಇದೇ ರೀತಿ ಪ್ರವಚನಾದಿಗಳು ಈವರೆಗೂ ನಡೆದುಕೊಂಡು ಬಂದಿವೆ.

**ಈ) ಅನುಷ್ಠಾನ ಪೂಜಾದಿಗಳು :** ಇದೂ ಸಹಿತ ಪ್ರವಚನಾದಿಗಳಲ್ಲೇ ಸೇರಿಹೋಗುತ್ತದೆ. ಒಂದೆರಡು ಪ್ರತ್ಯೇಕವಾಗಿರುವದನ್ನು ಮಾತ್ರ ಇಲ್ಲಿ ಗುರುತು ಹಾಕಿದೆ - 1975ರ ಡಿಸೆಂಬರ್‌ನಲ್ಲಿ ಒಂದು ತಿಂಗಳ ಕಾಲ ಧನುರ್ಮಾಸದಲ್ಲಿ ವಿಶೇಷ ವಾಗಿ ಉಷಃಕಾಲದ ಪೂಜೆಯನ್ನೂ, ಪ್ರತಿ ಶನಿವಾರ ಅಖಂಡ ಭಜನೆಯನ್ನೂ ಮಾಡಲಾಯಿತು. ಇಲ್ಲಿಂದ ಮುಂದೆ ಭಜನೆಗಳು ಆಗಾಗ ನಡೆಯುತ್ತಲೇ ಇರುತ್ತವೆ.

ಉತ್ತರ ಕಾಶಿಯಿಂದ ದಯಮಾಡಿಸಿದ್ದ ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು, ಸ್ಥಳದಲ್ಲೇ ಇದ್ದ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳಿಬ್ಬರೂ 30.7.77 ಆಷಾಢ ಶುಕ್ಲ ಪೂರ್ಣಿಮೆಯ ದಿನ ಚಾತುರ್ಮಾಸ್ಯ ಸಂಕಲ್ಪ, ವ್ಯಾಸ ಪೂಜಾದಿಗಳನ್ನು ನೆರವೇರಿಸಿ ಲೋಕ ಕಲ್ಯಾಣವನ್ನು ಕೋರಿದರು. 27.9.77 ರಂದು ಸೀಮೋಲ್ಲಂಘನವನ್ನು ಮಾಡಿ ವ್ರತವನ್ನು ಸಮಾಪ್ತಗೊಳಿಸಿದರು. ಇದೇ ರೀತಿ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳೊಬ್ಬರೇ, 20.7.78, 9.7.79, 27.7.80, ಹೀಗೆ ಕೆಲವು ವರ್ಷಗಳು ಹೊಳೆನರಸೀಪುರದಲ್ಲೇ ಚಾತುರ್ಮಾಸ್ಯ ಸಂಕಲ್ಪ, ವ್ಯಾಸ ಪೂಜೆಯೊಡನೆ ಲೋಕ ಕಲ್ಯಾಣಗಳನ್ನು ಕೋರಿದರು. 7.3.91 ರಿಂದ ಎರಡು ದಿನಗಳು ಶ್ರೀ ಆತ್ಮಾನಂದೇಂದ್ರ ಸ್ವಾಮಿಗಳು ಕಾರ್ಯಾಲಯದಲ್ಲಿ ತಂಗಿದ್ದರು. ಕಾರ್ಯಾಲಯದಿಂದ ಸಂನ್ಯಾಸಿ ಸತ್ಕಾರವಾಯಿತು. ಇದಕ್ಕೆ ಮೊದಲು, ಉತ್ತರಕಾಶಿ ಯಿಂದ ಫೆಬ್ರವರಿ 84 ರಂದು ಆಗಮಿಸಿದ್ದ ಸಮಯದಲ್ಲಿ ಗೋಮುಖದಿಂದ ತಂದಿದ್ದ ಗಂಗಾಜಲದಿಂದ ಶ್ರೀ ರಾಮರಿಗೆ ಅಭಿಷೇಕ ಮಾಡಿ,ತೀರ್ಥ ಪ್ರಸಾದಗಳನ್ನು ಭಕ್ತರಿಗೆ ನೀಡಿದರು. ಮೈಸೂರಿಗೆ ಹೋಗಿ ಅಲ್ಲಿಯ ಕಾರ್ಯಾಲಯದ ಪುರೋಭಿವೃದ್ಧಿಯ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿ, ಅನಂತರ ಉತ್ತರಕಾಶಿಗೆ ಹಿಂದಿರುಗಿದರು.

9.9.77 ಮತ್ತು ಮರುದಿನ 10ನೇ ತಾರೀಖು, ಮದ್ರಾಸಿನಿಂದ ಭಕ್ತ ಶ್ರೀ ವೈ. ಶಾಮಣ್ಣನವರು ಕುಟುಂಬ ಪರಿವಾರ ಸಮೇತರಾಗಿ ಬಂದು ಹರೇರಾಮ ಮಂತ್ರೋ ದ್ಯೋಪಾಸನೆಯನ್ನು ಶ್ರೀ ದಿಗ್ವಿಜಯ ರಾಮರ ಸನ್ನಿಧಿಯಲ್ಲಿ, ಮಹಾಭಿಷೇಕ ಪೂಜಾ, ಶ್ರೀಗಳವರ ಸಮಾಧಿಯಲ್ಲಿ ಪಾದಪೂಜೆ, ಹೋಮ, ಸಂತರ್ಪಣೆಗಳ ಮೂಲಕ ಶ್ರೀ ವಿಠಲ ಶಾಸ್ತ್ರಿಗಳ ಸಮ್ಮುಖದಲ್ಲಿ ನೆರವೇರಿಸಿದರು. ಇವರು 1983 ಜನವರಿ 5, 6ರಂದು ದೆಹಲಿಯಿಂದ ಬಂದು 'ಓಂ ನಮಸ್ತೇ' ಎಂಬ ಮಹಾಮಂತ್ರದ ಜಪೋದ್ಯಾಪನ ಅಂಗವಾಗಿ ಶ್ರೀ ದಿಗ್ವಿಜಯ ರಾಮರಲ್ಲಿ ಅಭಿಷೇಕ, ಪೂಜೆ, ಹೋಮ, ದಾನಧರ್ಮ, ಬ್ರಾಹ್ಮಣ ಸುವಾಸಿನಿ ಸಮಾರಾಧನೆಗಳೊಡನೆ, ಪ್ರವಚನ ಗಳನ್ನು ನಡೆಯಿಸಿದರು. 11.7.76ರಂದು ವ್ಯಾಸಪೂರ್ಣಿಮೆಯ ಪ್ರಯುಕ್ತ ವಿಶೇಷ ಪೂಜೆಯನ್ನು ಶ್ರೀಮತಿ ಪುಟ್ಟಚ್ಚಮ್ಮನವರು ಶ್ರೀ ಸತ್ಯನಾರಾಯಣವ್ರತವನ್ನೂ, ಶ್ರೀ ಗುರುಪಾದುಕಾ ಪೂಜೆಯನ್ನೂ ನೆರವೇರಿಸಿದರು.ಇದೇ ರೀತಿ ಆಗಿನಿಂದಲೂ ಈವರೆಗೂ ಭಕ್ತಾದಿಗಳು ಹೊರಗಡೆಯಿಂದ ಬಂದವರು, ಶ್ರೀ ದಿಗ್ವಿಜಯ ರಾಮರಲ್ಲಿ ಪೂಜಾದಿಗಳನ್ನೂ, ಶ್ರೀಶ್ರೀಗಳ ಮಹಾಸಮಾಧಿಯಲ್ಲಿ ಪಾದುಕಾ ಪೂಜೆಯನ್ನೂ ನೆರವೇರಿಸಿರುತ್ತಾರೆ.

ಶ್ರೀ ದಿಗ್ವಿಜಯ ರಾಮದೇವರ ಪ್ರತಿಷ್ಠೆಯಾಗಿ 46 ವರ್ಷಗಳಾದ್ದರಿಂದ ಪುನಃ ದೇವತಾ ಸನ್ನಿಧಿಯ ವರ್ಧನೆಗಾಗಿ 19.2.97 ರಂದು ಕಲಾಹೋಮ, ಮಹಾಭಿಷೇಕ,

ವಿಶೇಷ ಪೂಜಾಲಂಕಾರಗಳಾದುವು. ಶ್ರೀಶ್ರೀ ಮಹಾಸಮಾಧಿಯಲ್ಲಿ ಸದ್ಗುರುಗಳ ಶಿಲಾಪಾದುಕಾ ಪ್ರತಿಷ್ಠೆಯು 20.2.97ರಲ್ಲಿ ನಡೆಯಿತು. ಈ ಎರಡು ಅನುಷ್ಠಾನ ಗಳನ್ನೂ ಸ್ಥಳೀಯ ಆಗಮಿಕರಾದ ವೇ॥ ಗಂಗಾಧರ ಭಟ್ಟರು ಋತ್ವಿಜರುಗಳ ಸಹಾಯ ದಿಂದ ಶಾಸ್ತ್ರೀಯವಾಗಿ ನಡೆಯಿಸಿಕೊಟ್ಟರು.

ಉ) ಅಧ್ಯಾತ್ಮ ಪ್ರಚಾರ-(ಉಪನ್ಯಾಸಗಳು) : ಅಧ್ಯಾತ್ಮ ವಿದ್ಯೆಯನ್ನು ಸಾಧ್ಯವಾದಷ್ಟೂ ಮಟ್ಟಿಗೆ ರಾಜ್ಯದ ಹಲವೆಡೆ ಉಪನ್ಯಾಸಗಳ ಮೂಲಕ ಪ್ರಸಾರಮಾಡಿ, ಅದರ ಮೂಲಕ ಅಲ್ಲಿಯ ಜನರಿಗೆ ಅಧ್ಯಾತ್ಮದಲ್ಲಿ ಅಭಿರುಚಿ, ಆಸಕ್ತಿಯನ್ನು ಬೆಳೆಸಬೇಕೆಂಬುದು ಶ್ರೀಶ್ರೀಗಳವರ ಉದ್ದೇಶ. ಅದಕ್ಕಾಗಿ ತಮ್ಮ ಕೈಲಾಗುವವರೆಗೂ ಆಹ್ವಾನಗಳನ್ನು ನಿರಾಕರಿಸದೆ, ದೇಹ ಶ್ರಮವನ್ನೂ ಲೆಕ್ಕಿಸದೆ ಪರವೂರುಗಳಿಗೆ ಪ್ರಯಾಣ ಮಾಡಿ ಉಪನ್ಯಾಸಗಳನ್ನು ನಡೆಸುತ್ತಿದ್ದರು.

ಅದೇ ರೀತಿಯಲ್ಲಿ ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಅನೇಕ ಊರುಗಳಲ್ಲಿ ಆಹ್ವಾನದ ಮೇಲೆ 2005ರವರೆಗೂ ಉಪನ್ಯಾಸಗಳನ್ನು ಮಾಡಿದರು. 80 ಸಪ್ತಾಹ ಗಳು, ಬಿಡಿ ಉಪನ್ಯಾಸಗಳ ಮೂಲಕ ಮತ್ತು ಡಿಸೆಂಬರ್ 89ರಲ್ಲಿ ಮೈಸೂರು ಆಕಾಶವಾಣಿಯಿಂದ 4 ದಿನ ವೇದಾಂತ ವಿಚಾರಧಾರೆಯನ್ನು ಪ್ರಸಾರ ಮಾಡಿದರು.

ಶ್ರೀ ಸುಬ್ರಾಯಶರ್ಮರು : ಪ್ರತಿವರ್ಷವೂ ನಗರದ ಹತ್ತಾರು ಕಡೆಗಳಲ್ಲಿ ಹೊರಗಡೆಯ ಅನೇಕ ಸ್ಥಳಗಳಲ್ಲಿ ಪ್ರವಚನಗಳನ್ನು ಮಾಡುತ್ತಲೇ ಬಂದರು. ಆಂಧ್ರ, ತಮಿಳುನಾಡು, ಕೇರಳ, ಪಾಂಡುಚೆರಿಗಳಲ್ಲಿಯೂ ಇಂಗ್ಲಿಷ್‌ನಲ್ಲಿ, ಮಹಾರಾಷ್ಟ್ರದ ನಾಗಪುರದಲ್ಲಿ, ಅದಕ್ಕಿಂತ ಹೆಚ್ಚಾಗಿ ಅಮೆರಿಕ ಪ್ರವಾಸದಲ್ಲಿ ಅಲ್ಲಿರುವ ಭಾರತೀಯರಿ ಗಾಗಿ ಉಪನ್ಯಾಸಗಳನ್ನು ಮಾಡಿದರು.

ಶ್ರೀ ದೇವರಾಯ ಕುಲಕರ್ಣಿಯವರು ಆಂಧ್ರದಲ್ಲಿ ಹಲವಾರು ಕಡೆ ಪ್ರವಚನಗಳನ್ನು ತೆಲುಗಿನಲ್ಲೇ ನೀಡಿ, ಶ್ರೀಶ್ರೀಗಳವರ ವೇದಾಂತ ವಿಚಾರಗಳನ್ನು ಪ್ರಕಟಮಾಡಿದರು. ಇವಲ್ಲದೆ, ಕರ್ನಾಟಕದಲ್ಲೂ ಕೆಲವು ಊರುಗಳಲ್ಲಿ ಸುತ್ತಾಡಿ ಎಲ್ಲ ಕಡೆಗಳಲ್ಲೂ ಬಹು ಪ್ರಭಾವಶಾಲಿ ಉಪನ್ಯಾಸಕರೆಂದು ಯಶಸ್ಸು ಗಳಿಸಿದರು. 1982ರಲ್ಲಿ ಇವರು ಅಧ್ಯಾತ್ಮ ಚಿಂತಕ ದಂಪತಿಗಳ ಆಹ್ವಾನದ ಮೇಲೆ ಫ್ರಾನ್ಸಿಗೆ ಹೋಗಿ, ಅವರಿಗೆ ಪಾಠಗಳನ್ನೂ, ಬೇರೆಡೆಗಳಲ್ಲಿ ಪ್ರವಚನಗಳನ್ನೂ ನಡೆಸಿದರು. ಬೆಂಗಳೂರಿನಲ್ಲೇ ನೆಲೆಸಿದ ಮೇಲೆ ಅವರು ನಾಲ್ಕಾರು ಪಾಶ್ಚಿಮಾತ್ಯರಿಗೂ ಇಂಗ್ಲಿಷಿನಲ್ಲೇ ಪಾಠ ಹೇಳಿ, ಅವರಿಂದ ಮನ್ನಣೆ ಪಡೆದರು.

ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಗಳು ಹೊಳೆನರಸೀಪುರ, ಮೈಸೂರು, ಬೆಂಗಳೂರುಗಳಲ್ಲಲ್ಲದೆ ಆಂಧ್ರದ ರಾಜಾಂ, ವಿಜಯನಗರಗಳಲ್ಲೂ, ಶ್ರೀ ಬಿ.ಎಸ್. ಕೃಷ್ಣಮೂರ್ತಿಯವರೂ (ಅನಂತರ ಶ್ರೀ ಶ್ರೀ ವಿರಜಾನಂದ ಸ್ವಾಮೀಜಿ) ವಿಶೇಷವಾಗಿ ಬೆಂಗಳೂರು, ಹೊಳೆನರಸೀಪುರದಲ್ಲಿ ಹಾಗೆ ದೂರದ ತಾಳೀಕೋಟೆಯಂಥ ಸ್ಥಳಗಳಲ್ಲೂ ಉಪನ್ಯಾಸ ಮಾಡಿದರು. ಶ್ರೀ ಕೈವಲ್ಯ ಚೈತನ್ಯರು, ಶ್ರೀ ಕೈವಲ್ಯಾನಂದರೆಂದು ಸಂನ್ಯಾಸಾಶ್ರಮ ಹಿಡಿದಾಗಿನಿಂದ ಮೂರು ನಾಲ್ಕು ವರ್ಷಗಳು, ರಾಜ್ಯದಲ್ಲಿ, ಆಂಧ್ರಪ್ರದೇಶದಲ್ಲಿ ಪ್ರವಚನಗಳಿಗಾಗಿ ಹೋಗುತ್ತಿದ್ದರು.

**2. ಪತ್ರಿಕೆ :** ಇಲ್ಲಿ ಪುನರುಕ್ತಿಯ ದೋಷವಿರಬಹುದಾದರೂ ಪತ್ರಿಕೆಯ ಧ್ಯೇಯ ಧೋರಣೆಗಳನ್ನು ಶ್ರೀಶ್ರೀಗಳವರ ಮಾತಿನಲ್ಲೇ ಮುಂದಿಡುವದು ಅತ್ಯಂತ ಸೂಕ್ತವೆನಿಸುತ್ತದೆ. ಪತ್ರಿಕೆ ಪ್ರಾರಂಭವಾದ (1923ನೇ ಚೈತ್ರ ಮಾಸ) ಮಾರ್ಚ್-ಏಪ್ರಿಲ್ ತಿಂಗಳ ಮೊದಲ ಸಂಚಿಕೆಯ ಮೊದಲ ಪುಟದಲ್ಲಿ ಅವರು ಬರೆದಿರುವ ಲೇಖನ, ಸಂಪಾದಕರ ವಿಜ್ಞಾಪನೆ ಓದಿರಿ :

*"ಜಗತ್ತೆಲ್ಲ ಅಧ್ಯಾತ್ಮ, ಅಧಿಭೂತ ಎಂಬ ಎರಡು ದೊಡ್ಡ ಪಂಗಡವಾಗಿರುವದು. ಅಧಿಭೂತವೆಂದರೆ ನಮ್ಮ ಹೊರಗೆ ತೋರುವ ಪ್ರಪಂಚವು ; ಅಧ್ಯಾತ್ಮವೆಂದರೆ ನಮ್ಮೊಳಗೆ ತೋರುವ ಪ್ರಪಂಚವು. ಈ ಎರಡು ಪ್ರಪಂಚಗಳ ವಿಚಾರವನ್ನೂ ನಮ್ಮ ಪೂರ್ವಜರು ತಕ್ಕಂತೆ ನಡೆಸಿ ಅವುಗಳ ಬೆಲೆಯನ್ನು ಕಟ್ಟಿ ಲೋಕವ್ಯವಹಾರವನ್ನು ನಡೆಸುತ್ತಿದ್ದದ್ದರಿಂದ ಸುಖದ ಸೂರೆಯನ್ನು ಮಾಡಿಕೊಂಡರೆಂಬುದು ಇತಿಹಾಸದಿಂದ ತಿಳಿಯಬರುತ್ತಿರುವದು. ಆದರೆ ಅವರ ವಂಶಜರಾಗಿರುವ ನಮಗೆ ಕಾಲವಶದಿಂದ ಪ್ರಪಂಚದ ಮುಖ್ಯಭಾಗವಾದ 'ಅಧ್ಯಾತ್ಮ'ವೆಂಬುದು ಕಣ್ಮರೆಯಾಗಿ 'ಅಧಿಭೂತ'ವೊಂದೇ ಪ್ರಪಂಚವೆಂಬ ಬಯಲು ಭ್ರಮೆಯುಂಟಾಗುತ್ತಿರುವದು. ಕಲಿಮಹಿಮೆಯಿಂದಲೋ ಏನೋ ನಮಗೆ ಹಿಂದಿನವರ ಸದುಕ್ತಿಗಳಲ್ಲಿ ಉದಾಸೀನತೆಯುಂಟಾಗುತ್ತಿರುವದು. ಎಲ್ಲಾ ದೇಶಗಳಲ್ಲಿಯೂ ಈಚೀಚೆಗೆ ಸಂಭವಿಸಿರುವ ಸಾಂಘಿಕ ರಾಜಕೀಯ ವಿಚಾರಗಳ ವಿಪರಿವರ್ತನಗಳಿಂದ ಜನರ ಮನಸ್ಸು ಕದಡಿ ಕಲ್ಲೋಲವಾಗುತ್ತಿರುವದರ ಪರಿಣಾಮವು ಅಧ್ಯಾತ್ಮವಿದ್ಯೆಯ ತೌರುಮನೆಯೆನಿಸಿದ ನಮ್ಮ ಭರತಖಂಡದಲ್ಲಿಯೂ ತಲೆದೋರಿರುವದು. ಆದ್ದರಿಂದ ಭೌತಿಕಸಂಪತ್ತಿನ ಸುಖವನ್ನು ಅನುಭವಿಸುವದಕ್ಕೆ ಅಧ್ಯಾತ್ಮವಿದ್ಯೆಯ ತಳಹದಿಯು ಬೇಕೆಂಬುದನ್ನು ನಮ್ಮ ಜನರಿಗೆ ಮತ್ತೆ ನೆನಪುಕೊಡುವ ಕಾಲವು ಒದಗಿರುವದು.*

ಆಧ್ಯಾತ್ಮವಿದ್ಯೆಯೆಂಬ ವೃಕ್ಷದ ತಾಯಿಬೇರೆಂದರೆ ವೇದಾಂತವು ; ವೇದಾಂತ ಸಿದ್ಧಾಂತದ ಆವಾಸಸ್ಥಾನಗಳು ಉಪನಿಷತ್ತುಗಳು. ಮಿಕ್ಕ ದೇಶಗಳಲ್ಲಿಯೂ ಆಧ್ಯಾತ್ಮ ವಿಚಾರಗಳು ಜರುಗಿರುವದು ನಿಜ ; ಆದರೆ ವೇದಾಂತಸಿದ್ಧಾಂತದ ಸಾಕ್ಷಾದಾಧಾರದ ಮೇಲೆ, ಅಥವಾ ಪರಂಪರೆಯಿಂದ ಅವುಗಳಿಂದ ಪ್ರೇರಿತವಾಗಿ, ಹುಟ್ಟಲಿಲ್ಲವೆಂಬ ಆಧ್ಯಾತ್ಮಕಲೆಯನ್ನು ಕಾಣುವುದು ಇದುವರೆಗೆ ಕಷ್ಟವಾಗಿ ತೋರಿರುವದು. ಆದ್ದರಿಂದ ಆಧ್ಯಾತ್ಮ ವಿದ್ಯೆಗೆಲ್ಲ ಮೂಲವಾಗಿರುವ ಉಪನಿಷತ್ಸಿದ್ಧಾಂತವನ್ನೂ ಇದನ್ನು ಪರಿಪುಷ್ಟಿ ಗೊಳಿಸುವ ಮಿಕ್ಕ ದರ್ಶನಗಳನ್ನೂ ನಮ್ಮ ಕರ್ಣಾಟಕಪ್ರಾಂತದ ನಿವಾಸಿಗಳಿಗೆ ಪರಿಚಯಮಾಡಿಕೊಡಬೇಕೆಂಬ ಉದ್ದೇಶದಿಂದ ಈ ಮಾಸಿಕ ಪತ್ರದ ಪ್ರಕಾಶಕ್ಕೆ ಕೈ ಹಾಕಿರುವೆವು.

ಕನ್ನಡದಲ್ಲಿ ಆಗಾಗ್ಗೆ ಹೊರಟಿದ್ದು ಮೈಗರೆದಿರುವ, ಈಗಲೂ ಅಲ್ಲಲ್ಲಿ ಬಡಕಲಾಗಿ ಮೈದೋರಿಸುತ್ತಿರುವ ಆಧ್ಯಾತ್ಮ ವಿಚಾರದ ಪತ್ರಿಕೆಗಳು ಹಲವಿದ್ದರೂ ಮತ್ತೊಂದು ಪತ್ರಿಕೆಯನ್ನು ಹೊರಡಿಸುವ ಆವಶ್ಯಕತೆ ಏನೆಂದು ಸಂದೇಹ ಬರಬಹುದು. ಈ ಪತ್ರಿಕೆಗೂ ಮಿಕ್ಕವುಗಳಿಗೂ ಕೆಲವು ವಿಶೇಷ ವ್ಯತ್ಯಾಸಗಳಿವೆ :- ಮೊದಲನೆಯದು ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಯೋಗ ಮುಂತಾದ ಆಧ್ಯಾತ್ಮ ವಿಚಾರದ ಯಾವದಾದರೊಂದು ಪ್ರಭೇದಕ್ಕೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಇದೆಲ್ಲ ಒಂದೇ ಗತಿಯನ್ನು ಕಾಣುವ ಪ್ರಸ್ಥಾನಭೇದವೆಂಬುದನ್ನು ಮನಗಾಣಿಸುವ ಪ್ರಯತ್ನವು. ಒಬ್ಬ ಮನುಷ್ಯನು ದೇಹದಲ್ಲಿ ಆರೋಗ್ಯವಾಗಿ ಪುಷ್ಟಿಯಾಗುವದಕ್ಕೆ ಕೈ, ಕಾಲು ಮುಂತಾದ ಕರ್ಮೇಂದ್ರಿಯಗಳೂ ಕಣ್ಣು ಕಿವಿ ಮುಂತಾದ ಜ್ಞಾನೇಂದ್ರಿಯಗಳೂ ಪ್ರಾಣವೂ – ಎಲ್ಲವೂ ಹೇಗೆ ತಮ್ಮ ತಮ್ಮ ಕಾರ್ಯಗಳನ್ನು ಉತ್ತಮ ರೀತಿಯಿಂದ ಜರುಗಿಸುವದು ಆವಶ್ಯಕವೋ ಹಾಗೆ ಆಧ್ಯಾತ್ಮ ವಿಚಾರದಲ್ಲಿಯೂ ಅಂಗಗಳೆಲ್ಲವೂ ತಮ್ಮ ತಮ್ಮ ಕೆಲಸವನ್ನು ಮಾಡಬೇಕು. ಇದರಿಂದಲೇ ನಾವು ಪತ್ರಿಕೆಗೆ ಜ್ಞಾನ ಭಕ್ತಿ - ಮುಂತಾದ ಚಿಕ್ಕ ಪಂಗಡದ ಸಾಧನವನ್ನು ಹೇಳುವ ವಿಶೇಷಣಗಳಿಂದ ಕೂಡಿದ ನಾಮನಿರ್ದೇಶವನ್ನು ಮಾಡಲಿಲ್ಲ ; ಎರಡನೆಯ ವಿಶೇಷವೇನೆಂದರೆ, ವೈದಿಕ ದರ್ಶನಗಳಲ್ಲಿ ಹೇಗೋ ಹಾಗೆ ಅವೈದಿಕ ಮತಗಳಲ್ಲಿರುವ ವಿಚಾರಗಳನ್ನೂ ಸಾರಗ್ರಾಹಕದೃಷ್ಟಿಯಿಂದ ಅವಕಾಶವಿದ್ದಂತೆ ಪ್ರಕಟಿಸುವದು. ಕೇವಲ ವೇದದ ಪ್ರಮಾಣವನ್ನು ಅಂಗೀಕರಿಸದೆ ಇದ್ದರೂ ಪ್ರಪಂಚದಲ್ಲಿ ಅಮೋಘವಾದ ನೀತಿ ಮಾರ್ಗಕ್ಕೆ ಪ್ರೋತ್ಸಾಹ ಕೊಟ್ಟ ಬೌದ್ಧ ಜೈನಾದಿದರ್ಶನಗಳು ಈಗಿನಕಾಲಕ್ಕೆ ಗ್ರಂಥಸ್ಥವಾದ ವಿಷಯಗಳಾಗಿರುವವು. ನಮ್ಮ ಮತಗ್ರಂಥಗಳಲ್ಲಿ ಹೇಳಿರುವ ಅವೈದಿಕ ದರ್ಶನಗಳ ಪೂರ್ವಪಕ್ಷಗಳ ಬಲಾಬಲಗಳನ್ನು ಆಯಾ ಮತದವರು ಹೇಳುವ

ಅಭಿಪ್ರಾಯಗಳಿಂದ ತಿಳಿಯುವದೇ ಯುಕ್ತವೆಂಬುದು ಶಾಂತಚಿತ್ತರಿಗೆ ತೋರದೆ ಇರಲಾರದು. ಪೂರ್ವದಲ್ಲಿದ್ದ ಚಾರ್ವಾಕಾದಿಮತಗಳು ವೇದದ ಆಧಾರದಮೇಲೆ ಹುಟ್ಟದಿದ್ದರೂ ಆಯಾ ಮತಗ್ರಂಥಗಳನ್ನು ನಮ್ಮ ಮತಾಚಾರ್ಯರುಗಳು ನೋಡಿ ಅವುಗಳಲ್ಲಿ ಗುಣಾಗುಣಗಳನ್ನು ವಿಚಾರಮಾಡಿದರೆಂಬುದು ಅವರು ಬರೆದಿಟ್ಟಿರುವ ಅಮೋಘವಾದ ಭಾಷ್ಯಗಳಿಂದಲೆ ವ್ಯಕ್ತವಾಗುವದು. ಈಗ ಪ್ರಾಚೀನಕಾಲದ ಅವೈದಿಕ ಮತಗಳು ಲುಪ್ತವಾಗಿ ಹೊಸಮತಗಳು ತಲೆದೋರಿವೆ. ವೇದದ ಆಧಾರ ವನ್ನೂ ಪೂರ್ಣವಾಗಿ ಅಥವಾ ಸ್ವಲ್ಪಮಟ್ಟಿಗೆ ಒಪ್ಪಿಕೊಂಡು ನಮ್ಮ ಭರತಖಂಡ ದಲ್ಲಿಯೇ ಪ್ರಬಲವಾದ ಸಂಸ್ಥೆಗಳು ಏರ್ಪಟ್ಟಿರುತ್ತವೆ. ಈ ನವೀನಮತಗಳು ಎಲ್ಲಿಯೋ ಗಣನೆಗೆ ಬರದ ಅಲ್ಪ ಸಂಖ್ಯೆಯ ಜನರ ಸಂಬಂಧವಿದ್ದುವುಗಳಾಗಿರದೆ ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಬಹುಭಾಗದ ಜನರಮೇಲೆ ತಮ್ಮ ಉಪದೇಶ ಪರಿಣಾಮವನ್ನುಂಟು ಮಾಡಿರುತ್ತವೆ. ಈ ಮತಗಳಿಂದ ಜಗತ್ತಿನ ಇತಿಹಾಸವೇ ಬದಲಾಯಿಸುತ್ತಿರುವ ಸಮಯದಲ್ಲಿಯೂ ಅವುಗಳ ಸಾರಾಸಾರವನ್ನು ಗ್ರಹಿ ಸದೆ ಉಪೇಕ್ಷೆ ಮಾಡುವದು ಕೂಪಮಂಡೂಕವೃತ್ತಿಯನ್ನು ಅನುಕರಿಸುವದರಲ್ಲಿ ಸಂಶಯವಿಲ್ಲ. ಇದೂ ಅಲ್ಲದೆ, ಅನೇಕ ಶೋಧಕರು ಮತಗಳ ಸಿದ್ಧಾಂತಗಳ ಪರೀಕ್ಷೆ ಮಾಡುತ್ತಾ ಹೋದ ಹಾಗೆಲ್ಲ ಪ್ರಾಚೀನಾರ್ಯರ ಸನಾತನ ವೈದಿಕ ಸಿದ್ಧಾಂತವೇ ಬಗೆಬಗೆಯಾಗಿ ಮಾರ್ಪಾಡುಗಳನ್ನು ಹೊಂದಿ ಆಯಾ ಹೊಸ ಹೆಸರುಗಳನ್ನು ಪಡೆಯುತ್ತ ಬಂದಿರುವದೆಂದು ಕೂಡ ಅಭಿಪ್ರಾಯ ಪಡುತ್ತಿರುವರು. ಈ ಎಲ್ಲಾ ಕಾರಣಗಳಿಂದ ಅಧ್ಯಾತ್ಮ ವಿಚಾರ ಸಾಮಾನ್ಯವೇ ಭೌತಿಕವಿಚಾರಸಮುದ್ರದ ಕಲ್ಲೋಲಗಳ ಹೊಡೆತದಲ್ಲಿ ಮುಳುಗಿ ಹೋಗುವ ಭಯವಿರುವ ಈ ಕಾಲದಲ್ಲಿ ಶ್ಲೋ॥ 'ಯುಕ್ತಿ ಯುಕ್ತ ಮುಪಾದೇಯಂ ಬಾಲಾದಪಿ ಶುಕಾದಪಿ' (ಯುಕ್ತಿ ಇರುವ ಮಾತನ್ನು ಹುಡುಗನು ಹೇಳಲಿ, ಕೊನೆಗೊಂದು ಗಿಣಿ ಹೇಳಲಿ, ತೆಗೆದುಕೊಳ್ಳಬೇಕು) ಎಂಬ ನ್ಯಾಯವನ್ನನುಸರಿಸಿ ಅಧ್ಯಾತ್ಮ ವಿಚಾರವು ಎಲ್ಲೆಲ್ಲಿ ಹೇಗೆ ಹೇಗೆ ಕವ ಲೊಡೆದು ಎಂಥೆಂಥ ಫಲಪುಷ್ಪಗಳನ್ನು ಬಿಡುತ್ತಿರುವದೆಂಬುದನ್ನು ವಿಚಾರಿಸು ವದು ಪ್ರಯೋಜನಕಾರಿಯಾಗದೆ ಇರಲಾರದೆಂದು ನಾವು ದೃಢವಾಗಿ ನಂಬಿರು ತ್ತೇವೆ ಮತ್ತು ಅದೇ ಅಭಿಪ್ರಾಯವುಳ್ಳ ನಮ್ಮ ಮಿತ್ರರನೇಕರ ಅಪೇಕ್ಷೆಯಂತೆ ಈಗ ಭರತಖಂಡದಲ್ಲಿ ಕೇಳಿ ಅಥವಾ ನೋಡಿ ಪ್ರಸಿದ್ಧವಾಗಿರುವ ಆರ್ಯಸಮಾಜ, ಬ್ರಹ್ಮ ಸಮಾಜ, ಪ್ರಾರ್ಥನಾ ಸಮಾಜ, ಕ್ರೈಸ್ತಮತ, ಮಹಮ್ಮದೀಯಮತ, ಥಿಯೋ ಸಫಿ ಮುಂತಾದ ದರ್ಶನಗಳು ಜೈನ, ಬೌದ್ಧ ಮುಂತಾದ ಪ್ರಾಚೀನ ದರ್ಶನಗಳು ಇವುಗಳಲ್ಲಿ ದೊರೆಯಬಹುದಾದ ಅಧ್ಯಾತ್ಮವಿಚಾರವನ್ನು ನಿಷ್ಪಕ್ಷಪಾತಿಗಳಾದ

ಲೇಖಕರು ಮಾಡುವ ಸಹಾಯ ದೊರೆತಂತೆ ನಮ್ಮ ಕರ್ಣಾಟಕರ ಸಲುವಾಗಿ ಪ್ರಕಟಿಸುತ್ತಾ ಬರುವೆವು. ಮೂರನೆಯದು, ಪ್ರಾಚೀನಗ್ರಂಥಗಳನ್ನು ಹೊರಕ್ಕೆ ತರುವದು. ಈ ಕೆಲಸವು ಬಲು ದೊಡ್ಡದೆಂಬುದರ ಮೇಲೆ ಶಕ್ತಿಯಿದ್ದಷ್ಟು ಕ್ರಮಕ್ರಮವಾಗಿ ಮೂಲಗ್ರಂಥಗಳನ್ನು ಸದ್ಯಸ್ಥಿತಿಗೆ ತಕ್ಕ ಟಿಪ್ಪಣಿಗಳ ಸಮೇತ ಪ್ರಕಟನೆ ಮಾಡುವ ಅಭಿಪ್ರಾಯವನ್ನು ಇಟ್ಟುಕೊಂಡಿದೇವೆ. ಇದು 'ಶ್ರೀ ಶಂಕರಾಚಾರ್ಯರವರ ಅಭಿಪ್ರಾಯ' 'ಹೀಗೆಂದು ರಾಮಾನುಜಾಚಾರ್ಯರು ಹೇಳುತ್ತಾರೆ' - ಎಂದು ಬರಿಯಮಾತುಗಳನ್ನಾಡಿ ತೋರಿಸುವದು ನಮ್ಮ ಕರ್ಣಾಟಕದಲ್ಲಿ ಈಚೀಚೆಗೆ ಹೆಚ್ಚಾಗಿರುವಂತೆ ಕಂಡುಬರುತ್ತದೆ. ನಿಜವಾದ ಸ್ಥಿತಿಯನ್ನು ತಿಳಿಯಬೇಕೆಂಬವರ ಸೌಕರ್ಯಕ್ಕಾಗಿ, ನಮ್ಮ ಅಭಿಪ್ರಾಯಗಳನ್ನು ಬೆರೆಸದೆಯೂ, ವ್ಯಾಖ್ಯಾನಗಳ ವಿಸ್ತಾರದಿಂದ ಮೂಲವೇ ಮರೆತು ಹೋಗುವಂತೆ ಮಾಡದೆಯೂ ಮೂಲದ ಸಾಕ್ಷಾದನುವಾದ ಗಳನ್ನು ಕನ್ನಡದಲ್ಲಿ ತರುವದು ಒಂದು ಅವಶ್ಯಕವಾದ ಕಾರ್ಯವೆ. ನಮಗಿರುವ ಸ್ಥಲಸಂಕೋಚದಲ್ಲಿ ಅಧ್ಯಾತ್ಮ ಸಿದ್ಧಾಂತವನ್ನು ಉಪನಿಷತ್ತುಗಳ ಆಧಾರದ ಮೇಲೆ ಭಾಷ್ಯಗಳಿಂದ ನೆಲೆಗೊಳಿಸಿದ ಆಚಾರ್ಯರುಗಳಲ್ಲಿ ನಮಗೆ ಗೊತ್ತಿರುವಂತೆ ಆದಿಭಾಷ್ಯಕಾರರಾಗಿಯೂ ಭರತಖಂಡದಲ್ಲೆಲ್ಲಾ ಮಠಸ್ಥಾಪನೆಗಾಗಿ ಸಂಚರಿಸಿ ಈಗಲೂ ಜಗತ್ತನ್ನೆಲ್ಲಾ ಪ್ರಭೆಯಿಂದ ಬೆಳಗುತ್ತಿರುವ ಆ ವೇದಾನ್ತಸಿದ್ಧಾನ್ತವನ್ನು ಸ್ಥಾಪಿಸಿ ವಿಶ್ರಾಂತಿಗೆಂದು ಕರ್ಣಾಟಕದಲ್ಲಿಯೆ ಮಠಸ್ಥಾಪನೆ ಮಾಡಿದವರಾಗಿಯೂ ಇರುವ ಸುಪ್ರಸಿದ್ಧ ಶ್ರೀ ಶಂಕರಾಚಾರ್ಯರವರ ಭಾಷ್ಯಾದಿ ಮುಖ್ಯಗ್ರಂಥಗಳನ್ನು ಆದಷ್ಟು ಹೊರಕ್ಕೆ ತರಲು ನಿಶ್ಚಯಿಸಿರುವೆವು. ಅವಕಾಶ ದೊರೆತಂತೆ ಉಳಿದ ಆಚಾರ್ಯರುಗಳ ಗ್ರಂಥಗಳ ಸಾರವನ್ನಾದರೂ ಆಗಾಗ್ಗೆ ಕೊಡುತ್ತಾ ಹೋಗುವೆವು. ಇನ್ನು ನಾಲ್ಕನೆಯ ವಿಶೇಷವೇನೆಂದರೆ ಮೂಲಗ್ರಂಥಗಳು ಶಾಸ್ತ್ರೀಯ ದೃಷ್ಟಿಯಿಂದ ತಿಳಿಸುವ ವಿಷಯ ಗಳನ್ನು ಸಾಮಾನ್ಯರಿಗೆ ವಿಶದಪಡಿಸುವ ಚಿಕ್ಕ ಗ್ರಂಥಗಳನ್ನು ತರುವದು. ಇಂಥ ಗ್ರಂಥಗಳು ಸುಲಭಶೈಲಿಯಲ್ಲಿ ಬರೆದಿರುವ ಪ್ರಶ್ನೋತ್ತರ, ಕಥಾವಲಿ, ಕೀರ್ತನ, ಕಾದಂಬರಿ, ನಾಟಕ ಮುಂತಾದ ನಿಬಂಧನಗಳಾಗಿರುವವು. ಜನರಿಗೆ ವಿನೋದವಾಗಿ ಓದಿ ಅಧ್ಯಾತ್ಮ ವಿಚಾರಗಳನ್ನು ಮನಸ್ಸಿನಲ್ಲಿಳವಡಿಸಿಕೊಳ್ಳುವದಕ್ಕೆ ಸಹಾಯವಾಗಿರ ಬೇಕೆಂಬುದೇ ಇವುಗಳ ಉದ್ದೇಶವು.

ಮೇಲೆ ವಿವರಿಸಿರುವ ಪತ್ರಿಕೆಯ ಸ್ವರೂಪದಿಂದ ಈ ಕಾರ್ಯದ ಅವಶ್ಯಕತೆ-ಯನ್ನೂ ಇದು ಎಷ್ಟರ ಮಟ್ಟಿಗೆ ತಮ್ಮ ಹಸ್ತಾವಲಂಬನೆಗೆ ಯೋಗ್ಯವೆಂಬುದನ್ನೂ ಗ್ರಾಹಕರು ನಿರ್ಣಯಿಸಬೇಕಾಗಿರುವದು. ಅಧ್ಯಾತ್ಮ ವಿಚಾರದ ಎಲ್ಲಾ ಶಾಖೆಗಳನ್ನೂ ಒಳಗೊಂಡಿರುವ ಈ ಪತ್ರಿಕೆಗೆ ಯಾರೊಬ್ಬರ ಲೇಖನದಿಂದ ಮಾತ್ರ ಮನೋರಥ

*ಪೂರ್ತಿಯಾಗುವದೆಂಬ ಆಸೆಯಿಲ್ಲವಷ್ಟೆ. ವಿದ್ಯಾವಂತರೂ ಲೋಕೋಪಕಾರ-ನಿರತರೂ ಆದ ಮಹನೀಯರು ತಮತಮಗೆ ಅನುವಾಗುವ ವಿಷಯಗಳನ್ನು ಆರಿಸಿಕೊಂಡು ಲೇಖನಗಳನ್ನು ಕಳುಹಿಸಿಕೊಟ್ಟು ಈ ಕಾರ್ಯಕ್ಕೆ ನೆರವಾಗಬೇಕೆಂಬುದು ನಮ್ಮ ಸವಿನಯಪ್ರಾರ್ಥನೆ. ಮತಾಂತರಗಳನ್ನು ದೂಷಣೆಮಾಡದೆ ಜನ ಸಾಮಾನ್ಯಕ್ಕೆ ತಿಳಿಯುವಂತೆ ಸುಲಭರೀತಿಯಲ್ಲಿ ತಿಳಿಸುವ ಅಧ್ಯಾತ್ಮ ಸಾಧನ ವಿಷಯವಾದ ಅಥವಾ ಸಿದ್ಧಾಂತ ವಿಷಯಕವಾದ ಲೇಖನಗಳನ್ನು ಆದರದಿಂದ ಬರಮಾಡಿಕೊಳ್ಳುವೆವು. ಜಿಜ್ಞಾಸುಗಳಾಗಿರುವ ಮಹನೀಯರು ಪೂರ್ವ-ಮಹರ್ಷಿಗಳ ಸೇವೆಯೂ ಅಧ್ಯಾತ್ಮ ವಿಚಾರದಲ್ಲಿ ಕಾಲಕ್ಷೇಪವೂ ದೊರೆಯುವ ಈ ಸುಯೋಗವನ್ನು ಕಳೆದುಕೊಳ್ಳದೆ ತಮ್ಮ ಮಿತ್ರಮಂಡಲಿಯಲ್ಲಿ ಇದರ ಪ್ರಯೋಜನ ವನ್ನು ಮಾಡಿಕೊಟ್ಟು ನಮ್ಮ ಪ್ರಯತ್ನವನ್ನು ಸಫಲಗೊಳಿಸಬೇಕಾಗಿ ಬೇಡುತ್ತೇವೆ.''*

ಇಲ್ಲಿ ಕಾಣುವಂತೆ ಯಾವ ಧರ್ಮದ ವಿಷಯದಲ್ಲೂ ಖಂಡನೆಯಾಗಲೀ, ದ್ವೇಷವಾಗಲೀ ಇಲ್ಲದೆ, ವೇದಾಂತಕ್ಕೆ ಅನುಗುಣವಾದಂತೆ ಆಯಾಯ ಧರ್ಮಗಳು ಕಂಡ ಶ್ರೇಷ್ಠ ತತ್ತ್ವಗಳ ಪರಿಚಯವನ್ನು ಎಲ್ಲ ಮತಾನುಯಾಯಿಗಳಿಗೂ, ಜನಗಳಿಗೂ ಮಾಡಿಕೊಡುವ ಉದಾರಚಿತ್ತರು ಶ್ರೀ ಸ್ವಾಮಿಗಳು. ಇಂಥ ಸ್ವಾಮಿಗಳು ಈ ತರಹದ ಲೇಖನಗಳನ್ನು ಪ್ರಕಟಣೆ ಮಾಡಿದರು, ತ್ರಿಮತಗಳು, ಕ್ರೈಸ್ತ, ಇಸ್ಲಾಂ, ಜೈನ, ಬೌದ್ಧ ಧರ್ಮಗಳನ್ನು ಕುರಿತಂತೆ ಆಯಾ ಮತಾನುಯಾಯಿಗಳಿಂದ ಬರೆಸಿ ತರಿಸಿದರು, ತಾವೂ ಕೆಲವನ್ನು ಬರೆದರು. ಆದರೆ, ಮುಂದೆ ಸಾಕಷ್ಟು ಲೇಖನಗಳು ಬಾರದೆ ಈ ಪ್ರಯತ್ನ ತಾನಾಗೇ ಮೊಟಕಾಯಿತು. ಈ ರೀತಿ 'ಅಧ್ಯಾತ್ಮ ಪ್ರಕಾಶ' ಪತ್ರಿಕೆ ನಿಜವಾಗಿಯೂ ಸುಜ್ಞಾನ ಜ್ಯೋತಿರ್ಮಯವಾಗಿ ಅವರ ಸಂಪಾದಕತ್ವದಲ್ಲಿ ಬೆಳೆದು ಬಂತು ; ಮೊದಲ ವರ್ಷಗಳ ಕೆಲವು ಸ್ಥಗಿತಗಳನ್ನು ಬಿಟ್ಟರೆ, 1946ರಿಂದ 1975ರ ವರೆಗೂ, ಅಲ್ಲಿಂದ ಮುಂದೆಯೂ ಈವರೆಗೆ ನಡೆದುಕೊಂಡು ಬಂದಿದೆ. ಭಗವಂತನ ದಯದಿಂದ, ಶ್ರೀಗಳ ಕೃಪೆಯಿಂದ ಹೀಗೆಯೇ ಸತತವಾಗಿ ಮುಂದುವರೆದು ಶ್ರೀಶ್ರೀ ಗಳವರ ಇಚ್ಛೆಯಂತೆ ಸುತ್ತಲಿನ ಜನತೆಯ ಹಿತಕ್ಕಾಗಿ ಬೆಳಗಲು ಕಾರ್ಯಾಲಯದ ಪ್ರಾರ್ಥನೆ, ಇದನ್ನೆಲ್ಲಾ ನಡೆಸುವ ಕೈ ಹಿಂದಿರುವ ಅಪೂರ್ವ ಜ್ಯೋತಿ ಸ್ವರೂಪನಿಗೆ.

ಶ್ರೀಶ್ರೀಗಳವರ ಸರಳ 'ತಿಂಗಳ ಸಂದೇಶ'ಗಳು, 'ಶಂಕರನ ಪತ್ರಗಳು' ಮತ್ತೆ ಕೆಲವು ಲೇಖನಗಳು ಪ್ರಾರಂಭಿಕ ಓದುಗರಿಗೆ, ಪ್ರಾಪಂಚಿಕದಲ್ಲಿ ಸಣ್ಣ ಸಣ್ಣ ಕರ್ತವ್ಯ ಪ್ರಶ್ನೆಗಳೆದ್ದವರಿಗೆ ಸಮಾಧಾನವನ್ನು ತಂದು, ಉಳಿದ ಲೇಖನಗಳೆಡೆ ತಿರುಗಿಸಿ, ಅವರಿಗೆ ಪ್ರಯೋಜನ ನೀಡುವದರಲ್ಲಿ ಸಂದೇಹವಿಲ್ಲ. ಶ್ರೀಶ್ರೀಗಳವರ ಧಾಟಿ ಹಿಂದಿನ

ಪತ್ರಿಕೆಗಳನ್ನು ಓದಿದವರಿಗೆ ತಿಳಿಯದೆ ಇರಲಾರದು. ಕೇವಲ ಮೊದಲ ತೊದಲು ಹೆಜ್ಜೆಗಳನ್ನು ಅಧ್ಯಾತ್ಮ ಲೇಖನಗಳಲ್ಲಿ ಇಡುವ ಓದುಗರಿಂದ ಹಿಡಿದು ಉತ್ತಮಾಧಿಕಾರಿಗಳವರೆಗೆ ವಿವಿಧ ಸ್ತರದವರಿಗೆ ಅನುಕೂಲವಾಗುವ ಲೇಖನಗಳನ್ನು 'ಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮ', 'ಯ.ಸು. ಶರ್ಮ', 'ತಿಳಿದದ್ದು ನುಡಿಯಪ್ಪ', 'ದಾರಿಹೋಕ'.... ಹೀಗೆ ಅನೇಕ ಹೆಸರುಗಳಲ್ಲಿ ಬರೆದು ಅಧ್ಯಾತ್ಮ ಪ್ರಕಾಶ ಪತ್ರಿಕೆಯನ್ನು ಬೆಳಗಿಸಿದರು. ಪತ್ರಿಕಾ ಪ್ರಪಂಚದಲ್ಲಿ ಬೇರೆ ಬೇರೆಯ ಹೆಸರುಗಳಿಂದ ಒಬ್ಬರೇ ಬರೆದ ಎರಡು, ಮೂರು ಲೇಖನಗಳನ್ನು ಹಾಕುವದು ಸಾಮಾನ್ಯವೇ. ಇಲ್ಲಂತೂ ಇದು ಅವಶ್ಯಕವೇ ಆಗಿತ್ತು. ಶ್ರೀ ಹೊಸಕೆರೆ ಚಿದಂಬರಯ್ಯನವರ ಗಂಭೀರ ಲೇಖನಗಳೂ, ಓದುಗರಿಗೆ ತುಂಬ ಉಪಯುಕ್ತವಾಗಿದ್ದವು. ಅವರೊಡನೆ ಇನ್ನಿತರ ಉತ್ತಮ ವೇದಾಂತ ಚಿಂತಕರ ಬರಹಗಳೂ, ವೈವಿಧ್ಯತೆಯನ್ನು ಒದಗಿಸಿದವು. ಪತ್ರಿಕೆ ಪ್ರಾರಂಭವಾದ ವರ್ಷ, ಆಗ, ಅಲ್ಲಿಂದೀಚೆಗೆ ಬಹಳ ವರ್ಷಗಳು ರಾಜ್ಯದಲ್ಲಿ ಉತ್ತಮವಾದ ಅಧ್ಯಾತ್ಮ ಲೇಖನಗಳನ್ನು ಬರೆಯುವವರು ಕಡಿಮೆ. ಕನ್ನಡದಲ್ಲಿ ಅಧ್ಯಾತ್ಮಗ್ರಂಥಗಳು ವಿರಳವಾಗಿದ್ದವು ಅಂದರೂ ನಡೆದೀತು. ಇದರ ನಂತರದ 50 ವರ್ಷಗಳಲ್ಲೂ ಪರಿಸ್ಥಿತಿ ವಿಶೇಷವಾಗಿ ಬದಲಾಗಿರಲಿಲ್ಲ. ಆಧ್ಯಾತ್ಮಿಕಕ್ಕೆ ಮೀಸಲಾದ ಸಂಸ್ಥೆ ಭಾರತದಲ್ಲಿ ಆಗಲೂ ಬೆರಳೆಣಿಕೆಯಷ್ಟು ಮಾತ್ರವೇ. ಕರ್ನಾಟಕದಲ್ಲೇ ಆಗ ಈ ಪತ್ರಿಕೆ ಸುವರ್ಣ ಮಹೋತ್ಸವವನ್ನಾಚರಿಸಿ ದಾಖಲೆಯನ್ನೇ ಸ್ಥಾಪಿಸಿತು. ಈ ಕಾಲದಲ್ಲಿ 170ಕ್ಕೂ ಹೆಚ್ಚಿನ ಸಂಸ್ಥೆಗಳಿದ್ದಿರಬಹುದು.

ಶ್ರೀಶ್ರೀಗಳವರ ಕೊನೆಯ ವರ್ಷಗಳಲ್ಲಿ, ಅವರ ನಿಶ್ಶಕ್ತತೆಯಲ್ಲಿ, ಅವರಿಗೆ ಸಹಾಯಕರಾಗಿ ಪತ್ರಿಕೆಗೆ ಲೇಖನಗಳನ್ನು ಬರೆದರು, ಪತ್ರಿಕಾ ಕೆಲಸದಲ್ಲಿ ಅನೇಕ ಭಾಗವನ್ನು ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು ಮಾಡುತ್ತಿದ್ದರು. ಬಹುಶಃ 1975ರ ಪ್ರಾರಂಭದಿಂದಲೇ ಅದಕ್ಕೂ ಸ್ವಲ್ಪ ಮುಂಚೆಯೇ (ಡಿಸೆಂಬರ್ 74ರಲ್ಲೇ) ಶ್ರೀಶ್ರೀಗಳವರ ಬರವಣಿಗೆಯೂ ಕಡಿಮೆಯಾಗಿ, ಅನಂತರ ಸಂಪೂರ್ಣವಾಗಿ ನಿಂತಿತ್ತು. ಆಗಲೇ ಶ್ರೀಶ್ರೀಗಳವರ ಪರವಾಗಿ ನಡೆಸುತ್ತಿದ್ದ ಬರವಣಿಗೆ, ಮಾಸಪತ್ರಿಕೆಗೆ ಬೇಕಾದ ಲೇಖನಗಳು, ಮುಖ್ಯವಾಗಿ ಪತ್ರಿಕೆಯ ಅಗ್ರಭಾಗವಾದ ಶ್ರೀಶ್ರೀಗಳವರ 'ಈ ತಿಂಗಳ ಸಂದೇಶ'ವನ್ನು ಶ್ರೀಗಳವರ ಆಜ್ಞಾನುಸಾರ ಪಂಡಿತರೇ ಮುಂದುವರೆಸಿದರು, 'ಅಧ್ಯಾತ್ಮ ಸಂದೇಶ' ಎಂಬಡಿಯಲ್ಲಿ, ಮಾರ್ಚ್ 1975ರ ಪತ್ರಿಕೆಯಿಂದ ; ವಿದ್ವಾಂಸರುಗಳಿಂದ ಬರುವ ಲೇಖನಗಳ ಪರಿಷ್ಕಾರ, ಗ್ರಂಥಗಳ ಭಾಷ್ಯಾನುಸಾರ-ಗಳನ್ನು ಪ್ರಕಟಣೆಗೆ ಸಿದ್ಧಪಡಿಸುವದು, ಹೀಗೆ ಎಲ್ಲ ಕೆಲಸಗಳನ್ನೂ ನಿರ್ವಹಿಸುವ ಹೊಣೆಯನ್ನು ತೆಗೆದುಕೊಂಡರು.

1977ರಲ್ಲಿ ಕಾರ್ಯಾಲಯದ ಕಾರ್ಯಸಮಿತಿಯ ಅಧ್ಯಕ್ಷರೂ, ವ್ಯವಸ್ಥಾಪಕ ಸಂಪಾದಕರೂ ಪ್ರಕಾಶಕರೂ ಆಗಿದ್ದ ಶ್ರೀ ವೈ.ನರಸಪ್ಪನವರ ನಿಧನಾನಂತರ (12.4.77) ಪಂಡಿತರೇ ಸಂಪಾದಕರು, ಪ್ರಕಾಶಕರು ಎಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಘೋಷಿಸಿಕೊಂಡು ಪ್ರಮಾಣಪತ್ರ ಸಲ್ಲಿಸಿದರು. ಆಗಿನಿಂದ 2003-2004 ರವರೆಗೂ, ಸುಮಾರು 30 ವರ್ಷಗಳು, ಪತ್ರಿಕೆಯನ್ನು ವ್ಯವಸ್ಥಿತವಾಗಿ ನಡೆಸಿದರು. ವಿದ್ಯಾರ್ಥಿಯಾಗಿ ಬಂದಾಗಿನಿಂದ ಶ್ರೀಶ್ರೀಗಳವರ ಬಲಗೈಯಂತೆ ಅನೇಕ ಕಾರ್ಯ ಗಳನ್ನು, ತಮಗೆ ಈಚೆಗೆ ಜ್ಞಾಪಕಶಕ್ತಿ ಸ್ವಲ್ಪ ಕುಂಠಿತವಾಗುವವರೆಗೆ ಚೆನ್ನಾಗಿ ನಿರ್ವಹಿಸಿದರು.

ಈವರೆಗೆ ಎಲ್ಲ ಸ್ತರದ ಓದುಗರನ್ನೂ ಗಮನದಲ್ಲಿಟ್ಟು ಪತ್ರಿಕೆ ನಾನಾ ತರದ ಲೇಖನಗಳನ್ನು ಕೊಡುತ್ತಾ ಬಂದಿತ್ತು. ಪ್ರಧಾನವಾಗಿ ಶಂಕರ ಭಾಷ್ಯಾನುಸಾರ, ಆದರೆ ಸಂಕ್ಷೇಪ ಸರಳವಾಗಿ, ಉಪನಿಷತ್ತುಗಳ ಸಂದೇಶ ; ಸಾಧನಾ ಮಾರ್ಗಗಳನ್ನು ಬೋಧಿ ಸುವ ಲೇಖನಗಳು ; ಪ್ರಾರ್ಥನೆ ಭಜನೆಗೆ ಉಪಯುಕ್ತವಾದರ್ಥಸಹಿತ ಸ್ತೋತ್ರ, ಅಧ್ಯಾತ್ಮ ಗೀತಾವಳಿ ; ಪ್ರಾಪಂಚಿಕ ನಡೆಯಲ್ಲಿ ತೋರಿಬರುವ, ಅಧ್ಯಾತ್ಮ ಸಾಧನೆ ಯಲ್ಲಿ ಕಾಣುವ, ಅವರವರಿಗೆ ಬರುವ ಧರ್ಮಜಿಜ್ಞಾಸೆಗಳ ಪ್ರಶ್ನೆಗಳಿಗೆ ವೇದಾಂತಕ್ರಮದ ಉತ್ತರಗಳು ; ಸ್ವತಂತ್ರ ಪುಟಗಳಾಗಿ 8 ಅಥವಾ 16 ಪುಟಗಳ ಗ್ರಂಥಭಾಗ ಅಥವಾ ಶಾಂಕರಭಾಷ್ಯ ; ಸುಭಾಷಿತ ಮಂಜರಿ, ಹಿರಿಯ ಸಂತರ ವಚನಗಳು, ಪುರಾಣ ಅಥವಾ ಪುರಾಣ ಕಥೆಗಳು ; ಅಧ್ಯಯನ-ಸಾಧನ- ಅನುಷ್ಠಾನ ಗಳಿಂದ ತಮ್ಮ ಜೀವಿತ ಕಾಲದಲ್ಲಿಯೇ ಪ್ರಾಪಂಚಿಕ ಕೋಟಲೆಗಳಿಂದ ಮುಕ್ತರಾಗಿ ಸ್ವಾನಂದದಲ್ಲಿ ಮುಳುಗಿ ಜನರನ್ನು ಉದ್ಧಾರ ಮಾಡಿದ ಹಿರಿಯ ಚೇತನರ ನಡೆ-ನುಡಿ-ಗಾಥೆ ; ಹೀಗೆ ಹಲವಾರು ಭಿನ್ನ ಭಿನ್ನರುಚಿಯ ಮುಮುಕ್ಷುಗಳಿಗೆ ಬೆಳಕು, ದಾರಿ ತೋರುವ ವೈವಿಧ್ಯತೆಯ ಲೇಖನಗಳು ಈ ಪತ್ರಿಕೆಯ ಹೆಚ್ಚಳ.

ಶ್ರೀಶ್ರೀಗಳವರ ಕಾಲದಲ್ಲಿ ಆಧ್ಯಾತ್ಮಿಕತತ್ತ್ವೋಪದೇಶಕಥೆಗಳಿಗೆ ಸ್ಥಾನವಿತ್ತು. ಅವರೇ ಅಲ್ಲದೆ, ಈ ವಿಷಯದಲ್ಲಿ ಶ್ರೀ ನಂ. ಭಾಗವತರೂ ಸಹಕಾರಿ ಯಾಗಿದ್ದರು. ಉಪಾಧ್ಯಾಯರಾಗಿ, ಕೀರ್ತನಕಾರರಾಗಿ, ಶ್ರೀ ಭಾಗವತರು ತತ್ತ್ವ ಗಳನ್ನು ತಿಳಿಸುವ ಕಥೆಗಳನ್ನು, ಸರಳವಾಗಿ ಸ್ವಾರಸ್ಯಕರ ವಾಗಿ ಬೆಳೆಸುತ್ತಿದ್ದ ಉತ್ತಮ ಕಥೆಗಾರರು. ಶ್ರೀಗಳವರೂ ನರಸಪ್ಪನವರ ಹೆಸರಿನಲ್ಲಿ ಅಥವಾ ಬೇರೆ ಬೇರೆಯಾಗಿ ಕೆಲವನ್ನು ಬರೆದರು. ಇತರರಿಂದಲೂ ಉತ್ತಮ ಕಥೆಗಳು ಬಂದವು. ಅದೇನು ಕಥೆ ಎಂದು, ಭಾಗವತವೆಂದರೆ ಅಲ್ಲೇನಿದೆ ಬರೀ ಕಥೆ ಎಂದು ತಾತ್ಸಾರದಿಂದ ಮೂಗು ಮುರಿಯುವವರು ಈ ಕಥೆಗಳನ್ನು ಓದಬೇಕು, ಕ್ರಿಸ್ತನ ಪ್ಯಾರಬಲ್ಸ್ ಶ್ರೀ ರಾಮಕೃಷ್ಣ ಪರಮಹಂಸರ ದೃಷ್ಟಾಂತಗಳು, ಇವನ್ನು (ಉಪನಿಷತ್ ಕಥೆಗಳನ್ನು ಮಾತ್ರ

ಮನ್ನಿಸುವವರು) ಆಸ್ವಾದಿಸಿ ತಿಳಿಯಬೇಕು. ಪ್ರಚಲಿತ ವಾರ್ತೆಗಳಲ್ಲಿಯೂ ವಿಶೇಷ ಅಂಶವೆಂಬಂತೆ ಸಾಮಾನ್ಯ ನಡೆಯನ್ನೂ ಉತ್ತಮ ತತ್ತ್ವ ನಿರೂಪಣೆಗೆ ತಿರುಗಿಸುವ, ಪ್ರಬಂಧ, ನೀತಿಬೋಧಕ ಶ್ರೀಶ್ರೀಲಿಖಿತ ಪುಟಗಳಿರುತ್ತಿದ್ದವು.

ಪತ್ರಿಕೆಯ ಸ್ಥೂಲ ರೂಪ, ಮಾದರಿ ಒಂದೇ ಆಗಿ ಉಳಿದಿದೆ. ಮೊದಲಿಗೆ ಸ್ತೋತ್ರ, ಅರ್ಥಸಹಿತ, ಅಥವಾ ಉಪನಿಷತ್ತು ಮುಂತಾದ ವಾಕ್ಯಗಳು, ಅದೇ ವಿಷಯದ ವಿಸ್ತರಣೆಯಾದರೂ ಸರಿ, ಉಪನಿಷತ್ತಿನ ಸಾರವನ್ನಾಗಲಿ ಒಳಗೊಂಡ 'ಈ ತಿಂಗಳ ಸಂದೇಶ' (ಸಂಪಾದಕೀಯವಲ್ಲ), ಸ್ಮೃತಿ, ಪುರಾಣ ಯಾವದಾದರೂ ಒಂದೆರಡು, ಶಂಕರನ ಪತ್ರಗಳು, ಕಾರ್ಯಾಲಯದ ಸುದ್ದಿ ಉಪಕಾರ ಸ್ಮರಣೆ (ಬಂದ ಎಲ್ಲ ಹಣದ ವಿವರ) ಇವುಗಳು ಸಾಮಾನ್ಯ.

ಎರಡು ಗಮನೀಯ ಅಂಶಗಳು ಪತ್ರಿಕೆಯ ನಿಯಮವಾಗಿದ್ದವು. ಒಂದು ಶಂಕರ ಸಪ್ತಾಹದಲ್ಲಿ, ವೇದಾಂತ ಉತ್ಸವಗಳಲ್ಲಿ ಅವರು ಅನುಮೋದಿಸಿದ್ದ ಆಕರ್ಷಣೆ, ಆಡಂಬರಗಳಿಲ್ಲದ ಹೊರಗಿನ ಸರಳತೆಯನ್ನು, ಒಳಗಿನ ಸೊಬಗನ್ನು ಸವಿದು ಮೆಚ್ಚುವವರು ಕಾರ್ಯಾಲಯದ ಮೂಲ ಉದ್ದೇಶವಾದ ಅಧ್ಯಾತ್ಮಪ್ರಸಾರಕ್ಕೆ ಸಾರ್ಥಕ್ಯವನ್ನು ನೀಡುವರು ಎಂಬುದು. ಇಲ್ಲಿಯವರೆಗೆ, ಈಗಲೂ ಕಾರ್ಯಾಲಯ ಕಂಡ ನೈಜತೆ, ಅದು ಧೋರಣೆ. ಎರಡು "ಪತ್ರಿಕೆಯನ್ನು ಓದಿಯೇ ವಾಚಕರು ತೃಪ್ತರಾಗಬೇಕೇ ಹೊರತು, ಹೊಗಳಿಕೆಯ ಪ್ರಚಾರ ಲೇಖನಗಳು, ಪ್ರಕಟಣೆಗಳಿಂದ ನಾವು ವಾಚಕರನ್ನು ಬೆರಗುಗೊಳಿಸಲು ಹಾಗೂ ಬೇಸರಗೊಳಿಸಲು ಇಷ್ಟಪಡುವು-ದಿಲ್ಲ" ಎಂಬುದು ಜುಲೈ 1975ರ ಸಂಚಿಕೆಯಲ್ಲಿ ಬಂದ ನೀತಿಯ ಘೋಷಣೆ. ಇದು ಶ್ಲಾಘ್ಯ, ಅನುಕರಣೀಯ, ವಿಶೇಷವಾಗಿ ಈ ದಿನಗಳಲ್ಲಿ ಅವಶ್ಯ. ಈ ಎರಡು ನಿಯಮಗಳು ಪತ್ರಿಕೆಯಲ್ಲಿ ಮುಂದುವರೆದಿವೆ. ಶ್ರೀ ಲ.ನ. ಮೂರ್ತಿಗಳೂ, ಸಂಪಾದಕ ಮಂಡಳಿಯಲ್ಲಿದ್ದ ಶ್ರೀ ದೇವರಾಯ ಕುಲಕರ್ಣಿಯವರೂ ಈ ಸಂಪ್ರದಾಯವನ್ನು ಪಾಲಿಸಿದರು. ಪತ್ರಿಕೆಯ ಇತರ ಸದಸ್ಯರು, ಶ್ರೀ ಎಸ್. ವಿಠಲ ಶಾಸ್ತ್ರಿಗಳು, ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳು, ಶ್ರೀ ಕೆ.ಜಿ. ಸುಬ್ರಾಯಶರ್ಮರು.

ಶ್ರೀಶ್ರೀಗಳವರ ಬದಲಿಗೆ ಬರೆಯುವ ಲೇಖನಗಳಲ್ಲಿ 'ಈ ತಿಂಗಳ ಸಂದೇಶ'ವನ್ನು 'ಅಧ್ಯಾತ್ಮಸಂದೇಶ' ಎಂದೂ, 'ಶಂಕರನ ಪತ್ರಗಳು' ಲೇಖನವನ್ನು 'ಸತ್ಯಕಾಮನ ಪತ್ರಗಳು' ಎಂಬ ಶೀರ್ಷಿಕೆಗಳಡಿ ಶ್ರೀ ಲ.ನ. ಮೂರ್ತಿಗಳು ಬರೆಯುತ್ತಿದ್ದರು. ಪತ್ರಗಳಲ್ಲಿನ ಸಮಸ್ಯೆಗಳು ಅಥವಾ ಪ್ರಶ್ನೆ, ಉತ್ತರಗಳು ಯಾರನ್ನೂ ಕುರಿತದ್ದಾಗಿರುವದಿಲ್ಲ, ಕೇವಲ ಪ್ರಾಪಂಚಿಕ ಸತ್ಯವನ್ನು ಮುಂದಿಡುವದು ಮಾತ್ರವೇ ಆಗಿದೆ. ಆಗಸ್ಟ್ 1975ರವರೆಗೆ 'ಸಂಸ್ಕೃತ ಅಭ್ಯಾಸ'ದಲ್ಲಿ ಕೆಲವು ಕಾವ್ಯಪಾಠಗಳನ್ನು

ಕೊಡಲಾಗುತ್ತಿತ್ತು. ಅಕ್ಟೋಬರ್ 1975ರಿಂದ ಇದರ ಬದಲಿಗೆ, ಚಂಪೂ ಮಟ್ಟದ ಕೆಲವು ಪಾಠಗಳನ್ನು ತಂದಿತು. (ಗದ್ಯ-ಪದ್ಯಗಳೆರಡೂ ಕೂಡಿರುವ ಕಾವ್ಯವೇ ಚಂಪೂ). ಕಥಾ ವೈಶಿಷ್ಟ್ಯ ಹಾಗೂ ಗ್ರಂಥದ ದ್ರಾಕ್ಷಾಪಾಕ (ಒಳಗೂ ಹೊರತೋರುವ ರಸವುಳ್ಳದ್ದು) ರಚನೆಯ ಮಾಧುರ್ಯದಿಂದ ಪ್ರಸಿದ್ಧವಾಗಿರುವ 'ಶ್ರೀ ಚಂಪೂ ರಾಮಾಯಣ'ದ ಆಧಾರದಿಂದ ಕೆಲವು ವಿಷಯಗಳನ್ನು 'ಸಂಸ್ಕೃತ ವಿಹಾರಃ' ಎಂಬ ಶೀರ್ಷಿಕೆಯಲ್ಲಿ ಕೊಡಲಾಯಿತು. ಇದು ನವೆಂಬರ್ 1977ರ ವರೆಗೂ ಮುಂದುವರೆಯಿತು. ಆಮೇಲೆ, ಅಧ್ಯಾತ್ಮ ವಿದ್ಯೆಗೆ ಸಂಬಂಧಿಸಿದ ವಿಚಾರಗಳ ಸಂಕ್ಷೇಪ ವಿವರಣೆಗಾಗಿ 'ಗುರು ಶಿಷ್ಯ' ಸಂವಾದವನ್ನು ಒಂದು ವರ್ಷ, ಡಿಸೆಂಬರ್ 77 ರಿಂದ 'ಸಾಮಾನ್ಯ ನೀತಿ' ಹತ್ತು ವರ್ಷಗಳು ಪ್ರಕಟವಾದುವು. ಅನಂತರ ಆ ಜಾಗದಲ್ಲಿ 'ಸುಭಾಷಿತ' ಬರತೊಡಗಿತು.

ಹೀಗೆ, ಒಂದೇ ಜಾಡನ್ನು ಹಿಡಿಯದೆ, ಏಕತಾನವಾಗದಂತೆ, ವಿಚಾರಪೂರಿತ ಲೇಖನಗಳು, ವೇದಮಂತ್ರ-ಅರ್ಥ, ಆಚರಣೆಯಲ್ಲಿರುವ ವ್ರತ-ಕಥೆಗಳ ವಿಚಾರ, ನಿತ್ಯ ಜೀವನಕ್ಕೆ ಬೇಕಾದ ನಿತ್ಯ ಕರ್ಮಗಳ ಲೇಖನ ಮಾಲೆಗಳು, ಮೂರು ಆಶ್ರಮಗಳ ವಿವರಣೆ-ಹಿನ್ನೆಲೆಯ ಉದ್ದೇಶಗಳ ಲೇಖನ ಸರಣಿ, ಗ್ರಂಥ ಪರಿಚಯ ('ವಿಮರ್ಶೆ'ಯ ಬದಲು 'ಪರಿಚಯ') ಇತ್ಯಾದಿ ಹಲವಾರು ಬಗೆಯ ಬರಹಗಳು ಬಂದವು. ಆಗಾಗ, ಒಂದರ ಬದಲಿಗೆ ಮತ್ತೊಂದು ಹೊಸ ವಿಷಯ ಎಂಬಂತೆ ಸಾಮಾನ್ಯರಿಗೆ ಉಪಯುಕ್ತವಾಗುವ ವಿಷಯಗಳನ್ನು ಪ್ರಸ್ತಾಪಿಸಿದೆ. ಇವು ಒಂದೆರಡು ವರ್ಷ ಮುಂದುವರಿದು, ಮತ್ತೊಂದಕ್ಕೆ ಜಾಗಮಾಡಿದೆ. ವಿಶೇಷವಾಗಿ 1990, 1991ರ ಸಂಚಿಕೆಗಳಲ್ಲಿ ಸುಲಭಸಾಧನೆಯಾದರೂ ಹೆಚ್ಚಿನ ಫಲ ನೀಡುವ ನಾಮಸ್ಮರಣೆಯ ಮೇಲಿನ, ಶ್ರೀ ಗೋಂದಾವಳೀ ಮಹಾರಾಜರ ಪ್ರವಚನಗಳು ಬಂದಿವೆ. ಹಿಂದಿನ ಸಂಚಿಕೆಗಳಿಂದ ಆಯ್ದ ಶ್ರೀಶ್ರೀಗಳವರ ಲೇಖನಗಳಿಗೆ (ಇವೇ ಹೆಚ್ಚಿನ ವೈವಿಧ್ಯಭರಿತವಾಗಿವೆ) ಯಾವಾಗಲೂ ಸ್ಥಳವಿದೆ. ಒಂದು ಲೇಖನದ ವಿಷಯವನ್ನು ಮತ್ತೊಂದು ದೃಷ್ಟಿಕೋನದಿಂದ ಚಿಂತನೆ ಮಾಡಿ, ವಿಮರ್ಶೆಯನ್ನು ವಂತೆ ದೋಷಗಳೆಣಿಸುವದನ್ನು ಬರೆದವರ ಲೇಖನಗಳನ್ನು ಮತ್ತೊಂದು ಸಂಚಿಕೆಯಲ್ಲಿ, ಇದಕ್ಕೆ ಮೊದಲಿನ ಲೇಖಕರ ಉತ್ತರ ಮತ್ತೊಂದು ಸಂಚಿಕೆಯಲ್ಲಿ, ಇವನ್ನು 'ವಾದಭೂಮಿ'ಯೆಂಬ ಶೀರ್ಷಿಕೆಯಲ್ಲಿ ತರುವ ಪ್ರಯತ್ನ ಮಾಡಿತು. ಶ್ರೀ ಎನ್. ಚನ್ನಕೇಶವಯ್ಯನವರ ಲೇಖನಕ್ಕೆ ಶ್ರೀ ವಿಠಲಶಾಸ್ತ್ರಿಗಳ ಬೇರೊಂದು ಅಭಿಪ್ರಾಯ, ಲೇಖಕರ ಉತ್ತರಗಳು ಬಂದವು. ಇದೇ ಮೊದಲ ಪ್ರಯತ್ನಕ್ಕೇ ಅದನ್ನು ನಿಲ್ಲಿಸ ಬೇಕಾಯಿತು. ಏಕೆಂದರೆ ಇವುಗಳಲ್ಲಿ ವಾದ ವಿವಾದಗಳ ಸುಳಿಕಂಡಿತು. ಈ ಹಿಂದೆ

ಸಪ್ತಾಹವೊಂದರಲ್ಲಿ ಶ್ರೀ ಹೆಚ್. ಅನಂತಮೂರ್ತಿ ಶಾಸ್ತ್ರಿಗಳು 'ರಾಸಪಂಚಾಧ್ಯಾಯಿ' ವಿಷಯ ಪ್ರಸ್ತಾಪಿಸಿದಾಗ, ಶ್ರೀ ಚನ್ನಕೇಶವಯ್ಯನವರು 'ರಾಸಪಂಚಾಧ್ಯಾಯಿ ವಿಮರ್ಶೆ'ಯನ್ನು ಬರೆದರು ; ಇವೆರಡರ ಬಗ್ಗೆಯೂ ಹೆಚ್ಚಿನ ಬೆಳಕು ಚೆಲ್ಲುವ ಲೇಖನಗಳಿಗೆ ಸ್ವಾಗತವಿದೆ ಎಂದಾಗಲೂ, ಯಾವದೇ ಬರದಿದ್ದಾಗ, ಕೆಲವು ತಿಂಗಳ ನಂತರ ಶ್ರೀಶ್ರೀಗಳೇ ಎರಡೂ ಲೇಖನಗಳನ್ನು ಕುರಿತಂತೆ ಅಭಿಪ್ರಾಯ ಬರೆದಿದ್ದರು. (ಪತ್ರಿಕೆಯಲ್ಲಿ ಹೀಗೆ ಮೂರು ಲೇಖನಗಳು ಬಂದಿದ್ದವು). ಇಂತಹ (ವಾದಭೂಮಿ) ಪ್ರಯತ್ನಗಳು ಯಶಸ್ವಿಯಾಗಲಾರವು, ವಿದ್ವಾಂಸರು ಗಮನ ಕೊಡುವದಿಲ್ಲ, ಮತ್ತೆ ವೃಥಾ ಬಾಲಬೆಳೆದು ಪತ್ರಿಕೆಯ ಬೆಳವಣಿಗೆಯನ್ನೇ ಮೊಟಕು ಮಾಡಬಹುದೆಂದು ಶ್ರೀಶ್ರೀಗಳು ಯೋಚಿಸಿರಬಹುದು. ಆದರಿಂದ ಈ ತೆರನ ಪ್ರಯತ್ನಗಳು ಮತ್ತೆ, ಆಗಲೂ, ಮುಂದುವರೆಯಲಿಲ್ಲ.

ವೈವಿಧ್ಯತೆಯ ಬಗ್ಗೆ 1992 ಫೆಬ್ರವರಿ ಸಂಚಿಕೆಯಲ್ಲಿ ಲೇಖನಗಳಲ್ಲಿ ಮಾರ್ಪಾಡು ಅಗತ್ಯ, ಪ್ರಸಿದ್ಧರಿಂದ ಲೇಖನಗಳನ್ನು ತರಿಸಿ ಎಂಬ ಸಲಹೆಗಳಿಗೆ ಉತ್ತರವಾಗಿ ಸಂಪಾದಕರು ಬರೆದ ಕೆಲವು ಮಾತುಗಳು ಗಮನೀಯ : "ವಾಚಕರು ಲೇಖನ ವೈವಿಧ್ಯಕ್ಕಿಂತ ಗುಣಮಟ್ಟದ ಕಡೆ ಹೆಚ್ಚು ಗಮನವನ್ನು ನೀಡಬೇಕಾಗಿ ಪ್ರಾರ್ಥನೆ. ಎಲ್ಲಾ ಲೇಖನಗಳಲ್ಲಿಯೂ ಶಾಂಕರ ಪ್ರಸ್ಥಾನತ್ರಯ ಭಾಷ್ಯಗಳ ಅಭಿಪ್ರಾಯಗಳನ್ನೇ *("ಅಧ್ಯಾತ್ಮ ತತ್ತ್ವಗಳಿರುವ" ಎಂಬುದು ಶ್ರೀಶ್ರೀಗಳ ಅಭಿಪ್ರಾಯಕ್ಕೆ ಹೆಚ್ಚು ಸಮೀಪ)* ಪ್ರತಿಬಿಂಬಿಸಬೇಕೆಂದು ಸಂಸ್ಥಾಪಕರ ಆದೇಶವಿದೆ. ಕೆಲವರಿಗೆ ಇಷ್ಟವಿಲ್ಲದ ವೈದಿಕ ಸಾಹಿತ್ಯ ವಿವರಗಳುಳ್ಳ ಲೇಖನಗಳಲ್ಲಿಯೂ ಅಧ್ಯಾತ್ಮ ಸಾಧನಗಳ ವಿಚಾರಗಳನ್ನು ಅಳವಡಿಸಿರುತ್ತೇವೆ. ವಾಚಕರು ಸಮಬುದ್ಧಿಯಿಂದ ಓದಿ ಗ್ರಾಹ್ಯವಾದ ವಿಚಾರಗಳನ್ನು ಪರಿಗ್ರಹಿಸಬೇಕಾಗಿ ಪ್ರಾರ್ಥನೆ". ಉತ್ತಮ ವಿದ್ವಾಂಸರುಗಳ ಲೇಖನಗಳಿಗೆ ಗೌರವಪೂರ್ವಕವಾದ ಸ್ವಾಗತವಿದ್ದರೂ, ಅವುಗಳನ್ನು ದೊರಕಿಸುವದರಲ್ಲಿ ಅಡಚಣೆಗಳಿವೆ ಎಂಬುದೂ ಒಂದು ಅಂಶ. ಜೊತೆಗೆ, ಗಮನಿಸುವ ಅಂಶವೆಂದರೆ ಅನ್ಯಮತಗಳ ಸಾರವನ್ನೂ ಕೆಲವಾರು ಕಡೆ ಹಾಕುತ್ತಾ ಬಂದಿದೆ. ಒಟ್ಟಿನಲ್ಲಿ ಎಲ್ಲ ಮತಗಳ ಮೂಲತತ್ತ್ವಗಳು ಮತ್ತು ಧರ್ಮದ ತಿರುಳಲ್ಲಿ ಅನೇಕ ಸಾಮ್ಯವನ್ನು ತೋರಿಸಿಕೊಡುವದೇ ಉದ್ದೇಶ, ಇದು 2004-2005ರ ವರೆಗೆ ಬಂದಿತು.

1982ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಮೂರು ಸಂಚಿಕೆಗಳಲ್ಲಿ ಶ್ರೀ ದೇವರಾಯ ಕುಲಕರ್ಣಿಗಳ 'ಫ್ರಾನ್ಸಿನಲ್ಲಿ ವೇದಾಂತ ವಿಚಾರ ಪ್ರವಾಸ' - ವಿಶೇಷ ಲೇಖನಗಳು ಬಂದವು. ಶ್ರೀ ಯಾನ್ ಮತ್ತು ಶ್ರೀಮತಿ ಅನ್ನಮೇರಿ ದಂಪತಿಗಳಿಗೆ ನಡೆಸುವ ಶಾಂಕರ ಭಾಷ್ಯಪಾಠಗಳನ್ನು, ಅಲ್ಲಿ ಭೇಟಿಯಾದವರ ವಿವರ, ವೇದಾಂತ

ಪ್ರಚಾರ ಮತ್ತು ಅಲ್ಲಿನ ಅನುಭವಗಳನ್ನು, ಓದಲು ಕುತೂಹಲಕರವಾಗಿಯೂ ಕಣ್ಣು ತೆಗೆಸುವ ವಿಚಾರಗಳನ್ನೂ ಈ ಲೇಖನಗಳಲ್ಲಿ ಅಳವಡಿಸಿದ್ದಾರೆ. ಯಾನ್ ದಂಪತಿಗಳು ಪ್ರತಿದಿನವೂ ಎರಡು ಪಾಠಗಳನ್ನು (3+3 ಗಂಟೆ ಕಾಲ) ಶ್ರದ್ಧೆಯಿಂದ ಕೇಳಿ, ವ್ಯವಸ್ಥಿತವಾದ ಹತ್ತಾರು ಫೈಲ್‌ಗಳಲ್ಲಿ ಗುರುತು ಹಾಕಿಕೊಳ್ಳುತ್ತಿದ್ದರು, ವೇದಾಂತ ಶಾಸ್ತ್ರ ವ್ಯಾಸಂಗಶೀಲರಿಗೆ ಮಾದರಿಯಾಗಿದ್ದರು, ಪ್ರತಿವಿಷಯವನ್ನೂ ಕೂಲಂಕಷವಾಗಿ ವಿಚಾರಿಸಿ, ನಿರ್ಣಯಿಸುತ್ತಿದ್ದರು ಎಂದು ಶ್ರೀ ದೇವರಾಯರು ಅಭಿಪ್ರಾಯಪಟ್ಟಿದ್ದಾರೆ. ಈ ಕಾರಣಕ್ಕಾಗಿಯೇ ಈ ವಿಷಯವನ್ನು ಇಲ್ಲಿ ಹಾಕಿದೆ.

ಸಂಶೋಧನೆ, ಸುದ್ದಿ ಸೂರುಗಳು ಕಥೆಗಳಾಗಿ ಹೆಚ್ಚು ಬರಲಿಲ್ಲ. ಕಾರಣ, ಸ್ತೋತ್ರ, ನಾಮಪಾರಾಯಣ ಮುಂತಾದ ಉಪಯುಕ್ತ, ನೇರಾಗಿ ಅಧ್ಯಾತ್ಮಸಾಧನೆಗೆ ಕೊಂಡೊಯ್ಯುವ ಲೇಖನಗಳಿಂದ ತುಂಬಿರುವಾಗ, ಅವುಗಳಿಗೆ ಪುಟಗಳು ಸಾಲದಾಗಿವೆ. ಮುಂದೆ, ಮತ್ತಷ್ಟು ಸಂಪ್ರದಾಯಗಳ, ಹಿಂದಿನ ಜಾಡಿನ ಲೇಖನ ಗಳನ್ನು ಪ್ರಕಟಿಸಬಹುದು.

ಈ ಮಧ್ಯೆ 2002-03ರ ಸಾಲಿನಲ್ಲಿ ಅಂಚೆ ರಿಯಾಯಿತಿಗಾಗಿ, ಪತ್ರಿಕೆಗಳಲ್ಲಿ ಶೇ. 50ನ್ನು ಪ್ರಚಲಿತ ವಾರ್ತೆಗಳಿಗೆ ಮೀಸಲಾಗಿಡಬೇಕೆಂಬ ನಿಯಮವೊಂದನ್ನು ಅಂಚೆಯ ದೆಹಲಿಯ ಹಿರಿಯರು ತಂದಿದ್ದರು. ಆದಕ್ಕೆ ಕೆಲವಾರು ಆಯ್ದ ವಾರ್ತೆಗಳಿಗೆ ಅಧ್ಯಾತ್ಮದ ತಿರುವನ್ನು, ವೇದಾಂತದ ಮಾರ್ಗವನ್ನು ತಂದು ತಿರುಚಿ ಬರೆಯುವ ಸಾಧನೆ ಬೇಕಾಗುತ್ತಿತ್ತು. (ಇಂತಹ ಕೆಲವು ಬಿಡಿ ಲೇಖನಗಳನ್ನು ಅಧ್ಯಾತ್ಮ ತತ್ತ್ವ ವಿಚಾರಗಳ ಪ್ರಸಾರಕ್ಕಾಗಿ ಶ್ರೀಶ್ರೀಗಳವರು, ಅನಂತರ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳೂ ಸಹ ಪತ್ರಿಕೆಯಲ್ಲಿ ಬರೆದಿದ್ದರು.) ಆದರೆ ಅರ್ಧಭಾಗದಲ್ಲಿ ಇಂತಹ ಲೇಖನಗಳನ್ನು ತುಂಬಿದರೆ, ವಿಶದವಾಗಿ ಬೇರೆ ತರಹದ ಲೇಖನಗಳನ್ನು, ಗ್ರಂಥಭಾಗಗಳನ್ನು ಪ್ರಕಟಿಸುವ ಅವಕಾಶ ಇರುತ್ತಿರಲಿಲ್ಲ. ಈ ವಿಷಯದಲ್ಲಿ ಸಾಕಷ್ಟು ಪತ್ರಗಳನ್ನು ಬರೆದು, ಇಲ್ಲಿಯ ಹಿರಿಯ ಅಧಿಕಾರಿಗಳೊಡನೆ ಪತ್ರಿಕೆಯ ಪರವಾದ ಕೆಲವು ವಿವರಗಳನ್ನೂ ವಾದಗಳನ್ನು ಮುಂದಿಡಲಾಗಿತ್ತು. ಪುಣ್ಯವಶಾತ್, ಈ ನಿಯಮದ ಹೇರಿಕೆ ಸುಳಿಗಾಳಿ ಎಬ್ಬಿಸಿದ ಮೇಲೆ, ಕೆಲ ತಿಂಗಳ ಮೇಲೆ ಬಂದ ಹಾಗೆಯೇ ತಣ್ಣಗಾಯಿತು.

ಪತ್ರಿಕೆಯ ಪುಟಗಳನ್ನೆಲ್ಲಾ ಲೇಖನಗಳಿಗೇ ವಿನಿಯೋಗಿಸಬೇಕೆಂದು ಕೆಲವು ವಾಚಕರಿಂದ ಬಂದ ಕೇಳಿಕೆಯಂತೆ, ಮತ್ತೆ ಕೆಲವರು ಕಾಣಿಕೆಗಳ ವಿವರ ಬೇಕೆಂದು ಅಪೇಕ್ಷಿಸಿದರೆಂದು, ಕಾರ್ಯಾಲಯದ ಸುದ್ದಿ (ಉಪಕಾರ ಸ್ಮರಣೆಗಳು ಕಾಣಿಕೆ, 25 ರೂ.ಗಿಂತ ಹೆಚ್ಚಾಗಿದ್ದರೆ ಹೆಸರನ್ನು ಹಾಕುವದು, ಕಡಿಮೆ ಇದ್ದರೆ ಒಟ್ಟಿನಲ್ಲಿ ಅಂತಹ

ಕಾಣಿಕೆಯನ್ನು ಸೂಚಿಸುವದು) ಇವುಗಳು ಮರೆಹಾಳೆಯ (ರ‍್ಯಾಪರ್) ಒಳಭಾಗದ ಪುಟಗಳಲ್ಲಿ ಡಿಸೆಂಬರ್ 74ರಿಂದಲೇ ಬರತೊಡಗಿದವು.

ಹೀಗೆ ಅನೇಕ ರೀತಿಯಲ್ಲಿ, ಸಂಪಾದಕರು ಪತ್ರಿಕೆಯ ನೀತಿ, ಸಂಪ್ರದಾಯ ಗಳನ್ನನುಸರಿಸಿಯೂ, ಅದರ ಚೌಕಟ್ಟಿನಲ್ಲಿ ಓದುಗರಿಂದ ಬಂದ ಸಲಹೆ ಕೋರಿಕೆಗಳಲ್ಲಿ ನಡೆಸಬಹುದಾದವುಗಳಿಗೆ ಸ್ಪಂದಿಸುತ್ತಲೂ ಪತ್ರಿಕೆಯನ್ನು ಚೆನ್ನಾಗಿ ಮೊದಲಿನಂತೆಯೇ ಮುಂದೆ ತಂದರು. ಕಾಲೋಚಿತವಾದ ಹೊಸತನ್ನೂ ಸೇರಿಸಿದರು, ಪತ್ರಿಕೆಯ ಹಿಂದಿನ ಸ್ವರೂಪ ಬದಲಾಗದಂತೆ. ಈ ಸಮಯದಲ್ಲಿ 1980ರಲ್ಲಿ ಕನ್ನಡ ಪತ್ರಿಕೋದ್ಯಮ ವರ್ಷಾಚರಣೆಯ ಸಂದರ್ಭದಲ್ಲಿ ಜಿಲ್ಲಾ ಹಿರಿಯ ಪತ್ರಕರ್ತರೆಂದು ಅಧ್ಯಾತ್ಮಪ್ರಕಾಶ ಪತ್ರಿಕೆಯ ಸಂಪಾದಕ ಶ್ರೀ ಲ.ನ. ಮೂರ್ತಿಗಳನ್ನು ಸನ್ಮಾನ ಮಾಡಿದುದು ತುಂಬಾ ಉಚಿತವೂ ಯೋಗ್ಯವೂ ಆಗಿತ್ತು.

ಶ್ರೀಶ್ರೀಗಳವರ ಕಾಲದಿಂದ ಈವರೆಗೂ, ಅದೇ ರೀತಿಯ ಉತ್ತಮ ಲೇಖನಗಳನ್ನೊದಗಿಸಿ, ಒಂದೇ ಮಟ್ಟವನ್ನು ಕಾಯ್ದುಕೊಂಡು ಬಂದ ಯಶಸ್ಸು ಮುಖ್ಯವಾಗಿ ಶ್ರೀ ಲ.ನ. ಮೂರ್ತಿಗಳದ್ದು, ಈಗ ಹೊಸ ಚೇತನವನ್ನೊದಗಿಸಿರುವ ಶ್ರೀ ಚಂದ್ರಮೌಳಿ ಅವಧಾನಿಗಳದ್ದು. ಬಹುಜನರು ಉಪಯುಕ್ತ ಅಧ್ಯಾತ್ಮ ವಿಷಯ ಗಳನ್ನು ತಿಳಿಸುವ ಪತ್ರಿಕೆ ಎಂದು ಒಪ್ಪಿರುತ್ತಾರೆ. ಹಾಗಾಗಿ, 70 ವರ್ಷಗಳ ಕಾಲ (ಮಧ್ಯದ 7 ವರ್ಷ ನಿಲುಗಡೆಯನ್ನು ಬಿಟ್ಟಂತೆ) ಒಂದೇ ಸಮನೆ ವಿಶಿಷ್ಟ ರೀತಿಯಲ್ಲಿ ನಡೆದು ಬಂದಿದೆ. 1990ರ ಜನವರಿಯಲ್ಲಿ ನಡೆದ ಕರ್ನಾಟಕ ಪತ್ರಿಕಾ ಅಕಾಡೆಮಿಯ ವಿಶೇಷೋತ್ಸವದಲ್ಲಿ ಈ ಪತ್ರಿಕೆಗೆ ಪುರಸ್ಕಾರ ನೀಡಿ ಸನ್ಮಾನ ಮಾಡಿದ್ದುದು ಸಂತೋಷದ ಸಂಗತಿ.

ಶ್ರೀ ಚಂದ್ರಮೌಳಿ ಅವಧಾನಿಗಳ ಆಗಮನದಿಂದ, ವಯೋಮಾನದಿಂದ ಶಕ್ತಿಗುಂದುತ್ತಿದ್ದ ಶ್ರೀ ಲ.ನ. ಮೂರ್ತಿಗಳ ಅನೇಕ ಕೆಲಸಗಳನ್ನು ಮುಂದುವರೆಸಲು ಸಾಧ್ಯವಾಯಿತು. ಸಹಜವಾಗಿಯೇ ಪತ್ರಿಕೆಯ ಲೇಖನಗಳಲ್ಲೂ ಕೆಲವು ಬದಲಾವಣೆಗಳಾದುವು. ಮುಂದೆ ಹೆಚ್ಚಾಗಿ ಬರವಣಿಗೆಯನ್ನು ನಡೆಸಲಾರದ ಶ್ರೀ ಲ.ನ. ಮೂರ್ತಿಗಳ 'ಸತ್ಯಕಾಮನ ಪತ್ರಗಳು' ಸೆಪ್ಟೆಂಬರ್ 2003ರ ಸಂಚಿಕೆಗೇ ಕೊನೆಯಾಯಿತು. ಕ್ರಮೇಣ 'ಸುಭಾಷಿತ ಮಂಜರಿ'ಯೂ ನಿಂತಿದೆ. 'ಗ್ರಂಥ ಪರಿಚಯ' ಪ್ರತಿ ತಿಂಗಳ ಬದಲು ಆಗಾಗ, ಒಳ್ಳೆಯ ಪುಸ್ತಕಗಳು ಬಂದಾಗ, ಕಾಣಿಸಿಕೊಳ್ಳುತ್ತದೆ. ಉತ್ತಮ ವೇದಾಂತಸಾರ ಲೇಖನಗಳು ಮಾಲಿಕೆಯಾಗಿ ನಾಲ್ಕಾರು ತಿಂಗಳು ಕಾಲ ಬರುತ್ತವೆ. ಗ್ರಂಥಭಾಗಗಳ 'ಸ್ವತಂತ್ರ ಪುಟಗಳ ಬದಲು ಬಿಡಿ

ಲೇಖನಗಳು, ಲೇಖನ ಸಂಖ್ಯೆ, ಪುಟಗಳ ಸಂಖ್ಯೆ (28 ರಿಂದ 30) ಏರಿದೆ. ಆದರೆ ಒಟ್ಟಿನಲ್ಲಿ ನೋಡಿದಾಗ ಪತ್ರಿಕೆಯ ಮೂಲ ಸ್ವರೂಪ, ರುಚಿ ಒಂದೇ ಸಮನಾಗಿ ಮುಂದುವರೆದಿದೆ. 2003 ಡಿಸೆಂಬರ್‌ನಲ್ಲಿ ಸಮಾಪ್ತವಾದ ಶ್ರೀ ವಿಷ್ಣುಸಹಸ್ರನಾಮ ಸ್ತೋತ್ರ ಮಂಜರಿಯೇ ಸ್ವತಂತ್ರ ಪುಟಗಳ ಕೊನೆಯ ಭಾಗ. ಮೊದಲಿಗೆ, ಶ್ರೀಶ್ರೀಗಳವರು ಬರೆದು ಸಿದ್ಧಪಡಿಸಿರುವ ಗ್ರಂಥವನ್ನು ಹೀಗೆ ಬಿಡಿಭಾಗಗಳಾಗಿ ಸ್ವತಂತ್ರ ಪುಟಗಳಲ್ಲಿ ಅಚ್ಚು ಮಾಡಿ ಅದು ಮುಗಿದ ಮೇಲೆ ಮುನ್ನುಡಿ ಪರಿಶಿಷ್ಟ ಅಕ್ಷರಾನುಕ್ರಮಣಿಕೆಗಳನ್ನು, ಮುಖಪುಟವನ್ನೂ ಮುದ್ರಣ ಮಾಡಿ ಸೇರಿಸುತ್ತಿದ್ದರು. ಇದರಿಂದ ಈ ಸ್ವತಂತ್ರ ಪುಟಗಳನ್ನೇ ಬೇರೆ ಮಾಡಿ ಒಟ್ಟುಗೂಡಿಸಿ ಸೇರಿಸಿದರೆ ಆ ಗ್ರಂಥವಿಡೀ ಕೈಗೆ ಬರುತ್ತಿತ್ತು. ಈಗ ಹೊಸ ಪುಸ್ತಕಗಳು ಇಲ್ಲದಿದ್ದರೂ, ಉಳಿದ ಲೇಖನಗಳಿಗೆ, ಈ ಪುಟಗಳು ವಿನಿಯೋಗವಾಗುತ್ತಿವೆ. ಅದರ ಜೊತೆಗೆ ಮತ್ತೊಂದು ಕಾರಣವೆಂದರೆ, ಸ್ವತಂತ್ರ ಪುಟಗಳನ್ನು ಶೇಖರಿಸಿ ಪುಸ್ತಕ ಮಾಡಿಕೊಳ್ಳುವುದರ ಬದಲಿಗೆ ಈಗ ಗ್ರಂಥಗಳನ್ನೇ ಕೊಳ್ಳುತ್ತಾರೆ. ಆದುದರಿಂದ ಸಾಧ್ಯವಾದಾಗಲೆಲ್ಲ ಗ್ರಂಥ ಅಚ್ಚಾದ ಮೇಲೆ (ಅಂದರೆ ಈಗಿನವು ಮರು ಮುದ್ರಣಗಳು) ಅದರ ಸ್ಥೂಲ ಪರಿಚಯವನ್ನು 'ಗ್ರಂಥ ಪರಿಚಯ' ಭಾಗದಲ್ಲಿ ಮಾಡಿಕೊಡಲಾಗುತ್ತಿದೆ.

ಶ್ರೀಶ್ರೀಗಳವರ ವಿಚಾರ, ಅವರ ಮಹೋನ್ನತ ಕೊಡುಗೆ (ಅದರಲ್ಲೂ ಕನ್ನಡ ಸಾಹಿತ್ಯ ಮತ್ತು ಪದಭಂಡಾರಗಳ ಬಳಕೆಗೆ)ಗಳನ್ನು ಕುರಿತ ಲೇಖನಗಳೂ, ಕೆಲವು ಸಂತರ ಜೀವನ ಚರಿತ್ರೆಗಳೂ (ರಮಣ ಮಹರ್ಷಿಗಳ ಜೀವನ ಚರಿತ್ರೆ ವಿಸ್ತಾರವಾಗಿ ಬಂದು, ಅನಂತರ ಪುಸ್ತಕವಾಗಿದೆ) ಆಗಾಗ ಬರುತ್ತವೆ. ಮಕ್ಕಳ ಪುಟ 2004-2005ರಲ್ಲಿ ಪ್ರತಿ ತಿಂಗಳೂ ಬರುತ್ತಿತ್ತು. (ಇವೆಲ್ಲ ಸಂಪಾದಕ ಮಂಡಳಿಯ ಡಾ. ಎ.ಎಸ್. ವೇಣುಗೋಪಾಲರಾಯರ ಕೊಡುಗೆ) ಅಧ್ಯಾತ್ಮ ಸಂದೇಶ, ಮೊದಲ ಪುಟದ ಸ್ತೋತ್ರ ಮಾತ್ರ ಎಂದಿನಂತೆಯೇ ಸ್ಥಿರ ಶೀರ್ಷಿಕೆಗಳಾಗಿ ಉಳಿದಿವೆ.

ಪತ್ರಿಕೆಯಲ್ಲಿ ಮೊದಲಿನಿಂದಲೂ ಶ್ರೀಶ್ರೀಗಳವರು ಸ್ವತಃ ಬರೆಯುತ್ತಿದ್ದ ಲೇಖನಗಳೇ ಹೆಚ್ಚಾಗಿರುತ್ತಿದ್ದವು. ಈಗಲೂ, ಎಷ್ಟೇ ಇತರರ ಲೇಖನಗಳನ್ನು ಹಾಕಿದರೂ ಶ್ರೀಶ್ರೀಗಳವರ ಲೇಖನಗಳಿಗೆ ಒಗ್ಗಿಕೊಂಡವರ ಸಮಾಧಾನಕ್ಕಾಗಿ ಅವರ ಮೂರು ನಾಲ್ಕು ಲೇಖನಗಳು ಬರುತ್ತಿವೆ. ಅದರಲ್ಲಿ ಮುಖ್ಯಾಂಶವೆಂದರೆ ಅನುಭಾವಿಗಳಾದ ಶ್ರೇಷ್ಠರಾದ ಅವರ ಲೇಖನಗಳು ಒಂದು ವಿಶೇಷವಾದ ತೃಪ್ತಿಯನ್ನು ಕೊಡುವಂತಿವೆ ಎಂಬುದೇ ಅವುಗಳ ಆಕರ್ಷಣೆ – ಈ ರೀತಿ ಹಳೆಯ ಬರಹಗಳನ್ನು ಹಾಕಿದಾಗ ಈ ಎರಡು ಕಾಲಗಳಿಗೂ ಕೊಂಡಿಯನ್ನು ಜೋಡಿಸಿದಂತಹ ಸೌಲಭ್ಯವಿರುತ್ತದೆ. ಈ ಕಾರಣದಿಂದಲೇ ಶ್ರೀ ಹೊಸಕೆರೆ ಚಿದಂಬರಯ್ಯ, ಶ್ರೀ ಕೆ.ಎ.

ಕೃಷ್ಣಸ್ವಾಮಿ ಅಯ್ಯರಂಥವರ ಅಪರೂಪದ ಲೇಖನಗಳನ್ನು ಹಾಕುತ್ತಿದೆ. ವಾರ್ತಿಕ ಭಾಷ್ಯ ಸರಣಿಯಾಗಿ ಮುಂದುವರೆಯುತ್ತಿದೆ. ಯಾವದೇ ರೂಪದಲ್ಲಿ ಬಂದರೂ ಚಿಕ್ಕ ಚೊಕ್ಕ ಉತ್ತಮ ಲೇಖನಗಳ ಮೂಲಕ ಅಧ್ಯಾತ್ಮ ಸಂದೇಶ ಪ್ರತಿಪುಟದಲ್ಲೂ ಹರಿದು ಬರುತ್ತಿದೆ. ಹಾಗೆಯೇ ಪತ್ರಿಕೆಯ ಗ್ರಾಹಕರಾದರೂ ಚಂದಾ ಹೆಚ್ಚುವರಿಯ ಪ್ರಾರ್ಥನೆಗಳನ್ನು ಮನ್ನಣೆ ಮಾಡಿ, ಬೇಗನೆ ಕಳಿಸಿಕೊಡುತ್ತಿದ್ದಾರೆ. ಇವೆಲ್ಲ ಪತ್ರಿಕೆಯ ಬಗ್ಗೆ ಕಾರ್ಯಾಲಯಕ್ಕೊಂದು ಸಮಾಧಾನ.

ಏನೇ ಆದರೂ ಪತ್ರಿಕೆಗೆ ಆರ್ಥಿಕ ಆತಂಕವಿರದ ಸಮಯವೇ ಇಲ್ಲ. ಹಾಗೆಯೇ, ಕಟ್ಟಡ, ಗ್ರಂಥ ಪ್ರಕಟಣೆ, ವಿದ್ಯಾಲಯ ಯಾವದೇ ಒಂದು ಕಾರ್ಯ ವಾದರೂ ಪ್ರತಿಸಲವೂ ಪತ್ರಿಕೆಯಲ್ಲಿ ಧನಸಹಾಯದ ಬೇಡಿಕೆ ಇದ್ದೂ ಇರುತ್ತದೆ. ಹೀಗೆ ಇದೊಂದು ಯಾಚನಾ ಸಂಸ್ಥೆ ಎಂದು ಕುಚೋದ್ಯಕ್ಕಾದರೂ ಕೆಲವರಿಗೆ ಅನಿಸದೆ ಇರದು. ಅದು ನಿಜವೇ, ಏಕೆಂದರೆ ಅದೇ ಶ್ರೀಶ್ರೀಗಳವರ ವಿಚಾರವೂ ಹೌದು. ಹೆಚ್ಚಿನ ಹಣ ಕೂಡಿಟ್ಟು, ಇರುವೆ, ನೊಣ ಮುತ್ತುವದರ ಬದಲು, ಅದರಿಂದ ನಷ್ಟವಾಗು ವದರ ಬದಲು, ಆಗಾಗ ಬೇಕಾದ ದ್ರವ್ಯ ಸಂಪಾದನೆಯ ರೀತಿಯೇ ಅದರ ಗಟ್ಟಿ ಜೀವಾಳ ಎಂಬುದು ಶ್ರೀಗಳವರ ಯೋಚನೆ. ಅದಕ್ಕಾಗಿ ಅಭಿಮಾನಿಗಳು, ಭಕ್ತರು ಬೇಸರಿಸಬಾರದು. ಇದರಲ್ಲಿ ಎರಡು ಮುಖ್ಯಾಂಶಗಳಿವೆ - ಒಂದು, ಏನನ್ನಾದರೂ ದಾನಮಾಡಬೇಕು, ಸಹಾಯ ಸಲ್ಲಿಸಬೇಕು ಎನ್ನುವವರಿಗೆ ಸತ್ಕಾರ್ಯಕ್ಕೆ ದಾನ ಮಾಡುವ ಅವಕಾಶ, ಹಾಗೆ ಒಮ್ಮೆ ತಪ್ಪಿದರೆ ಮತ್ತೊಂದು ಹೊಸ ಅವಕಾಶ ಅವರಿಗೆ, ಎರಡು, ಕಾರ್ಯಾಲಯವನ್ನು ಎಷ್ಟರ ಮಟ್ಟಿಗೆ ಅಭಿಮಾನಿ ಮಹಾಜನರು ನಡೆಸುತ್ತಾರೆ, ಹೇಗೆ ಅವರು ಕಾರ್ಯಾಲಯಕ್ಕೆ ಊರುಗೋಲಾಗಿದ್ದಾರೆ ಎನ್ನುವದು. ಅವರನ್ನು ಪ್ರಾರ್ಥಿಸುವ ಕೈಪತ್ರವೂ ಸಹ ಅವರದೇ ಕೊಡುಗೆಯಿಂದ. ಎಂಬುದು ಕಾರ್ಯಾಲಯಕ್ಕಂತೂ ತುಂಬ ಸಂತೋಷದ ಮಾತು.

ಚಂದಾ ಪ್ರಾರ್ಥನೆಗಳಿಂದ ಭಿನ್ನವಾದುದು, ಆಗಾಗ ಶ್ರೀಗಳು ಪ್ರಕಟಿಸುತ್ತಿದ್ದ ಒಂದು ಪುಟ - 'ಅಧ್ಯಾತ್ಮ ಪ್ರಕಾಶಕ್ಕೆ ತಾವೇನು ಸಹಾಯ ಮಾಡಬಹುದು' - ಇದಿಷ್ಟರಲ್ಲೇ ಅನೇಕ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸಿ, ಗೌರವದಿಂದ ಕಾರ್ಯಾ ಲಯಕ್ಕೇನು ಬೇಕು ಎಂಬುದರ ಸೂಚನೆ. ಅಂಥದ್ದೊಂದು ಇಲ್ಲಿದೆ :

'ಅಧ್ಯಾತ್ಮ ಪ್ರಕಾಶಕ್ಕೆ ನಾವು ಹೇಗೆ ಸಹಾಯಮಾಡಬಹುದು ?' ಎಂಬ ಪ್ರಶ್ನೆಯಿಂದೊಡಗೂಡಿದ ಪತ್ರಗಳು ನನ್ನಲ್ಲಿಗೆ ಆಗಾಗ್ಗೆ ಬರುತ್ತಿವೆ. ಇದಕ್ಕೆ ನನ್ನ ಉತ್ತರವೇನೆಂದರೆ ;

*1. ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ಬರುವ ಲೇಖನಗಳನ್ನೂ ಹೊಸ ವರ್ಷದ ಕಾಣಿಕೆಯ ಪುಸ್ತಕಗಳನ್ನು ಗ್ರಂಥಗಳನ್ನೂ ಮನಮುಟ್ಟಿ ಓದಬೇಕು. ಅವುಗಳಲ್ಲಿರುವ ಅಭಿಪ್ರಾಯವನ್ನು ಮನನ ಮಾಡಿಕೊಂಡು ಅನುಭವಕ್ಕೆ ಅಳವಡಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಯಾವ ಬಗೆಯ ಲೇಖನಗಳಾದರೂ ಪತ್ರಿಕೆಯಲ್ಲಿರಬೇಕೆಂದು ತಮಗೆ ತೋಚಿದರೆ ಆ ಬಗ್ಗೆ ಸಂಪಾದಕರಿಗೆ ಸೂಚನೆ ಕೊಡಬೇಕು.*

*2. ಅಧ್ಯಾತ್ಮಪ್ರಕಾಶದ ಲೇಖನಗಳಲ್ಲಿ ಇರುವ ಅಭಿಪ್ರಾಯಗಳಲ್ಲಿ ಸಂಶಯವು ಬಂದರೆ, ಅಥವಾ ಅವುಗಳಲ್ಲಿ ಕೆಲವು ಜನರ ಎಳಿಗೆಗೆ ವಿರುದ್ಧವೆಂದು ತೋರಿದರೆ, ಸಂಪಾದಕರಿಗೆ ಬರೆಯಬೇಕು.*

*3. ಅಧ್ಯಾತ್ಮ ಪ್ರಕಾಶದಲ್ಲಿರುವ ಉತ್ತಮವಾದ ಅಭಿಪ್ರಾಯಗಳನ್ನು ತಮ್ಮ ಮಿತ್ರರಿಗೆ ತಿಳಿಯಿಸಬೇಕು. ಇನ್ನೂ ಹೆಚ್ಚಿನ ವಿಷಯಗಳು ತಮಗೆ ತಿಳಿದಿದ್ದರೆ ಪತ್ರಿಕೆಯ ಧ್ಯೇಯಕ್ಕೆ ಸರಿ ಹೋಗುವ ಲೇಖನಗಳ ಮೂಲಕ ಅವುಗಳನ್ನು ಪ್ರಕಾಶಗೊಳಿಸ ಬೇಕು; ಅಂಥ ವಿಷಯಗಳು ತಮ್ಮ ಮಿತ್ರರಿಗೆ ತಿಳಿಯುತ್ತಿದ್ದರೆ ಲೇಖನಗಳನ್ನು ಬರೆಯುವಂತೆ ಅವರನ್ನು ಪ್ರೋತ್ಸಾಹಿಸಬೇಕು.*

*4. ತಮ್ಮಲ್ಲಿ ಧನದ ಅನುಕೂಲ್ಯವಿದ್ದರೆ ಪೋಷಕದ್ರವ್ಯವನ್ನು ಕೊಟ್ಟು ಅನುಕೂಲವಿಲ್ಲದ ಇಂಥಿಂಥವರಿಗೆ ಪತ್ರಿಕೆಯನ್ನು ಕಳುಹಿಸಿರೆಂದು ಮ್ಯಾನೇಜರಿಗೆ ಬರೆಯಬೇಕು. ಅನುಕೂಲ್ಯವಿಲ್ಲದಿದ್ದರೆ ತಮ್ಮ ಮಿತ್ರರನ್ನೂ ಪರಿಚಿತರನ್ನೂ ಹೊಸ ಚಂದಾದಾರರಾಗುವಂತೆ ಪ್ರೋತ್ಸಾಹಿಸಬೇಕು. ಹಳೆಯ ಚಂದಾದಾರರಂತೆ ಹೊಸ ಚಂದಾದಾರರಿಗೂ ವರ್ಷದ ಆದಿಭಾಗದಲ್ಲಿ ಒಂದು ಪುಟ್ಟ ಕಾಣಿಕೆಯನ್ನು (ಇದು ಶ್ರೀಗಳವರ ಕಾಲದಲ್ಲಿ ಮಾತ್ರವೇ) ಕೊಡುತ್ತದೆ. ಈ ಸುದ್ದಿಯನ್ನು ಆದಷ್ಟು ಜನರಲ್ಲಿ ಹರಡಬೇಕು.*

*5. ಕಾರ್ಯಾಲಯದ ಧರ್ಮಾರ್ಥವಾಙ್ಮಯಗಳನ್ನು ತರಿಸಿಕೊಂಡು ಹೊಸಬರಲ್ಲಿ ಹಂಚಬೇಕು. ಇಂಥವರಿಗೆ ಕರಪತ್ರಗಳನ್ನೂ ಮಾದರಿಯ ಸಂಚಿಕೆ ಯನ್ನೂ ಕಳುಹಿಸಿಕೊಡಿರಿ - ಎಂದು ಸರಿಯಾದ ಟಪ್ಪಾಲುವಿಳಾಸದೊಡನೆ ಮ್ಯಾನೇಜರಿಗೆ ಬರೆದುಕೊಳ್ಳಬೇಕು.''*

'ಧರ್ಮಾರ್ಥ ವಾಙ್ಮಯ'ವೆನ್ನುವದು ಪುಟದ ಎರಡು ಕಡೆಗಳಲ್ಲೂ ಮುಖ್ಯ ಅಧ್ಯಾತ್ಮ ವಿಚಾರಗಳನ್ನು ತುಂಬಿದ, ಪ್ರವಚನಕ್ಕೆ ಕಾರ್ಯಾಲಯದ ಯಾವದೇ ಸಮಾರಂಭಕ್ಕೆ ಬರುವವರಿಗೆ ಉಚಿತವಾಗಿ ಹಂಚುವ ವಿಶೇಷ ಕರಪತ್ರ. ಇದು ಶ್ರೀಶ್ರೀಗಳವರದೇ ಯೋಜನೆ. ಆಗಿನಿಂದ ಈವರೆಗೂ ಆಗಾಗ ಇಂತಹ ವಿಚಾರ ಗಳು ಪ್ರಸಾರವಾಗುತ್ತಿರುತ್ತವೆ. ಅಂದರೆ, ಅಧ್ಯಾತ್ಮ ಸೇವೆಗೆ ಹಲವು ವಿಧದ ಮಾರ್ಗ

ಗಳಲ್ಲಿ ಇದೂ ಎಂದು ಅನಿಯತ ಕಿರುಪತ್ರಿಕೆ ! ಪತ್ರಿಕೆಯ ಆರ್ಥಿಕ ಸ್ಥಿತಿ ಮೊದಲಿನಿಂದಲೂ ಇದೇ ! ಆದರಿಂದ ಆಗಾಗ ಚಂದಾ ಏರಿಕೆ ಅನಿವಾರ್ಯವಾಯಿತು.

| ವರ್ಷ | 1974 | 81 | 82 | 83 | 87 | 89 | 99 | 2002 | 2006 | 1970 ರಿಂದ 2006 |
|---|---|---|---|---|---|---|---|---|---|---|
| ಚಂದಾ (ರೂ.) | | | | | | | | | | |
| ವಾರ್ಷಿಕ | 8 | 10 | 12 | 15 | 20 | 25 | 30 | 50 | 50 | ಏರಿಕೆ - 8ರಿಂದ 50 ರೂ. |
| ಆಜೀವ ಸದಸ್ಯ (10 ವರ್ಷ) | 101 | 101 | 151 | 151 | 201 | 201 | 251 | 500 | 500 | 101 ರಿಂದ 500 ರೂ. |

ಈ ವಿವರವನ್ನು ನೋಡಿದರೆ ಏರಿಕೆಯಲ್ಲಿ ವಿವೇಚನೆ, ಗ್ರಾಹಕರ ಬಗ್ಗೆ ಕಳಕಳಿ ಇದೆ ಎಂದು ಸೂಚಿತವಾಗುವದಿಲ್ಲವೇ ? ಒಂದಂತೂ ನಿಜ, ಪತ್ರಿಕೆಯಿಂದ ಲಾಭ ಪಡೆಯುವ ಉದ್ದೇಶವೇ ಎಲ್ಲೂ ಇರಲಿಲ್ಲ. ವರ್ಷದ 12 ಸಂಚಿಕೆಗಳನ್ನು ಕನಿಷ್ಠ ಅಥವಾ ಆದಕ್ಕೂ ಹೆಚ್ಚಿನ ಕಾಗದ, ಮುದ್ರಣ, ಅಂಚೆಯ ಬೆಲೆಯಲ್ಲಿ, ಸಂಚಿಕೆಗೆ (32 ಪುಟಗಳು) ರೂ. 2.50 ಯಂತೆ ಕೊಡಲು ಸಾಧ್ಯವಿತ್ತೇ ? ಆದರಿಂದ ವೆಚ್ಚ ವರಮಾನ ಸರಿತೂಗಿದರೆ ಸಾಕು ಎಂಬಂತೆ ನಡೆಸುತ್ತಿರುವದು, ಆಧ್ಯಾತ್ಮ ಪ್ರಸಾರದ ಮುಖ್ಯ ಸಾಧನಗಳಲ್ಲೊಂದಾದ ಪತ್ರಿಕೆ ಸುಲಭವಾಗಿ ಹೆಚ್ಚಿನ ಜನಗಳಿಗೆ ದೊರಕಲೆಂಬುದೇ. ಬಹುಶಃ ಇದೇ ಕಾರಣದಿಂದಿರಬೇಕು, ಸಹಾನುಭೂತಿಪರರಾದ ಅಭಿಮಾನಿಗಳು ತುಂಬು ಮನಸ್ಸಿನ ಸಹಕಾರವಿತ್ತರು. ಕೇವಲ ಒಂದೆರಡು ವರ್ಷದಲ್ಲಿ ಶೇ. 80ರಷ್ಟು ಚಂದಾದಾರರು ಹೆಚ್ಚುವರಿಯನ್ನು ಕಳಿಸಿಕೊಟ್ಟರು. ಅಷ್ಟೇ ಅಲ್ಲ, ಏಪ್ರಿಲ್ 2006ರ ವೇಳೆಗೆ ವಾರ್ಷಿಕ ಚಂದಾದಾರರು 290, ದಾನಿಗಳು ಅಂತೂ 2960 ಗ್ರಾಹಕರಾದರು. ಅಕ್ಟೋಬರ್ 2002ರಲ್ಲಿ ಮಾಡಿದ ಪ್ರಾರ್ಥನೆ ಯಂತೆ "ಆಶ್ರಯದಾತರು (1000 ರೂ.) ಮಹಾಶ್ರಯದಾತರು (5000 ರೂ.) ಎಂಬ ಎರಡು ವರ್ಗಗಳನ್ನು ಸೇರಿಸಿದೆ ; ಈಗಿನ ಹಣ ಚಲಾವಣೆಯ ಭರದಲ್ಲಿ, ಯಾವ ಚಂದಾ ಪ್ರಕಾರವೂ ದೊಡ್ಡದೇನಲ್ಲ. ಅನುಕೂಲವಿದ್ದವರು ಆಶ್ರಯದಾತ, ಮಹಾಶ್ರಯದಾತರಾಗಲು ಸಹೃದತೆಯ ವೈಶಾಲ್ಯದಿಂದ ಪತ್ರಿಕೆಗೆ ಹೆಚ್ಚಿನ ಸಂಖ್ಯೆಯ ಚಂದಾದಾರರನ್ನು ಕೊಡಿಸುವಲ್ಲಿ ಸಹಕಾರ ನೀಡುವರೆಂದು ಆಶಿಸಿದೆ. ಹಾಗೆಯೇ, ಹೆಚ್ಚಿನ ವರ್ಗಗಳಿಗೆ ಪರಿವರ್ತಿತರಾಗಲು ಸಾಧ್ಯವಿಲ್ಲದವರು 'ಪತ್ರಿಕಾ ಮೂಲನಿಧಿ'ಗೆ ತಮ್ಮ ಮನ ಸೊಪ್ಪುವ ಕಾಣಿಕೆಯನ್ನು ಅನುಕೂಲವಾದಾಗಲೆಲ್ಲ ಕೊಡಬಹುದಾಗಿದೆ."

ಹೀಗೆಲ್ಲ ಚಂದಾ ಏರಿಸಿದರೂ ಸಹಿತ, ಆರ್ಥಿಕ ಸಮತೋಲನ ಆಗ ಸರಿ ಬರುವುದಿಲ್ಲವೆಂದು ಕಂಡು, 1974ರಲ್ಲಿ ಜಾಹೀರಾತುಗಳಿಗೆ ಮೊರೆ ಹೋಗುವ ಸ್ಥಿತಿ

ಬಂತು. ಆದರಿಂದಾಗಿ ಅಕ್ಟೋಬರ್ 74ರಿಂದ ಜಾಹಿರಾತುಗಳನ್ನು ಸ್ವೀಕರಿಸತೊಡಗ-ಬೇಕಾಯಿತು. 1975ರ ಕೊನೆಯಲ್ಲಿ ಚಂದಾದಾರರ ಸಂಖ್ಯೆ 300. ಈ ರೀತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಂದಾದಾರರಿಲ್ಲದಿರುವದೂ ಆರ್ಥಿಕ ಕೊರತೆಗೊಂದು ಪ್ರಧಾನ ಕಾರಣವಾಯಿತು.

ಕಡಿಮೆ ಸಂಖ್ಯೆಯ ಚಂದಾದಾರರು, ಚಂದಾವರಮಾನ ಸಾಕಾಗುವುದಿಲ್ಲ-ವೆಂದಾಗ ಮೊದಲಿನ ವರ್ಷಗಳಲ್ಲಿ ಪ್ರಕಟವಾಗುವದು ದುಸ್ತರವಾಗಿತ್ತು, ಶ್ರೀ ರುಧಿರೋದ್ಗಾರಿ ಸಂವತ್ಸರದಲ್ಲಿ ಪ್ರಾರಂಭವಾದ ಪತ್ರಿಕೆ (1923), ರಕ್ತಾಕ್ಷಿಯಲ್ಲಿ ನಿಂತಿತು. ಪುನಃ ಕ್ರೋಧನದಲ್ಲಿ ನಡೆದುದು ನಾಲ್ಕೇ ತಿಂಗಳು. ಅನಂತರ 1944ರ ಆಗಸ್ಟ್‌ನಿಂದ, 1946ರವರೆಗೆ ಎರಡು ವರ್ಷ ನಡೆಯಲಿಲ್ಲ. ಅಂದರೆ ಪತ್ರಿಕೆ ಬಂದದ್ದು 1923-24ರಲ್ಲಿ, 1925-26ರಲ್ಲಿ (4 ತಿಂಗಳು), 1931 ರಿಂದ 1944. ಹೀಗೆ 1923ರಲ್ಲಿ ಹುಟ್ಟಿದ ಪತ್ರಿಕೆ 1946ರ ವೇಳೆಗೆ ಏಳೂವರೆ ವರ್ಷ ಕಾಲ ನಿಂತುಹೋಗಿತ್ತು, ಪುನಃ ಪ್ರಾರಂಭವಾದದ್ದು 1946 ಸೆಪ್ಟೆಂಬರ್‌ನಿಂದ. ಆದಕಾರಣ, ಮೊದಲು ಏಪ್ರಿಲ್ ತಿಂಗಳಿನಿಂದಲೇ ವರ್ಷದ ಪ್ರಾರಂಭವಾದರೂ, ಆಮೇಲೆ (1946ರಿಂದ) ಈವರೆಗೆ ಪತ್ರಿಕೆಯ ವರ್ಷ ಪ್ರಾರಂಭ ಸೆಪ್ಟೆಂಬರ್‌ನಿಂದ ಮರು ವರ್ಷ ಆಗಸ್ಟ್‌ರವರೆಗೆ. ಅಂತೂ ಈವರೆಗೆ 75 ಸಂಪುಟಗಳು ಆಗಿವೆ. 76ನೆಯದು ನಡೆಯುತ್ತಿದೆ. ಕೆಳಗೆ ಬಿದ್ದ ಪತ್ರಿಕೆಯನ್ನು ಕಠಿಣ ಕಾಲಗಳಲ್ಲಿ ಭಗವಂತ ಹೇಗೋ ಗುರು ಸಂಕಲ್ಪದಂತೆ ನಡೆಸಿಕೊಟ್ಟ.

ಪತ್ರಿಕೆಯ ಮುಖಪುಟ ವಿನ್ಯಾಸವನ್ನು ಬದಲು ಮಾಡಿ, ಒಳ್ಳೆಯ ಆರ್ಟ್ ಕಾಗದದ ಮೇಲೆ, ಆಕರ್ಷಕ ಚಿತ್ರ, ಮುದ್ರಣದಿಂದ ಹೆಚ್ಚಿನ ಚಂದಾದಾರರು ಪ್ರಭಾವಿತರಾಗಿ ಬರುವರೆಂಬ ಒಂದು ಅಭಿಪ್ರಾಯವೂ 1990ರ ಸುಮಾರಿನಿಂದಲೂ ಅದಕ್ಕೆ ಸ್ವಲ್ಪ ಮೊದಲಿನಿಂದಲೂ ಇದ್ದಿರಬಹುದು - ಚರ್ಚೆಗೆ ಕೆಲವು ಬಾರಿ ಬಂದಿದ್ದು ತೀವ್ರವಾಗಿ ಪರಿಗಣನೆಯಾಗಿತ್ತು. ಕೆಲವು ಚಂದಾದಾರರೂ ಸಹ ಈ ಬದಲಾವಣೆಯನ್ನು ಸೂಚಿಸಿ ಬರೆದಿದ್ದರು. ಆದರೆ (1) ಪತ್ರಿಕೆ ಕೇವಲ ಅಧ್ಯಾತ್ಮ ಪ್ರಸಾರಕ್ಕಾಗಿರುವಾಗ, ಅಧ್ಯಾತ್ಮದ ನಿಜ ಸಂದೇಶವಾದ ಸರಳ ಜೀವನ ಉನ್ನತ ಆದರ್ಶಕ್ಕೆ ಆಡಂಬರ ಹೊಂದುವದಿಲ್ಲ (2) ದೂರದೃಷ್ಟಿಯಿಂದ ಕಾರ್ಯಾಲಯದಲ್ಲಿ ಎಷ್ಟೋ ಸುಧಾರಣೆಗಳನ್ನು ತಂದ ಶ್ರೀಶ್ರೀಗಳು ಆಡಂಬರಕ್ಕೆ ಒಲ್ಲದೆ ಹಾಗೆಯೇ ನಡೆಸಿಕೊಂಡು ಬಂದಿದ್ದಾರೆಂಬುದು ಅವರು ಪಾಲಿಸಿದ ರೀತಿಯಿಂದ ಸ್ಪಷ್ಟವಾಗಿ ಕಂಡುಬರುತ್ತಿದೆ. (3) ಸಪ್ತಾಹದ ಪ್ರವಚನಗಳು, ಪತ್ರಿಕೆಯ ಒಳಹೂರಣವಷ್ಟೇ ಮುಖ್ಯವಲ್ಲದೆ ಆಡಂಬರ, ಆಕರ್ಷಣೆಯಲ್ಲ (4) ಶ್ರೀಶ್ರೀಗಳವರ ಮೇಲಿನ ಅತುಳ ಗೌರವದಿಂದ ಅವರ ನೆನಪು ಸದಾ ಇರುವಂತೆ ಮತ್ತು (5) ಅನೇಕ ಹಿರಿಯರು ಈ

ರೀತಿಯೇ ಮುಂದುವರೆಯಲಿ, ಸಲಹೆಯಾಗಿ ಬಂದಿರುವ ಹೊಸ ರೂಪ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು - ಎಂಬ ಈ ಕಾರಣಗಳಿಂದ ಈ ಹೊಸರೂಪ ಕೊಡುವ ಅಭಿಪ್ರಾಯವನ್ನು ಒಪ್ಪಲಿಲ್ಲ. ಹಾಗೂ ವರ್ಷ, ಎರಡು ವರ್ಷಕ್ಕೊಮ್ಮೆ ಅನಿವಾರ್ಯ ವಾಗಿ ಏರಿಸುವ ಪರಿಸ್ಥಿತಿಯಿರುವಾಗ, ಈ ಹೊಸ ರೂಪದಿಂದ ಪತ್ರಿಕೆ ತಯಾರಿಸುವ ವೆಚ್ಚ ಈಗಿನ ಒಂದೂವರೆಯಷ್ಟಾದರೂ ಏರುವ ಹೆದರಿಕೆ ಇರುವಾಗ, ಜುಟ್ಟಿಗೆ ಮಲ್ಲಿಗೆ ಹೂವು ಏರಿಸ ಹೊರಡುವದು ಅವ್ಯವಹಾರಿಕವೂ ಹೌದು, ಧರ್ಮಸಂಸ್ಥೆಗೆ ಅನೈತಿಕವೂ ಹೌದು ಎಂದು ಇದನ್ನು ಕೈಬಿಡಲಾಯಿತು.

2002ರ ಮಧ್ಯದಲ್ಲಿ ಬ್ಯಾಂಕಿನ ಬಡ್ಡಿ ದರಗಳು ಬಹಳವಾಗಿ ಕಡಿಮೆ ಯಾದಾಗ, ಪತ್ರಿಕೆಯನ್ನು ನಡೆಸುವದು ಕಷ್ಟ ಎಂದು ತೋರಿತು. ಆದಕ್ಕಾಗಿ ಪತ್ರಿಕೆ ಯನ್ನು ದ್ವೈಮಾಸಿಕವಾಗಿ ಮಾಡುವದೇ ಸುಗಮವೆಂದು ಕೆಲಸನ್ನಿವೇಶಗಳಿಂದ ಕಂಡು ಬಂದಿತು. ಆದರೆ, ಈ ಕ್ರಮದಿಂದ ತಲೆದೋರುವ ಅನೇಕ ಪ್ರತಿಕೂಲ ಅಂಶಗಳನ್ನು, ಮುಖ್ಯವಾಗಿ ಸಂಸ್ಥೆಯ ಹೆಸರು ಕಾಪಾಡುವದೊಂದು, ಶ್ರೀಶ್ರೀಗಳವರ ಉದ್ದೇಶದಂತೆ ನಡೆಸುವ ಕರ್ತವ್ಯವೊಂದು, ಈ ಕಾರಣಗಳಿಂದ 1996ರಿಂದ ದ್ವೈಮಾಸಿಕ, ತ್ರೈಮಾಸಿಕ ಪರಿವರ್ತನೆಯ ಮಾತಿದ್ದು ಈಗ ಒತ್ತಾಯಪೂರ್ವಕವಾಗಿ ಬಂದರೂ ಟ್ರಸ್ಟ್ ಸಮಿತಿ ಈ ಸಲಹೆಯನ್ನು ಒಪ್ಪಲಿಲ್ಲ. ಆಗಲೇ ಚಂದಾ ವಿಮರ್ಶೆ ಮಾಡಿದುದು. ಅದಕ್ಕಿಂತ ಹೆಚ್ಚಾಗಿ, ಆ ಸಂದರ್ಭದಲ್ಲಿ ಚರ್ಚೆ ನಡೆದಿರುವಾಗ, ಮತ್ತೂರಿನಿಂದ ಶ್ರೀ ಚಂದ್ರಮೌಳಿ ಅವಧಾನಿಗಳು - ಕಾರ್ಯಾಲಯ, ಪತ್ರಿಕೆಯ ಯಾವ ಅಂತರಂಗ ವಿಷಯವನ್ನೂ ತಿಳಿಯದಿದ್ದಾಗ, ಸ್ವಪ್ರೇರಿತರಾಗಿ (ಅಲ್ಲ ಒಳಗಿರುವ ಭಗವಂತನ ಪ್ರೇರಣೆಯಂತೆ) ಕಾರ್ಯಾಲಯಕ್ಕೆ ಬಂದು ನೆಲಸಲು ಸಿದ್ಧವೆಂದು ಸೂಚನೆ ಕಳಿಸಿದರು. ಟ್ರಸ್ಟ್ ಈ ಸೂಚನೆಯನ್ನು ಸಂತೋಷದಿಂದ ಸ್ವಾಗತಿಸಿತು. ಆದರಂತೆ, ಶ್ರೀ ಚಂದ್ರಮೌಳಿ ಅವಧಾನಿಗಳು 2003 ಫೆಬ್ರವರಿಯಲ್ಲಿ ತಮ್ಮ ವಿದ್ಯಾರ್ಥಿಗಳೊಡನೆ ಬಂದರು. ಕೆಲವು ತಿಂಗಳಾದ ಮೇಲೆ ಪತ್ರಿಕೆಯ ಅವಶ್ಯಕತೆಯನ್ನು ಕಂಡು ಅವರನ್ನೂ, ಡಾ|| ಎ.ಎಸ್. ವೇಣುಗೋಪಾಲರಾಯರನ್ನೂ ಸಂಪಾದಕ ಮಂಡಳಿಗೆ ಸೇರಿಸಲಾಯಿತು. ಶ್ರೀ ಚಂದ್ರಶೇಖರ ಶಾಸ್ತ್ರಿಗಳ ಉತ್ತಮ ಸಹಕಾರವೂ ದೊರೆಯಿತು.

**2. (ಅ) ವಿಶೇಷಾಂಕಗಳು : ಸಚ್ಚಿದಾನಂದೇಂದ್ರವಿಶೇಷಾಂಕ :** ಶ್ರೀಶ್ರೀ ಗಳವರ ಪ್ರಥಮ ವಾರ್ಷಿಕಾರಾಧನೆಯ ಸಂದರ್ಭದಲ್ಲಿ 'ಅಧ್ಯಾತ್ಮ ಪ್ರಕಾಶ' ಪತ್ರಿಕೆಯ ವಿಶೇಷಾಂಕವೊಂದನ್ನು ಹೊರಡಿಸಲು ಪತ್ರಿಕೆಯ ಆಡಳಿತ ವರ್ಗದವರ ನಿರ್ಧಾರದಂತೆ, ಆಗಸ್ಟ್ 1976ರ ಎಂದಿನ ಸಂಚಿಕೆಯೊಡನೆ, 60 ಪುಟಗಳ ಒಂದು ವಿಶೇಷಾಂಕವನ್ನು ಪ್ರಕಟಿಸಿದರು.

**ಶ್ರೀ ಶತಮಾನೋತ್ಸವ ವಿಶೇಷಾಂಕ :** 1979ರ ಡಿಸೆಂಬರ್ ಸಂಚಿಕೆಯೊಡನೆ, ಅಧ್ಯಾತ್ಮ ಪ್ರಕಾಶ ಪತ್ರಿಕೆಯು, ಶ್ರೀಶ್ರೀಗಳವರ ನೂರನೇ ಜನ್ಮದಿನೋತ್ಸವದ ಆಚರಣೆಯ ಸಂದರ್ಭದಲ್ಲಿ, ಮತ್ತೊಂದು ವಿಶೇಷ ಸಂಚಿಕೆಯನ್ನು ಪ್ರಕಟಿಸಿತು. 78 ಪುಟಗಳ ಈ ಸಂಚಿಕೆಯಲ್ಲಿ 10 ಲೇಖಕರಿಂದ ಬಂದ ಉತ್ತಮ ಲೇಖನಗಳು ಇವೆ.

**ಸುವರ್ಣ ಮಹೋತ್ಸವ ಸಂಚಿಕೆ :** ಅಧ್ಯಾತ್ಮಪ್ರಕಾಶ ಪತ್ರಿಕೆಯ ವಿಶೇಷಾಂಕಗಳಂತೆಯೇ, ಬೆಂಗಳೂರು ಕಾರ್ಯಾಲಯದಿಂದ 1973ರಲ್ಲಿ ಹೊರತಂದ ಕಾರ್ಯಾಲಯದ ಸುವರ್ಣ ಮಹೋತ್ಸವ ಸಂಚಿಕೆಯಲ್ಲಿ 77 ಪುಟಗಳು, ಶ್ರೀಶ್ರೀಗಳವರ ಲೇಖನವೂ ಸೇರಿದಂತೆ, 15 ಕನ್ನಡ ಲೇಖನಗಳು, 7 ಇಂಗ್ಲಿಷ್ ಲೇಖನಗಳು (ಒಟ್ಟು 22) ಇವೆ. "ಮಾನವಕಲ್ಯಾಣಕ್ಕೆ ಏನಾದರೊಂದು ಅಳಿಲು ಸೇವೆಯನ್ನು ಅರ್ಪಿಸಿ ಕೃತಕೃತ್ಯವಾಗುವದೇ ಇದರ ಉದ್ದೇಶ. ಪ್ರಾಚೀನ ಸಂಸ್ಕೃತಿಯಲ್ಲಿ ಇರುವ ಒಳ್ಳೆಯದನ್ನು ಈಗಿನ ನವನಾಗರಿಕ ಜನರು ಬಾಹ್ಯದೃಷ್ಟಿ ಪ್ರಧಾನರಾಗಿ ಮರೆತಿರುವದರಿಂದ ಅನರ್ಥ ಪರಂಪರೆಗಳನ್ನು ಪಡೆಯುತ್ತಿರುವದನ್ನು ಕಂಡು ಅಂಥವರಿಗೆ ಆ ಒಳ್ಳೆಯದನ್ನು ತಿಳಿಸಿಕೊಟ್ಟು ಉಪಕಾರ ಮಾಡುವದಷ್ಟೇ ಇದರ ಕೆಲಸ."

**ಶ್ರೀ ಶತಮಾನೋತ್ಸವ ಸಂಚಿಕೆ :** ಇದು ಶ್ರೀಶ್ರೀಗಳವರ ಜನ್ಮ ಶತಮಾನೋತ್ಸವದ ಆಚರಣೆಗಾಗಿ 1980ರ ಜನವರಿಯಲ್ಲಿ ಶಾಖಾ ಕಾರ್ಯಾಲಯದಿಂದ ಪ್ರಕಟವಾಯಿತು. ಸುಮಾರು 25 ಕನ್ನಡ ಲೇಖನಗಳು, 6 ಇಂಗ್ಲಿಷ್, 2 ತೆಲುಗು ಲೇಖನಗಳು, ಸುಮಾರು 100 ಪುಟಗಳಲ್ಲಿ ಅಡಕವಾಗಿವೆ. ಬೆಂಗಳೂರು ಶಾಖೆಯ ಶತಮಾನೋತ್ಸವ ಆಚರಣೆಯ ವರದಿ ಅಧ್ಯಾತ್ಮ ಪ್ರಕಾಶದ 49ನೇ ಸಂಪುಟ, ಏಪ್ರಿಲ್ 80ರಲ್ಲಿ ಪ್ರಕಟವಾಗಿದೆ.

**3. ಗ್ರಂಥಗಳು :** ಕಾರ್ಯಾಲಯದ ಯಾವದೇ ವಿಷಯ ಕುರಿತಾಗಲೂ, ಶ್ರೀಶ್ರೀಗಳವರ ರೀತಿ, ನಡೆ, ನುಡಿಗಳು ಪುನಃ ಪುನಃ ಬರುತ್ತಿದ್ದು, ಕೆಲವು ಪುನರಾವರ್ತಿಗಳಾಗುವದು ಅನಿವಾರ್ಯದ ಸಹಜತೆ, ಮುಂದೆ ಏನು ನಡೆಸುವಾಗಲೂ, ಆಚರಣೆಯಾದಾಗಲೂ, ಹಿಂದೆ ಶ್ರೀಶ್ರೀಗಳ ನಡೆಯೇ ಒರೆಗಲ್ಲು, ಮುಂದಿನ ಕಾರ್ಯದ ಯೋಗ್ಯತಾಪರೀಕ್ಷೆಗೆ. ಅವರ ಕಾರ್ಯ ಬುನಾದಿಯಿಲ್ಲದಿದ್ದರೆ, ಮುಂದಿನ ವಿಷಯಗಳು ಸ್ವತಂತ್ರವಾಗಿ ನಿಲ್ಲಲಾರವು ಎಂಬ ಅಳುಕು ಇದಕ್ಕೆ ಕಾರಣ. ಮುಖ್ಯವಾಗಿ, ವೇದಾಂತ ಜಗತ್ತಿಗೆ ಅವರು ನೀಡಿರುವ, ಅವರ ಹೆಸರನ್ನು ಹಲವು ಹತ್ತು ಕಡೆ ಎತ್ತಿ ಹಿಡಿಯುವುದು ಅವರ ಸಾರಸ್ವತ ಸೇವೆ, ಎಲ್ಲ ಕ್ಷೇತ್ರಗಳಲ್ಲೂ ಅನುಕರಣೀಯವಾದ, ಮಾರ್ಗದರ್ಶನದ ನಡೆ. ಇದೆಲ್ಲಕ್ಕೂ ಮುಂಚೂಣಿಯಾಗಿ

ಬಹಳ ಕಾಲ ನಿಲ್ಲುವಂಥದು ಬಹು ವಿಶಿಷ್ಟತೆಯ ಅವರ ಗ್ರಂಥರತ್ನರಾಶಿ. ಬಹುಶಃ ಕನ್ನಡದಲ್ಲಿ ಈ ಮಟ್ಟದ ಸಂಖ್ಯಾವಿಸ್ತಾರದಲ್ಲಿ, ಯೋಗ್ಯತಾ ವಿಶೇಷದಲ್ಲಿ ವೈವಿಧ್ಯತೆ, ಹಲವು ಸ್ತರದ ಓದುಗರಿಗೆ ಒದಗಿಸುವ ಅನುಕೂಲ್ಯತೆಯಲ್ಲಿ ಹೀಗೆ ಹಲವಾರು ದೃಷ್ಟಿಗಳಿಂದ, ಸರಿಗಟ್ಟಿ ನಿಲ್ಲುವ ಕೊಡುಗೆ ಸಾಹಿತ್ಯದ ಯಾವ ಪ್ರಾಕಾರದಲ್ಲೂ ಇರಲಾರದು ಎನ್ನುವದು ಹೊಗಳಿಕೆಯ ಮಾತಾಗಿರಲಾರದು. (ಸಂ. 1, ಪುಟ 458ರ ಈ ವಾಕ್ಯವನ್ನು ಪುನಃ ಗಮನಿಸಿ) "ಒಟ್ಟಿನಲ್ಲಿ ಹೇಳಿದರೆ ಇಂಥ ಭಾಷ್ಯಾನುವಾದಗಳು ಇಡಿಯ ಭೂಮಂಡಲದಲ್ಲಿ ಯಾವ ಭಾಷೆಯಲ್ಲೂ ಹೀಗೆ ಎಲ್ಲಾ ಬಗೆಯಿಂದ ಚಿತ್ತಾಕರ್ಷಕವಾಗಿ ಬುದ್ಧಿಗೆ ಸಂತೃಪ್ತಿಯನ್ನುಂಟುಮಾಡಿರುವ ಅನುವಾದಗಳು ಆಗಿರುವದೇ ಇಲ್ಲ."

ಶ್ರೀ ಲ.ನ. ಮೂರ್ತಿಗಳು ಹೀಗೆಂದಿರುತ್ತಾರೆ : "ಓದುವ ಗೀಳು, ತಮಗೆ ತಿಳಿದದ್ದನ್ನು ಮತ್ತೊಬ್ಬರಿಗೆ ಸುಲಭವಾಗಿ ತಿಳಿಸುವ ಕೌಶಲ, ಅಷ್ಟೇ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಪ್ರತಿಬಿಂಬಿಸುವಂತೆ ಖಚಿತವಾಗಿ ಬರೆಯುವ ಲೇಖನ ಚಾತುರ್ಯ ಇವುಗಳು ಶ್ರೀಶ್ರೀಗಳವರಿಗೆ ವಶವಾಗಿದ್ದುವು. ಶ್ರೀಗಳವರು ತಮ್ಮ ಜೀವಮಾನದಲ್ಲಿ ಸುಮಾರು ಆರುದಶಕಗಳ ಕಾಲ ಅವಿಚ್ಛಿನ್ನವಾಗಿ ಬರವಣಿಗೆಯ ಕೆಲಸವನ್ನು ನಿರ್ವಹಿಸಿದುದರ ಫಲವೇ ಅವರ ಗ್ರಂಥ ಸುಧಾರ್ಣವ. ಈ ಸುಧಾ ಸಮುದ್ರದಲ್ಲಿ ಒಂದು ನೂರರವತ್ತೈದಕ್ಕೂ ಮೀರಿದ ಕೃತಿ ರತ್ನಗಳು ಮಿನುಗುತ್ತಿವೆ. ಅವು ಸಂಸ್ಕೃತ, ಇಂಗ್ಲಿಷ್, ಕನ್ನಡ - ಮೂರು ಭಾಷಾರೂಪವಾದ ವಾಗ್ದೇವಿಯ ಸಿರಿಯಿಂದ ಆವಿರ್ಭೂತವಾಗಿ ಆಕಾರದಲ್ಲಿ ಚಿಕ್ಕದು, ಮಧ್ಯಮ, ದೊಡ್ಡದು - ಎಂಬ ಭೇದವನ್ನು ಹೊಂದಿವೆಯಾದರೂ ಒಂದೊಂದು ರತ್ನವೂ ತಾನು ತಾನೇ ಆಗಿದ್ದುಕೊಂಡು ತಮ್ಮ ಅಸಾಧಾರಣತೆಯನ್ನು ಹೊಂದಿರುತ್ತವೆ."

ಅವರು ಕಾರ್ಯಾಲಯದ ಮೂಲಕ ಪ್ರಕಟಿಸಿದ ಗ್ರಂಥಗಳು ಸಂಖ್ಯೆ, ವಿಷಯ ಮತ್ತು ಸ್ವಾರಸ್ಯಗಳಿಂದ, ಹೆಚ್ಚಾಗಿ, ಆಳವಾದ ಚಿಂತನ ಮಂಥನದಿಂದ ತೆಗೆದ ಜೀವನೋದ್ಧಾರಕ್ಕಾಗಿರುವ ಅಧ್ಯಾತ್ಮ ತತ್ತ್ವಗಳಿಂದ ತುಂಬಿವೆ. 1920ರಿಂದ, ಅಂದರೆ ಕಾರ್ಯಾಲಯದ ಪ್ರಾರಂಭದಿಂದ, ಅವರ ನಿರ್ಯಾಣದವರೆಗೆ ಒಟ್ಟು 188 ಗ್ರಂಥ ಗಳನ್ನು ಬರೆದು ಪ್ರಕಟಿಸಿದರು. ಇವು ಮಂದ, ಮಧ್ಯಮ, ಉತ್ತಮಾಧಿಕಾರಿಗಳಿಗೂ ಸಲ್ಲುವ ವಿವಿಧ ಪುಸ್ತಕಗಳು. ಇವುಗಳಲ್ಲಿ ಕನ್ನಡದಲ್ಲಿರುವವು 142, ಸಂಸ್ಕೃತ 28, ಇಂಗ್ಲಿಷ್ 18. ಈ ಮೂರು ಭಾಷೆಗಳಲ್ಲೂ ಅವರ ಭಾಷಾ ಪ್ರೌಢಿಮೆ, ಪ್ರಭುತ್ವ ಮತ್ತು ವಿಷಯಪ್ರತಿಪಾದನಾ ರೀತಿಗಳು ಬಹಳ ಮೇಲ್ಮಟ್ಟದವು. 1920ಕ್ಕೂ ಮೊದಲೇ 1911 ರಿಂದ 1920ರ ಅವಧಿಯಲ್ಲಿ ಬರೆದ 'The Highest goal of Human Life',

'Spiritual Knowledge and How to Attain it', ಸ್ಕೂಲ್ ಪುಸ್ತಕಗಳಾಗಿ ವಿದ್ಯಾ ಇಲಾಖೆಯವರಿಂದ ಆಯ್ಕೆಯಾದ 'ಪದತ್ರಯ', 'ವಾಕ್ಯರಚನಾ ಶಾಸ್ತ್ರ', ಸಂಸ್ಕೃತದಲ್ಲಿ 'ವೇದಾಂತ ಪ್ರಕ್ರಿಯಾ ರಹಸ್ಯಂ' (ಇದರ ಮೂಲ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರ 'Fundamentals of Vedanta' ಎಂಬ ಲಿಖಿತ ಉಪನ್ಯಾಸದ ಅನುವಾದ), ಇವುಗಳು ಬಹುಶಃ ಅವರ ಮೊದಲ ಗ್ರಂಥಗಳ ಸಾಲಿಗೆ ಸೇರಿದವು. ದಾವಣಗೆರೆಯ ಶ್ರೀಮಾಗಾನಹಳ್ಳಿ ದೊಡ್ಡಬಸಪ್ಪನವರ ಉತ್ತೇಜನ, ಔದಾರ್ಯದಿಂದ ಮುದ್ರಿಸಿದ್ದ ಶ್ರೀ ವಿವೇಕಾನಂದ ಸ್ವಾಮಿಗಳ 'ರಾಜಯೋಗ'ದ ಅನುವಾದ ಇನ್ನೂ ಕೆಲವು ಬಂದವು. 'ಭಕ್ತಿಯೋಗ' 1913ರಲ್ಲಿ ಪ್ರಕಟವಾಗಿತ್ತು, ಈಗ 2004ರಲ್ಲಿ ಪುನರ್ಮುದ್ರಿತವಾಗಿದೆ. 'ಜ್ಞಾನಯೋಗ' ಎರಡು ಭಾಗವಾಗಿ 1936, 1940ರಲ್ಲಿ ಪ್ರಕಟವಾಗಿತ್ತು, ಈಗ ಅವೆರಡೂ ಒಂದಾಗಿ 19.11.06ರಲ್ಲಿ ಹೊರಬಂದಿದೆ. 'ರಾಜಯೋಗ' ಸದ್ಯದಲ್ಲೇ ಪುನರ್ಮುದ್ರಣವಾಗಲಿದೆ.

ಅವರ ನಿರ್ಯಾಣಾನಂತರ ಮತ್ತೂರಿನಿಂದ, ಅವರ ಹಸ್ತಪ್ರತಿ 'ಪಾರಮ ಹಂಸ ಮೀಮಾಂಸಾ' ಎಂಬ ಸಂಸ್ಕೃತ ಪುಸ್ತಕವನ್ನು ಪ್ರಕಟಿಸಿತು. ಅವರ ಲೇಖನ ಮಾಲಿಕೆಗಳಿಂದ Introductions (from Sanskrit and English books), 'Basic Tenets of Shankara Vedanta', ಪುಸ್ತಕಗಳು 1996ರಲ್ಲಿ, The Scientific Approach to Sankara Vedanta', ಸಚ್ಚಿದಾನಂದ ಸೂಕ್ತಿಗಳು, 1999ರಲ್ಲಿ, ದಶೋಪನಿಷತ್ತುಗಳ ಭಾಷ್ಯಗಳನ್ನನುಸರಿಸಿ ಉಪನ್ಯಾಸ ಮಂಜರಿಗಳನ್ನು 1999 ರಿಂದ 2005ರ ಅವಧಿಯಲ್ಲಿ 10 ಪುಸ್ತಕಗಳು, 2002ರಲ್ಲಿ 'ಸಚ್ಚಿದಾನಂದ ಮನನ', 2003ರಲ್ಲಿ 'ಪಾರಿಭಾಷಿಕ ಶಬ್ದಕೋಶ', ಕನ್ನಡದಿಂದ ಸಂಸ್ಕೃತಕ್ಕೆ ಅನುವಾದ ಮಾಡಿರುವ 'ಭಕ್ತಿ ಚಂದ್ರಿಕೆ' 1999ರಲ್ಲಿ, ಹೀಗೆ ಹಲವಾರು ಪುಸ್ತಕಗಳು ಬಂದವು. ಇವಲ್ಲದೆ ಶ್ರೀಶ್ರೀಗಳವರದೇ ಮುಂಚೆ ಪ್ರಕಟವಾಗಿದ್ದ ಅನೇಕ ಗ್ರಂಥಗಳನ್ನು ಪುನರ್ಮುದ್ರಿಸಲಾಯಿತು.

ಶ್ರೀಶ್ರೀಗಳವರು ಅನುಗ್ರಹಿಸಿರುವ ಅಧ್ಯಾತ್ಮ ಗ್ರಂಥಗಳು ಮಹಾಜನರ ಪ್ರೀತಿಪಾತ್ರವಾಗಿದ್ದು, ಕನ್ನಡ ನಾಡಿನ ಅಧ್ಯಾತ್ಮ ಕ್ಷೇತ್ರದಲ್ಲಿ ಕ್ರಾಂತಿ ಎನ್ನುವ ಮಟ್ಟಿಗೆ, ಹೊಸ ಸುಳಿಯನ್ನು ಬಿಟ್ಟಿತ್ತು. ಅನೇಕ ಅಭಿಮಾನಿಗಳಾದ ಮಹಾಜನರು, ಅಧ್ಯಾತ್ಮ ಪುಸ್ತಕಗಳ ರುಚಿ ಕಂಡವರು, ಖರ್ಚಾಗಿ ಸಿಗದ ಹಳೆಯ ಗ್ರಂಥಗಳ ಮುದ್ರಣವನ್ನು ಪುನಃ ಮಾಡಬೇಕೆಂದು ಬಯಸಿದರು. ಅದರಂತೆ ಇಂತಹ ಮರುಮುದ್ರಣ ಕಾರ್ಯವನ್ನು ಹಂತಹಂತಗಳಲ್ಲಿ ಮಾಡಬೇಕೆಂದು ಕಾರ್ಯಾಲಯದವರು, ಆ ಯೋಜನೆಯನ್ನು ಪ್ರಥಮ ಹಂತಕ್ಕೆ ತಗಲುವ 80,000 ರೂ.ಗಳನ್ನು ಸೂಚಿಸಿ,

ಪ್ರಕಟಮಾಡಿದರು. ಹಾಗೆಯೇ ನಿಧಾನವಾಗಿ ಪ್ರಾರಂಭವಾದ ಈ ಕೆಲಸ, 1995 ರಿಂದ ಬಹಳ ಹುರುಪಿನಿಂದ ಮುಂದುವರೆದು ಈವರೆಗೂ ಎಲ್ಲ ಗ್ರಂಥಗಳೂ, ಎರಡರಿಂದ ಐದಾರು ಮುದ್ರಣಗಳನ್ನು ಕಂಡಿವೆ.

ಜೊತೆಗೆ ಶ್ರೀಶ್ರೀಗಳವರ ಶಿಷ್ಯರಾದ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳ 28 ಪುಸ್ತಕಗಳು (ಕನ್ನಡದಲ್ಲಿ) - ರುದ್ರಭಾಷ್ಯ, ಶ್ರೀಸೂಕ್ತ ಭಾಷ್ಯ, - ಹಲವಾರು ಸೂಕ್ತಗಳು, ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ, ಅಧ್ಯಾತ್ಮರಾಮಾಯಣ; ಶ್ರೀ ದೇವರಾಯ ಕುಲಕರ್ಣಿಗಳಿಂದ - ಶಂಕರ ವೇದಾಂತಕ್ಕೆ ಪಠ್ಯಪುಸ್ತಕವೆನಿಸುವ ಬಹುಮೌಲ್ಯದ 'ಶಾಂಕರ ವೇದಾಂತ ಸೌರಭ' ಮತ್ತೆರಡು ಕನ್ನಡ ಗ್ರಂಥಗಳು, ಶ್ರೀ ಡಿ.ಬಿ. ಗಂಗೊಳ್ಳಿಯವರ - ಶ್ರೀಶ್ರೀಗಳವರ ಗ್ರಂಥಾನುವಾದವಾಗಿರುವ 5 ಇಂಗ್ಲಿಷ್ ಪುಸ್ತಕಗಳು ಮತ್ತು ಇತರ 3 ಕನ್ನಡ ಪುಸ್ತಕಗಳು ಪ್ರಕಟವಾದವು. ಶ್ರೀಶ್ರೀಗಳವರಿಂದ ಪಡೆದ ಜ್ಞಾನವನ್ನು, ಶಿಷ್ಯರಾದ ಶ್ರೀ ಲ.ನ. ಮೂರ್ತಿಗಳು ಸೊಗಸಾಗಿ ತಮ್ಮ ಪುಸ್ತಕಗಳಲ್ಲಿ ಹರಡಿದ್ದಾರೆ. ದೇವರಾಯ ಕುಲಕರ್ಣಿಗಳವರು ವಿಷಯ ಜೋಡಣೆ, ಪ್ರತಿಪಾದನೆಯನ್ನು ಮನ ಮುಟ್ಟುವಂತೆ ಮಾಡಿದ್ದಾರೆ. (ಅವರ ಮೇರು ಕೃತಿ 'ಶಾಂಕರವೇದಾಂತ ಸೌರಭ' ಶಂಕರ ವೇದಾಂತಕ್ಕೆ ಸೊಗಸಾದ ಪಠ್ಯ ಪುಸ್ತಕವಾಗಿದೆ) ಬಹಳ ಉತ್ತಮ ರೀತಿಯಲ್ಲಿ ಶ್ರೀಶ್ರೀಗಳವರ ಕೆಲವಾರು ಪುಸ್ತಕಗಳನ್ನು ಶ್ರೀ ಗಂಗೊಳ್ಳಿಯವರು ಇಂಗ್ಲಿಷಿಗೆ ಭಾಷಾಂತರ ಮಾಡಿದ್ದಾರೆ. (ಪರಮಾರ್ಥ ಚಿಂತಾಮಣಿ ಭಾಗ-1 ; **Magic Jewel of Intuition**) ಬಹಳ ಅತ್ಯುತ್ತಮವಾದ ಗ್ರಂಥ. ಈ ರೀತಿಯಲ್ಲಿ, ಉಳಿದವರೂ ಸೇರಿದಂತೆ, ಮುಖ್ಯವಾಗಿ ಮೇಲ್ಕಾಣಿಸಿದ ಮೂರು ವಿದ್ವಾಂಸರೂ ಕಾರ್ಯಾಲಯಕ್ಕೆ, ಶ್ರೀಶ್ರೀಗಳವರ ಉದ್ದೇಶ ಸಾಧನೆಗೆ ಉಪಕಾರ ಮಾಡಿದ್ದಾರೆ.

ಶ್ರೀಶ್ರೀಗಳವರ ಗ್ರಂಥಗಳಲ್ಲೊಂದು ವಿಶೇಷ (1) ಪ್ರಧಾನವಾಗಿ ಶಂಕರ ವೇದಾಂತ ಪ್ರಸರಣೆಯನ್ನೇ ಮಾಡಿದರೂ, ಬೌದ್ಧದರ್ಶನದ 'ಧಮ್ಮಪದ', ಶ್ರೀ ರಾಮಾನುಜಾಚಾರ್ಯರ 'ವೇದಾಂತಸಾರ', 'ಶ್ರೀಭಾಷ್ಯ', 'ವೇದಾಂತ ಸಂಗ್ರಹ'- ಮೂವರೂ ಆಚಾರ್ಯರ ಬ್ರಹ್ಮಸೂತ್ರ ಭಾಷ್ಯದ ಮೇಲಿನ ಅಭಿಪ್ರಾಯಗಳನ್ನು - ಹೀಗೆ ಯಾವ ಸಂಕುಚಿತಭಾವನೆಯೂ ಇಲ್ಲದೆ, ಮನೋವೈಶಾಲ್ಯದಿಂದ ಬರೆದಿದ್ದಾರೆ. (2) ವೇದಾಂತದ ಮೊದಲ ಪರಿಚಯಕ್ಕಾಗಿ ಅಧ್ಯಾತ್ಮವಿದ್ಯೆ, ಉಪನಿಷತ್ತುಗಳ ಮೊದಲ ಪರಿಚಯದಂತಹ ಅನೇಕ ಪುಸ್ತಕಗಳು, (3) ಭಕ್ತಿಪರವಾದ ಹಲವಾರು ಸ್ತೋತ್ರಗಳು, ಅಧ್ಯಾತ್ಮ ತತ್ತ್ವಗಳನ್ನು ಒಂದೊಂದಾಗಿ ವಿವರಿಸುವ ತಮ್ಮದೇ ಪದ್ಯಗಳಿಂದ ಕೂಡಿದ 'ಅಧ್ಯಾತ್ಮ ಗೀತಾವಳಿ' (4) ವೇದಾಂತಾಧ್ಯಾಯಿಗಳಿಗೆ

ಉಪಯೋಗವಾಗುವಂತೆ ಹಲವಾರು ಉತ್ತಮ ಪುಸ್ತಕಗಳಲ್ಲಿ - ಪ್ರಸ್ಥಾನತ್ರಯ ಭಾಷ್ಯಗಳು, ನೈಷ್ಕರ್ಮ್ಯಸಿದ್ಧಿ - ಬರುವ ಸಂಸ್ಕೃತ ಶಬ್ದಗಳಿಗೆ ಸಂದರ್ಭಾನುಸಾರವಾಗಿ ಜೋಡಿಸಿದ ಅರ್ಥವಿವರಣೆಯ 'ಪಾರಿಭಾಷಿಕ ಶಬ್ದಕೋಶ' (5) ತತ್ತ್ವಸಾರವನ್ನೆಲ್ಲಾ ಹಿಂಡಿ ತೆಗೆದ ಕೆಲವು ಮನನೀಯ ವಾಕ್ಯಗಳ 'ಸಚ್ಚಿದಾನಂದ ಸೂಕ್ತಿ' 'ಸಚ್ಚಿದಾನಂದ ಮನನ'ಗಳು, (6) ಪಾರಾಯಣಕ್ಕೆ ಉಪಯೋಗವಾಗುವಂತೆ 'ಮೂಲ ರಾಮಾಯಣ', ಶಾಂಕರ ಭಾಷ್ಯಸಮೇತ 'ವಿಷ್ಣುಸಹಸ್ರನಾಮ ಸ್ತೋತ್ರಮ್' (7) ಸಂಸ್ಕೃತ ಭಾಷೆಯನ್ನು ಕಲಿಯುವವರಿಗೆ 'ಸಂಸ್ಕೃತ ಭಾಷಾಭ್ಯಾಸ'ದ ಪುಸ್ತಕಗಳು, (8) ವೇದಾಂತ ಚರಿತ್ರೆಯನ್ನು ನಿಖರವಾಗಿ ಬೆಳೆಸಿಕೊಂಡು ಒಂದು ಹಂತದವರೆಗಿನ ಸತ್ಯಾನ್ವೇಷಣೆಯನ್ನು 'ವೇದಾಂತ ವಿಚಾರದ ಇತಿಹಾಸ-1' ಎಂಬಲ್ಲಿ, ದಂತ ಕಥೆಯಿಂದ ಬೇರೆ ಮಾಡಿ ನಿಜವಾದ ಜೀವನ ಚರಿತ್ರೆಯನ್ನು 'ಶಂಕರ ಭಗವತ್ಪಾದ ವೃತ್ತಾಂತ ಸಾರಸರ್ವಸ್ವ' ಎಂಬುದೂ (9) ಕಥೆಗಳ ಮೂಲಕ ತತ್ತ್ವವಿವೇಚನೆ ಮಾಡುವಂತಹ 'ಸಮುದ್ರಮಥನ', 'ಲಕ್ಷ್ಮಣಶಾಸ್ತ್ರಿ ಉರುಫ್ ಹುಸೇನ್' (10) ವಿವರಣಕಾರರು, ವ್ಯಾಖ್ಯಾನಕಾರರು ಭಾಷ್ಯದಲ್ಲಿ ಎಬ್ಬಿಸಿದ ಧೂಳನ್ನು ತೊಡೆದು, ಬೆಳೆಸಿದ ಕಳೆಯನ್ನು ಕಿತ್ತು ಶಂಕರರದೇ ನಿಜವಾದ ಅಭಿಪ್ರಾಯಗಳನ್ನು ತಿಳಿಸುವ 'ಮೂಲಾವಿದ್ಯಾನಿರಾಸ' (11) ನೇರವಾಗಿ ಶಂಕರರನ್ನೇ ತಿಳಿಯಲು ಅವರ ಭಾಷ್ಯವನ್ನೇ ಓದುವಾಗ ಶಂಕರರು ಹಿಡಿದ ವಿಧಾನಗಳನ್ನು, ಸಂಪ್ರದಾಯಗಳನ್ನೇ ತಿಳಿಸುವ 'ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞ'ದಂತಹ ಮೇರುಕೃತಿ, 'Shuddha Sankara Prakriya Baskara' ಇಂತಹ ಉನ್ನತ ಮಟ್ಟದ ಸಂಶೋಧನಾ ಗ್ರಂಥಗಳು - ಈ ರೀತಿಯ ಹಲವಾರು ಬಗೆಯ ಬರವಣಿಗೆ, ಜೊತೆಗೆ ಗದ್ಯ-ಪದ್ಯ-ಸ್ತೋತ್ರ-ಕಥೆ-ಪ್ರಬಂಧದಂತಹ ಸಾಹಿತ್ಯದ ಹಲವು ಪ್ರಕಾರಗಳು, ಪ್ರಶ್ನೋತ್ತರ, ವಾದ-ಸಂವಾದ ರೀತಿಯ ಗ್ರಂಥಗಳು ಇಂತಹ ಅನುಪಮ ಮಾರ್ಗಗಳು ಎಲ್ಲವನ್ನೂ ಶ್ರೀಶ್ರೀಗಳವರು ಬಳಸಿಕೊಂಡರು. ಹೀಗೆ ವೇದಾಂತ ದೃಷ್ಟಿಯಿಂದಾಗಲೀ, ಸಾಹಿತ್ಯ ದೃಷ್ಟಿಯಿಂದಾಗಲೀ, ಶ್ರೀಶ್ರೀಗಳವರ ಗ್ರಂಥಗಳು ತತ್ತ್ವ, ಜ್ಞಾನ, ಶೈಲಿ, ವೈವಿಧ್ಯತೆಗಳಂತೆ ಹಲವು ರೀತಿಗಳಿಂದ ಅನುಪಮ, ಅಸದೃಶವಾದುವು. ಇಂತಹುದು ಬೇರೆ ಎಲ್ಲಾದರೂ ಸಿಗಬಹುದೇನೋ ? ಆದರೆ ಅಪರೂಪ ಎಂದು ನಿಶ್ಚಿತವಾಗಿ ಹೇಳಬಹುದು. ಇವುಗಳಲ್ಲಿ ಕೆಲವನ್ನು ಕಾರ್ಯಾಲಯದ ಪಂಡಿತರು, ಶಿಷ್ಯರು ಉಪಯೋಗಿಸಿಕೊಂಡರು. ಇಲ್ಲಿಯೂ ಶ್ರೀಶ್ರೀಗಳ ಮಾರ್ಗದರ್ಶನ ಒದಗಿತು.

1920 ರಿಂದ 1975ರ ವರೆಗೆ 177 ಬಿಡಿಯಾದ ಗ್ರಂಥಗಳು, ಅವುಗಳ ಎರಡನೆ-ಮೂರನೆ-(ಆರನೆಯದೂ ಇತ್ತು) ಮುದ್ರಣ ಪ್ರತಿಗಳು ಸೇರಿದರೆ 256

ಪುಸ್ತಕಗಳು ಪ್ರಕಟವಾಗಿವೆ. 1975 ರಿಂದ 2005 - 30 ವರ್ಷಗಳಲ್ಲಿ ಈ ಸಂಖ್ಯೆಗಳು 189, 222. ಇದರಲ್ಲೇ 1996-2005ರ ವರೆಗಿನ 10 ವರ್ಷಗಳಲ್ಲೇ ಪ್ರಥಮಬಾರಿಗೆ ಬಂದವು 50. ಮರುಮುದ್ರಣದ ಪುಸ್ತಕಗಳೂ ಸೇರಿ ಒಟ್ಟು 142 ಪುಸ್ತಕಗಳು, ಈ ಪುಸ್ತಕಗಳ ಒಟ್ಟು ಪುಟಗಳ ಸಂಖ್ಯೆ 30990, ವೆಚ್ಚ 40,18,425ರೂ. (1996-2006ರ ವರೆಗಿನ ಗ್ರಂಥಗಳ ವಿವರ 'ಪರಿಶಿಷ್ಟ-2' ರಲ್ಲಿದೆ.)

ಒಂದು ವೇಳೆ ಶ್ರೀಶ್ರೀಗಳವರ ಗುಣಮಟ್ಟ, ಪ್ರಮಾಣದಲ್ಲಿ ಪುಸ್ತಕಗಳನ್ನು ಬರೆಯುವವರಿದ್ದರೆ, ಈಗಿನ ಸೌಲಭ್ಯಗಳ ಲೆಕ್ಕದಲ್ಲಿ ಪ್ರಕಟಿತ ಪುಸ್ತಕಗಳು, ಪುಟ ಸಂಖ್ಯೆಗಳು, ಈಗ ಕೊಟ್ಟಿರುವ ಸಂಖ್ಯೆಗಿಂತ ಕನಿಷ್ಠ ಎರಡು ಅಥವಾ ಎರಡೂವರೆ ಯಷ್ಟು ಹೆಚ್ಚಾಗುತ್ತಿತ್ತು, ಶ್ರೀಗಳವರ ಎಲ್ಲ ಬರವಣಿಗೆಯನ್ನೂ (ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಾವಿರಾರು ಲೇಖನಗಳನ್ನು) ಪರಿಗಣಿಸಿದರೆ, ಈ ಗ್ರಂಥಗಳ ಸಂಖ್ಯೆ ಇನ್ನೂ ಹೆಚ್ಚಾಗಿರುತ್ತಿತ್ತು. ಹೆಚ್ಚು ಸೌಕರ್ಯವಿಲ್ಲದ ಅವರ ಕಾಲದಲ್ಲಿ ಇಷ್ಟೆಲ್ಲಾ ಮಾಡಿದ ಶ್ರೀಗಳು, ಆಗ ಈಗಿನ ಸೌಲಭ್ಯಗಳಿದ್ದರೆ, ಇನ್ನೂ ಯಾವ ತರಹದ ಯೋಜನೆಗಳನ್ನು ಹಾಕುತ್ತಿದ್ದರೋ, ಇನ್ನೂ ಎಷ್ಟೆಷ್ಟು ಸಾಧನೆ ಮಾಡಿರುತ್ತಿದ್ದರೋ ಎಂದು ಶ್ರೀಶ್ರೀ ರಂಗಪ್ರಿಯ ದೇಶಿಕೇಂದ್ರರು ಉದ್ಗಾರ ತೆಗೆದಿದ್ದಾರೆ ! ಅದು ಎಷ್ಟು ಸತ್ಯ ! ಆದರೆ ಹೀಗೆ ಹತ್ತು ಶತಮಾನಕ್ಕೊಬ್ಬರು ಬರುವಂತಹ ಶ್ರೀಶ್ರೀಗಳವರ ಸಮಾನರನ್ನು, ಅವರ ಸಮಕಾಲೀನದಲ್ಲಾಗಲೀ, ಈಚಿನ ವರ್ಷಗಳಲ್ಲಾಗಲೀ ಎಲ್ಲಿ ಕಾಣಬಹುದು ? ಈ ದೃಷ್ಟಿಯಿಂದ ಗ್ರಂಥ ಪ್ರಕಟಣೆಯ ಕಾರ್ಯ ಈಚಿನ ವರ್ಷಗಳಲ್ಲಿ ಹೆಚ್ಚಾದ ರೀತಿಯಲ್ಲಿ ನಡೆದು ಸಮಾಧಾನಕರವಾಗಿದೆ ಎನ್ನಬಹುದು.

ಇನ್ನೊಂದು ವಿಷಯ : ಪುಸ್ತಕಗಳ ಪಟ್ಟಿಯಲ್ಲಿ ಕೆಲವಾರು ಗ್ರಂಥಗಳಿಗೆ ಭಾಗ 1 ಕಾಣಿಸುವರೇ ಹೊರತು ಭಾಗ 2ರ ಸುಳಿವಿಲ್ಲ, ಅಂದರೆ ಅದು ಬರೆದಿಲ್ಲ, ಅಚ್ಚಾಗಲಿಲ್ಲ, ಕಾರಣ, ಶ್ರೀಶ್ರೀಗಳು ಒಂದು ಗ್ರಂಥ ಕೆಲಸದಲ್ಲಿ ನಿರತರಾದಾಗ, ಅಲ್ಲಲ್ಲಿ ಕಾಣಬರುವ ಕೆಲವು ವಿಚಾರಗಳಲ್ಲಿ ಮನಸ್ಸು ನೆಟ್ಟು ಅವುಗಳನ್ನು ವಿಸ್ತಾರವಾಗಿ ವಿವರಿಸುವ ಬೇರೊಂದು ಗ್ರಂಥದ ಯೋಚನೆ ಬರುತ್ತದೆ. ಹಾಗೆಯೇ ಹೊರಗಿನ ಮಾತುಕಥೆಯಲ್ಲಿ ಅಥವಾ ಸಂದರ್ಭಾನುಸಾರವಾಗಿ ಇಂತಹ ಪ್ರಚೋದನೆಗಳು ಬಂದಾಗ, ಕೂಡಲೆ ಆ ವಿಷಯವನ್ನು ಕುರಿತ ಬರವಣಿಗೆ ಪ್ರಾರಂಭವಾಗುವದೇ ! ಹೀಗೆ ಏಕಕಾಲದಲ್ಲಿ ಎರಡು ಗ್ರಂಥಗಳ ಬರವಣಿಗೆಯಲ್ಲಿ ತೊಡಗಿದಾಗ ಮೊದಲನೆ ಯದರ ವೇಗ ಕಡಿಮೆಯಾಯಿತು. ಅದೆಲ್ಲ ಮುಗಿಯುವ ವೇಳೆಗೆ ಇನ್ನಾವುದೇ ಕಾರಣಕ್ಕೆ ಮನಸ್ಸು ವಾಲಿ, ಮೊದಲಿನ ಭಾಗ ಸಂಪೂರ್ಣವಾಗದೆ ಎರಡನೆಯ ಭಾಗ

ಬರುವದಿಲ್ಲ. ಈ ರೀತಿ 'ವೇದಾಂತ ವಿಚಾರದ ಇತಿಹಾಸ' 'ಪಾರಮಹಂಸ್ಯ ಮೀಮಾಂಸಾ' ಗಳು ಉದಾಹರಣೆಯಾಗಿವೆ.

ಗ್ರಂಥಗಳಿಗೆ ಅವರು ಬರೆದ 'ಮುನ್ನುಡಿ' ಗಳು, ವಿಮರ್ಶಾಪೂರ್ಣವಾಗಿದ್ದು, ಗ್ರಂಥದ ಬಗೆಗೆ ಬೆಳಕನ್ನು ಹಿಡಿಯಲು ಸಮರ್ಥವಾದವು. ಅವುಗಳಲ್ಲಿನ ವಿಶ್ಲೇಷಣಗಳು, ತರ್ಕಬದ್ಧವಾದ ನಿರ್ಧಾರಗಳು ಪೂರ್ಣವಾಗಿವೆ. ಬಹಳ ಅನುಕೂಲದ ವಿಷಯವೆಂದರೆ ಇಂತಹ ಕೆಲವು ಅತ್ಯುತ್ತಮ ಮುನ್ನುಡಿಗಳು, ಅವರ ಸಂಸ್ಕೃತ ಗ್ರಂಥಗಳಿಗೆ ಇಂಗ್ಲಿಷಿನಲ್ಲಿ ಬರೆದವಾಗಿವೆ. ಅವೆಲ್ಲವುಗಳನ್ನೂ ಸೇರಿಸಿ 'Introductions of Vedanta texts' ಎಂಬ 232 ಪುಟದ ಪುಸ್ತಕವನ್ನೇ 1996ರಲ್ಲಿ ಪ್ರಕಟಿಸಲಾಯಿತು. ಅಂತಹ ಅತ್ಯುತ್ತಮ ಮುನ್ನುಡಿಯನ್ನು ಶ್ರೀ ವಿವೇಕಾನಂದ ಸ್ವಾಮಿಗಳ ಭಕ್ತಿಯೋಗದ ಕನ್ನಡಾನುವಾದದಲ್ಲಿ, Science of Realityಯ ಪುಸ್ತಕದಲ್ಲಿ ಕಾಣಬಹುದು.

ತಾವು ಬರೆದ 'ಮಾಂಡೂಕ್ಯರಹಸ್ಯ ವಿವೃತಿಃ' ಯನ್ನು ಓಂಕಾರೇಶ್ವರ ಕ್ಷೇತ್ರದಲ್ಲಿ ಶ್ರೀ ಗೌಡಪಾದರ ಸಾನ್ನಿಧ್ಯದಲ್ಲಿ ಪಾರಾಯಣ ಮಾಡಿ, ಕಾಶಿಯಲ್ಲಿ ಬೌದ್ಧ ಮತದ ತತ್ತ್ವಸಾರವನ್ನು ವಿವರಿಸುವ ಪಂಡಿತ ಮಾನ್ಯ ಗ್ರಂಥದಕರ್ತೃ ಪ್ರೊ. ಟಿ.ಆರ್. ವಿ. ಮೂರ್ತಿಯವರೊಡನೆ ವಿಪುಲವಾದ ವಿಚಾರ ವಿನಿಮಯದಿಂದ ಸಂಗ್ರಹಿಸಿದ ವಿಷಯಗಳನ್ನು ಬಳಸಿ, ತಮ್ಮ ಮಾಂಡೂಕ್ಯರಹಸ್ಯದ ಪುಸ್ತಕಕ್ಕೆ ವಿಚಾರ ಪ್ರಚೋದಕರ ಪೀಠಿಕೆಗೆ ಬಳಸಿಕೊಂಡರು. ಹತ್ತು ವರ್ಷಗಳನಂತರ, ಬೊಂಬಾಯಿ, ಕಾಶಿ, ಕೊಲ್ಕತ್ತಾದ ಮಹಾವಿದ್ವಾಂಸರುಗಳಲ್ಲಿ ಭಾಷ್ಯವ್ಯಾಖ್ಯಾನ ಪ್ರಸ್ಥಾನಗಳ ವೈಲಕ್ಷಣ್ಯ ಮತ್ತು ತಮ್ಮ 'ಪಂಚಪಾದಿಕಾ' ವಿಚಾರದಲ್ಲಿ ಚರ್ಚೆಯಿಂದ ತಮ್ಮ ಅರಿವನ್ನು ಸ್ಪಷ್ಟಗೊಳಿಸಿಕೊಂಡರು. ತಮ್ಮ ವಿಚಾರ ಧಾಟಿಯನ್ನು ಅವರಿಗೆಲ್ಲ ಮನನ ಮಾಡಿಸಿ ಕೊಟ್ಟರು. ಹೀಗೆ ಉತ್ತಮ ವಿಚಾರ ಎಲ್ಲೇ, ಯಾರಲ್ಲೇ ದೊರೆತರೂ ಯಾವ ಸಂಕೋಚವೂ ಇಲ್ಲದೆ ಅವರನ್ನು ಭೇಟಿಮಾಡಿ ವಿಷಯ ಸಂಗ್ರಹಿಸಲು ಹಿಂಜರಿಯಲಿಲ್ಲ. ಇವು ಗಮನಿಸಬಹುದಾದ ಶ್ರೀಗಳವರ ಅತಿ ಹೆಚ್ಚಿನ ವಿಶೇಷ ಗುಣ.

ಅದೆಲ್ಲದರ ಜೊತೆ, ಅವರು ನಡೆಸಿರುವ ಅಸಾಧಾರಣ ಜ್ಞಾನಯಜ್ಞದಲ್ಲಿ - ಮುಖ್ಯವಾಗಿ ಕನ್ನಡದಲ್ಲಿ ಗ್ರಂಥಗಳ ರಚನೆ, ಭಾಷ್ಯಗಳ ಸೊಗಸಾದ ಅನುವಾದದಂತಹ ಅಮೋಘವಾದ ಕೆಲಸವನ್ನು ಇಷ್ಟು ವಿಸ್ತಾರವಾಗಿ ವಿಪುಲವಾಗಿ ಯಾವ ವಿಶ್ವವಿದ್ಯಾಲಯವೂ ನಡೆಸಲಿಲ್ಲ, ನಾಲ್ಕಾರು ಸೇರಿದರೂ ಹಾಗೆಯೇ ಯಾವ ಸಂಸ್ಥೆಯೂ ನಡೆಸಲಿಲ್ಲ, ನಡೆಸಲಾಗುತ್ತಿರಲಿಲ್ಲ - ಇಂತಹ ಅಪೂರ್ವ, ಅಸಾಧಾರಣ ಕೆಲಸಕ್ಕೆ ಪುರಸ್ಕರಿಸುವ ಆ ಹೆಚ್ಚಿನ ಯೋಗ್ಯತೆಯೂ ಅವುಗಳಿಗೆ ಇರಲಿಲ್ಲ!

**4. ವಿದ್ಯಾರ್ಥಿಗಳು-ಪಾಠಗಳು :** ಶ್ರೀಶ್ರೀಗಳು ಇರುವವರೆಗೂ, ಕೈಲಾಗುವವರೆಗೂ, ಸುಮಾರು 1973-1974ರ ತನಕವೂ ತಾವೇ ಶಿಷ್ಯರ ಪಾಠ ಪ್ರವಚನಗಳನ್ನು ಒಬ್ಬನೇ ವಿದ್ಯಾರ್ಥಿ ಎಂದರೂ ಬೇಸರಿಸದೆ, ಅಕ್ಕರೆಯಿಂದ ನಡೆಸುತ್ತಿದ್ದರು. ಅವರ ನಂತರ ಶ್ರೀ ಲಕ್ಷ್ಮೀ ನರಸಿಂಹ ಮೂರ್ತಿಗಳು ಈ ಕಾರ್ಯವನ್ನು ಕೈಗೊಂಡರು. ಬ್ರಹ್ಮಸೂತ್ರ ಭಾಷ್ಯವನ್ನು ಮುಂದುವರೆಸಿದರು.

ಬೆಂಗಳೂರಿನಲ್ಲಿ : ಶ್ರೀ ಶ್ರೀಗಳವರಲ್ಲಿ ವಿದ್ಯಾರ್ಥಿಯಾಗಿದ್ದ ಶ್ರೀ ಟಿ. ಎಸ್. ರಾಜಗೋಪಾಲರಿಗೆ, ಮುಂದಿನ ಪಾಠಗಳಿಗೆ ಶ್ರೀ ಪರಕ್ಕಜೆ ಸುಬ್ರಹ್ಮಣ್ಯ ಭಟ್ಟರನ್ನು ಕರೆಸಿ, ಸಾಹಿತ್ಯ, ವೇದಾಂತ ಪಾಠಗಳನ್ನು ಹೇಳಿಸಿತ್ತು, ಭಗವದ್ಗೀತಾ ಭಾಷ್ಯ ಪಾಠವಾಗುತ್ತಿತ್ತು. 1976 ಫೆಬ್ರವರಿಯಲ್ಲಿ ವಿದ್ಯಾರ್ಥಿಯು ಹೃಷಿಕೇಶದ ಕಡೆಗೆ ಹೊರಟರು.

ಮತ್ತೂರಿನ ಶ್ರೀ ಸುಬ್ರಾಯ ಅವಧಾನಿಗಳ ಕಿರಿಯ ಪುತ್ರ ಶ್ರೀ ಚಂದ್ರಮೌಳಿ ಅವಧಾನಿಯು 28.4.77ರಲ್ಲಿ, 15.11.77ರಲ್ಲಿ ಗುಂಟೂರು ಜಿಲ್ಲೆಯ ಗ್ರಾಮವೊಂದರಿಂದ ಶ್ರೀ ಜಿ.ಹನುಮಂತರಾವ್ ಬೆಂಗಳೂರಿನ ಕಾರ್ಯಾಲಯಕ್ಕೆ ವ್ಯಾಸಂಗಕ್ಕಾಗಿ ಬಂದರು. ಈ ವೇಳೆಗೆ 10ವರ್ಷ ಕಾಲ ಆಯುರ್ವೇದ ವೈದ್ಯರಾಗಿ ಗುಂಟೂರಿನಲ್ಲಿ ನೆಲೆಸಿ, ಜೊತೆ ಜೊತೆಯಲ್ಲೇ ವೇದಾಂತದ ಅಭಿರುಚಿಯನ್ನೂ ಬೆಳೆಸಿಕೊಂಡು, ಸ್ವಲ್ಪ ಮಟ್ಟಿಗೆ ತಿಳಿದವರೂ ಆಗಿದ್ದರು. ಜೂನ್ 1979ರಲ್ಲಿ ಶ್ರೀ ಚಂದ್ರಮೌಳಿಯವರು ಅನಿರೀಕ್ಷಿತವಾಗಿ ಮತ್ತೂರಿಗೆ ಹಿಂತಿರುಗಿದರು. ಅಲ್ಲಿ ತಂದೆ ಮತ್ತು ಅಣ್ಣನವರಿಂದ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಅಕ್ಟೋಬರ್, ನವೆಂಬರ್ 1979ರಲ್ಲಿ ಪಂಡಿತರು ಉತ್ತರಭಾರತ ಯಾತ್ರೆ ಮಾಡಿದರು. ಹಾಗೆಯೇ ಹನುಮಂತರಾಯರು ಗುಂಟೂರಿಗೆ ಹೋಗಿದ್ದರು. ಹಿಂದಿರುಗಿದ ಮೇಲೆಯೇ ಪಾಠಗಳು ಪ್ರಾರಂಭವಾದವು. ಬೃಹದಾರಣ್ಯಕೋಪನಿಷದ್ಭಾಷ್ಯ, ನೈಷ್ಕರ್ಮ್ಯಸಿದ್ಧಿ, ಸುಗಮಾ ಪಾಠಗಳಾದವು. 22 ಮಾರ್ಚ್ 81ರಲ್ಲಿ ವಿದ್ಯಾರ್ಥಿ ಹನುಮಂತರಾಯರು ಗೃಹಕೃತ್ಯದ ತೊಂದರೆಯಿಂದ ಗುಂಟೂರಿಗೆ ವಾಪಸಾದರು. ಆವೇಳೆಗೆ ಬೃಹದಾರಣ್ಯಕ ಭಾಷ್ಯ ಪಾಠ ಮುಗಿದಿತ್ತು, ಇಲ್ಲಿಂದಾಚೆಗೆ ಬೆಳಗಿನ ಸಮಯದಲ್ಲಿ ಕೆಲವು ಜಿಜ್ಞಾಸುಗಳಿಗೆ ಭಾಷ್ಯಸಾರಾಂಶ ಪಾಠಗಳು ಪ್ರಾರಂಭವಾದವು.

1975ರ ಕೊನೆಯಿಂದ 20-25 ಮಕ್ಕಳಿಗೆ ಸಂಸ್ಕೃತ ಪಾಠಗಳನ್ನು ಶುರುಮಾಡಿತ್ತು, 1976ರ ಮಧ್ಯದ ವೇಳೆಗೆ ವಿದ್ಯಾರ್ಥಿಗಳ ಸಂಖ್ಯೆ 80ಕ್ಕೆ ಏರಿತ್ತು. ಸುರಸರಸ್ವತೀ ಪ್ರಥಮ ಪರೀಕ್ಷೆಗೆ ಕುಳಿತಿದ್ದವರಲ್ಲಿ ನಾಲ್ಕು ಬಾಲಕಿಯರು ಶಾರದಾ ದೇವಿ ಬೆಳ್ಳಿಪದಕವನ್ನು ಸಂಪಾದಿಸಿದರು. ಹೊಸದಾಗಿ ಬಂದ ಮಕ್ಕಳಿಗೆ 1980-81

ರಲ್ಲೂ ಬಾಲ್ಯ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಾಠವೂ ನಡೆಯಿತು. ಇದೇ ಅವಧಿಯಲ್ಲಿ ಕೆಲವಾರು ತಿಂಗಳು ಕಾಲ ಯೋಗಾಸನ ತರಗತಿಗಳೂ ಇದ್ದವು.

**ಹೊಳೆನರಸೀಪುರದಲ್ಲಿ :** 1980ರ ಪ್ರಾರಂಭದಲ್ಲಿ ಶ್ರೀ ಶ್ರೀಗಳವರ ಜನ್ಮ ಶತಮಾನೋತ್ಸವ ಮತ್ತು ತಮ್ಮ ಮಗಳ ವಿವಾಹ ಕಾರ್ಯಗಳಲ್ಲಿ ನಿರತರಾಗಿದ್ದ ಪಂಡಿತರಿಗೆ ಬಿಡುವಾಗಲಿಲ್ಲವಾದ ಕಾರಣ, ಮುಂದೆಯೂ ಪಂಡಿತರ ಪ್ರವಾಸ ಮತ್ತು ರಜಾಗಳಿಂದ ಪಾಠ ನಿಲ್ಲುವುದು ಅನಿವಾರ್ಯವಾಯಿತು. 1982-83ರ ಸಮಯದಲ್ಲಿ ಬೆಂಗಳೂರಿನಿಂದ ವಿದ್ಯಾಕಾಂಕ್ಷಿಗಳಾಗಿ ಬಂದ ಕೆಲವು ಅಧ್ಯಾತ್ಮ ಪ್ರೇಮಿಗಳಿಗೆ- ಶ್ರೀಮತಿ ಶಾರದಮ್ಮ ಮತ್ತು ಸಂಗಡಿಗರು ಹಾಗೂ ಕೆಲ ಸ್ಥಳೀಯರು-ಬೆಳಗ್ಗೆ, ಸಂಜೆ, ಮಾಂಡೂಕ್ಯಕಾರಿಕಾ ಭಾಷ್ಯಪಾಠವಾಯಿತು. ತುಮಕೂರಿನಿಂದ ಶ್ರೀ ಸಿ. ವೈ. ಚಂದ್ರ ಶೇಖರ ಎಂಬುವರು ವಿದ್ಯಾರ್ಥಿಯಾಗಿ ಕೆಲವು ಕಾಲವಿದ್ದರು. ಗೀತಾಭಾಷ್ಯ, ವೇದ ಪಾಠಗಳಾದವು.

ಅಕ್ಟೋಬರ್ 83ರಲ್ಲಿ ಶ್ರೀ ಬಿ.ಎಸ್. ಕೃಷ್ಣಮೂರ್ತಿಗಳು ವಿದ್ಯಾರ್ಥಿಯಾಗಿ ಸೇರಿದರು.ಇವರಿಗೆ ಕಾಠಕಭಾಷ್ಯ, ಗೀತಾಭಾಷ್ಯದಿಂದ ಪಾಠ ಪ್ರಾರಂಭವಾಯಿತು. ಇವರು ಮುಂದಿನ ವರ್ಷದಿಂದಲೇ ಪಂಡಿತರು ಸ್ಥಳದಲ್ಲಿಲ್ಲದಾಗ ವೇದಾಂತಪಾಠ ಗಳನ್ನು, ಪ್ರವಚನಗಳನ್ನು ನಡೆಸುತ್ತಿದ್ದರು. ಅನಂತರ 1984ರ ಡಿಸೆಂಬರ್‌ನಲ್ಲಿ ಶ್ರೀ ಡಿ. ವೆಂಕಟೇಶಯ್ಯನವರು ನಿವೃತ್ತರಾದಾಗ ಕಾರ್ಯಾಲಯದ ಕಛೇರಿಯಲ್ಲಿ ಸಮಿತಿಯ ಅಧೀನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಶ್ರೀರಾಮನವರಾತ್ರಿಯಲ್ಲಿ ಪಂಡಿತರೂ ಶ್ರೀ ಕೃಷ್ಣಮೂರ್ತಿಗಳೂ ಪ್ರವಚನ ಮಾಡಿದರು. ಸಂಜೆ ಸಾಮೂಹಿಕ ವಿಷ್ಣುಸಹಸ್ರನಾಮ ಪಠನ, ಅರ್ಥ ವಿವರಣೆ, ಆಗಾಗ ಭಜನೆಗಳನ್ನು ಶ್ರೀ ಕೃಷ್ಣಮೂರ್ತಿಯವರು ಮುಂದಾಗಿ ನಿಂತು ನಡೆಸಿಕೊಟ್ಟರು. 10.11.85ರಿಂದ ರಜಕ್ಕೆ ಹೋದವರು, ಏಪ್ರಿಲ್ 1986ರಲ್ಲಿ ಅಧೀನಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಮುಂದೆ ಇವರು ಸಂನ್ಯಾಸ ಸ್ವೀಕರಿಸಿ (17.2.96) ಶ್ರೀ ವಿರಜಾನಂದ ಸರಸ್ವತೀ ಎಂಬ ಹೆಸರಿನಲ್ಲಿ ವೇದಾಂತ ಸೇವೆಯನ್ನು ಮಾಡಿದರು. ಆಗಾಗ ಹೊಳೆನರಸೀಪುರಕ್ಕೆ ಪ್ರವಚನಗಳಿಗೂ ಬಂದರು. ಕೆಲವು ಕಾಲ ಬೆಂಗಳೂರು ಕಾರ್ಯಾಲಯದಲ್ಲೂ ಸಹಾಯಕ ಪಂಡಿತರಾಗಿ ಕೆಲಸ ಮಾಡಿದರು. ರಾಜ್ಯದ ಹಲವಾರು ಸ್ಥಳಗಳಲ್ಲಿ ಪ್ರವಚನಗಳನ್ನು ನೀಡಿ ಉತ್ತಮ ಪ್ರವಚನಕಾರರೆಂಬ ಯಶಸ್ಸು ಗಳಿಸಿದರು. ಇವರು 2005ರಲ್ಲಿ ಹೊಳೆನರಸೀಪುರದಲ್ಲೇ ಇರಲು ನಿಶ್ಚಯಿಸಿ ಜೂನ್ 10ರಂದು ಬಂದು, ಚಾತುರ್ಮಾಸ್ಯ ವ್ರತಸ್ವೀಕಾರ ಮಾಡಿದರು. ಅಲ್ಲಿ ನಡೆಯುತ್ತಿದ್ದ ವಿದ್ಯಾನಿಲಯದಲ್ಲಿ ಇಂಗ್ಲಿಷ್ ಪಾಠವನ್ನೂ, ಸ್ಥಳೀಯ ಜಿಜ್ಞಾಸುಗಳಿಗಾಗಿ ವಿವೇಕ

ಚೂಡಾಮಣೀ ಪ್ರವಚನಗಳನ್ನು ಮಾಡಿದರು. ಅಧ್ಯಾತ್ಮ ಪತ್ರಿಕೆಗೂ ಇವರಿಂದ ಸಹಾಯವಾಯಿತು. ಆದರೆ ತಮ್ಮ ಉದ್ದೇಶಿತ ವಾಸ್ತವ್ಯವನ್ನು ಕಡಿಮೆ ಮಾಡಿ, ಅದೇ ಡಿಸೆಂಬರ್‌ನಲ್ಲಿ ಬೆಂಗಳೂರಿಗೆ ಹಿಂದಿರುಗಿದರು. ಈಗ ಪುನಃ ದೊಡ್ಡ ಮುದವಾಡಿಯ ಶ್ರೀದತ್ತ ಕ್ಷೇತ್ರದಲ್ಲಿದ್ದಾರೆ.

1991ರ ಅಂತ್ಯದಲ್ಲಿ, ಸಂನ್ಯಾಸ ಸ್ವೀಕಾರ ಮಾಡಿ ವೇದಾಂತ ಪ್ರಚಾರ ಮಾಡಬೇಕೆಂಬ ಇಷ್ಟವುಳ್ಳ ಅಧ್ಯಾತ್ಮಸಾಧಕ ಶ್ರೀ ಕೇಶವನ್‌ರು ಕಾರ್ಯಾಲಯಕ್ಕೆ ಬಂದರು. ಉಳಿದ ಪಾಠಗಳ ಜೊತೆ, ಕನ್ನಡ ಭಾಷೆಯ ಅಭ್ಯಾಸವನ್ನು ಮಾಡಿದರು. 2.3.92ರಂದು ಮಹಾಶಿವರಾತ್ರಿಯ ದಿನ ಶ್ರೀಶ್ರೀಗಳ ಮಹಾಸನ್ನಿಧಿಯಲ್ಲಿ ಶ್ರೀ ಪ್ರಬೋಧಾನಂದೇಂದ್ರ ಸರಸ್ವತಿಗಳೆಂದು ಯೋಗಪಟ್ಟವನ್ನು ಸ್ವೀಕರಿಸಿದರು. ಕಾರ್ಯಾಲಯದಲ್ಲೇ ಇರುತ್ತಿದ್ದರು. ಅನಂತರ, ಮತ್ತೂರಿಗೆ ವರ್ಗವಾದ ಅಧ್ಯಾತ್ಮ ವಿದ್ಯಾನಿಲಯದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಮತ್ತೂರಿಗೇ ತೆರಳಿದರು.

ಸುಮಾರು 1992 ರಿಂದಲೂ ಸ್ಥಳದಲ್ಲೇ ನೆಲೆಸಿದ್ದು ಪ್ರಸ್ಥಾನತ್ರಯ ಭಾಷ್ಯಪಾಠಗಳನ್ನು ಬಹಳ ಮಟ್ಟಿಗೆ ಪೂರೈಸಿಕೊಂಡಿದ್ದ ಶ್ರೀ ಹೆಚ್.ಕೆ. ಬಲ್ಲಾಳ್‌ರವರು ತಮ್ಮ ಮುಂದಿನ ಅಧ್ಯಾತ್ಮ ಜೀವನವನ್ನು ಕಾಶೀಕ್ಷೇತ್ರದಲ್ಲಿ ಮುಂದುವರೆಸುವ ಸಲುವಾಗಿ 16.7.1997ರಲ್ಲಿ ಕಾಶಿಗೆ ಪ್ರಯಾಣ ಮಾಡಿದರು.

1990ರಲ್ಲಿ ಕಾರ್ಯಾಲಯಕ್ಕೆ ಬಂದ ಶ್ರೀ ಭೀಮರಾಯಶರ್ಮರೊಡನೆ, ಶ್ರೀ ಕೇಶವನ್‌ರವರು ಒಟ್ಟಿಗೆ ವೇದಾಂತ ವಿದ್ಯೆಯ ಸಹಪಾಠಿಗಳಾದರು. 1992ರಲ್ಲೇ ಶ್ರೀ ಶರ್ಮರು ಸಪ್ತಾಹಗಳಲ್ಲಿ ಒಂದೆರಡು ಪ್ರವಚನಗಳನ್ನು ಮಾಡಿದರು. 1995ರಿಂದ ಸಾಯಂಕಾಲಗಳಲ್ಲಿ ಬಾಲ ವಿದ್ಯಾರ್ಥಿಗಳಿಗೆ ಸ್ತೋತ್ರ, ಸಂಸ್ಕೃತ, ಭಗವದ್ಗೀತೆಯ ಪಾಠಗಳನ್ನು ಮಾಡುತ್ತಿದ್ದರು. ಪಂಡಿತರು ಸ್ಥಳದಲ್ಲಿಲ್ಲದಾಗ, ಅಧ್ಯಾತ್ಮ ರಾಮಾಯಣ ಪುರಾಣಶ್ರವಣ, ಅದೇ ಸೆಪ್ಟಂಬರ್‌ನಿಂದ ಶ್ರೀ ಶಂಕರಮಠದಲ್ಲಿ ಸ್ತ್ರೀಯರು, ಬಾಲಕರಿಗಾಗಿ ಭಗವದ್ಗೀತಾ ತರಗತಿ ಇಂತಹ ಉಪಯುಕ್ತ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವಿದ್ಯಾರ್ಥಿ, ಬೋಧಕ, ಅಲ್ಲದೆ ಕಾರ್ಯಾಲಯದ ಆಡಳಿತ ವಿಭಾಗದಲ್ಲಿ ಸಹಾಯಕರಾಗಿಯೂ ಹೆಚ್ಚಿನ ಸೇವೆಯನ್ನು ನಡೆಸಿದರು. 1998ರ ಆಗಸ್ಟ್‌ನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮತ್ತೂರಿಗೆ ದಯಮಾಡಿಸಿದರು. ಈಗೊಂದೆರಡು ವರ್ಷಗಳ ಹಿಂದೆ ಸಂನ್ಯಾಸ ಸ್ವೀಕಾರವನ್ನೂ ಮಾಡಿದ್ದಾರೆ.

ಡಿಸೆಂಬರ್ 1996ರಲ್ಲಿ ಶ್ರೀ ಚಂದ್ರಶೇಖರ ಶಾಸ್ತ್ರಿಗಳು (ಪಂಡಿತರ ಸಹೋದರರು) ಉಪನಿಷತ್ ಭಾಷ್ಯಪಾಠವನ್ನು ಕ್ರಮವಾಗಿ ತಿಳಿಯಲು ಮತ್ತು

ಕಾರ್ಯಾಲಯಕ್ಕೂ ಅನುಕೂಲವಾಗುವ ಸೇವೆಯನ್ನು ಸಲ್ಲಿಸಲು ಬೆಂಗಳೂರಿನಿಂದ ಹೊಳೆನರಸೀಪುರಕ್ಕೆ ಬಂದು ಪ್ರತ್ಯೇಕ ವಸತಿಯನ್ನು ಕಲ್ಪಿಸಿಕೊಂಡರು. 1998ರ ಕೊನೆಯಲ್ಲಿ ಯಾರೂ ವಿದ್ಯಾರ್ಥಿಗಳಿಲ್ಲವಾಗಿ, ವ್ಯಾಸಂಗಕ್ಕಾಗಿ ಮತ್ತೂರಿಗೆ ತೆರಳಿದರು. ಆಗಾಗ ಹೊಳೆನರಸೀಪುರದಲ್ಲಿ ಅನುಷ್ಠಾನ, ಸಪ್ತಾಹಗಳಿದ್ದಾಗ ಪೂಜೆ, ಭಜನೆಗಳಲ್ಲಿ ಸ್ವತಃ ಮುಂದಾಗಿ ನಡೆಸಿಕೊಡುತ್ತಿರುತ್ತಾರೆ.

**4. ಜಿಜ್ಞಾಸುಗಳಿಗೆ ಪಾಠಗಳು :** 1997ರ ಫೆಬ್ರವರಿಯಲ್ಲಿ (ಶ್ರೀಗಳ ನಂತರ) ಪ್ರಥಮಬಾರಿಗೆ ವೇದಾಂತ ಶಿಬಿರವೊಂದನ್ನು ಮಾಡಲಾಯಿತು. ದಿವಸಕ್ಕೆ ಮೂರು ಪಾಠಗಳಂತೆ, ಹತ್ತು ದಿನಗಳಲ್ಲಿ ಶಿಬಿರದಲ್ಲಿ 30 ಪಾಠಗಳಾಗುತ್ತಿದ್ದವು. ಸಾಮಾನ್ಯ 35ರಿಂದ ಪ್ರಾರಂಭವಾದದ್ದು, ಅದರ ಉಪಯೋಗದ ರುಚಿ ಕಂಡಕೂಡಲೆ 60, 65 ಪರಸ್ಥಳದ ಜಿಜ್ಞಾಸುಗಳು ಸೇರುತ್ತಿದ್ದದ್ದು ಒಂದು ಸಂತೋಷದ ಮಾತು. ಅದರಲ್ಲೂ ಹೆಚ್ಚಿನದಾದದ್ದು, ತುಂಬಾ ಆಸಕ್ತರಾದ, ಶ್ರದ್ಧಾಳುಗಳು, ಕೆಲವರು ಸ್ತ್ರೀಯರು ಬರುತ್ತಿದ್ದರು. ಕೆಲವರು ಸ್ಥಳದವರೂ ಬರುತ್ತಿದ್ದರು. ಶಿಬಿರಗಳು ಬಹಳ ಅಧ್ಯಾತ್ಮ ಜನಪ್ರಿಯವಾಗಿ, ಯಶಸ್ವಿಯಾಗಿ ನಡೆದವು. ಬ್ರಹ್ಮಸೂತ್ರಭಾಷ್ಯದಿಂದ ಪ್ರಾರಂಭಿಸಿ (5 ಶಿಬಿರ, 150 ಪಾಠಗಳು,) ಗೀತಾ ಭಾಷ್ಯ ಶಿಬಿರ (41,120), ತೈತ್ತಿರೀಯ ಶಿಬಿರ (2) ಕಾಠಕೋಪನಿಷತ್ತು (2), ಕೇನ-ಪ್ರಶ್ನ (1), ಮುಂಡಕ (2), ಐತರೇಯ, ಮಾಂಡೂಕ್ಯ (1)-ಮಿಶ್ರಪಾಠಗಳು (12) ಹೀಗೆ 1997ರಿಂದ 2006ರವರೆಗೆ 19 ಶಿಬಿರ ಪಾಠಗಳು ಹೊ.ನ.ಪುರದಲ್ಲಿ ನಡೆದಿವೆ.

ಶಿಬಿರಗಳಲ್ಲದೆಯೂ ಮಿಕ್ಕಂತೆ ಆಗಾಗ ಪಾಠಗಳು ಆಗುತ್ತಿವೆ. 2002 ಅಕ್ಟೋಬರ್‌ನಿಂದ ಗೀತಾಭಾಷ್ಯಪಾಠಗಳೂ ನಡೆದವು. ವಿಶೇಷವೆಂದರೆ, ಊರಿನ ಜನರೂ ಪಾಠಗಳ ಬಗ್ಗೆ ಉತ್ಸಾಹ ತೋರಿಸುತ್ತಿದ್ದಾರೆ. ಒಬ್ಬ ಮುಸಲ್ಮಾನರು, ಒಬ್ಬರು ಕ್ರಿಶ್ಚಿಯನ್ನರು ತಾವೂ ಬರಬಹುದೆ ಎಂದು ಕೇಳಿದ್ದು ಪಂಡಿತರುಗಳಿಗೆ, ಕಾರ್ಯಾಲಯಕ್ಕೆ ಹೆಚ್ಚಿನ ಸಂತೋಷವನ್ನು ತಂದಿತ್ತು. ಕೂಡಲೇ ಪಂಡಿತರು ಒಪ್ಪಿದರು ಕೂಡ. (ಈ ಸಂದರ್ಭದಲ್ಲಿ ಏಪ್ರಿಲ್ 2006ರ ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ 'ಮುಕ್ತಿಮಾರ್ಗಕ್ಕೆ ಭಗವದ್ಗೀತೆಯ ಕೊಡುಗೆ' ಎಂಬ ಲೇಖನವನ್ನು ಬರೆದವರು ; ಶ್ರೀಮತಿ ನಾಜ್‌ನೀನ್ ಬೇಗಂ ಎಂಬುವರು) ಹಿಂದೆಯೂ ಶ್ರೀ ಶ್ರೀಗಳವರ ಕೋರಿಕೆಯಂತೆ ಮುಸ್ಲಿಂ ಬಾಂಧವರಿಂದ ಇಸ್ಲಾಂ ಬಗ್ಗೆ ಲೇಖನಗಳು ಬಂದಿದ್ದು, ಪ್ರಕಟವಾಗಿವೆ. ಶ್ರೀಗಳವರೇ ಕೆಲವು ಉತ್ತಮ ಲೇಖನಗಳನ್ನು ತಾವೇ ಸ್ವತಃ ಅನುವಾದ ಮಾಡಿ ಪತ್ರಿಕೆಯಲ್ಲಿ ಹಾಕಿದ್ದಾರೆ.

5. ಶ್ರೀ ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯ : ಶ್ರೀಶ್ರೀಗಳವರು ಕಾರ್ಯಾಲಯವನ್ನು ಸ್ಥಾಪಿಸಿದ್ದೇ ಕೇವಲ ಅಧ್ಯಾತ್ಮವಿದ್ಯಾ ಪ್ರಸಾರಕ್ಕಾಗಿ. ಈ ಉದ್ದೇಶ ಸಾಧನೆಗೆ ಪ್ರವಚನಗಳು, ಗ್ರಂಥ ಪ್ರಕಟಣೆ, ಪತ್ರಿಕೆಗಳು ಉತ್ತಮ ಸಾಧನಗಳಾಗಿದ್ದುವು. ಇದೇ ರೀತಿ ಮುಂದುವರೆಯಬೇಕಾದರೆ ಮುಂದಿನ ಪೀಳಿಗೆ ಈಗಿನ ವಿದ್ವಾಂಸರ ಜಾಗಕ್ಕೆ ಬರಬೇಕಲ್ಲ! ಅಂದರೆ, ಯುವ ಪೀಳಿಗೆಯನ್ನು ಸರಿಯಾಗಿ ತಯಾರು ಮಾಡುವ ಹೊಣೆಗಾರಿಕೆ ಹಳೆಯ ವಿದ್ವಾಂಸರ ಮೇಲೇ ಇದೆ, ಈ ಕೆಲಸಕ್ಕೆ ವಿದ್ಯಾಲಯ ವೊಂದಾಗಲೇ ಬೇಕು ಎಂಬ ಯೋಚನೆಯೇ ಅಧ್ಯಾತ್ಮ ವಿದ್ಯಾಲಯ ಸ್ಥಾಪನೆಯ ಮೂಲ ಕಾರಣ, ಶ್ರೀಶ್ರೀಗಳವರ ಸಂಕಲ್ಪವೂ ಅದೇ ಕಾರಣಕ್ಕಾಗಿಯೇ.

ಕೆಲವು ಸಮಯದಲ್ಲೇ ಇದಕ್ಕಾಗಿ ಸ್ಥೂಲ ಪರಿಚಯದ ಒಂದು ಪ್ರಕಟಣೆಯನ್ನು ಫೆಬ್ರವರಿ 1938ರಲ್ಲಿ ಮಾಡಿದರು. "**ಅಧ್ಯಾತ್ಮ ವಿದ್ಯೆಯನ್ನು ಅಭ್ಯಾಸ ಮಾಡ ಬೇಕೆಂಬ ತರುಣರಿಗೆ ಒಂದು ಅಭ್ಯಾಸ ಪದ್ಧತಿಯನ್ನು ಏರ್ಪಡಿಸಿಕೊಡ ಬೇಕೆಂಬುದು ಕಾರ್ಯಾಲಯದ ಮಹಾಕಾಂಕ್ಷೆ**"ಯು ಎಂದು ಶ್ರೀಶ್ರೀಗಳವರು ಬರೆದರು. ಅಭ್ಯಾಸ ಪದ್ಧತಿಯಲ್ಲಿ, ಸಂಸ್ಕೃತ, ಇಂಗ್ಲಿಷು, ಕನ್ನಡ - ಈ ಮೂರು ಭಾಷೆಗಳ ಮೂಲಕ ತತ್ತ್ವ ವಿಚಾರವನ್ನೂ ಸಾಧನಕ್ರಮವನ್ನೂ ತಿಳಿಯಿಸುವದು ಉದ್ದೇಶ. ಆದರೆ ಕನ್ನಡವೇ ದೇಶಭಾಷೆಯಾಗಿರುವದರಿಂದ, ಆಚರಣೆಯಲ್ಲಿ ಕನ್ನಡಕ್ಕೇ ಹೆಚ್ಚು ಪ್ರಾಧಾನ್ಯವನ್ನು ನೀಡಿದರೂ, ಈ ಮೂರು ಭಾಷೆಗಳ ಪರಿಚಯ ವನ್ನು ಇಲ್ಲಿಯ ತರಗತಿಗಳಲ್ಲಿ ಮಾಡಿಕೊಡಲಾಗುತ್ತದೆ.

ಆದರೆ ಅವರ ಅಸ್ವಸ್ಥತೆಯಿಂದ ಇದರ ಮುಂದಿನ ವಿವರ, ಕಾರ್ಯಾಚರಣೆ ಗಳು ಒಂದೂವರೆ ವರ್ಷಗಳೇ ಕಾಯಬೇಕಾಯಿತು. 1939 ಜುಲೈನಲ್ಲಿ 'ಈಗ ವಿದ್ಯಾಲಯವನ್ನು ಏರ್ಪಡಿಸಲೇಬೇಕೆಂದು ಭಗವತ್ಪ್ರೇರಣೆಯಾಗಿರುವದರಿಂದ' ಆ ತಿಂಗಳ ಪತ್ರಿಕೆಯಲ್ಲಿ ವಿವರಗಳನ್ನು ಪ್ರಕಟಿಸಿದ್ದಾರೆ :

*"ಅಭ್ಯಾಸದ ವಿಷಯಗಳು : (ಅ) ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ - ಎಂಬ ಪ್ರಸ್ಥಾನತ್ರಯವನ್ನು ದಕ್ಷಿಣ ದೇಶದಲ್ಲಿ ಪ್ರಚಾರದಲ್ಲಿರುವ ಮತ ತ್ರಯದ ಪರಿಚಯದೊಡನೆ ಹೇಳಿಕೊಡಲಾಗುತ್ತದೆ. ಇದರ ಜೊತೆಗೆ ಹಿಂದೂ ಮತದ ಇತಿಹಾಸವನ್ನೂ ಭರತಖಂಡದಲ್ಲಿರುವ ವೀರಶೈವ, ಆರ್ಯಸಮಾಜ, ಬ್ರಹ್ಮಸಮಾಜ – ಮುಂತಾದ ಪಂಥಗಳ ಸಂಕ್ಷಿಪ್ತ ಪರಿಚಯವನ್ನೂ ಸೇರಿಸಿರುತ್ತದೆ.*

*(ಆ) ಅವೈದಿಕಮತಗಳ – ಜೈನ, ಬೌದ್ಧ ಕ್ರಿಸ್ತಿಯನ್, ಇಸ್ಲಾಂ, ಪಾರ್ಸಿ, ಯಹೂದಿ ಮುಂತಾದವುಗಳ ಸ್ಥಾಪಕರ ಜೀವನಚರಿತ್ರೆ, ಮುಖ್ಯೋಪದೇಶ*

ಗಳನ್ನೂ ಇಂಗ್ಲಿಷಿನಲ್ಲಿ ಅಥವಾ ಭಾಷಾಂತರದಲ್ಲಿ ಪ್ರಕಟವಾಗಿರುವ ಪುಸ್ತಕಗಳ ಸಹಾಯದಿಂದ,

(ಇ) ಜಪ, ಪೂಜೆ, ಧ್ಯಾನ ಮುಂತಾದ ಸಾಧನಗಳ ಮರ್ಮವನ್ನು ವೈದಿಕ ಪದ್ಧತಿಗನುಗುಣವಾಗಿ,

(ಈ) ಪುರಾಣಪ್ರವಚನ, ಕೀರ್ತನ, ಉಪನ್ಯಾಸ – ಮುಂತಾದ ರೀತಿಯಿಂದ ಅಧ್ಯಾತ್ಮಜೀವನವನ್ನು ನಡೆಯಿಸಿಕೊಂಡು ಸತ್ಕಾಲಕ್ಷೇಪಮಾಡುವ ರೀತಿಯನ್ನೂ ಆ ಮೂಲಕ ಜನತಾಸೇವೆಯನ್ನು ಮಾಡುವ ಕ್ರಮವನ್ನೂ , ತಿಳಿಸಿ ಕೊಡಲಾಗುತ್ತದೆ.

ಅಭ್ಯಾಸದ ಕಾಲ, ಪಾಠಕ್ರಮದ ವಿವರ: ಮೊದಲನೆಯ ವರ್ಷ: ಈಶ ಕೇನ ಕಠ ಮುಂಡಕ ಪ್ರಶ್ನ ಭಾಷ್ಯಗಳು ; ಭಗವದ್ಗೀತಾ ಭಾಷ್ಯದ 6 ಅಧ್ಯಾಯಗಳು ; ಹಿಂದೂಧರ್ಮದ ಇತಿಹಾಸ.

ಎರಡನೆಯ ವರ್ಷ : ಐತರೇಯ, ತೈತ್ತಿರೀಯ, ಮಾಂಡೂಕ್ಯ ; ಭಗವದ್ಗೀತಾ 12ನೆಯ ಅಧ್ಯಾಯಪೂರ ; ತರ್ಕಸಂಗ್ರಹ-ದೀಪಿಕಾ ಸಹಿತ ; ಸಾಂಖ್ಯ ಯೋಗಗಳ ಸಾಮಾನ್ಯ ಪರಿಚಯ ; ಜೈನಬೌದ್ಧ ಮತಗಳ ಪರಿಚಯ.

ಮೂರನೆಯ ವರ್ಷ : ಬೃಹದಾರಣ್ಯಕ 3 ಅಧ್ಯಾಯಗಳು ; ಭಗವದ್ಗೀತಾ ಪೂರ ; ವೇದಾಂತಪರಿಭಾಷಾದಿಗ್ರಂಥಗಳ ಸಾಮಾನ್ಯ ಪರಿಚಯ ; ಪಾರ್ಸಿ, ಯಹೂದಿ, ಕ್ರಿಸ್ತಿ, ಇಸ್ಲಾಂ - ಮತಗಳ ಪರಿಚಯ.

ನಾಲ್ಕನೆಯ ವರ್ಷ : ಬೃಹದಾರಣ್ಯಕ ಪೂರ; ಛಾಂದೋಗ್ಯ ; ಬ್ರಹ್ಮಸೂತ್ರ ಪ್ರಥಮಾಧ್ಯಾಯ ; ವ್ಯಾಖ್ಯಾನಪ್ರಸ್ಥಾನಗಳ ಸಾಮಾನ್ಯ ಪರಿಚಯ.

ಐದನೆಯ ವರ್ಷ : ಬ್ರಹ್ಮಸೂತ್ರ ಪೂರ; ವ್ಯಾಖ್ಯಾನ ಗ್ರಂಥಗಳ ಸಾಮಾನ್ಯ ಪರಿಚಯ, ಪಾಶ್ಚಾತ್ಯ ದರ್ಶನಗಳ ಇತಿಹಾಸ.

ಅಭ್ಯಾಸ ಕ್ರಮ: (1) ಬೆಳಿಗ್ಗೆ, ಅಪರಾಹ್ಣ:- ಎರಡು ಹೊತ್ತೂ ಸುಮಾರು ಒಂದೊಂದು ಘಂಟೆಯ ಎರಡು ಪಾಠಗಳು.

(2) ಮಧ್ಯಾಹ್ನ:- ಪುರಾಣ, ಕೀರ್ತನೆ, ಉಪನ್ಯಾಸ – ಇವುಗಳಿಗೆ ಬೇಕಾದ ಸಾಮಗ್ರಿಯ ಸಂಗ್ರಹ.

(3) ಸಾಯಂಕಾಲ :- ಜನಸಾಮಾನ್ಯಕ್ಕೆ ಅನುಕೂಲವಾಗುವ ಪುರಾಣ ಶ್ರವಣಾದಿಗಳನ್ನು ನಡೆಯಿಸುವದು.

(4) ಬೆಳಗ್ಗೆ ಅಥವಾ ಅಪರಾಹ್ಣ:- ಒಂದು ಘಂಟೆ ಮುದ್ರಣಾಲಯದಲ್ಲಿ ಬೇರೆಬೇರೆಯ ಕೆಲಸವನ್ನು ಕಲಿಯುವದು.

ವಿದ್ಯಾರ್ಥಿಗಳಿಗಿರಬೇಕಾದ ಯೋಗ್ಯತೆ : ಈಗಿನ ಜನಜೀವನ ಕ್ರಮವನ್ನರಿತುಕೊಂಡು ವೈದಿಕ, ಅವೈದಿಕ, ಬ್ರಾಹ್ಮಣ, ಅಬ್ರಾಹ್ಮಣ– ಮುಂತಾದ ಭೇದಭಾವನೆಗಳನ್ನು ಮುರಿದು ತಮ್ಮ ಅನುಷ್ಠಾನದಿಂದ ಜನರಿಗೆ ಮೇಲುಪಙ್ಕ್ತಿಯಾಗಿ ಪರಸ್ಪರ ಸೌಹಾರ್ದವನ್ನೂ ಸಹಾನುಭೂತಿಯನ್ನೂ ಬೆಳೆಯಿಸಬಲ್ಲ ಉದಾರದೃಷ್ಟಿಯ ವೈದಿಕಧರ್ಮೋಪದೇಶಕರನ್ನು ಸಜ್ಜುಗೊಳಿಸುವದೇ ವಿದ್ಯಾಲಯದ ಹೆಗ್ಗುರಿಯು. ಆದ್ದರಿಂದ ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ತಕ್ಕಮಟ್ಟಿಗೆ ಭಾಷಾಪರಿಚಯವುಳ್ಳ ಒಳ್ಳೆಯ ನಡತೆಯ ವಿದ್ಯಾರ್ಥಿಗಳನ್ನು ಮಾತ್ರ ಆರಿಸಲಾಗುವದು. ವಿದ್ಯಾಲಯದಲ್ಲಿ ಸಾಮಾಜಿಕ ಸುಧಾರಣೆ, ರಾಜಕಾರಣದ ಚಳುವಳಿ ಮುಂತಾದ ಹವ್ಯಾಸಗಳಿರುವ ಯಾವ ವಿದ್ಯಾರ್ಥಿಗಳನ್ನೂ ಸೇರಿಸಲಾಗುವದಿಲ್ಲ. ಕ್ಲಿಪ್ತವಾದ ವಿರಾಮಕಾಲಗಳಲ್ಲಿ ಹೊರತು ವಿದ್ಯಾಲಯದ ಅನುಮತಿಯಿಲ್ಲದೆ ವಿದ್ಯಾರ್ಥಿಗಳು ಪಾಠಕಾಲವು ಸಮಾಪ್ತಿಯಾಗುವವರೆಗೂ ಮತ್ತೆಲ್ಲಿಯೂ ಹೋಗುವದಿಲ್ಲವೆಂದು ವಾಗ್ದಾನ ಪತ್ರವನ್ನು ಬರೆದುಕೊಡಬೇಕು.

ವಿದ್ಯಾರ್ಥಿಗಳಿಗೆ ಸಂಸ್ಕೃತದಲ್ಲಿ ಚಂಪೂನಾಟಕ ಗ್ರಂಥಗಳವರೆಗೆ ಅಭ್ಯಾಸವಾಗಿರಬೇಕು. ಇಂಗ್ಲಿಷಿನಲ್ಲಿ ಇಂಟರ್‌ಮೀಡಿಯೇಟ್ ಅಂತಸ್ತಿನವರೆಗೆ ಭಾಷಾಜ್ಞಾನವಿರಬೇಕು. ಈ ಎರಡರಲ್ಲಿ ಒಂದೇ ಭಾಷೆ ಬರುತ್ತಿದ್ದರೆ ಇನ್ನೊಂದು ಭಾಷೆಯನ್ನು ಕಲಿಯಲು ಸಿದ್ಧರಾಗಿರಬೇಕು. ವಾಚಾಲತೆ, ಸಂಸ್ಕೃತಜ್ಞಾನ, ಗ್ರಹಣಶಕ್ತಿ – ಇವುಗಳು ಹೆಚ್ಚಾಗಿರುವವರನ್ನು ಮೊದಲು ಆರಿಸಿಕೊಳ್ಳಲಾಗುವದು. ಒಂದೆರಡು ತಿಂಗಳು ಪರೀಕ್ಷೆಯನ್ನು ಮಾಡಿದಮೇಲೆಯೇ ನಿಯತವಿದ್ಯಾರ್ಥಿಗಳ ಗುಂಪಿಗೆ ಸೇರಿಸಿಕೊಳ್ಳಲಾಗುತ್ತದೆ.

ವಿದ್ಯಾರ್ಥಿಗಳ ಅಶನಾದಿಗಳು : ವಿದ್ಯಾಲಯದಲ್ಲಿ ಓದುವಷ್ಟು ಕಾಲವೂ ವಿದ್ಯಾರ್ಥಿಗಳಿಗೆ ಊಟವೇ ಮುಂತಾದ ಸೌಕರ್ಯಗಳಿಗೆ ಏರ್ಪಾಡು ಮಾಡುವಂತೆ ಮಹಾಜನರಲ್ಲಿ ಪ್ರಾರ್ಥನಾ ಪತ್ರಿಕೆಯನ್ನು ಕಳುಹಿಸಲಾಗಿದೆ. ಅದು ಏರ್ಪಾಡಾಗುವವರೆಗೆ ವಿದ್ಯಾರ್ಥಿಗಳು ತಮ್ಮ ತಮ್ಮ ಸ್ವಂತ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಯೋಗ್ಯರೂ ಬಡವರೂ ಆದ ವಿದ್ಯಾರ್ಥಿಗಳಿಗೆ ಜನರು ಧರ್ಮಾರ್ಥವಾಗಿ ಮಾಡಬಹುದಾದ ಸಹಾಯಧನದಿಂದ ಕಾರ್ಯಾಲಯದ ಪುಸ್ತಕ ಭಂಡಾರದಲ್ಲಿ ಕೊಂಡಿಟ್ಟಿರುವ ಪುಸ್ತಕಗಳನ್ನು ಓದುವದಕ್ಕೆ ಕೊಟ್ಟಿರುತ್ತದೆ. ತಮಗೆ

*ಅನುಕೂಲವಾದಾಗ ಪುಸ್ತಕಗಳನ್ನು ಕೊಂಡು ಕಾರ್ಯಾಲಯದ ಪುಸ್ತಕಗಳನ್ನು ಹಿಂದಕ್ಕೆ ಕೊಡಬಹುದು.*

*ಧರ್ಮಸಹಾಯ : ಕಾರ್ಯಾಲಯದಲ್ಲಿ ಒಂದೊಂದು ಸಲಕ್ಕೆ ಕನಿಷ್ಠ ಪಕ್ಷ ಹತ್ತು ವಿದ್ಯಾರ್ಥಿಗಳನ್ನು ಓದಿಸಬೇಕೆಂತಲೂ ಅವರಿಗೆ ಬೇಕಾಗುವ ಊಟ, ಬಟ್ಟೆ ಪುಸ್ತಕ - ಎಲ್ಲಾ ಸೌಕರ್ಯಗಳನ್ನೂ ಧರ್ಮಾರ್ಥವಾಗಿ ಏರ್ಪಡಿಸಬೇಕೆಂತಲೂ ಅಧ್ಯಕ್ಷರ ಮನಸ್ಸಿನಲ್ಲಿದೆ. ಇದು ಬಹುಧನಸಾಧ್ಯವೆಂಬುದನ್ನು ಹೇಳಲೇಬೇಕಾಗಿಲ್ಲ. ಇದಕ್ಕಾಗಿ ಮಹಾಜನರು ಉದಾರಬುದ್ಧಿಯಿಂದ ಮಾಡುವ ಸಹಾಯವನ್ನು ಕೃತಜ್ಞತೆ ಯಿಂದ ಬರಮಾಡಿಕೊಳ್ಳಲಾಗುವದು. ದಾನಗಳಲ್ಲಿ ಬ್ರಹ್ಮವಿದ್ಯಾ ದಾನಕ್ಕಿಂತ ಹೆಚ್ಚಿನದು ಯಾವದೂ ಇಲ್ಲವೆಂದು ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುತ್ತದೆ. ಈ ಪುಣ್ಯ ಕಾರ್ಯಕ್ಕೆ ತಮ್ಮ ಹಣವು ವಿನಿಯೋಗವಾಗಲೆಂಬ ಹಂಬಲಿಕೆಯಿರು ವವರು ಮಾತ್ರ ತಮಗೆ ತೋರಿದಷ್ಟು ಧನಸಹಾಯವನ್ನು ಪರಮೇಶ್ವರ ಪ್ರೀತ್ಯರ್ಥವಾಗಿ ಕೊಡಬಹುದು. ವಿದ್ಯಾಲಯವು ಧರ್ಮಬುದ್ಧಿಯಿಂದ ಕೊಡುವ ಉದಾರ ಸಹಾಯದಿಂದಲೇ ನಡೆಯುವದೇ ಹೊರತು ಅದಕ್ಕೆ ಮತ್ತೇನೂ ಆಧಾರ ವಿಲ್ಲವೆಂಬುದನ್ನು ಮಾತ್ರ ಇಲ್ಲಿ ತಿಳಿಯಪಡಿಸಲೆಳಸುತ್ತೇವೆ. ಧರ್ಮಸಹಾಯವಾಗಿ ಬರುವ ಹಣದ ವಿನಿಯೋಗದ ವಿವರವನ್ನು ಪ್ರತಿವರ್ಷದ ಕೊನೆಯಲ್ಲಿ ಪ್ರಕಟಿಸ ಲಾಗುತ್ತದೆ."*

ಇಷ್ಟು ದೂರಾಲೋಚನೆಯ ಯೋಜನೆ, ವಿದ್ಯಾರ್ಥಿಗಳ ಯೋಗಕ್ಷೇಮದ ಏರ್ಪಾಡು, ವಿದ್ಯಾಲಯ ಹೇಗೆ ನಡೆಯಬೇಕೆಂಬ ವ್ಯವಸ್ಥೆ ಇವನ್ನೆಲ್ಲ ತಮ್ಮದೇ ಪದ್ಧತಿಯಂತೆ ಶ್ರೀಶ್ರೀಗಳವರು ರೂಪಿಸಿದ್ದರು. ಆದರೂ ಇದು ಕಾರ್ಯಗತವಾಗಲು ಸಾಕಷ್ಟು ಸಮಯವೇ ಬೇಕಾಯಿತು. ಆದಾಗಲೂ, ಯಾವಾಗಲೂ ನಿರೀಕ್ಷಿಸಿದ ಪೂರ್ಣಸ್ಥಿತಿಗೆ ಬರಲಿಲ್ಲ, ವಿದ್ಯಾರ್ಥಿಗಳಿರಲಿಲ್ಲ. ಪ್ರಥಮ ವಿದ್ಯಾರ್ಥಿಯೇ ಶ್ರೀ ಸಿ. ಎನ್. ಯಜ್ಞನಾರಾಯಣ ಶಾಸ್ತ್ರಿಗಳು. ಒಬ್ಬನೇ ವಿದ್ಯಾರ್ಥಿ ಎಂದು ಎಣಿಸದೆ ಪಾಠ ಶುರುಮಾಡಿದರು.

1942ರಲ್ಲಿ ನಿವೇಶನ ಬಂದಿದ್ದರೂ, ಕಟ್ಟಡದ ಕೆಲಸವೇ ಪ್ರಾರಂಭವಾಗಿರ ಲಿಲ್ಲ. 1944ರ ಕೊನೆಯಲ್ಲಿ ಪ್ರಾರಂಭವಾಗಿ, 1945ರ ವೇಳೆಗೆ ಕುಟೀರವೊಂದು ಅರ್ಧ ಸಂಪೂರ್ಣ ಸ್ಥಿತಿಯಲ್ಲಿ ನಿರ್ಮಾಣವಾಗಿತ್ತು. ಆಗಿನ ಅನುಭವ ಶ್ರೀ ಯಜ್ಞ ನಾರಾಯಣ ಶಾಸ್ತ್ರಿಗಳ ಮಾತಿನಲ್ಲಿ : "ನಿವೇಶನದ ತುಂಬ ಕಲ್ಲು ಮುಳ್ಳು, ಅರ್ಧ ವಾಗಿದ್ದ ಕುಟೀರಕ್ಕೆ ಮೇಲ್ಭಾಗ ಜಿಂಕ್‌ಷೀಟಿನ ಛಾವಣಿ. ಒಂದು ರಾತ್ರೆ ಮಳೆ, ಗಾಳಿ

ಎದ್ದು ಜಿಂಕ್ ಶೀಟ್ ಹಾರಿಹೋಯಿತು. ಬೆಳಿಗ್ಗೆ ಅದನ್ನು ತಂದು ಇದ್ದವರು ನಾವೇ ಮೇಲೆ ಹತ್ತಿ, ಜಿಂಕ್‌ಶೀಟ್ ಹೊದಿಸಿ, ಮೊಳೆ ಹೊಡೆದು ಕೂರಿಸಿದೆವು. ಆ ಪ್ರಥಮ ದಿನಗಳ ಆಗಿನ ಕೆಲವು ಅನುಭವಗಳು ಮರೆಯಲಾರದಂತಹವು. ಇಂತಹ ಸಮಯ ದಲ್ಲಿ ಗುರುಗಳೂ ನಮ್ಮ ಜೊತೆಯಲ್ಲೇ ಇದ್ದದ್ದು ಒಂದು ಉತ್ಸಾಹದ ಮಾತು."

ತಮ್ಮ ಮೇಲಿನ ಕೆಲಸಗಳು, ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯ ಬರವಣಿಗೆಯೂ ಸೇರಿದ್ದು, ವಿದ್ಯಾರ್ಥಿಯ ಪಾಠಕ್ಕೆ ತೊಂದರೆಯಾಗಬಾರದೆಂದು ಅವಕಾಶ ಸಿಕ್ಕಿದ ಕೂಡಲೇ, ಆರ್ಥಿಕಸ್ಥಿತಿ ಉತ್ತಮವಾಗಿಲ್ಲದಿದ್ದರೂ, ಬೇರೊಬ್ಬ ಪಂಡಿತರನ್ನು ನೇಮಕಮಾಡಿಕೊಂಡರು. ಶ್ರೀಶ್ರೀಗಳವರಿಗೆ ವಿದ್ಯಾಲಯ, ವಿದ್ಯಾರ್ಥಿಗಳ ಬಗ್ಗೆ ಇಷ್ಟು ಕಳಕಳಿ.

ಶ್ರೀಶ್ರೀಗಳವರ ನಿರ್ಯಾಣಾನಂತರ, ಸೆಪ್ಟೆಂಬರ್‌ನಲ್ಲಿ ಆಗ ಇದ್ದ ವಿದ್ಯಾರ್ಥಿಗೆ ಶ್ರೀ ನಿತ್ಯಾನಂದೇಂದ್ರ ಸರಸ್ವತಿಗಳ ಸನ್ನಿಧಿಯಲ್ಲಿ ಪಾಠಪ್ರವಚನ ಮತ್ತೆ ಶುರು ವಾಯಿತು. ಬ್ರಹ್ಮಸೂತ್ರ ಭಾಷ್ಯವು ಮುಂದುವರೆದು, ವೈಶ್ವಾನರಾಧಿಕರಣ, ಸೂತ ಸಂಹಿತಾ ಪುರಾಣಗಳ ಪಾಠಗಳಾದುವು. 1976 ಜೂನ್‌ನಲ್ಲಿ ಕೆಲವು ಅನಿವಾರ್ಯ ಕಾರಣಗಳಿಂದ ವಿದ್ಯಾರ್ಥಿಗಳ ತರಬೇತಿ ಕಾರ್ಯಕ್ರಮವನ್ನು ಒಂದು ವರ್ಷ ಕಾಲ ಮುಂದೂಡಲಾಯಿತು. ಮುಂದೆ ಬಿಡಿಬಿಡಿಯಾಗಿ ಬಂದ ವಿದ್ಯಾರ್ಥಿಗಳಿಗೆ, ಅವರಿ ರುವವರೆಗೆ ಪಾಠಪ್ರವಚನಾದಿಗಳು, ಹಾಗೆಯೇ ಜಿಜ್ಞಾಸುಗಳಾಗಿ ಬಂದವರಿಗೂ ಆಗಾಗ ಕೆಲವು ಪಾಠಗಳೂ, ಒಮ್ಮೊಮ್ಮೆ ಭಾಷ್ಯ ಭಾಗಗಳ ಪಾಠಗಳೂ ನಡೆಯುತ್ತಾ ಬಂದವು. 10.9.89ರ ವೇಳೆಗೆ ಬಂದಿದ್ದ ಶ್ರೀ ಗೋವಿಂದದಾಸ್, ಶ್ರೀ ಪ್ರಕಾಶ್ ಎಂಬ ವಿದ್ಯಾರ್ಥಿಗಳನ್ನು ಸೇರಿಸಿ ವಿದ್ಯಾನಿಲಯವನ್ನು ಪುನರಾರಂಭಮಾಡಲಾಯಿತು. ವಿದ್ಯಾನಿಲಯದ ಕೆಲಸಕ್ಕಾಗಿಯೇ ಸಹಾಯಕ ಪಂಡಿತರಾಗಿ ಮತ್ತೂರಿನ ಶ್ರೀ ಕೇಶವ ಅವಧಾನಿಗಳು ಆಗಮಿಸಿದರು. ಶ್ರೀ ಕೈವಲ್ಯ ಚೈತನ್ಯಜೀ (ಮುಂದೆ ಸಂನ್ಯಾಸಾಶ್ರಮ ಸ್ವೀಕರಿಸಿದ ಶ್ರೀ ಕೈವಲ್ಯಾನಂದರು)ಯವರು ಕಾರ್ಯಾಲಯದ ಪರವಾಗಿ ಪ್ರಚಾರಕರಾಗಿ ಪ್ರವಾಸ ಮಾಡಿದರು. ಸಾಧಕರಿಗೂ ಪಂಡಿತರಿಗೂ ಟ್ರಸ್ಟಿನ ವತಿಯಿಂದ ವಸತಿ ಭೋಜನ ಸೌಕರ್ಯಗಳನ್ನು ಏರ್ಪಡಿಸಲಾಗಿತ್ತು.

ಪಂಡಿತರಿಗೆ ಕಾರ್ಯಾಲಯದ ಕಾರ್ಯದರ್ಶಿಗಳ ಕೆಲಸ, ಸಾರಸ್ವತ ಕೆಲಸವೂ ಅಧಿಕವಾಗಿದ್ದು, ಸಪ್ತಾಹಗಳಿಗೆ ಪ್ರವಾಸ ಈ ಕಾರಣಗಳಿಂದ ವಿದ್ಯಾ ನಿಲಯದ ಚಟುವಟಿಕೆಗಳಲ್ಲಿ ಕ್ರಮವಾಗಿ ಭಾಗವಹಿಸಲಾಗುತ್ತಿರಲಿಲ್ಲ. ಆದುದರಿಂದ ಆರು ತಿಂಗಳಿನಿಂದಲೂ, ಮತ್ತೂರಿನ ಶ್ರೀ ಕೇಶವಾವಧಾನಿಗಳೇ ವಿದ್ಯಾನಿಲಯದ,

ಬಹುಮಟ್ಟಿನ ಎಲ್ಲ ಪಾಠಗಳನ್ನೂ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿ ಜನಪ್ರಿಯರಾಗಿದ್ದು ಸಂಸ್ಥೆಗೂ ಹೆಚ್ಚಿನ ಭೂಷಣರಾಗಿದ್ದರು. ಆದರೆ ಕ್ರಮಬದ್ಧವಾಗಿ ಕಲಿಯುವಂಥ ವಿದ್ಯಾರ್ಥಿಗಳು, ಆವರೆಗೂ ನಿರೀಕ್ಷಿಸಿದಂತೆ ಯಾರೂ ಬರದಿದ್ದುದು ನಿರುತ್ಸಾಹಕವಾಗಿದ್ದು, ಶ್ರೀ ಅವಧಾನಿಗಳು 2.4.90ರಂದು ಮತ್ತೂರಿಗೇ ತೆರಳಿದರು.

ಮತ್ತೂರಿನಲ್ಲಿ ಶ್ರೀ ಅಶ್ವತ್ಥನಾರಾಯಣಾವಧಾನಿಗಳು, ಶ್ರೀ ಚಂದ್ರಮೌಳಿ ಅವಧಾನಿಗಳು ಮತ್ತು ಶ್ರೀ ಕೇಶವಾವಧಾನಿಗಳೂ ಕೂಡಿ ವಿದ್ಯಾನಿಲಯವನ್ನು ಶ್ರೀಶ್ರೀಗಳವರ ಸಂಪ್ರದಾಯ ಕ್ರಮದಂತೆಯೇ ನಡೆಸುತ್ತಿದ್ದರು. ಅದರಿಂದ ಮತ್ತೂರಿನಲ್ಲಿಯೇ ವಿದ್ಯಾನಿಲಯವನ್ನು ಮುಂದುವರೆಸಲು ಶ್ರೀ ಕೇಶವ ಅವಧಾನಿಗಳೂ ತತ್ವಶಃ ಒಪ್ಪಿದರು. ಟ್ರಸ್ಟ್ ಸಭೆಯಲ್ಲೂ ಈ ಕಾರ್ಯವಿಧಾನ ಒಪ್ಪಿಗೆಯಾಗಿ, ವಿದ್ಯಾನಿಲಯವನ್ನು ಕಾರ್ಯಾಲಯದ ಭಾಗವಾಗಿ ಅಲ್ಲಿಗೇ ವರ್ಗಾಯಿಸಲಾಯಿತು. ಈ ವಿದ್ಯಾನಿಲಯಕ್ಕಾಗಿ 'ಸಂಯಮೀಂದ್ರ ಭವನ' ಎಂಬ ಕಟ್ಟಡವನ್ನೂ ನಿರ್ಮಿಸಲಾಯಿತು.

ಸೆಪ್ಟೆಂಬರ್ 1990ರಲ್ಲಿ ಯೋಗಾನರಸಿಂಹ ಎಂಬ ಸಾಧಕರು ಸೇರಿದರು. ಸ್ಥಳೀಯರಾದ 12 ಸಾಧಕರೂ ಇದ್ದರು. ಪರಸ್ಥಳದ ಐದು, ಸ್ಥಳೀಯ ಐದು - ಹೀಗೆ ಹತ್ತು ವಿದ್ಯಾರ್ಥಿಗಳಿಗೆ ವೇದಾಧ್ಯಯನ ಶಿಕ್ಷಣವೂ ನಡೆಯಿತು. ಶ್ರೀ ಅದ್ವೈತಾನಂದ ಸ್ವಾಮಿಗಳವರು (ಪೂರ್ವಾಶ್ರಮದ ಮತ್ತೂರಿನ ಶ್ರೀ ಸುಬ್ರಾಯಾವಧಾನಿಗಳು) ನೈಷ್ಕರ್ಮ್ಯಸಿದ್ಧಿ ಪಾಠಕ್ಕೆ ಬೋಧಕರಾಗಿ ಸಹಾಯ ಮಾಡಿದರು. 1992ರಲ್ಲಿ ಸ್ವಾಮಿ ಪ್ರಬೋಧಾನಂದರೂ ವ್ಯಾಸಂಗಕ್ಕಾಗಿ ಬಂದು, ಐವರು ಬ್ರಹ್ಮಚಾರಿಗಳು, ಸ್ಥಳೀಯರು 12 ಕೂಡಿ 18 ವಿದ್ಯಾರ್ಥಿಗಳಾದರು.

ಹೊಳೆನರಸೀಪುರದಲ್ಲಿ ಮಾತಾಜಿಯವರಿಂದ, ಹೊರಗಿನಿಂದ ಬಂದುಳಿಯುವ ಸಂನ್ಯಾಸಿಗಳು, ಅಧ್ಯಾತ್ಮ ಸಾಧಕರು ಅತಿಥಿ ಆಗಂತುಕರು ಇವರೆಲ್ಲರಿಗೂ ದೇವರ ನೈವೇದ್ಯಕ್ಕೂ ಭೋಜನ ವ್ಯವಸ್ಥೆ ಇತ್ತು. ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಮತ್ತೂರಿಗೂ ತೆರಳಿದರು. ಇಲ್ಲಿಯೇ ಉಳಿದ ಪರಸ್ಥಳದ ಮತ್ತು ಸ್ಥಳೀಯ ಜಿಜ್ಞಾಸುಗಳಿಗೆ ಕುಂಠಿತವಾಗಿಯಾದರೂ ವೇದಾಂತ ವಿದ್ಯಾ ಪಾಠಗಳು ಮುಂದುವರೆದವು.

ಇದರನಂತರ, ಐದು ವರ್ಷಗಳವರೆಗೂ ಪೂರ್ತ ನಿಲ್ಲದ ವಿದ್ಯಾರ್ಥಿಗಳು ಬಂದು ಮಧ್ಯೆ ಬಿಟ್ಟು ಹೋದರೆ ಹೇಳಿದ ಪಾಠಗಳ ಸಫಲತೆಯಾಗಲಿಲ್ಲ ಎಂಬ ಕಾರಣಕ್ಕೆ ಹೊಸದೊಂದು ಯೋಚನೆಯನ್ನು ಮಾಡಲಾಯಿತು. ಸಂಸ್ಕೃತ ಭಾಷಾಜ್ಞಾನ, ವೈದಿಕಾಚಾರಗಳ ಅನುಷ್ಠಾನವುಳ್ಳ ಹದಿನೆಂಟು ವಯಸ್ಸಿನ ಪ್ರೌಢ

ವಿದ್ಯಾರ್ಥಿಗಳಿಗೆ ಮೂರು ವರ್ಷ ಅವಧಿಯ ಅಧ್ಯಾತ್ಮ ವಿದ್ಯೆಯ ಶಿಕ್ಷಣವನ್ನು ಕೊಟ್ಟು, ಶಂಕರಪ್ರಸ್ಥಾನತ್ರಯ ಭಾಷ್ಯಾನುಸಾರವಾಗಿ ವೇದಾಂತೋಪನ್ಯಾಸಗಳನ್ನು ಮಾಡಬಲ್ಲ ಪ್ರಚಾರಕರನ್ನಾಗಿ ಸಿದ್ಧಗೊಳಿಸುವ ಏರ್ಪಾಡನ್ನು ಮಾಡಲುದ್ಯುಕ್ತವಾಯಿತು. ವಿದ್ಯಾರ್ಥಿಗಳಿಗೆ ಉಚಿತ ವಸತಿ, ಭೋಜನ ಸೌಕರ್ಯವನ್ನು ಕಲ್ಪಿಸಿಕೊಡುವದೆಂದೂ ಪ್ರಕಟಣೆಯೊಂದನ್ನು ಜೂನ್ 1998ರಲ್ಲಿ ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಹಾಕಲಾಯಿತು. 1998ರ ಆಗಸ್ಟ್‌ನಿಂದ ಇಬ್ಬರು ವಿದ್ಯಾರ್ಥಿಗಳಿಗೆ ಬೆಳಗಿನ ಸಮಯದಲ್ಲಿ ವೇದಾಂತ ಪಾಠಗಳಾದುವು.

ಜನವರಿ 20, 03ರಲ್ಲಿ, ಹಾಗೂ ಮುಂದೆಯೂ ಟ್ರಸ್ಟ್‌ಸಮಿತಿಯಲ್ಲಿ ಅಧ್ಯಾತ್ಮ ವಿದ್ಯಾನಿಲಯದ ವಿಷಯದಲ್ಲಿ ಪರಿಶೀಲನೆಯಾಯಿತು. ಸದಸ್ಯರೆಲ್ಲರ ಸಲಹೆಗಳನ್ನು ಕಾರ್ಯಗತವಾಗುವಂತವುಗಳನ್ನೂ ಗಮನಕ್ಕೆ ತಂದುಕೊಂಡಿತು.

2002ರ ಕೊನೆಯಲ್ಲಿ ಶ್ರೀ ಚಂದ್ರಮೌಳಿಯವರು ಹೊಳೆನರಸೀಪುರಕ್ಕೆ ಬಂದು ಕಾರ್ಯಾಲಯದ ಸಾರಸ್ವತ ಸೇವೆಗಳನ್ನು ನಡೆಸಿ ಶ್ರೀಶ್ರೀಗಳವರಿಗೆ ಅರ್ಪಣೆ ಮಾಡುವ ಇಚ್ಛೆಯನ್ನು ಸೂಚನೆಯಾಗಿ ತಿಳಿಸಿದ್ದರು. ಹಾಗೆಯೇ, 2003ರ ಫೆಬ್ರವರಿಯಲ್ಲಿ ಮತ್ತೂರಿನಿಂದ, ನಾಲ್ಕು ವಿದ್ಯಾರ್ಥಿಗಳೊಡನೆ ಹೊಳೆನರಸೀಪುರಕ್ಕೆ ಬಂದರು. ಅಧ್ಯಾತ್ಮ ವಿದ್ಯಾನಿಲಯಕ್ಕೆ ಪ್ರಧಾನ ಆಚಾರ್ಯರೆಂದು, ಮುಂಚೆಯೇ ತೀರ್ಮಾನವಾದಂತೆ, ಸೂತ್ರ ವಹಿಸಿಕೊಂಡರು. ಮಾರ್ಚ್ ತಿಂಗಳಿನಿಂದ ಕ್ರಮವಾಗಿಯೇ ಪಾಠಗಳು ಆರಂಭವಾಯಿತು. ಸಮಯ ಕಳೆಯದಂತೆ ಪಾಠವನ್ನು ಹೇಳಲಾರಂಭಿಸಿದರು. ಶ್ರೀಶ್ರೀಗಳವರ ಕನ್ನಡಗ್ರಂಥ, ಕಾವ್ಯಪಾಠ, ಮಧ್ಯಾಹ್ನ ಪ್ರೌಢ ವಿದ್ಯಾರ್ಥಿಗಳಿಗೆ ಗೀತಾಭಾಷ್ಯ 18ನೇ ಅಧ್ಯಾಯ, ಕಿರಿಯರಿಗೆ ಅಮರಕೋಶ, ವ್ಯಾಕರಣ, ಮಂತ್ರಪಾಠಗಳು ನಡೆಯಲಾರಂಭಿಸಿದುವು.

2003 ಮೇ 18ನೇ ತಾರೀಖು ಇಲ್ಲಿಯ ಅಧ್ಯಾತ್ಮ ವಿದ್ಯಾನಿಲಯದ – ಈಗ ಶ್ರೀಶ್ರೀಗಳವರ ಗೌರವಾರ್ಥವಾಗಿ, ಶ್ರೀ ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯ ಎಂಬ ಹೆಸರಿನಿಂದ ಔಪಚಾರಿಕ ಪ್ರಾರಂಭೋತ್ಸವವನ್ನು ಬೆಂಗಳೂರು ಕಾರ್ಯಾಲಯದಲ್ಲಿ ಬಹಳ ಸಂತೋಷದ ಸಮಾರಂಭದಲ್ಲಿ ನಡೆಸಲಾಯಿತು. ಪ್ರವಚನ ಮಂದಿರದ ತುಂಬ ಗಣ್ಯರು, ಭಕ್ತರೂ ಸೇರಿದ್ದರು. ಬೆಂಗಳೂರಿನ ಸುಪ್ರಸಿದ್ಧ ವಾಗ್ಮಿಗಳೂ ಸರಳ ಶ್ರೇಷ್ಠರೂ ಜ್ಞಾನನಿಷ್ಠರೂ, ಅತ್ಯುತ್ತಮವಾಗಿ ಸಂನ್ಯಾಸಧರ್ಮವನ್ನು ಅರಿತು ಪಾಲಿಸುವ ಯತಿವರ್ಯರೂ ಆದ ಶ್ರೀಶ್ರೀ ರಂಗಪ್ರಿಯ ಮಹಾದೇಶಿಕೇಂದ್ರ ಸ್ವಾಮಿಗಳು ಜ್ಯೋತಿ ಬೆಳಗುವದರ ಮೂಲಕ ಈ ವಿದ್ಯಾನಿಲಯವನ್ನು

ಉದ್ಘಾಟಿಸಿ ತಮ್ಮ ತುಂಬು ಮನಸ್ಸಿನ ಆಶೀರ್ವಾದವನ್ನು ಅನುಗ್ರಹಿಸಿದರು. "ನದಿಗೆ ಬರ್ತಾ ಬರ್ತಾ ಬೇರೆ ನದಿಗಳೂ ಕಶ್ಮಲಗಳೂ ಸೇರಿಕೊಂಡು ಪರಿಶುದ್ಧತೆ ಕಳೆಯುತ್ತದೆ. ಅದರ ಮೂಲಕ್ಕೆ ಹೋದರೆ ಅದರ ಶುದ್ಧರೂಪ ತಿಳಿಯುತ್ತದೆ. ಸಂಪ್ರದಾಯ ಪರಂಪರೆಯಲ್ಲಿ ಕಾಲಕ್ರಮದಲ್ಲಿ ಮೂಲದಲ್ಲದಿರುವ ಹೊಸ ಭಾವನೆಗಳು ಸೇರಿಕೊಳ್ಳುತ್ತವೆ. ಮೂಲಭೂತವಾದ ಸಿದ್ಧಾಂತವನ್ನ ಹೊರತಂದವರು ಶ್ರೀ ಸ್ವಾಮಿಗಳು" ಎಂದು ನುಡಿದರು.

'ಅಧ್ಯಾತ್ಮ ವಿದ್ಯೆ' ಎಂಬ ವಿಷಯದಲ್ಲಿ ಪ್ರೊ. ಸಾ.ಕೃ. ರಾಮಚಂದ್ರರಾಯರು ವಿದ್ವತ್ಪೂರ್ಣ ಉಪನ್ಯಾಸವನ್ನು ನೀಡಿದರು. "ಸೂತ್ರಭಾಷ್ಯ ಅಧ್ಯಯನ ಮಾಡುವಾಗ ಏನೇನು ಮಾಡುತ್ತಿದ್ದರೂ ಭಾಷ್ಯದ ಮಾತುಗಳು ಮನಸ್ಸಿನಲ್ಲಿರಬೇಕು. ಬೇರೆ ಯಾವ ಕಡೆಯೂ ಹೋಗಬಾರದು, ಪ್ರಕ್ಷೇಪ ಹೊಂದಬಾರದು. ಹೀಗೆ ಅಧ್ಯಯನ ರೀತಿಯಲ್ಲಿ ತನ್ಮಯತೆ ಏಕಾಗ್ರತೆ ಇಲ್ಲದಿದ್ದರೆ ಕೇಳಿದ ಮಾತು ಮಾತಾಗಿ ಉಳಿಯುತ್ತೆ ಮಾತಿಗೆ ಅರ್ಥ ಸ್ಫುರಿತವಾಗುವದಿಲ್ಲ. ಅರ್ಥವತ್ತಾಗಿ ಆ ಮಾತು ಒಳಕ್ಕೆ ಬರಬೇಕಾದರೆ ತದೇಕ ನಿಷ್ಠೆ ಇರಬೇಕು ; ಊಟ ಮಾಡುವಾಗ, ಸ್ನಾನ ಮಾಡುವಾಗ, ನಿಂತಾಗ, ಕೂತಾಗ, ಓಡಿಯಾಡುವಾಗ ಮತ್ತೆ ಮತ್ತೆ ಆ ಮಾತು ಬರುತ್ತಿದ್ದರೆ ಜ್ಞಾನ. ಹೊರಗಿನಿಂದ ಬರಬೇಕಾದದ್ದು ಯಾವದೂ ಇಲ್ಲ. ಪುಸ್ತಕ ಓದಿ, ಗುರುಗಳಿಂದ ಕೇಳಿ ಬರುವದಿಲ್ಲ. ಅಂತಸ್ಥಮೇವವಾಗಿ ಒಳಗಿನಿಂದಲೇ ಬರಬೇಕು.... ದಿನ ಬೆಳಗಿನಿಂದ ಸಂಜೆಯವರೆಗೆ, ಹುಟ್ಟಿನಿಂದ ಸಾಯುವವರೆಗೆ ವೇದಾಂತವನ್ನೇ ಚಿಂತನೆ ಮಾಡಬೇಕು ಎನ್ನುವ ಮಾತಿದೆಯಷ್ಟೆ - ಇದು ಅನ್ವಯರೂಪಿಯಾದ ಪ್ರಯೋಗ ರೂಪಿಯಾದ ವೇದಾಂತ. ನಮ್ಮ ಸ್ವಾಮಿಗಳ ಸ್ಫೂರ್ತಿಯಿಂದ ಪ್ರೇರಣೆಯಿಂದ ಆರಂಭ ಅಥವಾ ಪುನರುಜ್ಜೀವನವಾಗುತ್ತಿರುವ ಈ ಅಧ್ಯಾತ್ಮನಿಲಯ ವ್ಯಕ್ತಿ ಸಂಪನ್ನತೆಗೂ ಸಮಾಜದ ಸ್ವಚ್ಛತೆಗೂ ಕಾರಣವಾಗಲಿ" ಎಂದು ಹಾರೈಸಿದರು.

ಪಂಡಿತ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು ಶ್ರೀಶ್ರೀಗಳವರ ವಿಷಯದಲ್ಲಿ ಅವರ ಸಾಧನೆಯನ್ನು ಕುರಿತು ಮಾತನಾಡಿದರು. ಟ್ರಸ್ಟ್ ಕನ್‌ವೀನರಾದ ಶ್ರೀ ತಾಂಡವೇಶ್ವರರು 'ಕಾರ್ಯಾಲಯದ ವೇದಾಂತ ಪಥ'ವನ್ನು ವಿವರಿಸಿದರು. ಬೆಂಗಳೂರು ಶಾಖಾ ಕಾರ್ಯಾಲಯದ ಅಧ್ಯಕ್ಷರಾದ ಶ್ರೀ ಡಿ. ಗಣಪತಿ ಶಾಸ್ತ್ರಿಗಳು "ಶ್ರೀ ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯ"ವನ್ನು 'ಕಾರ್ಯಾಲಯದ ಕುಸುಮ' ವೆಂದರು. ಇಂತಹ ಲೋಕಸಂಗ್ರಹ ವ್ಯವಸ್ಥೆ ನಿರಂತರವಾಗಿ ನಡೆಯಲೆಂಬ ಮಹದಾ ಕಾಂಕ್ಷೆಯಲ್ಲಿ ಚತುರ್ಥಸಾಧನವು ಉನ್ನತ ವೇದಾಂತ ಶಿಕ್ಷಣ ನೀಡಬಲ್ಲ ಈ

ವಿದ್ಯಾಲಯವು. ಶ್ರೀಶ್ರೀಗಳವರು ಬರೆದಿರುವಂತೆ 'ಬಹುಧನಸಾಧ್ಯವಾದ ಈ ಪುಣ್ಯಕಾರ್ಯಕ್ಕೆ, ಅವರ ವೇದಾಂತ ಹರಕೆ, ಆಶಯ ಮತ್ತು ಆಶೀರ್ವಾದವನ್ನು ಬಿಂಬಿಸುವ ಅವರ ಮಾತುಗಳು ಮತ್ತು ಪ್ರಾರ್ಥನೆ : **'May He who is the Self of us all, prompt our brothers to take a living interest in the progress of the Vidyalaya'.**

ಬೆಳಿಗ್ಗೆಯೇ ನಡೆದ ಸಮಾರಂಭಕ್ಕೆ ಶ್ರೀ ಚಂದ್ರಮೌಳಿಅವಧಾನಿಗಳು ವಿದ್ಯಾರ್ಥಿಗಳೊಡನೆ ಬಂದು ಮಧ್ಯಾಹ್ನವೇ ಹೊಳೆನರಸೀಪುರಕ್ಕೆ ಹಿಂದಿರುಗಿದರು.

2005 ಜೂನ್ ತಿಂಗಳಲ್ಲಿ ಮತ್ತೂರಿನಿಂದ ಆಗಮಿಸಿದ್ದ ವೇ|| ಸುಬ್ರಹ್ಮಣ್ಯ ಭಿಡೆಯವರು ಎರಡನೆ ವಾರ್ಷಿಕ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳನ್ನು ನಡೆಸಿದರು. ಎಲ್ಲ ವಿದ್ಯಾರ್ಥಿಗಳೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು.

ಇವಿಷ್ಟೂ ಈಗಿನವರೆಗಿನ ಶ್ರೀ ಸಚ್ಚಿದಾನಂದ ಅಧ್ಯಾತ್ಮ ವಿದ್ಯಾನಿಲಯದ ನಡೆಯ ಪಕ್ಷಿನೋಟ. ಪ್ರಗತಿಯೇನೋ ಸಮಾಧಾನಕರವಾಗಿದೆ. ಆದರೆ, ಕೆಲವು ನ್ಯೂನತೆಗಳಿವೆ. ಮೊದಲನೆಯದು ಐದು ವರ್ಷಗಳೂ ಸ್ಥಿರವಾಗಿ ನಿಲ್ಲಲಾರದ ವಿದ್ಯಾರ್ಥಿಗಳು. ಈಗೇನೋ ಪುಣ್ಯದಿಂದ 2003 ರಿಂದ 2006 ಜೂನ್‌ವರೆಗೆ ಸಾಮಾನ್ಯವಾಗಿ ಹತ್ತು ವಿದ್ಯಾರ್ಥಿಗಳಿದ್ದಾರೆ. ಹೌದು. ಆದರೆ ಐದಾರನ್ನು ಬಿಟ್ಟರೆ ಇಬ್ಬರು ಮೂವರು ಬಿಡುವರು, ಮತ್ತೊಬ್ಬರು ಬರುವರು ಹೀಗೆ ನಡೆದಿದೆ. ಬರುವ ಹೊಸಬರಲ್ಲಿ ಕೆಲವರು ಪಾಠಗಳು ಅರ್ಥವಾಗಲಿಲ್ಲವೆಂದು ಬಿಟ್ಟು ಹೋಗಿರುವದೂ ಉಂಟು.

ಬೋಧನೆಯ ವರ್ಷಗಳು ಒಂದೊಂದಾಗಿ ಉರುಳುವಾಗ, ಕೆಲಸದ ಹೊರೆ ಜಾಸ್ತಿಯಾಗುತ್ತಿರುವ ಸಂದರ್ಭದಲ್ಲಿ, ಶ್ರೀ ಚಂದ್ರಮೌಳಿ ಅವಧಾನಿಗಳೊಬ್ಬರೇ ಸರ್ವ ಸಾಹಸದಿಂದ ನಗುಮುಖದಿಂದ ಪಾಠಪ್ರವಚನಗಳನ್ನು ನಡೆಸುತ್ತಿದ್ದಾರೆ. ಅವರ ಸಹಾಯಕ್ಕೆ ಬಂದವರು, ತಾತ್ಕಾಲಿಕವಾಗಿ ನಿಂತರೇ ಹೊರತು, ನಾಲ್ಕಾರು ವರ್ಷಗಳಾದರೂ ನಿಲ್ಲುವಂತಹ ಸಹಾಯಕ ಪಂಡಿತರೊಬ್ಬರು ಬೇಕು. ಇಂಗ್ಲಿಷ್, ಸಂಸ್ಕೃತ ಮತ್ತು ಪಾಶ್ಚಾತ್ಯ ತತ್ತ್ವಗಳು, ಭಾರತದ ಅನ್ಯಮತಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವ ದಕ್ಷ ಅರೆಕಾಲಿಕ ಉಪಾಧ್ಯಾಯರೂ ವಿರಳವಾಗಿದ್ದಾರೆ.

ಹೀಗೆ, ವಿದ್ಯಾರ್ಥಿಗಳ ಕೊರತೆ, ಒಳ್ಳೆಯ ಉಪಾಧ್ಯಾಯರುಗಳ ಅಭಾವ ಹಿಂದಿನಂತೆಯೇ ಸಮಸ್ಯೆಯಾಗಿದೆ. ಬಗೆಹರಿಸುವ ಪ್ರಯತ್ನಗಳು ಸಫಲವಾಗಿಲ್ಲ, ಕೇವಲ ವಿದ್ಯಾದಾನವನ್ನೇ ಗುರಿಯಾಗಿಟ್ಟುಕೊಂಡಿರುವ ಉದಾರ ಮನೋಭಾವದ ಪಂಡಿತರೇ ಈ ಕ್ಷೇತ್ರದಲ್ಲಿ ಉತ್ತಮ ಫಲವನ್ನು ಬೆಳೆಸಬಲ್ಲವರಾಗಿರುತ್ತಾರೆ. ಅದೆಲ್ಲ

ಭಗವಂತನ ದಯೆ, ಶ್ರೀಗಳವರ ಆಶೀರ್ವಾದವನ್ನವಲಂಬಿಸಿದೆ. ಪರಿಹಾರಕ್ಕೆ ವೇದ-ವೇದಾಂತಭಿಮಾನಿಗಳಾದ ಭಕ್ತ ಮಹಾಜನಗಳ ಸಹಾಯಕ್ಕೂ ಹೆಚ್ಚಿನ ಪಾತ್ರವಿದೆ. ಸೇವಾಮನೋಭಾವವೇ ಜೀವನದ ಮುಖ್ಯಪಥವೆಂದು ನಂಬಿರುವ ವೇದಾಂತವನ್ನು ಚೆನ್ನಾಗಿ ಬಲ್ಲವರು ಯಾರಾದರೂ ಮುಂದೆ ಬಂದು, ಒಂದು ವರ್ಷ ಕಾಲದೊಳಗೆ ಶ್ರೀಶ್ರೀಗಳವರ ಅತ್ಯುತ್ತಮವಾದ ಶಾಂಕರವೇದಾಂತ ಪ್ರಕ್ರಿಯೆಯನ್ನು ತಿಳಿದು ಅದರಂತೆ ವಿದ್ಯಾನಿಲಯದ ಸಹಾಯಕಪಂಡಿತರಾಗಿ ; ಸಂಸ್ಕೃತ, ಇಂಗ್ಲಿಷ್ ಮತ್ತು ಇತರ ವಿಷಯಗಳನ್ನರಿತಿರುವ ಉಪನ್ಯಾಸಕರೂ. ಅರೆಕಾಲಿಕ ಉಪಾಧ್ಯಾಯ ರಾಗಿ ಬರುವವರೂ ; ಪಾಶ್ಚಾತ್ಯ ತತ್ತ್ವವನ್ನು ಬೋಧಿಸಬಲ್ಲವರು ಮತ್ತು ಇತರ ಮತಾನುಯಾಯಿಗಳು (ಜೈನ, ಬೌದ್ಧ ಹಾಗೂ ದ್ವೈತ, ವಿಶಿಷ್ಟಾದ್ವೈತ ಮತಗಳನ್ನೂ) ಒಂದು ವಾರ ; ಮತ್ತಿತ್ತರ ಧರ್ಮದಲ್ಲಿನ ಮುಖ್ಯ ತತ್ತ್ವವನ್ನು ತಿಳಿದವರು ನಾಲ್ಕಾರು ಉಪನ್ಯಾಸಗಳನ್ನು ನೀಡುವದರ ಮೂಲಕ, ನಡೆಸಿಕೊಡುವ ಉದಾರಾಶಯದ ಮಹನೀಯರುಗಳು ದೊರಕಿದರೆ ಶ್ರೀಶ್ರೀಗಳವರು ನಿರೂಪಿಸಿರುವ ಯೋಜನೆ ಗೊಂದು ಸಾರ್ಥಕತೆ ಬರುತ್ತದೆ. ಮುಖ್ಯವಾಗಿ ಈ ವಿಷಯದಲ್ಲಿ ಸೇವಾ ಮನೋ ಭಾವವೇ ಅಂತರಾಳ. 2006 ಡಿಸೆಂಬರ್‌ವರೆಗೆ 'ಶಾಶ್ವತ ಮೂಲನಿಧಿ'ಗೆ 421 ಜನ ಭಕ್ತರು 5000 ರೂ.ನಂತೆ ಕೊಟ್ಟು ಸೇವಾಕರ್ತೃಗಳಾಗಿದ್ದಾರೆ. ವಿದ್ಯಾರ್ಥಿಗಳಿಗಾಗಿ ಪಂಡಿತರಿಗಾಗಿ ಪ್ರತ್ಯೇಕ ವಸತಿ ವ್ಯವಸ್ಥೆಯೂ ಆಗಿದೆ. ಪ್ರಾರಂಭವಾದಾಗಿನಿಂದ ವಿದ್ಯಾರ್ಥಿಗಳಿಗೆ, ಪಂಡಿತರಿಗೆ ಊಟ, ವಸತಿ ಅವಕಾಶವಿದೆ, ಪ್ರತ್ಯೇಕವಾಗಿ ಅಡುಗೆಯವರಿದ್ದಾರೆ. ಊಟೋಪಚಾರಗಳ ಖರ್ಚಿಗಾಗಿ 2002-03ರಿಂದಲೇ ನಿಧಿ ಸಂಗ್ರಹಣೆ ; ಶಾಶ್ವತ ಮೂಲನಿಧಿ, ವಾರ್ಷಿಕವಾಗಿ ಒಬ್ಬ ವಿದ್ಯಾರ್ಥಿಯ ಖರ್ಚು, ವರ್ಷಕ್ಕೊಮ್ಮೆ ಭಕ್ತಾದಿಗಳಿಂದ ಒಂದು ದಿನ 'ಹಸ್ತೋದಕ ಸೇವೆ' - ಹೀಗೆ ನಿಧಿ ಸಂಗ್ರಹಣೆಯಾಗಿದೆ. ಮಹಾಜನಗಳ ಆದರದ ಸಹಾಯ ಮನಮುಟ್ಟುವಂತಿದೆ. ಭಗವಂತನಲ್ಲಿ ಒಂದೇ ಪ್ರಾರ್ಥನೆ, ಶ್ರೀಶ್ರೀಗಳವರಲ್ಲಿ ನಿವೇದನೆ, ಅರಿಕೆ, ನಮಸ್ಕಾರ ಪೂರ್ವಕವಾದ ಬೇಡಿಕೆ ಅವರ ಸತ್ಸಂಕಲ್ಪವು ಇದನ್ನು ಯಶಸ್ವಿಯಾಗಿ ನಡೆಸಲಿ ಎಂಬುದು. ಮುಂದೆ ಈ ವಿದ್ಯಾಲಯ ಬೆಳೆಯುವದು, ಮುಂದುವರೆದುಕೊಂಡು ಹೋಗುವದು ಕೇವಲ ಭಗವಂತನ ಕೃಪೆ, ಶ್ರೀಶ್ರೀಗಳವರ ಆಶೀರ್ವಾದ ಮಾತ್ರದಿಂದಲೇ ! ಆ ರೀತಿ ಆಶಿಸುವದೂ, ಪ್ರಾರ್ಥನೆ ಮಾಡುವದು ಮತ್ತು ಕಾರ್ಯ ಪೂರ್ಣತೆಗೆ ಪ್ರಯತ್ನ ಮಾಡುವದಷ್ಟೇ ಕಾರ್ಯಾಲಯದ ವ್ಯವಸ್ಥಾಪಕರಿಗಿರುವ ಮಾರ್ಗ.

# 6. ಸಂನ್ಯಾಸ – ದೀಕ್ಷೆಪಡೆದ ಶಿಷ್ಯರು

ಶ್ರೀ ವಿಠಲ ಶಾಸ್ತ್ರಿಗಳು : ಟ್ರಸ್ಟ್ ಅಧ್ಯಕ್ಷರಾಗಿದ್ದ ಶ್ರೀ ವಿಠಲ ಶಾಸ್ತ್ರಿಗಳು 1980ರ ಏಪ್ರಿಲ್‌ನಲ್ಲಿ ಸಂನ್ಯಾಸ ಸ್ವೀಕಾರದ ನಿರ್ಧಾರವನ್ನು ತಿಳಿಸಿದರು. ಅವರ ಬಹು ಮುಖ ವೇದಾಂತ ಸೇವೆಯನ್ನು ಸುಮಾರು ಅರ್ಧ ಶತಮಾನಗಳಿಂದ ಕಾರ್ಯಾಲ ಯದೊಡನಿರುವ ನಿಕಟ ಸಂಪರ್ಕವನ್ನು ಸ್ಮರಿಸಿ ಕೃತಜ್ಞತೆಯನ್ನು ಸಲ್ಲಿಸುವ ಕರ್ತವ್ಯ ನೆರವೇರಿಸಲು, ಕಾರ್ಯಾಲಯವು ಶ್ರೀ ಶಾಸ್ತ್ರಿಗಳಿಗೆ 30.4.80ರಂದು ಮಹಾ ಸಮಾಧಿ ಯ ಸನ್ನಿಧಿಯಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿತ್ತು. ಅವರು ತಮ್ಮ ಉತ್ತರದಲ್ಲಿ ನಿಜವಾದ ಸಂನ್ಯಾಸವು ಸಾಕ್ಷಾತ್ ಭಗವಂತನ ಮತ್ತೊಂದು ಹೆಸರೇ ಆಗಿದ್ದು ಆ ಮಹಾಮಹಿಮನ ಪಾದಗಳಿಗೇ ಆ ಗೌರವವು ಸಲ್ಲತಕ್ಕದ್ದು, ತಾವೆಂದಿಗೂ ಈ ಗೌರವಕ್ಕೆ ಅರ್ಹರಲ್ಲವೆಂದೂ ವಿನಯಪೂರ್ವಕವಾಗಿ ತಿಳಿಸಿದರು. ಮುಖ್ಯ ಅತಿಥಿ ಗಳಾಗಿ ಬಂದಿದ್ದ ಡಾ|| ರಾಮಕೃಷ್ಣರಾಯರು ಶಾಸ್ತ್ರಿಗಳ ವಿದ್ವತ್ತನ್ನೂ ವೇದಾಂತ ಕ್ಷೇತ್ರಕ್ಕೆ ಅವರ ಸೇವೆಯನ್ನು ಪ್ರಶಂಸಿಸಿ, ಪೂಜ್ಯ ಶಾಸ್ತ್ರಿಗಳ ಧರ್ಮಪತ್ನಿಯವರು ಪ್ರಪಂಚದ ಜನರ ಉದ್ಧಾರಕ್ಕಾಗಿ ಭಕ್ತರ ಸ್ವತ್ತಾಗಿ ಯಜಮಾನರನ್ನು ಬಿಟ್ಟುಕೊಟ್ಟಿರುವ ಮಹಾತ್ಯಾಗ ಮತ್ತು ತಮ್ಮೆಲ್ಲರಿಗಿಂತಲೂ ಹೆಚ್ಚಿನ ನೋವು ಅವರದೆಂದು ತಿಳಿಸಿದರು.

ಶ್ರೀ ವಿಠಲ ಶಾಸ್ತ್ರಿಗಳ ಸಂನ್ಯಾಸ ಸ್ವೀಕಾರ ಸಮಾರಂಭವು ಕಾರ್ಯಾಲಯ ದಲ್ಲಿಯೇ ನೆರವೇರಿತು. 6.7.80ನೇ ಭಾನುವಾರ ಬೆಳಗ್ಗೆ ಶ್ರೀ ಗಣಪತಿ ಪೂಜೆ, ಪುಣ್ಯಾಹ, ಪಂಚಗವ್ಯ- ಪುರಸ್ಸರವಾಗಿ ಕೂಶ್ಮಾಂಡ ಹೋಮಾದಿಗಳು ನಡೆದವು. 7.7.80ರಂದು ಅಷ್ಟ ಶ್ರಾದ್ಧಗಳನ್ನು ಮಾಡಲಾಯಿತು. 8.7.80ರಂದು ಬೆಳಗ್ಗೆ ಸಂನ್ಯಾಸಾಂಗವಾದ ಕೆಲವು ವಿಧಿಗಳು, ಸಂಜೆ ಬ್ರಹ್ಮಾನ್ವಾಧಾನಾದಿಗಳಾದ ಮೇಲೆ ಶ್ರೀ ಶಾಸ್ತ್ರಿಗಳು ಸಪತ್ನೀಕರಾಗಿ ನಿಯಮಗಳನ್ನು ದೀಕ್ಷಾಬದ್ಧರಾಗಿ ಆಚರಿಸಿದರು. ಭಕ್ತವೃಂದದವರ ಪ್ರಯೋಜನಕ್ಕಾಗಿ ಈ ಮೂರುದಿನಗಳೂ ಎರಡು ವೇಳೆಗಳಲ್ಲಿ ವೇದಾಂತ ಪ್ರವಚನಗಳಾದವು. ವೇದೋಕ್ತ ಪಾರಿವ್ರಾಜ್ಯ ಹಾಗೂ ತ್ಯಾಗ, ಸಂನ್ಯಾಸ ಗಳ ವಿಷಯವೇ ಪ್ರವಚನ ಸಾರವಾಗಿತ್ತು. 8ನೇ ತಾರೀಖು ಬೆಳಗ್ಗೆ ವಿದ್ವತ್ ಗೋಷ್ಠಿ ಯಾಯಿತು. ಉಭಯ ಕಾರ್ಯಾಲಯಗಳ ಪಂಡಿತರೂ, ವಿದ್ವಾಂಸರೂ, ಗೋಷ್ಠಿ ಯಲ್ಲಿ ಉಪನ್ಯಾಸ ಮಾಡಿದರು. ಶ್ರೀ ಶಾಸ್ತ್ರಿಗಳು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಸಂನ್ಯಾಸದ ಪೂರ್ವಾಂಗ ವಿಧಿ ವಿಧಾನಗಳನ್ನು ಪರಸ್ಥಳಗಳಿಂದ ದಯಮಾಡಿಸಿದ್ದ ವೈದಿಕ ವಿದ್ವನ್ಮಣಿಗಳೂ ಪುರೋಹಿತವರ್ಗದವರೂ ನಡೆಯಿಸಿಕೊಟ್ಟರು.

ಮುಖ್ಯ ದಿನವಾದ 9.7.80ನೇ ಬುಧವಾರ ಬೆಳಗ್ಗೆ ವಿರಜಾ ಹೋಮ, ಸಂನ್ಯಾಸ ಹೋಮಾದಿಗಳನಂತರ ಪೂಜ್ಯ ಶಾಸ್ತ್ರಿಗಳು ಹೇಮಾವತಿ ನದೀತೀರದಲ್ಲಿ ಮುಹೂರ್ತಕ್ಕೆ ಸರಿಯಾಗಿ ಪ್ರೈಷೋಚ್ಚಾರಣಾದಿ ವಿಧಿಗಳನ್ನು ನೆರವೇರಿಸಿ, ಕಾಷಾಯ ದಂಡ ಕಮಂಡಲು ಪಾದುಕೆಗಳಿಂದ ಅಲಂಕೃತರಾಗಿ ಪರಮಹಂಸ ಪಾರಿವ್ರಾಜ್ಯವನ್ನು ಸ್ವೀಕರಿಸಿದರು. ಶ್ರೀ ಶಾರದಾಂಬ ಶಂಕರ ಭಗವತ್ಪಾದರ ದೇವಾಲಯದಲ್ಲಿ ಮಂಗಳಾರತಿಯಾದ ಮೇಲೆ ಕಾರ್ಯಾಲಯದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಮಹಾಸಮಾಧಿ ಪೂಜೆ, ಅನಂತರ ಪ್ರಣವೋಪದೇಶಾದಿಗಳು ನೆರವೇರಿದವು. ಶ್ರೀ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು ನೂತನ ಯತಿಗಳಿಗೆ ಶ್ರೀ ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಕಾರ್ಯಾಲಯದ ಪರವಾಗಿ ಪ್ರಪ್ರಥಮವಾಗಿ ಹೊಳೆನರಸೀಪುರ ಕಾರ್ಯಾಲಯದ ಅಧ್ಯಕ್ಷರಾದ ಶ್ರೀ.ಎ.ತಾಂಡವೇಶ್ವರರೂ, ಮಹಾಜನಗಳ ಹಾಗೂ ಸೇವಾರ್ಥದಾರರ ಪರವಾಗಿ ಪಂಡಿತ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳೂ, ಸಪತ್ನೀಕರಾಗಿ ನೂತನ ಶ್ರೀಗಳಿಗೆ ಪಾದಪೂಜೆಯನ್ನು ನೆರವೇರಿಸಿದರು. ಮಹಾಮಂಗಳಾರತಿಯಾದನಂತರ ಶ್ರೀ ಶ್ರೀಗಳವರು ಸರ್ವರಿಗೂ ತೀರ್ಥಪ್ರಸಾದ ಮಂತ್ರಾಕ್ಷತೆಗಳನ್ನು ಅನುಗ್ರಹಿಸಿದರು. ಪ್ರಸಾದ ವಿತರಣೆಯಾಯಿತು. ಪರಸ್ಥಳದವರಿಗೂ, ಆಹ್ವಾನಿತರಿಗೂ ಸಂತರ್ಪಣೆಯಾಯಿತು. ಮಾರನೆ ದಿನ ನೂತನ ಯತಿವರ್ಯರು ಮೈಸೂರು ಮಾರ್ಗವಾಗಿ ಬೆಂಗಳೂರು, ಅಲ್ಲಿಂದ ವಿಶಾಖಪಟ್ಟಣಕ್ಕೆ ದಯಮಾಡಿಸಿದರು. ಪರಸ್ಥಳದವರಿಗೆಲ್ಲ ಕಾರ್ಯಾಲಯದ ಕಾರ್ಯಕರ್ತರು ವಸತಿ, ಸ್ನಾನ, ಉಪಹಾರ ಪಾನೀಯ ಭೋಜನಾದಿಗಳನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದರು.

ಈ ಶಿಷ್ಯ ಶ್ರೀಗಳು 1983ರ ಜನವರಿ 11ರಂದು ವಿಶಾಖ ಪಟ್ಟಣದಲ್ಲಿ ಬ್ರಹ್ಮೀಭೂತರಾದರು. ಅವರ ಪಾರ್ಥಿವ ಶರೀರವನ್ನು ವಿಧಿವತ್ತಾಗಿ ವಿಶಾಖಪಟ್ಟಣದಲ್ಲೇ ಸಮುದ್ರತೀರಕ್ಕೆ ಸಮೀಪದಲ್ಲಿನ ಸ್ವಂತವಾದ ಭೂಮಿಯಲ್ಲಿ - ನಿವೇಶನದಲ್ಲಿ ಸಮಾಧಿ ಮಾಡಿದರು. ಅದಕ್ಕೆ ಎರಡು ತಿಂಗಳಿನಿಂದ ಜೀರ್ಣಶಕ್ತಿಯ ಹಾನಿಯಿಂದ ಅವರ ಆರೋಗ್ಯವು ಕೆಟ್ಟುಹೋಗಿದ್ದು ಆಹಾರವು ಒಗ್ಗದೆ ಕೇವಲ ಹಾಲನ್ನು ಮಾತ್ರ ಸೇವಿಸಿಕೊಂಡು ಯತಿಧರ್ಮವನ್ನು ಅವಸಾನಕಾಲದವರೆಗೂ ಅನುಷ್ಠಿಸಿ ಶಾಂತಚಿತ್ತರಾಗಿ ದೇಹತ್ಯಾಗ ಮಾಡಿದರು. ಆ ಸಮಯಕ್ಕೆ ಅಲ್ಲೇ ಕೆಲಸದಲ್ಲಿದ್ದ ಅವರ ಕಿರಿಯ ಪುತ್ರ ಶ್ರೀ ಶಂಕರನಾರಾಯಣರಾಯರು ಗೀತಾಪಠನ ಮಾಡುತ್ತಿದ್ದರು. ಮಹಾಸಮಾಧಿ ಸಂಸ್ಕಾರಗಳೂ, ಆರಾಧಾನಾದಿಗಳೂ ವೇದ ಮೂರ್ತಿಗಳ ಮುಂದಾಳತ್ವದಲ್ಲಿ ನೆರವೇರಿತು. ಪೂಜ್ಯರ ಸ್ಮರಣಾರ್ಥವಾಗಿ 23.1.83 ಭಾನುವಾರ ಬೆಂಗಳೂರಿನ ಕಾರ್ಯಾಲಯದಲ್ಲಿ, 30.1.83ರಲ್ಲಿ ಹೊಳೆನರಸೀಪುರದ ಕಾರ್ಯಾಲಯದಲ್ಲಿ

ಆರಾಧನೆ ನೆರವೇರಿತು. 1984ರ ಡಿಸೆಂಬರ್‌ನಲ್ಲಿ ಇವರ ಪ್ರಥಮಾರಾಧನೆಯ ಅಂಗವಾಗಿ ಸಂಜೆ ವಿದ್ವತ್ ಸಭೆಯು ಸೇರಿತ್ತು. ಮೈಸೂರಿನ ಡಾ|| ಆರ್. ಸತ್ಯನಾರಾಯಣರಿಂದ ಅಮೋಘ ಉಪನ್ಯಾಸವು ನಡೆಯಿತು. ಇಲ್ಲಿಂದ ಮುಂದೆ ಪ್ರತಿವರ್ಷವೂ ಆರಾಧನೆಯ ಆಚರಣೆಯೊಡನೆ ಉಪನ್ಯಾಸವಿರುತ್ತದೆ.1988ರಿಂದ ಈ ಆಚರಣೆಯ ದಿನವನ್ನೂ ಸೇರಿಸಿ, ಸದ್ಗುರು ಜಯಂತಿ, ಗೋಂದಾವಳಿ ಬ್ರಹ್ಮ ಚೈತನ್ಯಮಹಾರಾಜರ ಆರಾಧನೆಯೊಡನೆ ಒಂದುವಾರ ಕಾಲ ಪ್ರವಚನಗಳಾಗು ತ್ತಿವೆ. ಬೆಂಗಳೂರು ಕಾರ್ಯಾಲಯದಲ್ಲಿಯೂ ಇದೇ ರೀತಿ ಸಪ್ತಾಹದಲ್ಲಿ ಈ ಆರಾಧನೆಯೂ ಸೇರಿ ಆಚರಣೆಯಾಗುತ್ತಿದೆ. 30.12.99ರಿಂದ 5.1.00ರವರೆಗೆ ನಡೆದ ಸಪ್ತಾಹದಲ್ಲಿ 4.1.00ರಂದು ಆರಾಧನೆ, ಸಪ್ತಾಹ ಪ್ರಾರಂಭದ ದಿನ ಶ್ರೀ ಶ್ರೀ ಜ್ಞಾನಾನಂದೇಂದ್ರರ ಭಾವಚಿತ್ರ ಅನಾವರಣ ನಡೆಯಿತು.

ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು ಸಂನ್ಯಾಸ ಸ್ವೀಕಾರವಾದ ಮೇಲೆ ಕೆಲವಾರು ವರ್ಷಗಳು ಶ್ರೀ ಶ್ರೀಗಳವರ ಜೊತೆಯಲ್ಲಿದ್ದು ಅವರ ಅನಂತರ, ಉತ್ತರ ಕಾಶಿಯಲ್ಲಿ ತಮ್ಮ ಅನುಷ್ಠಾನ ತಪಸ್ಸಿಗಳಿಗಾಗಿ ನೆಲೆಸಿದ್ದರು. ವರ್ಷ, ಎರಡು ವರ್ಷಗಳಲ್ಲಿ ಅಲ್ಲಿಂದ ಬಂದು ಒಂದೆರಡು ದಿನ ಹೊಳೆನರಸೀಪುರದಲ್ಲಿ ಇರುತ್ತಿದ್ದರು. ಅಲ್ಲಿಂದ ಮೈಸೂರು ಕಾರ್ಯಾಲಯಕ್ಕೂ ಹೋಗಿ ತಮ್ಮ ಸಲಹೆಗಳನ್ನು ನೀಡುತ್ತಿದ್ದರು. ಅಮೆರಿಕದಿಂದ ಹಿಂದಿರುಗಿ ಬಂದ ಭಕ್ತರುಗಳು ಕೆಲವರು ಮೂರುವಾರಗಳ ಕಾಲ ಹೊಳೆನರಸೀಪುರದಲ್ಲಿ ತಂಗಿದ್ದು, ವೇದಾಂತ ವಿಚಾರ ವಿನಿಮಯ ಮಾಡಿಕೊಂಡರು. ಈ ಭಕ್ತರ ಒತ್ತಾಯದ ಆಹ್ವಾನದ ಮೇರೆಗೆ ಶ್ರೀ ಆತ್ಮಾನಂದೇಂದ್ರ ಸರಸ್ವತಿಗಳು 1995ರ ಏಪ್ರಿಲ್ ಮೊದಲವಾರ ಅಮೆರಿಕಕ್ಕೆ ತೆರಳಿ, ಅಲ್ಲಿ ಶಂಕರ ವೇದಾಂತ ಪ್ರವಚನಗಳನ್ನು ನಡೆಸಿ, ಜೂನ್ 26ರಂದು ಹಿಂದಿರುಗಿದರು. ಈ ಪ್ರವಾಸ ಯಶಸ್ವಿಯಾಗಿತ್ತು. ಅನಂತರ ಉತ್ತರ ಕಾಶಿಯಿಂದ ಹಿಂದೆ ಬಂದು ಮೈಸೂರಿನ ಸಮೀಪದ ಹಲಗೈಯ್ಯನ ಹುಂಡಿ ಎಂಬಲ್ಲಿ, ಒಂದೆಕರೆ ಜಾಗದಲ್ಲಿ ಕಟ್ಟಿಕೊಂಡ ಆಶ್ರಮದಲ್ಲಿಯೇ ವಾಸಿಸುತ್ತಿದ್ದಾರೆ. ಆಗಾಗ ಮೈಸೂರು ಶಾಖೆಯ ಕಾರ್ಯಾಲಯಕ್ಕೂ ಬಂದು ನಿಯತವಾಗಿ ವಾರಕ್ಕೊಮ್ಮೆ ನಿಗದಿತ ವೇಳೆಯಲ್ಲಿ ಪ್ರವಚನಗಳನ್ನೂ, ಬೇರೆಯಂತೆಯೂ ಅವರು ಕರೆದಾಗ ಬಂದು ಅವರೊಡನೆ ಅಧ್ಯಾತ್ಮ ವಿಚಾರ ವಿನಿಮಯ ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಶಾಖಾ ಕಾರ್ಯಾಲಯದ ಪುರೋಭಿವೃದ್ಧಿಗೆ ಬೇಕಾದ ಹಲವಾರು ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದಾರೆ. ಈಗ ವಯೋಧರ್ಮದಿಂದ, ಆಶ್ರಮದಿಂದ ಶಾಖೆಯಷ್ಟು ದೂರಕ್ಕೆ ಬರುವುದು ಆಯಾಸವಾಗುವುದರಿಂದ ಸಾಮಾನ್ಯವಾಗಿ ಆಶ್ರಮದಲ್ಲಿಯೇ ಇರುತ್ತಾರೆ. ಅಲ್ಲಿ ಗುರುಪೂರ್ಣಿಮಾ ಆಚರಣೆಯೂ ಶ್ರೀಶ್ರೀಗಳವರ ಆರಾಧನೆಯೂ ಕ್ರಮವಾಗಿ ನಡೆಯುತ್ತಿವೆ.

ಶ್ರೀ ಪ್ರೇಮಾನಂದ ಸ್ವಾಮಿಗಳು 1960ರ ಸುಮಾರಿನಲ್ಲಿ ಒರಿಸ್ಸಾ ದೇಶದ ಕಡೆಯಿಂದ ಹೊಳೆನರಸೀಪುರಕ್ಕೆ ದಯಮಾಡಿಸಿ ಶ್ರೀ ಶ್ರೀಗಳವರಿಂದ ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದವರು, ಶ್ರೀ ಪ್ರೇಮಾನಂದ ಸ್ವಾಮಿಗಳು ಹೇಮಾವತಿ ನದಿಯ ತೀರದ ಶ್ರೀ ಆಂಜನೇಯ ದೇವಾಲಯದಲ್ಲಿ ತಮ್ಮ ಅನುಷ್ಠಾನ, ಜಪತಪಾದಿಗಳನ್ನು ನಡೆಸಿಕೊಂಡು ಇರುತ್ತಿದ್ದರು. ಪೂಜ್ಯರು 1979ರ ಚಾತುರ್ಮಾಸ್ಯವನ್ನು ಬೆಂಗಳೂರು ಶಾಖಾ ಕಾರ್ಯಾಲಯದಲ್ಲಿ ಮುಗಿಸಿ, ಅನಂತರ ಮತ್ತೆ ಕೆಲವು ತಿಂಗಳು, ಅಲ್ಲಿಯೇ ಧ್ಯಾನ, ಜಪ, ತಪ, ತತ್ತ್ವ ಚಿಂತನೆಯಲ್ಲಿ ಇದ್ದರು. ಈ ಮಹನೀಯರು **19.4.91**ರಲ್ಲಿ ಬ್ರಹ್ಮೀಭೂತರಾದರು. ಪೂಜ್ಯ ಸ್ವಾಮಿಗಳಿಗೆ ಎಪ್ಪತ್ತಕ್ಕೂ ಮೀರಿದ ವಯಸ್ಸಾಗಿತ್ತು ಸ್ಥಳೀಯ ಭಕ್ತಮಹಾಜನರು ನದೀತೀರದಲ್ಲೇ ಇವರ ಪಾರ್ಥಿವ ಶರೀರವನ್ನು ಸಮಾಧಿ ಮಾಡಿ, ಕ್ರಮವಾಗಿ ಆರಾಧನಾದಿ ವಿಧಿಗಳನ್ನು ನೆರವೇರಿ ಸಿದರು. ಪೂಜ್ಯರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

**ಶ್ರೀ ಮತ್ತೂರು ಸುಬ್ರಾಯವಧಾನಿಗಳು :** ಶ್ರೀಶ್ರೀಗಳವರಿಗೆ ಐವತ್ತು ವರ್ಷಗಳಿಂದ ಆಪ್ತ ಶಿಷ್ಯರಾಗಿದ್ದ ಶ್ರೀ ಮತ್ತೂರು ಸುಬ್ರಾಯಾವಧಾನಿಗಳು 21.11.84ರಂದು ಸಂನ್ಯಾಸ ಸ್ವೀಕರಿಸಿ ಶ್ರೀಶ್ರೀಅದ್ವೈತಾನಂದೇಂದ್ರ ಸರಸ್ವತೀ ಎಂಬ ಹೆಸರಿನಿಂದ ವಿರಾಜಮಾನವಾದರು. ಈ ಸಮಾರಂಭವು ಶಿವಮೊಗ್ಗ ಜಿಲ್ಲೆಯ ತಮ್ಮ ಸ್ವಗ್ರಾಮವಾಗಿದ್ದ ಮತ್ತೂರಿನಲ್ಲೇ ನೆರವೇರಿತು. ಶ್ರೀ ಶ್ರೀಗಳವರು ಮತ್ತೂರಿನಲ್ಲಿಯೇ ನೆಲೆಸಿದ್ದು ಹಲವಾರು ವಿದ್ಯಾರ್ಥಿಗಳಿಗೆ ವೇದಾಂತ ಶಿಕ್ಷಣವನ್ನು ತಮ್ಮ ಗುರುಗಳಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಮಾರ್ಗದಲ್ಲೇ ನೀಡುತ್ತಾ ಬಂದರು. 1990ರ ಜುಲೈನಲ್ಲಿ ವೇದಾಂತ ಸಪ್ತಾಹವನ್ನೂ ನಡೆಸಿದರು. ಮತ್ತೂರು ಗ್ರಾಮದ ಆದರ್ಶ ಗುರುಗಳಾಗಿದ್ದ ಈ ಶ್ರೀಗಳು **19.12.99**ರಂದು ಬ್ರಹ್ಮೀಭೂತ ರಾದರು.

ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು, ಶ್ರೀಗಳವರಿಂದಲೇ ಸಂನ್ಯಾಸ ದೀಕ್ಷೆ ಪಡೆದವರು, **10.7.97** ಗುರುವಾರ ಬ್ರಹ್ಮೀಭೂತರಾದರು. ಇವರು 22 ವರ್ಷಗಳಿಂದಲೂ ಹೊಳೆನರಸೀಪುರದಲ್ಲಿಯೇ ನೆಲೆಸಿದ್ದರು. ಪೂಜ್ಯರ ಮಹಾ ಸಮಾಧಿಯನ್ನು ಇದೇ ಊರಿನ ಹೇಮಾವತಿ ನದಿಯ ದಡದಲ್ಲಿರುವ ಆಂಜನೇಯ ದೇವಾಲಯದ ಸಮೀಪದಲ್ಲಿ ನಿರ್ಮಿಸಲಾಯಿತು. ಈ ಸಂದರ್ಭದಲ್ಲಿ ವಿಶೇಷ ಆರಾಧನಾದಿಗಳನ್ನು ಹೊಳೆನರಸೀಪುರ, ಮತ್ತೂರುಗಳಲ್ಲಿಯೂ ಆಚರಿಸಲಾಯಿತು. ಪ್ರಥಮಾರಾಧನೆಯು ಎರಡು ದಿನಗಳೂ, ಅನಂತರದ ಎರಡು ಮೂರು ವರ್ಷಗಳು

ಮೂರು ದಿನಗಳೂ 23.6.04ರಿಂದ ಒಂದೇ ದಿನದ ಕಾರ್ಯಕ್ರಮವಾಗಿ ನಡೆಯುತ್ತಿದೆ.

ಶ್ರೀಮತಿ ಅಂಬುಜಮ್ಮನವರು ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರ-ಸರಸ್ವತೀ ಮಹಾಸ್ವಾಮಿಗಳವರಲ್ಲಿ ಅವರ ಪೂರ್ವಾಶ್ರಮದಿಂದಲೂ ಗುರುಭಕ್ತರಾಗಿ ಸೇವೆ ಮಾಡುತ್ತಿದ್ದು ಕೆಲವು ವೇದಾಂತ ಪಾಠಗಳನ್ನೂ ಶ್ರವಣ ಮಾಡಿದ್ದ ಮೈಸೂರಿನ ವಾಸಿಗಳು, ತಮ್ಮ ಪತಿಯು ದೈವಾಧೀನರಾದ ಮೇಲೆ ಕೆಲವು ವರ್ಷಗಳು ಭದ್ರಾವತಿ, ಶಿವಮೊಗ್ಗಗಳಲ್ಲಿದ್ದು ಭಕ್ತರಿಗೆ ಗೀತಾಪಾಠ, ವೇದಾಂತ ಪ್ರವಚನಗಳನ್ನು ನಡೆಸುತ್ತಿದ್ದರು. ಸದ್ಗುರುವಿನ ಪ್ರೇರಣೆಯಂತೆ ಹೊಳೆನರಸೀಪುರದಲ್ಲೇ ತಮ್ಮ ಜೀವನ ಸಂಧ್ಯಾಕಾಲವನ್ನು ಕಳೆಯುವ ಸದುದ್ದೇಶದಿಂದ ಬಂದು, 1.3.90 ಗುರುವಾರ ಸಾಂಕೇತಿಕ ಸಂನ್ಯಾಸವನ್ನು ಸ್ವೀಕರಿಸಿ 'ಶ್ರೀ ಚಿನ್ಮಯಿಮಾತಾ' ಎಂಬ ನಾಮಭೂಷಿತರಾಗಿ ಕಾರ್ಯಾಲಯದಲ್ಲಿ ವಾಸವಾಗಿದ್ದರು. ಶಾಸ್ತ್ರವಿಧಿಗಳನ್ನು ಸ್ಥಳೀಯ ಪುರೋಹಿತರಾದ ವೈದಿಕ ತಂತ್ರರತ್ನ ವೇ॥ ನಾರಾಯಣಭಟ್ಟರು ನಡೆಸಿದರು. ಶ್ರೀ ಶ್ರೀ ಮಹಾಸಮಾಧಿಯ ಸನ್ನಿಧಿಯಲ್ಲಿ ಇವರು ಹಿಂದೆಯೇ ತಮಗೆ ಗುರುಗಳಿಂದ ಉಪದೇಶವಾಗಿದ್ದ ಮಂತ್ರವನ್ನು ಪುನರುಚ್ಚರಿಸಿ ಪವಿತ್ರರಾದರು. ಇವರ ದೈನಂದಿನ ಆವಶ್ಯಕತೆಗಳಿಗಾಗಿ ಕಾರ್ಯಾಲಯದಿಂದ ಸೂಕ್ತ ಏರ್ಪಾಡಾಗಿತ್ತು. ಅವರು ಹೆಚ್ಚು ಕಾಲವನ್ನು ಧ್ಯಾನ ಜಪಾದಿಗಳಲ್ಲಿ ಕಳೆಯುತ್ತಾ ಜೀವನ ಸಾರ್ಥಕ್ಯವನ್ನು ಮಾಡಿಕೊಳ್ಳುತ್ತಿದ್ದರು. 1992ರ ಪ್ರಾರಂಭದಿಂದ ಸ್ವಲ್ಪಕಾಲ ಅಸ್ವಸ್ಥರಾಗಿದ್ದು 7.8.92ರಂದು ನಿರ್ಯಾಣ ಹೊಂದಿದರು. ಬ್ರಹ್ಮಮೇಧ ವಿಧಿಯಂತೆ ಅವರು ಬಿಟ್ಟ ಶರೀರಕ್ಕೆ ದಹನಾದಿಗಳನ್ನು ನಡೆಸಿ, ಹನ್ನೊಂದು ದಿನಗಳ ಉತ್ತರ ಕ್ರಿಯೆಗಳನ್ನು 12ನೇ ದಿವಸ ಆರಾಧನೆ, ಅನ್ನದಾನಾದಿಗಳನ್ನು ಅವರ ಬಂಧುಗಳು ನೆರವೇರಿಸಿದರು.

ಶ್ರೀ ಪ್ರಬೋಧಾನಂದ ಸರಸ್ವತಿಗಳು ವಿದ್ಯಾರ್ಥಿಯಾಗಿ ಬಂದ ಕೇರಳದ ಶ್ರೀ ಕೇಶವನ್‌ರು, 2.3.92ರಂದು ಶ್ರೀ ಶ್ರೀಗಳವರ ಸಮಾಧಿಯ ಸಮ್ಮುಖದಲ್ಲಿ ಸಂನ್ಯಾಸ ಸ್ವೀಕರಿಸಿದರು. ಶ್ರೀ ಕೈವಲ್ಯ ಚೈತನ್ಯರು ಇಲ್ಲಿಯೇ ಕೆಲ ವರ್ಷಗಳು ನಿಂತು, ಪಾಠಗಳನ್ನು ಕಲಿತು 27.2.95ರಂದು ಶೀ ಗುರುಗಳ ಸನ್ನಿಧಿಯ ಸಮ್ಮುಖದಲ್ಲಿ ಸಂನ್ಯಾಸ ಸ್ವೀಕರಿಸಿ ಶ್ರೀ ಶ್ರೀ ಕೈವಲ್ಯಾನಂದರಾದರು. ಕೆಲವು ಸಮಯ ಇಲ್ಲೇ ಇದ್ದು ಅನಂತರ ಪರ್ಯಟನ ಹೊರಟು ಹಲವಾರು ಸ್ಥಳಗಳಲ್ಲಿ, ಆಂಧ್ರದಲ್ಲೂ ಉಪನ್ಯಾಸ, ಪ್ರವಚನಗಳ ಮೂಲಕ ಕಾರ್ಯಾಲಯದ ಪರಿಚಯ, ಅದರ ಉದ್ದೇಶವಾದ ಅಧ್ಯಾತ್ಮ ಪ್ರಸಾರ ಕಾರ್ಯವನ್ನೂ ಕೈಗೊಂಡರು. ಇವರು ಅನುವಾದ ಮಾಡಿದ ಶ್ರೀಶ್ರೀಗಳವರ 'ಪರಮಾರ್ಥ ಚಿಂತಾಮಣಿ'ಯ ತೆಲುಗು ಪುಸ್ತಕವು

7.11.94ರಂದು ತಿರುಮಲ-ತಿರುಪತಿ ಬೆಟ್ಟದ ಮೇಲ್ಭಾಗದ ಆಸ್ಥಾನ ಮಂಟಪದಲ್ಲಿ ಬಿಡುಗಡೆಯಾಯಿತು.

ಶ್ರೀ ಸ್ವರೂಪಾನಂದೇಂದ್ರ ಸರಸ್ವತೀ ಸ್ವಾಮಿಗಳು ಪೂರ್ವಾಶ್ರಮದಲ್ಲಿ ಮತ್ತೂರಿನ ಶ್ರೀ ಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳವರಲ್ಲಿ ಶಿಷ್ಯವೃತ್ತಿಯನ್ನಾಚರಿಸಿ, ಅನಂತರ ಸಂನ್ಯಾಸವನ್ನು ಸ್ವೀಕರಿಸಿದವರು. ಆಂಧ್ರದ ವಿಶಾಖಪಟ್ಟಣದ ಚಿನ್ನಮುಷಿಡಿವಾಡದಲ್ಲಿ ಶ್ರೀ ಶಾರದಾಪೀಠವನ್ನು ಸ್ಥಾಪಿಸಿ, ಅದನ್ನು ಆಂಧ್ರದಲ್ಲಿ ಮುಖ್ಯ ಅಧ್ಯಾತ್ಮಕ್ರೇಂದ್ರವಾಗಿ ಮಾಡಿರುವರು. ಅಲ್ಲಿನ ಜನಗಳಲ್ಲಿ ಧಾರ್ಮಿಕ ಜಾಗೃತಿಯನ್ನೂ ಮತ್ತು ಅಧ್ಯಾತ್ಮ ಪ್ರಪಂಚದ ಪರಿಚಯವನ್ನೂ ಮಾಡಿಕೊಡುತ್ತಿದ್ದಾರೆ. ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ ಶುದ್ಧಶಾಂಕರ ಪ್ರಕ್ರಿಯೆಯನ್ನು ತಮ್ಮ ಗುರುಗಳು, ಶ್ರೀ ಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳವರಿಂದ ಕಲಿತು ಅಧ್ಯಯನ ಮಾಡಿ ಶ್ರೀಗಳವರ ವಿಚಾರಧಾರೆಯನ್ನು ಆಂಧ್ರಪ್ರದೇಶ ದುದ್ದಗಲಕ್ಕೂ ಸಂಚಾರ ಮಾಡಿ ಪ್ರಸರಿಸುತ್ತಿರುವರು. ಅವರ ಪೀಠವು ಕಾರ್ಯಾಲಯದ ಒಂದು ವಿದ್ವತ್ ಅನುಷ್ಠಾನ ಸ್ಥಳವಾಗಿದೆ. ಪ್ರವಚನಗಳಲ್ಲದೆ ಅಲ್ಲಿಯ ಜನರಿಗನುಕೂಲವಾದ ರೀತಿಯಲ್ಲಿ ಅನುಷ್ಠಾನ ಪೂಜಾದಿಗಳನ್ನು ಅತಿಶಯವಾಗಿ ನಡೆಸುತ್ತಾ ಬಂದು, ಅವರ ಇಷ್ಟದಂತೆ ಪಾದಪೂಜೆಗಳನ್ನು ಸ್ವೀಕರಿಸಿ, ತೀರ್ಥ ಪ್ರಸಾದಗಳನ್ನು ಅನುಗ್ರಹಿಸಿ ಇದೇ ರೀತಿಯಲ್ಲಿ ಬೆಂಗಳೂರಿನವರೆಗೂ ಹರಡಿರುವರು, ಅಲ್ಲಿ ಅವರಿಗೆ ಅನೇಕರು ಭಕ್ತರಾಗಿದ್ದಾರೆ. ಅವರು ಕೈಗೊಂಡಿರುವ ಧಾರ್ಮಿಕ ಶ್ರದ್ಧೆಯ ಪೋಷಣೆ, ಅಧ್ಯಾತ್ಮ ಪ್ರಸರಣೆ ಸ್ತುತ್ಯವಾಗಿದೆ.

ಆಗಾಗ ಅವರು ಗುರುಗಳಲ್ಲಿ ನಮಸ್ಕಾರ ಪೂರ್ವವಾಗಿ ಮತ್ತೂರಿಗೆ ಬರುತ್ತಿದ್ದಾರೆ. ಶ್ರೀ ಅದ್ವೈತಾನಂದರ ನಿರ್ಯಾಣವಾದ ಮೇಲೆ ಪ್ರತಿವರ್ಷವೂ ಮತ್ತೂರಿನಲ್ಲಿ ಶ್ರೀಗಳ ಸಮಾಧಿ ಸನ್ನಿಧಿಯಲ್ಲಿ ಆಚರಿಸುವ ಆರಾಧನೆಗೆ ತಪ್ಪದೆ ಬಂದು, ಶ್ರದ್ಧಾಭಕ್ತಿಗಳ ಗೌರವಾರ್ಪಣವನ್ನು ಮಾಡುತ್ತಾರೆ. ಮತ್ತೂರಿಗೆ ಹೋಗುವಾಗ ಬೆಂಗಳೂರಿನ ಮೂಲಕ ಬಂದು, ಶಾಖಾ ಕಾರ್ಯಾಲಯದಲ್ಲಿ ಒಂದೆರಡು ದಿನ ತಂಗಿದ್ದು ಭಕ್ತರಿಗೆ ದರ್ಶನಕೊಟ್ಟು, ಮತ್ತೂರಿನಲ್ಲಿ ಆರಾಧನೆಯಾದನಂತರ ಹೊಳೆನರಸೀಪುರಕ್ಕೂ ಬಂದು ಪರಮ ಗುರುಗಳಲ್ಲಿ ಗೌರವಸಲ್ಲಿಸಿ, ಅಲ್ಲಿಯೂ ಒಂದೆರಡು ದಿವಸ ನಿಲ್ಲುತ್ತಾರೆ. ಶ್ರೀ ಕಾಮಾಕ್ಷೀ ಶಾರದಾಂಬಾ ದೇವತಾದಿ ಪೂಜೆಗಳನ್ನು ನೆರವೇರಿಸಿ ತೀರ್ಥಪ್ರಸಾದ ಅನುಗ್ರಹ ಭಾಷಣಗಳಿಂದ ಶಿಷ್ಯವೃಂದವನ್ನು ಹರಸುವರು.

# 7. ಇತರ ವಿಷಯಗಳು

ಸನ್ಮಾನ, ಪ್ರಶಸ್ತಿಗಳು : ಕರ್ನಾಟಕ ಸರ್ಕಾರವು ತನ್ನ ವಾರ್ಷಿಕ ಕನ್ನಡ ರಾಜ್ಯೋತ್ಸವದ ಸಮಯದಲ್ಲಿ ವಿತರಣೆ ಮಾಡುವ ರಾಜ್ಯ ಪ್ರಶಸ್ತಿಯು 1991ರ ಸಾಲಿನಲ್ಲಿ ಕಾರ್ಯಾಲಯದ ಆಗಿನ ಟ್ರಸ್ಟ್ ಸಮಿತಿಯ ಅಧ್ಯಕ್ಷರಾಗಿದ್ದ ಡಿ॥ ಎಂ.ಜಿ. ಕೋದಂಡರಾಮ ಶೆಟ್ಟರಿಗೆ ನೀಡಿತು. ಅದರಂತೆ 2005 ನವೆಂಬರ್‌ನಲ್ಲಿ ಬೆಂಗಳೂರು ಕಾರ್ಯಾಲಯದ ಪಂಡಿತರಾದ ಶ್ರೀ ಕೆ.ಜಿ. ಸುಬ್ರಾಯಶರ್ಮರಿಗೂ ಕೊಟ್ಟಿದ್ದಾರೆ. ಇದು ಕಾರ್ಯಾಲಯಕ್ಕೆ ಬಹಳ ಸಂತೋಷದ ಸಮಾಚಾರವೂ ಹೌದು, ಹಾಗೂ ಹೆಮ್ಮೆಯ ವಿಷಯವೂ ಆಗಿದೆ.

ಮುಖ್ಯವಾದುದು; ಶ್ರೀ ಕೂಡಲಿ ಶೃಂಗೇರಿ ಮಠದ ಜಗದ್ಗುರು ಪೀಠಾಧಿಪತಿಗಳು ತಮ್ಮ ಗುರುಗಳ ಆರಾಧನಾ ಸಮಯದಲ್ಲಿ 8.11.78ರಂದು ಶ್ರೀ ಲ.ನ. ಮೂರ್ತಿಗಳನ್ನು ಕರೆಸಿಕೊಂಡು ಶ್ರೀಮಠದಲ್ಲಿ ಗೌರವಿಸಿದರು. ಈ ರೀತಿಯಲ್ಲಿ ಸನ್ಮಾನಗಳು ಹಲವು ಆದರೆ ಪಂಡಿತರುಗಳನ್ನು ಆದರದ ಅಪೇಕ್ಷೆಯಿಂದ ಕರೆಸಿಕೊಂಡು ರಾಜ್ಯದ ಹಲವಾರು ಸ್ಥಳಗಳ ಮಹನೀಯರು ಆಯಾಯ ನಗರಗಳಲ್ಲಿ ಉಪನ್ಯಾಸವನ್ನೇರ್ಪಡಿಸಿರುವುದೂ ಬಹಳವಾಗಿದೆ.

145ನೇ ಕನ್ನಡ ಪತ್ರಿಕೋದ್ಯಮ ವರ್ಷಾಚರಣೆಯಂದು (ಮಾರ್ಚ್ 29, 1989 ಹಾಸನದಲ್ಲಿ) 'ಅಧ್ಯಾತ್ಮ ಪ್ರಕಾಶ' ಪತ್ರಿಕೆಗೆ ಪುರಸ್ಕಾರವನ್ನು, ಜಿಲ್ಲಾ ಹಿರಿಯ ಪತ್ರಕರ್ತರೆಂದು ಸಂಪಾದಕರಿಗೆ ಸನ್ಮಾನವನ್ನೂ ಮಾಡಿದರು. 29.7.81ರಂದು ಶ್ರೀ ಸದ್ಗುರು ಆರಾಧನೆಯ ದಿನ ಕಾರ್ಯಾಲಯದಿಂದ ಪಂಡಿತರಿಗೆ ಶಾಲು ಹೊದಿಸಿ, ಫಲಪುಷ್ಪ ತಾಂಬೂಲ ಕಾಣಿಕೆಯೊಡನೆ ಗೌರವಾರ್ಪಣೆ, ಹಾಸನದ 'ಕನ್ನಡ ಪ್ರಭಾ' ಪತ್ರಿಕಾ ವರದಿಗಾರ, ಶ್ರೀಗಳವರ ಲಘು ಚರಿತ್ರೆಯನ್ನು ಬರೆದ ಶ್ರೀ ಎನ್. ಎಸ್. ರಾಮಪ್ರಸಾದರಿಗೂ ಶಾಲು ಹೊದೆಸಿ ಫಲಪುಷ್ಪಗಳೊಡನೆ ಸನ್ಮಾನಿಸಲಾಯಿತು.

ಪಂಡಿತರು ತಮ್ಮ 70ನೇ ವಯಸ್ಸಿನ ಶಾಂತಿಮಹೋತ್ಸವವನ್ನು 1998ರಲ್ಲಿ ಶ್ರೀ ದಿಗ್ವಿಜಯರಾಮರ ಸನ್ನಿಧಿಯಲ್ಲಿ ವಿಶೇಷ ಅರ್ಚನಾದಿಗಳೊಂದಿಗೆ ಆಚರಿಸಿದರು. ಈ ಮುಂಚೆ, ತಮ್ಮ 60ನೇ ವರ್ಷದ ಶಾಂತಿಯನ್ನೂ ಆಚರಿಸಿದ್ದರು. ಬೆಂಗಳೂರು ಕಾರ್ಯಾಲಯದ ಪಂಡಿತರು ಶ್ರೀ ಕೆ.ಜಿ. ಸುಬ್ರಾಯಶರ್ಮರು 50ನೇ ವರ್ಷದ ವರ್ಧಂತಿಯನ್ನು ಬೆಂಗಳೂರು ನಗರದ ಟೌನ್ ಹಾಲಿನಲ್ಲಿ 1998ರಲ್ಲಿ ಆಚರಿಸಿದರು. ಬೆಂಗಳೂರು ಮಲ್ಲೇಶ್ವರಂನ ಶ್ರೀ ಶೃಂಗೇರಿಮಠದಲ್ಲಿ ಅಧ್ಯಾಪಕರೂ, ಶ್ರೀಗಳವರ ಶಿಷ್ಯರೂ ಆದ ಶ್ರೀ ಯಜ್ಞನಾರಾಯಣ ಶಾಸ್ತ್ರಿಗಳ ಸಹಸ್ರ ಚಂದ್ರದರ್ಶನ ಶಾಂತಿಯನ್ನು ಅವರ ಶಿಷ್ಯರೆಲ್ಲಾ ಸೇರಿ 6.4.2001 ಶುಕ್ರವಾರ ಚೆನ್ನಾಗಿ ನೆರವೇರಿಸಿದರು.

ಕಾರ್ಯಾಲಯದ ಟ್ರಸ್ಟ್‌ನ ಮಾಜಿ ಅಧ್ಯಕ್ಷರೂ, ಈಗಲೂ ಟ್ರಸ್ಟ್‌ನ ಸದಸ್ಯರೂ, ಶಾಖಾ ಕಾರ್ಯಾಲಯದಲ್ಲಿ ಹತ್ತು ಹದಿನೈದು ವರ್ಷಗಳಿಂದಲೂ ಟ್ರಸ್ಟ್ ಪ್ರತಿನಿಧಿಯಾಗಿ ಸಮಿತಿಯ ಸದಸ್ಯರೂ ಆಗಿರುವ ಶ್ರೀ ಹೆಚ್. ವೆಂಕಟನರಸಪ್ಪನವರು ತಮ್ಮ 80ನೇ ವರ್ಷದ ಶಾಂತಿಯನ್ನು 23.11.02 ರಂದು ಸ್ವಗೃಹದಲ್ಲೇ ಆಚರಿಸಿದರು.

ಇಲ್ಲಿ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳ ವಿಚಾರವನ್ನು ಅವರ ಅಮೋಘ ಸೇವೆಯನ್ನು ಪ್ರಸ್ತಾಪಿಸುವುದು ಅವಶ್ಯವೆನಿಸುತ್ತದೆ. 1947ರಲ್ಲಿ ವಿದ್ಯಾರ್ಥಿಯಾಗಿ ಐದು ವರ್ಷಗಳ ಕಾಲ ಶ್ರೀ ಶ್ರೀಗಳವರ ಜೊತೆಯಲ್ಲೇ ಇದ್ದು ಅವರಿಂದ ವೇದಾಂತ ಶಿಕ್ಷಣವನ್ನಷ್ಟೇ ಅಲ್ಲ, ಅನೇಕ ಅವರ ಸದ್ಗುಣಗಳ ಪಾಠ ಮಾರ್ಗದರ್ಶನವೂ ಸಿಕ್ಕಿದ್ದು ಒಂದು ರೀತಿಯಲ್ಲಿ ಭಾಗ್ಯವೇ. 1952ರಲ್ಲಿ ಶ್ರೀಗಳವರು ನಡೆಸಿದ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 'ಅಧ್ಯಾತ್ಮ ವಿದ್ಯಾಪ್ರವೀಣ'ರಾದರು. ಪಂಡಿತರಿಗೆ ಕೆಲಸವೂ ಕಾರ್ಯಾಲಯದಲ್ಲಿ ದೊರಕಿತು. ಮುಂದಿನ 23ವರ್ಷಗಳಲ್ಲಿ ಕನಿಷ್ಠ 18 ವರ್ಷಗಳು ಶ್ರೀಗಳವರ ಸಹವರ್ತಿಯಾಗಿದ್ದು, ಅನಂತರವೂ 28-29 ವರ್ಷ ಕಾರ್ಯಾಲಯದ ಅನೇಕ ಹೊಣೆಯನ್ನು ಹೊತ್ತರು. ಪಂಡಿತರ ಕಾರ್ಯ-ಕರ್ತವ್ಯಗಳು, ಕಾರ್ಯಾಲಯದ ಕಛೇರಿ, ಮಂದಿರದ ಉಸ್ತುವಾರಿ, ಟಪಾಲು, ಲೆಕ್ಕ-ಪತ್ರಗಳು-ಈ ರೀತಿ ಹಲವಾರು ವಿಷಯಗಳಲ್ಲಿ ಕೆಲಸ ಮಾಡಿ ಉತ್ತಮವಾದ ಪರಿಶ್ರಮವನ್ನು ಹೊಂದಿದರು. ಹೀಗಾಗಿ ಶ್ರೀಗಳವರ ಮಹಾಸಮಾಧಿಯನಂತರ, ಮೊದಲಿನಂತೆಯೇ ಕಾರ್ಯಾಲಯದ ಎಲ್ಲ ಕೆಲಸಗಳಲ್ಲಿಯೂ ಅವರ ಕಾರ್ಯಹಸ್ತವಿದ್ದೇ ಇತ್ತು.

ಉಪನ್ಯಾಸ-ಪ್ರವಚನಗಳನ್ನು ರಾಜ್ಯದ ಹಲವಾರು ಕಡೆಗಳಲ್ಲಿಯೂ ನಡೆಸಿದರು. ಇದರಿಂದ ಕಾರ್ಯಾಲಯದ ಹೆಸರು ಅನೇಕ ಕಡೆ ಹರಡಿತು. ಪ್ರವಚನಗಳಲ್ಲಿ ವಿಷಯದ ಪೂರ್ಣ ಅರಿವು, ನಯವಾದ ಕೇಳುವವರ ಮನಸ್ಸಿಗೆ ನಾಟುವಂತೆ ಸರಣಿಯ ರೂಪದಲ್ಲಿ ಒಂದಾದ ಮೇಲೊಂದರಂತೆ ವಿಷಯವನ್ನು ಸಣ್ಣ ಸಣ್ಣ ಭಾಗಗಳಲ್ಲಿ ಜೋಡಿಸಿ ಹೆಣೆದು ಮುಂದಿಡುವ ಶೈಲಿ, ಸಣ್ಣ, ಆದರೆ ಕೀರಲು ಅಲ್ಲದ, ಮೃದು ಮಾತುಗಳಲ್ಲಿ ವಿಷಯ ಬಿತ್ತರಣೆ, ಹೀಗೆ ಅನೇಕ ರೀತಿಗಳಲ್ಲಿ ಶ್ರೀಶ್ರೀಗಳವರಂತೆಯೇ ವಿಷಯ ಪ್ರತಿಪಾದನೆ ಮಾಡುತ್ತಿದ್ದುದು ಒಂದು ಮೆಚ್ಚಾಗುವ ಅಂಶ. ಇದರಿಂದಾಗಿ ಅನೇಕ ಸ್ಥಳಗಳ ಶ್ರೋತೃಗಳು ಇವರ ಉಪನ್ಯಾಸವನ್ನು ಆಲಿಸುವ ಅಪೇಕ್ಷೆಯಿಂದ ತಮ್ಮಲ್ಲಿಗೆ ಕರೆಸಿಕೊಳ್ಳುತ್ತಿದ್ದರು ; ಕಾರ್ಯಾಲಯದ ಹೆಸರೂ ಪುನಃ ಜನಗಳ ಮನಸ್ಸಿನಲ್ಲಿ ನಿಂತಿತು. ಇಂತಹ ಬಿಡಿ ಉಪನ್ಯಾಸಗಳು ಒಂದು ಸಾವಿರವಾದರೂ ಆಗಿರಬಹುದು ಎಂದರೆ ಉತ್ಪ್ರೇಕ್ಷೆಯಾಗಲಾರದು. ಹಾಗೆಯೇ ಅವಶ್ಯಕ ಜನರಿಗೆ ಮತ್ತು ಕಾರ್ಯಾಲಯಕ್ಕೂ ವೈದಿಕ ವೃತ್ತಿಯ ಕಾರ್ಯಗಳಿಂದಲೂ, ಮುಖ್ಯವಾಗಿ ಕಾರ್ಯಾಲಯದ ಜಪಾನುಷ್ಠಾನ, ಆರಾಧನೆಗಳು

ಎಲ್ಲದರಲ್ಲೂ ಮುಖ್ಯ ಪಾತ್ರವನ್ನು ವಹಿಸಿ ಆಡಳಿತ ಮಂಡಳಿಗೆ ಯಾವ ಆತಂಕವೂ ಇಲ್ಲದಂತೆ ನಡೆಸಿರುವುದೂ ವಿಶೇಷವೇ.

ಗ್ರಂಥಗಳ ಕರಡನ್ನು ತಿದ್ದಿ ಅಚ್ಚಿಗೆ ಸಿದ್ಧ ಮಾಡಿಕೊಡುವುದು, ತಾವೇ ಉಪಯುಕ್ತವಾದ ಗ್ರಂಥಗಳನ್ನು ಪತ್ರಿಕೆಗಾಗಿ ಪ್ರತಿಸಲವೂ ತಮ್ಮ ಲೇಖನಗಳನ್ನೂ, ಬರೆಯುವುದು, ಪತ್ರಿಕೆಯನ್ನು ಪ್ರಕಟಣೆಗೆ ಕಾಲಕ್ಕೆ ಸರಿಯಾಗಿ ಸಿದ್ಧಮಾಡುವುದು, ಅಚ್ಚಾದ ಪತ್ರಿಕೆಗಳ ರವಾನೆ, ಒಂದು, ಎರಡಲ್ಲ ಇಂತಹ ಅನೇಕ ಉಪಯುಕ್ತ ಕೆಲಸಗಳನ್ನು ಏಕಾಂಗಿಯಾಗಿ ಮಾಡಿದರು. ಈ ಎಲ್ಲ ಸಾರಸ್ವತ ಕೆಲಸವನ್ನೂ ಕಛೇರಿ ಕೆಲಸವನ್ನೂ ಸರಿಯಾದ ಗುಮಾಸ್ತರಿಲ್ಲದೆ ಸಹಕಾರ ದೊರಕಲಾರದಾಗಲೂ ನಡೆಸಿಕೊಂಡು ಬಂದುದು ಅತಿಶಯವೇ ಸರಿ. ಅಲ್ಲಿಂದ ಹತ್ತು ವರ್ಷಗಳ ಅವಧಿಯಲ್ಲಿ ಪ್ರಕಟವಾದ ಗ್ರಂಥಗಳು, ನಡೆದ ಸಪ್ತಾಹಗಳು, ಶಿಬಿರಗಳು ಎಲ್ಲ ಸಾರಸ್ವತ ಸೇವೆಯೂ ಬಹಳ ಹೆಚ್ಚಿನ ರೀತಿಯಲ್ಲಿ ನಡೆಯಿತು. 1995ರಿಂದ ಮುಂದಿನ ವರ್ಷಗಳಲ್ಲಿ ಕನಿಷ್ಠ 10 ಸಪ್ತಾಹ, ಶಿಬಿರಗಳನ್ನು ಹೊಳೆನರಸಿಪುರದಲ್ಲೂ ಹೊರಗಡೆಯಲ್ಲೂ ನಡೆಸಿದರು. ಈ ಮೂಲಕ ಶ್ರೀಗಳವರ ಆಶಯವಾದ ಅತಿಶಯ ಅಧ್ಯಾತ್ಮ ಪ್ರಚಾರ ಸೇವೆ, ಮತ್ತು ಕಾರ್ಯಾಲಯದ ಹೆಚ್ಚಳವನ್ನು ಬೆಳೆಸಲು ತಮ್ಮ ಗುರುಗಳ ಉದ್ದೇಶ ಸಾಧನೆಯ ಕಾರ್ಯಗಳಿಂದ, ಶ್ರೀಶ್ರೀಗಳವರಿಗೆ ಅವರು ತಮ್ಮ ಗುರುದಕ್ಷಿಣೆಯನ್ನು ಸಲ್ಲಿಸಿದ್ದಾರೆ ಗುರುಕೃಪಾಪಾತ್ರರಾಗಿದ್ದಾರೆ ಎಂದು ಹೇಳಲಡ್ಡಿಯಿಲ್ಲ. ಇಂತಹ ಅಮೋಘ ಉಪಕಾರಗಳನ್ನು ಮಾಡಿಕೊಟ್ಟ ವೇದ ಪುರುಷರಿಗೆ ಕಾರ್ಯಾಲಯ ಎಂದಿಗೂ ಕೃತಜ್ಞವಾಗಿರುತ್ತದೆ, ತನ್ನ ಹೃತ್ಪೂರ್ವಕ ಅಭಿಮಾನ ತುಂಬಿದ ವಿಶ್ವಾಸಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಈ ಹಿರಿಯ ಮಹನೀಯರು, ಅಧ್ಯಾತ್ಮ ವಿದ್ಯಾ ಸಂಪನ್ನರು, 13-2-2007ರಂದು ತಮ್ಮ 79ನೆಯ ವಯಸ್ಸಿನಲ್ಲಿ ಹೊಳೆನರಸೀಪುರದ ತಮ್ಮ ಮನೆಯಲ್ಲೇ ಪಾರ್ಥಿವ ಶರೀರವನ್ನು ತ್ಯಜಿಸಿದರು. ಕಾರ್ಯಾಲಯಕ್ಕೆ ಅವರು ನಡೆಸಿದ ಅಪೂರ್ವ ಸೇವೆ, ಅತಿಶಯ ಮನೋಧರ್ಮದ ಸಹಕಾರಗಳು ಸದಾಸ್ಮರಣೀಯ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೂ ಶಾಶ್ವತ ಬ್ರಹ್ಮಲೋಕವನ್ನೂ ಕರುಣಿಸಲಿ ಎಂಬ ಕಂಬನಿಯ ಪ್ರಾರ್ಥನೆ, ದಯಾಮಯನಲ್ಲಿ.

ಈಚಿನ ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ವರ್ಷಗಳಿಂದ ಕಾರ್ಯಾಲಯಕ್ಕೆ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿರುವವರು ಶ್ರೀ ಹೆಚ್. ವೆಂಕಟನರಸಪ್ಪನವರು. ಮೊದಲು ಕೆಲವರ್ಷಗಳು ಬೆಂಗಳೂರು ಶಾಖಾ ಸಮಿತಿಯಲ್ಲಿ ಸದಸ್ಯರಾಗಿ ಆಡಳಿತದ ಹಲವಾರು ಭಾಗಗಳಲ್ಲಿ ತೊಡಗಿಸಿಕೊಂಡು ಅನಂತರ 1988ರಲ್ಲಿ ಟ್ರಸ್ಟಿಯಾದರು,

1996-2002ರ ಅವಧಿಯಲ್ಲಿ ಟ್ರಸ್ಟ್ ಅಧ್ಯಕ್ಷರೂ ಆಗಿದ್ದರು. ಪ್ರಾರಂಭದಿಂದ 1995ರ ವರೆಗೆ ಆದ ಸಂಖ್ಯೆಯನ್ನು ಮೀರುವಷ್ಟು ಪುಸ್ತಕ ಪ್ರಕಟಣೆ, ಸಪ್ತಾಹ, ಶಿಬಿರಗಳು ಇವುಗಳ ಏರ್ಪಾಡು ಸಫಲತೆಗೆ, ಕಟ್ಟಡಗಳು, ವಿದ್ಯಾರ್ಥಿ ಶಿಕ್ಷಣಕ್ಕೆ ಊಟ, ವಸತಿ ಸೌಲಭ್ಯ, ಧನ ಸಂಗ್ರಹಣೆ, ಪುಸ್ತಕ ಮಾರಾಟ ಇವುಗಳನ್ನೆಲ್ಲಾ ಸುವ್ಯವಸ್ಥಿತವಾಗಿ ನಡೆಯುವಂತೆ ಅವರು ಪ್ರಧಾನರಾಗಿ ವಹಿಸಿದ ಶ್ರಮ ಸ್ತುತ್ಯಾರ್ಹ. 85ನೆ ವಯಸ್ಸಿನಲ್ಲೂ ತರುಣರಂತೆ ಓಡಾಡಿ ಚಟುವಟಿಕೆಗಳಲ್ಲಿ ಮುಂದಾಳಾಗುವದು ವಿಶೇಷ ಕಾರ್ಯಾಲಯ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಅದೇ ರೀತಿಯಲ್ಲಿ ಬೆಂಗಳೂರು ಶಾಖೆಯನ್ನು ಮೂವತ್ತೆರಡು ವರ್ಷಗಳ ಕಾಲ ಮುನ್ನಡೆಸಿದ ಶ್ರೀ ಸುಬ್ರಾಯ ಶರ್ಮರಿಗೂ ವಂದನೆಗಳು. ಶ್ರೀ ಶರ್ಮರು ಕಾರ್ಯಪ್ರವೃತ್ತರಾಗಿ ಬೆಂಗಳೂರು ಶಾಖೆಯನ್ನು ತಮ್ಮದೆಂಬಂತೆಯೇ ನಡೆಸಿ ಪೋಷಿಸಿದರು, ಬೆಳೆಸಿದರು. ಅದರಂತೆ ಕಾರ್ಯಾ ಲಯವೂ ಅವರನ್ನು ವಿಶೇಷವಾಗಿ ಬೆಳೆಸಿತು ಎಂಬುದೂ ಸತ್ಯ.

**ಕಾರ್ಯಾಲಯಕ್ಕೆ ಸಂದರ್ಶಕರು :** ಶ್ರೀ ಶ್ರೀಗಳವರ ದರ್ಶನಾಕಾಂಕ್ಷಿಗಳಾಗಿ ಬಂದ ವಿದೇಶೀಯರಲ್ಲಿ ಇಬ್ಬರು ಅಮೆರಿಕದ ಬ್ರಹ್ಮಚಾರಿಗಳು ಮತ್ತು ಇಂಗ್ಲೆಂಡಿನ ಹಂಸಾನಂದ ಸರಸ್ವತಿಗಳು ಎಂಬ ಸಂನ್ಯಾಸಿಗಳೂ 28.6.72ರಂದು ಬೆಂಗಳೂರಿನ ಶಾಖಾ ಕಾರ್ಯಾಲಯಕ್ಕೆ ಬಂದಿದ್ದರು. ಇವರು ಶ್ರೀ ಶ್ರೀಗಳವರ ಕೆಲವು ಇಂಗ್ಲಿಷ್ ಗ್ರಂಥಗಳಿಂದ ಪ್ರಭಾವಿತರಾದವರು. ಶ್ರೀ ಚಿನ್ಮಯಾನಂದರ ಶಿಷ್ಯರಾದ ಶ್ರೀ ದಯಾನಂದ ಸ್ವಾಮೀಜಿಯವರು, ಶ್ರೀಶ್ರೀಗಳವರಲ್ಲಿ ಅಧ್ಯಾತ್ಮವಿದ್ಯೆಯ ಸಾಧನಗಳನ್ನು ತಿಳಿದುಕೊಳ್ಳುವಂತೆ ಇವರನ್ನು ಇಲ್ಲಿಗೆ ಕಳಿಸಿದ್ದರು. ಇವರು ಪ್ರತಿದಿನವೂ ಮಧ್ಯಾಹ್ನ ಎರಡು ಘಂಟೆಗೆ ಬಂದು ಶ್ರೀಶ್ರೀಗಳವರಲ್ಲಿ ಚರ್ಚೆಮಾಡಿ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು.

ವಿದೇಶೀಯರು ಇಟಲಿಯ ಮೋಹನಾನಂದ ಜ್ಯೋತಿ ಎಂಬ ಬ್ರಹ್ಮಚಾರಿಗಳು ಬೆಂಗಳೂರು ಶಾಖೆಯಲ್ಲಿ ಸೆಪ್ಟೆಂಬರ್ 74ರಲ್ಲಿಯೇ ಪ್ರತಿ ಮಂಗಳವಾರ, ಶುಕ್ರವಾರಗಳಲ್ಲಿ ಶ್ರೀಗಳವರಿಂದಲೇ ಆಧ್ಯಾತ್ಮಿಕ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. ಇನ್ನೊಬ್ಬ ಮುಮುಕ್ಷುವೊಬ್ಬರು ಪ್ರತಿ ಮಧ್ಯಾಹ್ನ 30 ನಿಮಿಷಗಳ ಕಾಲ ಶ್ರೀಗಳವರ ಸಮ್ಮುಖದಲ್ಲೇ **Complete works of Swami Vivekananda** (ಸ್ವಾಮಿ ವಿವೇಕಾನಂದರ ಸಂಪೂರ್ಣ ಕೃತಿಗಳು) ಗ್ರಂಥವನ್ನು ಓದುತ್ತಿದ್ದರು.

ಶ್ರೀಶ್ರೀಗಳವರ ಜೀವಿತ ಕಾಲದಿಂದಲೂ ಕಾರ್ಯಾಲಯಕ್ಕೆ ಪರಿಚಿತರಾದ ಶ್ರೀ ಅಲೆಸ್ಸಾಂಡ್ರೊ ಬ್ರು ಶೆಟ್ಟಿನಿ ಎಂಬ ಜಿಜ್ಞಾಸುಗಳು ಶ್ರೀ ದೇವರಾಯ ಕುಲಕರ್ಣಿ,

ಶ್ರೀ ಡಿ.ಬಿ. ಗಂಗೊಳ್ಳಿ, ಶ್ರೀ ನಾರಾಯಣರಾಯರೊಡನೆ ಆಗಸ್ಟ್ 78ರ 26, 27 ದಿನಾಂಕಗಳಲ್ಲಿ, ಶ್ರೀ ಸಮಾಧಿ ದರ್ಶನಕ್ಕೆ ಬಂದಿದ್ದರು. ಶ್ರೀಗಳವರ ವಿಚಾರಸರಣಿ ಯಿಂದ ಆಕರ್ಷಿತರಾಗಿ ಅವರ ಇಂಗ್ಲಿಷ್ ಗ್ರಂಥಗಳನ್ನೆಲ್ಲ ಓದಿಯೂ ತೃಪ್ತರಾಗದೆ ಶ್ರೀಶ್ರೀಗಳವರ ಸಂಸ್ಕೃತ ಗ್ರಂಥಗಳ ಸಾರವನ್ನು ಶ್ರೀ ದೇವರಾಯರ ಮೂಲಕ ಇಂಗ್ಲಿಷಿನಲ್ಲಿ, ಆಗ ಅಭ್ಯಾಸ ಮಾಡುತ್ತಿದ್ದರು. ಎಲ್ಲರೊಡನೆಯೂ ಸರಳತೆಯಿಂದ ಹೊಂದಿಕೊಂಡು, ಧ್ಯಾನಮಗ್ನತೆ, ತತ್ತ್ವಾಪೇಕ್ಷೆ, ಶ್ರದ್ಧೆ ಮುಂತಾದ ನಿಜಜಿಜ್ಞಾಸುಗಳ ಆದರ್ಶಗಳಿಂದ ಜ್ಞಾನಕ್ಕೆ ದೇಶ ಕಾಲಗಳ ಕಟ್ಟಿಲ್ಲವೆಂಬುದನ್ನು ಕಾರ್ಯಾಲಯದವರು ಮನಗಂಡರು. ಅವರಿಂದ ಉತ್ತಮ ಸತ್ಸಂಗವಾಯಿತು.

ದಕ್ಷಿಣ ಅಮೆರಿಕದ ಉರುಗ್ವೆಯಿಂದ ಶ್ರೀ ಜ್ಞಾನಾನಂದಮುನಿ (ಹೆನ್ರಿ) ಯವರು ಶ್ರೀ ದೇವರಾಯ ಕುಲಕರ್ಣಿ ಮತ್ತು ಶ್ರೀ ಡಿ.ಬಿ. ಗಂಗೊಳ್ಳಿಯವರೊಡನೆ 6.1.79ರಲ್ಲಿ ಬಂದಿದ್ದರು. ಹೀಗೆ ವಿದೇಶೀಯರು, ಭಾರತೀಯ ವೇದಾಂತದಿಂದ ಆಕರ್ಷಿತರಾಗಿರುವವರು ಬಹಳ, ಅವರಲ್ಲಿ ಅನೇಕರಿಗೆ ಶ್ರೀಗಳವರ ವಿಚಾರವೈಖರಿ, ಸರಳ ಸುಂದರ ನಿರೂಪಣೆಗಳು ಬಹಳವಾಗಿ ಹಿಡಿಸಿರುವುದಲ್ಲದೆ ಅದರಿಂದ ವಿಶೇಷವಾಗಿ ಪ್ರಯೋಜನ ಹೊಂದಿರುವರು.

ಬೆಂಗಳೂರಿನಲ್ಲಿ 18.9.73ರಂದು ಚಿತ್ರಾಪುರ ಮಠಾಧೀಶರಾದ ಶ್ರೀಶ್ರೀಪರಿ ಜ್ಞಾನಾಶ್ರಮ ಮಹಾಸ್ವಾಮಿಗಳವರು ಶಾಖಾ ಕಾರ್ಯಾಲಯಕ್ಕೆ ದಯಮಾಡಿಸಿ ಶ್ರೀ ಶ್ರೀಗಳವರೊಡನೆ ಸಂಭಾಷಿಸಿ, ವೃದ್ಧಾಪ್ಯದಲ್ಲೂ ಅವರ ಕೆಲಸ ಕಾರ್ಯಗಳನ್ನು ನೋಡಿ ಸಂತೋಷಪಟ್ಟರು. ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠಾಧೀಶರು 20.12.75ರಲ್ಲಿ, ಉಡುಪಿಯ ಶ್ರೀ ಪೇಜಾವರ ಮಠಾಧೀಶರು 1.11.76 ರಲ್ಲೂ ದಯಮಾಡಿಸಿದ್ದರು.

ಶ್ರೀ ಮಲ್ಲಾಡಿ ಹಳ್ಳಿಯ ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳು 24.3.79ರಲ್ಲಿ ಶಂಕರ ಜಯಂತೀ ಸಪ್ತಾಹ ಸಮಾರಂಭದಲ್ಲಿ, 4.5.79ರಂದು ಕಂಚಿ ಕಾಮಕೋಟಿ ಪೀಠದ ಕಿರಿಯ ಶಂಕರಾಚಾರ್ಯರು ದಯಮಾಡಿಸಿದ್ದು, ಈರ್ವರೂ ಕಾರ್ಯಾ ಲಯ ಹೀಗೆಯೇ ಪರೋಪಕಾರಿಯಾಗಿ ಬಹುಕಾಲ ಬಾಳಲಿ ಎಂದು ಆಶೀರ್ವದಿ ಸಿದರು. ಹೆಬ್ಬೂರು ಶ್ರೀ ಕೋದಂಡರಾಮ ಮಠದ ಸ್ವಾಮಿಗಳು ಬೆಂಗಳೂರು ಕಾರ್ಯಾಲಯದಲ್ಲಿ ಚಾತುರ್ಮಾಸ್ಯ ವ್ರತದ ಅಂಗವಾಗಿ 27.7.80ರಲ್ಲಿ, ಆಗಸ್ಟ್ 80ರಲ್ಲಿ ಆವನೀ ಶೃಂಗೇರಿ ಶ್ರೀಶ್ರೀಗಳ ವರು ಆರಾಧನೆಯ (1.8.80-8.8.80) ಪ್ರಾರಂಭದ ದಿನ, ಆಗಮಿಸಿ ಆಶೀರ್ವಚನ ನೀಡಿದರು. ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಗಳು ಮೇ 81 ರಿಂದ ಬೆಂಗಳೂರಿನಲ್ಲಿದ್ದು ಪ್ರತಿದಿನ ಮಧ್ಯಾಹ್ನ ಅರ್ಧ

ಗಂಟೆ ಕಾಲ ಬೃಹದಾರಣ್ಯಕ ಭಾಷ್ಯ ಉಪನ್ಯಾಸಗಳನ್ನು ಭಕ್ತಾದಿಗಳ ಪ್ರಾರ್ಥನೆಯಂತೆ ಕೋಲಾರ, ಮೈಸೂರಿನಲ್ಲಿ ಒಂದು ವಾರವಿದ್ದು ಬೆಂಗಳೂರಿಗೇ ಬಂದು, 17.7.81 ರಲ್ಲಿ ಚಾತುರ್ಮಾಸ್ಯ ವ್ರತಸಂಕಲ್ಪ, ವ್ಯಾಸ ಪೂಜಾದಿಗಳನ್ನು ನೆರವೇರಿಸಿದರು. ಅಕ್ಟೋಬರ್ 82ರ 3, 4ರಂದು ತಂಗಿದ್ದು, ಮುಂದೆ ವಿಶಾಖಪಟ್ಟಣಕ್ಕೆ ತೆರಳಿದರು.

1982ರ ಸೆಪ್ಟೆಂಬರ್ 19ರಂದು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆಯವರು, 23ರಲ್ಲಿ ಪೇಜಾವರ ಶ್ರೀಗಳು, ಕಾರ್ಯಾಲಯಕ್ಕೆ ಆಗಮಿಸಿದ್ದರು, ಪೂಜ್ಯ ಶ್ರೀ ಗಣಪತ್‌ರಾವ್ ಮಹಾರಾಜ್, ಕನ್ನೂರುರವರು ತಮ್ಮ ಪ್ರವಾಸದಲ್ಲಿ, 12 ಜನವರಿ 1983 ರಂದು ಸಂಜೆ ಕಾರ್ಯಾಲಯದ (ಹೊ.ನ. ಪುರ) ದಲ್ಲಿ ಅನುಗ್ರಹ ಭಾಷಣ, ಆಶೀರ್ವಾದಗಳನ್ನು ಕರುಣಿಸಿ, ಬೆಳಗ್ಗೆ ಶ್ರೀ ದೇವರಾಯ ಕುಲಕರ್ಣಿಗಳ ಮತ್ತು ಪಂಡಿತರ ಪ್ರವಚನಗಳನ್ನು ಆಲೈಸಿ ಆಶೀರ್ವದಿಸಿದ್ದರು.

ಮೇ 1995ರ ಹೊಳೆನರಸೀಪುರದ ವೇದಾಂತ ಸಪ್ತಾಹವನ್ನು ಯಡತೊರೆ ಶ್ರೀ ಯೋಗಾನಂದೇಶ್ವರ ಮಠಾಧೀಶರು ಉದ್ಘಾಟಿಸಿದರು. ಮತ್ತೂರಿನ ಶ್ರೀ ಶ್ರೀ ಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಉಪಸ್ಥಿತರಿದ್ದರು. ಈ ರೀತಿ ಸಪ್ತಾಹಗಳಿಗೆ, ಗ್ರಂಥ ಬಿಡುಗಡೆ ಕಾಲಕ್ಕೆ, ವಿಶೇಷ ದಿನಗಳಲ್ಲಿ ಅನೇಕ ಪ್ರತಿಷ್ಠಿತ ವಿದ್ವಾಂಸರೂ, ಗಣ್ಯರೂ ಬಂದಿದ್ದಾರೆ.

3.12.97ರಲ್ಲಿ ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಅಧ್ಯಕ್ಷ ಶ್ರೀ ಸೂರ ದಾಸ್ ಸ್ವಾಮೀಜಿಯವರು ದಯಮಾಡಿಸಿ ಮೂರುದಿನ ತಂಗಿದ್ದರು.

ಆಹೋಬಲ ಮಠದ ನಾರಾಯಣ ಯತೀಂದ್ರರು ಕಾರ್ಯಾಲಯದಲ್ಲೇ 2000 ಮಾರ್ಚ್ 23ರಿಂದ 26ರವರೆಗೆ ತಂಗಿದ್ದು, ತಮ್ಮ ಪೂಜಾನುಷ್ಠಾನಗಳನ್ನು ನಡೆಸಿ, ಇಲ್ಲಿನ ಭಕ್ತವೃಂದವನ್ನು ಆಶೀರ್ವದಿಸಿದರು.

ಅಯೋಧ್ಯೆಯಲ್ಲಿದ್ದ ಬೆಂಗಳೂರಿನವರಾದ ಪಂಡಿತ ಶ್ರೀ ಶಾಂತಾನಂದಜಿ ಯವರು ಕಾರ್ಯಾಲಯದಲ್ಲಿ 11.12.91ರಿಂದ ಒಂದುವಾರ ಕಾಲ ತುಳಸೀ ರಾಮಾಯಣದ 'ಹನುಮದ್ವಿಲಾಸ'ವನ್ನು ಪ್ರವಚನ ಮಾಡಿದರು. 2000ದ ಶಂಕರ ಸಪ್ತಾಹದ ಅಧ್ಯಕ್ಷತೆಯನ್ನು ಮಾಜಿ ಮಂತ್ರಿ ಹಾರನಹಳ್ಳಿ ಶ್ರೀರಾಮಸ್ವಾಮಿಯವರು ವಹಿಸಿದ್ದರು.

ಕರ್ನಾಟಕ ಸರ್ಕಾರದ ಆರೋಗ್ಯ ಸಚಿವ ಡಾ. ಎಂ.ಬಿ. ಮಾಲಕರೆಡ್ಡಿಯ ವರು 26.8.2000ರಲ್ಲಿ ಕಾರ್ಯಾಲಯದ ಚಟುವಟಿಕೆ, ಗ್ರಂಥಪ್ರಕಟಣೆ, ಅಧ್ಯಾತ್ಮ ಪ್ರಚಾರದಿಂದ ಸಂತೋಷಿತರಾದರು. ಒಂದು ಘಂಟೆ ಅಧ್ಯಾತ್ಮತತ್ತ್ವ ವಿಚಾರಗಳನ್ನು

ಪ್ರಸ್ತಾಪಿಸಿ, ಸದ್ಗುರು ಶ್ರೀಗಳವರನ್ನು ನೆನೆದು, ಹಾರ್ದಿಕವಾಗಿ ವಿಚಾರ ವಿನಿಮಯ ಮಾಡಿಕೊಂಡರು. ಅವರ ಅಧ್ಯಾತ್ಮ ವಿಚಾರಾಸಕ್ತಿ ಸಂತೋಷವನ್ನುಂಟು ಮಾಡಿತು. ಸಂಸ್ಥೆಯ ಪರವಾಗಿ ಅವರನ್ನು ಫಲಪುಷ್ಪ ತಾಂಬೂಲಗಳಿಂದ ಗೌರವಿಸಲಾಯಿತು.

ಯಡತೊರೆಯ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳವರು ಏಪ್ರಿಲ್ 11,2004ರಂದು ಕಾರ್ಯಾಲಯಕ್ಕೆ ದಯಮಾಡಿಸಿ ಅಧ್ಯಾತ್ಮ ವಿದ್ಯಾನಿಲಯ ಮತ್ತು ಕಾರ್ಯಾಲಯದ ಸರ್ವತೋಮುಖ ಬೆಳವಣಿಗೆಯನ್ನು ಕಂಡು, ಸಂತೋಷ ವ್ಯಕ್ತಪಡಿಸಿ ತಮ್ಮ ಅನುಗ್ರಹ ಭಾಷಣವನ್ನು ಮಾಡಿ ಭಕ್ತಾದಿಗಳಿಗೆ ಫಲಮಂತ್ರಾಕ್ಷತೆಯನ್ನು ನೀಡಿದರು.

ಕೆಂಗಲ್ ಹನುಮಂತಯ್ಯನವರು, 7.4.72ರಲ್ಲಿ ಕಾರ್ಯಾಲಯಕ್ಕೆ ಬಂದು ಶ್ರೀಶ್ರೀಗಳವರೊಡನೆ ಒಂದೂವರೆ ಗಂಟೆಯ ಕಾಲ ಮಾತುಕತೆ ನಡೆಸಿ, ಕಾರ್ಯಾಲಯಕ್ಕೆ ಸಹಾಯ ನೀಡುವ ಭರವಸೆಯನ್ನು ಕೊಟ್ಟರು.

ಕರ್ನಾಟಕ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಡಿ.ಎಂ. ಚಂದ್ರಶೇಖರ್‌ರವರು, ನ್ಯಾಯಮೂರ್ತಿಗಳಾದ ಶ್ರೀ ಕೆ. ಪುಟ್ಟಸ್ವಾಮಿ, ಶ್ರೀ ಭೀಮಯ್ಯ ಮತ್ತೆ ಕೆಲವರು ನ್ಯಾಯಾಧೀಶರೊಡನೆ 13.1.79ರಂದು, ಕುಮಟಾದಿಂದ ಎಂ.ಎಲ್.ಸಿ. ಶ್ರೀ ಆರ್.ಎಸ್. ಭಾಗವತರು, ಶ್ರೀಗಳವರ ಜೀವಿತ ಕಾಲದಿಂದಲೂ ನೆಚ್ಚಿನ ಭಕ್ತರಾಗಿದ್ದವರು ಏಪ್ರಿಲ್ 21, 79ರಲ್ಲಿ, ಸೆಪ್ಟೆಂಬರ್ 79ರ, 27ರಂದು ಮೈಸೂರು ಬ್ಯಾಂಕಿನ ಕಾರ್ಯನಿರ್ವಾಹಣೆ ವಿಭಾಗದ ಜನರಲ್ ಮ್ಯಾನೇಜರ್ ಅವರ ಸಹಾಯಕ ಅಧಿಕಾರಿಗಳು ಬೆಂಗಳೂರಿನ ಕಾರ್ಯಾಲಯಕ್ಕೆ ಬಂದಿದ್ದರು.

ಬೆಂಗಳೂರಿನ ಸುಪ್ರಸಿದ್ಧ ವಾಣಿಜ್ಯೋದ್ಯಮಿ ಶ್ರೀ ರಾಮಚಂದ್ರ ಸಾ ಘೋಡೆಯವರೂ, ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳು, ಶ್ರೀ ಎ. ಸೀತಾರಾಮ್ (ಶ್ರೀ ಮೂರ್ತಿಗಳ ಸಹೋದರ)ರೊಡನೆ 20.8.78ರಂದು ಬಂದಿದ್ದರು. ಇವರು ಅನಂತರ 3.2.87ರಲ್ಲೂ ಬಂದಿದ್ದರು.

ಹೊಳೆನರಸೀಪುರದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಆರಾಧನೆಯ ದಿನ 26.7.84ರಂದು ಶ್ರೀ ರಾಮದೇವರ ಮತ್ತು ಮಹಾಸಮಾಧಿಯ ಸನ್ನಿಧಿಯಲ್ಲಿ ಎಂದಿನಂತೆ ವಿಶೇಷ ಪೂಜೆ, ಪಾರಾಯಣ, ಅಲಂಕಾರಗಳಾದ ಮೇಲೆ 10.30ಕ್ಕೆ ಶ್ರೀರಾಮತಾರಕ ಮಹಾಮಂತ್ರ ಹವನವೂ, ಪೂರ್ಣಾಹುತಿಯೂ ನಡೆದ ಸಂದರ್ಭದಲ್ಲಿ ಶ್ರೀ ಹೆಚ್.ಡಿ. ದೇವೇಗೌಡರು ಬಂದಿದ್ದರು. ಸಂಜೆಯ ವಿದ್ವತ್ಸಭೆಯಲ್ಲಿ ಶ್ರೀ ಕೆ.ಟಿ. ಪಾಂಡುರಂಗಿಯವರ ಅಮೋಘವಾದ ಉಪನ್ಯಾಸವಾಯಿತು.

ಹಾಸನದ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಪಿ.ವಾಸುದೇವನ್‌ರು 'ಅಧ್ಯಾತ್ಮ ರಾಮಾಯಣ' ಪುಸ್ತಕದ ಬಿಡುಗಡೆ, ಉಪನ್ಯಾಸವನ್ನು ಮಾಡಿದರು. ಚಿಕ್ಕಮಗಳೂರಿನಿಂದ ಶ್ರೀ ಕಾಶೀವಿಶ್ವನಾಥ ಶೆಟ್ಟರು ಬಂದಿದ್ದರು.

11.5.85ರಂದು ಶ್ರೀ.ಹೆಚ್.ಡಿ. ದೇವೇಗೌಡರೂ ಕರ್ನಾಟಕ ಉಚ್ಚ ನ್ಯಾಯಾಲಯದ ಶ್ರೀ.ಎಂ. ರಾಮಾಜೋಯಿಸರೂ, ಸಂಸ್ಕೃತಿ ಕನ್ನಡ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ವಿಠಲಮೂರ್ತಿಗಳೂ ಬಂದಿದ್ದರು. ಬೃಹದಾರಣ್ಯಕೋಪನಿಷತ್ತಿನ ಬಿಡುಗಡೆ, ಶ್ರೀ ರಾಮಾಜೋಯಿಸರ ವಿಚಾರ ಪೂರಿತ ಭಾಷಣಗಳಾದುವು. ಸಂಸ್ಥೆಯ ಪ್ರಕಟಣೆಗಳನ್ನು ಮೂರು ನೂರು ಸೆಟ್‌ಗಳಲ್ಲಿ ರಾಜ್ಯ ಸರ್ಕಾರದವರು ಕೊಂಡು ಪ್ರಮುಖ ಗ್ರಂಥಾಲಯಗಳಲ್ಲಿಡಬೇಕೆಂದು ಕಾರ್ಯಾಲಯವು ವಿಜ್ಞಾಪನೆ ಮಾಡಿತು.

**ಮುಖ್ಯವಾದುದು :** ಶ್ರೀ ದತ್ತಗುರುವಿನ ಅವತಾರವಾದ ಶ್ರೀ ಶ್ರೀಪಾದವಲ್ಲಭರ ಜನ್ಮಸ್ಥಳ ಆಂಧ್ರಪ್ರದೇಶದ ಪೀಠಾಪುರಂನಲ್ಲಿ ಶ್ರೀ ಶ್ರೀಪಾದವಲ್ಲಭ ಸಂಸ್ಥಾನದವರು ಶ್ರೀ ದತ್ತ ಜಯಂತಿಯ ಸಂದರ್ಭದಲ್ಲಿ, ವಿಶೇಷ ದತ್ತೋಪಾಸಕರೂ, ಭಕ್ತರೂ ಆದ ಶ್ರೀ ಶ್ರೀಗಳವರ ಶಿಷ್ಯರೂ ಆಗಿ, ಕಾರ್ಯಾಲಯಕ್ಕೆ ವಿಶೇಷ ಸೇವೆ ಸಲ್ಲಿಸಿದ ಮತ್ತು ಶ್ರೀ ಶ್ರೀಗಳವರ ಪರಂಪರೆಯ ಅಧ್ಯಾತ್ಮವಿದ್ಯಾಪ್ರಸಾರವನ್ನೂ, ಶಿಕ್ಷಣವನ್ನು ಅತಿಶಯವಾಗಿ ನಡೆಸಿದವರೂ ಶ್ರೀ ಶ್ರೀಗಳವರ ಅನುವರ್ತಿಗಳೂ ಆಗಿದ್ದ ಬ್ರಹ್ಮಜ್ಞಕವಿ ಶ್ರೀ ದೇವರಾಯ ಕುಲಕರ್ಣಿಯವರ ವಿಗ್ರಹವನ್ನು 1976ರಲ್ಲಿ ಸ್ಥಾಪನೆ ಮಾಡಿದ್ದಾರೆ. ಇದು ಅಸೀಮ ಭಕ್ತರಾದ ದೇವರಾಯರ ದತ್ತೋಪಾಸನೆ ದತ್ತಗುರುವಿಗೆ ಅರ್ಪಣೆಯಾಗಿ ಪ್ರೀತಿಯಿಂದ ಬಂದ ಆಶೀರ್ವಾದ ಎಂದೇ ಪರಿಗಣಿಸುವಂತಾಗಿದೆ.

1992 ರಲ್ಲಿ ಶ್ರೀಶ್ರೀಗಳವರ ಹೆಸರಿನಲ್ಲಿ ಶ್ರೀ ಜ್ಞಾನಾನಂದೇಂದ್ರ ಸರಸ್ವತಿ ಸ್ವಾಮಿಗಳವರ ಹೆಸರಿನಲ್ಲಿ ಎರಡೆರಡು ದಿನ ವಿಶೇಷ ಉಪನ್ಯಾಸಗಳಿಗೆ, ಉಭಯ ಶ್ರೀಗಳವರ ಜ್ಞಾಪಕಾರ್ಥವಾಗಿ ಕಾರ್ಯಾಲಯದವರೇ ದತ್ತಿಯನ್ನು ಸ್ಥಾಪಿಸಿದರು.

ಮತ್ತೂರಿನಲ್ಲಿ 24.12.04 ರಿಂದ 2.1.05ರವರೆಗೆ ಶ್ರೀ ರಾಮಸಾಮ್ರಾಜ್ಯೋತ್ಸವವು ಯಶಸ್ವಿಯಾಗಿ ನಡೆಯಿತು.

ಉತ್ತರಾದಿಮಠದ ಶ್ರೀ ಶ್ರೀ ಸತ್ಯಧ್ಯಾನತೀರ್ಥರು ಬರೆಯಿಸಿದ್ದ 'ದ್ವೈತ ವೇದಾಂತ ವಿಚಾರ' ಎಂಬ ಗ್ರಂಥದ ವಿಮರ್ಶೆಯನ್ನು ವಿದ್ವಾಂಸರೊಬ್ಬರು ಪ್ರಕಟಿಸಿ, ಕೆಲವು ಪ್ರತಿಗಳನ್ನು ಕಳಿಸಿದ್ದರು. ಅದು ಕೇವಲ ವಾದಗ್ರಂಥವಾದ್ದರಿಂದ ಅದನ್ನು ಕಾರ್ಯಾಲಯದಲ್ಲಿ ಅಚ್ಚು ಹಾಕಿಸುವುದಕ್ಕೆ ಪ್ರಯತ್ನಿಸಲಿಲ್ಲ.

ಕಾರ್ಯಾಲಯದ ಉಪಾಧ್ಯಕ್ಷರಾದ ಶ್ರೀ ಸತ್ಯನಾರಾಯಣ ಶೆಟ್ಟಿಯವರು ಕೊ-ಆಪರೇಟಿವ್ ಟ್ರೈನಿಂಗ್‌ಗಾಗಿ ದೆಹಲಿಗೆ ಹೋಗಿದ್ದರು. 29.3.1979ರಂದು ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಭೇಟಿ ಮಾಡಿದರು. ಕಾರ್ಯಾಲಯದ ಧ್ಯೇಯೋದ್ದೇಶ ಚಟುವಟಿಕೆಗಳನ್ನು ವಿವರಿಸಿ, ಶ್ರೀ ಶ್ರೀಗಳವರ ಕೆಲವು ಪುಸ್ತಕಗಳನ್ನು ಅರ್ಪಿಸಿದರು. ಪ್ರಧಾನಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀ ಲ.ನ. ಮೂರ್ತಿಗಳ ಕಣ್ಣಿನ ಆಪರೇಶನ್ ಖರ್ಚು- ವೆಚ್ಚಗಳನ್ನು ಬೆಂಗಳೂರಿನ ಮಹನೀಯರೊಬ್ಬರು ವಹಿಸಿಕೊಂಡು ಉಪಕರಿಸಿದರು. ಬೆಂಗಳೂರಿನ ಮೈಸೂರು ಬ್ಯಾಂಕ್ ಕಾಲೋನಿಯಲ್ಲಿರುವ ಶ್ರೀ ಎಸ್. ರಾಮಚಂದ್ರ ರಾಯರು ಚಳಿಗಾಲದಲ್ಲಿ ಹೊದಿಕೆಗಾಗಿ ಉತ್ತಮವಾದ 12 ರಗ್‌ಗಳನ್ನು ವಿದ್ಯಾರ್ಥಿಗಳಿಗೆ ಕಳಿಸಿಕೊಟ್ಟಿದ್ದಾರೆ.

ಪ್ರತಿವರ್ಷವೂ ಶ್ರೀಶ್ರೀಗಳ ಆರಾಧನೆಯ ಸಂಪೂರ್ಣ ಖರ್ಚನ್ನು ವಹಿಸಿದ್ದಲ್ಲದೆ, ಆ ದಿನ ಸ್ವತಃ ನಿಂತು ಸೇವೆಯನ್ನು ಸಲ್ಲಿಸುತ್ತಿದ್ದವರು ತಿಪಟೂರು ಪ್ರಭಾತ್ ಕಾಫಿ ವರ್ಕ್ಸ್‌ನ ಮಾಲೀಕ ದಿ. ಶ್ರೀ ನಾಗಪ್ಪನವರು ; ತಂದೆಯಂತೆ ಅವರ ಮಗ ಶ್ರೀ ಓಂಪ್ರಕಾಶ್‌ರವರೂ ಈ ವ್ಯವಸ್ಥೆಯನ್ನು ಮುಂದುವರೆಸಿ, ತಾವೇ ಸ್ವತಃ ಸಂತರ್ಪಣೆಯ ಮೇಲ್ವಿಚಾರಣೆಯನ್ನೂ ನೋಡುತ್ತಾರೆ. ಶ್ರೀ ಶ್ರೀ ನಿತ್ಯಾನಂದೇಂದ್ರ ಸರಸ್ವತಿಗಳ ಆರಾಧನೆಯ ಪೂರ್ಣ ಖರ್ಚನ್ನೆಲ್ಲ ಶ್ರೀಮತಿ ಸೀತಮ್ಮ-ಕೃಷ್ಣಮೂರ್ತಿ ಟ್ರಸ್ಟ್‌ನವರು ವಹಿಸಿಕೊಂಡಿರುತ್ತಾರೆ. ಪ್ರಭಾತ್ ಕಾಫೀ ವರ್ಕ್ಸ್‌ನ ಮಾಲೀಕರಿಗೂ, ಎಸ್. ಕೆ. ಟ್ರಸ್ಟ್‌ನವರಿಗೂ ಕಾರ್ಯಾಲಯ ಆಭಾರಿಯಾಗಿರುತ್ತದೆ. ಅವರಿಗೂ, ಅವರ ಕುಟುಂಬ ವರ್ಗಗಳವರಿಗೂ ಶ್ರೀಶ್ರೀಗಳವರ ಅನುಗ್ರಹವನ್ನು ಕೋರಿದೆ.

ಬೆಂಗಳೂರಿನ ಶ್ರೀ ರಾಜರಾಜೇಶ್ವರಿ ನಗರದಲ್ಲಿರುವ ಪ್ರೊಫೆಸರ್ ಶ್ರೀ ಎಸ್.ಆರ್. ಶ್ರೀನಿವಾಸರಾವ್, ತತ್ತ್ವಶಾಸ್ತ್ರಜ್ಞರು, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ನಿವೃತ್ತರು. ಅವರು ಶ್ರೀ ಶ್ರೀಗಳವರ 'ಮೂಲಾವಿದ್ಯಾನಿರಾಸ'ದಿಂದ ಆಕರ್ಷಿತರಾಗಿ, ಅದನ್ನು ಬಹಳವಾಗಿ ಮೆಚ್ಚಿಕೊಂಡು, ಅದರ ವಿಷಯದಲ್ಲಿ ಗ್ರಂಥವೊಂದನ್ನು ಬರೆಯಲು ಉತ್ಸುಕರಾಗಿದ್ದಾರೆ. 2.1.04ರಂದು ಕಾರ್ಯಾಲಯ ಟ್ರಸ್ಟ್‌ನ ಕೆಲವು ಮುಖ್ಯಸ್ಥರು ಧರ್ಮಸ್ಥಳದಲ್ಲಿ ಶ್ರೀ ವೀರೇಂದ್ರ ಹೆಗಡೆಯವರನ್ನು ಭೇಟಿ ಮಾಡಿದಾಗ, ಕಾರ್ಯಾಲಯದ ಉತ್ತಮ ಕೆಲಸಗಳನ್ನು ಅಭಿನಂದಿಸಿ, ವಿದ್ಯಾನಿಲಯದ ಕಟ್ಟಡಕ್ಕೆಂದು 50,000 ರೂ.ಗಳನ್ನು ಶ್ರೀ ವೀರೇಂದ್ರ ಹೆಗಡೆಯವರು ಕೊಟ್ಟಿದ್ದಾರೆ.

ಬೆಂಗಳೂರಿನ ಅಕಾರ್ಡ್ ಸಾಫ್ಟ್‌ವೇರ್ ಮತ್ತು ಸಿಸ್ಟಂಸ್‌ನ ಮಾಲೀಕರಾದ ಶ್ರೀ ಜೆ.ಎಂ. ಸುಂದರೇಶನ್‌ರವರು ಕಾರ್ಯಾಲಯಕ್ಕೆ ಮಾರ್ಚ್ 2005ರಲ್ಲಿ ಒಂದು ಕಂಪ್ಯೂಟರ್ ಮತ್ತು ಪ್ರಿಂಟರನ್ನು ದಾನವಾಗಿ ಕೊಟ್ಟಿದ್ದಾರೆ. ಫೆಬ್ರವರಿ 2006ರಲ್ಲಿ ಅಂತ ರಂಗ ಭಕ್ತರೊಬ್ಬರು ರೂ.13,000 ಮೌಲ್ಯದ ಧ್ವನಿವರ್ಧಕವನ್ನು ದಾನ ಮಾಡಿದ್ದಾರೆ.

ಫೆಬ್ರವರಿ 2006ರಲ್ಲಿ ಕಾರ್ಯಾಲಯದ ವತಿಯಿಂದ ಸಾಗರದ ವರದ ಹಳ್ಳಿಯ ಪರಮಪೂಜ್ಯ ಶ್ರೀ ಶ್ರೀಧರ ಸ್ವಾಮಿಗಳವರ ತಪೋವನದಲ್ಲಿ ಏರ್ಪಾಡಾದ ವೇದಾಂತ ಶಿಬಿರಕ್ಕೆ ಶ್ರೀಶ್ರೀಧರ ಆಶ್ರಮದವರು ಎಲ್ಲ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿದರು. ಊಟೋಪಚಾರಗಳು ಆಶ್ರಮದಿಂದಲೇ ನಡೆದವು. ಭಕ್ತ ಶಿಬಿರಾರ್ಥಿಗಳೆಲ್ಲರೂ ಸುಂದರ ಶಾಂತ ತಪೋಭೂಮಿಯ ವಾತಾವರಣಕ್ಕೆ ಮನಸೋತು, ವೇದಾಂತ ವಿಚಾರಗಳಿಂದ ಉಲ್ಲಾಸಗೊಂಡು ಸಂತೋಷಿಸಿದರು. ಈ ಎಲ್ಲ ಉಪಕಾರಕ್ಕೆ ಶ್ರೀ ಶ್ರೀಧರ ಸ್ವಾಮಿಗಳ ಸಮಾಧಿಗೆ ಶಿರಸಾಷ್ಟಾಂಗ ನಮಸ್ಕಾರವನ್ನರ್ಪಿಸಿ, ಆಶ್ರಮದ ಮುಖ್ಯಸ್ಥರಿಗೆ ಕಾರ್ಯಾಲಯವು ವಂದನಾಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದೆ.

ಕಾರ್ಯಾಲಯದ ಪಂಡಿತರಾದ ಶ್ರೀ ಲ.ನ. ಮೂರ್ತಿ ಗಳವರ ಪುತ್ರ ಶ್ರೀ ವಿಜಯರಾಘವರವರು ಚೆನ್ನೈನ ಸಿಟಿಬ್ಯಾಂಕಿನ ಸಹಾಯಕ ಉಪಾಧ್ಯಕ್ಷರಾಗಿದ್ದು, ಮಗನ ಉಪನಯನ ಸಂದರ್ಭದಲ್ಲಿ ತಾಯಿಯವರಾದ ದಿ. ಶ್ರೀಮತಿ ವರಲಕ್ಷ್ಮಿಯವರ ನೆನಪಿಗಾಗಿ ಕಟ್ಟಡದ ನಿಧಿಗಾಗಿ 50,000ರೂ.ಗಳನ್ನು ಅರ್ಪಿಸಿದರು. ಇದರಂತೆ ಹಲವಾರು ಹತ್ತು ಮಹನೀಯರು ಹತ್ತು ಸಾವಿರದಿಂದ ರೂ.50,000ಕ್ಕೂ ಹೆಚ್ಚು ದಾನವನ್ನು ಕಾರ್ಯಾಲಯದ ನಾನಾ ನಿಧಿಗಳಿಗೆ ಕಾಣಿಕೆಯಾಗಿ ನೀಡಿದ್ದಾರೆ. ಇಂತಹವರೆಲ್ಲರ ಮತ್ತು ಯಾವುದೇ ಸಣ್ಣ ಮೊತ್ತದ ಕಾಣಿಕೆಯನ್ನು ಕೊಟ್ಟವರನ್ನೂ ಸೇರಿದಂತೆ, ಶ್ರೇಯೋಭಿವೃದ್ಧಿಯನ್ನು ಕೋರಿ ಅವರೆಲ್ಲರಿಗೂ ಕಾರ್ಯಾಲಯ ಅಭಿನಂದನೆ, ಕೃತಜ್ಞತೆಗಳನ್ನು ಅರ್ಪಿಸುತ್ತದೆ.

1990ರಲ್ಲಿ ಸಂಸ್ಥೆಯನ್ನು ಪ್ರೈವೇಟ್ ಟ್ರಸ್ಟ್‌ನಿಂದ ಪಬ್ಲಿಕ್ ಛಾರಿಟಬಲ್ ಟ್ರಸ್ಟ್ ಆಗಿ ಪರಿವರ್ತನೆಯಾದ ಮೇಲೆ ಹೊಳೆನರಸೀಪುರ, ಬೆಂಗಳೂರು ಶಾಖಾ ಕಾರ್ಯಾಲಯಗಳ ಆಡಿಟ್ ಆದ ಲೆಕ್ಕ ಪತ್ರಗಳನ್ನು ಪ್ರತಿವರ್ಷವೂ ಕಳಿಸಿ, ವರಮಾನ ತೆರಿಗೆ ವಿನಾಯತಿಗಾಗಿ ಆ ಇಲಾಖೆಯನ್ನು ಕಾರ್ಯಾಲಯವು ಪ್ರಾರ್ಥಿಸಿತು. ಅದರಂತೆ 1991ರಿಂದಲೇ 80-ಜಿ ಸೌಲಭ್ಯವು ಕಾರ್ಯಾಲಯಕ್ಕೆ ಒದಗಿತು. ಕಾಲಕಾಲಕ್ಕೆ ಮುಂದುವರೆದು ವಿನಾಯತಿಯು ಈಗ ಮಾರ್ಚ್ 31, 2008ರ ವರೆಗೂ ವಿಸ್ತರಣೆಯಾಗಿ ಬಂದಿದೆ. ಇದರಿಂದ ಕಾರ್ಯಾಲಯಕ್ಕೆ ಹಣ ಸಹಾಯ ಮಾಡಿದವರೆಲ್ಲರಿಗೂ ಅವರು ಆಯಾಯ ವರ್ಷದಲ್ಲಿ ನೀಡಿರುವ ದಾನ ಮೊತ್ತಕ್ಕೆ 80-ಜಿ ಅನ್ವಯ

ವರಮಾನ ತೆರಿಗೆ ವಿನಾಯಿತಿ ದೊರಕುತ್ತದೆ. ಮತ್ತು ವರಮಾನ ತೆರಿಗೆ ಇಲಾಖೆಯವರು ಆಗಿಂದಾಗ ಹೊರಡಿಸುವ ನಿಬಂಧನೆಗಳಿಗೊಳಪಟ್ಟು, ಕಾರ್ಯಾಲಯಕ್ಕೂ ವರಮಾನ ತೆರಿಗೆ ವಿನಾಯಿತಿಯು ದೊರಕುತ್ತಿದೆ.

ವೇದ ವಿದ್ವಾಂಸರೂ ವೇದಾಂತವನ್ನು ಅಭ್ಯಾಸ ಮಾಡಿದವರೂ ಆದ, ತುರುವೇಕೆರೆ ಶ್ರೀ ವಿಶ್ವೇಶ್ವರ ದೀಕ್ಷಿತರು ಮೈಸೂರಿನಿಂದ ಹೊಳೆನರಸೀಪುರಕ್ಕೆ ಬಂದು ಕಾರ್ಯಾಲಯದಲ್ಲೇ ನೆಲೆಸಿ, ಅಲ್ಲಿಯ ಕಾರ್ಯಗಳಲ್ಲಿ ನೆರವಾಗುವದಲ್ಲದೆ ವಿದ್ಯಾರ್ಥಿಗಳ ಪಾಠಕ್ಕೆ ಅನುಕೂಲವಾಗುವುದೆಂದು ಉದ್ದೇಶಿಸಿ 1982-83ರಲ್ಲಿ ತಮ್ಮ ಖರ್ಚಿನಲ್ಲಿ ಕಾರ್ಯಾಲಯದ ಆವರಣದೊಳಗೆ ಒಂದು ಆರ್.ಸಿ.ಸಿ. ಕೊಠಡಿಯನ್ನು ಕಟ್ಟಿಸಿಕೊಂಡರು. ಮರು ವರ್ಷ ಆಗಂತುಕರ ಕೊಠಡಿಗೆ ಹೆಚ್ಚಿನ ಧನಸಹಾಯವನ್ನು ಮಾಡಿದರು. ಆದರೆ ಅವರು ಕಾರಣಾಂತರಗಳಿಂದ ಬರಲು ಆಗಲೇ ಇಲ್ಲ. ಈಗ ಅದೇ ಕೊಠಡಿಯ ಮೇಲೆ ವಿದ್ಯಾಲಯದ ಒಂದು ಭಾಗ ಕಟ್ಟಡವೂ ಮತ್ತು ಕೆಳಗಡೆ ಒಂದು ಅತಿಥಿ ಕೊಠಡಿಯೂ ಭಕ್ತಾದಿಗಳ ಉದಾರಾಶ್ರಯದಿಂದ ಸುಮಾರು 6 ಲಕ್ಷ ರೂ.ಗಳ ಖರ್ಚಿನಲ್ಲಿ ನಿರ್ಮಿತವಾಗಿದೆ.

**ಮುದ್ರಣಾಲಯ :** 1939ರಲ್ಲಿ ಶ್ರೀ ವೈ. ನರಸಪ್ಪನವರು (ಶ್ರೀಶ್ರೀಗಳ ಔರಸ ಪುತ್ರರು) ಬೆಂಗಳೂರಿನಿಂದ ಮುದ್ರಣಾಲಯದ ಸರಕುಗಳನ್ನು ಹೊಳೆನರಸೀಪುರಕ್ಕೆ ತಂದು, ಜಿಂಕುಶೀಟು ತಗಡಿನ ಕುಟೀರದಲ್ಲಿ ಮುದ್ರಣಾಲಯವಾದದ್ದು, ಅದನ್ನೇ ಗ್ರಂಥಗಳನ್ನು ಅಚ್ಚು ಮಾಡಿಸಲು ಉಪಯೋಗಿಸುತ್ತಿದ್ದ ವಿಷಯ ಹಿಂದೆ ಬಂದಿದೆ. ಅನಂತರ 1939ರ ಸಮಯದಲ್ಲಿ ಅದು ಈಗಿನ ಕಾರ್ಯಾಲಯದ ಕಾಪೌಂಡಿನೊಳಗೆ ಬಂದಿತು. 1954ರಲ್ಲಿ ಸಂಸ್ಕೃತ ದೇವನಾಗರೀ ಟೈಪುಗಳನ್ನು ಕೊಂಡು, ಕಂಪೋಸಿಂಗ್ ಶಾಖೆಯನ್ನು ವಿಸ್ತರಿಸಲಾಯಿತು. ಶ್ರೀಶ್ರೀಗಳವರ ಮತ್ತು ಕಾರ್ಯಾಲಯದ ಎಲ್ಲ ಪುಸ್ತಕಗಳೂ, ಪತ್ರಿಕೆಯೂ ಇಲ್ಲೇ ಅಚ್ಚಾಗುತ್ತಿತ್ತು. 1990ರ ದಶಕದಲ್ಲಿ ಇನ್ನೂ ಮುಂಚೆಯೇ ಎನ್ನಬಹುದು, ಕೆಲಸಗಾರರ ಕೊರತೆ, ತೊಂದರೆ ಪ್ರಾರಂಭವಾಯಿತು. ಅಂದರೆ, ಕೆಲಸಗಾರರು ಬಿಟ್ಟು ಹೋಗುವುದು, ಉತ್ತಮ ಕೆಲಸಗಾರರು ದೊರಕದಿರುವುದು, ಇವುಗಳಿಂದ ಪ್ರಗತಿಗೆ ಅಡ್ಡಿಯೇ ಆಯಿತು. ಇದರಿಂದಾಗಿ ಗುತ್ತಿಗೆ ಕೆಲಸಗಾರರನ್ನು ನೇಮಕಮಾಡಿತು. ಹಿಂದಿನಿಂದ ಇದ್ದ ವೃದ್ಧರೊಬ್ಬರು ಕೆಲಸಕ್ಕೆ ಬರುತ್ತಿದ್ದರು. 1995ರಲ್ಲಿ ಇಂಗ್ಲಿಷ್ ಟೈಪುಗಳನ್ನು ತರಿಸಿ ಇಂಗ್ಲಿಷ್ ಪುಸ್ತಕಗಳ ಮುದ್ರಣದ ಕಾರ್ಯವನ್ನೂ ಏರ್ಪಾಡು ಮಾಡಲಾಗಿತ್ತು. ಆಗ ಕಾರ್ಯಾಲಯದಲ್ಲೇ ಇರುತ್ತಿದ್ದ ಶ್ರೀ ಡಿ. ಬಿ. ಗಂಗೊಳ್ಳಿಯವರು ಮುದ್ರಣದ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದರು.

1994ರಲ್ಲಿ ಮುದ್ರಣಾಲಯವನ್ನು ಅಭಿವೃದ್ಧಿಗೊಳಿಸಿ, ಹೊಸರೀತಿಯ ಯಂತ್ರೋಪಕರಣಗಳನ್ನು ತರಿಸುವ ವಿಚಾರವೂ ನಡೆಯಿತು. ಏಪ್ರಿಲ್ 1996ರಲ್ಲಿ, ಪ್ರಯತ್ನಗಳು ವಿಫಲವಾದಾಗ, ತಾತ್ಕಾಲಿಕವಾಗಿ ಮುದ್ರಣಾಲಯದ ನಿಲುಗಡೆ ಆಯಿತು. ಮೇ1996ರಿಂದ ಮುಂದಿನ ಪತ್ರಿಕೆಯ ಸಂಚಿಕೆಗಳು ಬೆಂಗಳೂರಿನ ರಾಜಕಮಲ್ ಮುದ್ರಣಾಲಯದಲ್ಲಿನಡೆಯಿತು. ಬೆಂಗಳೂರಿನಲ್ಲಿ ಅಚ್ಚಾದಾಗ, ಸ್ವಲ್ಪ ಅಂದವಾಯಿತು, ಪುಟಗಳು ರೇಖೆಯ ಚೌಕಟ್ಟಿನಲ್ಲಿ ಬರತೊಡಗಿ, ಅನಂತರ ಕೇವಲ ಒಂದೇ ರೇಖೆಯ ಕೆಳಗೆ ಅಚ್ಚೂ ಆಯಿತು. ಮುದ್ರಣಾಲಯದ ಮಾಲೀಕರು ಶ್ರೀ ನರಸಿಂಗರಾಯರು, ಅವರ ಮಕ್ಕಳು ಶ್ರದ್ಧೆಯಿಂದ ಶ್ರಮವಹಿಸಿ ನಡೆಸಿದರು. ಆದರೆ ಲೇಖನಗಳನ್ನು ಹೊಂದಿಸಿ ಹೊಳೆನರಸೀಪುರದಿಂದ ಬೆಂಗಳೂರಿಗೆ ಕಳಿಸುವುದು, ಮೊದಲ ಕರಡನ್ನು ತರಿಸಿ ತಿದ್ದಿ, ಪುಟಗಳಿಗೆ ಅನುಗುಣವಾಗಿ ಲೇಖನಗಳಿಗೆ ಸ್ವಲ್ಪ ಸೇರಿಸುವುದು, ಕಡಿಮೆ ಮಾಡುವುದು, ಅನಂತರ ಬೆಂಗಳೂರಿಗೆ ಕಳಿಸುವುದು, ಎರಡನೆ ಕರಡನ್ನು ಹಿಂದೆ ತರಿಸುವದು-ಇದೇ ರೀತಿ ಬೆಂಗಳೂರು-ಹೊಳೆನರಸೀ ಪುರದ ಲೇಖನ, ಕರಡುಗಳ ಓಡಾಟ, ಅಚ್ಚಾದ ಪತ್ರಿಕೆಗಳನ್ನು ಹಿಂದೆ ತರಿಸಿ, ಅಲ್ಲಿಂದ ಅಂಚೆಗೆ ಹಾಕುವುದು ಇದು ವಿಶೇಷವಾಗಿ ಸಂಪಾದಕರಿಗೆ ಕೆಲಸದ ಹೊರೆಯನ್ನು ಹೆಚ್ಚು ಮಾಡಿತು. ಅಲ್ಲದೆ ಕಾಲವಿಳಂಬದ ಹೆದರಿಕೆಯಿಂದ ಮಾನಸಿಕ ಹೊರೆಯೂ ಆಯಿತಾದರೂ, ಸುಮಾರು ಎರಡು ವರ್ಷ ಹೀಗೇ ಮುಂದುವರೆಯಿತು. ಇನ್ನು ಮುಂದೆ ಇದು ಸಾಕೆನಿಸಿದಾಗ ಪತ್ರಿಕೆಯು ಹೊಳೆನರಸೀಪುರಕ್ಕೆ ಹಿಂದೆ ಬಂದಿತು, ಸ್ಥಳೀಯ ಪ್ರೆಸ್ ಒಂದಕ್ಕೆ. ತಾತ್ಕಾಲಿಕವಾಗಿ ಮುಚ್ಚಿದ್ದ ಮುದ್ರಣಾಲಯವನ್ನು ತೆರೆಯಲು ಒಳ್ಳೆಯ ಕೆಲಸಗಾರರಿಗಾಗಿ ಬಹಳ ಶ್ರಮಪಟ್ಟ ಮೇಲೆ ಜನವರಿ 97ರಲ್ಲಿ ಪುನಃ ಪ್ರಾರಂಭವಾಯಿತು. ಅಂತೂ 1948ರಿಂದ 1996ರವರೆಗೆ ನಿರಂತರವಾಗಿ ನಡೆದು ಬಂದ ಮುದ್ರಣಾಲಯವು ಹೀಗೆ ತಾತ್ಕಾಲಿಕವಾಗಿ ನಿಂತು 1997ರ ಜನವರಿಯಲ್ಲಿ ಪುನರಾರಂಭವಾದರೂ, 1997 ಏಪ್ರಿಲ್‌ನಲ್ಲಿ ಮುಚ್ಚಲ್ಪಟ್ಟಿತು. ಇದು ಕಾಲಗತಿಯಿಂದ ನಡೆದ ವಿಷಾದದ ಸಂಗತಿ. (ಹೆಚ್ಚಿನ ವಿಷಾದಕ್ಕೆ ಕಾರಣವೆಂದರೆ ಮುದ್ರಣಾಲಯದ ಮುದ್ರಣಯಂತ್ರ ಕೆಲಸ ಮಾಡುವ ಶಬ್ದ ಸದಾ ಸಮಾಧಿಗೆ ಕೇಳುವಂತಿರಬೇಕು ಎಂಬುದು ಶ್ರೀಗಳವರ ಇಚ್ಛೆಯಾಗಿತ್ತು.) ಆದರಿಂದ ತೊಂದರೆ ಯಾಗದಂತೆ ಗ್ರಂಥ ಪ್ರಕಟಣೆ, ಪತ್ರಿಕಾ ಮುದ್ರಣ ಕಾರ್ಯಗಳು ಬೇರೆಡೆಯಲ್ಲಿ ಅನಿವಾರ್ಯವಾಗಿ ನಡೆಯಬೇಕಾಗಿ ಬಂತು.

---

## 8. ಬೆಂಗಳೂರು ಶಾಖಾ ಕಾರ್ಯಾಲಯ

ಪೀಠಿಕೆ : ಹೊಳೆನರಸೀಪುರ ಬಿಟ್ಟರೆ, ಬೆಂಗಳೂರು ಶಾಖಾ ಕಾರ್ಯಾಲಯವೇ ಮುಖ್ಯವಾದುದು. ಆದರೆ ಕಾರ್ಯ ವಿಸ್ತಾರ, ಬಾಹುಳ್ಯ, ವೈವಿಧ್ಯತೆಯಲ್ಲಿ ಈ ಶಾಖೆಯು ಹೆಚ್ಚು ಪ್ರಾಮುಖ್ಯವನ್ನು ಹೊಂದಿದೆ ಎನ್ನಲಡ್ಡಿಯಿಲ್ಲ.

ಇದಕ್ಕೆ ಮೊದಲ ಪ್ರಯತ್ನ 1959-60ರಲ್ಲಿ ಎನ್ನಬಹುದು. 1959ರ ಅಂತ್ಯದಲ್ಲಿ ಶ್ರೀಶ್ರೀಗಳವರು ಬೆಂಗಳೂರಿಗೆ ಬಂದಿದ್ದಾಗ, ಅವರ ಪ್ರವಚನಗಳಿಂದ ಪ್ರಭಾವಿತರಾದವರು, ಅದಕ್ಕಿಂತ ಮೊದಲಿನಿಂದಲೂ ಅವರ ಸಂಪರ್ಕವನ್ನು ಹೊಂದಿದ್ದ ಭಕ್ತಾದಿಗಳು, ಬೆಂಗಳೂರಿನ ನರಸಿಂಹರಾಜಾಕಾಲೋನಿಯಲ್ಲಿ 'ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಬೆಂಗಳೂರು ಶಾಖೆ' ಎಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ನಂ. 1, ಸುಬ್ಬರಾಮಶೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು-4ರಲ್ಲಿ ಶ್ರೀಗಳ ಅಪ್ಪಣೆಯಂತೆ 26.12.59ರಂದು ಪ್ರಾರಂಭಿಸಿದರು. ಆಗ ಅಲ್ಲಿದ್ದ ಶ್ರೀಗಳು, ಇದನ್ನು ಆಶೀರ್ವದಿಸಿದ್ದಲ್ಲದೆ, ಅವಕಾಶವಿದ್ದಂತೆ ಇಲ್ಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವದಾಗಿಯೂ ಹೇಳಿದರು. ಬೆಳಗಿನ ಹೊತ್ತು 7.30 ಘಂಟೆಗೆ ಈಶಾವಾಸ್ಯೋಪನಿಷತ್‌ನ ಭಾಷ್ಯಪಾಠ ಮೊದಲಿಗೆ ಆರಂಭವಾಯಿತು. ಮಾರ್ಚ್ 1960ರ ವೇಳೆಗೆ ಈಶಾವಾಸ್ಯ, ಕೇನೋಪನಿಷತ್ ಪಾಠವೂ ಮುಗಿಯಿತು. ಕಾರ್ಯಕಾರಿ ನಿಬಂಧನೆಗಳೂ ತಯಾರಾಗುತ್ತಿದ್ದುವು. ಇಲ್ಲಿಯ ಸಮಿತಿಗೆ ನಿವೃತ್ತ ಹೈಕೋರ್ಟು ನ್ಯಾಯಾಧೀಶ ಶ್ರೀ ಎ.ಆರ್. ನಾಗೇಶ್ವರಅಯ್ಯರ್‌ರವರು ಅಧ್ಯಕ್ಷರಾಗಿ, ಮತ್ತೊಬ್ಬ ಸನ್ಮಾನ್ಯರಾದ, ನಿವೃತ್ತ ಮುಖ್ಯನ್ಯಾಯಾಧೀಶ ಶ್ರೀ ರುದ್ರಪಟ್ಟಣ ವೆಂಕಟರಾಮಯ್ಯನವರು ಉಪಾಧ್ಯಕ್ಷರಾಗಿ, ಇಂಜಿನಿಯರ್ ಶ್ರೀ ವಿ. ರಾಮಮೂರ್ತಿಯವರು ಖಜಾಂಚಿಯಾಗಿ, ಶ್ರೀ ಜಿ. ಕೃಷ್ಣಸ್ವಾಮಿ ಮತ್ತು ಶ್ರೀ ಅನಂತಮೂರ್ತಿ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿದ್ದ ಕಾರ್ಯಸಮಿತಿಯೊಂದು ರಚಿತವಾಯಿತು. ಮೇ. 1960ರ ವೇಳೆಗೆ ಮುಂಡಕಭಾಷ್ಯ ಮುಗಿದು, ಪ್ರಶ್ನೋಪನಿಷದ್ಭಾಷ್ಯ ನಡೆಯುತ್ತಿತ್ತು. ಕ್ಲುಪ್ತ ದಿನಗಳಲ್ಲಿ ಓಣಿ ಶ್ರೀ ಆಂಜನೇಯ ದೇವಾಲಯದ ಅಂಕಣದಲ್ಲಿ ಕೆಲವು ಉಪನ್ಯಾಸಗಳು ಜೂನ್‌ನಲ್ಲಿ ನಡೆದುವು. ವಿಶ್ವೇಶ್ವರಪುರದ ಶ್ರೀ ಶಂಕರ ಸೇವಾ ಸಮಿತಿಯಲ್ಲಿ "ಶಂಕರ ಭಗವತ್ಪಾದರ ಉಪದೇಶಗಳು, ಈಗಿನ ಸಮಸ್ಯೆಗಳನ್ನು ಹೇಗೆ ಬಿಡಿಸಬಲ್ಲವು ?" ಎಂಬ ಉಪನ್ಯಾಸಗಳೂ ಶ್ರೀಶ್ರೀಗಳವರಿಂದಾಯಿತು. ಜುಲೈನಲ್ಲಿ ಕಠೋಪನಿಷತ್ತಿನಲ್ಲಿ 4 ವಲ್ಲಿಗಳು ಮುಗಿದವು. ಮುಂದೆ 22.6.60ರಂದು ಶ್ರೀಶ್ರೀಗಳವರು ಹೊಳೆನರಸೀಪುರಕ್ಕೆ ಮತ್ತೆ ಅಲ್ಲಿಂದ ಧಾರವಾಡಕ್ಕೂ ಪ್ರಯಾಣ ಬೆಳೆಸಿದರು. ಅವರ ನಿರ್ಗಮನ

ದಿಂದ ಕೇವಲ ಆರು ತಿಂಗಳು ಮಾತ್ರ ನಡೆದಿದ್ದ ಶಾಖೆಯೂ ಕಾರ್ಯ ಸಮಿತಿಯವರ ಪ್ರಯತ್ನವಿಲ್ಲದ ಕಾರಣ ನಿಂತುಹೋಯಿತು.

ಪಾದಾರ್ಪಣೆ : ಅನಂತರದ ಹತ್ತು ವರ್ಷಗಳಾದ ಮೇಲೆ, ಶ್ರೀಶ್ರೀಗಳವರ ಅಪ್ಪಣೆಯಂತೆ ಕಾರ್ಯಾಲಯದ ಚಟುವಟಿಕೆಗಳನ್ನು ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರಿಗೂ ವಿಸ್ತರಿಸಿ ಅಲ್ಲಿಯೂ ನಡೆಸುವ ಸದುದ್ದೇಶದಿಂದ 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಬೆಂಗಳೂರು ಶಾಖೆ' ಎಂಬ ಹೆಸರಿನಿಂದ ಶಾಖಾ ಸಂಸ್ಥೆಯೊಂದನ್ನು ತೆರೆಯತಕ್ಕದ್ದೆಂತ, ಟ್ರಸ್ಟ್ ಸರ್ವಾನುಮತದಿಂದ ತೀರ್ಮಾನಿಸಿತು. ಶ್ರೀಶ್ರೀಗಳವರು 1969ರ ಡಿಸೆಂಬರ್ ವೇಳೆಗೆ ಬೆಂಗಳೂರಿಗೆ ಬಂದರು. ನಂ. 57, ಲಕ್ಷ್ಮೀವಾಸಂ, ಕೃಷ್ಣರಾಜೇಂದ್ರ ರಸ್ತೆ, ಬಸವನಗುಡಿ, ಬೆಂಗಳೂರು-4 ಎಂಬಲ್ಲಿ ಬಿಡಾರವನ್ನು ಮಾಡಿಕೊಂಡಿದ್ದರು. ಹಾಗೆಯೇ, ನಗರದ ಕೆಲವು ಕಡೆ ಭಕ್ತರ ಆಹ್ವಾನದಂತೆ ಪ್ರವಚನಗಳನ್ನೂ ನೀಡಿದರು.

ನಿವೇಶನ : ಬೆಂಗಳೂರಿನ ತಾತಾ ಸಿಲ್ಕ್ ಫಾರಂನಲ್ಲಿ ಟ್ರಸ್ಟ್ ಕಮಿಟಿ ಅಧ್ಯಕ್ಷರ ಹೆಸರಿನಲ್ಲಿ 388, ಚ.ಗಜಗಳ ನಿವೇಶನವನ್ನು ಸುಮಾರು 15,000 ರೂ.ಗಳ ಬೆಲೆಯಲ್ಲಿ, ಡಿಸೆಂಬರ್ 1969ರಲ್ಲೇ 31ನೇ ತಾ. ಕೊಳ್ಳಲಾಯಿತು. ಇಲ್ಲಿಯೇ ಕಟ್ಟಡ ನಿರ್ಮಾಣವನ್ನು ಮಾಡಿಸಿ ಶಾಖಾ ಕಾರ್ಯಾಲಯದ ಚಟುವಟಿಕೆಗಳನ್ನು ನಡೆಸಲು ತೀರ್ಮಾನವಾಯಿತು. ಆ ಉದ್ದೇಶಕ್ಕಾಗಿ ತಾತಾ ಸಿಲ್ಕ್ ಫಾರಂನ ಮೈಸೂರು ಬ್ಯಾಂಕ್ ಶಾಖೆಯಲ್ಲಿ ಕರೆಂಟು ಅಕೌಂಟನ್ನೂ ತೆರೆಯಲಾಯಿತು. ಕಾರ್ಯಾಲಯದ ಪರವಾಗಿ ಹಣವನ್ನು ಸಂಗ್ರಹ ಮಾಡಲು ಮತ್ತು ಈ ಖಾತೆಯನ್ನು ನಡೆಯಿಸಲು ಶ್ರೀ ಎನ್.ಎಸ್. ರಂಗಸ್ವಾಮಿ (ಈಗಿನ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು) ಎಂಬ ಭಕ್ತರು ಅಧಿಕೃತ ಸಹಿದಾರರೆಂದು ನೇಮಕವಾಯಿತು. ಇದಕ್ಕೆ ಹಿಂದೆ, ಅಕ್ಟೋಬರ್ 69ರ ಸುಮಾರಿನಲ್ಲಿ ಜಯನಗರದಲ್ಲಿದ್ದ ಕಂಟ್ರಾಕ್ಟರ್ ಶ್ರೀ ಎಸ್. ರಾಮರಾಯರೆಂಬ ಗುರುಭಕ್ತರಿಂದ ದಾನವಾಗಿ ಬಂದಿದ್ದ, ಬೆಂಗಳೂರು ದಕ್ಷಿಣ, ಹೊಸಕೆರೆಹಳ್ಳಿ ಮಾರ್ಗದಲ್ಲಿರುವ ದತ್ತಾತ್ರೇಯ ನಗರದಲ್ಲಿ 58'×40' ಅಳತೆಯ ರೆವಿನ್ಯೂ ಸೈಟಿನಲ್ಲಿಯೇ ಕಾರ್ಯಾಲಯ ಶಾಖೆಯನ್ನು ಪ್ರಾರಂಭಿಸುವದೆಂದೂ ಒಂದು ಯೋಚನೆಯಿತ್ತು.

ಈಗ, ತಾತ್ಕಾಲಿಕವಾಗಿ 'ಲಕ್ಷ್ಮೀ ನಿವಾಸಂ', ಕಟ್ಟಡ, ಬಸವನಗುಡಿಯಲ್ಲಿ ಶಾಖೆಯನ್ನು ಸ್ಥಾಪಿಸಿ ಶ್ರೀಶ್ರೀಗಳವರ ಪ್ರವಚನ, ಭಜನೆಗಳು, ಉಳಿದ ಚಟುವಟಿಕೆಗಳೂ ಆರಂಭವಾದುವು. ಇದು ಶಾಖಾ ಕಾರ್ಯಾಲಯದ ಮೊದಲ ಕೆಲಸಗಳು. ಶೀಘ್ರವಾಗಿ, ತಾತಾ ಸಿಲ್ಕ್ ಫಾರಂ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಕಾರ್ಯವೂ

ಪ್ರಾರಂಭವಾಯಿತು. ಕಟ್ಟಡವೆಂದು ಶ್ರೀಶ್ರೀಗಳವರು ವಾಸಿಸಲು ಅನುಕೂಲವಾಗು ವಂತೆ ಕಾರ್ಯವನ್ನು ಪ್ರಾರಂಭಿಸಿ ಒಂದು ಮನೆಯನ್ನು ಕಟ್ಟುವದು, ಅದರ ಮೇಲೆ ಮಹಡಿಯನ್ನು ಹಾಕುವದು, ಅನಂತರದಲ್ಲಿ, ಪಕ್ಕದಲ್ಲಿಯೇ ಒಂದು ಉಪನ್ಯಾಸ ಮಂದಿರವನ್ನು ಕಟ್ಟುವ ಯೋಜನೆಯಾಯಿತು.

1969ರ ಕೊನೆಯ ಭಾಗದಲ್ಲಿ ಅಂದರೆ ಸುಮಾರು ಅಕ್ಟೋಬರ್, ನವೆಂಬರ್‌ನಲ್ಲಿ ಆಗ ಇದ್ದ ಶ್ರೀ ಸುಬ್ರಾಯಶರ್ಮರಿಗೆ ಒಬ್ಬನೇ ವಿದ್ಯಾರ್ಥಿ ಎಂದು ಅಸಡ್ಡೆ ಮಾಡದೆ, ತಮ್ಮ 89ನೆ ಇಳಿವರ್ಷವನ್ನು ಪರಿಗಣನೆಗೆ ತಾರದೆ, ವೇದಾಂತ ಸಂಗ್ರಹ ಪಾಠವು, ಶ್ರೀ ಮಧ್ವಾಚಾರ್ಯರ ತತ್ತ್ವಸಂಖ್ಯಾನವೂ ಪೂರೈಸಿದ್ದು, ಉಪಾಧಿಖಂಡದ ಪಾಠವು ನಡೆಯುತ್ತಿತ್ತು. ಅದರ ಜೊತೆಗೆ ಒಂದು ಲಿಖಿತ ಪರೀಕ್ಷೆಯೂ ನಡೆಯಿತು. ಈತನನ್ನು ಇನ್ನು ಮುಂದೆ ಕಾರ್ಯಾಲಯದಲ್ಲಿಯೇ ಉದ್ಯೋಗಕ್ಕೆ ನೇಮಿಸಿಕೊಳ್ಳಬೇಕೆಂದು ಆಲೋಚನೆ ಬಂದಿತ್ತು. ಅದರಂತೆ, 16.11.69ರಲ್ಲಿ ಶ್ರೀ ಕೆ.ಜಿ. ಸುಬ್ರಾಯಶರ್ಮರನ್ನು ಶ್ರೀಶ್ರೀಗಳವರ ಖಾಸಾ ಕಾರ್ಯದರ್ಶಿಯಾಗಿ ನೇಮಕ ಮಾಡಿಕೊಳ್ಳುವ ನಿರ್ಣಯ ಟ್ರಸ್ಟ್‌ನಲ್ಲಿ ಆಯಿತು. ಈ ಹುದ್ದೆ 1.12.69ರಿಂದ ರೂ. 50-5-75 ಸಂಬಳ ಶ್ರೇಣಿಯಂತೆ ಒಂದು ವರ್ಷ ಪ್ರೊಬೇಷನ್ ಮೇರೆಗೆ ಎಂದು ನಿರ್ಧರಿಸಿತು. ಬೆಂಗಳೂರಿನಲ್ಲಿರುವಾಗ, ಹೊಳೆನರಸೀ ಪುರದ ಸೌಲಭ್ಯಗಳು ತಪ್ಪಿರುವದರಿಂದ, ಶ್ರೀಶ್ರೀಗಳವರಿಗೆ ಅನಾನುಕೂಲವಾಗ ದಿರಲೆಂದು ಮತ್ತು ಅವರ ಯೋಗಕ್ಷೇಮ ನಿರ್ವಹಣೆಗೆ, ಉಪನ್ಯಾಸ ಮುಂತಾದ ಕಾರ್ಯಗಳಲ್ಲಿ ಜೊತೆಯಲ್ಲಿರಲೆಂಬ ಉದ್ದೇಶದಿಂದ ಈ ಹೊಸ ವ್ಯವಸ್ಥೆಯನ್ನು ಮಾಡಲಾಯಿತು. ಹಾಗೆಯೇ ಕಾರ್ಯಾಲಯದಲ್ಲಿ ಶ್ರೀ ಸುಬ್ರಾಯಶರ್ಮರಿಗೆ ಊಟದ ವ್ಯವಸ್ಥೆಯೂ ಮುಂದುವರೆಯಿತು. ಕಟ್ಟಡದ ಮೊದಲ ಹಂತವಾಗಿ, ಶ್ರೀಶ್ರೀಗಳವರ ಗೃಹ, ಕಾರ್ಯಾಲಯದ ಕಛೇರಿ ಎಂಬ ಭಾಗವೂ ಜನವರಿ 71ರ ಹೊತ್ತಿಗೆ ಮುಗಿಯುತ್ತಾ ಬಂದು, ಒಳಗೆ ವಾಸವಾಗಿರುವ ಹಂತಕ್ಕೆ ಬಂದಿತು.

ಗೃಹಪ್ರವೇಶ : ಮಾಘ ಶುಕ್ಲದಶಮೀ ಶುಕ್ರವಾರದಂದು (5.2.71) ಶಾಖಾ ಕಾರ್ಯಾಲಯದ ನೂತನ ಗೃಹ ಪ್ರವೇಶವಾಯಿತು. ಹಿಂದಿನ ದಿನ ರಾತ್ರಿ ರಾಕ್ಷೋಘ್ನ ಹೋಮ, ಕಲಶಸ್ಥಾಪನಾದಿಗಳೂ, ಮಾರನೆಯದಿನ ವಾಸ್ತುಹೋಮ ಮೃತ್ಯುಂಜಯ ಹೋಮಾದಿಗಳೂ ವಿಧ್ಯುಕ್ತವಾಗಿ ನೆರವೇರಿದವು. ಬೆಳಿಗ್ಗೆ 10.05 ಘಂಟೆಗೆ ಸರಿಯಾಗಿ ಶ್ರೀ ಶ್ರೀ ಪರಮಹಂಸ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಪೂರ್ಣಕುಂಭ, ಗೋವು, ಮಂಗಳ ದ್ರವ್ಯಗಳು, ವೈದಿಕರು, ಸುವಾಸಿನಿಯರು, ಭಕ್ತವೃಂದದವರೊಡನೆ ಶುಭ ಮುಹೂರ್ತದಲ್ಲಿ ನೂತನ ಭವನವನ್ನು ಉದ್ಘಾಟಿಸಿದರು. ಅನಂತರ ನಡೆದ

ಮಹಾಸಭೆಯಲ್ಲಿ ಶ್ರೀಶ್ರೀಗಳವರು ಪ್ರವೇಶೋತ್ಸವದ ಮಹತ್ತ್ವವನ್ನು ವಿವರಿಸಿ, ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಸರ್ವಸಮ್ಮತವಾದ ವೇದಾಂತ ಸಿದ್ಧಾಂತವನ್ನು ಜನಸಾಮಾನ್ಯಕ್ಕೆಲ್ಲ ಹರಡುವ ಧ್ಯೇಯವುಳ್ಳದ್ದಾಗಿದ್ದು ಈಗ ಬೆಂಗಳೂರು ಭಕ್ತಮಹಾಜನರ ಸಹಕಾರದಿಂದ ತನ್ನ ಕಾರ್ಯಕ್ಷೇತ್ರವನ್ನು ಈ ಮಹಾನಗರಕ್ಕೆ ವಿಸ್ತರಿಸಿ ಜನಸೇವೆ ಮಾಡಲು ಮುಂದೆ ಬಂದಿದೆಯೆಂದೂ ಮಹಾಜನರು ಈ ಸದವಕಾಶವನ್ನು ಉಪಯೋಗಿಸಿಕೊಂಡು ಸಂಸ್ಥೆಯನ್ನು ಪ್ರೋತ್ಸಾಹಿಸಬೇಕೆಂದೂ ತಿಳಿಸಿದರು. ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳು ಸಂದರ್ಭೋಚಿತವಾದ ಮಾತುಗಳಿಂದ ಕಾರ್ಯಾಲಯದ ನಿಃಸ್ವಾರ್ಥ ಸೇವೆಯನ್ನು ಮಹಾಜನರು ಆದರದಿಂದ ಸ್ವೀಕರಿಸಿ ಪೋಷಿಸಬೇಕು, ಅವರ ಅತಿಶಯ ಔದಾರ್ಯದಿಂದಲೇ ಕೇವಲ ಒಂದು ವರ್ಷದ ಅವಧಿಯಲ್ಲಿ ಶಾಖೆಯ ಸ್ವಂತ ಕಟ್ಟಡವಾಗಿದೆ, ಹೀಗೆ ಸಹಾಯಮಾಡಿದ ಉದಾರಾಶ್ರಯರಾದ ಎಲ್ಲ ಮಹನೀಯರಿಗೂ ಕೃತಜ್ಞತೆಗಳನ್ನರ್ಪಿಸಿದರು. ಅನೇಕ ವಿದ್ವಾಂಸರುಗಳಿಗೂ, ಬಂದಿದ್ದ ಎಲ್ಲರಿಗೂ ಶ್ರೀಗಳವರು ಫಲಮಂತ್ರಾಕ್ಷತೆಗಳನ್ನನುಗ್ರಹಿಸಿದರು. ಶ್ರೀಗಳವರ ನಿವಾಸದಲ್ಲಿ ಯಥಾಶಕ್ತಿ ಅನ್ನಸಂತರ್ಪಣೆಯೂ ಆಯಿತು.

1.3.71 ರಿಂದ ಶ್ರೀಗಳು ನೂತನ ಗೃಹದಲ್ಲೇ ವಾಸಿಸಲಾರಂಭಿಸಿದರು. ಕಾರ್ಯಾಲಯದ ಚಟುವಟಿಕೆಗಳು, ಗುರುವಾರ-ಭಾನುವಾರದ ಶ್ರೀಶ್ರೀಗಳವರ ಉಪನ್ಯಾಸಗಳು ಇಲ್ಲಿಯೇ ನಡೆಯಲಾರಂಭಿಸಿದುವು. ಸಾಮಾನ್ಯವಾಗಿ ಆಚರಣೆಯಾಗುತ್ತಿದ್ದ ವಾರ್ಷಿಕ ಕಾರ್ಯಕ್ರಮಗಳಲ್ಲಿ - ಶ್ರೀ ರಾಮನವಮಿ ಉತ್ಸವ, ಶಂಕರ ಜಯಂತಿ, ನವರಾತ್ರಿ ಅನುಷ್ಠಾನಗಳು, ಗೀತಾಜಯಂತಿ, ಶ್ರೀ ಬ್ರಹ್ಮಚೈತನ್ಯಾರಾಧನೆ ಮುಂತಾದವುಗಳನ್ನು ಇಲ್ಲೇ ನಡೆಸಲಾಯಿತು. ಮುಂದಿನ ವಾರ್ಷಿಕ ಸಪ್ತಾಹಗಳಾದ ಶರನ್ನವರಾತ್ರಿ ಉತ್ಸವ, ಗೀತಾಜಯಂತಿ ಬ್ರಹ್ಮಚೈತನ್ಯಾರಾಧನೆಗಳು ಸೇರಿ, 1972, 73, 74ರ ಸಪ್ತಾಹಗಳೂ ಇಲ್ಲಿಯೇ ನಡೆದುವು.

ಉಪನ್ಯಾಸ ಮಂದಿರದ ಗುದ್ದಲಿ ಪೂಜೆಯನ್ನು ಶ್ರೀಗಳವರ ಸಮ್ಮುಖದಲ್ಲಿ 8.2.73 (ಮಾಘ ಶುಕ್ಲ ಪಂಚಮಿ)ಯಂದು ನೆರವೇರಿಸಲಾಯಿತು. ಬಂದವರಲ್ಲಿ ಮುಖ್ಯರು ಶ್ರೀ ಖೋಡೆ ಕೃಷ್ಣಸಾರವರು, ಶ್ರೀ ನೂಲೇನೂರು ಶ್ರೀನಿವಾಸ ಮೂರ್ತಿಗಳು. 18.12.74ರಂದು ಈ ಮಂದಿರದ ಉದ್ಘಾಟನೆಯನ್ನು ಶ್ರೀಗಳವರೇ ನಡೆಸಿದರು. *(ಉಪನ್ಯಾಸ ಮಂದಿರದ ಪ್ರಾರಂಭೋತ್ಸವದ ವರದಿಯು ಪುಸ್ತಕದ ಮೊದಲ ಭಾಗದಲ್ಲೇ, ಹೊಳೆನರಸೀಪುರದ ಪ್ರಧಾನ ಕಾರ್ಯಾಲಯದ ಚರಿತ್ರೆಯಲ್ಲೇ ಬಂದಿದೆ.)* ಕೆಲವಾರು ತಿಂಗಳು, ಆರೋಗ್ಯ-ದೇಹಸ್ಥಿತಿಯಿಂದ ಶಕ್ಯವಾದಾಗ

ಲೆಲ್ಲ, ಶ್ರೀಗಳು ಹೊಸ ಉಪನ್ಯಾಸ ಮಂದಿರದಲ್ಲಿಯೇ ಪ್ರವಚನಗಳನ್ನು ನಡೆಸಿದರು. ಉಳಿದ ಕಾರ್ಯಕ್ರಮಗಳೂ ಸಹ ಇಲ್ಲಿಯೇ ಆಚರಣೆಯಾದವು.

ಈ ಮಂದಿರದ ಆರಂಭವಾದನಂತರ ಕಾರ್ಯಾಲಯದ ಚಟುವಟಿಕೆ ಗಳಿಗೊಂದು ಚುರುಕು ಬಂತು. ಉಪನ್ಯಾಸ/ಸಪ್ತಾಹ/ಪ್ರವಚನಗಳು, ಕೆಲವಾರು ಪಾಠಗಳು, ಸಮಾರಂಭಗಳು ಇಲ್ಲಿ ಯಥೇಚ್ಛವಾಗಿ ನಡೆದಿವೆ. ಪ್ರತ್ಯೇಕವಾಗಿ, ವಿರಳವಾಗಿದ್ದು, ಮುಖ್ಯಗೇಟ್‌ನಿಂದ ಒಳಭಾಗಕ್ಕಿರುವದರಿಂದ ಈ ಮಂದಿರದಿಂದ ಹೆಚ್ಚಿನ ಉಪಯೋಗ. ಶ್ರೀ ಶಂಕರಾಚಾರ್ಯರ ದೊಡ್ಡ ಚಿತ್ರ, ಕೆಳಗೆ ಶ್ರೀಶ್ರೀಗಳವರ ಫೋಟೋ ಮತ್ತು ಪಾದುಕೆ, ಪಕ್ಕದಲ್ಲಿ ಗಾಜಿನಲ್ಲಿ ಪ್ರತ್ಯೇಕ ಕೋಣೆಯಂತೆ (ಕ್ಯಾಬಿನ್) ಸಣ್ಣ ಜಾಗದಲ್ಲಿ ಶ್ರೀ ಶ್ರೀಗಳು ಉಪಯೋಗಿಸುತ್ತಿದ್ದ ವಸ್ತುಗಳು - ಫೋಟೋಗಳ ಕೆಳಗೆ ಉದ್ದಕ್ಕೆ ಪ್ರವಚನ ವೇದಿಕೆ, ಎದುರಿಗೆ ಸಾಂತ್ವನದ ಶ್ರೀ ರಮಣರ ಫೋಟೋ, ಭವ್ಯವಾದ ನಿಲುವಿನ ಭಂಗಿಯಲ್ಲಿ ಶ್ರೀ ವಿವೇಕಾನಂದರ ಫೋಟೋ - ಇವಿಷ್ಟೂ ಸೇರಿ ಈ ಮಂದಿರಕ್ಕೊಂದು ಕಳೆ ನೀಡಿವೆ. ಇವುಗಳಿಂದ, ಇಲ್ಲಿಯ ಉಪನ್ಯಾಸ, ಬೇರೆ ಕಾರ್ಯಕ್ರಮ ನೀಡಲು ಶಾಂತವಾದ ವಾತಾವರಣ ಮೂಡಿದೆ. ಈ ಸೊಬಗೇ ಇಲ್ಲಿಯ ಒಂದು ವಿಶೇಷ . ಗಮಕವಾಚನ, ಸಂಗೀತ, ಸಹಸ್ರನಾಮ ಪಾರಾಯಣ, ಭಜನೆ, ಸ್ತೋತ್ರ ಪಾಠಗಳು ಇಂತಹ ವಿವಿಧ ಕಾರ್ಯಕ್ರಮಗಳು ಇಲ್ಲಿಯ ಕಾರ್ಯಗಳಿಗೆ ಒಂದು ಪ್ರತ್ಯೇಕ ರುಚಿಯನ್ನು ತಂದವು. ಜನಗಳಿಗೆ ಆಕರ್ಷಣೆಯೂ ಆಯಿತು. ಇದೇ ಇಲ್ಲಿಯ ವಿಶೇಷ .

ಹೊಳೆನರಸೀಪುರದಲ್ಲಿ ತೆಂಗಿನ ಮರಗಳ ನಡುವೆ, ಶ್ರೀ ದಿಗ್ವಿಜಯ ರಾಮರ ಸಮ್ಮುಖದಲ್ಲಿ ಕಾರ್ಯಗಳಿಗೆ ಅದರದೇ ಒಂದು ಸೊಗಸಿದೆ. ಶ್ರೀಶ್ರೀಗಳವರ ಕಾಲದಲ್ಲಿ ಕಟ್ಟಿಸಿದ ಸಣ್ಣ ಪ್ರವಚನ ಮಂದಿರ, ಕಾರ್ಯಾಲಯದ ಕಾರ್ಯವ್ಯಾಪ್ತಿ ಹೆಚ್ಚಾದ ಮೇಲೆ ಕಛೇರಿಯಾಗಿ, ಸಾಲುಸಾಲಾಗಿ ಜೋಡಿಸಿದ ರ‍್ಯಾಕ್‌ಗಳಲ್ಲಿನ ಪುಸ್ತಕಗಳ ಮಳಿಗೆಯಾಗಿ, ಉಪನ್ಯಾಸಕ್ಕೆ ಅನುಕೂಲತೆ ಮಾಯವಾಯಿತು. ಆದರೀಗ ಶ್ರೀ ಗುರು ಸಮಾಧಿಯ ಮುಂದೆ ಇರುವ ವಿಸ್ತಾರದ ಹಂದರ ಉಪನ್ಯಾಸ ಮತ್ತು ಉಳಿದ ಕಾರ್ಯ ಗಳಿಗೂ ಸೊಗಸಾಗಿದೆ. ಹೊಳೆನರಸೀಪುರ ಸಣ್ಣ ಊರಾದ್ದರಿಂದ ಶ್ರೋತೃಗಳು ಕಡಮೆ. ಆದರೆ ಇಲ್ಲಿಯ ಸೊಗಸನ್ನು ಅದರ ಸವಿಯನ್ನು ತಿಳಿಯಬೇಕಾದರೆ ವೇದಾಂತ ಸಪ್ತಾಹ, ಅದರಲ್ಲೂ ವೇದಾಂತ ಶಿಬಿರಗಳಲ್ಲಿ ಭಾಗವಹಿಸಿಯೇ ಆನಂದಿಸಬೇಕು.

ಕಾರ್ಯಸ್ವರೂಪ : ಶ್ರೀಶ್ರೀಗಳವರ ನಿರ್ಯಾಣಾನಂತರ (1975) ಬೆಂಗಳೂರು ಶಾಖೆಯ ಕಾರ್ಯಗಳು ಮತ್ತು ಆಡಳಿತವು ಪಂಡಿತರು, ಕಾರ್ಯದರ್ಶಿ

ಗಳಾದ ಶ್ರೀ ಕೆ.ಜಿ. ಸುಬ್ರಾಯಶರ್ಮರದಾಯಿತು. ಕಾರ್ಯಾಲಯವನ್ನು ಬೆಳಿಗ್ಗೆ 9 ರಿಂದ 12, ಮಧ್ಯಾಹ್ನಾನಂತರ 4 ರಿಂದ 8ರ ವರೆಗೆ ತೆರೆದಿಟ್ಟರು. ಈ ಅವಧಿಯಲ್ಲಿ ಬೆಳಗಿನ ಭಾಷ್ಯಪಾಠಗಳು, ಪ್ರವಚನಗಳು, ಭಜನೆ, ಪುರಾಣ, ಉಪನ್ಯಾಸಾದಿಗಳು, ಗ್ರಂಥಮಾರಾಟಾದಿಗಳೆಲ್ಲ ಸೇರಿದ್ದವು. ವಾಚನಾಲಯ, ಗ್ರಂಥಭಂಡಾರಗಳು ಭಕ್ತಾದಿಗಳ ಉಪಯೋಗಕ್ಕಾಗಿ ತೆರೆದಿಟ್ಟವಾಗಿದ್ದುವು. ಶ್ರೀ ಶರ್ಮರು ಮುಖ್ಯ ಸಂಚಾಲಕರಾಗಿ, ಶ್ರೀ ಟಿ.ಎಸ್. ರಾಜಗೋಪಾಲ್‌ರು ಸಹಾಯಕರಾಗಿ ಸೇವೆ ಸಲ್ಲಿಸುತ್ತಾ ಬಂದರು.

ಚಿಕ್ಕಮಕ್ಕಳಿಗೆ ಸ್ತೋತ್ರಪಾಠಗಳು, ಶಾಲಾ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಾಠಗಳು, ಯೋಗಾಭ್ಯಾಸ ತರಗತಿಗಳೂ ಕೂಡ ಪ್ರಾರಂಭವಾದವು. ಬೆಳಿಗ್ಗೆ ಗೀತಾಭಾಷ್ಯ, ಮಧ್ಯಾಹ್ನ ವಿಷ್ಣುಪುರಾಣ ಪ್ರವಚನಗಳು ಪ್ರತಿದಿನವೂ ಆಗುತ್ತಾ ಬಂದವು. ಪ್ರತಿ ಭಾನುವಾರ 'ದಕ್ಷಿಣಾಮೂರ್ತಿ ಸ್ತೋತ್ರ', ಗುರುವಾರ ಗೀತಾ 13ನೆಯ ಅಧ್ಯಾಯಗಳ ಉಪನ್ಯಾಸಗಳನ್ನೂ, ಇದಾದ ನಂತರ 'ವಿವೇಕ ಚೂಡಾ ಮಣಿ', 'ಮುಕುಂದ ಮಾಲಾ ಸ್ತೋತ್ರ'ದ ಉಪನ್ಯಾಸಗಳು ನಡೆದುವು. 1976ರ ಸೆಪ್ಟೆಂಬರ್ 18, 19 ತಾರೀಖುಗಳಲ್ಲಿ ಶ್ರೀ ಅರುಣಾಚಲ ಭಾಗವತರು ಶ್ರೀ ತ್ಯಾಗ ರಾಜರ ಕೀರ್ತನೆ, ಭಜನೆಯ ವಿಷಯವಾಗಿ ಉಪನ್ಯಾಸ ಮಾಡಿದರು. 'ಭಾಷ್ಯ ಚಿಂತನ' ಎಂಬ ಹೊಸ ಪ್ರವಚನ ಮಾಲಿಕೆ ಡಿಸೆಂಬರ್ (76)ನಲ್ಲಿ ಪ್ರಾರಂಭ ವಾಯಿತು ; ಮೊದಲ ಉಪನ್ಯಾಸ 'ಕಠೋಪನಿಷದ್ಭಾಷ್ಯ ಚಿಂತನ'. 11.7.76ರಂದು ವ್ಯಾಸ ಪೂರ್ಣಿಮೆಯ ವಿಶೇಷ ಪೂಜೆಯನ್ನೂ, ಶ್ರೀಮತಿ ಪುಟ್ಟಚ್ಚಮ್ಮನವರು ಶ್ರೀ ಸತ್ಯನಾರಾಯಣವ್ರತ, ಶ್ರೀ ಗುರುಪಾದುಕಾ ಪೂಜೆಯನ್ನೂ, ಆಗಸ್ಟ್ 28ರಲ್ಲಿ ಸ್ಯಮಂತಕೋಪಾಖ್ಯಾನ ಮತ್ತು 29ರಂದು ಗಮಕಿ ಶ್ರೀ ವೆಂಕಟರಾಮಯ್ಯನವರು 'ಸುಧನ್ವನ ಭಕ್ತಿ' ಎಂಬ ಭಾಗದ ವಾಚನವನ್ನೂ ಮಾಡಿದರು. 24.9.76ರಿಂದ 2.10.76ರ ವರೆಗೆ ಶರನ್ನವರಾತ್ರಿಯ ಪ್ರಯುಕ್ತ ಬೆಳಿಗ್ಗೆ ವಿಶೇಷ ಪೂಜಾದಿಗಳು, ಸಾಯಂಕಾಲಗಳಲ್ಲಿ ಉಪನ್ಯಾಸ, ಭಜನೆಗಳೂ ನಡೆದುವು. ಚಿಕ್ಕಮಕ್ಕಳಿಗೆ ಸುಭಾಷಿತ ಗಳನ್ನು ಹೇಳಿಕೊಡಲಾಗುತ್ತಿತ್ತು. ಗುರುವಾರ ಭಾನುವಾರದ ಉಪನ್ಯಾಸಗಳಲ್ಲಿ ಮಹಾಭಾರತದ ಸಭಾಪರ್ವದಲ್ಲಿ 34 ಅಧ್ಯಾಯಗಳಾಗಿದ್ದುವು.

ಡಿಸೆಂಬರ್ 76ರ ವೇಳೆಗೆ ವಿದ್ಯಾರ್ಥಿಗಳನ್ನು 'ಕಿಶೋರ ಮನೋಲ್ಲಾಸಿನೀ' ಎಂಬ ಪರೀಕ್ಷೆಗೂ, ಸುರಸರಸ್ವತೀ ಸಭೆಯ ಪರೀಕ್ಷೆಗಳಿಗೂ ತಯಾರು ಮಾಡಿತ್ತು. 1976ರ ಕೊನೆಗೆ ಅರವತ್ತು ವಿದ್ಯಾರ್ಥಿಗಳಿದ್ದರು. ಹೀಗೆ ಮೊದಲ ವರ್ಷಗಳಲ್ಲಿ ಸಂಸ್ಕೃತ ಪಾಠಗಳು ಬಹಳ ಚೆನ್ನಾಗಿ ನಡೆದುವು.

ವಿದ್ಯಾಶಿಕ್ಷಣವೆಂದು ಪ್ರಾರಂಭದಲ್ಲಿ ಒಂದೆರಡು ವಿದ್ಯಾರ್ಥಿಗಳಿದ್ದು ಶ್ರೀ ಹನುಮಂತರಾವ್, ಶ್ರೀ ಚಂದ್ರಮೌಳಿ ಅವಧಾನಿಯರನ್ನು ಬಿಟ್ಟರೆ ಹೇಳಿಕೊಳ್ಳು ವಂತಹ ವಿದ್ಯಾರ್ಥಿ ಶಿಕ್ಷಣವಾಗಲಿಲ್ಲ. ಬದಲಿಗೆ, ಕೆಲವು ನಿವೃತ್ತ ಅಧಿಕಾರಿಗಳೂ, ಹಿರಿಯರೂ ಸೇರಿದಂತೆ ಕೆಲವರಿಗೆ ಭಾಷ್ಯಪಾಠಗಳನ್ನು ನಡೆಸಿ, ಅವರ ಆಸಕ್ತಿಗೆ ತಕ್ಕಂತೆ, ಹೆಚ್ಚಿನ ಮಟ್ಟದ ವೇದಾಂತ ತಿಳುವಳಿಕೆಯನ್ನು ನೀಡಲಾಯಿತು. ಅವರುಗಳಲ್ಲಿ ನಿವೃತ್ತ ಇಂಜಿನಿಯರ್ ಶ್ರೀ ಎಂ.ವಿ. ರಾಮಚಂದ್ರ ಅವರು ಉಪನ್ಯಾಸಗಳನ್ನು ಮಾಡು ತ್ತಿದ್ದರು. ಶ್ರೀ ರಂಗಸ್ವಾಮಿಗಳು ಬೆಳಿಗ್ಗೆ ಬರುವ ಆಸಕ್ತರಿಗಾಗಿ ಪಾಠಗಳನ್ನು ಮಾಡುತ್ತಿ ದ್ದರು. ಆಗಾಗ ವಿದ್ಯಾದಾನ ಪ್ರವೃತ್ತರಾದರು. ಹೀಗೆ 10 ಗಂಟೆಗೆ ನಿತ್ಯ ಪ್ರವಚನದ ನಂತರ, ಸ್ವಲ್ಪ ಕಾಲ ಸಂಸ್ಕೃತವೂ ನಡೆಯಿತು. ಇವೆಲ್ಲ ಇತ್ತೀಚಿನವರೆಗೂ ನಡೆದ ಕಾರ್ಯಗಳು. ಸಾಯಂಕಾಲಗಳಲ್ಲಿ ಶ್ರೀ ಮಹದೇವಸಿಂಹರು ಶ್ರೀಶ್ರೀಗಳವರ ಭಗವದ್ಗೀತಾ ಉಪನ್ಯಾಸಗಳನ್ನನುಸರಿಸಿ, ಭಗವದ್ಗೀತೆಯ ಪಾಠಗಳನ್ನು - ವಿಚಾರ ವಿನಿಮಯಗಳನ್ನು ಮಾಡುತ್ತಿದ್ದರು. ಮಂಗಳವಾರ ಹಗಲಿನಲ್ಲಿ ಮಹಿಳಾ ಮಂಡಳಿ ಯವರಿಂದ ಸೌಂದರ್ಯಲಹರೀ ಮುಂತಾದ ಸ್ತೋತ್ರಗಳ ಪಠಣಗಳು ನಡೆಯು ತ್ತಿದ್ದುವು. ಗುರುವಾರ ಸಂಜೆ ಶ್ರೀ ಸಂಜೀವ ಮೂರ್ತಿಯವರು, ಅವರು ಸದಸ್ಯರಾದ ಮೇಲೆ 'ಅಧ್ಯಾತ್ಮಗೀತಾವಳಿ' ಸ್ತೋತ್ರಗಳನ್ನು 2001ರ ಕೊನೆಯವರೆಗೂ ನಡೆಸಿದರು. ಅದೇ ರೀತಿ ಶನಿವಾರ ಸಾಯಂಕಾಲಗಳಲ್ಲಿ ಶ್ರೀ ಎಸ್. ರಾಮಚಂದ್ರ ಅಯ್ಯರ್‌ರವರು ಭಜನೆಯನ್ನು ಮಾಡಿಸುತ್ತಿದ್ದರು, ತಮ್ಮದೇ ನೇತೃತ್ವದಲ್ಲಿ.

1987ರಲ್ಲೇನೋ ವಿದ್ಯಾನಿಲಯವೊಂದರ ಸ್ಥಾಪನೆಗೆ ಪ್ರಯತ್ನ ನಡೆಯಿತು. ಅದಕ್ಕಾಗಿ ಅಧ್ಯಾತ್ಮ ಪ್ರಕಾಶದಲ್ಲಿ ಮುಂದೆಯೂ ಕೆಲವು ಬಾರಿ ಪ್ರಕಟಣೆಗಳನ್ನು ಕೊಟ್ಟು, ವಿದ್ಯಾರ್ಥಿಗಳ ಅಪೇಕ್ಷಿತ ಅರ್ಹತೆಗಳನ್ನು ಸೂಚಿಸಿತ್ತು. ಆದರೆ, ವಿದ್ಯಾರ್ಥಿಗಳು ಬಾರದುದರಿಂದ ಈ ಪ್ರಯತ್ನ ಅಲ್ಲಿಗೇ ನಿಂತಿತು.

ಇಲ್ಲಿ ಗ್ರಂಥ ಕೆಲಸವೇ ಆಗಲಿಲ್ಲ, ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರವರ **Vedanta or the Science of Reality** ಪುಸ್ತಕದ ಮತ್ತು ಕೆಲವು ಶ್ರೀಗಳವರ ಗ್ರಂಥಗಳ ಮರುಮುದ್ರಣವೊಂದು ಬಿಟ್ಟರೆ. 2001ರ ಮೇ ನಿಂದ ಕಾರ್ಯಾಲಯದ ಆಡಳಿತದ ಹೊರೆ ತಪ್ಪಿಸಿದಾಗ, ದೊಡ್ಡಭಾರ ಕಳಗಿಳಿದು ಹೆಚ್ಚಿನ ಸಮಯ ದೊರಕಿರುವಾಗ ಪಂಡಿತರು ಶ್ರೀಶ್ರೀಗಳವರ ಅಪ್ರಕಟಿತ ಹಸ್ತಪ್ರತಿಗಳನ್ನು ಮುದ್ರಣಕ್ಕೆ ತಯಾರು ಮಾಡುವದು, ಅವರ ಅಪೂರ್ವ ಗ್ರಂಥಗಳನ್ನು, ವೇದಾಂತ ವಿಚಾರದ ಇತಿಹಾಸದಂತಹ ಗ್ರಂಥದ ಎರಡನೆಯ ಭಾಗವನ್ನು ಬರೆಯುವುದು, ಅವರ ಸಂಸ್ಕೃತ ಗ್ರಂಥಗಳನ್ನು ಪರಿಷ್ಕರಿಸಿ ಎರಡನೆಯ ಮುದ್ರಣಕ್ಕೆ ಸರಿಮಾಡಿಕೊಡುವದು -

ಕರಡುತಿದ್ದುವದು, ಇಂತಹ ಸಾರಸ್ವತ ಸೇವೆಗಳನ್ನು ಶ್ರೀಶ್ರೀ ಗುರುಗಳ ಪ್ರೀತ್ಯರ್ಥವಾಗಿ ನಡೆಸಿಕೊಡುವದನ್ನು ಸ್ಪಷ್ಟವಾಗಿ ಪ್ರಾರ್ಥಿಸಲಾಗಿತ್ತು. ಅದನ್ನು ಕಾರ್ಯಸಮಿತಿಯ ಸಭೆಯಲ್ಲೂ ವಿಶೇಷವಾಗಿ ಪ್ರಸ್ತಾಪ ಮಾಡಿ, ಪುನಃ ಒತ್ತಾಯ ಪೂರ್ವಕವಾದ ವಿನಂತಿಯನ್ನು ಪಂಡಿತರ ಮುಂದಿಟ್ಟಿತ್ತು. ಆದರೆ, ಯಾವುದನ್ನೂ 'ಆಗುವುದೇ ಇಲ್ಲ - ಇನ್ನೆರಡು ವರ್ಷ ಯಾವುದನ್ನೂ ಮಾಡುವುದಿಲ್ಲ' ಎಂದು ಖಡಾಖಂಡಿತವಾದ ನಿಲುವನ್ನು ತಾಳಿದರು. ಮತ್ತೊಮ್ಮೆ ಕಣ್ಣು ದೋಷ ಇದೆ, ತೊಂದರೆ ಇದೆ ಈಗ ಆಗುವುದಿಲ್ಲ ಎಂದೂ ಉತ್ತರ ಬಂತು. ದುರದೃಷ್ಟದಿಂದ ಈ ಪರಿಸ್ಥಿತಿ 2001 ರಿಂದ 2006ರ ವರೆಗೂ ಮುನ್ನಡೆಯಿತು. ಶಾಂಕರ ಸಂವತ್ಸರ, ವೇದಾಂತ ಸಂವತ್ಸರ, ಪ್ರಬೋಧ ಚಿಂತಾಮಣಿ, ಜ್ಞಾನಾಮೃತ ಬಿಂದುಗಳೆಂದು ಗ್ರಂಥಗಳನ್ನು ಬರೆದು ಪ್ರಕಟಿಸಿದರು. 'ಶಾಂಕರ ಸಂವತ್ಸರ'ವೇನೋ ಹೊಸ ಸಮಿತಿ ಬರುವಾಗ ಮುದ್ರಣದ ಹಂತದಲ್ಲಿತ್ತು. 'ವೇದಾಂತ ಸಂವತ್ಸರ'ದ ಮುದ್ರಣದ ಕೆಲಸಗಳು ಪ್ರಾರಂಭವಾದಾಗ, ಹಣ ಸಂಗ್ರಹವೂ ಆದ ಮೇಲೆ, ಕಾರ್ಯಾಲಯದಿಂದ ಪ್ರಕಟಿಸಿ, ಎಂದೂ ಕೇಳಿದ್ದರು. ಆದರೆ ಕೆಲವು ಔಪಚಾರಿಕವಾದರೂ, ಇದ್ದ ನಿಯಮದ ಪಾಲನೆ ಮಾಡದ ಪುಸ್ತಕ ಪ್ರಕಟಣೆ ಕಾರ್ಯಾಲಯದ ವ್ಯಾಪ್ತಿಯೊಳಗೆ ಬರಲಿಲ್ಲ.

ಉಳಿದ ಸಾಧನಗಳಿಗಿಂತ ಹೆಚ್ಚಾಗಿ, ಬೆಂಗಳೂರು ಶಾಖಾ ಕಾರ್ಯಾಲಯದ ಪ್ರಥಮ ಆದ್ಯತೆ ಉಪನ್ಯಾಸಗಳಿಗೇ ಆಯಿತು. ಮುಂದೆ 1988 ರಿಂದ 'ಶಂಕರ ಭಾಸ್ಕರ' ಪ್ರಾರಂಭದೊಂದಿಗೆ ಪತ್ರಿಕೆಯೂ ಪ್ರಸಾರ ಸಾಧನವಾಯಿತು. ಅಲ್ಲಿಗೆ ಈ ಶಾಖೆ ತನ್ನನ್ನು ಸೀಮಿತಗೊಳಿಸಿಕೊಂಡದ್ದು ಪ್ರವಚನ / ಉಪನ್ಯಾಸ ಮತ್ತು ಪತ್ರಿಕೆಗೆ ಮಾತ್ರವಾಯಿತು.

1977ರ ಜೂನ್‌ನಲ್ಲಿ ಎರಡು ಭಾನುವಾರಗಳೂ, ಡಿಸೆಂಬರ್‌ನಲ್ಲಿ ನಾಲ್ಕು ಭಾನುವಾರ ಗುರುವಾರಗಳೂ ವೇದಾಂತ ಉಪನ್ಯಾಸಗಳನ್ನು ಶ್ರೀ ದೇವರಾಯ ಕುಲಕರ್ಣಿಗಳು ನಡೆಸಿದರು. ಸೆಪ್ಟೆಂಬರ್ 77ರಲ್ಲಿ ಪುತ್ತೂರು ಕಾಲೇಜ್ ಪ್ರಿನ್ಸಿಪಾಲರಾದ ಡಾ|| ಕೆ.ಎಸ್. ರಾಮಚಂದ್ರರಾಯರು 'ಭಗವದ್ಭಕ್ತಿಯ ಮಹತ್ವ' ಎಂಬ ಉಪನ್ಯಾಸವನ್ನೂ, ತ್ಯಾಮಗೊಂಡ್ಲಿನ ಗಮಕಿ ಶ್ರೀ ವೆಂಕಟರಾಮ ಶಾಸ್ತ್ರಿಗಳು ಗಮಕ ವಾಚನವನ್ನೂ, ಡಿಸೆಂಬರ್ 77ರಲ್ಲಿ 23, 24, 25ರಂದು ದತ್ತ ಜಯಂತಿ ಪ್ರಯುಕ್ತ 'ಶ್ರೀ ದತ್ತಾವತಾರ' ವಾಚನವನ್ನೂ ಮಾಡಿದರು.

25.2.78 ಶನಿವಾರ ರಾತ್ರಿ ವಿಶೇಷ ಭಜನೆಯಾಯಿತು. ಮಾಘಮಾಸದ ಪ್ರಯುಕ್ತ ಒಂದು ತಿಂಗಳು 'ಮಾಘ ಮಹಾತ್ಮ್ಯೆ' ಪ್ರವಚನಗಳು ನಡೆದು 10.3.78

ಮಂಗಳವಾಯಿತು. ಈ ಅವಧಿಯಲ್ಲಿ 7.3.78ರಂದು ಮಹಾಶಿವರಾತ್ರಿ ಪ್ರಯುಕ್ತ 'ಶಿವರಾತ್ರಿ ವ್ರತದ ತಾತ್ತ್ವಿಕಾರ್ಥ' ಎಂಬುದನ್ನು ಭಜನ ನಿಷ್ಠ ಶ್ರೀ ಸಿ. ಆರ್. ಕಲ್ಯಾಣ ಕೃಷ್ಣರು ನಡೆಸಿದರು. ಶ್ರೀ ರಾಮನವಮಿಯ ಉತ್ಸವದಲ್ಲಿ ಶ್ರೀ ವಾಲ್ಮೀಕಿ ರಾಮಾಯಣ ಪ್ರವಚನ 9 ದಿನ, ಅದರ ನಂತರದ ದಿನ ಮಂಗಳವಾಯಿತು. ಹಾಗೆಯೇ, ಸಾಮಾನ್ಯ ವಾಗಿ ಆಚರಿಸುವಂತೆ ಶಂಕರ ಸಪ್ತಾಹ, ದೇವೀಮಹಾತ್ಮ್ಯೆ ಪ್ರವಚನ, 3 ದಿನ ಗೀತಾ ಜಯಂತಿ, 3 ದಿನ ಶ್ರೀ ಬ್ರಹ್ಮಚೈತನ್ಯಾರಾಧನೆಗಳೂ ಕ್ರಮವಾಗಿ ನೆರವೇರಿದುವು. 1979ರಲ್ಲಿ, ಉತ್ತರಾಯಣ ಪುಣ್ಯಕಾಲ ನಿಮಿತ್ತ 14.1.79ರಂದು, ಶ್ರೀ ತ್ಯಾಗರಾಜ ಆರಾಧನೆಯ ನಿಮಿತ್ತ 19.1.79, ಮತ್ತು ಭೀಷ್ಮಾಷ್ಟಮಿ 4.2.79 - ಈ ದಿನಗಳಲ್ಲಿ ವಿಶೇಷ ಉಪನ್ಯಾಸಗಳಾದುವು.

ಶ್ರೀಶ್ರೀಗಳವರಲ್ಲಿ ಭಕ್ತಿ, ಪ್ರೇಮಗಳಿಂದ, ವಿಶೇಷವಾಗಿ ಅವರ ಅಂತಿಮ ವರ್ಷಗಳಲ್ಲಿ ಅನುಪಮ ಸೇವೆ ಸಲ್ಲಿಸಿದ 'ಮಾತಾಜಿ' ಶ್ರೀಮತಿ ಲಕ್ಷ್ಮೀದೇವಮ್ಮನವರ (10.9.79ರಂದು ದೈವಾಧೀನ) ವೈಕುಂಠ ಸಮಾರಾಧನೆಯನ್ನು, ಅವರ ಆತ್ಮಕ್ಕೆ ಶಾಂತಿ ಕೋರಿ ವಿಶೇಷ ಪೂಜೆ, ಭಜನೆ, ಪಾರಾಯಣಗಳೊಡನೆ 21.9.79ರಂದು ಶಾಖಾ ಕಾರ್ಯಾಲಯದಲ್ಲಿ ನೆರವೇರಿಸಲಾಯಿತು. ಮಾತಾಜಿಯವರ ಸಹೋ ದರರು, ನೆಂಟರಿಷ್ಟರು, ಭಕ್ತಾದಿಗಳು ಬಂದಿದ್ದರು. ಸಾಯಂಕಾಲದ ಸಭೆಯಲ್ಲಿ ಅವರ ಗುಣಗಾನ ಮಾಡಲಾಯಿತು. ಮುಂದಿನ ಕೆಲವು ವರ್ಷಗಳ ಅವರ ವಾರ್ಷಿಕಾ ರಾಧನೆಯು ಇಲ್ಲಿ ನಡೆಯಿತು.

1979ರ ಅಕ್ಟೋಬರ್-ನವೆಂಬರ್‌ಗಳಲ್ಲಿ ಶ್ರೀ ನೂಲೇನೂರು ಶ್ರೀನಿವಾಸ ಮೂರ್ತಿಗಳು ಸುಮಾರು 40 ದಿನಗಳು ಋಷಿಕೇಶದ ಶ್ರೀ ಶಿವಾನಂದ ಸ್ವಾಮಿಗಳ ವರ **'What becomes of the soul after Death'** ಎಂಬ ಗ್ರಂಥವನ್ನು ಕುರಿತು ಮತ್ತು 10 ದಿನಗಳು ಶ್ರೀ ದೇವರಾಯ ಕುಲಕರ್ಣಿಗಳು, 'ಮನೋನಿಗ್ರಹ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು.

1980ರ ಪ್ರತಿ ಬುಧವಾರ, ಶನಿವಾರಗಳಲ್ಲಿ 3.30 ರಿಂದ 4.00ರ ವರೆಗೆ ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಮತ್ತು ಪ್ರತಿದಿನ 3.45 - 4.00ರ ವರೆಗೆ ಗೀತಾ ಪಾರಾಯಣ, 7 ರಿಂದ 7.30ರ ವರೆಗೆ ಭಜನೆಗಳು, ಜೂನ್ 80ರಲ್ಲಿ ಒಂದು ವಾರ ಕಾಲ 'ಸಂನ್ಯಾಸ' ವಿಷಯವಾಗಿ ವಿಚಾರ ಪ್ರಚೋದಕವಾದ ಉಪನ್ಯಾಸಗಳು, (ಶ್ರೀ ನೂಲೇನೂರು ಶ್ರೀನಿವಾಸ ಮೂರ್ತಿಗಳಿಂದ) ಮಾರ್ಗಶೀರ್ಷ ಮಾಸ ಪ್ರಯುಕ್ತ ಒಂದು ತಿಂಗಳು ಗುರು ಚರಿತ್ರೆಯ ಪ್ರವಚನಗಳು ನಡೆದುವು.

ಜನವರಿ 1981 ರಿಂದ ಪ್ರದೋಷ ಪೂಜೆ ಪ್ರಾರಂಭಿಸಿತು. 30.12.81 ರಲ್ಲಿ ಶ್ರೀ ಋಷಿಪ್ರಭಾಕರ್‌ರಿಂದ 'ಸಿದ್ಧ ಸಮಾಧಿಯೋಗ', ಜೂನ್‌ನಲ್ಲಿ ಶಾಖಾಲಯದಲ್ಲೇ ಉಳಿದಿದ್ದ ಜ್ಞಾನಾನಂದೇಂದ್ರರಿಂದ ಸಾಯಂಕಾಲಗಳಲ್ಲಿ ಛಾಂದೋಗ್ಯ ಮತ್ತು ಗೀತಾಭಾಷ್ಯ ಪ್ರವಚನಗಳಾದುವು.

1982ರ ಸೆಪ್ಟೆಂಬರ್‌ನಿಂದ 31.1.88ರ ವರೆಗೆ, ಪ್ರತಿ ಶನಿವಾರ, ಭಾನುವಾರಗಳಲ್ಲಿ ಸಾಯಂಕಾಲ 5ರಿಂದ ವಿಶೇಷವಾಗಿ ಹಳೆಯ ಸಂಪ್ರದಾಯವನ್ನು ಹೊಸದಾಗಿ ಮತ್ತು ವಿಸ್ತಾರವಾಗಿ ಮಾಡಿದ ಉಪನ್ಯಾಸಗಳ ಸರಣಿ ನಡೆಯಿತು. ಹೀಗೆ ಒಂದೇ ಸಮನೆ 65 ತಿಂಗಳು 282 ವಾರಕ್ಕಿಂತಲೂ ಹೆಚ್ಚುಕಾಲ, 1130 ಉಪನ್ಯಾಸಗಳನ್ನು ಎಡೆಬಿಡದಂತೆ ನಡೆಸಿದುದೂ ಒಂದು ಉತ್ತಮ ಕಾರ್ಯ. ನಗರದ ಹಲವಾರು ಪ್ರತಿಷ್ಠಿತ ವಿದ್ವಾಂಸರು ಉತ್ತಮ ವಿಷಯಗಳ ಬಿತ್ತರಣೆ ಮಾಡಿದರು.

ಬೆಂಗಳೂರಿನ ಹಲವಾರು ಸ್ಥಳಗಳಲ್ಲಿ ಆಗಾಗ ಪ್ರತಿ ತಿಂಗಳೂ, ಪ್ರತಿವರ್ಷವೂ ಪಂಡಿತರಿಂದ ಉಪನ್ಯಾಸಗಳಾದವು. ಬೆಂಗಳೂರಿನ ಜನತೆಗೆ ಕಾರ್ಯಾಲಯವೂ ಹೆಚ್ಚು ಪರಿಚಿತವಾಯಿತು. ಜೊತೆಗೆ, ಇದೇ ರೀತಿ ಬೆಂಗಳೂರಿನ ಆಚೆ, ಗುಲ್ಬರ್ಗ, ತಾಳೀಕೋಟೆಯಂತಹ ದೂರ ಪ್ರದೇಶಗಳವರೆಗೂ ಸ್ವತಃ ಪ್ರಚಾರದೊಡನೆ, ಅಧ್ಯಾತ್ಮ ಪ್ರಸಾರವೂ ಬಹಳವಾಗಿ ಆಯಿತು.

1982ರ ಡಿಸೆಂಬರ್‌ನಿಂದ 1983ರ ಸೆಪ್ಟೆಂಬರ್‌ವರೆಗೆ ಹತ್ತು ತಿಂಗಳ ಕಾಲ, ಶ್ರೀ ನೂಲೇನೂರು ಶ್ರೀನಿವಾಸ ಮೂರ್ತಿಗಳು, ಶ್ರೀ ರಾಮತೀರ್ಥರ ದಿವ್ಯ ಸಂದೇಶವನ್ನು ಪ್ರಸಾರ ಮಾಡಿದರು.

**ಸಪ್ತಾಹಗಳು :** ಶ್ರೀಶ್ರೀಗಳವರ ಕಾಲದಲ್ಲಿಯಂತೆಯೇ, ಶ್ರೀ ರಾಮನವರಾತ್ರಿ ಉತ್ಸವ ಯುಗಾದಿಯಿಂದ - ಶ್ರೀ ರಾಮನವಮಿಯವರೆಗೆ, ಶಂಕರ ಜಯಂತಿ ಸಪ್ತಾಹ, ಪಂಚಮಿಯಿಂದ ಸಾಮಾನ್ಯವಾಗಿ ದ್ವಾದಶಿಯವರೆಗೆ, ನವರಾತ್ರಿ ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿಯವರೆಗೆ, ಗೀತಾಜಯಂತಿ 4 ದಿನ, ಶ್ರೀ ಬ್ರಹ್ಮಚೈತನ್ಯಾರಾಧನೆ 4 ದಿನ, ಈಗ 1976ರಿಂದ ಶ್ರೀ ಸದ್ಗುರು ಆರಾಧನಾ ಸಪ್ತಾಹ ಅವರ ಆರಾಧನೆಯ ದಿನದವರೆಗೆ, ಶ್ರೀ ಸದ್ಗುರು ಜಯಂತಿ ಆಚರಣೆ (1983ರಿಂದ) ಹೀಗೆ ನಡೆದುಕೊಂಡು ಬಂದವು. ಸಾಮಾನ್ಯವಾಗಿ ಈ ಎಲ್ಲ ಉತ್ಸವ ದಿನಗಳಲ್ಲೂ ದಿನಕ್ಕೆ ಮೂರು ಪ್ರವಚನಗಳಿರುತ್ತಿದ್ದವು. ಶ್ರೀ ರಾಮೋತ್ಸವದಲ್ಲಿ ಪ್ರತಿದಿನವೂ ಸುಂದರ ಕಾಂಡ ಪಾರಾಯಣ, ರಾಮಾಯಣೋಪನ್ಯಾಸಗಳು ; ಭಜನೆ, ವಸಂತ ಪೂಜೆ, ಶ್ರೀ ರಾಮನವಮೀ ದಿನದಂದು, ಇವು ಮುಖ್ಯ ಕಾರ್ಯಕ್ರಮಗಳು. ಶ್ರೀ ಶಂಕರ

ಸಪ್ತಾಹದಲ್ಲಿ ಬೆಳಗಿನ 6.30ರಿಂದ 10 ಗಂಟೆವರೆಗೆ ಗುರುದೇವತಾ ಪೂಜೆ, ಸಾಮೂಹಿಕ ಗೀತಾ ಪಾರಾಯಣ, ಭಾಷ್ಯ ಪ್ರವಚನ, ಮಂಗಳಾರತಿ, ಅನಂತರ ಮಧ್ಯಾಹ್ನ 3.30ರಿಂದ ಗೀತಾಪಾರಾಯಣ, ಪುರಾಣ ಪ್ರವಚನ, ಸಾಯಂಕಾಲ 6.30ರ ವರೆಗೆ ಭಜನೆ, ಉಪನ್ಯಾಸಗಳು. ಈ ಏಳು ದಿನಗಳ ಅವಧಿಯಲ್ಲಿ ಗಮಕ ವಾಚನ, ದೇವರ ನಾಮಗಳು, ಅಧ್ಯಾತ್ಮಗೀತಾವಳಿಯ ಹಾಡುಗಳು, ಸಂಗೀತ ಕಛೇರಿ ಗಳೂ ಇರುತ್ತಿದ್ದವು. ಆರಾಧನೆಯ ಸಪ್ತಾಹ, ಶರನ್ನವರಾತ್ರಿಯಲ್ಲಿಯೂ ಇದೇ ರೀತಿಯಲ್ಲದೆ ವಿಶೇಷವಾಗಿ ದೇವೀ ಮಹಾತ್ಮ್ಯ ಪ್ರವಚನವೂ ಕಾರ್ಯಕ್ರಮಗಳ ಅಂಗವಾಗಿದ್ದುವು. ಗೀತಾ ಜಯಂತಿಯಲ್ಲಿ ಮೂರು ದಿನಗಳೂ ಪೂಜೆ, ಗೀತಾ ಪಾರಾಯಣ, ಭಾಷ್ಯ ಪ್ರವಚನ, ಸಾಯಂಕಾಲ ಸಾಮೂಹಿಕ ಗೀತಾ ಪಾರಾಯಣ, ಉಪನ್ಯಾಸಗಳೂ, ಶ್ರೀ ಸದ್ಗುರು ಬ್ರಹ್ಮಚೈತನ್ಯ ಆರಾಧನೆಯ ಅಂಗವಾಗಿ ಮೂರು ದಿನಗಳು, ಪೂಜೆ, ರಾಮನಾಮ ಭಜನೆ, ವಿಷ್ಣುಸಹಸ್ರನಾಮ ಪಾರಾಯಣ, ಭಾಗವತ ಪ್ರವಚನಗಳೂ ಈ ಎರಡೂ ವಿಶೇಷ ಕಾರ್ಯಕ್ರಮಗಳಲ್ಲಿ, 4ನೆಯ ದಿನ ಮಂಗಳಾ ಚರಣೆಯೂ ನಡೆಯುತ್ತಿತ್ತು.

1981 ರಿಂದ ಈಚೆಗೆ ಗೀತಾಜಯಂತಿಯೂ 7 ದಿನ ಆಚರಣೆಗೆ ಬಂತು. 1983ರಿಂದ ಬ್ರಹ್ಮಚೈತನ್ಯಾರಾಧನೆಯಲ್ಲದೆ ಮೊದಲ ಬಾರಿಗೆ ಸದ್ಗುರು ಜಯಂತಿಯ ಆಚರಣೆಯೂ ಬಳಕೆಗೆ ಬಂತು. 1984 ರಿಂದ ಶ್ರೀ ಜ್ಞಾನಾನಂದೇಂದ್ರರ ಆರಾಧನೆ - ಅನಂತರ ಈ ಮೂರನ್ನೂ ಸೇರಿಸಿ ಒಂದು ವಾರ ಕಾಲ ಶ್ರೀ ಸದ್ಗುರು ಜಯಂತಿ, ಶ್ರೀ ಬ್ರಹ್ಮಚೈತನ್ಯರ ಆರಾಧನೆ ಮತ್ತು ಶ್ರೀ ಜ್ಞಾನಾನಂದೇಂದ್ರರ ಆರಾಧನೆಗಳು ಸಪ್ತಾಹ ಪ್ರವಚನಗಳಲ್ಲಿ ಅಡಕವಾದವು. ಈಗ ಬೆಂಗಳೂರಿನಲ್ಲೇ ನೆಲೆಸಿರುವ ಶ್ರೀ ಟಿ.ಎಸ್. ರಾಜಗೋಪಾಲರೂ (19.11.06ರಿಂದ) ಗೀತಾಜಯಂತಿ ಸಪ್ತಾಹವನ್ನು ಅನಂತರ ಕೆಲವು ಉಪನ್ಯಾಸಗಳನ್ನು ಮಾಡಿದರು.

ಅನೇಕ ಉತ್ಸವಗಳಲ್ಲಿ ಎಲ್ಲ ಪ್ರವಚನಗಳನ್ನೂ ಶ್ರೀ ಸುಬ್ರಾಯಶರ್ಮರೇ ಮಾಡುತ್ತಿದ್ದರು. 2002ರ ಗೀತಾ ಜಯಂತಿಗಳನ್ನು ಇಲ್ಲಿ ಬೇರೆಯವರು ನಡೆಸಿದರು. ಪಂಡಿತರು ಗುಲ್ಬರ್ಗ, ತಾಳೀಕೋಟೆಗಳಲ್ಲಿ ಆಚರಿಸಿದರು. ಇತರ ಪ್ರದೇಶದವರಿಗೂ ವಾರಕಾಲ ಕ್ರಮವಾದ ವೇದಾಂತ ಪ್ರವಚನಗಳ ಸೌಲಭ್ಯ ದೊರಕಿಸಿ ಕೊಡಲು ಒಂದೆರಡು ಶಂಕರ ಜಯಂತಿ, ಗೀತಾ ಜಯಂತಿಗಳನ್ನು ಕಾರ್ಯಾಲಯದಲ್ಲಿ ತಮ್ಮ ಕರ್ತವ್ಯವನ್ನು ಇತರರಿಗೆ ಬಿಟ್ಟು, ಪಂಡಿತರು ಅಲ್ಲಿ ಸಪ್ತಾಹ ಮಾಡಲು ಹೋಗಿದ್ದರು.

ಮೊದಲ ಕೆಲವು ವರ್ಷಗಳಲ್ಲಿ, ಐದು ದಿನಗಳ ಶಂಕರ ಜಯಂತೀ ಬೆಳಗಿನ ಕಾರ್ಯಕ್ರಮಗಳಲ್ಲಿ ಮೊದಲು ಏಕಾದಶ ರುದ್ರಾಭಿಷೇಕ, ಆಮೇಲೆ ಮಡಿಯಲ್ಲಿ

ಪ್ರಸ್ಥಾನತ್ರಯ ಭಾಷ್ಯ ಪ್ರವಚನವಾಗುತ್ತಿತ್ತು. ಶ್ರೀಶ್ರೀಗಳವರಿದ್ದಾಗ ಎಲ್ಲ ಶಂಕರ ಸಪ್ತಾಹಗಳಲ್ಲೂ ಪ್ರತಿದಿನ ಪ್ರವಚನ, ಉಪನ್ಯಾಸಗಳಾದ ಮೇಲೆ, ಶ್ರೀಶ್ರೀಗಳವರಿಂದ ಉಪಸಂಹಾರ ಭಾಷಣವಿರುತ್ತಿತ್ತು. ಇಡೀ ಉಪನ್ಯಾಸದ ಸಾರಾಂಶವು ವಿಮರ್ಶಾ ಪೂರ್ವಕವಾಗಿ ಚಿಕ್ಕದಾದ ರೀತಿಯಲ್ಲಿ, ಚೊಕ್ಕವಾಗಿ ಬರುತ್ತಿತ್ತು. ಅನೇಕ ವೇಳೆ ಅವರ ಪ್ರವಚನ /ಉಪನ್ಯಾಸವನ್ನು ಕೇಳಿದವರು ವಿಷಯ ಗ್ರಹಣೆಗೆ ಸರಿಯಾಗಿ ಬರುವ, ಅನೇಕ ಭಾಗಗಳನ್ನು ಸ್ಪಷ್ಟವಾಗಿಸುವ ಈ ಉಪಸಂಹಾರಗಳನ್ನು ಆಸಕ್ತಿಯಿಂದ ಕೇಳುತ್ತಿದ್ದರು. ಶ್ರೀಶ್ರೀಗಳವರ ನಿರ್ಯಾಣವಾದ ಮೇಲೆ ಶ್ರೀ ಸುಬ್ರಾಯ ಶರ್ಮರು ಕೆಲವು ಬಾರಿ ಸಪ್ತಾಹದ ಕೊನೆಯಲ್ಲಿ ಎಲ್ಲ ಉಪನ್ಯಾಸಗಳೂ ಸೇರಿದಂತೆ ಒಂದು ಉಪಸಂಹಾರವನ್ನು ಒಂದೇ ಗಂಟೆಯಲ್ಲಿ ನಡೆಸಿಕೊಟ್ಟರೂ, ಅನೇಕ ವರ್ಷಗಳಿಂದ ಶ್ರೀಶ್ರೀಗಳವರ ಪ್ರವಚನ, ಉಪಸಂಹಾರಗಳನ್ನು ಕೇಳಿದವರಿಗೆ, ಅದೇ ನೆನಪು ಇರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಕೆಲವು ವರ್ಷಗಳಲ್ಲಿ ರುದ್ರಾಭಿಷೇಕದನಂತರ ಉಪನ್ಯಾಸ, ಅನಂತರ ವಿಶೇಷಪೂಜೆ, ಅಷ್ಟಾವಧಾನ ಸೇವೆ, ಮಂಗಳಾರತಿ, ಸಂತರ್ಪಣೆಗಳು ಶಂಕರ ಜಯಂತಿ ದಿನ ನಡೆದುವು.

ಆರಾಧನಾ ಮಹೋತ್ಸವದಲ್ಲಿ ಕಾರ್ಯಕ್ರಮಗಳು, ಬೆಳಿಗ್ಗೆ 6.30 ರಿಂದ ನಡುವೆ ಭೋಜನ ವಿಶ್ರಾಂತಿಯ ಸಮಯಗಳನ್ನು ಬಿಟ್ಟು ರಾತ್ರಿ 8.30ರ ವರೆಗೂ ಏಳು ದಿನಗಳೂ ಒಂದೇ ಸಮನೆ ನಡೆದುವು. ಏಕಾದಶೀ ರಾತ್ರಿ ಅಖಂಡ ಭಜನೆಯೂ, ಮಾರನೆಯ ದಿನ ವೈದಿಕಾರಾಧನೆ ಕಾರ್ಯಕ್ರಮಗಳು, ಸಂತರ್ಪಣೆ, ಆ ದಿನ ಬೆಳಿಗ್ಗೆ ಶ್ರೀಶ್ರೀಗಳ ಗುಣಗಾನವೂ ಇರುತ್ತಿದ್ದವು. 1980ರ ಡಿಸೆಂಬರ್‌ದ ಗೀತಾಜಯಂತಿ, ಶ್ರೀ ಬ್ರಹ್ಮಚೈತನ್ಯಾರಾಧನೆ ಉತ್ಸವಗಳಲ್ಲಿ ಶ್ರೀ ಜೆ. ಹನುಮಂತರಾಯರು ಪ್ರವಚನಗಳನ್ನು ನೀಡಿದರು. ಅವರು ಬೇರೆಯಂತೆಯೂ ಮಹಾಭಾರತ, ಗುರುಚರಿತ್ರೆ ಪ್ರವಚನಗಳನ್ನು ನಡೆಯಿಸಿದರು. ಸಾಮಾನ್ಯವಾಗಿ, ಅನೇಕ ಸಪ್ತಾಹ ಕಾರ್ಯಕ್ರಮಗಳಲ್ಲಿ ಭಜನೆಯೂ ಒಂದು ಅಂಗವಾಗಿರುತ್ತಿತ್ತು.

1999, 2000ದಲ್ಲಿ ಎರಡೆರಡು ತಿಂಗಳ ಕಾಲ 'ಚಾತುರ್ಮಾಸ್ಯ ಪ್ರವಚನ' ಗಳು ದಿನಕ್ಕೆರಡು ನಡೆದವು. ಅನಂತರ 'ಆಧ್ಯಾತ್ಮಿಕ ಸಾಧನ ಸತ್ಸಂಗ ಶಿಬಿರ' ಕಾರ್ಯ ಕ್ರಮಗಳನ್ನು ವಿಶೇಷವಾಗಿ, 23.7.2000 ರಿಂದ ಭಾನುವಾರಗಳಲ್ಲಿ ಮುಂದುವರೆದು 2001ರಲ್ಲಿ ಮೊದಲ ಐದು ತಿಂಗಳೂ, ನೆರವೇರಿದುವು. ಈ ಕಾರ್ಯಕ್ರಮಗಳು ಯಶಸ್ವಿಯಾಗಿ ಶ್ರೋತೃಗಳಿಗೆ ಮೆಚ್ಚುಗೆಯಾಯಿತು. ಸತ್ಸಂಗದಲ್ಲಿ ಉಪನ್ಯಾಸ, ಚರ್ಚೆ, ಪ್ರಶ್ನೋತ್ತರಗಳೊಡನೆ, 2 ಅಥವಾ 4 ಪುಟ ವೇದಾಂತ ವಿಚಾರದ ಅಚ್ಚಾದ ಪತ್ರಿಕೆ, ಇವುಗಳಿಂದ ವಿಚಾರ ತಿಳಿವಳಿಕೆಯಾಯಿತು.

1998ರ ಪಂಡಿತರ ವರ್ಧಂತಿ ಸಂದರ್ಭದಲ್ಲಿ, ವೇದಾಂತ ಸಪ್ತಾಹವೊಂದು ನಡೆಯಿತು. ಉತ್ತಮವಾದ ವಿದ್ವಾಂಸರಿಂದ ದಿನಕ್ಕೆರಡು ಪ್ರವಚನಗಳಾದುವು. ಮತ್ತು ವಿಶ್ವೇಶ್ವರಪುರದ ಅಧ್ಯಾತ್ಮ ಮಂದಿರದಲ್ಲಿ ಬೆಳಗ್ಗೆ 7.30ರಿಂದ ಚಾತುರ್ಮಾಸ್ಯದ ಹಿರಿಮೆಯನ್ನು ವೇದಾಂತ ಸಂದೇಶ ಪ್ರವಚನಗಳಂತೆ, ಹಲವು ಸತ್ಸಂಗಗಳೂ ಆದುವು.

2005 ಜನವರಿಯಲ್ಲಿ ಅಧ್ಯಾತ್ಮ ಪ್ರಕಾಶ ಕಾರ್ಯಾಲಯ (ಪ್ರಧಾನ, ಶಾಖೆಗಳೆರಡೂ), ಶ್ರೀ ಶಾರದಾ ಪ್ರತಿಷ್ಠಾನ, ಅಧ್ಯಾತ್ಮ ಪ್ರಚಾರ ಸಮಿತಿಯ ಆಶ್ರಯದಲ್ಲಿ ಹನುಮಂತನಗರದ ಶ್ರೀ ಮರಡಿ ಸುಬ್ಬಯ್ಯ ಛತ್ರದಲ್ಲಿ ವೇದಾಂತ ಶಿಬಿರವನ್ನು ಶ್ರೀ ಮತ್ತೂರು ಕೇಶವ ಅವಧಾನಿಗಳು ನಡೆಸಿಕೊಟ್ಟರು. ಇದೇ ಸ್ಥಳದಲ್ಲಿ ಶ್ರೀ ಶಂಕರ ಜಯಂತಿ ಮಂಡಳಿ ಸಹಕಾರದೊಡನೆ, ಜೂನ್‌ನಲ್ಲಿ ರಾಮಾಯಣ ತತ್ತ್ವವನ್ನು ಒಂದು ದಿನ ಡಾ|| ಎಸ್. ರಂಗನಾಥ್‌ರೂ, ಇನ್ನೆರಡು ದಿನ ಶ್ರೀ ಪಾವಗಡ ಪ್ರಕಾಶರಾವ್ ಅವರು ಕುವೆಂಪುರವರ ರಾಮಾಯಣ ದರ್ಶನಂ ಬಗ್ಗೆಯೂ ಉಪನ್ಯಾಸಗಳನ್ನು ಮಾಡಿದರು. ಜನವರಿ 2006ರಲ್ಲಿ ಶ್ರೀ ಗಣೇಶಭಟ್ ಹೋಬಳಿಯವರಿಂದ 'ಭಾಗವತ ಸಪ್ತಾಹ'ವಾಯಿತು. ಜನವರಿ ಕೊನೆಯಲ್ಲಿ ಬೆಳಿಗ್ಗೆ ತೈತ್ತಿರೀಯ ಭಾಷ್ಯದಲ್ಲಿ ಶ್ರೀ ಶಿವರಾಮ ಅಗ್ನಿಹೋತ್ರಿಗಳೂ, ಬೆಳಿಗ್ಗೆ, ಮಧ್ಯಾಹ್ನಗಳಲ್ಲಿ ಎರಡು ಬಾರಿ ಭಗವದ್ಗೀತಾ ಭಾಷ್ಯವನ್ನು (6ನೆ ಅಧ್ಯಾಯ) ಪೂಜ್ಯ ಶ್ರೀ ವಿರಜಾನಂದ ಸ್ವಾಮಿಗಳೂ, ಸಾಯಂಕಾಲ ಶ್ರೀ ರವಿಕುಮಾರ್‌ದಾಸ್‌ರವರು 'ರಾಮಾಯಣ ಚಿಂತನ' ಉಪನ್ಯಾಸಗಳನ್ನು ಒಳಗೊಂಡ 'ವೇದಾಂತ ಶಿಬಿರ'ವೂ ಆಯಿತು. ಪ್ರತಿ ಉಪನ್ಯಾಸಕ್ಕೂ, ಈ ನಾಲ್ಕೂ ಸಂದರ್ಭಗಳಲ್ಲಿ 150-200 ಶ್ರೋತೃಗಳು ಆಗಮಿಸಿದ್ದು, ಕಾರ್ಯಕ್ರಮಗಳು ಯಶಸ್ವಿಯಾದವು. ಛತ್ರದ ಮಾಲೀಕರು ಶ್ರೀ ಮರಡಿ ರಂಗಯ್ಯನವರು ಛತ್ರವನ್ನು ಉಚಿತವಾಗಿ ಬಿಟ್ಟುಕೊಟ್ಟು, ಬೇರೆಯಂತೆಯೂ ಸಹಕಾರ ನೀಡಿ ಸಹಾಯ ಮಾಡಿದರು.

ಇಷ್ಟು ಹೆಚ್ಚಿನ ಶ್ರೋತೃಗಳು ಈಚೆಗೆ ಕಾರ್ಯಾಲಯಕ್ಕೆ ಬರದಿರುವದು ಮತ್ತು ಶ್ರೀಶ್ರೀಗಳವರ ಅಭಿಲಾಷೆಯಂತೆ ಸಾಧ್ಯವಾದಷ್ಟು ಹೆಚ್ಚು ಕಡೆಗಳಲ್ಲಿ ಅಧ್ಯಾತ್ಮ ಪ್ರಸಾರ ಕಾರ್ಯ ನಡೆಯಬೇಕೆನ್ನುವದು, ಎಲ್ಲಕ್ಕಿಂತ ಮುಖ್ಯವಾಗಿ ಶಿಬಿರಾರ್ಥಿಗಳು ಉಳಿಯುವುದಕ್ಕೆ ಸಾಕಷ್ಟು ಸ್ಥಳಾವಕಾಶವಿಲ್ಲದ ಕಾರಣ ಶಿಬಿರಗಳನ್ನು ಕಾರ್ಯಾಲಯದಲ್ಲೇ ನಡೆಸಲಾಗದುದು ಒಂದು ದೊಡ್ಡ ಕೊರತೆಯೇ.

ಜೂನ್ 2002ರಲ್ಲಿ, ಸಂದರ್ಭವಶಾತ್ ಮಾತುಕತೆಯಲ್ಲಿ ಶ್ರೀ ಕೆ.ಎಲ್. ನಾಗರಾಜರಾಯರು ತಮ್ಮ ತಂದೆಯವರ ಹೆಸರಿನ ಟ್ರಸ್ಟ್ ಮೂಲಕ ವೇದಾಂತ ಸಪ್ತಾಹವನ್ನು ಆಷಾಢದಲ್ಲಿಯೂ, 3 ದಿನಗಳ ಉಪನ್ಯಾಸ ಮಾಲಿಕೆಯನ್ನು ಕಾರ್ತಿಕ

ಮಾಸದ ಕೊನೆಯಲ್ಲಿಯೂ ಏರ್ಪಡಿಸುವಂತೆ ಕಾರ್ಯಾಲಯಕ್ಕೆ ಸಲಹೆ ಮಾಡಿ ಆಹ್ವಾನ ನೀಡಿದರು. ಅದರಂತೆ, ಮೊದಲ ಸಪ್ತಾಹ 2002ರ ಜುಲೈನಲ್ಲಿ ಶ್ರೀ ಲಕ್ಷ್ಮೀ ನರಸಿಂಹ ಮೂರ್ತಿಗಳಿಂದ, 2003ರ ಸಪ್ತಾಹವನ್ನು ಶ್ರೀ ಶಿವರಾಮ ಅಗ್ನಿಹೋತ್ರಿಗಳು, 2004ರಲ್ಲಿ ಶ್ರೀ ವಿರಜಾನಂದ ಸ್ವಾಮಿಗಳೂ 2005ರಲ್ಲಿ ಶ್ರೀ ಕೇಶವ ಅವಧಾನಿಗಳು, ಐದು ದಿನ, ಕೊನೆಯ ಎರಡು ದಿನ ಶ್ರೀ ಹೆಚ್. ಆರ್. ಚಂದ್ರಶೇಖರ್‌ರವರೂ, 2006ರಲ್ಲಿ ಮೊದಲ ಐದು ದಿನ ಡಾ|| ಎಸ್. ರಂಗನಾಥ್‌ರೂ ಕೊನೆಯ ಎರಡು ದಿನ ಶ್ರೀ ಶೇಷಾಚಲ ಶರ್ಮರೂ ಯಶಸ್ವಿಯಾಗಿ ನೆರವೇರಿಸಿದರು. 2005ರಲ್ಲಿ ಶ್ರೀ ನಾಗರಾಜರಾಯರು ಗುರುಪೂರ್ಣಿಮಾ ಪ್ರಯುಕ್ತ ಯಜುರ್ವೇದ ವಿದ್ವಾಂಸರಾದ ಶ್ರೀ ಅನಂತಕೃಷ್ಣ ಘನಪಾಠಿಗಳನ್ನೂ , 2006ರಲ್ಲಿ ಅಗಡಿಯ ಆನಂದವನದ ಶ್ರೀ ಶೇಷಾಚಲ ಸದ್ಗುರುವಿನ ಆಶ್ರಮದ ಮುಖ್ಯರಾದ ಶ್ರೀ ಚಿದಂಬರ ಮೂರ್ತಿ ಚಕ್ರವರ್ತಿಗಳನ್ನೂ, ಶ್ರೀ ಶೇಷಾಚಲಶರ್ಮರನ್ನೂ ಸನ್ಮಾನ ಮಾಡಿದರು. ಕಾರ್ತಿಕ ಮಾಸದ ಉಪನ್ಯಾಸ ಮಾಲಿಕೆಯಲ್ಲಿ ಮತ್ತೂರಿನ ಶ್ರೀ ಅರುಣ ಅವಧಾನಿಗಳು 'ಮೋಹ ಮುದ್ಗರ'ವನ್ನು 2003ರಲ್ಲಿ, ಶ್ರೀ ಚಂದ್ರಮೌಳಿ ಅವಧಾನಿಗಳು ಭಗವದ್ಗೀತೆಯ 13ನೇ ಅಧ್ಯಾಯವನ್ನು 2004ರಲ್ಲಿ, ಶ್ರೀ ಶೇಷಾಚಲಶರ್ಮರು ಎರಡು ದಿನ, ಶ್ರೀ ಎಸ್. ರಂಗನಾಥ್ ಒಂದು ದಿನ 2005ರಲ್ಲಿ, 2006ರ ನವೆಂಬರ್‌ನಲ್ಲಿ ಶ್ರೀ ಆರ್. ಗಣೇಶ್‌ರವರು ಈ ಕಾರ್ಯವನ್ನು ನಡೆಸಿಕೊಟ್ಟರು.

ಶ್ರೀ ನಾಗರಾಜರಾಯರು ಪುಸ್ತಕ ಪ್ರಕಟಣೆಗೂ ಧನ ಸಹಾಯವನ್ನು ಪ್ರತಿ ವರ್ಷವೂ ಮಾಡುತ್ತಿದ್ದು, ಅವರ ಅಪೇಕ್ಷೆಯಂತೆ ಕಾರ್ತಿಕದ ಅಂತ್ಯದಲ್ಲಿ 2003ರಲ್ಲಿ 'ವೇದಾಂತ ಡಿಂಡಿಮ'ವನ್ನು ಶ್ರೀ ಶೇಷಾಚಲ ಶರ್ಮರು, 2004ರಲ್ಲಿ ಶ್ರೀ ಸ್ವಾಮಿ ವಿವೇಕಾನಂದರ ಭಕ್ತಿಯೋಗ (ಅನುವಾದ ಶ್ರೀಶ್ರೀಗಳು), 2005ರಲ್ಲಿ 'ವಿವೇಕ ಚೂಡಾಮಣಿ'ಯನ್ನು ಬೆಂಗಳೂರು, ಕೃಷ್ಣರಾಜಪುರದ ಶ್ರೀ ರಾಮಕೃಷ್ಣ ವಿವೇಕಾ ನಂದ ಸಾಧನಕೇಂದ್ರದ ಸಂಸ್ಥಾಪಕ - ಮುಖ್ಯಸ್ಥರಾದ ಶ್ರೀ ಸ್ವಾಮಿ ಚಂದ್ರೇಶಾನಂದಜಿ ಯವರು 19.11.2006ರಲ್ಲಿ ವಿವೇಕಾನಂದ ಸ್ವಾಮಿಗಳವರ ಜ್ಞಾನಯೋಗವನ್ನು, ಶ್ರೀ ರಾಮಕೃಷ್ಣಮಠದ ಶ್ರೀ ಸ್ವಾಮಿ ತ್ಯಾಗೀಶಾನಂದಜಿಯವರು ಬಿಡುಗಡೆ ಮಾಡಿದರು. ಎಲ್ಲ ಕಾರ್ಯಕ್ರಮಗಳೂ - ಚಾಮರಾಜಪೇಟೆ ಮೂರನೇ ರಸ್ತೆಯ ಆಶ್ರಮದಲ್ಲಿ ಅಲ್ಲಿನ ಅಧಿಷ್ಠಾತೃ ದೇವತೆ ಶ್ರೀ ಯಾಜ್ಞವಲ್ಕ್ಯಮಹರ್ಷಿಗಳ ಸಮ್ಮುಖ ದಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯ (ಪ್ರಧಾನ ಮತ್ತು ಶಾಖೆ), ಕೋಡಿಹಳ್ಳಿ ಶ್ರೀ ಲಕ್ಷ್ಮೀನಾರಾಯಣರಾವ್ ಟ್ರಸ್ಟ್ (ಪರವಾಗಿ ಶ್ರೀ ಕೆ.ಎಲ್. ನಾಗರಾಜರಾವ್) ಮತ್ತು ಶುಕ್ಲಯಜುಶ್ಶಾಖಾ ಟ್ರಸ್ಟ್‌ಗಳ ಸಂಯುಕ್ತ ಆಶ್ರಯದಲ್ಲಿ ಆಗುತ್ತಿವೆ.

ಆಗಸ್ಟ್ 20, 2005ರಂದು ಕಾರ್ಯಾಲಯದಲ್ಲಿ ಪ್ರತಿ ಬೆಳಿಗ್ಗೆಯೂ ಮೂರೂವರೆ ವರ್ಷಗಳಿಂದಲೂ ನಡೆಯುತ್ತಿದ್ದ 'ಭಗವದ್ಗೀತಾಭಾಷ್ಯ' ಪ್ರವಚನಗಳ ಮಂಗಳಾಚರಣೆಯನ್ನು ಸಮಿತಿಯವರು ಆಚರಿಸಿದರು.

ಅಧ್ಯಾತ್ಮ ಪ್ರಸಾರ : ಇಲ್ಲಿನ ಪಂಡಿತರು ಉತ್ತಮ ಉಪನ್ಯಾಸಕರೆಂದು ಹೆಸರು ಗಳಿಸಿದರು. ಮೊದಲ ವರ್ಷಗಳಲ್ಲಿ ಎರಡು ತಿಂಗಳ ಮೊದಲೇ ಅವರನ್ನು ಆಹ್ವಾನಿಸಿ ಉಪನ್ಯಾಸಗಳನ್ನೇರ್ಪಡಿಸಬಹುದೆಂಬ ಪ್ರಕಟಣೆಯೂ, 'ಶಂಕರ ಭಾಸ್ಕರ'ದಲ್ಲಿ ಬರ ತೊಡಗಿದ್ದ ಕಾರಣ ಬೆಂಗಳೂರಿನ ಎಲ್ಲ ಕಡೆಗಳಿಂದ, ಹೊರ ಊರುಗಳಲ್ಲಿಂದಲೂ ಆಹ್ವಾನಗಳು ಬರತೊಡಗಿದುವು. ಒಮ್ಮೆಯಂತೂ ಒಂದೇ ದಿನ 8 ಕಡೆ ಪ್ರವಚನಗಳನ್ನು ಮಾಡಿದ ದಾಖಲೆಯೂ ಇದರಲ್ಲಿ ಸೇರಿತು. ಇದರ ಜೊತೆಗೆ, ಶ್ರೀ ಶರ್ಮರು ಸನ್ಮಾನವಾಗಿ ವಿಪುಲವಾಗಿ (30ನ್ನೂ ಮೀರದಂತೆ) ಬಿರುದುಗಳನ್ನು ತಂದರು. ಇವೆಲ್ಲ ಕೇವಲ ಕಾಗದದ ಹೊಳಕುಗಳು, ಸುದ್ದಿಯ ತುಣುಕುಗಳು ಎಂಬಂತೆ ಕಾರ್ಯಾಲಯಕ್ಕೆ ಪರಿಚಯವಾಯಿತು. ಬೆಂಗಳೂರಿನಲ್ಲಿ ವಾರದ ಏಳು ದಿನಗಳೂ ಅಲ್ಲಲ್ಲಿ ಉಪನ್ಯಾಸದ ಕಾರ್ಯಕ್ರಮಗಳು ನಿಗದಿಯಾದುವು. ಇವು ನಿಯತವಾದ ಉಪನ್ಯಾಸಗಳಲ್ಲದೆ, ವಿಶೇಷವೆಂದು ಅನೇಕ ಕಡೆ ಶಂಕರ ಜಯಂತಿ ಯಲ್ಲಿ ಇತರ ವಿಶೇಷ ಸಂದರ್ಭಗಳಲ್ಲಿ ಆಪ್ತೇಷ್ಟರ ಮನೆಗಳ ವಿಶೇಷ ಸಮಾರಂಭಗಳು, ಕೆಲವು ಸಂಘ ಸಂಸ್ಥೆಗಳ ವಿಶೇಷ ಉತ್ಸವಗಳು - ಹೀಗೆ ಎಡೆಬಿಡದ ಕಾರ್ಯಕ್ರಮ ಗಳು ರೂಪಿತವಾಗಿ, ನಡೆಯುತ್ತಿದ್ದುವು. ಶೃಂಗೇರಿ ಶ್ರೀಮಠದಿಂದಲೂ ಎರಡು ಮೂರು ವರ್ಷ ಆಹ್ವಾನಗಳಿದ್ದವು.

ಕಾರ್ಯಾಲಯದ ಟ್ರಸ್ಟಿ, ಶಾಖಾ ಕಾರ್ಯಾಲಯದ ಸದಸ್ಯರೂ ಆದ ಹಿರಿಯರಾದ ಶ್ರೀ ಕೆ.ಎಸ್. ರಾಜಾರಾಯರ ಹಿರಿಯಮಗ, ಶ್ರೀ ನಾಗಭೂಷಣ ರಾಯರು, 1995ರಲ್ಲಿ ದಕ್ಷಿಣ ಫ್ಲಾರಿಡಾದ ಶಿವವಿಷ್ಣು ದೇವಸ್ಥಾನದಲ್ಲಿ ಒಬ್ಬ ಟ್ರಸ್ಟಿ. ಅವರ ಪ್ರಭಾವದಿಂದ ಶ್ರೀ ಶರ್ಮರು ಜೊತೆಗೆ ಸ್ನೇಹಿತರಾದ ಶ್ರೀ ಸಿ.ಎ. ಸಂಜೀವ ಮೂರ್ತಿಗಳನ್ನೂ ಕರೆದುಕೊಂಡು ಹೋಗಲು, ಅವರ ಖರ್ಚನ್ನೂ ವಹಿಸಲು ದೇವಸ್ಥಾನ ಒಪ್ಪಿದ್ದು ಈ ಪ್ರಭಾವದಿಂದಲೇ. ಹಾಗೂ, ಅಮೆರಿಕದಲ್ಲಿ ಕೆಲವು ಕಡೆ ಹೋಗಿ ಬರುವ ಏರ್ಪಾಡನ್ನೂ ನಾಗಭೂಷಣರಾಯರೂ ಅವರ ತಮ್ಮ ವಿಶ್ವನಾಥ ರಾಯರೂ ಮಾಡಿಕೊಟ್ಟು, ಉಪಕಾರವೆಸಗಿದರು. ಶ್ರೀ ಶರ್ಮರು 1.9.95 ರಿಂದ 7.10.95ರ ವರೆಗೂ ಅಮೆರಿಕ ಪ್ರವಾಸ ಮಾಡಿದುದು ಈ ಹಿನ್ನೆಲೆಯಲ್ಲಿ. ಮೊದಲು ಶ್ರೀ ಆತ್ಮಾನಂದೇಂದ್ರ ಸ್ವಾಮಿಗಳು, ಈಗ ಶ್ರೀ ಶರ್ಮರ ಪ್ರವಾಸಪ್ರವಚನಗಳಿಂದ ಕಾರ್ಯಾಲಯದ ಅಧ್ಯಾತ್ಮ ಪ್ರಸಾರ ಕಾರ್ಯವಾಯಿತು. ಕಾರ್ಯಾಲಯದ

ಸಮಿತಿಯ ಅಧ್ಯಕ್ಷರಾಗಿದ್ದ(2001-03) ಶ್ರೀ ಡಿ. ಗಣಪತಿ ಶಾಸ್ತ್ರಿಗಳು, 2006ರ ಮೇ-ಅಕ್ಟೋಬರ್ ತಿಂಗಳ ಅಮೆರಿಕದ ವಾಸ್ತವ್ಯದಲ್ಲಿ ತಾವು ಭಾಗವಹಿಸಿದ್ದ ಎಂಟು-ಹತ್ತು ಭಾರತೀಯರ ಒಕ್ಕೂಟಗಳಲ್ಲಿ ಕಾರ್ಯಾಲಯದ ಪರಿಚಯ, ಶಂಕರ ಸಿದ್ಧಾಂತಕ್ಕೆ ಶ್ರೀಶ್ರೀಗಳವರ ಅಮೋಘಕೊಡುಗೆಯನ್ನು ಪ್ರಸ್ತಾಪಿಸಿ, ಕಾರ್ಯಾಲಯದ ಸುಮಾರು 50 ಇಂಗ್ಲಿಷ್ ಪುಸ್ತಕಗಳನ್ನು ವಿತರಿಸಿ, ಕಾರ್ಯಾಲಯದ ಪ್ರಚಾರ ಮಾಡಿದರು. ಪರಿಣಾಮವಾಗಿ, ಕೆಲವರು ಪುಸ್ತಕಗಳ ವಿಷಯದಲ್ಲಿ ತೀವ್ರ ಆಸಕ್ತಿಯನ್ನು, ಭಾರತಕ್ಕೆ ವಾರ್ಷಿಕ ರಜಕ್ಕೆ ಬಂದಾಗ ಪುಸ್ತಕಗಳನ್ನು ಕೊಳ್ಳುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಅಲ್ಲದೆ ಕಾರ್ಯಾಲಯದ ವಿದ್ಯಾರ್ಥಿನಿಲಯಕ್ಕಾಗಿ ಕಾಣಿಕೆ ಬಂದಿತ್ತು. A.J. Alston's ರ ಇಂಗ್ಲಿಷ್ ಭಾಷಾಂತರದ 'ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞ' ಬಗ್ಗೆ ಲಂಡನ್ನಿನಲ್ಲಿ ಆಲ್‌ಸ್ಟನ್, ಅವರ ಅಧಿಕೃತ ಪುಸ್ತಕ ವ್ಯಾಪಾರಿಯನ್ನೂ ಸಂಪರ್ಕಿಸಿದ್ದರು, ನಿರಾಶೆಯೆಂದರೆ ಅವರುಗಳಿಂದ ಉತ್ತರ ಬರಲಿಲ್ಲ.

**ಅತೀವ ಸಂತಾಪ :** ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರು 10.9.79 ಸೋಮವಾರ ಮಧ್ಯಾಹ್ನ 11 ಗಂಟೆಗೆ ಸ್ವರ್ಗಸ್ಥರಾದ ವಿಷಯವು ಕಾರ್ಯಾಲಯದ ಭಕ್ತವೃಂದಕ್ಕೆ ಅಪಾರ ದುಃಖವನ್ನುಂಟುಮಾಡಿತು. 21.9.79ರಂದು ಕಾರ್ಯಾಲಯದಲ್ಲಿ ವೈಕುಂಠ ಸಮಾರಾಧನೆಯಾಯಿತು. ಶ್ರೀಗಳಿಂದ, ಭಕ್ತರವರೆಗೂ ತಾಯಿಯಂತೆ ನಿಂತ ಈ ಮಾತಾಜಿ ಇಲ್ಲವಾದುದು ದೊಡ್ಡ ಕೊರತೆಯಾಯಿತು.

28.5.89 ಭಾನುವಾರ ಬೆಳಿಗ್ಗೆ 5ಕ್ಕೆ ಈ ಕಾರ್ಯಾಲಯದ ಸಮಿತಿ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಎ. ಶ್ರೀನಿವಾಸ ಮೂರ್ತಿಗಳು, ಕಾರ್ಯಾಲಯದ ಮಹಡಿಯ ಮೇಲೆ ಅವರು ವಾಸಿಸುತ್ತಿದ್ದ ಕೊಠಡಿಯಲ್ಲಿಯೇ ಸ್ವರ್ಗಸ್ಥರಾದರು. ಶ್ರೀಯುತರು ಬೆಂಗಳೂರು ಕಾರ್ಯಾಲಯ ನೆಲೆಯಾಗಲು, ಪ್ರವೃದ್ಧಮಾನಕ್ಕೆ ಬರಲು ಸಲ್ಲಿಸಿದ ಸೇವೆ ಹಿರಿದಾದುದು. ಪರಮ ಸಾತ್ವಿಕರೂ, ಮೃದು ಮನಸ್ಸಿನ ಒಬ್ಬ ಅನುಭವಿ, ಮಾಗದರ್ಶಕ ಹಿರಿಯರು ಇಲ್ಲವಾದುದು ಶಾಖೆಗೆ ವಿಶೇಷ ನಷ್ಟ. ಇಡೀ ಕಾರ್ಯಾಲಯ, ಭಕ್ತರಿಗೆ ಆದ ನೋವು ಬಹಳ. ಆ ಸಂಜೆಯೇ ಕಾರ್ಯಾಲಯದಲ್ಲಿ ಸಂತಾಪಸೂಚಕ ಸಭೆ ಸೇರಿತ್ತು. ಶ್ರೀ ಮೂರ್ತಿಗಳ ಗುಣಗಾನವನ್ನು ಮಾಡಿದರು. 10.6.89ರಂದು ಬೆಳಿಗ್ಗೆ ಪುಣ್ಯಾಹ, ಸಂಪ್ರೋಕ್ಷಣ, ಧನಿಷ್ಠಾ ಪಂಚಕ ಮರಣ ನಿಮಿತ್ತ ತಿಲಾ ಹೋಮ, ಮಹಾ ಮೃತ್ಯುಂಜಯ ಹೋಮ, ವೇದಘೋಷಗಳಾದುವು. ಶ್ರೀ ಗುರುಪಾದುಕೆಗಳಿಗೆ ಪಂಚಾಮೃತ ಪುರಸ್ಸರ ರುದ್ರಾಭಿಷೇಕಾದಿ ವಿಶೇಷ ಪೂಜೆಗಳನ್ನು ಮಾಡಲಾಯಿತು. ಮಧ್ಯಾಹ್ನ ಅನ್ನ ಸಂತರ್ಪಣೆ, ದಾನದಕ್ಷಿಣೆಗಳನ್ನೂ ಕೊಡಲಾಯಿತು.

**ಕೆಲವು ಸುದ್ದಿಗಳು :** ಹೊಳೆನರಸೀಪುರದ ಹೇಮಾವತೀ ನದೀ ತೀರದಿಂದ ಇಲ್ಲಿಗೆ (1979) ಬಂದ ಶ್ರೀ ಪ್ರೇಮಾನಂದರು ಅವರ ಕೋರಿಕೆಯಂತೆ, ಕಾರ್ಯಾಲಯದಲ್ಲೇ ಇರಲು ಒಪ್ಪಿಗೆ ನೀಡಲಾಯಿತು, ಆದರೆ ಆ ಅವಧಿಯಲ್ಲಿ ಅವರಿಂದ ಕಾರ್ಯಾಲಯದ ನಡೆಗೆ ಯಾವ ರೀತಿಯ ಅಡ್ಡಿಯೂ ಆಗದಂತೆ, ಅವರು ಬೇರೆ ಯಾವ ಅಧಿಕಾರವನ್ನೂ ಕಾರ್ಯಾಲಯ, ಅಲ್ಲಿಯ ಕಾರ್ಯಕರ್ತರ ಮೇಲೆ ಚಲಾಯಿಸದೆ ಅವರ ಜಪಾನು ಷ್ಠಾನಗಳನ್ನು ನಡೆಸಿಕೊಂಡು ಇರುವದಾದರೆ ಮಾತ್ರ ಎಂಬ ನಿಬಂಧನೆಯೊಡನೆ. 1986ರಲ್ಲಿ ನೀರಿನ ಕೊರತೆಯಿದ್ದ ಕಾರಣ ಭಾವಿಯನ್ನು ತೋಡಿಸಿ, ಪಂಪ್‌ನ್ನು ಅಳವಡಿಸಲಾಯಿತು. ಪುಸ್ತಕಗಳಿಗೆ ಬೇಕಾದ ಎರಡು ಮರದ ಬೀರುಗಳನ್ನು 1992ರಲ್ಲಿ ಮಾಡಿಸಲಾಯಿತು. 1993ರ ಪ್ರಾರಂಭದಲ್ಲಿ ಆಗಂತುಕರಿಗೆ, ಪ್ರವಚನಗಳಿಗೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಮೂರು ಕಕ್ಕಸನ್ನೂ, ಎರಡು ಸ್ನಾನ ಗೃಹವನ್ನೂ ಕಟ್ಟಿಸಲಾಯಿತು. ಮನ್‌ಜೋಗ್ ಬಿಲ್ಡರ್ಸ್‌ಗೆ, ಬಿಡದಿಯಲ್ಲಿ ನಿವೇಶನಗಳಿಗಾಗಿ 16.2.94 ರಲ್ಲಿ 2000 ರೂ.ಗಳ ಚೆಕ್ ಕೊಟ್ಟದ್ದು ಮಾರ್ಚ್ 1997ರಲ್ಲಿ ಎರಡು ಸೈಟ್‌ಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಲಾಯಿತು. ಈ ಎರಡು ಸೈಟುಗಳನ್ನೂ ಕಾರ್ಯಾಲಯದ ಟ್ರಸ್ಟಿನ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಹೆಚ್. ವೆಂಕಟನರಸಪ್ಪನವರು ಕೊಂಡಿದ್ದು, ಅದನ್ನು ಕಾರ್ಯಾಲಯಕ್ಕೆ ದಾನ ಮಾಡಿದ್ದರು. ಇದಲ್ಲದೆ, ಅವರಿಗೆ ಬಂದ ಇನ್‌ಷೂರೆನ್ಸ್ ಹಣ ಸುಮಾರು ರೂ. 16,000/-ವನ್ನೂ ಸಹ ಕಾರ್ಯಾಲಯಕ್ಕೇ ದಾನ ಮಾಡಿದ್ದರು.

ಕಾರ್ಯಾಲಯಕ್ಕಾಗಿ 4.10.2000ರಂದು ಬ್ರೈಟ್ ಕಂಪ್ಯೂಟರ್ಸ್‌ನಿಂದ 29,000 ರೂ.ಗಳನ್ನು ಕೊಟ್ಟು ಕಂಪ್ಯೂಟರ್‌ನ್ನು, ಕಂಪ್ಯೂಟರ್ ಟೇಬಲ್ಲಿಗೆ 4,000 ರೂ.ನಂತೆ ಒಟ್ಟು 33,000 ರೂ. ಖರ್ಚಿನಲ್ಲಿ ಕೊಳ್ಳಲಾಯಿತು. ಇದಕ್ಕೆ ಬೇಕಾದ ಪ್ರಿಂಟರ್‌ಗೆ 9350.10 ರೂ., ಕಂಪ್ಯೂಟರ್ ಕಾಗದಕ್ಕೆ 1300 ರೂ. ಕೊಡಲಾಯಿತು. ಮುಂದೆ ಬೇಕಾದಾಗಲೆಲ್ಲ ಕಂಪ್ಯೂಟರ್ ಪೇಪರ್, ಕ್ರಾಫ್ಟ್ ಕವರ್ಸ್‌ಗಳನ್ನು ಕೊಳ್ಳುವದು, ರಿಬ್ಬನ್ ಬದಲಾಯಿಸುವದು ನಡೆದಿದೆ.

1998ರಲ್ಲಿ ಪಂಡಿತರ ಸುವರ್ಣ ವರ್ಧಂತಿ ಸಮಯದಲ್ಲಿ ಕೊಡುಗೆಯಾಗಿ ನೀಡಿದ್ದ ಚತುಶ್ಚಕ್ರಿಯನ್ನು ನಿಲ್ಲಿಸಲು ಪೋರ್ಟಿಕೋ ನಿರ್ಮಾಣಮಾಡಿದ ಖರ್ಚು ರೂ. 25,000ಗಳನ್ನು ಆಗಿನ ಸಮಿತಿಯವರು ಕಾರ್ಯಾಲಯದ ಲೆಕ್ಕಕ್ಕೆ ಹಾಕಿದರು.

**ಸಮಿತಿ :** ಟ್ರಸ್ಟ್ ಸಮಿತಿಯು ಶಾಖಾ ಕಾರ್ಯಾಲಯಕ್ಕೆ ಸಂಬಂಧಪಟ್ಟಂತೆ, ಶ್ರೀಶ್ರೀಗಳವರ ನಿರ್ದೇಶನದಂತೆ ಕೆಲವು ನಿಯಮಗಳನ್ನು ನಿರ್ಣಯ ಮಾಡಿತು.

9.8.70ರಲ್ಲಿ "ಪ್ರಧಾನ ಕಾರ್ಯಾಲಯದ ನಿಯಮ ನಿಬಂಧನೆಗಳಿಗೆ ವಿರೋಧ ವಿಲ್ಲದಂತೆ, ಶಾಖಾ ಕಾರ್ಯಾಲಯದ ಆಡಳಿತದ ಬಗ್ಗೆ ಅವಶ್ಯವಾದ ನಿಯಮ ನಿಬಂಧನೆಗಳನ್ನು ಏರ್ಪಡಿಸುವದು ; ಶಾಖೆಗಳು **Autonomous** ಎಂಬ ನಿರ್ದಿಷ್ಟವಾದ ಸಲಹೆಯನ್ನು ಮನಗಂಡು ಆಯಾಯ ಶಾಖೆಯವರ ಹಣಕಾಸು ಆಡಳಿತ ಆಯಾಯ ಶಾಖೆಗೆ ಸಂಬಂಧಪಟ್ಟ ಕಾರ್ಯ ಸಮಿತಿಯವರು ಒಳನಿಬಂಧನೆಗಳನ್ನು ಮಾಡಿಕೊಂಡು ಮುಂದುವರೆಯುವಂತೆಯೂ, ಪ್ರತಿ ಶಾಖಾ ಕಾರ್ಯ ಸಮಿತಿಯವರು ಅವರ ಮೀಟಿಂಗ್ ನಡವಳಿಕೆ ಟ್ರಸ್ಟಿಗಳಿಗೆ ಕಳುಹಿಸುವಂತೆಯೂ, ಹೊಳೆನರಸೀಪುರ ಮತ್ತು ಶಾಖೆಗಳು ಟ್ರಸ್ಟಿಗೆ ಒಳಪಡುವ ರೀತಿಯಲ್ಲಿ ನಿಯಮಗಳ ಕರಡು ತಯಾರುಮಾಡಲು ಶ್ರೀ ಎಂ. ಆರ್. ನಾರಾಯಣರಾಯರನ್ನು ಕೋರಿ ಕೊಂಡಿರುತ್ತೆ" ಎಂಬುದು ನಿರ್ಣಯ. ಇದರಂತೆ, 13.2.71ರಲ್ಲಿ ಶ್ರೀಶ್ರೀಗಳವರು "ಟ್ರಸ್ಟ್ ಕಮಿಟಿಯವರ ಅಧ್ಯಕ್ಷರ ಮೂಲಕ ಹೇಳಿ ಬರೆಯಿಸಿರುವದನ್ನು ಟ್ರಸ್ಟಿಗಳು ಸರ್ವಾನುಮತದಿಂದ ಅಂಗೀಕರಿಸಿ ರಿಕಾರ್ಡ್" ಮಾಡಿದರು. ಇವು ಸೂಕ್ತವಾದ, ಸ್ಥೂಲ ನಿಯಮಾವಳಿಗಳು. (ಒಟ್ಟು 8 ಸಂಖ್ಯೆ) ಹೀಗೆ, ಶಾಖಾ ಕಾರ್ಯಾಲಯದ ನಡೆಗೆ ಬೇಕಾದ ಮುನ್ಸಿದ್ಧತೆಗಳು ನಡೆದುವು. ಅನಂತರ 31.10.71ರಲ್ಲಿ ಶ್ರೀಶ್ರೀಗಳವರ ದಿವ್ಯಸಂನಿಧಾನದಲ್ಲಿ, ಅಧ್ಯಾತ್ಮಪ್ರಕಾಶ ಶಾಖಾ ಕಾರ್ಯಾಲಯದ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು. 28.11.71 ರಲ್ಲಿ ನಿಯಮ ನಿಬಂಧನೆಗಳನ್ನು ಸಿದ್ಧಪಡಿಸಿ, 19.12.71ರಲ್ಲಿ ಕೂಲಂಕಷವಾಗಿ ಚರ್ಚಿಸಿ, ಸಭೆಯು ಅನುಮೋದಿಸಿತು.

ಸಮಿತಿ : ಶ್ರೀಯುತರಾದ ಖೋಡೆ ಕೃಷ್ಣಸಾರವರು, ಅಧ್ಯಕ್ಷರು ; ರಾಜಾ ಚಂದ್ರಶೇಖರ ಶ್ರೇಷ್ಠಿಯವರು ಉಪಾಧ್ಯಕ್ಷರು ; ಕೆ. ಜಿ. ಸುಬ್ರಾಯ, ಕಾರ್ಯದರ್ಶಿಗಳು ; ಹೆಚ್. ಎನ್. ನಾರಾಯಣರಾಯರು ಕೋಶಾಧ್ಯಕ್ಷರು.

ಸದಸ್ಯರು : ಶ್ರೀಗಳಾದ ಹೆಚ್. ಅನಂತಮೂರ್ತಿಶಾಸ್ತ್ರಿಗಳು, ಡಿ.ಸಿ. ಅನಂತ ರಾಮಯ್ಯನವರು, ದೇವರಾಯ ಕುಲಕರ್ಣಿಯವರು, ಎಮ್.ಕೆ. ಕೃಷ್ಣಪ್ಪನವರು, ಎನ್. ನಿಖಿ ಲಾನಂದಗುಪ್ತರು, ಎನ್.ಕೆ. ಪುಟ್ಟೇಗೌಡರು, ಆರ್.ಎಂ. ರಾಧಾಕೃಷ್ಣ ಶೆಟ್ಟಿಯವರು, ಹೆಚ್.ವಿ. ರಾಮಪ್ಪನವರು, ಪಂಡಿತ್ ಬಿ.ಹೆಚ್. ರಾಮನಾಥ ಸ್ವಾಮಿಗಳವರು.

ಸಮಿತಿಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು : ಶ್ರೀ ಖೋಡೆ ಕೃಷ್ಣ ಸಾರವರು (1971ರಿಂದ 1985), ನೂಲೇನೂರು ಶ್ರೀ ಶ್ರೀನಿವಾಸ ಮೂರ್ತಿಗಳು (1985 ರಿಂದ 1989), ಬಿ.ಆರ್. ಸತ್ಯನಾರಾಯಣರವರು (1989 ರಿಂದ),

ಶ್ರೀ ಎಸ್. ರಾಮಚಂದ್ರ ಅಯ್ಯರ್‌ರವರು (2001), ಶ್ರೀ ಗಣಪತಿ ಶಾಸ್ತ್ರಿಗಳು (2001 ರಿಂದ 2003), ಶ್ರೀ ಹೆಚ್.ಎಸ್. ನರಸಿಂಹ ಮೂರ್ತಿಗಳು (2003 ರಿಂದ).

ಮೊದಲಿನಿಂದ ಈವರೆಗಿನ ಎಲ್ಲರೂ ಕಾರ್ಯಾಲಯದಲ್ಲಿ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ, ಪ್ರಧಾನವಾಗಿ ಮುಖ್ಯವಾದ ಅಧ್ಯಾತ್ಮಪ್ರಸಾರ ಸಾಧನವಾದ ಉಪನ್ಯಾಸ/ಪ್ರವಚನಗಳು, ಸಪ್ತಾಹಗಳು ಇದಕ್ಕೊಡಗೂಡಿದ ವಿವಿಧ ಕಾರ್ಯಕ್ರಮಗಳೂ, ಹಾಗೆಯೇ 'ಶಂಕರ ಭಾಸ್ಕರ' ಪತ್ರಿಕೆಯೂ ಅತಿಶಯವಾಗಿ ಬೆಳೆದು, ಉತ್ತಮ ರೀತಿಯಲ್ಲಿ ನಡೆಯಲು, ಅದರಿಂದ ಕಾರ್ಯಾಲಯದ ಯಶಸ್ಸು ಹಿಗ್ಗುವಂತೆ, ಹೆಚ್ಚಿನ ಸೇವೆಯನ್ನು ಮಾಡಲು ಸಹಕಾರದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಿದ, ಹಿಂದಿನ-ಈಗಿನ ಈ ಎಲ್ಲ ಅಧಿಕಾರಿ ವರ್ಗಕ್ಕೂ, ಸನ್ಮಾನ್ಯ ಸದಸ್ಯರು ಗಳಿಗೂ ಕಾರ್ಯಾಲಯವು ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆ. ಅದರಲ್ಲೂ ಪರ್ವಕಾಲದಲ್ಲಿ ಸದಸ್ಯರಾಗಿ ಕಾರ್ಯಾಲಯದ ನೆರವಿಗೆ ಬಂದ 2001ರ ಸಮಿತಿ ಸದಸ್ಯರಿಗೆ ವಿಶೇಷವಾದ ಅಭಿನಂದನೆಗಳು ಮತ್ತು ವಂದನೆಗಳು.

**ಶ್ರೀಶ್ರೀಗಳವರು ಹೇಳಿದ ವಿಷಯಗಳು :** ಶ್ರೀಶ್ರೀಗಳವರು 17.2.74ರ ಸಭೆಯಲ್ಲಿ ಕಾರ್ಯಾಲಯದ ಪುರೋಭಿವೃದ್ಧಿಯ ವಿಷಯದಲ್ಲಿ ಕೆಲವು ಅಂಶಗಳನ್ನು ಹೇಳಿದರು. ಇದರಲ್ಲಿ (1) ಶ್ರೀ ಟಿ.ಎಸ್. ರಾಜಗೋಪಾಲ್‌ರು ಸಂನ್ಯಾಸ ಸ್ವೀಕರಿಸುವ ವಿಷಯ, ಅದಕ್ಕೆ ಅವರು ತಯಾರಾಗಿದ್ದಾರೆಯೇ ಎಂಬುದನ್ನು ವಿಚಾರಿಸಬೇಕು. (2) ಪಾಠ ಪ್ರವಚನಗಳನ್ನು ನಡೆಸಲು ಪಂಡಿತರ ನೇಮಕ, (3) ಇಪ್ಪತ್ತು ವರ್ಷಗಳಿಂ ದಲೂ ಹೆಚ್ಚಿನ ಸೇವೆಯನ್ನು ಮಾಡಿರುವ ಶ್ರೀಮತಿ ಲಕ್ಷ್ಮೀದೇವಮ್ಮನವರ ಯೋಗ ಕ್ಷೇಮವನ್ನು ಕಮಿಟಿಯವರು ಚೆನ್ನಾಗಿ ನೋಡಿಕೊಳ್ಳಬೇಕು, ಇವುಗಳೂ ಉಳಿದ ದೈನಂದಿನ ವಿಚಾರಗಳೂ ಸೇರಿದ್ದುವು.

ಇದಕ್ಕೆ ಉತ್ತರವಾಗಿ ಸಮಿತಿಯು ಕೈಗೊಂಡ ನಿರ್ಣಯಗಳು : (1) ಶ್ರೀ ಟಿ.ಎಸ್. ರಾಜಗೋಪಾಲ್‌ರನ್ನು ಸಂನ್ಯಾಸದ ವಿಚಾರವಾಗಿ ಶಾಖಾ ಕಾರ್ಯಾಲಯ ದಿಂದ ಯಾರೂ ವಿಚಾರಿಸಿದಂತಿಲ್ಲ. ಈ ವಿಷಯದಲ್ಲಿ ಶಾಖಾ ಕಾರ್ಯಾಲಯದ ಮೂರು ನಿರ್ಣಯಗಳು ಒಂದಕ್ಕೊಂದು ವಿರುದ್ಧವಾಗಿವೆ. ಶ್ರೀ ರಾಜಗೋಪಾಲ್‌ರು, ಶ್ರೀ ಪರಕ್ಕಜೆ ಸುಬ್ರಹ್ಮಣ್ಯ ಭಟ್ಟರವರಿಂದಲೇ ಪ್ರಸ್ಥಾನತ್ರಯ ಭಾಷ್ಯವನ್ನು ಅಧ್ಯಯನ ಮಾಡಿ ಪೂರೈಸಿದನಂತರ ಶಾಸ್ತ್ರೀಯವಾಗಿ ಸಂನ್ಯಾಸ ಸ್ವೀಕಾರ ಮಾಡಿ ಶ್ರೀಗಳವರ ಆಶಯದಂತೆ ಬೆಂಗಳೂರು ಶಾಖಾ ಕಾರ್ಯಾಲಯದಲ್ಲೇ ನಿಂತು ಅಲ್ಲಿನ ಚಟುವಟಿಕೆ ಗಳನ್ನು ನಿರ್ವಹಿಸಲು ಒಪ್ಪಿರುತ್ತಾರೆಂದು ನಂಬಿತ್ತು.

ಆದರೆ, 22.2.76ರ ಶಾಖಾ ಸಮಿತಿಯ ಸಭೆಯಲ್ಲಿ (1) ಶ್ರೀ ರಾಜ ಗೋಪಾಲರು 5.2.76ರಂದು ಋಷಿಕೇಷಕ್ಕೆ ಪ್ರಯಾಣ ಮಾಡಿದರು ಎಂದು ತಿಳಿಸಿದೆ.

(2) ವಿದ್ಯಾರ್ಥಿನಿಲಯವೊಂದನ್ನು ಬೆಂಗಳೂರಿನಲ್ಲಿಯೂ ನಡೆಸುವ ವಿಚಾರವನ್ನು ಶ್ರೀಶ್ರೀಗಳವರು ಪ್ರಸ್ತಾಪಿಸಿ, ಅವರ ತರುವಾಯ ಪಾಠವನ್ನು ಹೇಳಲು ಪಂಡಿತರನ್ನು ಗೊತ್ತುಮಾಡಬೇಕೆಂದರು. ಆಗ ಶ್ರೀಗಳವರಲ್ಲಿ ಅಭ್ಯಾಸ ಮಾಡಿದ ಬೇರೆ ಯಾವ ಶಿಷ್ಯರೂ ಇರಲಿಲ್ಲ. ಶ್ರೀಶ್ರೀಗಳವರ ಆಪ್ತ ಕಾರ್ಯದರ್ಶಿಯಾಗಿದ್ದ ಶ್ರೀ ಕೆ.ಜಿ. ಸುಬ್ರಾಯಶರ್ಮರನ್ನೇ ಪಂಡಿತರಾಗಿ ನೇಮಕಮಾಡಿತು. 16.3.75ರಲ್ಲಿ 1.1.75 ರಿಂದ ಕಾರ್ಯಾಲಯದ ಕೆಲಸ ಕಾರ್ಯಕ್ರಮಗಳಿಗೆ ತೊಂದರೆಯಾಗದಂತೆ, ಅವರ ಸ್ವಂತ ಕೆಲಸವನ್ನೂ ಅವಶ್ಯವಾಗಿ ಮಾಡಿಕೊಳ್ಳಬಹುದು, ಕುಮಾರನ್ಸ್ ಹೈಸ್ಕೂಲಿನಲ್ಲಿ ಪಂಡಿತರಾಗಿ ನೇಮಕಗೊಂಡಿರುವದಕ್ಕೆ ಅನುಮತಿಯನ್ನು ಕೊಡಲಾಯಿತು.

(3) ಮತ್ತೂರು ಶ್ರೀಮತಿ ಲಕ್ಷ್ಮೀದೇವಮ್ಮನವರ ವಿಷಯಕ್ಕೆ ಶ್ರೀಶ್ರೀಗಳವರ ಅಭಿಪ್ರಾಯದಂತೆ ತೀರ್ಮಾನಮಾಡಿತು. (ಅ) ವಾರ್ಧಕ್ಯ ನಿಮಿತ್ತ ಪರಾಧೀನತೆ ಹೆಚ್ಚಾಗುತ್ತಿರುವ ಶ್ರೀಶ್ರೀಗಳವರಿಗೆ ಶ್ರೀಮತಿಯವರ ಸೇವೆ ಅವಶ್ಯವಾಗಿದೆ, ಆದರೆ ಅವರಿಗೂ ಒಂದು ಕಣ್ಣು ಆಪರೇಷನ್ ಆಗಿ ಅದೂ ಸರಿಯಾಗಿ ಕಾಣದಂತಿರದೆ ವಯಸ್ಸು, ನಿಶ್ಶಕ್ತಿಯೂ ಹೆಚ್ಚಾಗಿರುವ ಅವರನ್ನು ಶ್ರೀಗಳವರ ಸೇವೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಅವರ ತಂದೆಯವರು ಪಾರ್ಶ್ವವಾಯುವಿ ನಿಂದ ನರಳುತ್ತಿರುವಾಗ, ಆಗಾಗ ಅವರನ್ನು ನೋಡಿಬರಲು ಇವರಿಗೆ ಎಲ್ಲ ಅನುಕೂಲಗಳನ್ನೂ ಒದಗಿಸಬೇಕು. ಅವರು ಪ್ರತಿತಿಂಗಳೂ ಕಾರ್ಯಾಲಯಕ್ಕೆ ಹಣವನ್ನು ಕೊಡುತ್ತಿದ್ದು ಕಾರ್ಯಾಲಯದಿಂದ ಉಚಿತ ಊಟವನ್ನೂ ತೆಗೆದುಕೊಳ್ಳುತ್ತಿಲ್ಲ. ಯಾವ ತೊಂದರೆಯನ್ನೂ ಲೆಕ್ಕಿಸದೆ ಕಾರ್ಯಾಲಯದ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ. ಅದರಿಂದ ಅವರಿಗೆ ಜೀವನ ಪರ್ಯಂತ ಊಟ, ತಿಂಡಿ, ಕಾಫಿಗಳನ್ನು, ಔಷಧೋಪಚಾರಗಳನ್ನು ಕಾರ್ಯಾಲಯವು ಒದಗಿಸಬೇಕು - ಎಂದು 27.5.73ರ ಸಭೆಯಲ್ಲಿ ನಿರ್ಣಯ ಮಾಡಿತು. ಸ್ವಾಸ್ಥ್ಯವಿಲ್ಲದ ತಂದೆಯವರನ್ನು, ತಮ್ಮ ತಾಯಿಯವರನ್ನು ನೋಡಿಕೊಂಡು ಬರಲು ತಿಂಗಳಿಗೆ ಒಂದು ಸಲವಾದರೂ ಅವರಲ್ಲಿಗೆ ಹೋಗಿಬರಲು ಅವರಿಗೆ ರಿಕ್ಷಾ ಛಾರ್ಜು ಕೊಡತಕ್ಕದ್ದು ಎಂದು ಶ್ರೀಗಳವರು 17.2.74ರಲ್ಲಿ ಪುನಃ ಹೇಳಿದ್ದಾರೆ.

ಶ್ರೀಶ್ರೀಗಳವರು ಅವರ ಸ್ವಂತ ಧನದ ವಿನಿಯೋಗದ ಬಗ್ಗೆ ಬರೆಯಿಸಿರುವ ಉಯಿಲನ್ನು 21.7.74ರ ಶಾಖಾ ಕಾರ್ಯಾಲಯದ ಸಭೆಯಲ್ಲಿ ಓದಲಾಯಿತು.

"…. ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರು ಮತ್ತು ಶ್ರೀ ಕೆ.ಜಿ. ಸುಬ್ರಾಯ ಇವರಿಬ್ಬರ ಹೆಸರಿನಲ್ಲಿರುವ ನನ್ನ ಸ್ವಂತ ಹಣವನ್ನು ಇನ್ನು ಮೇಲೆ ಶ್ರೀಮತಿ ಲಕ್ಷ್ಮೀದೇವಮ್ಮನವರ ಅನುಮತಿಯಿಂದಲೇ ಉಪಯೋಗಿಸುತ್ತಾ ಬರಬೇಕು. ಶ್ರೀಮತಿಯವರು ಆಗಿಂದಾಗ್ಗೆ ಕಾರ್ಯಾಲಯಕ್ಕೆ ಸಾಮಾನುಗಳ ಮೂಲಕವೂ ನಗದಾಗಿಯೂ ಏನಾದರೂ ಸಹಾಯವನ್ನು ಮಾಡುತ್ತಲೇ ಇರುತ್ತಾರೆ. ಇನ್ನು ಮೇಲೆಯೂ ಅವರು ಪ್ರತಿ ತಿಂಗಳಿಗೆ 40 ರೂ.ಗಳಂತೆ ನಗದು ಕೊಡುವದಾಗಿ ಶ್ರೀಶ್ರೀಗಳಿಗೆ ತಿಳಿಸಿರುತ್ತಾರೆ. ಹೇಗೇ ಆಗಲಿ ನನ್ನ ಸ್ವಂತ ಹಣವನ್ನು ನನ್ನ ದೇಹಪಾತಾನಂತರವೂ ಶ್ರೀಮತಿಯವರ ಅನುಮತಿಯಿಂದಲೇ, ಇಷ್ಟದಂತೆಯೇ ವಿನಿಯೋಗಿಸಬೇಕು. ಈ ಹಣದಲ್ಲಿ ಎಷ್ಟು ಬೇಕಾದರೂ ನನ್ನ ಉತ್ತರಕ್ರಿಯಾದಿಗಳಿಗೆ ವಿನಿಯೋಗಿಸುವದಕ್ಕೆ ಮತ್ತು ಉಳಿದ ಹಣದ ವಿಲೇವಾರಿ ಬಗ್ಗೆ ತಿಳುವಳಿಕೆಯನ್ನು ಕೊಡುವದಕ್ಕೂ ಸಂಪೂರ್ಣ ಹಕ್ಕು ಉಳ್ಳವರಾಗಿರುತ್ತಾರೆ….".

ಇದರ ಮುಂಚೆ 7.4.74ರ ಸಭೆಯಲ್ಲಿ ಶ್ರೀಶ್ರೀಗಳವರು ತಮ್ಮ ಇಚ್ಛಾಪತ್ರವನ್ನು ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳಿಂದ ಬರೆಸಿದ್ದನ್ನು ತಿಳಿಸಲಾಗಿತ್ತು. ಈಗ 21.7.74ರಲ್ಲಿ, ಹೀಗೊಂದು ಪತ್ರವನ್ನು ಸಮಿತಿಯ ಮುಂದಿಡಲಾಯಿತು : "ನಾನು 16.11.73ರಲ್ಲಿ ಕಮಿಟಿಗೆ ಹೇಳಿ ಬರೆಯಿಸಿದ್ದ ಹಣ ವಿನಿಯೋಗದ ಪತ್ರವನ್ನು ಈ ಮೂಲಕ ರದ್ದುಪಡಿಸಿ, ಈ ಹೊಸ ಹೇಳಿಕೆಯನ್ನು 21.7.74ನೇ ಭಾನುವಾರದ ಈ ದಿನ ಆಪ್ತ ಕಾರ್ಯದರ್ಶಿ ಕೆ.ಜಿ. ಸುಬ್ರಾಯ ಶರ್ಮನ ಮೂಲಕ ಬರೆಯಿಸಿರುತ್ತೇನೆ" - ಇದು 21.7.74ರ ಸಾಯಂಕಾಲದ ಸಭೆಯ ಮುನ್ನ ಆ ದಿನ ಬೆಳಿಗ್ಗೆಯೇ ಬರೆಸಿದರೆಂದು ತೋರುತ್ತೆ

27.7.75ರ ಸಭೆಯಲ್ಲಿ ಸಮಿತಿಯು ಶ್ರೀಗಳವರ ಇಚ್ಛಾಪತ್ರವನ್ನು ನೆನಪು ಮಾಡಿಕೊಂಡಿತು. ಅವರ ಆದೇಶದಂತೆ, ಶ್ರೀಮತಿಯವರು ಅವರ ಜೀವಾವಧಿ ಪೂರ್ತ ಈ ಬೆಂಗಳೂರಿನ ಶಾಖಾ ಕಾರ್ಯಾಲಯದಲ್ಲಿಯೇ ಇದ್ದು ಇಲ್ಲಿನ ಭಜನೆ, ಉಪನ್ಯಾಸ, ಪುರಾಣ ಪ್ರವಚನಾದಿ ಅನುಷ್ಠಾನಗಳಲ್ಲಿ ಭಾಗವಹಿಸುವದರ ಮೂಲಕ ಇಲ್ಲಿಯ ಹಿರಿಯ ಮಾತೆಯಾಗಿದ್ದು ಶ್ರೀ ಗುರುಗಳ ಸನ್ಮಾರ್ಗದರ್ಶಕರಾಗಿರಬೇಕೆಂದು ಸಮಿತಿಯು ಅವರನ್ನು ಪ್ರಾರ್ಥಿಸಿತು. ಅಡಿಗೆ ಮುಂತಾದ ಕೆಲಸ ಕಾರ್ಯಗಳಿಗೆ ಒಬ್ಬರನ್ನು ನೇಮಿಸಿಕೊಂಡು ಶ್ರೀಮತಿಯವರಿಗೆ ಇನ್ನು ಮುಂದೆ ಪೂರ್ಣ ವಿಶ್ರಾಂತಿಯನ್ನು ಕೊಟ್ಟು, ಅವರ ಆರೋಗ್ಯಾದಿಗಳನ್ನು ಸಮಿತಿಯವರೇ ಪ್ರೇಮದಿಂದ ನೋಡಿಕೊಳ್ಳಬೇಕೆಂದು ನಿರ್ಣಯವನ್ನು ಮಾಡಿತು.

(4) 17.2.74ರಲ್ಲಿ ಶ್ರೀಗಳವರು ಹೇಳಿದ ಉಳಿದ ಅಂಶಗಳಲ್ಲಿ ಮುಖ್ಯವಾದವು ಹೀಗಿವೆ : "(ಅ) ಮುಂದೇನು ? ಎಂಬ ಪ್ರಶ್ನೆಗೆ ಸಮಿತಿಯವರೇ ಜವಾಬ್ದಾರಿ. ಹೊಳೆನರಸೀಪುರದ ಪ್ರಧಾನ ಕಾರ್ಯಾಲಯ ಮತ್ತು ಬೆಂಗಳೂರಿನ ಶಾಖಾ ಕಾರ್ಯಾಲಯ ಎರಡಕ್ಕೂ ಈಗಿರುವ ನಿಯಮ ನಿಬಂಧನೆಗಳೇ ಸಮಾನವಾಗಿರತಕ್ಕದ್ದು, ಕಾರ್ಯ ಸಮಿತಿ ಸದಸ್ಯರೂ, ಟ್ರಸ್ಟಿಗಳೂ ಸಮಾನರೇ. ಮಿಕ್ಕ ಹಣಕಾಸಿನ ವಿಷಯದಲ್ಲಿ ಎರಡೂ ಸ್ವತಂತ್ರಗಳೇ. ನಿಯಮ ನಿಬಂಧನೆಗಳು ಅಚ್ಚಾಗಿ ಮಿಕ್ಕದ್ದು ಸ್ವತಂತ್ರವಾಗಿರತಕ್ಕದ್ದು. (ಆ) ಲೆಕ್ಕ ಪತ್ರಗಳನ್ನು ಬೇರೆ ಬೇರೆಯಾಗಿಯೇ ಬರೆಯತಕ್ಕದ್ದು. (ಇ) ಕೆಲವು ಗ್ರಂಥಗಳನ್ನು ಶಾಖಾ ಕಾರ್ಯಾಲಯದಿಂದಲೇ ಪ್ರಕಟಪಡಿಸಬೇಕು. ಇದರ ಕಾಪಿರೈಟ್ ಸಹ ಇಲ್ಲಿಗೇ ಇರಬೇಕು, ಈ ಖಾತೆಯಲ್ಲಿರುವ ಹಣವನ್ನು ಬೇರೆಯದಕ್ಕೆ ಉಪಯೋಗಿಸಬಾರದು. (ಈ) ವಿದ್ಯಾರ್ಥಿನಿಲಯಕ್ಕೆ, ಅಧ್ಯಾತ್ಮವಿದ್ಯೆಗೆ ಅರ್ಹತೆ ಇರಬೇಕು. ವಿದ್ಯಾರ್ಥಿಗಳಿಗೆ ಊಟ ವಸತಿ ಇರಬೇಕು, ಶಾಂಕರ ಪ್ರಸ್ಥಾನ ಭಾಷ್ಯ ಪಾಠವನ್ನು ಹೇಳಿಕೊಡಬೇಕು. ವಿದ್ಯಾರ್ಥಿಗಳು ಇಲ್ಲಿಯ ನಿಯಮ ನಿಬಂಧನೆಗಳಿಗೆ ಒಳಪಡಬೇಕು. ಶ್ರೀಗಳವರ ತರುವಾಯ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಲು ಪಂಡಿತರನ್ನು ಗೊತ್ತು ಮಾಡಬೇಕು. ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಇಲ್ಲಿಗೆ ಮಾರ್ಚ್ ಮಾಹೆಯಲ್ಲಿ ಬರುವವರಿದ್ದಾರೆ, ಇಂಗ್ಲಿಷ್ ಮತ್ತು ಸಂಸ್ಕೃತಗಳನ್ನು ಚೆನ್ನಾಗಿ ಬಲ್ಲವರು. ಆದ್ದರಿಂದ ಬೇಕಾದರೆ ಪ್ರಚಾರಕರನ್ನಾಗಿ ಉಪಯೋಗಿಸಿಕೊಳ್ಳಬಹುದೆ ? ವಿಚಾರಿಸಿ ನೋಡಬೇಕು. (ಉ) ಶ್ರೀ ದತ್ತಾತ್ರೇಯ ಲೇ-ಔಟ್‌ನಲ್ಲಿರುವ ನಿವೇಶನಕ್ಕೆ ಲೇ-ಔಟ್ ಛಾರ್ಜು ಕೊಟ್ಟಿದೆ, ಸೋಮನಹಳ್ಳಿಯ ಹೊಲದ ವಿಷಯವಿದೆ - ಇವುಗಳನ್ನು ನೋಡಿಕೊಳ್ಳಬೇಕು. (ಊ) ಹೊಸ ಕಟ್ಟಡದ maintenance, ವಿದ್ಯುತ್, ಮತ್ತು ನೀರಿನ ಬಿಲ್ ಇತ್ಯಾದಿ ಪುನರಾವರ್ತವಾಗುವ ಖರ್ಚಿಗೆ, ಒಟ್ಟಿನಲ್ಲಿ ಶಾಶ್ವತವಾಗಿ ಕಾರ್ಯಾಲಯವು ನಡೆಯಲು ಶಾಶ್ವತ ನಿಧಿಯನ್ನು ಏರ್ಪಡಿಸಬೇಕು.

**ಕೆಲವು ನಿರ್ಣಯಗಳು : 1. ಪ್ರತ್ಯೇಕ ಟ್ರಸ್ಟ್ :** 19.1.75ರ ಸಭೆಯಲ್ಲಿ "ಈ ಶಾಖಾ ಕಾರ್ಯಾಲಯವನ್ನು ಸ್ವತಂತ್ರವಾಗಿ ಟ್ರಸ್ಟ್ ಮಾಡುವ ವಿಚಾರವನ್ನು ಗಮನದಲ್ಲಿಟ್ಟು, ಈ ವಿಷಯದಲ್ಲಿ ಸಹಕರಿಸುವಂತೆ ಶ್ರೀಹರಿಯವರನ್ನು ಪ್ರಾರ್ಥಿಸಲಾಯಿತು. 16.3.75ರಲ್ಲಿ "separate ಆಗಿ ಈ ಶಾಖಾ ಕಾರ್ಯಾಲಯವನ್ನು ರಿಜಿಸ್ಟರ್ ಮಾಡಿಸುವ ವಿಚಾರ ಮುಂದುವರೆಸುವಂತೆ" ಎಂದಿದೆ. 27.7.75ರಲ್ಲಿ "ಈ ಶಾಖಾ ಕಾರ್ಯಾಲಯವನ್ನು ರಿಜಿಸ್ಟರ್ ಮಾಡಿಸಿ, ಪ್ರಧಾನ ಕಾರ್ಯಾಲಯಕ್ಕೂ ಈ ಶಾಖಾ ಕಾರ್ಯಾಲಯಕ್ಕೂ ಆರ್ಥಿಕವಾಗಿ ಯಾವ ಸಂಬಂಧವೂ ಇಲ್ಲವೆಂದು ತಿಳಿಯತಕ್ಕದ್ದು. ಆದರೆ, ಪ್ರಧಾನ ಕಾರ್ಯಾಲಯದ ನಿಯಮ ನಿಬಂಧನೆಗಳಿಗೆ

ಅವಿರೋಧವಾಗಿಯೇ ನಡೆಯತಕ್ಕದ್ದು. ಈ ಶಾಖಾ ಕಾರ್ಯಾಲಯಕ್ಕೆ ಹೊಂದು ವಂತೆ ಮತ್ತು ಇದರ ಪುರೋಭಿವೃದ್ಧಿಗೆ ಅನುಕೂಲವಾಗುವಂತೆ ಈ ಸಮಿತಿಯು ಹೊಸ ನಿಯಮನಿಬಂಧನೆಗಳನ್ನು ರಚಿಸತಕ್ಕದ್ದು'' ಎಂಬ ನಿರ್ಣಯವಿದೆ. 31.8.75 ರಲ್ಲಿ ''ಇಲ್ಲಿಗೆ ಬೇರೆಯಾಗಿ ಒಂದು ಟ್ರಸ್ಟ್‌ನ್ನು ಮಾಡಬೇಕಾಗಿರುವ ವಿಚಾರವನ್ನು ಸದ್ಯಕ್ಕೆ ಮುಂದೂಡಲಾಗಿದೆ'' ಎಂದಿದೆ.

ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರು ಶ್ರೀಶ್ರೀಗಳವರ ಮತ್ತು ಕಾರ್ಯಾಲಯದ ಸೇವೆಗಾಗಿ ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟಿರುವುದರಿಂದ ಅವರಿಗೆ ಒಂದು ತಿಂಗಳಿಗೆ 50 ರೂ. ವರಮಾನವು ಬರುವಂತೆ ಏರ್ಪಡಿಸುವುದರ ಜೊತೆಗೆ, ಮುಂದೆ ಕಟ್ಟಬಹುದಾದ ಕಟ್ಟಡದ ಒಂದು ಭಾಗದಲ್ಲಿ ಅವರು ಜೀವಂತವಾಗಿರುವವರೆಗೂ ಇರುವುದಕ್ಕೆ ಅನುಕೂಲವಾಗುವಂತೆ ಸ್ವತಂತ್ರವಾದ ಎಲ್ಲ ಅನುಕೂಲತೆಗಳನ್ನುಳ್ಳ ಕೋಣೆಯನ್ನು ಕಟ್ಟಿಸಬೇಕೆಂತಲೂ, ಅವರ ನಂತರ ಆ ಕಟ್ಟಡವು ಕಾರ್ಯಾಲಯಕ್ಕೇ ಸೇರತಕ್ಕದ್ದೆಂತಲೂ ಅದರ ವಿಷಯಕ್ಕೆ ಮತ್ತೆ ಬೇರೆ ಯಾರಿಗೂ ಯಾವ ರೀತಿಯಲ್ಲೂ ಬಾಧ್ಯತೆ ವರ್ಗಾವಣೆ ಇತ್ಯಾದಿಗಳು ಆಗುವುದಿಲ್ಲವೆಂತಲೂ 17.6.73ರಲ್ಲಿ ತೀರ್ಮಾನಿಸಲಾಯಿತು. ಅದೇ ರೀತಿ ಶ್ರೀ ಶ್ರೀ ನಿತ್ಯಾನಂದೇಂದ್ರ ಸರಸ್ವತಿಗಳನ್ನು, ಶ್ರೀ ಮೂರ್ತಿಗಳನ್ನು ಸಹ, ಅವರ ನಿಸ್ವಾರ್ಥ ಸೇವೆ, ಗುರುಗಳಲ್ಲಿರುವ ಪರಮಭಕ್ತಿಯನ್ನು ಕಂಡು, ಇಲ್ಲಿಯೇ ಪೂರ್ಣಕಾಲವೂ ಇದ್ದು ಗುರುಗಳವರ ಪರಂಪರೆಯನ್ನು ಇದೇ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಬೇಕೆಂದು, ಪ್ರಾರ್ಥನಾ ನಿರ್ಣಯವನ್ನೂ ಮಾಡಿತು. (31.8.75)

ಪಬ್ಲಿಕ್ ಟ್ರಸ್ಟ್ ಮಾಡುವ ವಿಚಾರ : 20.6.76ರ ಶಾಖಾ ಕಾರ್ಯಾಲಯದ ನಡವಳಿಕೆಯಿಂದ ಹೊಳೆನರಸೀಪುರದಿಂದ ಬಂದಿದ್ದ 13.4.76ರ ಕಾಗದವನ್ನೂ ಎ ಬಿ ಸಿ ಡ್ರಾಫ್ಟ್‌ಗಳನ್ನೂ ಓದಲಾಯಿತು. ''ಹಾಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಪ್ರಧಾನ ಕಛೇರಿಯು ಹೊಳೆನರಸೀಪುರದಲ್ಲಿಯೂ, ಇದರ ಶಾಖಾ ಕಾರ್ಯಾಲಯವು ಬೆಂಗಳೂರಿನಲ್ಲಿಯೂ ಸ್ಥಾಪಿತವಾಗಿದ್ದು ಅಧ್ಯಾತ್ಮ ವಿದ್ಯಾ ಪ್ರಚಾರವು ಅನೇಕ ಚಟುವಟಿಕೆಗಳ ರೂಪದಿಂದ ನಡೆಯುತ್ತಿದೆ. ಈ ಕಾರ್ಯಾಲಯದ ಆಡಳಿತವು ಈಗ ಪೂರ್ಣವಾಗಿ ಒಂದು ಪ್ರೈವೇಟ್ ಟ್ರಸ್ಟ್ ಎಂದು ರಿಜಿಸ್ಟರಾಗಿದ್ದು ಟ್ರಸ್ಟಿಗಳು, ಪ್ರಧಾನ ಮತ್ತು ಶಾಖಾ ಕಾರ್ಯಾಲಯದ ಸಮಿತಿಗಳಿಂದ ಕೆಲಸ ಕಾರ್ಯಗಳು ಮುಂದುವರಿಯುತ್ತಿವೆ. ಈಚೆಗೆ ಟ್ರಸ್ಟಿಗಳು ಮತ್ತು ಪ್ರಧಾನ ಕಾರ್ಯಾಲಯ ಶಾಖಾ ಕಾರ್ಯಾಲಯಗಳ ಸಮಿತಿ ಸದಸ್ಯರ ಅಭಿಪ್ರಾಯದಲ್ಲಿ ಸಂಸ್ಥೆಯ ಚಟುವಟಿಕೆಗಳ ಪೈಕಿ (1) ಹೊಸ ಗ್ರಂಥಗಳ ಪ್ರಕಟಣೆ (2) ಗ್ರಂಥಗಳ ಪುನರ್ಮುದ್ರಣ (3) ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯ ಪ್ರಕಟಣೆ, ಪತ್ರಿಕೆ ಹಾಗೂ

ಗ್ರಂಥಗಳ ಮಾರಾಟ (4) ಈ ಎಲ್ಲ ಪ್ರಕಟಣೆಗಳ ಉಪಯೋಗಕ್ಕಾಗಿ ಸ್ಥಾಪಿತವಾಗಿರುವ ಮುದ್ರಣಾಲಯ (5) ಉಪನ್ಯಾಸಗಳು, ವೇದಾಂತ ಸಪ್ತಾಹಗಳು, ವಿದ್ವದ್ ಗೋಷ್ಠಿಗಳು - ಮುಂತಾದ ರೀತಿಯಿಂದ ಅಧ್ಯಾತ್ಮ ಪ್ರಸಾರ ಈ ವಿಭಾಗಗಳನ್ನು 'ಪ್ರೈವೇಟ್ ಟ್ರಸ್ಟ'ನಿಂದ ಬೇರ್ಪಡಿಸಿ 'ಪಬ್ಲಿಕ್ ಟ್ರಸ್ಟ್' ಎಂತ ಘೋಷಿಸಿ ಆ ಪ್ರಕಾರ ಪ್ರೈವೇಟ್ ಟ್ರಸ್ಟಿನ ತಿದ್ದುಪಡಿ ಪತ್ರ ಮತ್ತು ಪಬ್ಲಿಕ್ ಟ್ರಸ್ಟಿನ ಪತ್ರ ಇವುಗಳನ್ನು ಬರೆದು ರಿಜಿಸ್ಟರ್ ಮಾಡಿಸಿ ಕೆಲಸ ಕಾರ್ಯಗಳನ್ನು ಮುಂದುವರಿಸುವುದು ಮತ್ತು ಅಭಿವೃದ್ಧಿಗೊಳಿಸುವುದು. ಇವುಗಳಿಗೆ ಸಹಾಯಕವಾಗುವಂತೆ ಏರ್ಪಡಿಸುವ ಬಗ್ಗೆ ಸರ್ವರ ಸಮ್ಮತಿಯೂ ದೊರಕಿರುವುದರಿಂದ, ಪಬ್ಲಿಕ್ ಟ್ರಸ್ಟ್‌ನ್ನು ರಚಿಸಿ, ತಕ್ಕ ಕಾಗದ ಪತ್ರಗಳನ್ನು ಮಾಡಬಹುದೆಂತ ತೀರ್ಮಾನಿಸಲಾಗಿದೆ.

ಈ ರೀತಿಯಲ್ಲಿ 'ಪಬ್ಲಿಕ್ ಟ್ರಸ್ಟ್' ರಚಿತವಾದ ಅನಂತರ ಲೆಕ್ಕಪತ್ರಗಳನ್ನು ಕ್ರಮವಾಗಿ (1) ಪ್ರೈವೇಟ್ ಟ್ರಸ್ಟಿಗೆ ಸಂಬಂಧಿಸಿದ ಲೆಕ್ಕಗಳು (2) ಪಬ್ಲಿಕ್ ಟ್ರಸ್ಟ್ ಬಾಬ್ತುಗಳಿಗೆ ಸಂಬಂಧಿಸಿದ ಲೆಕ್ಕ ಪತ್ರಗಳು - ಎಂಬುದಾಗಿ ಎರಡು ಬಾಬ್ತುಗಳಲ್ಲಿಯೂ ಬೇರೆಬೇರೆಯಾಗಿ ಇಟ್ಟು ಬ್ಯಾಲೆನ್ಸ್ ಶೀಟುಗಳನ್ನು ಪ್ರತ್ಯೇಕವಾಗಿಯೇ ತಯಾರು ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

ಪಬ್ಲಿಕ್ ಟ್ರಸ್ಟ್ ಪತ್ರವು ರಿಜಿಸ್ಟರಾದ ಕೂಡಲೇ ಟ್ರಸ್ಟಿಗಳು ಸದರಿ ಪಬ್ಲಿಕ್ ಟ್ರಸ್ಟ್‌ಗೆ ಸಹಾಯಧನವನ್ನು ಸಂಗ್ರಹಿಸುವುದಕ್ಕೆ ಮತ್ತು ಇನ್‌ಕಂಟ್ಯಾಕ್ಸ್ ವಿನಾಯಿತಿ ಬಗ್ಗೆ ಸರ್ಕಾರಕ್ಕೆ ಬರೆದುಕೊಂಡು ವಿನಾಯಿತಿ ಪಡೆಯಲು ತುರ್ತು ಕ್ರಮ ತೆಗೆದುಕೊಳ್ಳತಕ್ಕದ್ದೆಂತಲೂ ತೀರ್ಮಾನಿಸಲಾಗಿರುತ್ತದೆ.''

ಆದರೆ ಹೀಗೆ ಪ್ರೈವೇಟ್-ಪಬ್ಲಿಕ್ - ಎರಡನ್ನಾಗಿ ವಿಭಜಿಸುವ ವಿಚಾರ ಹಿಂದೆಯೇ ಟ್ರಸ್ಟ್‌ನಲ್ಲಿ ಸೂಚಿತವಾಗಿದ್ದರೂ, 4.4.76ರಲ್ಲಿ ಚರ್ಚೆಗೆ ಬಂದು, ಶ್ರೀ ವೆಂಕಟೇಶಯ್ಯನವರು ಕರಡು ಪ್ರತಿಯನ್ನು ಸಿದ್ಧಪಡಿಸಿ ಎಲ್ಲ ಸದಸ್ಯರಿಗೂ ಒಪ್ಪಿಗೆಗಾಗಿ ಕಳಿಸಬಹುದೆಂದು ನಿರ್ಣಯಿಸಲಾಯಿತು. 27.6.1976 ರಲ್ಲಿ ಕರಡು ತಯಾರಾಗಿರುವಂತೆ ಬರೆದು ರಿಜಿಸ್ಟರ್ ಮಾಡಬಹುದೆಂದು ತೀರ್ಮಾನ ವಾಯಿತು. ಮುಂದೆ ಈ ವಿಚಾರ ಹೊಳೆನರಸೀಪುರದಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಪ್ರಸ್ತಾಪವಾಗಿರುವದು ಕಾಣುವದಿಲ್ಲ. ಅಂದರೆ ಏನು ಕಾರಣವೋ ಕೈಬಿಟ್ಟಿರಬೇಕು.

(2) ಆಗಸ್ಟ್ 74ರ ಅಧ್ಯಾತ್ಮ ಪ್ರಕಾಶ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಗುರು ಮಂದಿರದ ನಿಧಿ'ಯ ವಿಷಯವಾಗಿ ಸಮಿತಿಯ ಸದಸ್ಯರುಗಳಿಗೆ ತಿಳಿಸಲಾಯಿತು. ಈ ಬಗ್ಗೆ ದೊಡ್ಡ ಚರ್ಚೆಯಾಗಿ ಕೊನೆಗೆ ಈ ಪ್ರಕಟಣೆಯು ಕಾರ್ಯಾಲಯದಿಂದ

ಹೊರಟಿರುವದು ಅಪ್ರಕೃತವೆಂದು ತೀರ್ಮಾನಿಸಿ, ಈ ಪ್ರಕಟಣೆಯನ್ನು ಮುಂದು ವರಿಸಬಾರದೆಂದು 18.8.74ರ ಸಭೆಯಲ್ಲಿ ನಿರ್ಣಯವಾಯಿತು.

ಈ ಪ್ರಕಟಣೆ ಶ್ರೀಶ್ರೀಗಳವರು ದೇಹ ಬಿಟ್ಟ ಮೇಲೆ ನಡೆಸಬೇಕಾದ ಕಾರ್ಯ, ಅವರ ಸಮಾಧಿಯ ಮೇಲೆ ಮಂದಿರ ನಿರ್ಮಾಣ ಮಾಡುವ ಉದ್ದೇಶಕ್ಕೆ ಸಂಬಂಧಪಟ್ಟುದಾಗಿದೆ. ಇದೊಂದು ಪ್ರತ್ಯೇಕವಾದ ಎರಡು ದೊಡ್ಡ ಪುಟಗಳ ಮನವಿ. ಶ್ರೀಶ್ರೀಗಳವರು ಇನ್ನೂ ದೈಹಿಕವಾಗಿ ಇರುವಾಗಲೇ, ಇಂತಹ ಯೋಚನೆ ಕಾರ್ಯದೃಷ್ಟಿಯಿಂದ ಮುಂದಾಲೋಚನೆಯ ಕ್ರಮ ಎನ್ನಬಹುದಾದರೂ, **ಅಕಾಲಿಕ** ವಾದುದು. ಭಕ್ತರ ಸೂಕ್ಷ್ಮ ಮನೋವೇದನೆಗಳನ್ನು ಕೆರಳಿಸಿ, ನೋವುಂಟು ಮಾಡ ಬಹುದಾದ, ಭಾವವಿಕಾರದ ಕಾರ್ಯವಾಗುವದೇ ಹೆಚ್ಚು ಎಂದು ಅನೇಕರಿಗೆ ಅನಿಸಿದರೆ ತಪ್ಪೇನಿಲ್ಲ. ಇದು ಅಸಮಂಜಸವಾದ ಪ್ರಕಟಣೆ ಎನ್ನುವುದು ಇಲ್ಲಿ ಸೂಚಿತವಾದ ಅಭಿಪ್ರಾಯ. ಈ ವಿಷಯದಲ್ಲಿ ಕಾರ್ಯಕಾರಿ ಸಮಿತಿಯವರು ಹೀಗೆ ಯೋಗ್ಯ ರೀತಿಯಲ್ಲಿ ಕರ್ತವ್ಯ ನೆರವೇರಿಸಿದುದು ಅಭಿನಂದನೀಯ ಎನ್ನಬಹುದು. ನಿಜವಾಗಿಯೂ ಇಂತಹ ಉತ್ತಮ ಮಾರ್ಗದಲ್ಲಿ ಮುನ್ನಡೆಸಲೋಸ್ಕರವೇ ಸಮಿತಿಗಳ ರಚನೆಯಾಗು ವದು ; ಆ ಮಾರ್ಗವನ್ನು ಇಲ್ಲಿ ಅನುಸರಿಸಿದೆ.

(3) ಶಾಖಾ ಕಾರ್ಯಾಲಯದ ಸಹಾಯಕ ಪಂಡಿತರಾಗಿ ಶ್ರೀ ಬಿ.ಎಸ್. ಕೃಷ್ಣಮೂರ್ತಿಗಳನ್ನು 7.1.90 ರಿಂದ ಮಾಹೆಯಾನ 250 ರೂ. ಸಂಭಾವನೆ ಮೇಲೆ ನೇಮಕಮಾಡಲಾಯಿತು. ಆರು ತಿಂಗಳು ಕಾಲ ಅವರು 'ಪರಮಾರ್ಥ ಚಿಂತಾಮಣಿ' (ಶ್ರೀಶ್ರೀಗಳವರ ಉತ್ತಮ ಗ್ರಂಥ) ಪ್ರವಚನವನ್ನು ನಡೆಸಿದರು. ಅದರ ಮಂಗಳಾ ಚರಣೆಯಲ್ಲಿ ಅವರಿಗೆ ಸಂಭಾವನೆಯನ್ನು ಕೊಡಲಾಯಿತು. 1.4.92ರಿಂದ ಸಂಭಾವನೆಯನ್ನು ಏರಿಸಿತು. ಇವರು ಸಂನ್ಯಾಸ ಸ್ವೀಕಾರ ಮಾಡಿ ಸ್ವಾಮಿ ವಿರಜಾನಂದರಾದ ಮೇಲೆ, ಅವರು ತಮಗೆ ಕೊಟ್ಟಿದ್ದ ಚೆಕ್‌ನ್ನು ಹಿಂದೆ ಕಳಿಸಿದ್ದನ್ನು ಮತ್ತು ಅವರು ಇನ್ನು ಮುಂದೆ ತಮಗೆ ಮಾಸಿಕ ಸಂಭಾವನೆಯನ್ನು ನಿಲ್ಲಿಸಬೇಕಾಗಿ ಬರೆದದ್ದನ್ನು ಜುಲೈ 1996ರಲ್ಲಿ ಒಪ್ಪಿಕೊಳ್ಳಲಾಯಿತು. ಇದೂ ಒಂದು ಸಂನ್ಯಾಸಿಗಳ ಆರೋಗ್ಯಕರ ಮಾರ್ಗ, ನಮಸ್ಕರಿಸಿ ಒಪ್ಪುವಂತಹುದು.

(4) ಪ್ರಧಾನ ಕಾರ್ಯಾಲಯವು (ಟ್ರಸ್ಟ್) ಈ ಶಾಖಾ ಕಾರ್ಯಾಲಯವನ್ನು ಅಲ್ಲಿಯ ಗ್ರಂಥಗಳ ಮಾರಾಟಕ್ಕೆ ಬೆಂಗಳೂರಿನಲ್ಲಿ ಏಕೈಕ ಏಜೆಂಟರನ್ನಾಗಿ ಮಾಡಿಕೊಳ್ಳಬಹುದು. ಇಲ್ಲಿಂದಲೇ ಉಳಿದ ಎಲ್ಲಾ ಪುಸ್ತಕ ವ್ಯಾಪಾರಿಗಳಿಗೂ ಶೇ. 25 ರಿಯಾಯಿತಿಯನ್ನು ಕೊಡಬಹುದಾಗಿದೆ. ಆದ್ದರಿಂದ ಈ ಶಾಖಾ ಕಾರ್ಯಾಲಯಕ್ಕೆ ಎಲ್ಲ ಗ್ರಂಥಗಳಿಗೂ ಒಟ್ಟಾಗಿ ಶೇಕಡಾ 35 ರಿಂದ 40 ರಿಯಾಯಿತಿಯನ್ನು ಕೊಡುವಂತೆ

ಪ್ರಧಾನ ಕಾರ್ಯಾಲಯಕ್ಕೆ ಬರೆಯುವ ನಿರ್ಣಯವನ್ನು 29.11.87ರಲ್ಲಿ ಮಾಡಿತು. ಬಹುಶಃ ಆಗ, ಪ್ರಧಾನ ಕಾರ್ಯಾಲಯದಲ್ಲಿ ಪುಸ್ತಕಗಳಿಗೆ ಹೆಚ್ಚು ಲಾಭವಿಟ್ಟು ಮಾರಾಟದ ಬೆಲೆಯನ್ನಿಡುವದಿಲ್ಲ ಎಂಬ ವ್ಯಾವಹಾರಿಕ ವಿಷಯ ಇಲ್ಲಿ ತಿಳಿದಿರಲಾರದು. ಆದರೆ, ಪಂಡಿತರು ಉಪನ್ಯಾಸಕ್ಕೆ ಹೋದಲ್ಲೆಲ್ಲಾ ಪುಸ್ತಕವನ್ನು ಮಾರಲು ಅನುಕೂಲವಾಗುವಂತೆ ಅವರಿಗೆ ವೈಯಕ್ತಿಕವಾಗಿ ಶೇ. 33 1/3 ರಿಯಾಯಿತಿ ಕೊಡಬೇಕೆಂಬ ಪತ್ರವನ್ನು ಟ್ರಸ್ಟ್ ಒಪ್ಪಿಕೊಂಡಿತು.

(5) "ವೇ।। ಕೆ.ಜಿ. ಸುಬ್ರಾಯಶರ್ಮರಿಗೆ ಈ ಕಾರ್ಯಾಲಯದ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವ ವಿಚಾರದಲ್ಲಿ ಒಮ್ಮತವು ಬರದಿರುವದರಿಂದ ಈ ವಿಚಾರ ಕೈ ಬಿಡಲಾಯ್ತು" - 15.1.2000ದ ನಿರ್ಣಯ. ಈ ವಿಷಯವು ಬಂದದ್ದಾದರೂ ಏಕೆ ? (ಅಲ್ಲಿಯ ವೇಳೆಗಾಗಲೇ ಕಾರ್ಯಕಾರಿ ಸಮಿತಿಯು ಎಲ್ಲ ವಿಷಯಗಳಲ್ಲೂ ಪೂರ್ಣ ಜವಾಬ್ದಾರಿಯನ್ನು ಶ್ರೀ ಶರ್ಮರಿಗೇ ಬಿಟ್ಟುಕೊಟ್ಟಿರುವದು ಪ್ರತಿ ಸಭೆಯಲ್ಲೂ ಕಂಡುಬರುತ್ತದೆ. ಆದರಿಂದ ಇನ್ನೂ ಏನು ಹೆಚ್ಚಿನ ಅಧಿಕಾರವನ್ನು ಅವರು ಬಯಸಿರಬಹುದು ? ಒಂದಂತೂ ನಿಜ, ಇದು ಒಪ್ಪಿಗೆಯಾಗುವಂತಿದ್ದರೆ, 'ಅಸ್ತು' ಎನ್ನಲೂ ಸಹ ಕಾರ್ಯಕಾರಿ ಸಮಿತಿಯ ಅವಶ್ಯಕತೆಯೇ ಇರುತ್ತಿರಲಿಲ್ಲ. ಮುಂದೆ ಹೀಗೆ ಊಹೆಗಳನ್ನು ಮಾಡುವದನ್ನು ಕೈಬಿಡುವದೇ ಲೇಸು.)

**ತ್ರೈಮಾಸಿಕ ಪತ್ರಿಕೆ – ಶಂಕರಭಾಸ್ಕರ ಉಗಮ :** ಅಧ್ಯಾತ್ಮಪ್ರಸಾರ ಕಾರ್ಯವನ್ನು ಹೆಚ್ಚಿಸುವದೆಂಬಂತೆ, ಈ ಶಾಖಾ ಕಾರ್ಯಾಲಯದಿಂದಲೂ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಲು 27.9.87ರಲ್ಲಿ ತೀರ್ಮಾನ ಮಾಡಲಾಯಿತು. ಎರಡು ತಿಂಗಳಲ್ಲಿ ಈ ಪತ್ರಿಕೆಗಾಗಿ - ಆಗ ಉದ್ದೇಶಿತ ಹೆಸರು 'ಶಂಕರ ಭಾನು' - 6,000 ರೂ. ಸಂಗ್ರಹವಾಗಿತ್ತು. ಅನಂತರ ಪತ್ರಿಕೆಗೆ 'ಶಂಕರ ಭಾಸ್ಕರ' ಎಂಬ ಹೆಸರನ್ನಿಡಲಾಯಿತು. 16.12.87ರಲ್ಲಿ ದೆಹಲಿಯ ವರ್ತಮಾನ ಪತ್ರಿಕೆಗಳ ರಿಜಿಸ್ಟ್ರಾರ್‌ರಿಂದ ಅಧಿಕೃತವಾಗಿ ಈ ಹೆಸರಿಗೆ ಒಪ್ಪಿಗೆ ಕೊಟ್ಟ ಪತ್ರ ಬಂದಿತು. 23.12.87ರ ಸಭೆಯಲ್ಲಿ ಶ್ರೀ ಕೆ.ಜಿ. ಸುಬ್ರಾಯ ಶರ್ಮರೇ ಈ 'ಶಂಕರ ಭಾಸ್ಕರ' ಆಧ್ಯಾತ್ಮಿಕ ತ್ರೈಮಾಸಿಕ ಪತ್ರಿಕೆಗೆ ಸಂಪಾದಕರೂ, ಪ್ರಕಾಶಕರೂ ಎಂದು ಪತ್ರಿಕೆಯನ್ನು ಅಶೋಕನಗರದ ಶ್ರೀ ನಿತ್ಯಾನಂದ ಪ್ರಿಂಟರ್ಸ್‌ನ ಶ್ರೀ ಬಿ.ಎನ್. ನಟರಾಜ ಅವರನ್ನು ಮುದ್ರಕರಾಗಿ ಎಂದು ಗೊತ್ತುಮಾಡಲಾಯಿತು. ಇವುಗಳಿಗೆ ತಕ್ಕಂತಹ ಘೋಷಣೆಯನ್ನು ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ರ ಮುಂದೆ ಶ್ರೀ ಸುಬ್ರಾಯಶರ್ಮರೇ ಮಾಡಿ, ಪತ್ರಿಕೆಯನ್ನು 1988ರ ಫೆಬ್ರವರಿಯಲ್ಲಿ ಪ್ರಕಟಣೆಗೆ ಅನುವು ಮಾಡಲು ಹೇಳಿತ್ತು. ಈ ಘೋಷಣೆ 4.1.88ರಲ್ಲಿ ಆಯಿತು. ಪತ್ರಿಕೆಗೆ ಬರುವ ಚಂದಾ ಮತ್ತು ಇತರ ಹಣವನ್ನು

ಬೆಂಗಳೂರು ತಾತಾ ಸಿಲ್ಕ್ ಫಾರಂನ ಮೈಸೂರು ಬ್ಯಾಂಕಿನಲ್ಲಿ ಪ್ರತ್ಯೇಕ ಖಾತೆಯಲ್ಲಿ ಇಡುವಂತೆ, ಈ ಖಾತೆಯನ್ನು ಕಾರ್ಯದರ್ಶಿಗಳೂ ಮತ್ತು ಖಜಾಂಚಿಗಳೂ ನಿರ್ವಹಿಸುವಂತೆ ತೀರ್ಮಾನ ಮಾಡಿತು. ಪತ್ರಿಕೆಯ ವಿವಿಧ ಶ್ರೇಣಿಯ ಚಂದಾ ಮತ್ತು ಚಂದಾ ಹಣದ ಮೌಲ್ಯ, ಬೇಕಾದ ರಸೀದಿ ಪುಸ್ತಕಗಳ ಮುದ್ರಣ, ಮುಂತಾದ ವಿವರಗಳನ್ನು ಸರಿಯಾಗಿ ನಮೂದಿಸಿ, ಬರುವ ಚಂದಾ ಹಣವನ್ನು, ಖರ್ಚಾಗುವ ಹಣವನ್ನೂ ಬ್ಯಾಂಕಿನ ಪ್ರತ್ಯೇಕ ಖಾತೆಯ ಲೆಕ್ಕಕ್ಕೇ ಹಾಕಬೇಕೆಂದೂ ತೀರ್ಮಾನವಾಯಿತು.

ಬಿಡುಗಡೆ ಸಮಾರಂಭಕ್ಕೆ ನಿಗದಿಯಾದ 4000 ರೂ.ಗಿಂತ ಹೆಚ್ಚಾಗಿ ಖರ್ಚಾಯಿತು. 1800 ಜನ ಚಂದಾದಾರರೂ, 1,80,000 ಚಂದಾ ಹಣವೂ 22.2.1988 ರೊಳಗೆ ಸಂಗ್ರಹವಾಗಿತ್ತು. ಈ ಎಲ್ಲ ಕೆಲಸಕಾರ್ಯಗಳಿಗೆ, ಒಬ್ಬ ಗುಮಾಸ್ತರನ್ನು ನೇಮಕ ಮಾಡಿಕೊಳ್ಳಲೂ ನಿರ್ಧಾರವಾಯಿತು. ಶ್ರೀ ಸುಬ್ರಾಯ ಶರ್ಮರಿಗೆ, 'ಶಂಕರ ಭಾಸ್ಕರ' ಖಾತೆಯಿಂದ, 1.1.88ರಿಂದ ತಿಂಗಳಿಗೆ 500 ರೂ.ಗಳ ಸಂಭಾವನೆಯನ್ನು ಒಪ್ಪಲಾಯಿತು.

'ಶಂಕರ ಭಾಸ್ಕರ' ಹೊರಬಂದ ಸಮಾಚಾರ : ಕಾರ್ಯಾಲಯದ ಪಕ್ಕದಲ್ಲಿ ಹಾಕಿದ್ದ ಶಾಮಿಯಾನದಲ್ಲಿ ಪತ್ರಿಕೆಯ ಬಿಡುಗಡೆಯ ಸಮಾರಂಭವನ್ನು 14.2.88ರ ಸಾಯಂಕಾಲ ಏರ್ಪಡಿಸಿತ್ತು. ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಸನ್ಮಾನ್ಯ ಶ್ರೀ ರಾಮಾಜೋಯಿಸರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾನ್ ಶ್ರೀ ಹೆಚ್. ಎಸ್. ವರದದೇಶಿಕಾಚಾರ್ಯರು (ಶ್ರೀ ಶ್ರೀ ರಂಗಪ್ರಿಯ ಮಹಾದೇಶಿಕೇಂದ್ರರು) ದೀಪ ಬೆಳಗಿಸಿ 'ಶಂಕರ ಭಾಸ್ಕರ'ನಿಗೆ ಪೂಜಿಸಿ, ವಂದಿಸಿ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಕೂಡಲೇ ಸಮಾರಂಭಕ್ಕೆ ಬಂದಿದ್ದ ಎಲ್ಲಾ ಅಧ್ಯಾತ್ಮ ಪ್ರಿಯರಿಗೂ ಉಚಿತವಾಗಿ ಪತ್ರಿಕೆಯನ್ನು ಹಂಚಲಾಯಿತು. "ಆವಿರ್ಭಾವ ತಿರೋಧಾನವಿಲ್ಲದ ಸ್ವಯಂಜ್ಯೋತಿಃ ಸ್ವರೂಪನಾದ ಜ್ಞಾನಭಾಸ್ಕರನಿಗೆ ಬಂಧನವೇ ಇಲ್ಲದ್ದರಿಂದ ಬಿಡುಗಡೆಯೂ ಆಗಬೇಕಾಗಿಲ್ಲ. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಇಂದು 'ಶಂಕರ ಭಾಸ್ಕರ' ಪತ್ರಿಕೆಯ ಬಿಡುಗಡೆಯಾಗಿದೆ. ಈ ಪತ್ರಿಕೆಯು ಚಿರಾಯುವಾಗಿ ಸರ್ವಜನಾದರಣೀಯವಾಗಿ ಬೆಳಗಲಿ" ಎಂದು ಆಶೀರ್ವದಿಸಿದರು. ಮುಖ್ಯ ಅತಿಥಿಗಳಾಗಿದ್ದ ಶ್ರೀ ಎನ್. ರಂಗನಾಥಶರ್ಮರು, "ಪ್ರಸಿದ್ಧ ಭಾಸ್ಕರನು ಹೊರಗಿನ ಕತ್ತಲೆಯನ್ನು ಮಾತ್ರ ನಿವಾರಿಸುತ್ತಾನೆ. ಆದರೆ ಈ 'ಶಂಕರ ಭಾಸ್ಕರ'ನು ಅಂತಃಕರಣದ ಒಳಗಿನ ಅಜ್ಞಾನಾಂಧಕಾರವನ್ನು ನಾಶಮಾಡುತ್ತಾನೆ. ಈ ವೇದಿಕೆಯ ಮೇಲೆ ಮತತ್ರಯಾಚಾರ್ಯರ ಅನುಯಾಯಿಗಳೂ ಉಪಸ್ಥಿತರಾಗಿರುವದೇ ಈ ಪತ್ರಿಕೆಯು ಮತ ಪ್ರಚಾರಕ್ಕಲ್ಲ ಎನ್ನುವದಕ್ಕೆ ಪ್ರತ್ಯಕ್ಷಪ್ರಮಾಣವಾಗಿದೆ" ಎಂದರು.

ಶ್ರೀ ಎನ್. ಎಸ್. ಅನಂತರಂಗಾಚಾರ್ಯರು "ನಿತ್ಯ ಮಂಗಳಸ್ವರೂಪನಾದ 'ಶಂಕರ ಭಾಸ್ಕರ'ನಿಗೆ ಶುಭಾಶಂಸನವೆಂದರೆ ನಮಗೆ ಮಾಡಿಕೊಳ್ಳುವ ಶುಭಾಶಂಸನ" ಎಂದು ಹೇಳಿ, ಪತ್ರಿಕೆಯು ಸನ್ಮಂಗಳಿಂದೊಡಗೂಡಿ ಎಲ್ಲೆಲ್ಲೂ ಎಂದೆಂದಿಗೂ ಬೆಳಗುತ್ತಿರಲಿ" ಎಂಬ ಒಳಿತನ್ನು ಕೋರಿದರು. ಹಿತೋಪದೇಶಕರಾದ ಶ್ರೀ ಎಸ್. ಕೆ. ರಾಮಚಂದ್ರ ರಾಯರು "ಅಪ್ರಿಯಸ್ಯ ಚ ಪಥ್ಯಸ್ಯ ಶ್ರೋತಾವಕ್ತಾಚ ದುರ್ಲಭಃ" ಎಂದು ಪ್ರಾರಂಭಿಸಿ, "ಅಧ್ಯಾತ್ಮ ಕ್ಷೇತ್ರದಲ್ಲೂ ನೂರಾರು ಪತ್ರಿಕೆಗಳಿದ್ದರೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಹೆಸರನ್ನು ಹೊತ್ತು ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ವಿಚಾರ ಧೋರಣೆಯನ್ನು ಅನುಸರಿಸಿ ಶಾಂಕರ ಸಿದ್ಧಾಂತವನ್ನು ಪ್ರಚುರಪಡಿಸುವ ಅಗತ್ಯವಿದ್ದ ಒಂದು ಪತ್ರಿಕೆಯಾಗಿ ಈ 'ಶಂಕರಭಾಸ್ಕರ' ಉದಯವಾಗುತ್ತಿದೆ" ಎಂದರು. ಶ್ರೀ ರಾಮಾಜೋಯಿಸರು, ಅಧ್ಯಕ್ಷ ಪೀಠದಿಂದ "ನ್ಯಾಯಾಲಯಗಳೂ ಸರ್ಕಾರವೂ ಧರ್ಮದ ಚೌಕಟ್ಟಿನಲ್ಲೇ ನಡೆಯಬೇಕು. ಈಗ ಧರ್ಮದ ತಳಹದಿ ಇಲ್ಲದಿರುವದರಿಂದ ಎಲ್ಲೆಲ್ಲೂ ಅನ್ಯಾಯ, ಮೋಸ, ವಂಚನೆ, ದರೋಡೆಗಳು ಹೆಚ್ಚಾಗುತ್ತಿವೆ. ಈ 'ಶಂಕರ ಭಾಸ್ಕರ' ಪತ್ರಿಕೆಯು ಧರ್ಮಜಾಗೃತಿ ಯನ್ನುಂಟುಮಾಡಲಿ" ಎಂದು ಹಾರೈಸಿದರು. ಪೂಜ್ಯ ಶ್ರೀ ಶ್ರೀನಿವಾಸ ಮೂರ್ತಿಗಳು ಶಂಕರರ ಬೆಂಬಳಿಯ ಶಿಷ್ಯರಾದ ಶ್ರೀ ಸುರೇಶ್ವರರು ಮಾಡಿರುವ 'ಆಶೈಲಾತ್...ನಮಃ ಸ್ತಾತ್ ಸದಾ' ಎಂಬ ಶಂಕರ ಭಾಸ್ಕರ ಸ್ತುತಿಯೊಡನೆ ವಂದನಾರ್ಪಣೆ ಮಾಡಿದರು.

ಈ ಶಾಖಾ ಕಾರ್ಯಾಲಯದ ಪ್ರತಿಷ್ಠಾ ಲಾಂಛನವಾಗಿರುವ ಪತ್ರಿಕೆ (ರಕ್ಷಾಪುಟದ ಮುಂಭಾಗದಲ್ಲಿ ಶ್ರೀ ಶಂಕರ ಭಗವತ್ಪಾದರ ಮತ್ತು ಹಿಂಭಾಗದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ ವರ್ಣರಂಜಿತ ಭಾವಚಿತ್ರ ಗಳೊಡನೆ) ಅಸ್ತಿತ್ವಕ್ಕೆ ಬಂದಿತು. ಉದಯಕಾಲದ ಬೆಳಗಾಯಿತು. ಈ ಪತ್ರಿಕೆಗೆ ಬೀಜಾಂಕುರವಾದದ್ದು, ಸುಬ್ರಾಯಶರ್ಮರ ಹೇಳಿಕೆಯಂತೆ ಕಾರ್ಯಸಮಿತಿಯ ಅನುಮೋದನೆ 27.9.87ರಲ್ಲಿ ಸಿಕ್ಕಿದಾಗ. ಮೊಟ್ಟ ಮೊದಲಿನ ಸಂಚಿಕೆಯಲ್ಲಿ, ಜನವರಿ 1988 - ಪತ್ರಿಕೆಯನ್ನು ಹೊರಡಿಸುವ ಮೂಲ ಉದ್ದೇಶ ಹೀಗಿದೆ : "ಭಗವಾನ್ ಶಂಕರರು ಅವರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಉಪದೇಶಿಸಿರುವ ಸಾರ್ವಕಾಲಿಕ ಸಾರ್ವದೇಶಿಕ ಸಾರ್ವಜನೀನವಾದ ನಿತ್ಯನೂತನ ಸತ್ಯಸನಾತನ ದಿವ್ಯ ಸಂದೇಶಗಳನ್ನು ಸರಳವಾದ ಭಾಷೆಯಲ್ಲಿ ಪ್ರಚಾರ ಮಾಡುವ ಸದುದ್ದೇಶದಿಂದ ಈ 'ಶಂಕರ ಭಾಸ್ಕರ'ವು ಉದಯವಾಗುತ್ತಿದೆ."

ಮೊದಲ ಲೇಖನ ಶ್ರೀಶ್ರೀಗಳವರ 'ಶಂಕರ ತತ್ತ್ವ'. ಹಿಂದೆಯೇ ಶ್ರೀಶ್ರೀಗಳ ವರು ಬರೆದಿದ್ದ ಈ ಲೇಖನವನ್ನು ಈಗ ಸಮಯೋಚಿತವಾಗಿ ಬಳಸಿಕೊಳ್ಳಲಾಗಿತ್ತು. ಅವರಿಗಿಂತ ಸರಳವಾಗಿ ಲೇಖನಗಳನ್ನು ಬರೆದವರು, ಬರೆಯುವವರು ವಿರಳರಲ್ಲದೆ,

ಶಿಷ್ಯರೇ ಪ್ರಾರಂಭಿಸುತ್ತಿರುವ ಈ ಪತ್ರಿಕೆಗೆ ಅವರ ಲೇಖನವೇ ಅಗ್ರ ಕೊಡುಗೆಯಾಗಿ ದೊರಕಿತು ಎನ್ನಬಹುದು. (ಅವರ ಮತ್ತೊಂದು ಲೇಖನವೂ ಇದರಲ್ಲಿದೆ) ಶ್ರೀಶ್ರೀಗಳವರ ಒಂದಾದರೂ ಲೇಖನ ಮುಂದಿನ ಸಂಚಿಕೆಗಳಲ್ಲಿ ಬಂದಿದೆ.

ಉತ್ತಮ ವಿದ್ವಾಂಸರುಗಳ ಲೇಖನಗಳೂ ಕ್ರಮವಾಗಿ ಬರತೊಡಗಿದುವು. ಸಾಮಾನ್ಯವಾಗಿ ಈ ಲೇಖನಗಳೆಲ್ಲವೂ ಎರಡು ಮೂರು ಪುಟ ಮಾತ್ರ ಇರುತ್ತಿದ್ದು ದೊಂದು ಇಲ್ಲಿನ ವಿಶೇಷ. ಉತ್ತಮ ಬಿಳಿಯ ಕಾಗದ, ಮುಖ ಪುಟದಲ್ಲಿ ದೇವತೆ ಅಥವಾ ಸದ್ಗುರುಗಳ ವರ್ಣರಂಜಿತ ಚಿತ್ರಗಳೂ ಯಾವಾಗಲೂ ಬರುತ್ತಿವೆ ಆಗಿನಿಂದ ಈವರೆಗೂ. ಹಾಗೆಯೇ ಪುಟಗಳ ಸಂಖ್ಯೆಯೂ 48. ಅಪರೂಪಕ್ಕೆ ಇದು 50, 52, 56 ಆದದ್ದುಂಟು. ಕೊನೆಯ ರಕ್ಷಾಪುಟದ ಹಿಂದಿನಲ್ಲಿ 'ಶಂಕರ ಬೋಧಾಮೃತ'ವೆಂಬ ಉತ್ತಮ ಶಾಂಕರ ಸಂದೇಶವೂ, ಅವರ ಭಾಷ್ಯವಾಕ್ಯಗಳಿಂದುದ್ಧರಿಸಿ, ವಿವರಣಾತ್ಮಕ ಅರ್ಥದೊಡನೆ ಬರುತ್ತಿದೆ. ಮುಖ ಚಿತ್ರಗಳ ದೇವತಾಸ್ತುತಿ, ಶಂಕರಭಾಸ್ಕರ ಸ್ತುತಿ, ಸಂಪಾದಕೀಯ, ಶಂಕರ ಬೋಧಾಮೃತ, ನಾಲ್ಕು ಅಥವಾ ಹೆಚ್ಚು ಪುಟಗಳ ಚಂದಾದಾರರ ನಾಮಾವಳಿ - ಇವು ಪ್ರತಿ ಸಂಚಿಕೆಯಲ್ಲೂ ಬರುತ್ತಿದ್ದ ಸ್ಥಿರಶೀರ್ಷಿಕೆ ಗಳು. ಮೊದಲ ಹಲವಾರು ಸಂಚಿಕೆಗಳಲ್ಲಿ ಸಂಪಾದಕೀಯವೆಂಬುದು ಕೇವಲ ಚಂದಾ ದಾರರಿಗಾಗಿ ಮಾಡುವ ಮನವಿಗಳೇ.

ಎರಡನೆ ವರ್ಷದಿಂದ 'ಆಶ್ರಮಾಂತರಂಗ' ಎಂಬ ಪುಟ ಬರಲು ತೊಡಗಿತು. ಸಂಪಾದಕರ ಪ್ರವಚನಗಳ ವಿವರ, ಇತರ ಕಾರ್ಯಕ್ರಮಗಳ ಸುದ್ದಿಯಷ್ಟೇ ಇದರಲ್ಲಿ ಬರುತ್ತಿದ್ದ ಮುಖ್ಯ ವಿಚಾರ. ಒಂದೆರಡು ವರ್ಷಗಳ ನಂತರ ಇದು ಕಾಣೆಯಾಯಿತು. ಈ ಹಂತದಲ್ಲೇ, ಶ್ರೀಶ್ರೀಗಳವರು ತಮ್ಮ ಗೃಹಸ್ಥಾಶ್ರಮ ದಲ್ಲಾಗಲೀ, ಸಂನ್ಯಾಸ ದೀಕ್ಷೆ ಪಡೆದ ಮೇಲಾಗಲೀ, 55 ವರ್ಷಗಳ ಕಾಲದಲ್ಲಿ ಕಾರ್ಯಾಲಯವೇ ಎಂದಿದ್ದ, ಹಾಗೆಂದೇ ಅವರು ಎಂದಿಗೂ ಪರಿಗಣಿಸಿ, ತಾವು ಮೊದಲಿನಿಂದಲೂ, ಅನಂತರದಲ್ಲೂ ವಿರಾಗಿಯಾಗಿದ್ದಾಗಲೂ, ಊರಿನ ಗಡಿಬಿಡಿ ಯಿಂದ ದೂರ ನಿಂತು ಕುಟೀರವನ್ನು ಹಾಕಿಕೊಂಡಾಗಲೂ, 'ಆಶ್ರಮ'ವಾಗದೆ, 'ಆಶ್ರಮ'ವೆಂದು ಕರೆಸಿಕೊಳ್ಳದ ಕಾರ್ಯಾಲಯ ಶ್ರೀಶ್ರೀಗಳ ನಿರ್ಯಾಣಾನಂತರ 'ಆಶ್ರಮ'ವೆನಿಸಿಕೊಳ್ಳಲು ಶುರುವಾದದ್ದು, ಇದೊಂದು ಅಚ್ಚರಿ ಹಾಗೂ ಒಪ್ಪದ, ಗಂಟಲಿಗೆ ಇಳಿಯದ ನಾಮಕರಣ.

ರೇಖಾ ಚೌಕಟ್ಟಿನಲ್ಲಿ ತಮ್ಮ ಪ್ರವಚನಗಳು, ಪತ್ರಿಕೆಯ ಚಂದಾ ಪ್ರಗತಿ ಇವುಗಳನ್ನು ಹಾಕುವದೂ ಒಂದು ಹೊಸ ರೀತಿಯಾಯಿತು. ವಿನೂತನ ಪ್ರಚಾರ ದಿಂದ ಕೆಲವಾರು ಸಾವಿರ ಚಂದಾದಾರರು ಪತ್ರಿಕೆಗೆ ದೊರಕಿ ಇದೊಂದು ದಾಖಲೆ

ಯಾಯಿತು. ಎಲ್ಲಕ್ಕೂ ಹೆಚ್ಚಾಗಿ ಉತ್ತಮ ಬರಹಗಾರರ, ವೇದಾಂತ ವಿದ್ವಜ್ಜನರ ಸೊಗಸಾದ ಲೇಖನಗಳಿಂದ ಪತ್ರಿಕೆ ಶೋಭಿಸಿತು. ಇದರಿಂದಾಗಿ ಮೂರೇ ವರ್ಷಗಳಲ್ಲಿ 128 ಪುಟಗಳ ವಿಶೇಷ 'ದರ್ಶನ' ಸಂಚಿಕೆಯು ಹೊರಬಂತು. ಜಾಹಿರಾತಿಗೆ ಬದಲಾಗಿ ಇದರಲ್ಲೂ, ಇದರ ಹಿಂದಿನ ಎರಡು ಸಂಚಿಕೆಗಳಲ್ಲೂ ಪ್ರತಿಯೊಂದು ಪುಟಕ್ಕೂ ದಾನಿಗಳನ್ನು ತಂದಿದ್ದೊಂದು ಹೊಸ ವಿಚಾರ.

ಈ ತೆರನ ಪ್ರಚಾರವೂ ಪತ್ರಿಕೆಯ ಒಂದು ಅಂಗವೇ ಆಯಿತು. ಒಂದು ಪುಟದಿಂದ ಕೆಲವು ಪುಟಗಳವರೆಗೂ ಇದಕ್ಕಾಗಿ ಮೀಸಲಾಯಿತು. 'ಸಂಪಾದಕೀಯ' ದಲ್ಲಿ ಅಲ್ಲದೆ, ಉಳಿದ ಪುಟಗಳಲ್ಲೂ ಈ ವಿಷಯಗಳು ಬರತೊಡಗಿದುವು. ಪತ್ರಿಕೆಯಲ್ಲಿ ಯಾವ ಜಾಹಿರಾತು ಇಲ್ಲದಿದ್ದರೂ, ಪತ್ರಿಕೆ, ಪುಸ್ತಕ, ಸ್ವವಿಚಾರಗಳ ವಿಷಯ ಆಗಾಗ ತಲೆ ಹಾಕುತ್ತಿತ್ತು. ಉದಾಹರಣೆಗೆ, 1988ರ ಡಿಸೆಂಬರ್‌ನ ಸಂಪಾದಕರ ಸುವರ್ಣ ಜನ್ಮ ದಿನಾಚರಣೆಯ ವಿಷಯ ಜುಲೈ, ಅಕ್ಟೋಬರ್, ಜನವರಿ 1989ರ ಪತ್ರಿಕೆಗಳಲ್ಲಿ ವಿಶದವಾಯಿತು. ಕಾಣಿಕೆ 1001, 2001, 5001, 10001 ರಿಂದ ಸಂಪಾದಕರಿಗೆ ಕಾಣಿಕೆ ಮತ್ತು ಕಾರು (ಫಿಯಟ್) ಸಮರ್ಪಣೆಗೆಂದು, ಅಂದಿನ ವಿದ್ವಾಂಸರ ಸನ್ಮಾನಕ್ಕೆಂದು ಒಟ್ಟು 3 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡುವ ಉದ್ದೇಶದ ಮನವಿಗಳು ರೇಖಾ ಚೌಕಟ್ಟಿನಲ್ಲಿ ಬಂದವು. ಅವರ ಉಪನ್ಯಾಸಗಳ ಕ್ಯಾಸೆಟ್‌ಗಳಿಗೆ, ವಿಶೇಷವಾಗಿ ಅವರ ಪ್ರಥಮ ಪುಸ್ತಕ ಶಾಂಕರ ಸಂವತ್ಸರಕ್ಕಾಗಿ 2001ರ ಜುಲೈ , ಅಕ್ಟೋಬರ್‌ಗಳಲ್ಲಿ ತಲಾ ನಾಲ್ಕು ಪುಟಗಳು, ಅನಂತರ ಅದರ ಶ್ಲಾಘನಾ ಪತ್ರಗಳ 3 ಪುಟಗಳು ಇವು ಕೆಲವು ಗಮನ ಸೆಳೆಯುವ ಅಂಶಗಳು.

'ಶಂಕರ ಭಾಸ್ಕರ'ದ ಹೆಚ್ಚಳ ಅದರ ಸುಂದರ ದೇವತಾ ಚಿತ್ರಗಳ ಮುಖಪುಟ. ಒಳಗೆ ಈ ದೇವತಾಸ್ತುತಿಯ ಸಂಪಾದಕ ವಿರಚಿತ ಶ್ಲೋಕಗಳು, 'ಶಂಕರ ಭಾಸ್ಕರ' ಸ್ತುತಿ, ಶಾಂಕರ ವೇದಾಂತದ ಸುಮಾರು 20 ಲೇಖನಗಳು, 2 ಇಂಗ್ಲಿಷ್ ಲೇಖನಗಳು, ಸುಂದರ ಮುದ್ರಣ, ಜಾಹಿರಾತು ಇಲ್ಲದುದು ಇವುಗಳು. ಲೇಖನಗಳಾದರೋ ಅತ್ಯುತ್ತಮ ವಿದ್ವಾಂಸರುಗಳಾದ ಶ್ರೀ ಎಸ್.ಕೆ. ರಾಮಚಂದ್ರ ರಾಯರು, ಶ್ರೀ ಎನ್. ರಂಗನಾಥ ಶರ್ಮರು, ಅಷ್ಟೇ ಉತ್ತಮರಾದ ಶ್ರೀ ಎಸ್.ವಿ. ಶಾಮಭಟ್ಟರು, ಶ್ರೀ ಆರ್. ಗಣೇಶ್, ಶ್ರೀ ಲಕ್ಷ್ಮೀ ನರಸಿಂಹ ಮೂರ್ತಿಗಳು, ಶ್ರೀ ಬಿ.ಆರ್. ಸತ್ಯನಾರಾಯಣರು (ಗಜಾನನ), ಶ್ರೀ ಪಿ.ಎಸ್. ನಾರಾಯಣ ರಾಯರು, ಶ್ರೀ ಸುಬ್ರಾಯ ಶರ್ಮರು ಮುಂತಾದವರು. ಶ್ರೀಶ್ರೀಗಳವರ ಒಂದು ಲೇಖನವೂ ಇರುತ್ತಿತ್ತು, ಗಜಾನನ ಅವರ 'ಶಾಂಕರ ಸುಭಾಷಿತಾನಿ', ಸುಬ್ರಾಯಶರ್ಮರು ಹೊರಗಡೆ ಮಾಡಿದ ಉಪನ್ಯಾಸಗಳ ನಂತರ ನಡೆಯುತ್ತಿದ್ದ "ಪ್ರಶ್ನೋತ್ತರಗಳು", ಶ್ರೀ ಎಂ.ವಿ. ರಾಮಚಂದ್ರರ ಇಂಗ್ಲಿಷ್

ಲೇಖನಗಳು, 1999ರಿಂದ ಶ್ರೀ ಮಹದೇವಸಿಂಹರ 'ಶಂಕರಭಾಸ್ಕರ' ಸಿಂಹಾವಲೋಕನ - ದಶಮಾನಗಳ ಹಿಂದೆ (ಇದು 2001ರ ನಂತರ ನಿಂತಿತು), ಅಕ್ಟೋಬರ್ 2000 ದಿಂದ ನಾಲ್ಕು ಸಂಚಿಕೆಗಳವರೆಗೆ ಬಂದ 'ಸ್ಪಂದನ'-(ಕೇವಲ ಪ್ರಶಂಸಾ ಪತ್ರಗಳೇ ಆಗಿ, ಲೇಖನಗಳ ವಿಮರ್ಶೆಯಾಗಲೀ, ಅವಶ್ಯವೆನಿಸುವ ಸುಧಾರಣೆಗಳ ಸಲಹೆಗಳಾಗಲೀ ಇಲ್ಲದ್ದರಿಂದ, ಇದಕ್ಕೆ ವಿನಿಯೋಗವಾಗುತ್ತಿದ್ದ ಎರಡು ಪುಟಗಳನ್ನು ಲೇಖನಗಳಿಗೇ ಉಪಯೋಗಿಸುವ ಸಲುವಾಗಿ ಇದನ್ನು ನಿಲ್ಲಿಸಲಾಯಿತು), ಪಿ.ಎಸ್. ನಾರಾಯಣರಾಯರ ಲೇಖನಗಳಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ದೃಷ್ಟಾಂತಗಳು, ಇವು ಸಾಮಾನ್ಯವಾಗಿ ಕಾಣಬರುತ್ತಿದ್ದುವು.

2001ರಲ್ಲಿ ಹೊಸ ಸಮಿತಿ ಅಸ್ತಿತ್ವಕ್ಕೆ ಬಂದ ಮೇಲೆ, ಅದರ ಪರಿಣಾಮ ಪತ್ರಿಕೆಯ ಮೇಲೂ ಆಯಿತು. 2001ರ ಅಕ್ಟೋಬರ್ ಪತ್ರಿಕೆಯಲ್ಲಿ 'ಶಾಂಕರ ಸಂವತ್ಸರ' ಬಿಡುಗಡೆಯ ಸಮಾರಂಭ ಕಾರ್ಯ ಸಮಿತಿಯ ಹೆಸರಿನಲ್ಲಿ ಆಹ್ವಾನ ಗಳೆರಡೂ ಮೊದಲು ಸಮಿತಿಗೆ ತಿಳಿದದ್ದು ಪತ್ರಿಕೆ ಅಚ್ಚಾಗಿ ಬಂದ ಮೇಲೆಯೇ. ಹಾಗಾಗಿ, ಮೊದಲು ಲೇಖಕರೇ ಏರ್ಪಾಡುಮಾಡಿಕೊಳ್ಳಲು ಕೇಳಿದ್ದ ಸಮಾರಂಭ ವನ್ನು ಸಮಿತಿಯೇ ವಹಿಸಿಕೊಂಡಿತು. ಆ ದಿನದ ಕಾರ್ಯಕ್ರಮವೇನೋ ಯಶಸ್ವಿಯೇ ಆಯಿತು.

ಪತ್ರಿಕೆಯ ಮಾಲೀಕತ್ವ ಕಾರ್ಯಾಲಯದ್ದೇ ಆಗಿ, ಕಾರ್ಯಾಲಯದ ಎಲ್ಲ ಆಡಳಿತ, ಕೆಲಸಗಳೂ ಸಮಿತಿಯದೇ ಆಗಿದ್ದುದರಿಂದ, ಪತ್ರಿಕೆಯಲ್ಲಿ ಕೆಲವು ಸುಧಾರಣೆಗಳನ್ನು ತರಲು ಸಮಿತಿ ಉದ್ದೇಶಿಸಿತು. ಅಧ್ಯಾತ್ಮರಂಗದಲ್ಲಿ ನಾಲ್ಕು ಸಾಲಿನ ಬಿರುದಾವಳಿ ಬರುವುದು ಸಂಪಾದಕರಿಗೂ, ಪತ್ರಿಕೆಗೂ ಗೌರವವಲ್ಲ ಎಂಬುದನ್ನು ಸಂಪಾದಕರಿಗೆ ತಿಳಿಸಿತು. ಶ್ರೀಶ್ರೀಗಳವರೇ ತಮಗೆ ಶ್ರೀಮನ್ಮಹಾರಾಜರಿಂದ ಬಂದ ಬಿರುದನ್ನೇ ಬಳಸದೆ ಇದ್ದು, ಅವರ ಶಿಷ್ಯರೇ ಈ ರೀತಿ ಬಿರುದಾವಳಿಯ ಪತಾಕೆಯನ್ನು ಹಾರಿಸುವುದು, ಶ್ರೀಗಳವರ, ಕಾರ್ಯಾಲಯದ ನಡೆಯ ಸರಳತೆಗೆ ಹೊಂದುವದಿಲ್ಲ ಎಂಬುದೇ ಕಾರಣ. ಸಂಪಾದಕರು ಅದನ್ನು ತೆಗೆದರೂ, ಹಾಗೆ ಒಂದೇ ಸಲ ಎಲ್ಲವನ್ನೂ ತೆಗೆಯುವದು ಸರಿಯಲ್ಲ ಎಂದು ಸಮಿತಿ ಅದರಲ್ಲಿ ಎರಡು ಸಾಲನ್ನು ಉಳಿಸಿತು. ಪ್ರಕಟಣೆಗೆ ಮುನ್ನ ಲೇಖನಗಳನ್ನು ನೋಡಲು ಬಯಸಿತು.

ಹೊಳೆನರಸೀಪುರದ ಪತ್ರಿಕೆಗೆ ಶ್ರೀಶ್ರೀಗಳವರ ಕಾಲದಿಂದಲೂ ಸಂಪಾದಕ ಮಂಡಳಿ ಇದ್ದೇ ಇತ್ತು, ಈಚೆಗೆ ಅದು ಬಿಟ್ಟು ಹೋಗಿತ್ತು, ಪತ್ರಿಕೆಯು ಕ್ರಮವಾಗಿ ಮುಂದುವರಿಯುವದಕ್ಕೆ ಒಬ್ಬರನ್ನೇ ಹೊಣೆ ಮಾಡುವ ಬದಲು ಈಗ ಅಲ್ಲಿಯ ಸಂಪಾದಕರ ವೃದ್ಧಾಪ್ಯದ ಕಾರಣ ಸಂಪಾದಕ ಮಂಡಲಿಯನ್ನು ಪುನಃ ಜಾರಿಗೆ

ತರುವದು ಯೋಗ್ಯವಾದುದು, ಹಾಗೆ ಮಾಡುವಾಗ ಇಲ್ಲೂ ಒಂದು ಮಂಡಲಿ ಅವಶ್ಯವೆನ್ನುವುದು ಕಾರ್ಯ ಸಮಿತಿಗಿಂತ ಹೆಚ್ಚಾಗಿ ಟ್ರಸ್ಟ್ ಸಮಿತಿಗೆ ಕಂಡಿತು. ಅದರಂತೆ ಜುಲೈ 2002ರಲ್ಲಿ ಎರಡು ಪತ್ರಿಕೆಗಳಿಗೂ ಸಂಪಾದಕ ಮಂಡಳಿಗಳನ್ನು ರಚನೆ ಮಾಡಿತು. ಶ್ರೀಶ್ರೀಗಳ ಹಿರಿಯ ವಿದ್ಯಾರ್ಥಿ ಶ್ರೀ ಯಜ್ಞನಾರಾಯಣ ಶಾಸ್ತ್ರಿಗಳನ್ನು, ಸಮಿತಿಯ ಅಧ್ಯಕ್ಷ ಶ್ರೀ ಡಿ. ಗಣಪತಿ ಶಾಸ್ತ್ರಿಗಳನ್ನೂ ಈ ಮಂಡಳಿಗೆ ಆರಿಸಲಾಯಿತು. ಸಾಮಾನ್ಯವಾಗಿ, ಲೇಖನಗಳನ್ನು ಪರಿಶೀಲಿಸಿದರೂ ಹೆಚ್ಚಾಗಿ ಹಸ್ತಕ್ಷೇಪ ಬೇಡವೆನ್ನುವದು ಧ್ಯೇಯ. ಇಲ್ಲಿ ಮಾಡಿದ, ಸಲಹೆಗೆ ಬಂದ ಮಾರ್ಪಾಡುಗಳಿಗೆ ಹಿರಿಯ ಶ್ರೀ ಶಾಸ್ತ್ರಿಗಳ ಸಮ್ಮತಿಯನ್ನೂ ಕೇಳಲಾಗುತ್ತಿತ್ತು. ಹಾಗೆ ಮಾಡಿದ, ಅಲ್ಪ ಸ್ವಲ್ಪ ಬದಲಾವಣೆಗಳೂ ಕೇವಲ ಪತ್ರಿಕೆಯ ಸುಧಾರಣೆಯ ದೃಷ್ಟಿಯಿಂದಲೇ ಆಯಿತು. ಕ್ರಮೇಣ, ಒಂದೆರಡು ಸಂಚಿಕೆಗಳಲ್ಲೆ ಸಂಪಾದಕರು ತಮ್ಮ ಕಾರ್ಯವನ್ನು ಕಡಿಮೆಮಾಡಿಕೊಂಡರು. ಬರುಬರುತ್ತಾ ಅವರು ತರುತ್ತಿದ್ದ, ಅವರೇ ಬರೆಯುತ್ತಿದ್ದ ಲೇಖನಗಳು ಕಡಿಮೆಯಾದವು. ಎಷ್ಟರಮಟ್ಟಿಗೆಂದರೆ, 2005ರಿಂದ ಕೇವಲ 3 ಪುಟ. ಸಂಪಾದಕ ಮಂಡಳಿಯ ಸಹಾಯಕ್ಕೆಂದು ನೇಮಕವಾದ ಸದಸ್ಯರು ಲೇಖನಗಳನ್ನು ತರಿಸುವ, ಅವುಗಳನ್ನು ಪುಟಕ್ಕೆ ಹೊಂದಿಸುವ, ಕರಡು ತಿದ್ದುವ ಎಲ್ಲ ಕೆಲಸದ ಜೊತೆಗೆ ಅಚ್ಚಾದ ಪತ್ರಿಕೆಗಳನ್ನು ವಿತರಣೆ ಮಾಡುವ ಸಂಪೂರ್ಣ ಕೆಲಸವನ್ನೂ ನಿರ್ವಂಚನೆಯಿಂದ ಮಾಡಿದರು. ಪತ್ರಿಕೆಯನ್ನು ಕಳಿಸುವ ವ್ಯವಸ್ಥೆ ಹೊಸ ಕಮಿಟಿ ಬಂದಾಗಿನಿಂದ (2001) ಅವರ ಹೆಗಲಿಗೇ ಬಂದಿತ್ತು. ಶ್ರೀ ಯಜ್ಞನಾರಾಯಣ ಶಾಸ್ತ್ರಿಗಳ ಅನಂತರ ಕಾರ್ಯಾಲಯ ಸಮಿತಿಯಿಂದ ಒಬ್ಬರನ್ನು ನೇಮಕ ಮಾಡಲಾಯಿತು. ಕರಡನ್ನು ನೋಡಿ, ತಿದ್ದುಪಡಿ ನೋಡುವದರ ಜೊತೆಗೆ, ಅವರಿಗೂ ಶ್ರೀ ಗಣಪತಿ ಶಾಸ್ತ್ರಿಗಳಿಗೂ ಲೇಖನಗಳನ್ನೂ ಹೊಂದಿಸುವ ಕೆಲಸವೂ ಬಂತು.

2001-02 ರಿಂದ 'ಕಾರ್ಯಾಲಯದ ಸಮಾಚಾರ' ಎಂಬಡಿಯಲ್ಲಿ ಇಲ್ಲಿಯ ವರದಿಗಳೂ, ಶ್ರೀಶ್ರೀಗಳವರ ಹಿಂದಿನ ಸೂಚನೆಗಳಂತೆ, ಆಯಾಯ ಹಿಂದಿನ ಮೂರು ತಿಂಗಳ ವರಮಾನ ವೆಚ್ಚಗಳೂ ಬಂದುವು. ಶ್ರೀಶ್ರೀಗಳವರ ಎರಡು ಲೇಖನಗಳನ್ನು, ಹಿಂದಿನೊಡನೆ ಈಗ ಸಂಪರ್ಕವಿರಬೇಕೆಂದು ಆ ದಿನಗಳ ಲೇಖನಗಳನ್ನು ಒಂದೆರಡು ಹಾಕಲಾಯಿತು. ಶ್ರೀ ವಿವೇಕಾನಂದ ಸ್ವಾಮಿಗಳು, ಶ್ರೀ ಚಿದಂಬರಯ್ಯನವರ ಉತ್ತಮವಾದ ಪುಸ್ತಕಗಳ ಸಂಕ್ಷೇಪಿತ ಭಾಗಗಳು, ಮತ್ತೊಂದಿಬ್ಬರ ಲೇಖನಗಳೂ, ಇವುಗಳಲ್ಲಿ ಸಂಚಿಕೆಗೆ ಒಂದು ಅಥವಾ ಎರಡರಂತೆ ಬರಲಾಯಿತು. ಒಂದೆರಡು ಸಂದರ್ಭಗಳನ್ನು ಬಿಟ್ಟರೆ, ಆಗ ಕೇವಲ 14-15 ಲೇಖನಗಳಾದುವು. ಕಾರಣ, ಕೆಲವು ಲೇಖನಗಳು ಉದ್ದವಾಗಿದ್ದುವು. ಮಿಕ್ಕಂತೆ 18-20 ಲೇಖನಗಳಿರುತ್ತಿದ್ದುವು. 1988ರಿಂದ ಈವರೆಗಿನ ವಿಶೇಷಗಳನ್ನು ಉಳಿಸಿಕೊಂಡು ಲೇಖನಗಳನ್ನು

ಹೊಸ ಲೇಖಕರಿಂದಲೂ ಸ್ವೀಕರಿಸಲಾಯಿತು. ಭಾಷ್ಯಗಳ ಸಂಸ್ಕೃತ ಭಾಗವನ್ನು ತಿಳಿಯಲು ಸಾಮಾನ್ಯ ಓದುಗರಿಗೆ ಕಷ್ಟವಾದೀತೆಂದು, ಲೇಖನಗಳನ್ನು ಸಾಧ್ಯವಾದಷ್ಟೂ ಸರಳಮಾಡಿ, ವೇದಾಂತ ತತ್ತ್ವಗಳನ್ನು ತಿಳಿಯಾಗಿ ಹೇಳಲಾಗುತ್ತಿದೆ. ಶ್ರೀಶ್ರೀಗಳವರ ಉದಾರ ಮನಸ್ಸಿನ, ವಿಶಾಲ ಹೃದಯದ ಭಾವನೆಯಂತೆ, ಅಲ್ಲೊಂದು ಇಲ್ಲೊಂದು ಅನ್ಯ ಮತಗಳ ಲೇಖನಗಳೂ ಬಂದಿವೆ. ಸಾಧನಗಳ ವಿಶೇಷಗಳನ್ನು ಆಧ್ಯಾತ್ಮತತ್ತ್ವ ತಿಳಿಯಲು ಬಯಸುವ ಸಾಮಾನ್ಯ ಓದುಗರಿಗಾಗಿ ಹಾಕಿದೆ. ಇದಕ್ಕೂ ಕಾರಣ, 11,500 ಚಂದಾದಾರರಲ್ಲಿ ಉತ್ತಮಾಧಿಕಾರಿಗಳು ಎಷ್ಟು ಜನರಿದ್ದಾರೆ, ಹಾಗಿದ್ದವರಿಗೂ ಊಟದ ಉಪ್ಪಿನ ಕಾಯಿಯಂತೆ ಮಾತ್ರವಿದ್ದು ಹೊಟ್ಟೆ ತುಂಬದ ಇಂತಹ ಕೆಲವು ಗಂಭೀರ ಲೇಖನಗಳಿಂದ ಆಗುವದಾದರೂ ಏನು, ಹಾಗೂ ಅವರನ್ನೇ ಗಮನದಲ್ಲಿಟ್ಟರೂ, ಉಳಿದ ಬಹುದೊಡ್ಡ ಸಂಖ್ಯೆಯ ಓದುಗರಿಗೆ ಹೆಚ್ಚಿನ ಉಪಯೋಗವನ್ನೂ ಚಿಂತಿಸಬೇಕಲ್ಲ ! ತಿಳಿದವರು, ಕೆಲವರು ಇದನ್ನು ಒಪ್ಪದಿರಬಹುದು, ಸ್ವಲ್ಪ ಮಟ್ಟಿಗೆ ಪರಿಸ್ಥಿತಿಯ ಅರಿವಿರುವವರು ಅರ್ಥಮಾಡಿಕೊಳ್ಳಬಲ್ಲರು. ಹೇಗಾದರೂ, ಈ ಪತ್ರಿಕೆಯು ತನ್ನ ಹೊಸ ರೀತಿಯಲ್ಲಿ ಈಗ ಬಹಳ ಜನರಿಗೆ ಉಪಯುಕ್ತವಾಗಿದೆ ಎಂದು ಒಂದು ಅಭಿಪ್ರಾಯ.

'ಶಾಂಕರ ಸಂವತ್ಸರ' 2001 ಅಕ್ಟೋಬರ್‌ನಲ್ಲಿ ಪ್ರಕಟವಾದ ಒಂದು ತಿಂಗಳಲ್ಲೇ 3000 ಪ್ರತಿಗಳೂ ಖರ್ಚಾಗಿ ಎರಡನೆಯ ಮುದ್ರಣದಲ್ಲಿ 2000 ಪ್ರತಿಗಳನ್ನು ಅಚ್ಚು ಮಾಡಿಸುವಾಗ, ಇನ್ನೂ 16 ಪುಟಗಳನ್ನು ಸೇರಿಸಿ, ಅದರಲ್ಲಿ ಪುಸ್ತಕದ ಬಗ್ಗೆ ಬಂದ ಪಂಡಿತರುಗಳ, ವಾಚಕರ ಅಭಿಪ್ರಾಯಗಳನ್ನೂ ಕಾಣಿಸಬೇಕೆಂದು ಶ್ರೀ ಶರ್ಮರ ಅಭಿಪ್ರಾಯವಿತ್ತು. ಅದರ ಬದಲಿಗೆ, ಈಗಿನ 'ದಿನಕ್ಕೊಂದು ಸಂದೇಶ'ದ ಜೊತೆಗೆ, ಮಾಸಕ್ಕೊಂದರಂತೆ 12 ಸಂದೇಶಗಳನ್ನು ಬರೆದು, ಉಳಿದ 4 ಪುಟಗಳಲ್ಲಿ ಅಭಿಪ್ರಾಯಗಳನ್ನು ಸಂಗ್ರಹವಾಗಿ ಬರೆದರೆ, ಓದುಗರಿಗೆ ಹೆಚ್ಚು ಲಾಭ ಎಂದು ಸಮಿತಿ ಸೂಚಿಸಿತು. ಅದರಂತೆ, ಬರೆದ 12 ಮಾಸಗಳ ಸಂದೇಶಗಳ, 12 ಪುಟಗಳನ್ನು 'ಶಂಕರ ಭಾಸ್ಕರ'ದ ಏಪ್ರಿಲ್ 2002ರ ಸಂಚಿಕೆಯಲ್ಲಿ ಪ್ರಕಟಿಸಿತು.

ಚಂದಾದಾರರು - ಸಂಖ್ಯೆ, ದರ : 1988ರಲ್ಲಿ ಪ್ರಾರಂಭವಾದ ಪತ್ರಿಕೆಗೆ ಕೇವಲ ನಾಲ್ಕು ವರ್ಷಗಳಲ್ಲಿ (1992ರಲ್ಲಿ) ಹತ್ತು ಸಾವಿರವನ್ನೂ ಮೀರಿದ ಚಂದಾದಾರರಿದ್ದರು ಎಂದು 1992ರ ಪತ್ರಿಕೆ ತಿಳಿಸುತ್ತದೆ. 1998ರ ಕೊನೆಗೆ ಈ ಸಂಖ್ಯೆ 11,350, 2001ರ ಜುಲೈಗೆ 15,000 ಎಂದು ತಿಳಿಸಿತ್ತು. ಈ ಸಂಖ್ಯೆಗಳು ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷಿತವಾದರೂ, ಹೆಚ್ಚಿನ ಸಂಖ್ಯೆಯ ಚಂದಾದಾರರು ಒಂದು ದಾಖಲೆಯನ್ನೇ ಮಾಡಿದರು ಎನ್ನುವದು ನಿರ್ವಿವಾದ. ಹೊಸ ಸಮಿತಿ ಬರುವಾಗ, ಅದಕ್ಕೆ ಮೊದಲು

15000 ಪತ್ರಿಕೆಗಳನ್ನು ಮುದ್ರಿಸಿದ್ದರು. ಅದರಲ್ಲಿ ಒಂದು ಸಾವಿರಕ್ಕೆ ಸಮೀಪದಷ್ಟು ಪತ್ರಿಕೆಗಳು ಉಳಿದಿದ್ದುವು. ಹೀಗೆಯೇ ಆ ಒಂದೆರಡು ತ್ರೈಮಾಸಗಳಲ್ಲಿ, ಇಷ್ಟು ಹೆಚ್ಚಲ್ಲವಾದರೂ, ಸಾಕಷ್ಟು ಹೆಚ್ಚಿನ ಸಂಖ್ಯೆಯ ಪತ್ರಿಕೆಗಳು ಮುದ್ರಣವಾಗುತ್ತಿತ್ತು. ಚಂದಾನವೀಕರಿಸದ ವಾರ್ಷಿಕ ಚಂದಾದಾರರು, 1990-92ರಲ್ಲಿ 50 ರೂ. ಕಟ್ಟಿ ಮುಂದೇನೂ ಕಟ್ಟದಿದ್ದರೂ 'ಡಿ' (ಆಜೀವಸದಸ್ಯ) ಶ್ರೇಣಿಯಲ್ಲೇ ಉಳಿದು ಸುಮಾರು ಆರೆಂಟು ವರ್ಷಗಳು ಪತ್ರಿಕೆ ಬರುತ್ತಿದ್ದವರು, ದ್ವಿಪ್ರತಿಗಳು ಇವೆಲ್ಲಾ ಚಂದಾ ಸಂಖ್ಯೆಯನ್ನು ಕೃತಕವಾಗಿ ಏರಿಸಿದ್ದುವು. ಇದು ದಂಡವೆಂದು ಅನಿಸಿದ್ದರಿಂದ, ಒಂದು ಶೀಘ್ರ ಸಮೀಕ್ಷೆಯಿಂದ ಸುಮಾರು 500 ರಿಂದ 1000 ಪತ್ರಿಕೆಗಳನ್ನು ಕಡಮೆ ಮಾಡಬಹುದಾಯಿತು. ಆಗಾಗ ನಿಧಾನವಾಗಿ, ಬಿಡುವಾದಾಗ ಕೆಲವನ್ನು ಪರಿಶೀಲಿಸಿದಾಗ ಹಾಗೆಯೇ 13000ಕ್ಕೆ, ಅನಂತರದ ಪೂರ್ಣ ಪರಿಶೀಲನೆಯಿಂದ ಅದು ಇನ್ನೂ ತಗ್ಗಿ ಈಗ ಸುಮಾರು 11,500 ಎಂದು ಸಂಖ್ಯೆ ಬಂದಿದೆ.

250 ರೂ.ನಂತೆ ಆಜೀವ ಸದಸ್ಯರ ಸಂಖ್ಯೆಯೇ 9000ದಷ್ಟಿದ್ದು, ಬ್ಯಾಂಕಿನ ಬಡ್ಡಿ ದರ 15 ರಿಂದ 12.10.2000ದಲ್ಲಿ ಇಳಿದಾಗ ಪತ್ರಿಕೆ ನಡೆಸುವದೇ ಕಠಿಣ ಎಂಬ ಸ್ಥಿತಿಯ ಅರಿವಾಗಿ, ಆಗಿನ ಸಮಿತಿ - ಅಂದರೆ ಶ್ರೀ ಸುಬ್ರಾಯ ಶರ್ಮರು ಪತ್ರಿಕೆಯಲ್ಲಿ, ಆಜೀವ ಸದಸ್ಯರೆಲ್ಲರಿಗೂ ವ್ಯಯಕ್ತಿಕವಾಗಿ ಅಂಚೆ ಕಾರ್ಡುಗಳಲ್ಲಿ ಮನವಿಗಳನ್ನು ಬರೆದರು, ಪ್ರವಚನ ವೇದಿಕೆಗಳಿಂದ ಹೆಚ್ಚಳವನ್ನು ಕೇಳಿದ್ದೂ ಉಂಟು. ಈ ಪ್ರಚಾರಗಳ ಪರಿಣಾಮವಾಗಿ 2000 ಜುಲೈ ಹೊತ್ತಿಗೆ ಬಹಳ ಜನ, (ಸುಮಾರು 1000) ಹೆಚ್ಚುವರಿಯನ್ನು ಕಳಿಸಿದರು. ಮುಂದೆ, ಬ್ಯಾಂಕಿನಿಂದ ಬರುವ ಬಡ್ಡಿ ಶೇ. 8ಕ್ಕೆ ಇಳಿದಾಗಿನಿಂದ, ಪ್ರತಿ ಸಲವೂ ಇಂಥ ಬೇಡಿಕೆಗಳನ್ನು ಪತ್ರಿಕೆಯಲ್ಲಿ ಹಾಕುತ್ತಲೇ ಇದೆ. ಅಲ್ಲಿಂದೀಚೆಗೆ, ಈವರೆಗೆ ಸುಮಾರು 500 ಜನರು ಹೆಚ್ಚಿನ ಹಣವನ್ನು ತಲುಪಿಸಿದ್ದಾರೆ. ಆದರೂ 7000ಕ್ಕೂ ಹೆಚ್ಚು ಚಂದಾದಾರರಿಂದ ಈವರೆಗೂ ನಿರೀಕ್ಷಣೆಯ ಪ್ರತಿಸ್ಪಂದನವಿಲ್ಲ. ಇಂತಹ ಆರ್ಥಿಕ ಪರಿಸ್ಥಿತಿಯಲ್ಲಿ ಚಂದಾ ವಿಮರ್ಶೆ ಅನಿವಾರ್ಯವಾಯಿತು. 2000, ಜನವರಿ 1 ರಿಂದ ಅನ್ವಯಿಸುವಂತೆ ಆಜೀವ ಸದಸ್ಯತ್ವವನ್ನು ರದ್ದು ಮಾಡಲಾಯಿತು. ಆ ದಿನಾಂಕಕ್ಕೆ ಡಿ ಶ್ರೇಣಿಯಲ್ಲಿದ್ದವರಿಗೆ 2002ರಿಂದ ಐದು ವರ್ಷಗಳು, ಅಂದರೆ ಅಕ್ಟೋಬರ್ 2006ರವರೆಗೆ ಮಾತ್ರ ಪತ್ರಿಕೆಗಳನ್ನು ಕಳಿಸುತ್ತಿರುವದು, ಮುಂದಿನ ಜನವರಿಯಿಂದ ಅವರು ಪತ್ರಿಕೆ ತರಿಸಿಕೊಳ್ಳಲು ವಾರ್ಷಿಕ 60 ರೂ. ನಂತೆ ಚಂದಾ ನವೀಕರಿಸಿಕೊಳ್ಳುವದೆಂದು ಅನಿವಾರ್ಯದ ನಿರ್ಧಾರವಾಯಿತು. ಹಾಗೆಯೇ ದಾನಿಗಳಿಗೂ ಹತ್ತು ವರ್ಷ (2002 ಜನವರಿಯಿಂದ) ಎಂದು ನಿಗದಿಯಾಯಿತು. ಪುನಃ 2005ರ ಅಂತ್ಯದಲ್ಲಿ ದಾನಿಗಳಿಗೆ ಚಂದಾ 600 ರೂ. (10 ವರ್ಷ) ವಾರ್ಷಿಕ ರೂ. 60.00.

ಒಂದು ವಿಷಯವನ್ನಂತೂ ಹೆಚ್ಚುಗಾರಿಕೆಯಿಂದ ಉಲ್ಲೇಖಿಸುವುದೊಂದು ಕರ್ತವ್ಯ. ಪತ್ರಿಕೆಯ ಪ್ರಾರಂಭದಿಂದಲೂ, ಅದು ನೆಲೆಯಾಗುವಂತೆ ಮುಂದೆ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ಪತ್ರಿಕೆಯನ್ನು ಎತ್ತಿ ಹಿಡಿಯಲು ಚಂದಾದಾರರಿಂದ 1990-93ರಲ್ಲಿ, 2000-2001ರಲ್ಲಿ ಬಹಳ ಹೆಚ್ಚಿನದಾದ ಸಹಾಯ ದೊರೆತಿದೆ, ಹಾಗೆ ಈಗಲೂ 2001ರಿಂದ ಇಲ್ಲಿಯವರೆಗೂ ಕಾರ್ಯಾಲಯದೊಡನೆ ಸಹಕರಿಸಿ ಉಪಕಾರವನ್ನು ಮಾಡಿರುವ ಈ ಮಹಾಜನರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ಹಾಗೆಯೇ, ಮುಂದೆಯೂ ಅವರ ಸಹಕಾರ ಇದೇ ರೀತಿಯಲ್ಲಿ ಮುಂದುವರೆಯಲಿ ಮತ್ತು ಉಳಿದ ಮಹಾಜನಗಳಿಂದಲೂ ಈ ಔದಾರ್ಯದ ಕೆಲಸ ಸಾಗಲಿ ಎಂದು ಪ್ರಾರ್ಥನೆ. ಅದರಂತೆಯೇ, 1988 ರಿಂದ ಅವಿರತವಾಗಿ, ಶ್ರದ್ಧಾಮನಸ್ಕರಾಗಿ ಪತ್ರಿಕೆಗಾಗಿ 2002ರ ವರೆಗೆ, ದುಡಿದು, ಪತ್ರಿಕೆಗೊಂದು ಹೆಸರು ಮಾಡಿಕೊಟ್ಟವರೆಲ್ಲರಿಗೂ ಕಾರ್ಯಾಲಯ ಕೃತಜ್ಞವಾಗಿದೆ.

ಜೂನ್ 13ಕ್ಕೆ (2006), ಶ್ರೀ ಕೆ.ಜಿ. ಸುಬ್ರಾಯಶರ್ಮರು ತಮ್ಮ ವೈಯಕ್ತಿಕ ಕಾರಣಗಳಿಂದ, ಕಾರ್ಯಾಲಯಕ್ಕಿದ್ದ ಎಲ್ಲ ಕರ್ತವ್ಯಗಳನ್ನೂ ಬಿಟ್ಟು ದೂರವಾದರು. ಈಗ ವಿದ್ವಾಂಸರುಗಳಾದ ಶ್ರೀ ಶೇಷಾಚಲಶರ್ಮರು (ಸಲಹೆಗಾರರಾಗಿ), ಶ್ರೀ ಅನಂತಶರ್ಮಾ ಭುವನಗಿರಿ, ಶ್ರೀ ಎಸ್. ರಾಮಚಂದ್ರಶಾಸ್ತ್ರಿಗಳು, ಶ್ರೀ ಎಸ್. ರಂಗನಾಥರು, ಶ್ರೀ ಡಿ. ಗಣಪತಿ ಶಾಸ್ತ್ರಿಗಳು, ಕಾರ್ಯಾಲಯದ ಸದಸ್ಯರೊಬ್ಬರಿರುವ ಸಂಪಾದಕ ಮಂಡಳಿಯಿಂದ ಪತ್ರಿಕೆ ಪ್ರಕಟವಾಗುತ್ತಿದೆ. ಶ್ರೀರಾಮ ಪ್ರಿಂಟರ್ಸ್‌ನವರು ಮುದ್ರಣ ಕಾರ್ಯ ನಡೆಸುತ್ತಿದ್ದಾರೆ.

# 9. ಶಾಖಾ ಕಾರ್ಯಾಲಯಗಳು

ಮೈಸೂರಿನಲ್ಲಿ : ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಗಳವರೂ, ಅನಂತರ ಭಕ್ತರಾದ ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರೂ ಶ್ರೀಶ್ರೀಗಳವರ ಶಿಷ್ಯರೂ, ಅಭಿಮಾನಿಗಳೂ ಆಗಿದ್ದುದರಿಂದ ಕಾರ್ಯಾಲಯದ ಕೆಲವಾರು ಸಪ್ತಾಹಗಳಿಗೆ ಪ್ರವಚನಾದಿಗಳಿಗೆ ಮೈಸೂರು ನಗರವೂ ಒಂದು ಮುಖ್ಯ ಸ್ಥಾನವಾಗಿತ್ತು, ಕಾರ್ಯಾಲಯದ ಶಾಖೆ ಆಗಲೇ ಚಿಗುರೊಡೆದಿತ್ತು. ಅಂತೂ 1983ರ ದೀಪಾವಳಿಯಂದು ಇಲ್ಲಿ ಕಾರ್ಯಾಲಯದ ಶಾಖೆಯು ಪ್ರಾರಂಭವಾಯಿತು. ಮೈಸೂರಿನ ಗಣ್ಯವ್ಯಕ್ತಿಗಳಾದ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಕಾರ್ಯಸಮಿತಿಯೊಂದು ರಚನೆಯಾಯಿತು. ಸದಸ್ಯರಾಗಿದ್ದ ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರ ಮನೆಯಲ್ಲೇ ಕಾರ್ಯಾರಂಭವೂ ಆಯಿತು. ಪ್ರಥಮವಾಗಿ 16.12.83 ರಿಂದ ಮೂರು ದಿನಗಳ ಕಾಲ ಗೀತಾ ಜಯಂತಿಯ ಕಾರ್ಯಕ್ರಮವನ್ನು ನಡೆಸಿದರು.

ಶ್ರೀ ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳು ಹೊಳೆನರಸೀಪುರದಿಂದ ಆಗಾಗ ಬಂದು ಸಲಹೆ ನೀಡಿ, ಈ ಶಾಖೆಯ ಪುರೋಭಿವೃದ್ಧಿಗೆ ಸಹಾಯ ಮಾಡುತ್ತಿದ್ದರು. ಅದರಂತೆ, ಮುಂದೆ ಶ್ರೀಶ್ರೀಆತ್ಮಾನಂದೇಂದ್ರಸರಸ್ವತೀಸ್ವಾಮಿಗಳೂ ಉತ್ತರ ಕಾಶಿಯಿಂದ ವರ್ಷಕ್ಕೊಮ್ಮೆ ಸಾಧಾರಣವಾಗಿ, ಅಥವಾ ಎರಡು ವರ್ಷಕ್ಕೊಮ್ಮೆ ಬಂದಾಗ ಅವರ ಸಲಹೆಯೂ ಸಿಗುತ್ತಿತ್ತು. ಅನಂತರ 1984ರ ಫೆಬ್ರವರಿಯಲ್ಲಿ ಉತ್ತರ ಕಾಶಿಯಿಂದ ದಯಮಾಡಿಸಿದ್ದಾಗ ಅವರನ್ನು ಆದಷ್ಟು ಕ್ಷಿಪ್ರವಾಗಿ ಹಿಂದಿರುಗಿ ಬಂದು, ಮೈಸೂರಿನಲ್ಲಿ ನೆಲಸಿ, ಅಧ್ಯಾತ್ಮ ವಿದ್ಯಾ ಪ್ರಸಾರವನ್ನು ಕೈಗೊಳ್ಳಬೇಕೆಂದು ಭಕ್ತವೃಂದದವರ ಪರವಾಗಿ ಪ್ರಾರ್ಥನೆ ಮಾಡಲಾಯಿತು.

ಡಿಸೆಂಬರ್ 84ರಲ್ಲಿ ಶ್ರೀ ಜ್ಞಾನಾನಂದೇಂದ್ರರ ಆರಾಧನೆ ನಡೆಯಿತು. ಶ್ರೀ ಘನಪಾಠಿ ನರಸಿಂಹಮೂರ್ತಿಗಳು ಕ್ರಮವಾಗಿ ಗೀತಾಭಾಷ್ಯ ಪಾಠವನ್ನೂ ಕೆಲವಾರು ತಿಂಗಳು ನಡೆಸಿದರು ; ಭಜನ ಪುಸ್ತಕವೊಂದನ್ನು ಶಾಖೆಯು ಪ್ರಕಟಿಸಿತು. ಮತ್ತೂರಿನ ಶ್ರೀ ಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಅಕ್ಟೋಬರ್ 86ರಲ್ಲಿ ಹಲವಾರು ದಿನಗಳು ಬಿಡಾರ ಮಾಡಿದ್ದು ಪ್ರತಿ ದಿನ ಬೆಳಿಗ್ಗೆ ಭಾಷ್ಯಪ್ರವಚನಗಳನ್ನೂ ಮಧ್ಯಾಹ್ನ ಭಾಗವತ ಪ್ರವಚನ, ಸಂಜೆ ಪುರಾಣ ಶ್ರವಣವನ್ನೂ ನಡೆಯಿಸಿದರು. ಶ್ರೀ ನರಸಿಂಹ ಮೂರ್ತಿ ಘನಪಾಠಿಗಳ ಬ್ರಹ್ಮಸೂತ್ರ ಭಾಷ್ಯ ಪ್ರವಚನವೂ ಮುಂದುವರೆಯಿತು. ಈ ಪಾಠವು ಮೂರು ವರ್ಷಗಳ ಕಾಲ ನಡೆದು 1.3.87ರಂದು ಮಂಗಳವನ್ನಾಚರಿಸಲಾಯಿತು. ಪ್ರವಚನಕಾರರಾದ ಶ್ರೀ ಘನಪಾಠಿಗಳನ್ನೂ, ಶ್ರೀ ಜೆ.ಎಸ್.

ತಿಮ್ಮಪ್ಪಯ್ಯನವರನ್ನೂ, ಶ್ರೀ ನಿತ್ಯಾನಂದೇಂದ್ರ ಸರಸ್ವತೀ ಸ್ವಾಮಿಗಳ ಮತ್ತು ಶ್ರೀ ಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಮ್ಮುಖದಲ್ಲಿ, ಗೌರವಿಸಲಾಯಿತು.

1987ರ ಶಂಕರ ಜಯಂತಿ ಸಂದರ್ಭದಲ್ಲಿ, ಶ್ರೀ ಜಂಬೂರು ವೆಂಕಟ ರಮಣಯ್ಯನವರು ವೇದಾಂತ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನೂ, ಕಟ್ಟಡದ ನಿಧಿಗೆ ದಾನವನ್ನೂ ನೀಡಿದರು. ಕಾರ್ಯಾಲಯದ ಅಭಿಮಾನಿಗಳಾಗಿದ್ದ ದಿ|| ಶ್ರೀ ಮಲ್ಲೇಶ್ವರ ಶಾಸ್ತ್ರಿಗಳ ಸಹೋದರರು ತಮಿಳುನಾಡು ಕಂಚಿಯಲ್ಲಿನ 30'×40' ನಿವೇಶನವನ್ನು ದಾನ ಮಾಡಿದ್ದಾರೆ.

ಮೈಸೂರಿನ ಗುರುಭಕ್ತರಾದ ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರ ಮಗ ಶ್ರೀ ಜೆ. ಟಿ. ಸೋಮಶೇಖರ್‌ರವರು ತಂದೆಯ ರೀತಿಯಿಂದಲೇ ಉತ್ಸಾಹದಿಂದ ಮೈಸೂರಿನಲ್ಲಿ ಶೃಂಗೇರಿ ಶಂಕರ ಮಠದ ಪ್ರವಚನ ಮಂದಿರದಲ್ಲಿ ವೇದಾಂತ ಸಪ್ತಾಹ ವನ್ನು 14.3.93ರಿಂದ 20.3.93ವರೆಗೆ ಮೈಸೂರು, ಮತ್ತೂರು, ಹೊ.ನ.ಪುರ, ಬೆಂಗಳೂರುಗಳ ಕಾರ್ಯಾಲಯ ಕೇಂದ್ರಗಳಿಂದ ಬಂದ ವಿದ್ವಾಂಸರಿಂದ ಪ್ರವಚನ ಗಳೊಡನೆ ವೇದಾಂತ ಸಪ್ತಾಹವನ್ನು ಏರ್ಪಡಿಸಿದ್ದರು.

ಗೀತಾ ಜಯಂತಿಯೂ ಎಂದಿನಂತೆ ನಡೆಯಿತು ಮತ್ತು ಉಪನಿಷದ್ಭಾಷ್ಯ ಪಾಠಗಳು ಮುಂದುವರೆದಿವೆ. ಬೃಹದಾರಣ್ಯಕ ಭಾಷ್ಯ ಪ್ರವಚನ ಮಂಗಲವು 5.1.89ರಲ್ಲಿ ಆಯಿತು. ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರೇ ಶಾಖಾ ಕಾರ್ಯಾಲಯದ ಅಧ್ಯಕ್ಷತೆಯನ್ನು 1994ರಲ್ಲಿ ವಹಿಸಿಕೊಂಡರು. ಇವರನಂತರ 1996ರಲ್ಲಿ ಶ್ರೀ ವೈ.ವಿ. ಶಂಕರನಾರಾಯಣರಾಯರು ಅಧ್ಯಕ್ಷರಾದರು.

ಜಯಲಕ್ಷ್ಮೀಪುರಂ ಚಂದ್ರಮೌಳೀಶ್ವರ ದೇವಾಲಯದ ಆವರಣದಲ್ಲಿ ಶಾಖಾ ಕಾರ್ಯಾಲಯದ ಚಟುವಟಿಕೆಗಳಿಗಾಗಿ ಕಟ್ಟಡ ನಿರ್ಮಾಣವಾಯಿತು ; ಕಟ್ಟಡ ಪ್ರಾರಂಭೋತ್ಸವವು 5.2.95ರಂದು ನಡೆಯಿತು. ಇದಕ್ಕಾಗಿ ಶ್ರೀ ನಿತ್ಯಾ ನಂದೇಂದ್ರ ಸರಸ್ವತೀ ಸ್ವಾಮಿಗಳೂ ಪ್ರಧಾನ ಕಾರ್ಯಾಲಯದವರೂ ಯಥೋಚಿತ ಧನ ಸಹಾಯವನ್ನು ನೀಡಿದ್ದರು. ಕಾರ್ಯಕ್ರಮಗಳು ನಡೆಯುತ್ತಾ ಬಂದವು.

ಮತ್ತೂರಿನ ವಿದ್ವಾಂಸರ ಸಹಕಾರದಿಂದ 2.9.95 ರಿಂದ ಒಂದು ವಾರ ಕಾಲ ವೇದಾಂತ ಸಪ್ತಾಹವಾಯಿತು. ವಿದ್ವಾಂಸರೂ ಸಾತ್ತ್ವಿಕರೂ ಆದ ಶ್ರೀ ಬಿ. ವೆಂಕಟರಾಮಶರ್ಮರು ಪ್ರತಿ ಶನಿವಾರ ಸಂಜೆ 6 ಗಂಟೆಗೆ 'ಶಿವರಹಸ್ಯ' ಎಂಬ ವಿಷಯವಾಗಿ 26.1.96ರಿಂದ ನಡೆಸುತ್ತಾ ಬಂದರು. ಹಾಗೆಯೇ, ಪ್ರತಿ ಬುಧವಾರ

ಬೆಳಿಗ್ಗೆ 10.30 ಗಂಟೆಗೆ ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು 'ನೈಷ್ಕರ್ಮ್ಯಸಿದ್ಧಿ' ಪ್ರವಚನವನ್ನು ಮಾಡಿಸಿದರು. ಇದೇ ವರ್ಷದ (1996) ಶ್ರೀಶ್ರೀಗಳವರ ವಾರ್ಷಿಕಾರಾಧನೆಯ ಪ್ರಯುಕ್ತ, ಶಾಖಾ ಕಾರ್ಯಾಲಯದವರು, ಚಂದ್ರಮೌಳೇಶ್ವರ ದೇವಾಲಯದಲ್ಲಿ ಮತ್ತು ಜಯನಗರದ ಶ್ರೀ ರಾಮಮಂದಿರದಲ್ಲಿ 4.8.96ರಿಂದ ಒಂದು ವಾರ ಕಾಲ ವೇದಾಂತೋಪನ್ಯಾಸಗಳನ್ನು ಮತ್ತೂರಿನ ಶ್ರೀ ಅಶ್ವತ್ಥ ನಾರಾಯಣಾವಧಾನಿಗಳು, ಶ್ರೀ ಕೇಶವಾವಧಾನಿಗಳಿಂದ ನೆರವೇರಿಸಿದರು.

2.8.97 ರಿಂದ 5 ದಿನ ಮತ್ತೂರು ವಿದ್ವಾಂಸರಿಂದ ಪ್ರವಚನ, 1999ರಲ್ಲಿ ಚಾತುರ್ಮಾಸ್ಯ ಪ್ರಯುಕ್ತ ವೇದಾಂತ ಪ್ರವಚನಗಳು, ಶ್ರೀ ಬಿ. ವೆಂಕಟರಾಮ ಶರ್ಮರಿಂದ ತಪ್ಪದಂತೆ ಉಪನ್ಯಾಸಮಾಲಿಕೆಗಳೂ, (ಇತ್ತೀಚೆಗೆ ಅವರು ಸ್ವರ್ಗಸ್ಥರಾದುದು ಕಾರ್ಯಾಲಯಕ್ಕೆ, ಭಕ್ತಾದಿಗಳಿಗೆ ಬಹು ದೊಡ್ಡ ನಷ್ಟ), ಹಾಗೆಯೇ ವಾರದಲ್ಲೊಂದು ದಿನ ಶ್ರೀ ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳವರಿಂದ ಗ್ರಂಥ ಪಾಠಗಳು, ನಡೆಯುತ್ತಿವೆ. ಶ್ರೀಶ್ರೀಗಳವರ ಆರಾಧನೆಯೂ, ಶ್ರೀ ಜ್ಞಾನಾನಂದೇಂದ್ರ ಸರಸ್ವತೀ ಸ್ವಾಮಿಗಳವರ ಆರಾಧನೆಯೂ ಪ್ರತಿ ವರ್ಷವೂ ಆಚರಣೆಯಲ್ಲಿವೆ.

ಆಗಾಗ ಹೊಳೆನರಸೀಪುರ, ಮತ್ತೂರು ವಿದ್ವಾಂಸರುಗಳಿಂದ ಉಪನ್ಯಾಸಗಳನ್ನೂ ನಡೆಸುತ್ತಿದ್ದಾರೆ. ಶ್ರೀ ಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು ವಯೋಮಾನ ದೃಷ್ಟಿಯಿಂದ ಪ್ರತಿದಿನವೂ 15 ಕಿಲೋಮೀಟರ್ ದೂರದ ಹಲಗೈಯನ ಹುಂಡಿಯಿಂದ ಬರುವದು ಕಠಿಣವಾಗಿರುವದರಿಂದ ಅಧ್ಯಾತ್ಮ ಜಿಜ್ಞಾಸುಗಳಾಗಿ ಬರುವವರಿಗೆ ತಮ್ಮ ಆಶ್ರಮದಲ್ಲೇ ಪಾಠ, ಪ್ರವಚನಗಳನ್ನು ನಡೆಸುತ್ತಿದ್ದಾರೆ.

ಮತ್ತೂರು ಕ್ಷೇತ್ರದಲ್ಲಿ ಶ್ರೀಶ್ರೀಗಳವರ ಆಪ್ತರೂ, ಶಿಷ್ಯರೂ ಆಗಿದ್ದ ಶ್ರೀ ಸುಬ್ರಾಯಾವಧಾನಿಗಳು (ಮುಂದೆ ಬ್ರಹ್ಮೀಭೂತ ಶ್ರೀಶ್ರೀಅದ್ವೈತಾನಂದೇಂದ್ರ ಸರಸ್ವತೀ ಸ್ವಾಮಿಗಳು) ಮತ್ತು ಅವರ ಮಕ್ಕಳು, ಕುಲಬಾಂಧವರಿಂದ ಅವಿರತವಾಗಿ ವೇದಾಂತ ಪ್ರಸಾರ ಕಾರ್ಯ ನಡೆಯುತ್ತಿದೆ. ಮೊದಲಿನಿಂದಲೂ, ಸಂಸ್ಕೃತ, ವೇದ, ವೇದಾಂತ ಪಾಠಗಳು ನಡೆಯುತ್ತಿದ್ದು ಊರಿನವರಲ್ಲಿ ಅನೇಕ ಶ್ರೋತ್ರಿಯರ ಮಕ್ಕಳು ವಿದ್ಯಾರ್ಥಿಗಳಾಗಿದ್ದಾರೆ. ಅವರೇ ವೇದಾಂತ ಪಾಠಗಳನ್ನು ಕಲಿಯುತ್ತಿದ್ದಾರೆ. ಮತ್ತೂರಿನಲ್ಲಿ ಯಾವಾಗಲೂ ವಿದ್ಯಾರ್ಥಿಗಳಿಗೆ ಕೊರತೆಯಿಲ್ಲ, ಅವರಲ್ಲಿ ಅನೇಕರಿಗೆ ಅಧ್ಯಾತ್ಮ ವಿದ್ಯೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವ ಮೊದಲೇ ಕರ್ಮಾನುಷ್ಠಾನದ ಹೋಮಾದಿಗಳಿಗೇ ಒಲವು. ಮುಖ್ಯವಾಗಿ ಶ್ರೀ ಅಶ್ವತ್ಥ ನಾರಾಯಣ ಅವಧಾನಿಗಳು, ಶ್ರೀ ಕೇಶವ ಅವಧಾನಿಗಳು ವೇದಾಂತ ಪಾಠವನ್ನೂ ಹೇಳುತ್ತಾರೆ. ಇದರಲ್ಲೇ ನಿರತರಾಗಿದ್ದ ಶ್ರೀ ಚಂದ್ರಮೌಳಿ ಅವಧಾನಿಗಳು 2003 ರಿಂದ ಹೊಳೆನರಸೀಪುರ

ಅಧ್ಯಾತ್ಮ ವಿದ್ಯಾನಿಲಯವನ್ನು ಏಕೈಕ ಪ್ರಾಧ್ಯಾಪಕರಾಗಿ ನಡೆಸುತ್ತಿದ್ದಾರೆ. ಮತ್ತೂರಿನಲ್ಲಿ ಹೊಳೆನರಸೀಪುರದ ಪ್ರಧಾನ ಕಾರ್ಯಾಲಯದ ಪರವಾಗಿ, ಕೆಲವು ವರ್ಷಗಳು 1991 ರಿಂದ ವೇದಾಂತ ವಿದ್ಯಾನಿಲಯವು ನಡೆಯಿತು. ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಶ್ರೀ ಕೇಶವ ಅವಧಾನಿಗಳು ಆಗಾಗ ಶಿವಮೊಗ್ಗದಲ್ಲಿ, ಮೈಸೂರಿನಲ್ಲಿ ವೇದಾಂತ ಸಪ್ತಾಹ, ಪ್ರವಚನಗಳನ್ನು ನಡೆಸುತ್ತಾರೆ. ಹೊಳೆನರಸೀಪುರದ ಎಲ್ಲ ಕಾರ್ಯಕ್ರಮಗಳಲ್ಲೂ ಸಾಮಾನ್ಯವಾಗಿ ಭಾಗವಹಿಸುತ್ತಾರೆ. ಶ್ರುತಿ ಶಂಕರ ಸಂಶೋಧನಾ ಪ್ರತಿಷ್ಠಾನ ಎಂಬಂತೆ ಸಂಸ್ಥೆಯನ್ನು ಕಟ್ಟಿ ಬೆಳೆಸಿ, ಅದರ ವತಿಯಿಂದ ಕೆಲವು ಕರ್ಮಕಾಂಡಗಳ ಪುಸ್ತಕಗಳನ್ನೂ, ಶ್ರೀಶ್ರೀಗಳವರ ಕೆಲವು ಪುಸ್ತಕಗಳನ್ನೂ ಹೊರತಂದಿದ್ದಾರೆ.

2004-05ರಲ್ಲಿ ಶ್ರೀ ಸೀತಾರಾಮ ಮಹಾ ಸಾಮ್ರಾಜ್ಯ ಪಟ್ಟಾಭಿಷೇಕವನ್ನು, 12 ದಿನಗಳ ಕಾಲ, ಬೆಳಿಗ್ಗೆ ಅಭಿಷೇಕ, ಪೂಜೆ, ವಿವಿಧ ಹೋಮಗಳು, ಪಾರಾಯಣ, ಸಂಜೆಯಲ್ಲಿ ವಿದ್ವಾಂಸರುಗಳಿಂದ ಶ್ರೀ ಸೀತಾರಾಮರ ಪ್ರವಚನಗಳು, ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳನ್ನು ಯಶಸ್ವಿಯಾಗಿ, ಚೆನ್ನಾಗಿ ನಡೆಸಿದರು. ಸಾವಿರಾರು ಭಕ್ತರು ಬಂದಿದ್ದು ಸಂತೋಷಪಟ್ಟರು.

ಶ್ರೀ ಕೇಶವ ಅವಧಾನಿಗಳು ಆಗಾಗ ಬೆಂಗಳೂರಿಗೂ ಬಂದು ಉಪನ್ಯಾಸ ಗಳನ್ನು ನೀಡುತ್ತಿರುತ್ತಾರೆ. 2005 ಜನವರಿಯಲ್ಲಿ ಬೆಂಗಳೂರು ಶಾಖಾ ಕಾರ್ಯಾಲ ಯದ ಆಶ್ರಯದಲ್ಲಿ, ಮರಡಿ ಸುಬ್ಬಯ್ಯ ಛತ್ರದಲ್ಲಿ ವೇದಾಂತ ಶಿಬಿರವನ್ನೂ ನಡೆಸಿ ಕೊಟ್ಟರು. ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು ಪಾಠಪ್ರವಚನಗಳಲ್ಲೇ ಹೆಚ್ಚು ನಿರತರಾಗಿದ್ದರೂ, ಪರಸ್ಥಳಗಳಲ್ಲಿಯೂ ಉಪನ್ಯಾಸಗಳನ್ನು, ವಿಶೇಷವಾಗಿ ಹೊಳೆ ನರಸೀಪುರದಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ, ಸಪ್ತಾಹ, ವೇದಾಂತ ಶಿಬಿರ ಗಳಲ್ಲಿ ಭಾಗವಹಿಸಿ ಪ್ರವಚನಗಳನ್ನು ಮಾಡುತ್ತಾ ಬಂದಿದ್ದಾರೆ. ಕಾರ್ಯಾಲಯದ ಟ್ರಸ್ಟ್ ಸಭೆಗಳಲ್ಲೂ ಆಹ್ವಾನಿತರಾಗಿದ್ದರು. 1991ರಿಂದ, ಅಲ್ಲಿಂದ ಮುಂದೆ ಸದಸ್ಯರಾಗಿಯೂ ಇದ್ದು 8.4.2001ರಲ್ಲಿ ರಾಜೀನಾಮೆಯನ್ನು ಕೊಡುವವರೆಗೆ ಹತ್ತು ವರ್ಷಗಳ ಕಾಲ ವೇದಾಂತ ಪ್ರಚಾರ ವಿಷಯಗಳಲ್ಲಿ ತಮ್ಮ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಶ್ರೀ ಚಂದ್ರಮೌಳಿ ಅವಧಾನಿಗಳು ಸಹಿತ, ಬಿಡುವಿದ್ದ ಕಾಲದಲ್ಲಿ ಮೈಸೂರು ಮತ್ತಿತರ ಕಡೆಗಳಲ್ಲಿ, ಉಪನ್ಯಾಸ-ಸಪ್ತಾಹ-ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಿರುತ್ತಾರೆ.

ರಾಯದುರ್ಗದಲ್ಲಿ : ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯ ದುರ್ಗದಲ್ಲಿ ವೇ|| ಬ್ರ|| ಶ್ರೀ ಲಕ್ಷ್ಮೀಕಾಂತ ಶರ್ಮರ ಅಧ್ಯಕ್ಷತೆಯಲ್ಲಿ ಕಳೆದ ಕೆಲವು ವರ್ಷಗಳಿಂದಲೂ ನಡೆಯುತ್ತಿದ್ದ ಅಧ್ಯಾತ್ಮ ಪ್ರಚಾರ ಸೇವಾ ಸಂಘವು ಮೊದಲು

ವಾಮನ ನಾಗಿ ತೋರಿಕೊಂಡು ಬರುಬರುತ್ತಾ ತ್ರಿವಿಕ್ರಮನಾಗಿ ಮೂಡುತ್ತಾ ಬಂದು ತನ್ನ ಚಟುವಟಿಕೆಗಳಿಗಾಗಿ ದಾನಿಗಳಿಂದ ಒಂದು ಎಕರೆ ಭೂಮಿಯನ್ನೂ, ಕಟ್ಟಡದ ನಿರ್ಮಾಣಕ್ಕೆ ಒಂದು ಲಕ್ಷ ರೂಪಾಯಿಗಳಿಗೂ ಮೀರಿದ ಧನಸಂಗ್ರಹಣೆ ಮಾಡಿ 15.3.84 ಗುರುವಾರ ಸ್ವಂತ ಪ್ರವಚನ ಮಂದಿರದ ಕಟ್ಟಡ ಪ್ರಾರಂಭೋತ್ಸವವನ್ನು ನೆರವೇರಿಸಿತು. ಪೂಜ್ಯ ಶ್ರೀ ಭಗವತ್ಪಾದ ಸ್ವಾಮಿಗಳು (ಶ್ರೀಶ್ರೀಗಳವರ ಶಿಷ್ಯರು) ಉದ್ಘಾಟನೆ ಮಾಡಿದರು. ಹೊಳೆನರಸೀಪುರ, ಬೆಂಗಳೂರು ಕಾರ್ಯಾಲಯದ ಪಂಡಿತರು, ಶ್ರೀ ದೇವರಾಯ ಕುಲಕರ್ಣಿಗಳು ಮತ್ತಿತರ ಮಹನೀಯರು ಉಪನ್ಯಾಸ ಗಳನ್ನು ಮಾಡಿದರು. ಶ್ರೀ ಭೂಮಾನಂದ ಭಾರತೀ ಸ್ವಾಮಿಗಳು 'ಅಧ್ಯಾತ್ಮ ವ್ಯಾಸ ಮಂಜರಿ' (ತೆಲುಗು) ಗ್ರಂಥದ ಬಿಡುಗಡೆ ಮಾಡಿದರು. ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳು ವೈದಿಕಾನುಷ್ಠಾನಗಳನ್ನು ನಿರ್ವಹಿಸಿದರು. 5000ಕ್ಕೂ ಹೆಚ್ಚಿನ ಜನರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಈ ಸುಂದರ ಸಭಾಭವನವು - "ಅಧ್ಯಾತ್ಮ ಪ್ರಚಾರ ಸೇವಾಶ್ರಮ" (25'×58') ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಾಂಪ್ರದಾಯಿಕ ಅಧ್ಯಾತ್ಮ ವಿದ್ಯಾ ಪ್ರಚಾರ ಕೇಂದ್ರವಾಗಿ ಆಂಧ್ರದಲ್ಲಿ ಜನ್ಮತಾಳಿತು. ಈ ಸಂಸ್ಥೆಯ ಕೇಂದ್ರ ಬಿಂದುವಾದ ಶ್ರೀ ಲಕ್ಷ್ಮೀಕಾಂತ ಶರ್ಮರು ತಮ್ಮ ಗುರುಭಕ್ತಿ ಪ್ರಭಾವದಿಂದ ಒಂದು ಪವಾಡವನ್ನೇ ನಿರ್ಮಿಸಿದರು.

ವರ್ಷಂಪ್ರತಿ ಶಂಕರ ಸಪ್ತಾಹ, ಮೊದಲಾದ ಕಾರ್ಯಕ್ರಮಗಳನ್ನೂ, ಶ್ರೀಶ್ರೀಗಳವರ ಆರಾಧನೆಯನ್ನು ನಡೆಸುತ್ತಾ ಬಂದಿದ್ದಾರೆ. ಶ್ರೀ ಲಕ್ಷ್ಮೀಕಾಂತ ಶರ್ಮರ ಸಂಪಾದಕತ್ವದಲ್ಲಿ ಹಾಗೂ ಮೇಲ್ವಿಚಾರಣೆಯಲ್ಲಿ ತೆಲುಗು ಸಮಿತಿಯವರ 'ಅಧ್ಯಾತ್ಮ ಜ್ಯೋತಿ' ಎಂಬ ತೆಲುಗು ಪತ್ರಿಕೆಯನ್ನೂ ನಡೆಸುತ್ತಿದ್ದಾರೆ.

# 10. ಉಪಸಂಹಾರ

**ಕಾರ್ಯಾಲಯದ ಉದ್ದೇಶ ಸಾಧನೆ :** ಮೊದಲು, ಪ್ರಧಾನ ಉದ್ದೇಶವಾದ ಅಧ್ಯಾತ್ಮ ಪ್ರಸಾರವನ್ನೇ ಆ ನೇರದ ಕಾರ್ಯವನ್ನೇ ಇಲ್ಲಿ ಗಮನಿಸಬೇಕು. ಶ್ರೀಶ್ರೀಗಳಿರುವಾಗಿನ ಕಥೆಯೇ ಒಂದು, ಆಗಿನ ಕಷ್ಟಕರ ಸನ್ನಿವೇಶ, ಆರ್ಥಿಕ ಕೊರತೆ, ಮುದ್ರಣ ಮತ್ತಿತರ ಕಾರ್ಯಗಳಲ್ಲಿ ಈಗಿರುವಂತಹ ಹೊಸ ಸಹಕಾರಿ ವಿಧಾನಗಳು, ಶೀಘ್ರನಡೆಗಳು ಇಲ್ಲದಿದ್ದ ಎಲ್ಲ ಅಸೌಕರ್ಯದಲ್ಲಿಯೂ, ಅವರು ಇದನ್ನು ಮಹತ್ತರವಾಗಿಯೂ ನಡೆಸಿದರು. ಪ್ರಧಾನ ಕಾರ್ಯಾಲಯ, ಶಾಖೆಗಳಿಂದ, ತಾವೇ ಆರಿಸಿದ ಉದ್ದೇಶ ಸಾಧನೆಗಳು ಎಡೆಬಿಡದ ರೀತಿಯಲ್ಲಿ ಬಳಕೆಯಾಗಿ ಅಧ್ಯಾತ್ಮ ಪ್ರಸಾರಕ್ಕೆ ನೆರವಾಗಿವೆ. ಈ ಅತಿಹೆಚ್ಚಿನ ಆತ್ಮೋದ್ಧಾರದ ಮಾರ್ಗದಲ್ಲಿ ಎಲ್ಲ ಜನತೆಯನ್ನೂ ನಡೆಸುವ ಪ್ರಯತ್ನ ಮಾಡಿದುದು ಶ್ರೀಶ್ರೀಗಳವರ ಉದಾರವಾದ ಅಪ್ರತಿಮ ಸೇವೆ, ಕನ್ನಡ ಸಾಹಿತ್ಯಕ್ಕೂ, ವೇದಾಂತ ಕ್ಷೇತ್ರಕ್ಕೂ, ಬಹಳವಾದ ಉಪಕಾರ. ಅವರ ಸತ್ಯಸಂಕಲ್ಪ, ನಿಷ್ಠೆ, ಕಾರ್ಯವಿಚಕ್ಷಣೆ, ಪಟ್ಟು ಹಿಡಿದು ನಡೆಸುವ ಶ್ರದ್ಧೆ ಕರ್ಮ-ಜ್ಞಾನ-ಭಕ್ತಿಗಳ ಸಂಗಮದಿಂದ ಅವರಿಗುಂಟಾದ ದೈವಾನುಗ್ರಹ, ದೈವ ಸಹಾಯದಿಂದ ಶ್ರೀಶ್ರೀಗಳವರೊಬ್ಬರೇ ಏಕಾಂಗಿಯಾಗಿ ಕಾರ್ಯಾಲಯವನ್ನು ಸ್ಥಾಪಿಸಿ, ಮುನ್ನಡೆಸಿ, ಅತಿಶಯವಾಗಿ ಬೆಳೆಸಿ, ತಮ್ಮ ಅಧ್ಯಾತ್ಮ ಪ್ರಸಾರ ಕಾರ್ಯವನ್ನು ಯಥೇಚ್ಛವಾಗಿ ಯಾವ ಕ್ಷೇತ್ರವೂ, ಸಂಸ್ಥೆಯೂ ತನ್ನೆಲ್ಲ ಅನುಕೂಲ್ಯಗಳೊಡನೆ ಮಾಡಲಾಗದ್ದನ್ನು, ಕೇವಲ 50 ವರ್ಷಗಳಲ್ಲಿ ನೈಪುಣ್ಯದಿಂದ ಸಾಧಿಸಿ, ಯಶಸ್ವಿಯಾಗಿ ನೆರವೇರಿಸಿದರು. ಕಾರ್ಯಾಲಯಕ್ಕೊಂದು ಪ್ರಸಿದ್ಧಿಯನ್ನೂ, ಗೌರವವನ್ನೂ ತಂದು ಕೊಟ್ಟರು, ಹೊಳೆನರಸೀಪುರವೂ ಹೆಸರಾಂತ, ಶಾಂತ ಅಧ್ಯಾತ್ಮಕ್ಷೇತ್ರವಾಯಿತು.

**ಈಗ–ಈವರೆಗೆ ನಡೆದು ಬಂದ ಮಾರ್ಗ :** ಶ್ರೀಶ್ರೀಗಳವರ ನಂತರ ಪಂಡಿತ ಶ್ರೀ ಲ.ನ. ಮೂರ್ತಿಗಳು ಹೆಚ್ಚಿನ ರೀತಿಯ ಕೊರತೆ ಕಾಣಬಾರದ ರೀತಿಯಲ್ಲಿ, ಉಪನ್ಯಾಸ-ಸಪ್ತಾಹ, ಶಿಬಿರ, ಪತ್ರಿಕೆ, ಗ್ರಂಥ ಮುದ್ರಣ ಕಾರ್ಯಗಳನ್ನು ಸಾಧ್ಯವಾದಷ್ಟು ಚೆನ್ನಾಗಿಯೇ ಮುಂದುವರೆಸಿದರು. ಕೆಲವು ಗ್ರಂಥಗಳನ್ನೂ ರಚಿಸಿದರು. ಆದರೆ ಅವರ ಬಿಡುವಿಲ್ಲದ ಕಾರ್ಯಬಾಹುಳ್ಯದಲ್ಲಿ, ಅಧ್ಯಾತ್ಮ ಶಿಕ್ಷಣ ಬಹಳ ಕುಂಠಿತವಾಗಿತ್ತು, ಒಂದು, ಎರಡು, ವಿದ್ಯಾರ್ಥಿಗಳಿಂದು ಅವರಿಗೆ ಪಾಠ ಹೇಳುವ ಉತ್ಸಾಹವೂ ಕಡಿಮೆಯಾಗಿತ್ತು, ಅವರಿಗೆ ಕಛೇರಿ ಕೆಲಸಗಳ ಹೊರೆ ತಪ್ಪಿಸಿದರೆ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ, ಕಾರ್ಯಾಲಯದ ಪ್ರವಚನಗಳನ್ನು ನಡೆಸಬಹುದಿತ್ತು,

ಬೆಂಗಳೂರಿನಲ್ಲಿ 1959ರಲ್ಲಿನಂತೆ ಆರೆಂಟು ತಿಂಗಳಿಗೇ ಶಾಖೆ ಮುಚ್ಚಿದಂತಾಗದಿರಲು, ಶ್ರೀಗಳು ತಮ್ಮ ಕೊನೆಯ ಐದಾರು ವರ್ಷಗಳು ಇಲ್ಲಿಯೇ

ನಿಂತು, ಅದನ್ನು ಸ್ಥಿರಗೊಳಿಸಿದರು. ಅವರ ಸನ್ನಿಧಾನದಿಂದ ಕಾರ್ಯಾಲಯಕ್ಕೊಂದು ಗೌರವ, ಆಕರ್ಷಣೆಯನ್ನು ತಂದರಲ್ಲದೆ, ಈ ಶಾಖೆಯನ್ನು ಸುವ್ಯವಸ್ಥಿತಗೊಳಿಸಿದರು. ಪಂಡಿತರು ಶಾಖೆಯನ್ನು, ಆನಂತರ ಕ್ರಮೇಣ ಬಹಳ ಮಟ್ಟಿಗೆ ತಮ್ಮ ಹಿಡಿತದಲ್ಲೇ ನಡೆಸಿದರು, ಬಹುಶಃ ಆಗಿನ ಕಾಲಕ್ಕೆ ಇದೊಂದೇ ವೇದಾಂತಪರ ಸಂಸ್ಥೆ ನಗರದಲ್ಲಿ ಎನ್ನುವ ಮಟ್ಟಿಗೆ. ವೇದಾಂತಪ್ರಿಯ ವಿದ್ವಾಂಸರೂ, ಅನುಭವಿಗಳೂ, ಅನುಭಾವಿಗಳೂ ಆಗಿದ್ದ ಶ್ರೀ ನೂಲೇನೂರು ಶ್ರೀನಿವಾಸ ಮೂರ್ತಿಗಳು, ಶ್ರೀ ದೇವರಾಯ ಕುಲಕರ್ಣಿಗಳು ಹೆಚ್ಚಿನ ಪಾತ್ರವಹಿಸಿ ಇದನ್ನೊಂದು ಉತ್ತಮ ಸಂಸ್ಥೆಯಾಗಿ ಬೆಳೆಸಿದರು. 'ಶಂಕರ ಭಾಸ್ಕರ' 1988ರಿಂದ ಪ್ರಾರಂಭವಾಗಿ ಪ್ರಚಾರ, ಪ್ರಸಾರವೂ ಹೆಚ್ಚಾಯಿತು. ವಿದ್ಯಾನಿಲಯಕ್ಕೆ ಯಾವ ಉತ್ತಮ ಪ್ರತಿಕ್ರಿಯೆಯೂ ವಿದ್ಯಾರ್ಥಿಗಳಿಂದಾಗಲೀ, ಪಂಡಿತರಿಂದಾಗಲೀ ಬರಲಿಲ್ಲ. ಗ್ರಂಥರಚನೆ, ಪ್ರಕಟಣೆಯೂ ನಡೆಯಲೇ ಇಲ್ಲ ಎಂದರೂ ಆದೀತು. ಒಟ್ಟಿನಲ್ಲಿ, ಶಾಖೆಯೂ ಕೇವಲ ಪ್ರವಚನ, ಪತ್ರಿಕೆಗಷ್ಟೇ ಸೀಮಿತವಾಯಿತು.

ಶ್ರೀಶ್ರೀಗಳವರ ಹಲವು ಲೇಖನಗಳನ್ನು ಕೂಡಿಸಿ, 'ದಶೋಪನಿಷತ್ತುಗಳ ಸಾರ', 'ಪಾರಿಭಾಷಿಕ ಶಬ್ದಕೋಶ', ಸಚ್ಚಿದಾನಂದ ಸೂಕ್ತಿಗಳು ಮುಂತಾದ ಗ್ರಂಥಗಳು ಟ್ರಸ್ಟ್ ವತಿಯಿಂದ ಹೊರಬಂದವು. 1996-2006 ಅವಧಿಯ ಹತ್ತು ವರ್ಷಗಳಲ್ಲಿ ಈ ಹೆಚ್ಚಿನ ಹೊಸಪುಸ್ತಕಗಳಲ್ಲದೆ, ಕಾರ್ಯಾಲಯದ ಎಲ್ಲ ಪ್ರಕಟಣೆಗಳೂ ಎರಡು ಮೂರು ಆವರ್ತದಲ್ಲಿ ಪುನರ್ಮುದ್ರಣವಾಗಿರುವದೊಂದು ವಿಶೇಷ. ವೇದಾಂತ ಸಪ್ತಾಹ, ಶಿಬಿರಗಳೂ ಅತಿಶಯವಾಗಿ ನಡೆದುವು. ಇದರಿಂದಾಗಿ ರಾಜ್ಯದುದ್ದಕ್ಕೂ ಕಾರ್ಯಾಲಯದ ಪರಿಚಯ ಹರಡಿತು. ಬೇಕಾದಷ್ಟು ಬಿಡಿ ಉಪನ್ಯಾಸಗಳು, ಮೂರು ನಾಲ್ಕು ದಿನಗಳ ವೇದಾಂತ ಪ್ರವಚನಗಳೂ ನೆರವೇರಿದುವು. ಶ್ರೀ ಚಂದ್ರಮೌಳಿ ಅವಧಾನಿಗಳು ಬಂದ ಮೇಲೆ ಬಹಳ ಶ್ರದ್ಧೆಯಿಂದ ಸುಮಾರು 10-15 ವಿದ್ಯಾರ್ಥಿಗಳಿಗಾದರೂ ಈ ಮೂರು ನಾಲ್ಕು ವರ್ಷಗಳಲ್ಲಿ ಅಧ್ಯಾತ್ಮ ಶಿಕ್ಷಣ ನಡೆಯುತ್ತಿದೆ.

ಮುಖ್ಯವಾದ ವಿಚಾರವೆಂದರೆ, ಜನಗಳಲ್ಲಿ ವೇದಾಂತಾಭಿರುಚಿಯನ್ನು ಮೂಡಿಸಲು, ಆ ವಿಷಯದಲ್ಲಿ ಒಲವಿರುವವರಿಗೆ ಸಾಧ್ಯವಿದ್ದಷ್ಟು ಅಧ್ಯಾತ್ಮ ಸಾಹಿತ್ಯ ಸೌಕರ್ಯಗಳನ್ನೊದಗಿಸುವ ಉದ್ದೇಶ ಸಾಕಷ್ಟು ಸಫಲವಾಗಿದೆ ಎನ್ನಬಹುದೆಂದು ತೋರುತ್ತದೆ.

**ಮುಂದೆ : ಕಾರ್ಯಾಲಯದಿಂದ ಆಗಬೇಕಾದ ಕಾರ್ಯ ವ್ಯವಸ್ಥೆಯ ಕಿರುನೋಟ :** ಆಗಿರುವ ಸಾಧನೆಯೇ ಮಹತ್ತರವೆಂದು ಭಾವಿಸಿ ಕೈಕಟ್ಟಿ ಕೂರು

ವಂತಿಲ್ಲ. ಹೆಚ್ಚು ಹೆಚ್ಚು ವಿಸ್ತಾರ, ಓಟವಿಲ್ಲದಿದ್ದರೂ, ಪ್ರಧಾನವಾಗಿ, ಈಗಿನಷ್ಟಾದರೂ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿದೆ, ಅನಂತರವೇ ಕಾರ್ಯಗಳ ಮುನ್ನಡೆ, ಓಟ. ಇವೆಲ್ಲ ಕೇವಲ ಪಂಡಿತರ ವಿದ್ವತ್ತು, ದಕ್ಷತೆ ಮತ್ತು ಸಾಹಸ ಪ್ರವೃತ್ತಿಗಳನ್ನು ಅವಲಂಬಿಸಿದೆ. ಶ್ರೀಗಳವರು ದೈವಚಿತ್ತರು, ನಾಲ್ಕಾರು ಉತ್ತಮ ಶಿಷ್ಯರನ್ನು ಉಳಿದಂತೆಯೂ ಇನ್ನೂ ಕೆಲವರನ್ನು ಚೆನ್ನಾಗಿಯೇ ತಯಾರು ಮಾಡಿದರು. ಕಾರ್ಯಾಲಯದ ಅದೃಷ್ಟ ಹೀನತೆಯೆಂದರೆ, ಬಹಳ ಸಂಖ್ಯೆಯವರು ಈ ಕಾರ್ಯಗಳಲ್ಲಿ ಹೆಚ್ಚು ಉತ್ಸಾಹ ತೋರಲಿಲ್ಲ. ಕೆಲವರು ತಮ್ಮದ್ದೇ ಕಾರ್ಯಕ್ರಮಕ್ಕೆ ಸೀಮಿತಗೊಳಿಸಿಕೊಂಡರು.

(1) ಇದರಿಂದಾಗಿ ಕೆಲವು ಪರಿಣಾಮಗಳಲ್ಲಿ ಮೊದಲನೆಯದು, ಸ್ವಾಮಿಗಳ ಶಿಷ್ಯರಿಂದ ಶ್ರೀಗಳವರಿಗೆ ಕೃತಜ್ಞತೆ ಎಂದಾಗಲೀ, ಉತ್ತಮ ಶಿಷ್ಯ ತಯಾರಿಕೆಯಾಗ ದಿರುವದು. ಕಠಿಣವಾದರೂ ಈ ಹೇಳಿಕೆ ಹದ ಮೀರಿದ್ದೆಂದೆನಿಸಿದರೂ, ಇದೊಂದು ಶ್ರೀಶ್ರೀಗಳವರ ಶಕ್ತಿ ಸಾಮರ್ಥ್ಯಗಳಲ್ಲಿ ಮೂಡಿಸಿರುವ ವಿಪರ್ಯಾಸ. (2) ಗ್ರಂಥ ರಚನಾ ಕಾರ್ಯ ಸ್ಥಗಿತವಾಯಿತು. (3) ಅಧ್ಯಾತ್ಮ ಶಿಕ್ಷಣ ಕುಂಠಿತವಾಯಿತು.

ಈ ಮುಂದಿನ ನಡೆ ಹೇಗಿರಬೇಕೆನ್ನಿಸುತ್ತದೆ : ಇಲ್ಲಿಯವರೆಗಿನ ದೋಷಗಳು ಹೇಗೇ ಇರಲಿ, (1) ಈ ಮುಂದಿನ ಹತ್ತು ವರ್ಷಗಳಲ್ಲಾದರೂ ಒಂದಿಬ್ಬರು ಯೋಗ್ಯ ಶಿಷ್ಯರು ಶ್ರೀಗಳವರ ಪರಂಪರೆಯನ್ನು ಮುಂದುವರೆಸಲು ಸಿದ್ಧರಾಗಿ ಸಮಾಧಾನಕರ ರೀತಿಯಲ್ಲಿ ಯದೃಷ್ಟಾ ಲಾಭ ಸಂತುಷ್ಟರಾಗಿ, ತಯಾರಾಗದಿದ್ದಲ್ಲಿ - ಮುಂದೇನು ? ! ಶ್ರೀಶ್ರೀಗಳ ಸಂಕಲ್ಪದಂತೆ ಯಾರಾದರೂ ಬಂದೇ ಬರುತ್ತಾರೆ ಎನ್ನುವದು ಆಶೋತ್ತರವಾದರೂ, ಮಾಡುವ ಪ್ರಯತ್ನ ಆಗಲೇಬೇಕಲ್ಲ! ಈ ಪ್ರಯತ್ನವಾದರೂ ನಡೆದೀತು ಎಂಬುದು ಭವಿಷ್ಯಕ್ಕೊಂದು ಬಾಗಿಲು.

(2) ಹೊಸದಾಗಿ ಉತ್ತಮ ಗ್ರಂಥಗಳ ಲೇಖನ, ಮುದ್ರಣವಾಗಬೇಕು. ಗ್ರಂಥ ವಿಷಯ ಪ್ರಸಾರವೂ ಅಷ್ಟೇ ಮುಖ್ಯ ; ಅನಂತರ ಮಿಕ್ಕವು. ಶ್ರೀಗಳವರೇ ಪ್ರಾರಂಭಿಸಿದ ವೇದಾಂತ ಸಪ್ತಾಹ ಹೆಚ್ಚು ಕಾರ್ಯಸ್ಥಾಯಿಯಾಗಬೇಕಾಗಿದೆ, ಇವು ಸಾಮಾನ್ಯರಿಗೂ ಮಾರ್ಗದರ್ಶನದ, ಸಾಧನದ ಪರವಾಗಿಯೂ ಹಬ್ಬಬೇಕು.

(3) ಪಂಚಪಾದಿಕಾ ಪ್ರಸ್ಥಾನ, ವ್ಯಾಖ್ಯಾನ ಪ್ರಸ್ಥಾನಗಳಲ್ಲಿ ಆಚಾರ್ಯರ ಭಾಷ್ಯಗಳಿಗೆ ವಿರುದ್ಧವಾದ ಅಂಶಗಳನ್ನು ತೋರಿಸಿ ಕೊಡಬೇಕು ; ಯಾವ ಗ್ರಂಥವನ್ನಾದರೂ ಆಚಾರ್ಯ ಶಂಕರರ ಅದ್ಭುತವಾದ ಸರಣಿಯೊಡನೆ ಒರೆಹಚ್ಚಿ ನೋಡಿ ವಿಮರ್ಶಾತ್ಮಕವಾಗಿ ಪ್ರಸರಿಸುವದಾಗಬೇಕು. ಭಾಷ್ಯ ಪ್ರಸ್ಥಾನ, ವ್ಯಾಖ್ಯಾನ

ಪ್ರಸ್ಥಾನ ಎರಡನ್ನೂ ಬೇರೆಯಾಗಿಯೇ ಬೋಧಿಸಬೇಕು. ಇವೆರಡೂ, ಪ್ರಧಾನವಾಗಿ ವಿಶ್ವ ವಿದ್ಯಾನಿಲಯಗಳು, ದೊಡ್ಡದೊಡ್ಡ ಸಂಸ್ಕೃತ ಅಧಿಷ್ಠಾನಗಳು ಮಾಡಬೇಕು-ಎಂಬ ಎರಡು ವಿಚಾರಿಸಬೇಕಾದ ಅಂಶಗಳನ್ನು ಶ್ರೀಶ್ರೀಗಳು ಸೂಚಿಸಿದ್ದರು. ಇದನ್ನು ಇಲ್ಲಿನ ಪಂಡಿತರು ತಮ್ಮ ವಿದ್ಯಾರ್ಥಿಗಳಿಗೆ, ಅದರಲ್ಲೂ ಮುಖ್ಯವಾಗಿ, ಮೊದಲ ಅಂಶವನ್ನು ಹೇಳಿ ಮನದಟ್ಟುಮಾಡಿಸಬೇಕು.

4) ಶ್ರೀ ಎಸ್. ಕೆ. ರಾಮಚಂದ್ರರಾಯರು ಹೇಳಿರುವಂತೆ ; ಕಾರ್ಯಾಲಯಕ್ಕೆ ಉತ್ತಮ ವಿದ್ವಾಂಸರು ದೊರೆತು ಅವರ 'ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞ'ದಂತೆ ಪ್ರಸಿದ್ಧವಾಗಿರವುಗಳಿಂದ ಮೊದಲ್ಗೊಂಡು ಉಳಿದ ಎಲ್ಲ ಇಂಗ್ಲಿಷ್-ಸಂಸ್ಕೃತದಲ್ಲಿರುವ ಗ್ರಂಥಗಳನ್ನು ಕನ್ನಡಕ್ಕೆ, ಕನ್ನಡದ ಎಲ್ಲ ಗ್ರಂಥಗಳನ್ನು ಇಂಗ್ಲಿಷಿಗೆ ಅನುವಾದ ಮಾಡಬೇಕು ; ಅದರಂತೆ, ಭಾಗ 1 ಮಾತ್ರ ಪ್ರಕಟಣೆಯಾಗಿ, ಅಪೂರ್ಣವಾಗಿರುವ ಗ್ರಂಥಗಳನ್ನು ಮುಂದುವರೆಸಿ ಎರಡನೆಯ ಭಾಗವನ್ನೂ ತಂದು ವಿಚಾರಪೂರ್ಣತೆಗೆ ಸಹಾಯ ಮಾಡಬೇಕು.

5) ವೇದಾಂತ ವಿಚಾರ ವಿದ್ವದ್ ಗೋಷ್ಠಿಗಳು ಹೆಚ್ಚಾಗಿ ನಡೆಯಬೇಕು. "ಈ ಗೋಷ್ಠಿಗಳಿಗೆ ಬೇರೆ ಬೇರೆಯ ದರ್ಶನಗಳ ಪರಿಚಯವುಳ್ಳ ಪಂಡಿತರುಗಳು ಬಂದು ಸೇರಿ ಸಹಾನುಭೂತಿಯಿಂದ ತತ್ತ್ವನಿರ್ಣಯಕ್ಕಾಗಿಯೇ ವಾದ ಮಾಡಿ ಸರ್ವಸಮ್ಮತ ವಾದ ಸಿದ್ಧಾಂತವನ್ನು ಹೊರತಂದು ಜನತೆಗೆ ವೇದಾಂತ ಶಾಸ್ತ್ರದ ಅವಶ್ಯಕತೆಯನ್ನೂ, ಪ್ರಯೋಜನವನ್ನೂ ಮನವರಿಕೆ ಮಾಡಿಕೊಡಬೇಕು. ಈಗಿನ ಕಾಲಕ್ಕೆ ವೇದಾಂತ ವಿಚಾರವು ಹೇಗೆ ಆಗಬೇಕು ? ಈಗಿನ ಸಮಸ್ಯೆಗಳಿಗೆ ವೇದಾಂತದಲ್ಲಿ ಉತ್ತರವಿದೆಯೇ ಎಂಬ ವಿಚಾರಗಳಲ್ಲಿ ಚರ್ಚೆ, ನಿರ್ಣಯವಾಗಬೇಕು"-ಇದೂ ಶ್ರೀಶ್ರೀಗಳವರ ಆಶಯ. ನಿರ್ಮಲ ಮನಸ್ಸಿನಿಂದ ವಿಷಯದ ಮೇಲೆ ಅಧಿಕೃತ ವಾಗಿ ತಮ್ಮ ಚಿಂತನೆ ಗಳನ್ನು ಹರಿತಗೊಳಿಸಿ, ಹೊಸ ಬೆಳಕನ್ನು ಕಾಣಿಸಬಲ್ಲ ಪಂಡಿತರ ಸಹಕಾರದಿಂದ ಮಾತ್ರ ಇದು ಸಾಧ್ಯ. ಇದರಲ್ಲಿ ಅಭಿಪ್ರಾಯ ಹೀಗೆ : (ಅ) ವೇದಾಂತವು ಜನರ ಏಳಿಗೆಯ ಮುಖ್ಯಕಾರಣ (ಆ) ಪಂಡಿತರುಗಳನ್ನೂ ಈ ಕಾರ್ಯದಲ್ಲಿ ತೊಡಗಿಸಿದರೆ, ಹೆಚ್ಚು ಸಮಂಜಸವಾದ ಎಲ್ಲರಿಗೂ ಒಪ್ಪಿಗೆಯಾಗಿರುವ ಉತ್ತಮ ವಿಚಾರವು ಮೂಡುವದು, ಪರಿಣಾಮವಾಗಿ ಜಿಜ್ಞಾಸುಗಳಿಗೆ ತತ್ತ್ವ, ವೇದಾಂತ ವಿಚಾರವು ಹೆಚ್ಚು ತಿಳಿಯಾಗುವದು (ಇ) ತಾವೂ ಇದರಲ್ಲಿ ಪಾಲ್ಗೊಂಡಿದ್ದಾಗ ವಿದ್ವಾಂಸರೂ ಇಂತಹ ಲೋಕೋಪಕಾರದ ಕೆಲಸದಲ್ಲಿ ಉದ್ಯುಕ್ತರಾಗುವರು - ಎಂಬ ಅಂತರಂಗವಿದೆ.

6) ಬೇರೆ ಕ್ಷೇತ್ರದ ಉಪನ್ಯಾಸಕರು ಬರದಿದ್ದರೂ, ಇರುವ ಪಂಡಿತರುಗಳೇ ಈ ದಿಸೆಯಲ್ಲಿ ತೀವ್ರವಾದ ಆಲೋಚನೆ ಮಾಡಿ ಪ್ರವೃತ್ತರಾಗಬೇಕು. ಪ್ರಾರಂಭದಲ್ಲಿ

ಶ್ರೀಶ್ರೀಗಳವರೇ ಬರೆದಂತಹ 'ವೇದಾಂತವೂ ಆಧುನಿಕ ಜನ ಜೀವನವೂ' ಎಂಬ ರೀತಿಯ ಉತ್ತಮ ಲೇಖನಗಳೂ ಕಾರ್ಯಸಾಧಕ, ವೇದಾಂತಾಭಿರುಚಿಯನ್ನು ಮೂಡಿಸಲು. ಅಂದರೆ 'ಶ್ರೀ ಶಂಕರಾಚಾರ್ಯರು ಯಾರಿಗೆ ವೇದಾಂತ ಬೇಕೇ ಬೇಕೆನಿಸುತ್ತದೆಯೋ ಅವರಿಗೆ ತಿಳಿಯುವಂತೆಯೇ ಭಾಷ್ಯಗಳನ್ನು ಬರೆದಿರುತ್ತಾರೆ, ಗೀತಾಭಾಷ್ಯಾದಿಗಳು ಸುಲಭವಾಗಿಬಿಡುತ್ತವೆ.' ಶ್ರೀಶ್ರೀಗಳು. ಆದರೆ, ಇದು ಸಂಸ್ಕೃತ ತಿಳಿದವರಿಗೆ ಮಾತ್ರ, ಅಭಿರುಚಿಯಿದ್ದವರಿಗೆ ಮಾತ್ರ. ಇದು ಸಾಮಾನ್ಯ ಜನತೆಗೂ ಮುಟ್ಟಿ ಅವರಿಗೆ ಆಸಕ್ತಿ ಬರುವದಕ್ಕೆ ವೇದಾಂತದ ಉಪಯೋಗ ತಿಳಿದು, ವೇದಾಂತ ವಿಚಾರವು ವಿಶದವಾಗುತ್ತದೆ.

7) ಕಾರ್ಯಾಲಯದ ಉಪನ್ಯಾಸಗಳಲ್ಲಿ ಶ್ರೀಶ್ರೀಗಳವರ ವಿಚಾರಗಳಿಗೆ-ವಿಶೇಷವಾಗಿ, ರೂಢಿಯಲ್ಲಿರುವ ವ್ಯಾಖ್ಯಾನಕಾರರು, ವಿವರಣಕಾರರುಗಳ ಅಭಿಪ್ರಾಯಕ್ಕಿಂತ ಭಿನ್ನವಾಗಿರುವ, ಶ್ರೀಗಳವರು ತಮ್ಮ ವಿದ್ವತ್ತು ಸತ್ಯಾನ್ವೇಷಣೆಯ ಹಂಬಲದಿಂದ ಸಂಶೋಧನೆ ಎನ್ನುವ ರೀತಿಯಲ್ಲಿ ಕಂಡುಕೊಂಡ ಅಂಶಗಳ ವಿವರವಾದ ವರ್ಣನೆ, ಮತ್ತು ಶ್ರೀಗಳವರ 'ಪ್ರಕ್ರಿಯೆ' ಏನೆಂಬುದು, 'ಶಂಕರರೆಡೆಗೇ ಹಿಂದಿರುಗಿ' ಎಂಬ ಅವರ ಕರೆಯಂತೆ, ಯಾವದೇ ಮಣಕು, ಮೇಣ ಮೆತ್ತಿದ ಭಾಗವನ್ನು ತೆಗೆದು ಶುದ್ಧ ಶಾಂಕರ ಭಾಷ್ಯಕ್ಕೆ ಪ್ರಾಧಾನ್ಯತೆಯನ್ನು ಕೊಡುವದರಿಂದ ಶ್ರೀಗಳವರಿಗೇ ಹೆಚ್ಚು ಗೌರವ ಸಲ್ಲಿಸಿದಂತೆ.

8) ಈ ವಿಷಯದಲ್ಲಿ ಶ್ರೀಗಳವರ ಕೃತಿಗಳಲ್ಲಿರುವ ಉತ್ತಮಾಂಶಗಳನ್ನು ಹೊರತರುವ ಶ್ರೀಶ್ರೀ ಸಂಶೋಧನಾ ಅಧ್ಯಯನ ಪೀಠವು ಬೆಳೆಯುವ ಮೊದಲೇ ಸ್ಥಗಿತವಾಯಿತು. ಆದರೇನು, ಯಾವ ಪೂರ್ವಗ್ರಹ ಪೀಡನೆಯಿಲ್ಲದೆ ಕ್ಲಿಷ್ಟ ವಿಚಾರಗಳನ್ನು, ಈಗಿರುವ 'ವಾದಗ್ರಸ್ತ'ವೆಂದು ಕರೆಸಿಕೊಂಡಿರುವ ಅಧ್ಯಾಯಗಳನ್ನು ತಿಳಿಯಾಗಿ ಉಪನ್ಯಾಸಗಳಲ್ಲಿ, ಪುಸ್ತಕಗಳಲ್ಲಿ ತರುವದರಿಂದ ಕಾರ್ಯಾಲಯದ ಕಾರ್ಯ ಸಾರ್ಥಕವಾಗುತ್ತದೆ.

9) ಇವೆಲ್ಲ, ಮೊದಲೇ ವೇದಾಂತ ಪ್ರವೇಶ ಮಾಡಿ ಹೆಚ್ಚು ಅಧ್ಯಯನ ಮಾಡಿದ ಉತ್ತಮ, ಮಧ್ಯಮಾಧಿಕಾರಿಗಳಿಗೆ ಆಯಿತು. ಸಾಮಾನ್ಯರಿಗೂ ವಾದ ವಿಷಯಗಳನ್ನು ಬದಿಗಿಟ್ಟು ಸರಳ ಉಪಾಯಗಳಾದ ಉಪಾಸನೆ, ಭಕ್ತಿ ವಿವಿಧ ಸಾಧನಗಳನ್ನು ಸ್ಪಷ್ಟಪಡಿಸುವದರಿಂದ ಅನೇಕರಿಗೆ ಉಪಯೋಗವಾಗುತ್ತದೆ.

10) ಇದರಲ್ಲಿ ಬಹಳ ಮುಖ್ಯವಾದುದು ಶ್ರೀಗಳವರು ಸುಮಾರು 44-45 ಸಂಪುಟಗಳಲ್ಲಿ, ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಬರೆದಿರುವ ಎಲ್ಲ

ಲೇಖನಗಳನ್ನೂ ಸರಿಯಾದ ರೀತಿಯಲ್ಲಿ ಜೋಡಿಸಿ ಗ್ರಂಥರೂಪಗಳಲ್ಲಿ ತಂದಾಗ ಶ್ರೀಗಳ ವಿಚಾರವೂ ಬಹಳಷ್ಟು ಓದುಗರಿಗೆ ಸುಲಭವಾಗಿ ದೊರಕುತ್ತದೆ, ಬೇಕೆನಿಸಿದವರು ಲೇಖನಗಳನ್ನು ಹುಡುಕುವ ಅಲೆದಾಟ, ಪರದಾಟಗಳು ತಪ್ಪುತ್ತವೆ.

ಸಮಾಧಾನದ ವಿಷಯವೆಂದರೆ, ಈ ದಿಸೆಯಲ್ಲಿ ಈಗಾಗಲೇ 'ಪಾರಿಭಾಷಿಕ ಶಬ್ದಕೋಶ', 'Introduction to Vedanta Texts'ನಂತಹ ಪುಸ್ತಕಗಳು ಬಂದಿವೆ. ಅ.ಪ್ರ. ಮಾಸಪತ್ರಿಕೆ 3 ರಿಂದ 8ರ ವರೆಗೆ ಶ್ರೀಶ್ರೀಗಳವರು ಸಂಪಾದಕೀಯದಲ್ಲಿ ಬರೆದಿದ್ದ 304 ಪುಟಗಳ ಸಂಕಲನ ಗ್ರಂಥ "ಅವಸ್ಥಾತ್ರಯ ಚಂದ್ರಿಕೆ" ಪ್ರಕಾಶನಗೊಂಡಿದೆ. ಹಾಗೆಯೇ ಇನ್ನೂ ಅನೇಕ ಪುಸ್ತಕಗಳನ್ನು ಹೊರತರುವ ಪ್ರಯತ್ನ ಸಾಗಿದೆ.

ಇವೆಲ್ಲ ಕೇವಲ ಕೆಲವೇ ಸೂಚಿಗಳು. ಈ ಉದ್ಯೋಗದಲ್ಲೇ ಪ್ರಧಾನವಾಗಿ ತೊಡಗಿಸಿಕೊಂಡು, ಮುಂದೆ ನಡೆವಾಗ ಇದರಂತಹ ಎಷ್ಟೋ ಭಾಗ ಉದ್ದೇಶ ಸಾಧನೆಗೆ ಸಹಾಯಕ ಅಂಶಗಳಂತೆ ತೋರಿಕೊಳ್ಳುತ್ತವೆ. ಇವೆಲ್ಲ ಎಷ್ಟರ ಮಟ್ಟಿಗೆ ಸಾಧಿತವಾಗುತ್ತದೆಯೆಂಬುದು ಇಲ್ಲಿಯ ಕಾರ್ಯಕರ್ತರ ಶ್ರದ್ಧೆ, ಉತ್ಸಾಹ ಮತ್ತು ಮಹಾಜನಗಳ ಪ್ರೋತ್ಸಾಹವನ್ನವಲಂಬಿಸಿದೆ. ನಿಜದಲ್ಲಿ, ಈಗ ಶ್ರೀಶ್ರೀಗಳಿಲ್ಲದಿರುವಾಗ ಅವರ ಪರಂಪರೆಯನ್ನು, ಆ ನಿಧಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರುವದರಲ್ಲಿ ಕಾರ್ಯಾಲಯಕ್ಕೆ ದೊಡ್ಡ ಹೊಣೆಗಾರಿಕೆಯಿದೆ. ಅದರಂತೆಯೇ ಮಹಾಜನರ ಸಹಕಾರ, ಸಹಾಯವೂ ಇನ್ನೂ ಹೆಚ್ಚಾಗಿ ಬೇಕಾಗಿದೆ ; ಶ್ರದ್ಧೆಯಿಂದ, ಪ್ರತಿಫಲಾಪೇಕ್ಷೆ ಇಲ್ಲದ ಉತ್ಸಾಹೀ ವಿಚಾರವಂತರು ಕಾರ್ಯಾಲಯವನ್ನು ನಡೆಸುವದಕ್ಕೆ ಬಂದರೆ, ಅದೇ ದೊಡ್ಡ ಶುಭ ಸೂಚನೆ. ಶ್ರೀಗಳವರ ಗುರಿಯನ್ನು ಸಾಧಿಸುವಂತಹ ಉತ್ತಮ ಶ್ರದ್ಧಾವಂತ ವಿದ್ವಾಂಸರನ್ನು, ಉತ್ಸಾಹಭರಿತ ಕಾರ್ಯಕರ್ತರನ್ನು ಕೃಪೆಯಿಂದ ಒದಗಿಸಿಕೊಟ್ಟು, ಲೋಕೋಪಕಾರಿ ಸಾಧನೆಗಳು ಹೆಚ್ಚಿನ ರೀತಿಯಲ್ಲಿ ನಡೆಯಲಿ ಎಂಬ ಪರಮಾನುಗ್ರಹವನ್ನು ಭಗವಂತನು ನೀಡಿ, ಈ ಕಾರ್ಯಾಲಯವನ್ನು ನಿರಂತರವಾಗಿ ಅತಿಶಯವಾಗಿ ಮುನ್ನಡೆಸಲಿ ಎಂದು ಕರುಣಾಳುವಿಗೆ, ಅವನ ಕೈ ನೀಡಿದ, ನೀಡುವ ಸಹಾಯಕ್ಕೆ, ಬೆಳಕಿಗಾಗಿ ಸವಿನಯ ಅಂತರಂಗ ಪ್ರಾರ್ಥನೆ.

# ಅಧ್ಯಾಯ 3

# ವಿದ್ವಾಂಸರ ಲೇಖನಗಳು

## ಶ್ರೀ ಸಚ್ಚಿದಾನಂದ ಜ್ಯೋತಿ

### ಅಪೂರ್ವ-ಅದ್ವೈತಜ್ಯೋತಿ

(ವಿದ್ವಾನ್ ಎನ್. ರಂಗನಾಥಶರ್ಮರು, ನಿವೃತ್ತ ವ್ಯಾಕರಣ ಪ್ರಧಾನಾಚಾರ್ಯರು
ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆ, ಬೆಂಗಳೂರು)

ನಮಃ ಶ್ರೀಸಚ್ಚಿದಾನಂದೇಂದ್ರಾಖ್ಯಾಬೋಧ್ಯಾಯ ಯೋಗಿನೇ।
ಶ್ರೀಮಚ್ಛಂಕರಯೋಗೀಂದ್ರಖ್ಯಾತಸಿದ್ಧಾಂತವೇದಿನೇ॥
ಅದ್ವೈತಜ್ಯೋತಿರುದ್ದೀಪ್ಯ ಪ್ರಬಲಂ ಮಾನಸಂ ತಮಃ।
ಪ್ರಬಂಧೈರ್ವಿವಿಧೈರ್ದೀಪ್ತೈರಿವ ಯೇನ ವ್ಯಪೋಹಿತಮ್॥

ಶ್ರೀಶಂಕರಭಗವತ್ಪಾದರ ಅದ್ವೈತಸಿದ್ಧಾಂತವು ವೇದವೆಂಬ ಕ್ಷೀರಸಾಗರದಿಂದ ಕಡೆದು ತೆಗೆದ ಅಮೃತ. ಈ ಅಮೃತವನ್ನುಂಡು ತೃಪ್ತರೂ ಕೃತಕೃತ್ಯರೂ ಆದ ಅನೇಕ ಮಹಾತ್ಮರು, ತಮ್ಮಂತೆ ಇತರರೂ ಶ್ರೇಯೋಭಾಗಿಗಳಾಗಲೆಂದು ಕಾರುಣ್ಯದಿಂದ ಅದನ್ನು ಹಂಚಲು ಪ್ರಯತ್ನಿಸಿದ್ದಾರೆ - ಸಾಕ್ಷಾತ್ತಾಗಿ ಶಿಷ್ಯರಿಗೆ ಬೋಧಿಸುವುದರಿಂದ ಮತ್ತು ಗ್ರಂಥಗಳ ರಚನೆಯಿಂದ. ಈ ಎರಡು ಬಗೆಯಿಂದಲೂ ತನುಮನಧನಗಳನ್ನು ಧಾರೆಯಾಗಿ ಎರೆದು ಧನ್ಯರೆನಿಸಿದ ಮಹಾತ್ಮರಲ್ಲಿ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಕೊಡುಗೆ ವಿಶಿಷ್ಟವಾದುದು.

ನಾನು ವಿದ್ಯಾರ್ಥಿದೆಸೆಯಲ್ಲಿದ್ದರೂ ಅನೇಕವೇಳೆ ಅವರನ್ನು ಕಂಡು ಮಾತನಾಡುವ ಸುಯೋಗ ನನಗೆ ದೊರಕಿತ್ತು. ಅವರ ಸರಸವಾದ ಸಂಭಾಷಣೆ, ಮೃದುನುಡಿ, ಸದಾ ಆಧ್ಯಾತ್ಮವಿಷಯಕವಾದ ಚರ್ಚೆಗಳು – ನನ್ನಲ್ಲಿ ಕುತೂಹಲವನ್ನು ಕೆರಳಿಸಿದ್ದವು. ಕೈಯಲ್ಲಿ ಒಂದೆರಡು ಪುಸ್ತಕಗಳನ್ನು ಹಿಡಿದು, ಬೀದಿಯಲ್ಲಿ ಹೋಗುವಾಗ ಆಪ್ತರಾದ ಮಿತ್ರರು ದೊರಕಿದರೆ ಅವರೊಡನೆ ವೇದಾಂತದ ವಿಷಯವನ್ನೇ ಪ್ರಸ್ತಾಪಿಸಿ ಮಾತನಾಡುತ್ತಿದ್ದುದನ್ನು ಹಲವುಬಾರಿ ಕಂಡಿದ್ದೇನೆ. ಆಗೆಲ್ಲ ಅಥೆನ್ಸಿನ ಬೀದಿಯಲ್ಲಿ ಸಂಚರಿಸುತ್ತಾ ಜನರೊಡನೆ ಗಹನವಾದ ತತ್ತ್ವವನ್ನು ಬಿಡಿಸುತ್ತಿದ್ದ ಸಾಕ್ರೆಟಿಸನ ನೆನಪಾಗುತ್ತಿತ್ತು.

ಶ್ರೀ ಸ್ವಾಮಿಗಳವರಿಗೆ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್‌ಭಾಷೆಗಳಲ್ಲಿಯೂ ಆಳವಾದ ಪಾಂಡಿತ್ಯವಿತ್ತು. ಈ ಮೂರು ಭಾಷೆಗಳಲ್ಲಿರುವ ಶ್ರೇಷ್ಠವೇದಾಂತ ಗ್ರಂಥ ಗಳನ್ನು ಸತತವಾಗಿ ಅವರು ಅಭ್ಯಾಸಮಾಡುತ್ತಿದ್ದರು. ದಾರ್ಶನಿಕಗ್ರಂಥಗಳ ಆಳವಾದ ಅಧ್ಯಯನವು ಸಾಮಾನ್ಯ ವಾಗಿ ಎರಡು ಕಾರಣಗಳಿಂದ ಸಂಭವಿಸುತ್ತದೆ. ಒಂದು ವೃತ್ತಿ ನಿಮಿತ್ತವಾಗಿ, ಇನ್ನೊಂದು ತಾನಿರುವ ಸ್ಥಾನದ ನಿಮಿತ್ತವಾಗಿ. ಈ ಎರಡು ಕಾರಣ ಗಳೂ ಇಲ್ಲದೆ ಕೇವಲ ಜ್ಞಾನ ಪಿಪಾಸೆಯಿಂದ ಸತತವಾಗಿ ಆಳವಾದ ಅಧ್ಯಯನ ಮಾಡತಕ್ಕವರು ವಿರಳವಾದರೂ ಅಲ್ಲಲ್ಲಿ ಕೆಲವು ಪುಣ್ಯಾತ್ಮರು ಇರುತ್ತಾರೆಂಬುದಕ್ಕೆ ಶ್ರೀಸ್ವಾಮಿಗಳು ಪ್ರಥಮ ನಿದರ್ಶನವಾಗಿದ್ದರು.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಿಗೆ ಚಿಕ್ಕವಯಸ್ಸಿನಲ್ಲಿಯೇ ವೇದಾಂ ತಾಧ್ಯಯನದಲ್ಲಿ ಸ್ಫೂರ್ತಿಯೂ ಮಾರ್ಗದರ್ಶನವೂ ದೊರೆತದ್ದು ಹಲವು ಮೂಲಗಳಿಂದ : ಮೊದಲ ಬೀಜಾವಾಪ ಊರಿನಲ್ಲಿ, ತಾಯಿತಂದೆಯರಿಂದ ; ವೇದಾಂತಕ್ಕೊಂದು ಇಣುಕು ನೋಟ ಚಿಕ್ಕಮಗಳೂರಿನಲ್ಲಿ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರಿಂದ ; ವೇದಾಂತ ಪ್ರವೇಶ, ಮೊದಲ ಪಾಠಗಳು, ವಿಚಾರ ವಿವರಣೆ ಮತ್ತು ತಾವೇ ಕೆಲವಾರು ಪುಸ್ತಕಗಳನ್ನು ಓದಿದ್ದರೂ ವಿಷಯಗಳು ಸ್ಫುಟವಾದದ್ದು ಬೆಂಗಳೂರಿನಲ್ಲಿ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರವರಿಂದ. ಕೆಲಸಕ್ಕೆ ಸೇರಿದಾಗ ಶ್ರೀ ಚಿದಂಬರಯ್ಯನವರ ಪರಿಚಯವಾದ ಮೇಲೆ, ಅವರನ್ನೂ ವೇದಾಂತಕ್ಕೆ ಸೆಳೆದು, ವೇದಾಂತ ವಿಚಾರಗಳು ಮುನ್ನಡೆಯಾದದ್ದು ಜೊತೆಗೂಡಿದ ಸಹ ಅಧ್ಯಯನದಿಂದ. ಗುರುವಿನ ಸ್ಥಾನವನ್ನಲಂಕರಿಸಿ ಮಂತ್ರೋಪದೇಶಮಾಡಿದವರು ಗೋಂದಾವಳಿಯ ಶ್ರೀ ಬ್ರಹ್ಮಚೈತನ್ಯರು. ಶ್ರೀಕುರ್ತಕೋಟಿ ಮಹಾಭಾಗವತರ ದೀರ್ಘ ಸಾಹಚರ್ಯ ದಿಂದ ಅಧ್ಯಾತ್ಮಜೀವನದಲ್ಲಿ ಸ್ಥೈರ್ಯ ಒದಗಿತು. ಶೃಂಗೇರಿ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳಿಂದ ಭಾಷ್ಯಶಾಂತಿ ಪಾಠವಾಯಿತು. ಮಹಾಮಹೋಪಾಧ್ಯಾಯ ಹಾ|| ವಿರೂಪಾಕ್ಷ ಶಾಸ್ತ್ರಿಗಳವರ ಸಂನಿಧಿಯಲ್ಲಿ ಶಾಂಕರ ಭಾಷ್ಯಗಳ ಅಧ್ಯಯನವು ನಡೆಯಿತು. ಭಾರತೀಯ ಮತ್ತು ಪಾಶ್ಚಾತ್ಯ ದರ್ಶನಗಳಲ್ಲಿ ನಿಷ್ಣಾತರಾದ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರಂತಹ ಮಹನೀಯರೊಡನೆ ಸತತವಾಗಿ ನಡೆಸುತ್ತಿದ್ದ ಅಭ್ಯಾಸದ ಫಲವಾಗಿ ತುಲನಾತ್ಮಕವಾದ ಅಧ್ಯಯನ ಕ್ರಮವು ವಶವರ್ತಿಯಾಯಿತು. ಮನುಷ್ಯನಿಗೆ ಮುಮುಕ್ಷುತ್ವವು ಒದಗಿಬಂದಾಗ ದೈವವೇ ಸಜ್ಜನಸಂಗವನ್ನು ದೊರಕಿಸಿಕೊಡುತ್ತದೆ.

ದುರ್ಲಭಂ ತ್ರಯಮೇವೈತದ್ ದೈವಾನುಗ್ರಹಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

ಇಡಿಯ ಜೀವನವನ್ನೇ ವೇದಾಂತದ ಅಧ್ಯಯನಕ್ಕೆ ಮೀಸಲುಮಾಡಿದ್ದರಿಂದ ತೀವ್ರವಾದ ವಿರಕ್ತಿಯು ಸಹಜ ಪರಿಣಾಮವಾಯಿತು. ಮಾನಸಿಕಸಂನ್ಯಾಸವು ಸ್ವತಃ ಪ್ರಾಪ್ತವಾಗಿತ್ತು. ಅವರು ಬಾಲ್ಯಸಂನ್ಯಾಸಿಗಳೂ ಅಲ್ಲ, ಮಠಾಧಿಪತಿಗಳಾಗಿ ಸಂನ್ಯಾಸ ವನ್ನು ಸ್ವೀಕರಿಸಲೂ ಇಲ್ಲ, ನಿಜವಾದ ಅರ್ಥದಲ್ಲಿ ಪರಿವ್ರಾಜಕರಾಗಿದ್ದರು. ಇದು ವಿದ್ವತ್ ಸಂನ್ಯಾಸ.

**ಸಾಧನೆ** : ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯವು ಶ್ರೀ ಸ್ವಾಮಿಗಳ ಕರ್ತೃತ್ವಶಕ್ತಿಯದ್ಯೋತಕ. ಕನ್ನಡದಲ್ಲಿ ಶಾಸ್ತ್ರೀಯಗ್ರಂಥಗಳು ವಿರಳವೆಂಬ ಅಪಕೀರ್ತಿಯನ್ನು ತೊಡೆದುಹಾಕಿದ ಮಹಾಕಾರ್ಯವನ್ನು ಶ್ರೀ ಸ್ವಾಮಿಗಳು ಈ ಸಂಸ್ಥೆಯ ಹೆಸರಿನಲ್ಲಿ ನಡೆಸಿದ್ದಾರೆ. ಈ ಸಂಸ್ಥೆಯ ಅಂಗವಾಗಿ "ಅಧ್ಯಾತ್ಮಪ್ರಕಾಶ"ವೆಂಬ ಮಾಸ ಪತ್ರಿಕೆಯನ್ನು ನಡೆಸುತ್ತ ಭಕ್ತಿ, ಜ್ಞಾನ, ವೈರಾಗ್ಯಗಳಿಗೆ ಸಂಬಂಧಿಸಿದಂತೆ ಸಾವಿರಾರು ಲೇಖನಗಳನ್ನು ಬರೆದಿದ್ದಾರೆ ; ಶ್ರೇಷ್ಠಗ್ರಂಥಗಳನ್ನು ರಚಿಸಿದ್ದಾರೆ.

ಎಲ್ಲೆಡೆಯೂ ಶಾಸ್ತ್ರೀಯವಾದ ವಿವರಣೆ, ವಿಮರ್ಶೆ, ವಸ್ತು ವಿಶ್ಲೇಷಣೆಗಳು ಶ್ರೀ ಸ್ವಾಮಿಗಳ ಗ್ರಂಥರಚನಾವಿಚಕ್ಷಣತೆಯನ್ನು ಎತ್ತಿತ್ತೋರಿಸುತ್ತವೆ ; ಸಂದೇಹಕ್ಕೆ ಎಡೆಯಿಲ್ಲದಂತೆ ಶಾಸ್ತ್ರೀಯವಿಚಾರವನ್ನು ವ್ಯಕ್ತಗೊಳಿಸುತ್ತವೆ. ಇಂಥ ಶಾಸ್ತ್ರ ಗ್ರಂಥ ಗಳನ್ನು ಬೃಹತ್ಸಂಖ್ಯೆಯಲ್ಲಿ ನಿರ್ಮಿಸಿದ ಶ್ರೀಗಳವರ ಎಣೆಯಿಲ್ಲದ ಸಾಹಸ ಅಚ್ಚರಿ ಗೊಳಿಸುವಂತಹುದು. ವೇದಾಂತಗ್ರಂಥಗಳನ್ನು ರಚಿಸಿ ಕನ್ನಡಸಾಹಿತ್ಯವನ್ನು ಶ್ರೀಮಂತ 'ಗೊಳಿಸಿದ ಕೀರ್ತಿ ಪ್ರಥಮತಃ ಶ್ರೀಗಳವರಿಗೆ ಸಲ್ಲುತ್ತದೆ. ಈ ವಿಷಯದಲ್ಲಿ ಇನ್ನು ಯಾರು ಇಷ್ಟು ಕೆಲಸವನ್ನು ಮಾಡಿದ್ದಾರೆಂದು ಕೇಳಿದರೆ ಔದ್ಧತ್ಯದ ಪ್ರಶ್ನೆಯಾಗದು. ಇದಕ್ಕಿಂತ ಹೆಚ್ಚಿನ ಅಚ್ಚರಿಯೇನೆಂದರೆ, ಇದುವರೆಗೆ ಯಾವ ಸಾಹಿತ್ಯವೇದಿಕೆಯ ಮೇಲೂ ಶ್ರೀಗಳವರ ಈ ಸಾಹಿತ್ಯಸೇವೆಯ ವಿಚಾರ ಪ್ರಸ್ತುತವಾಗದೆ ಇರುವುದು ! ಸರ್ಕಾರದ ನೆರವನ್ನೂ ಪಡೆಯದೆ, ಲೋಕಪ್ರಸಿದ್ಧಿಯನ್ನೂ ಬಯಸದೆ ಅಹೋ ರಾತ್ರಿಯೂ ದುಡಿದು ನಿಷ್ಕಾಮಕರ್ಮ ಯೋಗವೆಂದರೇನೆಂಬುದನ್ನು ಶ್ರೀಗಳ ವರು ಹೀಗೆ ತೋರಿಸಿಕೊಟ್ಟಿದ್ದಾರೆ. ಲೋಕಸಂಗ್ರಹವೆಂದರೆ ಇದೇ. ಲೋಕದ ಉನ್ಮಾರ್ಗವಾರಣವೂ ಈ ಗ್ರಂಥಗಳಿಂದಲೇ ಸಾಧ್ಯ.

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಶ್ರೇಷ್ಠವಾಗ್ಮಿಗಳು. ಕಠಿಣವಾದ ದಾರ್ಶನಿಕತತ್ತ್ವವನ್ನು ಸುಲಭವಾಗಿ ಬಿಡಿಸಿಹೇಳುವ ಕಲೆ ಅವರಿಗೆ ಅಧೀನವಾಗಿತ್ತು. ಸಮಯೋಚಿತವಾದ ಉಪಮೆಗಳನ್ನೂ ದೃಷ್ಟಾಂತವಾಗಿ ಚಮತ್ಕಾರದ ಕಥೆಗಳನ್ನೂ

ಹೇಳಿ ಸಭಾಸದರನ್ನು ನಗಿಸುತ್ತ, ಗಹನತತ್ತ್ವಗಳನ್ನು ಹತ್ತಿಯನ್ನು ಹಿಂಜಿದಂತೆ ಬಿಡಿಸುತ್ತ ಅವರು ಉಪನ್ಯಾಸಮಾಡುತ್ತಿದ್ದಾಗ ಕಾವ್ಯೋಪನ್ಯಾಸವನ್ನು ಕೇಳಿದಂತೆ ಮನೋರಂಜನೆಯಾಗುತ್ತಿತ್ತು. ಸಮಕಾಲದಲ್ಲಿಯೇ ಗಂಗಾಪ್ರವಾಹದಂತೆ ಅದು ಮನಸ್ಸನ್ನು ಸ್ವಚ್ಛಗೊಳಿಸುತ್ತಿತ್ತು ; ಅಮೃತವನ್ನುಂಡಂತೆ ತೃಪ್ತಿಯಾಗುತ್ತಿತ್ತು. ಶ್ರೀಗಳ ಉಪನ್ಯಾಸದ ಒಂದು ವಿಶೇಷವೇನೆಂದರೆ, ಎಲ್ಲ ಶಾಸ್ತ್ರೀಯವಿಷಯಗಳನ್ನೂ ಒಟ್ಟಿಗೆ ಸೇರಿಸಿ ಹೊಸೆದು ಕಗ್ಗವನ್ನು ಮಾಡುತ್ತಿರಲಿಲ್ಲ. ಆತ್ಮ ಜ್ಞಾನ, ಭಕ್ತಿ, ವೈರಾಗ್ಯ - ಇತ್ಯಾದಿ ವಿಷಯಗಳಲ್ಲಿ ಯಾವುದಾದರೊಂದನ್ನು ತೆಗೆದು ಕೊಂಡು ಅದನ್ನು ಮನದಟ್ಟಾಗು ವಂತೆ ಅವರು ಬಿಡಿಸುತ್ತಿದ್ದರು. ಅದರಿಂದಾಗಿ ಶ್ರೋತೃಗಳಿಗೆ ತತ್ತ್ವಗ್ರಹಣವು ಕಷ್ಟವಾಗುತ್ತಿರಲಿಲ್ಲ; ಯಾವುದೂ ಅಪೂರ್ಣವಾಗುತ್ತಿರಲಿಲ್ಲ. 'ಒಂದು ವಿಚಾರವನ್ನು ಸರಿಯಾಗಿ ತಿಳಿದುಕೊಂಡದ್ದಾಯಿತು' ಎಂಬ ನಂಬಿಕೆ ಶ್ರೋತೃಗಳಿಗೆ ಉಂಟಾಗುತ್ತಿತ್ತು.

ಶ್ರೀಸ್ವಾಮಿಗಳು ಸದಾ ತತ್ತ್ವಗ್ರಂಥಗಳ ಅಭ್ಯಾಸರಚನೆಗಳಲ್ಲಿ ಮಗ್ನರಾಗಿದ್ದರೂ ಒಳ್ಳೆಯ ಸಹೃದಯರು. ಸರಸಸಂಭಾಷಣೆಯಲ್ಲಿಯೂ ಕಾವ್ಯಮರ್ಮವನ್ನು ತಿಳಿಸಿ ಹೇಳುವುದರಲ್ಲಿಯೂ ನಿಷ್ಣಾತರು. ಶ್ರೀ ರಾಮೋತ್ಸವದಲ್ಲಿ ಪ್ರತಿದಿನ ಶ್ರೀಮದ್ರಾ-ಮಾಯಣದಮೇಲೆ ವಿದ್ವಾಂಸರಿಂದ ಉಪನ್ಯಾಸಮಾಡಿಸಿದ ಮೇಲೆ, ಶ್ರೀಗಳವರು ಅಧ್ಯಕ್ಷಸ್ಥಾನದಿಂದ ಮಾತಾಡುವುದನ್ನು ಅನೇಕಬಾರಿ ನಾನು ಕೇಳಿದ್ದೇನೆ. ಆಯಾ ದಿನದ ವಿಷಯದಮೇಲೆ ಮಾತಾಡುತ್ತ ರಾಮಾಯಣದ ಕಾವ್ಯಸೌಂದರ್ಯವನ್ನು ಮಾರ್ಮಿಕವಾಗಿ ಚಿತ್ರಿಸುತ್ತಿದ್ದರು. ಅವರ ರಸಜ್ಞತೆಯನ್ನು ತಿಳಿದು ನಾನು ಮುಗ್ಧನಾಗಿದ್ದೇನೆ.

ಶ್ರೀಗಳವರಿಗೆ ಅದ್ವೈತಸಿದ್ಧಾಂತದಲ್ಲಿ ಪರಾನಿಷ್ಠೆ. ಆದರೆ ಎಂದೂ ಮತೀಯ ಭಾವನೆಯನ್ನು ತಳೆದು ಅನ್ಯಸಿದ್ಧಾಂತವನ್ನು ದೂಷಿಸಿದವರಲ್ಲ. ಅವರ ಧ್ಯೇಯ ಸತ್ಯಾನ್ವೇಷಣೆ. ಅನ್ಯಸಿದ್ಧಾಂತದ ಗುಣಗಳನ್ನು ಗ್ರಹಿಸಿ ಅದ್ವೈತಕ್ಕೆ ಅನುಗುಣವಾಗಿ ಅವನ್ನುಹೊಂದಿಸಿಕೊಳ್ಳುತ್ತಿದ್ದರು. ಬೆಳಕು ಯಾವದಿಕ್ಕಿನಿಂದ ಬಂದರೂ ಸ್ವಾಗತವಿತ್ತು. ಅವರು ಸಾರಗ್ರಾಹಿಗಳು ; ಶ್ರೀರಾಮಾನುಜಾಚಾರ್ಯರ ಶ್ರೀಭಾಷ್ಯ, ವೇದಾಂತಸಾರ, ವೇದಾರ್ಥಸಂಗ್ರಹಗಳನ್ನುಅವರು ಅನುವಾದಿಸಿದ್ದಾರೆ; ಬೌದ್ಧಮತದಲ್ಲಿಪ್ರಸಿದ್ಧವಾದ 'ಧಮ್ಮಪದ' ವನ್ನು ಕನ್ನಡಿಸಿದ್ದಾರೆ.

ಶ್ರೀಗಳವರಿಗೆ ಪ್ರತಿಯೊಂದು ಕಾರ್ಯದಲ್ಲಿಯೂ ಶಿಸ್ತು ಬೇಕು. ಸಕಲ-ಕಾರ್ಯಗಳೂ ವ್ಯವಸ್ಥಿತವಾಗಿ ಕಾಲಕ್ಕೆ ಸರಿಯಾಗಿ ನಡೆಯಬೇಕು. ಭಜನೆಯಾಗಲಿ,

ಪ್ರವಚನವಾಗಲಿ ಗೊತ್ತಾದಕಾಲದಲ್ಲಿ ಆರಂಭವಾಗಿ ಗೊತ್ತಾದಕಾಲದಲ್ಲಿ ಮುಗಿಯಬೇಕು. ಸ್ವತಃ ತಮ್ಮ ಪ್ರವಚನವನ್ನೂ ಸಹ ನಿಯಮಿತಕಾಲಕ್ಕೆ ಸರಿಯಾಗಿ 'ನಾರಾಯಣ, ನಾರಾಯಣ' ಎಂದು ಸಮಾಪ್ತಿಗೊಳಿಸುವುದು ನಿಶ್ಚಿತ. ಅವರ ಅಚ್ಚುಕಟ್ಟಿಗೆ ಉದಾಹರಣೆಯಾಗಿ ಅವರು ಪ್ರಕಟಿಸಿರುವ ಗ್ರಂಥಗಳನ್ನು ನೋಡಬಹುದು. ವಿಷಯಪರಿಶುದ್ಧಿಯಲ್ಲಾಗಲಿ, ಟಿಪ್ಪಣಿ ಮುಂತಾದ ಅನುಬಂಧಗಳಲ್ಲಾಗಲಿ ಒಂದು ನ್ಯೂನತೆಯನ್ನು ಎತ್ತಿತೋರಿಸಲು ಸಾಧ್ಯವೆ ? ವಿಷಯಾನುಗುಣವಾಗಿ ಕನ್ನಡವು ಸಂಸ್ಕೃತಮಯವಾಗಿದ್ದರೂ ಅಕ್ಷರಸ್ಖಾಲಿತ್ಯವಿಲ್ಲ. ಈ ಬಗೆಯ ಪರಿಶುದ್ಧವಾದ ಮುದ್ರಣ ಕನ್ನಡಪ್ರಕಾಶನಸಂಸ್ಥೆಯಲ್ಲಿ ಅನ್ಯತ್ರ ದುರ್ಲಭ.

ಶ್ರೀಶ್ರೀಗಳವರು ಮಠಾಧಿಪತ್ಯವನ್ನಾಶಿಸದೆ ಬಿಡಿಸಂನ್ಯಾಸಿಗಳಾಗಿ ತಮ್ಮ ಅನವರತವಾದ ಪರಿಶ್ರಮದಿಂದ ಒಂದು ಸಂಸ್ಥೆಯನ್ನೇ ಕಟ್ಟಿ ಬೆಳೆಯಿಸಿ, ಯಾವ ಮಠವೂ ಮಾಡಲಾರದ ಕಾರ್ಯವನ್ನು ಏಕಾಏಕಿ ಸಾಧಿಸಿದರು. ಜ್ಞಾನದಾನಕ್ಕಿಂತ ಹೆಚ್ಚಿನ ದಾನವಿಲ್ಲವೆಂದು ಜ್ಞಾನಯಜ್ಞವನ್ನು ನಡೆಸಿದರು. ಶ್ರೀಶಂಕರಾಚಾರ್ಯರ ಸಿದ್ಧಾಂತದಲ್ಲಿ 'ಇದಮಿತ್ಥಮ್' ಎಂಬಷ್ಟು ವೈದುಷ್ಯವನ್ನುಗಳಿಸಿ ಆಚಾರ್ಯರ ಉಪದೇಶಪರಂಪರೆಯನ್ನು ಮುಂದುವರೆಸಿದರು.

ಶ್ರೀಶ್ರೀಗಳವರು ಸ್ಥಾಪಿಸಿದ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದಿಂದ ಅಮೋಘವಾದ ಜನತಾಸೇವೆ ನಡೆದಿದೆ, ನಡೆಯುತ್ತಿದೆ. ಮುಖ್ಯವಾಗಿ ಕನ್ನಡವಾಙ್ಮಯದಲ್ಲಿ ದಾರ್ಶನಿಕಗ್ರಂಥಗಳನ್ನು ವಿಪುಲವಾಗಿ ಸಂಪಾದಿಸಿಕೊಟ್ಟ ಕೀರ್ತಿ ಶ್ರೀಗಳವರಿಗೆ ಸಲ್ಲುತ್ತದೆ. ಈ ದಿಶೆಯಲ್ಲಿ ಯಾವ ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ ಕನ್ನಡದಲ್ಲಿ ಈ ಮಹಾಕಾರ್ಯವನ್ನು ಸಾಧಿಸಿಲ್ಲ. ಶ್ರೀಗಳವರು ಲೌಕಿಕದಲ್ಲಿಯೂ ಪ್ರವೇಶಮಾಡಿದ್ದರೆ ವಿಶ್ವವಿದ್ಯಾಲಯಗಳು ನೀಡುವ ಎಷ್ಟೋ ಡಾಕ್ಟರೇಟ್ ಪದವಿಗಳು ಅವರ ಪಾದತಳದಲ್ಲಿ ಉರುಳಾಡುತ್ತಿದ್ದವು.

ಅಪೂರ್ವವ್ಯಕ್ತಿತ್ವವುಳ್ಳ ತೇಜೋಮಯವಾದ ಈ ಧ್ರುವತಾರೆ ಕಾಲಪರಿಪಾಕದಿಂದ ಅಸ್ತಂಗತವಾದರೂ, ಅದರ ತೇಜಸ್ಸು ಮಾತ್ರ ಅಸ್ತವಾಗಲಿಲ್ಲ ; ಗ್ರಂಥರಾಶಿಗಳಲ್ಲಿಯೂ ವಿಪುಲಸಂಖ್ಯೆಯ ಭಕ್ತವೃಂದದ ಹೃದಯದಲ್ಲಿಯೂ ಧ್ರುವವಾಗಿ ನೆಲೆಸಿತು.

★★★★

# ಅಭಿನವಶಂಕರರ ಸಾರಸ್ವತಸೇವೆ

(ಎಸ್.ಕೆ. ರಾಮಚಂದ್ರರಾವ್)

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಉಸಿರಾಡಿದ ಒಂದೊಂದುಗಳಿಗೆಯೂ ವೇದಾಂತಕ್ಕೇ ಮೀಸಲಾಗಿದ್ದಿತು. ಗುರುಗಳು ಕೈಗೊಂಡು ನೆರವೇರಿಸಿದ ಕೆಲಸ ಶುದ್ಧಶಾಂಕರವೆನ್ನಬಹುದಾದ ಸುಮಾರು ಒಂದು ಸಾವಿರದ ಮುನ್ನೂರು ವರ್ಷಗಳ ಹಿಂದೆ ಭಗವತ್ಪಾದರು ಮಾಡಿದ ಕೆಲಸದಂತೆ ಶುದ್ಧವೇದಾಂತ ಪ್ರಕ್ರಿಯೆಯನ್ನು ತಿಳಿಸಿ ಕೊಡುವುದು, ಔಪನಿಷದ ದರ್ಶನದ ಸಾಂಪ್ರದಾಯಿಕ ನಿಲುವನ್ನು ಸ್ಪಷ್ಟಪಡಿಸಿ, ಅದನ್ನು ಮರೆಮಾಚುವ, ಹದಗೆಡಿಸುವ, ಗಾಸಿಪಡಿಸುವ ಪ್ರಯತ್ನಗಳಿಂದ ಜಿಜ್ಞಾಸುಗಳನ್ನೂ ಮುಮುಕ್ಷುಗಳನ್ನೂ ಪಾರುಮಾಡಿದವರು ಶ್ರೀಮಚ್ಛಂಕರರು. ನಮ್ಮ ಕಾಲದಲ್ಲಿಯೂ ಇಂಥದೊಂದು ಪರಿಸ್ಥಿತಿ ಮತ್ತೆ ತಲೆದೋರಿಕೊಂಡಾಗ, ಶಾಂಕರದರ್ಶನದ ನಿಲುವನ್ನು ಮರೆಮಾಚಿದ ವ್ಯಾಖ್ಯಾನಗಳ ಹಿಡಿತದಿಂದ ನಮ್ಮನ್ನು ಪಾರುಮಾಡುವಯತ್ನ ಶ್ರೀ ಶ್ರೀಗಳವರಿಂದ ನಡೆಯಿತು.

ಅವರ ಬದುಕಿನಲ್ಲಿ ವಿದ್ಯಾರ್ಥಿದೆಶೆ, ವೃತ್ತಿಪರತೆ, ಲೌಕಿಕಪ್ರವೃತ್ತಿ, ಸಂನ್ಯಾಸ ಧರ್ಮ ಎಲ್ಲದರಲ್ಲೂ ಎದ್ದುಕಾಣುತ್ತಿದ್ದುದು ಆಧ್ಯಾತ್ಮಿಕಪ್ರವೃತ್ತಿಯೆ. ಸಂಪ್ರದಾಯದಲ್ಲಿ ಮೋಕ್ಷವೆಂಬುದೇ ಪರಮಪುರುಷಾರ್ಥ, ಜ್ಞಾನವೊಂದೇ ಮೋಕ್ಷಕ್ಕೆ ಸಾಧನೆ ಎಂಬ ಸರ್ವಸಮ್ಮತವಾದ ನಿಲುವಿದೆಯಷ್ಟೆ. ಇದನ್ನು ಕುರಿತು ಅಧ್ಯಯನ, ಪರೀಕ್ಷೆ, ಚಿಂತನೆ, ಪ್ರಯೋಗ, ಪ್ರಚಾರ ಇವು ಆಧ್ಯಾತ್ಮಿಕಪ್ರವೃತ್ತಿಯ ಅಭಿವ್ಯಕ್ತಿಯೆನಿಸಿದುವು. ಈ ಚೌಕಟ್ಟಿನಲ್ಲಿ ಯಾವುದು ಸಂಪ್ರದಾಯಶುದ್ಧವಾದ ಪ್ರಕ್ರಿಯೆ, ಯಾವುದು ಯಾವುದೋ ಕಾಲದಲ್ಲಿ ಯಾರಿಂದಲೋ ಹೇಗೋ ನುಸುಳಿಕೊಂಡು ಬಂದ ಕಲ್ಪನೆ ಎಂಬುದನ್ನು ಕುರಿತ ವಿವೇಚನೆ ಅಗತ್ಯವಾಗುತ್ತದೆ.

ಶ್ರೀ ಶ್ರೀಗಳವರು ಶ್ರೀಶಂಕರರ ಮೂಲಗ್ರಂಥಗಳು (ಎಂದರೆ ಪ್ರಸ್ಥಾನತ್ರಯ ಭಾಷ್ಯಗಳು) ಮತ್ತು ಅವುಗಳಿಗೆ ಕಾಲಕ್ರಮದಲ್ಲಿ ಸಿದ್ಧವಾದ ವ್ಯಾಖ್ಯಾನಗ್ರಂಥಗಳು ಎಲ್ಲವನ್ನೂ ಜಾಗರೂಕತೆಯಿಂದ, ಕೂಲಂಕಷವಾಗಿ ಯಾವೊಂದು ಪೂರ್ವಗ್ರಹವೂ ಇರದೆ ಅಧ್ಯಯನ ಮಾಡಿದರು. ಗಾಢವಾದ ಚಿಂತನೆಯಿಂದ ಭಾಷ್ಯದ ನಿಲುವಿಗೂ ವ್ಯಾಖ್ಯಾನಕಾರರ ಬೇರೆ ಬೇರೆ ನಿಲುವುಗಳಿಗೂ ನಡುವೆ ಇರುವ ಅಂತರ ಅವರಿಗೆ ಸ್ಪಷ್ಟವಾಯಿತು. ಭಾಷ್ಯಕಾರರು ಅವಲಂಬಿಸಿದ್ದು ಸಂಪ್ರದಾಯವನ್ನು ; ಅವರ ವ್ಯಾಖ್ಯಾನಕಾರರು ಹಿಡಿದದ್ದು ಯುಕ್ತಿಯ, ತರ್ಕದ ದಾರಿಯನ್ನು. ತರ್ಕಕ್ಕೆ ನಿಲುಗಡೆಯಿರದೆಂಬ ಕಾರಣದಿಂದ ಶ್ರುತಿಯ ಅನುಗ್ರಹವನ್ನು ಅಪೇಕ್ಷಿಸುವುದು ಸಂಪ್ರದಾಯದ ಸಂವಿಧಾನ. ಇದನ್ನು ವ್ಯಾಖ್ಯಾನಕಾರರು ಕಡೆಗಣಿಸಿದ್ದರಿಂದ, ಅವರ

ತರ್ಕವನ್ನೇ ಅವಲಂಬಿಸಿ ಇತರ ಪ್ರಸ್ಥಾನಗಳವರು ಶಾಂಕರ ಸಿದ್ಧಾಂತವನ್ನು ದೂಷಿಸ ತೊಡಗಿದರು.

ಶಂಕರರ ವಾದಸರಣಿಯನ್ನು ಬರಿಯ ತಾರ್ಕಿಕನೆಲೆಯಲ್ಲಿ ವ್ಯಾಖ್ಯಾನಕಾರರು ಕಾಣಿಸಿದ್ದು ವೇದಾಂತಪ್ರಪಂಚದಲ್ಲಿ ಗೊಂದಲಗಳಿಗೆ, ಖಂಡನ-ಮಂಡನಗಳಿಗೆ, ದೂಷಣ-ಭೂಷಣಗಳಿಗೆ ಎಡೆಮಾಡಿಕೊಟ್ಟಿತು. ಇದನ್ನು ಅರಿತುಕೊಳ್ಳಲು ನಾವು ಶ್ರೀಶ್ರೀಗಳವರವರೆಗೆ ಕಾಯಬೇಕಾಯಿತು ! ಶ್ರೀಮದಾಚಾರ್ಯರದ್ದು ಸರ್ವಸಮ್ಮತ ವಾದ ಉಪದೇಶ ಎಂಬುದನ್ನು ಕಂಡುಕೊಳ್ಳಲು ತತ್ತ್ವಜಿಜ್ಞಾಸುಗಳೆಲ್ಲರಿಗೂ ಶ್ರೀಶ್ರೀಗಳವರು ನೆರವಾದದ್ದೇ ಅವರ ಜೀವಿತಪ್ರಯೋಜನ. ಇದಕ್ಕಾಗಿಯೇ ಅವರು ತಮ್ಮ ಸಾರಸ್ವತಸೇವೆಯಲ್ಲಿ ತೊಡಗಿದ್ದು. ಅವರು ತಮ್ಮ ಭಾಷಣಗಳಲ್ಲೂ ಬರಹ ಗಳಲ್ಲೂ ಎತ್ತಿಹಿಡಿದ ಒಂದು ಧೋರಣೆಯೆಂದರೆ ಇದೇ. ಶ್ರೀಮದಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನು ನಾವು, ವ್ಯಾಖ್ಯಾನಕಾರರನ್ನು ಬದಿಗೊತ್ತಿ ಅರ್ಥಮಾಡಿ ಕೊಳ್ಳುವದಾದರೆ ವೇದಾಂತ ಸಂಪ್ರದಾಯದ ಬಲವೂ, ಹಿರಿಮೆಯೂ, ಸ್ವಾರಸ್ಯವೂ, ಔಚಿತ್ಯವೂ, ಸಾರ್ಥಕತೆಯೂ, ಗುರಿಯೂ ಸ್ಪಷ್ಟವಾದೀತು.

ಇದನ್ನು ಸಾಧಿಸಲೆಂದು ಶ್ರೀಶ್ರೀಗಳವರು ಶ್ರೀಮದಾಚಾರ್ಯರ ಭಾಷ್ಯಗಳನ್ನು ಕನ್ನಡಕ್ಕೆ ಯಥಾವತ್ತಾಗಿ, ಅಕ್ಷರಾನುವಾದವೆಂಬಂತೆ, ಅನುವಾದ ಮಾಡಿದರು. ಕನ್ನಡದಲ್ಲಿ ಮೊಟ್ಟಮೊದಲಿಗೆ ಕಾಣಿಸಿಕೊಂಡ ಭಾಷ್ಯಾನುವಾದಗಳು ಇವೇ ಎಂಬುದಷ್ಟೇ ಇವುಗಳ ಹೆಗ್ಗಳಿಕೆಯಲ್ಲ; ಅನುವಾದದ ಸಂವಿಧಾನವೂ ಗಮನಾರ್ಹ ವಾದುದೇ. ಆಚಾರ್ಯರೇ ಕನ್ನಡದಲ್ಲಿ ಬರೆದಿದ್ದರೆ ಹೇಗೋ ಹಾಗೆ ಅನುವಾದ ; ಮೂಲಾಭಿಪ್ರಾಯಗಳಿಗೆ ಏನೇನೂ ಏರುಪೇರು ಬರದಂತೆ, ಭಾವ ಸ್ಪಷ್ಟವಾಗುವಂತೆ, ಸಂಸ್ಕೃತದ ಮಾತುಗಳು ಕನ್ನಡದ ತೊಡುಗೆ ತೊಟ್ಟು ಬಂದಿವೆ. ಅನುವಾದಕರ ಸೂಚನೆಗಳೋ ವಿವರಣೆಗಳೋ ಸಂಶಯಗಳೋ ಇದ್ದರೆ ಅವನ್ನು ಕಾಣುವುದು, ಅನುವಾದದಿಂದ ಬೇರ್ಪಡಿಸಿಯೇ ಇರುವ ಟಿಪ್ಪಣಿಗಳಿಂದ, ಅವು ಆಚಾರ್ಯರ ಅಭಿಪ್ರಾಯಗಳೆಂದು ಯಾರೂ ಭಾವಿಸಲಾರರು.

ಭಾಮತಿ, ಪಂಚಪಾದಿಕೆ ಮೊದಲಾದ ವ್ಯಾಖ್ಯಾನಕಾರರು ಇಷ್ಟು ಎಚ್ಚರ ವಹಿಸಿದ್ದರೆ, ಈಗ ಶಾಂಕರವೇದಾಂತದಲ್ಲಿ ಒದಗಿರುವ ಗೊಂದಲ ತಪ್ಪುತ್ತಿದ್ದಿತು. ವ್ಯಾಖ್ಯಾನಕಾರರು ತಮ್ಮ ಅಭಿಪ್ರಾಯಗಳನ್ನೂ ಆಚಾರ್ಯರವೇ ಎಂದು ಕಾಣಿಸಿ ಬಿಟ್ಟರು ; ಆಚಾರ್ಯರ ಆಶಯಕ್ಕೂ ವ್ಯಾಖ್ಯಾನಕಾರರ ಅಭಿಪ್ರಾಯಗಳಿಗೂ ನಡುವೆ ಇರಬಹುದಾದ ಭೇದವನ್ನು ಮುಂದೆ ಬಂದ ಪಂಡಿತರು ಗಮನಿಸದೆ ಹೋದರು.

ವ್ಯಾಖ್ಯಾನಕಾರರು ಹೇಳಿದ್ದೇ ಆಚಾರ್ಯರ ನಿಲುವು ಎಂಬ ಭ್ರಮೆ ಪಂಡಿತರನ್ನು ಇಂದಿಗೂ ಬಿಟ್ಟಿಲ್ಲವಷ್ಟೆ?

ಶ್ರೀಶ್ರೀಗಳವರು ಮೊಟ್ಟಮೊದಲಾಗಿ ಕೈಗೊಂಡದ್ದು ಅನುವಾದದ ಕೆಲಸವನ್ನೆ. ಸಂಸ್ಕೃತವನ್ನು ಬಲ್ಲವರೂ, ಸಂಸ್ಕೃತದ ಶಿಕ್ಷಣ ಇಲ್ಲದವರೂ ಆಚಾರ್ಯರ ದಿಟವಾದ ಸಿದ್ಧಾಂತವೇನು ಎಂಬುದನ್ನು ಅವರ ಮಾತಿನಲ್ಲೇ ತಿಳಿದುಕೊಳ್ಳುವ ಸಲುವಾಗಿ ಈ ಅನುವಾದ. ಈ ಅಡಿಪಾಯ ಸಿದ್ಧವಾದ ಮೇಲೆ ವಿಮರ್ಶೆಗೆ ಪರಿಶೀಲನೆಗೆ, ತಾತ್ಪರ್ಯ ನಿರ್ಣಯಕ್ಕೆ ಅನುಕೂಲವಾಗುವಂಥ ಸ್ವತಂತ್ರಗ್ರಂಥಗಳನ್ನೂ ಅವರು ರಚಿಸಿದರು. ಇಲ್ಲಿಯೂ ಆಚಾರ್ಯರ ಭಾಷ್ಯವಾಕ್ಯಗಳನ್ನೇ ಮುಖ್ಯವಾಗಿ ಉದಾಹರಿಸಿರುವುದನ್ನು ಕಾಣಬಹುದು. ಈ ಮಾತುಗಳ ಚಪ್ಪರದ ಮೇಲೆ ತಮ್ಮ ವಿವರಣೆಯ ಬಳ್ಳಿಯನ್ನೂ ಹಬ್ಬಿಸಿದ್ದಾರೆ. ಆಚಾರ್ಯರ ಮಾತುಗಳನ್ನೇ ಪೋಣಿಸಿ ತಮ್ಮ ದಾರದ ನೆರವಿನಿಂದ ಕಟ್ಟಿ ನಮ್ಮೆದುರು ಇಟ್ಟಿದ್ದಾರೆ. ಸ್ವತಂತ್ರವೆನ್ನಬಹುದಾದ ಅವರ ಗ್ರಂಥಗಳಲ್ಲೂ ಆಚಾರ್ಯ ಶಂಕರರ ಭಾಷ್ಯವಾಕ್ಯಗಳೇ ಅಡಿಗಡಿಗೆ ಎದ್ದು ಕಾಣುತ್ತವೆ. ಆಚಾರ್ಯರು ತಮ್ಮ ಗ್ರಂಥಗಳನ್ನು ತಾವೇ ವಿವರಿಸಲು ಹೊರಟಿದ್ದಾರೋ ಎನ್ನುವಂತೆ ಭಾಸವಾಗುತ್ತದೆ. ಪೂರ್ವಾಪರವಿರೋಧವಿಲ್ಲದಂತೆ ಅಚ್ಚುಕಟ್ಟಾಗಿ ಆಚಾರ್ಯರ ಆಶಯ ಈ ಗ್ರಂಥಗಳಲ್ಲಿ ಕಾಣಿಸಿಕೊಳ್ಳುವುದರಿಂದ ಶ್ರೀಶ್ರೀಗಳವರನ್ನು ಎರಡನೆಯ ಶಂಕರರೇ ಎಂದರೆ ಉತ್ಪ್ರೇಕ್ಷೆಯಾಗದು. ಆಚಾರ್ಯರು ತಮ್ಮ ನಿಲುವು ಬಹುಜನರ ಗಮನದಿಂದ ಮರೆಯಾಗಿರುವುದನ್ನು ಕಂಡು, ಮತ್ತೆ ತಮ್ಮ ನಿಲುವನ್ನು ಸ್ಪಷ್ಟಪಡಿಸಲೆಂದೇ ಶ್ರೀಶ್ರೀಗಳಾಗಿ ಅವತರಿಸಿದರೋ ಏನೋ. ಇದು ಹೇಗಿದ್ದರೂ, ಶುದ್ಧಶಾಂಕರಪ್ರಕ್ರಿಯೆಯ ಸಲುವಾಗಿ ತಮ್ಮ ಇಡೀ ಆಯುಷ್ಯವನ್ನು ಹೀಗೆ ಮುಡಿಪಾಗಿಟ್ಟ ಇನ್ನೊಬ್ಬರನ್ನು ನಾವು ಕಾಣಲಾರೆವು.

ಆಚಾರ್ಯರು ಸ್ಪಷ್ಟಪಡಿಸಿದ್ದು ಸಂಪ್ರದಾಯದಂತೆ ವೇದಾಂತದ ಸಿದ್ಧಾಂತವನ್ನು ಮಾತ್ರವಲ್ಲ, ತತ್ತ್ವನಿರ್ಣಯಕ್ಕೂ ಸಾಧನೆಗೂ ಅನುಕೂಲವಾದ ಪ್ರಕ್ರಿಯೆಯನ್ನೂ ಸಹ. ಇದನ್ನು ಶ್ರೀಶ್ರೀಗಳವರು ಮತ್ತೊಮ್ಮೆ ಸ್ಪಷ್ಟಪಡಿಸಬೇಕಾದ ಅಗತ್ಯವಿದ್ದಿತು. ಆಚಾರ್ಯರ ನಿಲುವನ್ನೂ, ಅವರ ಪ್ರಕಾರ ಸರಿಯಾದ ಸಂವಿಧಾನವನ್ನೂ ಗುರುತಿಸಿಕೊಳ್ಳುವ ಅಗತ್ಯ ಪಂಡಿತರಿಗೇ ಹೆಚ್ಚಾಗಿರುವದರಿಂದ ಸಂಸ್ಕೃತದಲ್ಲೇ ಅವರು 'ವೇದಾಂತಪ್ರಕ್ರಿಯಾ ಪ್ರತ್ಯಭಿಜ್ಞಾ' ಎಂಬ ಉದ್ಗ್ರಂಥವೊಂದನ್ನು ರಚಿಸಿದರು. ಇಲ್ಲಿ ಆಚಾರ್ಯರ ಸಿದ್ಧಾಂತವನ್ನೂ ಪ್ರಕ್ರಿಯೆಯನ್ನೂ, ಅವರ ಹಿಂದಿನ ಮತ್ತು ಅವರ ತರುವಾಯ ಇದ್ದ ಪರಿಸ್ಥಿತಿಯನ್ನೂ ವಿವರಿಸಿ ವಿಶ್ಲೇಷಣೆ ಮಾಡಿದ್ದಾರೆ. ಸಂಸ್ಕೃತದ

ದಾರ್ಶನಿಕ ಸಾಹಿತ್ಯದಲ್ಲಿ ಇಷ್ಟು ಸಮಗ್ರವಾದ, ಪ್ರಗಲ್ಭವಾದ ಗ್ರಂಥಗಳು ತೀರ ವಿರಳ. (ಇದನ್ನು ಎ.ಜೆ. ಆಲ್‌ಸ್ಟನ್ ಎಂಬಾತ ಇಂಗ್ಲೀಷಿಗೆ ಅನುವಾದ ಮಾಡಿ ಪ್ರಕಟಿಸಿದ್ದಾನೆ.) ಪಂಡಿತರ ಸಲುವಾಗಿ ಸಂಸ್ಕೃತದಲ್ಲೇ ಹಲವು ಪುಸ್ತಕಗಳನ್ನು ಪ್ರಾಚೀನಶೈಲಿಯಲ್ಲೇ ರಚಿಸಿ ಶುದ್ಧಶಾಂಕರಪ್ರಕ್ರಿಯೆಯ ಸ್ವಾರಸ್ಯವನ್ನು ಮನಗಾಣಿಸಿದರು. ಸಂಸ್ಕೃತವನ್ನು ತಿಳಿಯದೆ ಇದ್ದರೂ ವೇದಾಂತದಲ್ಲಿ ಆಳವಾದ ಆಸಕ್ತಿಯಿರುವವರಿಲ್ಲವೆ ? ಅವರಿಗೆ ಸಂಸ್ಕಾರದಿಂದ ಅಥವಾ ಅನುಭವದಿಂದ ಆಧ್ಯಾತ್ಮಿಕ ಒಲವು ಬರಬಾರದೆಂದೇನು ನಿಯಮವಿಲ್ಲವಷ್ಟೆ ? ಇಂಥವರ ಅನುಕೂಲಕ್ಕೆಂದು ಮೂಲ ಆಕರಗಳ ಅನುವಾದ ಮಾತ್ರವಲ್ಲದೆ ವಿವರಣಾತ್ಮಕ ಗ್ರಂಥಗಳನ್ನು ಕೂಡ ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ರಚಿಸಿದರು. ಇವೆರಡು ಭಾಷೆಗಳ ಮೇಲೂ ಅವರಿಗಿದ್ದ ಹಿಡಿತ ಅಸಾಧಾರಣವಾದುದು. ನೇರವಾದ ಸರಳಭಾಷೆ, ಖಚಿತ ಅಭಿಪ್ರಾಯಗಳು, ಗಂಭೀರ ಶೈಲಿ ; ಖಂಡನ-ಮಂಡನಗಳತ್ತ ಎಳ್ಳಷ್ಟೂ ಗಮನ ಹರಿಸರು ; ಕೇವಲ ವಾದವಿವಾದಗಳ ಪ್ರಸಕ್ತಿಯಿರದು. ಸಾಧನೆಗೆ ನೆರವಾಗುವ ವಿವರಗಳು ಅವರ ರಚನೆಗಳಲ್ಲಿ ತುಂಬಿವೆ.

ಉಪನಿಷತ್ತುಗಳು, ಭಗವದ್ಗೀತೆ ಮತ್ತು ವೇದಾಂತಮೀಮಾಂಸೆ - ಇವುಗಳನ್ನು ಶಾಂಕರಪ್ರಕ್ರಿಯೆಯ ಮೂಲಕವಾಗಿ ಕನ್ನಡಜನರಿಗೆ ಒದಗಿಸುವಂತೆ, ಉಳಿದಂತೆ ಶುದ್ಧವಾದ (ಎಂದರೆ ವ್ಯಾಖ್ಯಾನಗಳ ಅಪಾರ್ಥಗಳಿಂದ ಬಿಡಲ್ಪಟ್ಟಂಥ) ಶುದ್ಧಶಾಂಕರ ಸಿದ್ಧಾಂತವನ್ನು ಸಾಧಿಸುವದರ ಉದ್ದೇಶ. ಅವರ ಪ್ರಯತ್ನ ಕೈಗೂಡಿದೆಯೆಂಬುದೇನೋ ನಿಜ, ಆದರೆ ಅವರ ಸಾಧನೆಯ ಫಲವನ್ನು ಜನರು ಅನುಭವಿಸಬೇಕೆಂದರೆ ಸ್ವಲ್ಪ ಸಮಯ ಹಿಡಿದೀತು. ಅವರ ಪುಸ್ತಕಗಳು ಮತ್ತೆ ಮತ್ತೆ ಪ್ರಕಟಗೊಳ್ಳಬೇಕು ; ಹೊಸ ಹೊಸ ಆವೃತ್ತಿಗಳು ಬರಬೇಕು. ಸಂಸ್ಕೃತದಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲೀಷಿಗೆ ಅನುವಾದಗಳಾಗಬೇಕು. ಮತ್ತು ಅವರು ಸಂಕಲ್ಪಿಸಿಕೊಂಡು ಸಾಧಿಸಲಾರದೆ ಹೋದ ಕೆಲವು ಪ್ರಕಟಣೆಗಳು ಈಗ ಮುಗಿಯಬೇಕು. ಕನ್ನಡದಲ್ಲಿ ವೇದಾಂತದ ಇತಿಹಾಸವನ್ನು ಕುರಿತು ಮೊದಲ ಭಾಗ ತುಂಬ ಹಿಂದೆ ಬಂದಿತು ; ಮುಂದಿನ ಭಾಗಗಳು ಬರಲಿಲ್ಲ. ರಾಮಾನುಜರ ಶ್ರೀಭಾಷ್ಯದ ಒಂದು ಭಾಗ ಕನ್ನಡ ಅನುವಾದ ಮತ್ತು ವಿವರಣೆಗಳೊಂದಿಗೆ ಹೊರಬಂದಿತು ; ಉಳಿದವು ಕಾಣಿಸಿಕೊಳ್ಳಲಿಲ್ಲ. ವ್ಯಾಖ್ಯಾನಗಳಲ್ಲಿ ಪಂಚಪಾದಿಕೆಯನ್ನು ಕುರಿತಂತೆಯೂ ಒಂದು ಸಂಪುಟ ಮಾತ್ರ ಪ್ರಕಟವಾಗಿದೆ. ಸಂಸ್ಕೃತದ 'ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞೆ'ಯು ಕನ್ನಡದಲ್ಲಿ ಮೈದಳೆಯಬೇಕಾದ ಅಗತ್ಯವಿದೆ. ಹೀಗೆ ಶ್ರೀಶ್ರೀಗಳವರ ಸಾಹಸ ಮತ್ತು ಸಾಧನೆಗಳನ್ನು ಸಾರ್ಥಕಗೊಳಿಸಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ.

# ಶಾಂಕರವೇದಾಂತಕ್ಕೆ ಶ್ರೀಶ್ರೀಗಳವರ ಅಸಾಧಾರಣ ಕೊಡುಗೆ

**(ಡಾ|| ಎಸ್.ಕೆ. ರಾಮಚಂದ್ರರಾವ್ - 1981ರ ಲೇಖನ)**

ಕಳೆದ ನಾಲ್ಕುವರ್ಷಗಳಿಂದೀಚೆಗೆ ಮಾತ್ರ ಪೂಜ್ಯ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರ ಗ್ರಂಥರತ್ನಗಳನ್ನು ವ್ಯಾಸಂಗ ಮಾಡುವ ಯೋಗವು ಒದಗಿಬಂತು. ಶ್ರೀ ಶ್ರೀಗಳವರ ಜೀವಿತಕಾಲದಲ್ಲಿ ಅವರನ್ನು ದರ್ಶನಮಾಡುವ ಭಾಗ್ಯವು ನನಗೆ ದುರ್ದೈವದಿಂದ ಒದಗಲಿಲ್ಲ. ಆದರೆ ಈಗ ನಾನು ಅವರ ಅತಿಶ್ರೇಷ್ಠ ಕೃತಿಗಳಾದ ಮಾಂಡೂಕ್ಯರಹಸ್ಯವಿವೃತಿಃ ಮತ್ತು ಪ್ರಕ್ರಿಯಾಪ್ರತ್ಯಭಿಜ್ಞಾ – ಈ ಗ್ರಂಥ ಗಳನ್ನು ಓದಿದ ಮೇಲೆ ಈ ಮಹನೀಯರು ಎಂಥ ಅಸಾಧಾರಣ ಪುರುಷರು, ಎಂಬ ಅರಿವಾಯಿತು. ನನಗೆ ವೇದಾಂತದಲ್ಲಿ ಹೆಚ್ಚು ಪರಿಚಯವಿಲ್ಲದ ಕಾಲದಲ್ಲಿಯೇ ಶ್ರೀಗಳವರ "ಮೂಲಾವಿದ್ಯಾನಿರಾಸ" ಗ್ರಂಥದ ಹೆಸರೂ, ಅದರ ವಿಷಯಕ್ಕೆ ಪಂಡಿತರುಗಳಲ್ಲಿ ಎದ್ದಿದ್ದ ವಾದವಿವಾದಗಳ ಕೆಲವು ವಾಕ್ಯಗಳೂ ಕಿವಿಗೆ ಬಿದ್ದಿದ್ದವು. ಆದರೆ ನಾನು ಶಾಂಕರವೇದಾಂತವನ್ನು ಅಧ್ಯಯನ ಮಾಡಿದ್ದ ಸಂಪ್ರದಾಯದ ಚೌಕಟ್ಟಿನಲ್ಲಿ ವಿಮರ್ಶೆಗೆ ಹೆಚ್ಚು ಅವಕಾಶಗಳಿರಲಿಲ್ಲ. ಜಟಕಾಬಂಡಿಯ ಕುದುರೆಯ ಎರಡೂ ಕಣ್ಣುಗಳಿಗೆ ಜೋಡಿಸಿರುವ ಆವರಣದ ನಿಮಿತ್ತ ದೃಷ್ಟಿಯು ಕಿರಿದಾದಂತೆ ನನ್ನ ಚಿಂತನಾಕ್ರಮವೂ ಕಿರಿದಾಗಿತ್ತು. ಆದರೂ ಶಂಕರ ಭಾಷ್ಯದಲ್ಲಿರುವ ಕೆಲವು ಪ್ರಮೇಯಗಳಿಗೂ ಅವುಗಳಿಗೆ ವ್ಯಾಖ್ಯಾನಕಾರರು ಒಬ್ಬೊಬ್ಬರೂ ಬೇರೆಬೇರೆಯಾಗಿ ಕೊಟ್ಟಿರುವ ವಿವರಣೆಗಳಿಗೂ ಹೊಂದಾಣಿಕೆಯಲ್ಲಿ ಏನೋ ಕೊರತೆಯಿರಬೇಕೆಂದು ಅನಿಸುತ್ತಿತ್ತು. ಶ್ರೀ ಶ್ರೀಗಳವರ ಗ್ರಂಥಗಳನ್ನು ಓದಿದ ಮೇಲೆ ನನ್ನ ಊಹೆಯು ನಿಜವಾದದ್ದು, ಮತ್ತು ವಿಶಾಲದೃಷ್ಟಿಕೋನದಿಂದ ಅದ್ವೈತ ಸಿದ್ಧಾಂತವನ್ನು ಅಪ್ಪಟ ಶಾಂಕರಭಾಷ್ಯ ಪಂಕ್ತಿಗಳಿಂದಲೇ ನೇರಾಗಿ ಅರ್ಥೈಸಿದಾಗ ದೊರೆಯುವ ಸರ್ವ ಸಮ್ಮತವೂ ಅಸಾಧಾರಣವೂ ಆದ ವೇದಾಂತಸಿದ್ಧಾಂತದ ಬೆಳಕು ನನ್ನನ್ನು ಚಕಿತ ಗೊಳಿಸಿದವು. ಅಷ್ಟೇ ಅಲ್ಲ, ಶಂಕರಾಚಾರ್ಯರಿಂದೀಚೆಗೆ ಅದ್ವೈತ ಸಿದ್ಧಾಂತವು ಬೇರೆಯಾಗಿಯೇ ಪ್ರತಿಪಾದಿಸಲ್ಪಟ್ಟು ಅದನ್ನೇ ಶಾಂಕರಾದ್ವೈತವೆಂದು ಈಚೆಗೆ ಬಂದ ವಿಶಿಷ್ಟಾದ್ವೈತ-ದ್ವೈತದರ್ಶನಗಳ ಆಚಾರ್ಯರುಗಳೂ ನಂಬಿ ಖಂಡಿಸಿದ್ದಾರೆಂಬ ಸತ್ಯ ಸಂಗತಿಯೂ ತಿಳಿದುಬಂತು. ಹೀಗೆ ಶಂಕರರಿಗೂ ಅವರ ಅನುಯಾಯಿಗಳಿಗೂ ಮತಭೇದವುಂಟಾಗಿದ್ದು, ನಿಜವಾದ ಅದ್ವೈತದರ್ಶನವು ಯೋಗ, ತರ್ಕಶಾಸ್ತ್ರಗಳ ಗಡಿಬಿಡಿಯಲ್ಲಿ ಈಚೆಗೆ ಲುಪ್ತವಾಗಿಬಿಟ್ಟಿದ್ದನ್ನು ಮತ್ತೊಮ್ಮೆ ಉದ್ಧರಿಸಿ ಶಂಕರರ ಕಾಲದಿಂದೀಚೆಗೆ ಸಾವಿರ ವರ್ಷಗಳಿಂದಲೂ ಜನರಲ್ಲಿ ಮೂಡಿದ್ದ ತಪ್ಪು ತಿಳಿವನ್ನು ಘಂಟಾಘೋಷವಾಗಿ ಯಾವ ಪಂಡಿತರಿಗಾಗಲಿ, ಅಂಧಪರಂಪರೆಯ ಸಂಪ್ರದಾಯ

ಗಳಿಗಾಗಲಿ ಹೆದರದೆ ನಿಜವನ್ನು ಸ್ಪಷ್ಟವಾಗಿ ಹೊರಹಾಕಿದ ಶ್ರೀಶ್ರೀಗಳವರ ಸ್ವಚ್ಛವಾದ ಹಾಗೂ ನಿಷ್ಕೃಷ್ಟವಾದ ಬರವಣಿಗೆಗಳ ಮೂಲಕ ಹರಡಿರುವ ಶುದ್ಧ ಶಾಂಕರವೇದಾಂತ ಪ್ರಕ್ರಿಯೆಯನ್ನು ಮನಗಂಡು ನಾನು ವಿಸ್ಮಿತನಾಗಿರುತ್ತೇನೆ. ಈಗ ಶ್ರೀಶ್ರೀಗಳವರ ವಿಚಾರ ಸರಣಿಯ ಬಗ್ಗೆ ಒಂದೆರಡು ಉದಾಹರಣೆಗಳು.

1) ವೇದಾಂತಸಿದ್ಧಾಂತವು ಮೂಲತಃ ಉಪನಿಷದಾದಿ ಪ್ರಸ್ಥಾನತ್ರಯಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆಯಾದರೂ ಯಾರಾದರೊಬ್ಬ ಭಾಷ್ಯಕಾರರ ನೆರವಿಲ್ಲದೆ ಅವುಗಳ ತಾತ್ಪರ್ಯವನ್ನು ನಿರ್ಣಯಿಸುವದು ಎಂಥ ಸೂಕ್ಷ್ಮಮತಿಯಾದವನಿಗೂ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಉಪನಿಷದಾದಿ ಗ್ರಂಥಗಳಿಗೆ ಈಗಿನ ನಾಗರಿಕ ಪ್ರಪಂಚದಲ್ಲೇ ಅತ್ಯಂತ ಪ್ರಾಚೀನವೆನಿಸಿರುವ ಶಂಕರಭಾಷ್ಯಗಳನ್ನೇ ಮೊದಲು ಅವಲಂಬಿಸತಕ್ಕದ್ದು ಸೂಕ್ತವಾಗಿದೆ. ಏಕೆಂದರೆ ಉಳಿದ ವೇದಾಂತ ಭಾಷ್ಯಕಾರರುಗಳೆಲ್ಲ ಶಂಕರರಿಗಿಂತ ಈಚಿನವರಾಗಿದ್ದು ಅವರ ಅದ್ವೈತಸಿದ್ಧಾಂತವನ್ನು ಖಂಡಿಸಿದ್ದಾರೆ. ಆದ್ದರಿಂದ ಪ್ರಪ್ರಥಮವಾಗಿ ಶಂಕರರು ಏನು ಹೇಳುತ್ತಾರೆಂಬುದನ್ನು ತಿಳಿಯುವದು ತತ್ತ್ವ ವಿಚಾರಕರಿಗೆ ತೀರ ಅತ್ಯಗತ್ಯವಾಗಿರುತ್ತದೆ.

2) ಶಂಕರರು ತಮ್ಮ ಸಂಪ್ರದಾಯದ ಪರಂಪರೆಯನ್ನು ಉಲ್ಲೇಖಿಸಿ ''ವೇದಾಂತಾರ್ಥಸಂಪ್ರದಾಯವಿದರಾದ'' ಶ್ರೀ ಗೌಡಪಾದರನ್ನು ಉದಾಹರಿಸಿದ್ದಾರೆ. ಗೌಡಪಾದರು ವೇದಪಾರಗರಾದ ಋಷಿಮುನಿಗಳನ್ನು ಪರಾಮರ್ಶಿಸಿದ್ದಾರೆ. ಇಂಥ ಅನಾದಿಸಂಪ್ರದಾಯದ ಸರಣಿಯಲ್ಲಿ ವೇದಾಂತಪ್ರಕ್ರಿಯೆಯು ನಡೆದುಬಂದಿದ್ದು ಆ ಪ್ರಕ್ರಿಯೆಯ ಮೂಲರೂಪವು ''ಅಧ್ಯಾರೋಪಾಪವಾದ''ವೇ ಎಂದು ನಿಶ್ಚಿತ ವಾಗಿ ಬಿಟ್ಟಿದೆ. ಇದು ಯಾವ ಕಾರಣದಿಂದಲೂ ಯಾರಿಗೂ ಉಲ್ಲಂಘನೀಯ ವಾಗಿಲ್ಲ. ಹೀಗಿರುವದರಿಂದಲೇ ಶ್ರೀ ಶಂಕರರು ಶಾರೀರಕಮೀಮಾಂಸೆಗೆ ಅವತರಣಿಕೆ ಯಾಗಿ ''ಅಧ್ಯಾಸಭಾಷ್ಯ''ವನ್ನು ಬರೆದಿದ್ದಾರೆ. ಅದು ಸಾರ್ವತ್ರಿಕಾನುಭವದ ನುಡಿಗಳಾಗಿದ್ದು ಯಾವ ಶ್ರುತ್ಯಾದಿಪ್ರಮಾಣಗಳನ್ನೂ ಬಯಸಿಲ್ಲ. ಅಷ್ಟೇ ಅಲ್ಲದೆ ವಿಧಿ ಪ್ರತಿಷೇಧಮೋಕ್ಷಪರವಾದ ಶಾಸ್ತ್ರಗಳನ್ನೂ ಅಧ್ಯಾಸಪುರಸ್ಸರವೆಂಬ ಆಚಾರ್ಯರ ಸಿಂಹಘರ್ಜನೆಯು ಉಳಿದ ವಾದಿಗಳ ಕೂಗನ್ನೆಲ್ಲ ನುಂಗಿಹಾಕಿದೆ.

3) ಪಾಶ್ಚಾತ್ಯತತ್ತ್ವವಿಚಾರಕರು ಕೂಡ ಶಂಕರಭಾಷ್ಯವನ್ನು ವ್ಯಾಖ್ಯಾನಗಳ ಆಧಾರದಿಂದ ಅರ್ಥಮಾಡಿಕೊಂಡಿದ್ದರ ಫಲವಾಗಿ ಅವರಿಗೆ ಅಧ್ಯಾಸಭಾಷ್ಯದ ಮರ್ಮವು ತಿಳಿಯದೆ ಇದೆ. ಇದರ ಫಲವಾಗಿಯೇ ಜಾರ್ಜ್ ಥೀಬೋ ಮಹಾಶಯ

ನಂಥವನು ಕೂಡ ಬ್ರಹ್ಮಸೂತ್ರಗಳ ತಾತ್ಪರ್ಯವು ವಿಶಿಷ್ಟಾದ್ವೈತಕ್ಕೇ ಹೆಚ್ಚು ಹತ್ತಿರವಾಗಿದೆ ಎಂದು ಭಾವಿಸಿದ್ದಾನೆ. ಆದ್ದರಿಂದ ಶಾಂಕರಭಾಷ್ಯಗಳನ್ನು ವ್ಯಾಖ್ಯಾನಗಳ ದೃಷ್ಟಿಯಿಂದಲೇ ನೋಡುವದೇ ಸರಿಯಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

4) ಶ್ರೀಮಧ್ವಾಚಾರ್ಯರ 'ಮಾಯಾವಾದಖಂಡನ'ದಲ್ಲಿ ಇಷ್ಟಸಿದ್ಧಿಕಾರರ ಅಭಿಪ್ರಾಯಗಳನ್ನು ಖಂಡಿಸಲಾಗಿದೆಯೇ ಹೊರತು ಶಂಕರಭಾಷ್ಯವನ್ನು ನೇರಾಗಿ ಮುಟ್ಟಿಯೇ ಇಲ್ಲ. ರಾಮಾನುಜರ ಶ್ರೀ ಭಾಷ್ಯದ ಮಹಾಪೂರ್ವಪಕ್ಷದಲ್ಲಿಯೂ ಅಧ್ಯಾಸ ಭಾಷ್ಯದ ಸುಳಿವಿಲ್ಲ. ಹೀಗೆ ನಿಜವಾದ ಶಾಂಕರವೇದಾಂತವು ಯಾರಿಂದಲೂ ಖಂಡಿಸಲ್ಪಟ್ಟೇ ಇಲ್ಲ-ಎನ್ನಬಹುದು. ಆದ್ದರಿಂದ ಎಂದೆಂದೂ ಖಂಡಿಸಲಾಗದ, ಶ್ರುತಿ-ಯುಕ್ತಿ-ಅನುಭವ ಸಮ್ಮತವಾದ ವೇದಾಂತಸಿದ್ಧಾಂತವನ್ನು ಹೃದಯಂಗಮವಾಗಿ ತಿಳಿಸುವ ಶಾಂಕರಭಾಷ್ಯವನ್ನು ಬಿಟ್ಟರೆ ಜಿಜ್ಞಾಸುಗಳಿಗೆ ವೇದಾಂತಪ್ರಪಂಚಕ್ಕೆ ಪ್ರವೇಶವಾದರೂ ಹೇಗಾದೀತು ?

ಹೀಗೆ ಶ್ರೀಶ್ರೀಗಳವರ ವಿಚಾರಸರಣಿಯು ಬಹಳ ಆಳವಾಗಿಯೂ ಸತ್ಯಾನ್ವೇಷಣೆಗೆ ದಾರಿದೀಪವಾಗಿಯೂ ಮುಂದುವರೆದುಬಿಟ್ಟಿದೆ. ಶ್ರೀಗಳವರ ಇನ್ನೂ ಕೆಲವು ಅಭಿಪ್ರಾಯಗಳನ್ನು ವಿಚಾರಕರು ಅವರ ಬರವಣಿಗೆಗಳಿಂದಲೇ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅವರ ಅಸಾಧಾರಣ ಕೃತಿಯಾದ 'ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞಾ' ಗ್ರಂಥ ಅವರು ಶಂಕರಾಚಾರ್ಯರಿಗಿಂತ ಹಿಂದಿನ ಹಾಗೂ ಈಚಿನ ವೇದಾಂತಗ್ರಂಥಕಾರರುಗಳನ್ನೆಲ್ಲ ಸಮಾಲೋಚನೆ ಮಾಡಿ ಭಗವತ್ಪಾದರ ಸಿದ್ಧಾಂತಕ್ಕೆ ಯಾವ ಯಾವ ಗ್ರಂಥಕಾರರ ಅಭಿಪ್ರಾಯಗಳು ಎಷ್ಟೆಷ್ಟು ಮಟ್ಟಿಗೆ ವಿರುದ್ಧವಾಗಿವೆ – ಎಂಬುದನ್ನು ಸೋದಾಹರಣವಾಗಿ ಪ್ರತಿಪಾದಿಸಿದ್ದಾರೆ. ''ಇಂಥವರು ಹೀಗೆ ಹೇಳಿಲ್ಲ'' ಎಂದು ಗೋಣಗುಟ್ಟುವದಕ್ಕೆ ಅವಕಾಶವೇ ಇಲ್ಲದಂತೆ ಆಯಾ ಮೂಲಗ್ರಂಥಗಳಿಂದಲೇ ವಾಕ್ಯಗಳನ್ನು ಉದ್ಧರಿಸಿ ಅವುಗಳ ದೌರ್ಬಲ್ಯಗಳನ್ನೂ ಶ್ರೀಗಳವರು ಈ ಗ್ರಂಥದಲ್ಲಿ ಎತ್ತಿಹಿಡಿದಿರುತ್ತಾರೆ.

ಇನ್ನು ಶಂಕರರು ಶ್ರುತ್ಯನುಗುಣವಾಗಿ ತಿಳಿಸಿರುವ ತತ್ತ್ವಬೋಧಕವಾದ ಸಾರ್ವತ್ರಿಕಾನುಭವದ ವಿವರಣೆಯನ್ನು ಶ್ರೀಗಳವರು ತಮ್ಮದೇ ಆದ ವಿಶಿಷ್ಟಶೈಲಿಯಲ್ಲಿ, ಆದರೆ ಸರ್ವರೂ ತಲೆದೂಗುವ ರೀತಿಯಲ್ಲಿ ನೀಡಿ ವೇದಾಂತ ಸಿದ್ಧಾಂತವನ್ನು ಜಿಜ್ಞಾಸುವಿನ ಹೃದಯಕ್ಕೇ ನೇರವಾಗಿ ಅಳವಡಿಸಿಬಿಟ್ಟಿದ್ದಾರೆ. ಅನುಭವ ವೆಂಬುದು ನಿಜವಾಗಿಯೂ ಅವನವನ ಸ್ವತ್ತು, ಯಾವನೊಬ್ಬನೂ 'ಅದು ಹಾಗಿರಲಾರದು' - ಎಂದು ಮತ್ತೊಬ್ಬನ ಅನುಭವವನ್ನು ಅಪಲಾಪಮಾಡುವ ಅಧಿಕಾರವುಳ್ಳವನಾಗಿರು

ವದಿಲ್ಲ. ಶಂಕರಾಚಾರ್ಯರೇ ತಮ್ಮ ಭಾಷ್ಯದಲ್ಲಿ ಒಂದು ಕಡೆ "ಕಥಂ ಹಿ ಏಕಸ್ಯ ಸ್ವಹೃದಯಪ್ರತ್ಯಯವೇದ್ಯಂ ಬ್ರಹ್ಮವೇದನಂ ದೇಹಧಾರಣಂ ಚ ಅಪರೇಣ ಪ್ರತಿಕ್ಷೇಪ್ತುಂ ಶಕ್ಯೇತ ?" (ಯಾವನೊಬ್ಬನ ಹೃದಯಕ್ಕೆ ಅರಿವಾಗಿರುವ ಬ್ರಹ್ಮಜ್ಞಾನದ ವಿಷಯಕ್ಕೆ ಬೇರೊಬ್ಬನು ಹಾಗಲ್ಲವೆಂತ ಆಕ್ಷೇಪಿಸಲು ಹೇಗೆ ಸಾಧ್ಯವಾದೀತು ?) ಎಂದಿರುತ್ತಾರೆ. ಈ ಅಭಿಪ್ರಾಯದಂತೆ ವೇದಾಂತಸಿದ್ಧಾಂತ ವಿಷಯಕ್ಕೆ ಶ್ರೀ ರಾಮಾನುಜಾಚಾರ್ಯರಿಗೂ ಶ್ರೀ ಮಧ್ವಾಚಾರ್ಯರಿಗೂ ಅವರವರ ಮಟ್ಟಿಗೆ ಏನಾದರೊಂದು ಅನುಭವವಾಗಿರಬೇಕಲ್ಲವೆ ? ಹಾಗಾಗಿದ್ದರೆ ಅದು ಅವರವರ ಬರಹಗಳಲ್ಲಿ ಹೇಗೆ ಮೂಡಿಬಂದಿದೆ ? ಆಯಾ ಭಾಷ್ಯಕಾರರ ಗ್ರಂಥಗಳಲ್ಲಿ ಇತರ ಮತಗಳ ಖಂಡನಾಭಾಗವನ್ನು ಬಿಟ್ಟರೆ ಉಳಿಯುವ ತಿರುಳೆಷ್ಟು ? ಎಂಬುದನ್ನು ವಿಮರ್ಶಿಸಿ ಅನಂತರ ಅದನ್ನು ಶಂಕರರ ಅನುಭವಕ್ಕೆ ತುಲನೆಮಾಡಿದಾಗ ಹೇಗೆನ್ನಿಸುತ್ತದೆ ? ಶ್ರೀಗಳವರೇನಾದರೂ ಅವತಾರಮಾಡದೆ ಇದ್ದಿದ್ದರೆ ಶಂಕರ ವೇದಾಂತದ ಮರ್ಮವು ಇಂದಿಗೂ ತೆರೆಯ ಮರೆಯಲ್ಲೇ ಉಳಿದುಬಿಟ್ಟು ಜಿಜ್ಞಾಸುಗಳಿಗೆ ಪೂರ್ಣತೃಪ್ತಿಯು ಸಿಗುತ್ತಿರಲಿಲ್ಲ. ವಿಚಾರಯುಗದಲ್ಲಿ ಅದರ ಲ್ಲಿಯೂ ಸತ್ಯಾನ್ವೇಷಣೆಯಲ್ಲಿ ಯಾವ ಅಭಿಮಾನವೂ ಅಡ್ಡಬರಬಾರದು. ಪೂಜ್ಯ ಶ್ರೀಗಳವರು ಇಂಥ ನಿರ್ದುಷ್ಟದೃಷ್ಟಿಯ ಅಧ್ಯಾತ್ಮಚಿಂತಕರು. ಅವರು ಶಂಕರ ವೇದಾಂತದ ವ್ಯಾಸಂಗಕ್ಕಾಗಿಯೇ ತಮಗೆ ದೊರಕಿದ ಸಮಸ್ತ ಆಯುಷ್ಯ, ಬುದ್ಧಿಶಕ್ತಿ ತಪಸ್ಸು - ಹೀಗೆ ಸರ್ವಸ್ವವನ್ನೂ ವಿನಿಯೋಗ ಮಾಡಿದರು. ಇಂಥ ಬ್ರಹ್ಮಚಿಂತಕರು ಪರಮದುರ್ಲಭರೆಂದೇ ತಿಳಿಯಬೇಕು.

ಇವರ ಒಂದೊಂದು ಕೃತಿಯೂ ಅಪೂರ್ವ, ಬರೆದಿರುವದೆಲ್ಲ ಗಟ್ಟಿ ಅಪರಂಜಿ ಚಿನ್ನವೇ ಹೊರತು ವ್ಯರ್ಥವಾದದ್ದು ಒಂದೂ ಇರುವದಿಲ್ಲ, ಶ್ರೀ ಸುರೇಶ್ವರಾ ಚಾರ್ಯರು ಒಂದು ಕಡೆ 'ನ ಖ್ಯಾತಿಲಾಭಪೂಜಾರ್ಥಂ.... ಉದೀರ್ಯತೇ' (ಖ್ಯಾತಿ ಲಾಭಪೂಜೆಗಳಿಗಾಗಿ ನಾವು ಗ್ರಂಥರಚನೆ ಮಾಡುವದಿಲ್ಲ) ಎಂದಿರುತ್ತಾರೆ. ಶ್ರೀಶ್ರೀಗಳವರ ಗ್ರಂಥರಚನೆಯೂ ಇದೇ ಮಟ್ಟದ್ದಾಗಿದೆ. ಜನಗಳಿಗೆ ಅದರಲ್ಲಿಯೂ ಶ್ರೇಯೋ ಮಾರ್ಗದಲ್ಲಿ ಮುನ್ನಡೆಯುತ್ತಿರುವವರಿಗೆ ಈ ಗ್ರಂಥಗಳಿಂದ ಲಾಭವಾ ದೀತು ಎಂಬ ಆಸೆಯೊಂದೇ ಅವರ ಬರವಣಿಗೆಗಳಿಗೆ ಪ್ರೇರಕವಾಗಿದೆ. ಲೋಕ ಸಂಗ್ರ ಹಬುದ್ಧಿಯು ಶ್ರೀಶ್ರೀಗಳವರ ಉದಾತ್ತಧ್ಯೇಯವಾಗಿತ್ತು ಎಂಬಿದರಲ್ಲಿ ಸಂಶಯವಿಲ್ಲ.

ವೇದಾಂತವನ್ನು ಬೋಧಿಸುವದು, ಅದರಲ್ಲಿಯೂ ಬರಹರೂಪದಿಂದ ಜನರ

ಮುಂದಿಡುವದು ಸುಲಭದ ಕೆಲಸವಲ್ಲ. ಸಾಮಾನ್ಯ ಜನರಿಗೆ ಈ ಮಹಾದರ್ಶನವನ್ನು ತಿಳಿಸುವಾಗ ಎಷ್ಟನ್ನು ಮಾತ್ರ ಹೇಳಬೇಕು ? ಹೇಗೆ ಹೇಳಬೇಕು ? ಎಷ್ಟು ಹೇಳಿದರೆ ಪ್ರಯೋಜನವಾದೀತು ? ಎಂಬ ಔಚಿತ್ಯಪ್ರಜ್ಞೆ ಶ್ರೀಗಳವರ ಸ್ವತ್ತಾಗಿತ್ತು. ಅನಧಿಕಾರಿಗಳಿಗೆ ಹೇಳಬಹುದಾದದ್ದೆಷ್ಟು? ಅಧಿಕಾರಿಗಳಿಗೆ ಹೇಳಬಹುದಾದದ್ದೆಷ್ಟು? ಎಂಬ ವಿವೇಕವು ಅವರ ಗ್ರಂಥಗಳಲ್ಲೆಲ್ಲ ಎದ್ದುಕಾಣುತ್ತಿದೆ. ಉದಾಹರಣೆಗೆ 'ವೇದಾಂತ ವಿಚಾರದ ಇತಿಹಾಸ' ಎಂಬ ಗ್ರಂಥದಲ್ಲಿ ಸುಮಾರು ಹನ್ನೊಂದು ಜನ ವೇದಾಂತಾಚಾರ್ಯರುಗಳ ಮಹಾಗ್ರಂಥಗಳ ಸಾರವನ್ನೇ ಸರಳಶೈಲಿಯಲ್ಲಿ ಸಂಕ್ಷಿಪ್ತವಾಗಿ ಹಿಂಡಿಟ್ಟಿರುತ್ತಾರೆ. ಇದೊಂದು ಅತ್ಯದ್ಭುತಸಾಧನೆ ಎಂದು ಹೇಳದೆ ವಿಧಿಯಿಲ್ಲ. ಮತ್ತು ಆಧ್ಯಾತ್ಮಶಾಸ್ತ್ರದ ರಹಸ್ಯಗಳನ್ನು ವಿವರಿಸುವಾಗ ಪ್ರಕರಣಾನುಗುಣವಾಗಿ ಜ್ಞಾನ, ಉಪಾಸನೆ, ಕರ್ಮಯೋಗಗಳ ವಿಚಾರಗಳನ್ನು ಪರಸ್ಪರ ಕಲೆಬೆರಕೆ ಮಾಡದೆ ಶುದ್ಧವಾಗಿ ಓದುಗರಿಗೆ ಗೊತ್ತಾಗುವಂತೆ ಹಾಗೂ ಓದುಗರ ಕಾಲಹರಣವಾಗದಂತೆ ಅಚ್ಚುಕಟ್ಟಾಗಿ ನಿವೇದಿಸಿರುವ ಕ್ರಮವು ಎಂಥವನನ್ನಾದರೂ ಆಕರ್ಷಿಸದೆ ಇರದು.

ಶ್ರೀಗಳವರ ಗ್ರಂಥಗಳ ಮತ್ತೊಂದು ವಿಶೇಷ, ದೇಶಕಾಲಾನುಗುಣವಾದ ಹಾಗೂ ಸನ್ನಿವೇಶಕ್ಕೊಪ್ಪುವ ರೀತಿಗಳಿಂದ ವಿಶಾಲವಾದ ತಳಹದಿಯಲ್ಲಿ ತತ್ತ್ವವನ್ನು ನಿರೂಪಣೆಮಾಡುವ ಕ್ರಮವು. ವೇದಾಂತವಿಚಾರವು ದೇಶಕಾಲಭಾಷಾದಿಗಳ ಚೌಕಟ್ಟನ್ನು ಮೀರಿರುತ್ತದೆ. ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ತತ್ತ್ವ ವಿಚಾರಕರಿದ್ದೇ ಇರುತ್ತಾರೆ. ಮುಮುಕ್ಷುಗಳೂ ಇರುತ್ತಾರೆ. ಆದ್ದರಿಂದ ಪಾಶ್ಚಾತ್ತ್ಯರು ಸಹ ಜೀವ, ಜಗತ್ತು, ಈಶ್ವರರುಗಳ ಬಗ್ಗೆ ಏನು ಹೇಳುತ್ತಿದ್ದಾರೆ ? ನಮ್ಮ ಋಷಿಗಳ ಅಭಿಪ್ರಾಯವೇನು ? ಎಂಬಿದನ್ನು ಸಮಯಾನುಸಾರವಾಗಿ ನಿರೂಪಿಸದೆ ಇರಲು ಸಾಧ್ಯವಿಲ್ಲ. ಆದರೆ ಸಾಮಾನ್ಯ ವಿಚಾರಕನು ಬುದ್ಧಿಬಲದಿಂದ ಇಂಥ ವಿಷಯಗಳನ್ನು ಅಧ್ಯಯನಮಾಡಿ ಚಿಂತಿಸಿದ ಮೇಲೆ ತಾನು ಏನನ್ನು ತಿಳಿಯಬೇಕು ? ಎಲ್ಲಿ ನಿಲ್ಲಬೇಕು ? ಎಂಬ ವಿವೇಕವಿಲ್ಲದೆ ಗೊಂದಲಕ್ಕೆ ಈಡಾಗುವ ಸಂಭವವಿದೆ. ಈಗ ವಿಚಾರಕ್ಷೇತ್ರದಲ್ಲಿ ಸಂಭವಿಸಿರುವ ಗೊಂದಲದ ನಡುವೆ ಉಪನಿಷತ್ತತ್ತ್ವವನ್ನು ನಂಬಿ ನಾವು ಬಾಳಲು ಸಾಧ್ಯವೆ ? ವಿಚಾರಪ್ರವಾಹದಲ್ಲಿ ನಮ್ಮ ದರ್ಶನವು ಎಷ್ಟು ಬಲವನ್ನು ನೀಡೀತು ? ಸಂಪ್ರದಾಯಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಈ ಉಪನಿಷದ್ದರ್ಶನವು ಸಾರ್ವತ್ರಿಕವೂ ಅನುಭವಪೂರ್ಣವೂ ಅಬಾಧಿತವೂ ಆಗಿ ನಿಲ್ಲಬಲ್ಲದೆ ? ಎಂಬೀ ವಿಷಯಗಳನ್ನು ಶ್ರೀಶ್ರೀಗಳವರು ತಮ್ಮ ಇಂಗ್ಲಿಷು ಕೃತಿಗಳಲ್ಲಿ ಚೆನ್ನಾಗಿ ಶೋಧಿಸಿ ಪ್ರಬಲವಾದ ರೀತಿಯಿಂದ ಸಮರ್ಥಿಸಿ ತೋರಿಸಿದ್ದಾರೆ. ಈ ಕೆಲಸವನ್ನು ಈಚಿನ ಶತಮಾನಗಳಲ್ಲಿ ಯಾವ ಪಂಡಿತರೂ ಮಾಡಲಿಲ್ಲ ಎಂದು ಹೇಳಿದರೆ

ತಪ್ಪಾಗಲಾರದು. ಈ ವಿಷಯಕ್ಕೆ ಶ್ರೀಗಳವರ **"How to Recognize the Method of Vedanta"** ಎಂಬ ಗ್ರಂಥವನ್ನು ಜಿಜ್ಞಾಸುಗಳು ಓದಬೇಕು.

ಶ್ರೀಶ್ರೀಗಳವರ ಬರವಣಿಗೆಗಳಲ್ಲಿ ಮತ್ತೊಂದು ಜವಾಬ್ದಾರಿಯ ವಿಷಯವು ಎದ್ದು ಕಾಣುತ್ತಿದೆ. ಹಿಂದಿನ ಕಾಲದ ಪಂಡಿತರುಗಳಲ್ಲಿ ಪಠ್ಯಗ್ರಂಥಗಳನ್ನೋದಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಸಮಾಜದಲ್ಲಿ ಗಣ್ಯರೆನಿಸಿಕೊಂಡರೆ ತಮ್ಮ ಕೆಲಸವು ಪೂರೈಸಿತು ಎಂದು ಭಾವಿಸಿಕೊಂಡಿದ್ದವರೇ ಬಹಳ ಮಂದಿ. ಆದ್ದರಿಂದಲೇ ಅವರುಗಳಿಗೆ ಸಾಮಾಜಿಕ ಕರ್ತವ್ಯಗಳೇನು ? ಇದರಲ್ಲಿ ತನ್ನ ಪಾತ್ರವೇನು ? ಎಂಬ ಚಿಂತೆಯು ಹೊಳೆದಿರಲಿಲ್ಲ. ಶ್ರೀಗಳವರ ಜೀವನದಲ್ಲಿ ಹಾಗಾಗದೆ ಇದಕ್ಕೆ ಕಾರಣವಾದ ಸತ್ಯದರ್ಶನದ ಫಲವಾಗಿ ಅವರು ತಮ್ಮ ಹೊಣೆಯನ್ನು ಅರ್ಥಮಾಡಿಕೊಂಡು ತಾನು ಕಂಡುಕೊಂಡ ಸತ್ಯವನ್ನು ಮರೆಮಾಚದೆ ಇತರರಿಗೂ ತಿಳಿಯಹೇಳ ಬೇಕೆಂಬ ಪ್ರೇರಣೆಗೆ ಒಳಗಾಗಿ ಗ್ರಂಥಗಳನ್ನು ರಚಿಸಿ, ಬೋಧಿಸಿ, ಸಾಮಾಜಿಕ ಋಣವನ್ನು ಪರಿಹರಿಸಿಕೊಂಡರು. ಇಂಥ ಸೂಕ್ಷ್ಮಪ್ರಜ್ಞೆಯು ಪುಸ್ತಕಪಂಡಿತರಿಗೆ ಎಲ್ಲಿಂದ ಬರಬೇಕು ? ಇದರ ಫಲವಾಗಿಯೇ ಶುದ್ಧಶಾಂಕರ ದರ್ಶನದ ಆವಿರ್ಭಾವವು ಉಂಟಾಯಿತು. ಇದು ಬೌದ್ಧಿಕವಾದುದಲ್ಲ, ಅಥವಾ ಪರೋಪದೇಶ ಪಾಂಡಿತ್ಯವಲ್ಲ ; ಅನುಷ್ಠಾನದ ಒರೆಗಲ್ಲಿಗೆ ತಿಕ್ಕಿ ಎಂದೆಂದೂ ಬದಲಾಗದಂತೆ ಕಂಡುಕೊಂಡ ದಿವ್ಯದರ್ಶನವು. ಈ ದರ್ಶನದ ನಾನಾಮುಖಗಳನ್ನು ನಾನಾರೀತಿಯ ಕ್ರಮಗಳಿಂದಲೂ ಪ್ರತಿಪಾದನೆಯಿಂದಲೂ ಶ್ರೀಗಳವರು ತಮ್ಮ ಅಮೋಘಗ್ರಂಥಗಳಲ್ಲಿ ಪ್ರತಿಬಿಂಬಿಸಿರುತ್ತಾರೆ. ಇಂಥ ಸಾರಸ್ವತ ಸೇವೆಯನ್ನು ಈ ಶತಮಾನದಲ್ಲಿ ಮಾಡಿರುವವರು- ಅದರಲ್ಲಿಯೂ ವೇದಾಂತ ಕ್ಷೇತ್ರದಲ್ಲಿ ಸಲ್ಲಿಸಿರುವವರು- ಬೇರೆ ಯಾರಿದ್ದಾರೆ ?

ಶ್ರೀಶ್ರೀಗಳವರ ಗ್ರಂಥರಾಶಿಯನ್ನು ಮತ್ತೊಂದು ರೀತಿಯಿಂದ ಮೂರು ತರಗತಿಗಳಾಗಿ ವಿಂಗಡಿಸಬಹುದು. ಮೊದಲನೆಯದು ಅವರು ರಚಿಸಿರುವ ಶಾಂಕರ-ಪ್ರಸ್ಥಾನತ್ರಯ ಭಾಷ್ಯಗಳ ಕನ್ನಡಾನುವಾದಗಳು. ಹಾಗೂ ಸಂಸ್ಕೃತ ಭಾಷೆಯಲ್ಲಿ ಟಿಪ್ಪಣಿಗಳೊಡನೆ ಸಂಪಾದಿಸಿ ಪ್ರಕಟಿಸಿರುವ ಕೆಲವು ಉಪನಿಷದ್ಭಾಷ್ಯಗಳು, ತೈತ್ತಿರೀಯೋಪನಿಷತ್ತಿನ ಭಾಷ್ಯದಮೇಲೆ ಬರೆದಿರುವ ಭಾಷ್ಯಾರ್ಥವಿಮರ್ಶಿನೀ-ವ್ಯಾಖ್ಯಾನ, ಸೂತ್ರಭಾಷ್ಯದ ಮೇಲೆ ಬರೆದಿರುವ ತತ್ತ್ವವಿವೇಚನೀ-ಎಂಬ ವ್ಯಾಖ್ಯಾನ, ಇತ್ಯಾದಿ. ಇವುಗಳಲ್ಲಿ ಪ್ರಸ್ಥಾನತ್ರಯಭಾಷ್ಯದ ಕನ್ನಡಾನುವಾದಗಳು ವೇದಾಂತವ್ಯಾಸಂಗನಿಷ್ಠರಿಗೆ - ಅದರಲ್ಲಿಯೂ ಸಂಸ್ಕೃತ ಭಾಷಾಜ್ಞಾನವಿಲ್ಲದ, ಆದರೆ ಶಂಕರಭಾಷ್ಯಗಳನ್ನೋದಿ ತಮ್ಮ ವಿಚಾರದ ಹಸಿವನ್ನು ನೀಗಿಕೊಳ್ಳಬೇಕೆಂದು ತವಕಿಸುತ್ತಿರುವವರಿಗೆ ಕಾಮಧೇನುವಿನಂತಿವೆ. ಇವುಗಳನ್ನು ಅರ್ಥಪೂರ್ಣವಾದ ತಲೆಬರಹ

ಗಳೊಡನೆ ವಿಷಯಪ್ರತಿಪಾದನೆಗೆ ಆಗತ್ಯವಾದ ಹಿತಿಮಿತವಾದ ಟಿಪ್ಪಣಿಗಳು, ವಿಮರ್ಶಾತ್ಮಕ ಪೀಠಿಕೆ, ಶಬ್ದಕೋಶ - ಮುಂತಾದ ಸೌಕರ್ಯಗಳೊಡನೆ ಆಂಗ್ಲ ಭಾಷೆಯ ಗ್ರಂಥಗಳಂತೆ ಸಕಲಪರಿಕರೋಪೇತವಾಗಿ ಸಿದ್ಧಗೊಳಿಸಿ ನೀಡಿರುತ್ತಾರೆ. ಎರಡನೆಯ ತರಗತಿಯ ಗ್ರಂಥಗಳಲ್ಲಿ ಪ್ರಸ್ಥಾನತ್ರಯಗಳ ಸಾರವನ್ನು ಸಂಪ್ರದಾಯ ಧೋರಣೆಗೆ ಅನುಗುಣವಾಗಿ ಮತ್ತು ಈಗಿನ ವಿಮರ್ಶನ ವಿಚಕ್ಷಣರಿಗೆ ಒಪ್ಪಾಗುವಂತೆ ಯುಕ್ತಿಯುಕ್ತವಾಗಿ ಅನುಭವಪರ್ಯವಸಾಯಿಯಾಗುವಂತೆ ಹೆಣೆದು ಸರಳಕನ್ನಡ ದಲ್ಲಿ ಒದಗಿಸಿರುತ್ತಾರೆ. **ಶಾಂಕರವೇದಾಂತಪ್ರಕ್ರಿಯೆ, ಶಂಕರ ವೇದಾಂತಸಾರ, ಶಾಂಕರವೇದಾಂತದ ಮೂಲತತ್ತ್ವಗಳು** - ಇವೇ ಮುಂತಾದವು, ಜೊತೆಗೆ ಅನು ಶಾಂಕರವೇದಾಂತಗ್ರಂಥಾವಳಿಯ ನೈಷ್ಕರ್ಮ್ಯಸಿದ್ಧಿಯೂ ಪ್ರಕರಣ ಗ್ರಂಥಗಳೂ ಸೇರಿರುತ್ತವೆ. ನಿಷ್ಪಕ್ಷಪಾತವಾದ ಧೋರಣೆಯನ್ನು ಅನುಸರಿಸಿದ್ದಾರೆ. ಶಾಂಕರ ವೇದಾಂತಕ್ಕೆ ಅಪಚಾರವಾಗದಂತೆ ಸಮಯಾನುಸಾರವಾಗಿ ಖಂಡನ ಮಂಡನ ಗಳನ್ನೂ ಪ್ರಸ್ತಾಪಿಸಿರುತ್ತಾರೆ.

ಸಾಮಾನ್ಯಜನರಿಗಾಗಿ ಮೂಲ ತತ್ತ್ವಗಳನ್ನೇ ವಿವರಿಸಿ ಹೇಳುವಂಥ, ಆದರೆ ಶಾಸ್ತ್ರವಾಕ್ಯಗಳನ್ನು ಬಳಸದೆ ಶಾಸ್ತ್ರಾರ್ಥವನ್ನೇ ಮನನಮಾಡಿಸುವಂತೆ ರಚಿಸಿರುವ ಗ್ರಂಥಗಳಲ್ಲಿ 'ಪರಮಾರ್ಥ ಚಿಂತಾಮಣಿ' ಎಂಬುದು ಶ್ರೀಗಳವರ ಕನ್ನಡ, ಇಂಗ್ಲಿಷ್, ಸಂಸ್ಕೃತ - ಈ ಮೂರು ಭಾಷೆಗಳ ಗ್ರಂಥರಾಶಿಯಲ್ಲಿಯೇ ಮೇರುಕೃತಿ ಯಾಗಿದೆ. ಇದರಲ್ಲಿ ಇಡಿಯ ವಿಶ್ವದ ತಿರುಳನ್ನು ಗೊತ್ತುಪಡಿಸುವ ಮನನಕ್ರಮವನ್ನು ವಿಸ್ತಾರವಾಗಿ ತಿಳಿಸಿದೆ. ವಿಚಾರಸರಣಿಯು ಅನುಭವಯುಕ್ತಿಪೂರ್ಣವಾಗಿದೆ. ಸಚ್ಚಿದಾನಂದತತ್ತ್ವವನ್ನು ಸಾರ್ವತ್ರಿಕಾನುಭವಾನುಸಾರವಾಗಿ ದರ್ಶನಮಾಡಿಸ ಲಾಗಿದೆ. ಇಷ್ಟಾದರೂ ಶ್ರೀಗಳು ಸಂಪ್ರದಾಯವನ್ನು ಬಿಟ್ಟುಹೋಗಿಲ್ಲ, ವೇದಾಂತ ಸಂಪ್ರದಾಯವೆಂದರೇನು ? ಎಂಬಿದರ ಮರ್ಮವನ್ನು ಶ್ರೀಗಳ ಬರವಣಿಗೆ ಯಿಂದಲೇ ತಿಳಿಯಬೇಕಾಗಿದೆ.

★★★★

## ಶ್ರೀಗಳ ಸಾರಸ್ವತ ಸೇವೆ

**ಡಾ|| ಎನ್.ಎಸ್. ಅನಂತರಂಗಾಚಾರ್ಯರು**

"ಶ್ರೀ ಶ್ರೀಗಳವರು ಶಾಂಕರವೇದಾಂತಪ್ರಪಂಚಕ್ಕೆ ಸಲ್ಲಿಸಿರುವ ಸೇವೆ ಅಗಾಧ ವಾದುದು. ಒಂದು ಅಕ್ಯಾಡೆಮಿಯು ಅಥವಾ ವಿಶ್ವವಿದ್ಯಾಲಯವು ಮಾಡಬಹು ದಾದಷ್ಟು ಕೆಲಸವನ್ನು ಅವರೊಬ್ಬರೇ ಮಾಡಿರುವದನ್ನು ನೋಡಿದರೆ 'ಕ್ರಿಯಾಸಿದ್ಧಿಃ

ಸತ್ವೇ ಭವತಿ ಮಹತಾಮ್' ಎಂಬ ಸೂಕ್ತಿಯು ನೆನಪಾಗುತ್ತದೆ. ಅಲ್ಲದೆ ಶ್ರೀಗಳವರ ಯಾವ ಗ್ರಂಥವನ್ನೇ ತೆಗೆದುಕೊಂಡರೂ ಅದು ಚಿಕ್ಕದಾಗಿರಲಿ, ದೊಡ್ಡದಾಗಿರಲಿ - ಸತ್ತ್ವಪೂರ್ಣವಾಗಿಯೂ ಖಚಿತವಾದ ಅಭಿಪ್ರಾಯವುಳ್ಳದ್ದಾಗಿಯೂ ಪ್ರಾಮಾಣಿಕ ವಾಗಿಯೂ ವಿಮರ್ಶಾತ್ಮಕವಾಗಿಯೂ ಇರುತ್ತದೆ. ಗ್ರಂಥಕ್ಕೆ ಇರಬೇಕಾದ ಪೀಠಿಕೆ, ಪರಿಶಿಷ್ಟ, ಶಬ್ದಾನುಕ್ರಮಣಿಕೆಗಳೂ ಪ್ರಮಾಣವಚನಗಳ ಸ್ಥಾನನಿರ್ದೇಶವೂ ವ್ಯಾಸಂಗಶೀಲರಾದ ಓದುಗರಿಗೆ ದಾರಿದೀಪದಂತಿರುತ್ತವೆ. ಅನುವಾದಗಳಂತೂ ಭಾಷಾಮರ್ಯಾದೆಗೂ ವ್ಯಾಕರಣಕ್ಕೂ ಹೊಂದಿಕೊಂಡು ಮೂಲವನ್ನೇ ಪ್ರತಿ ಬಿಂಬಿಸುವ ಭಾವಾನುವಾದಗಳಾಗಿರುತ್ತವೆ. ವಾಕ್ಯರಚನೆಗೆ ಅಗತ್ಯವಾದ ಪದಗಳ ಜೋಡಾವಣೆಸಮಯದಲ್ಲಿ ಮೂಲದಲ್ಲಿಲ್ಲದ ಪದಗಳನ್ನು ಬ್ರಾಕೆಟ್‌ಗಳಿಂದ ತೋರಿ ಸಿರುತ್ತಾರೆ. ಇಂಥ ವಿಶಿಷ್ಟ ಅನುವಾದಕರು ಅಪರೂಪವೇ ಸರಿ. ಪರಮತಖಂಡನೆ ಯನ್ನಾಗಲಿ ತಪ್ಪು ಅಭಿಪ್ರಾಯಗಳನ್ನಾಗಲಿ ತಿಳಿಸುವಾಗಲೂ ನಯವಾದ ವಾಕ್ಯಗಳಿಂದ ಪ್ರಸ್ತಾಪಮಾಡಿರುತ್ತಾರೆ. ಶ್ರೀಗಳವರ ಗ್ರಂಥಗಳಲ್ಲಿರುವ ಪರಾಮರ್ಶಕ ವಾಕ್ಯಗಳನ್ನು ನೋಡಿದರೆ ಓದುಗರು ಅವರ ಒಂದೇ ಪುಸ್ತಕದಿಂದ ನೂರು ಪುಸ್ತಕಗಳಲ್ಲಿ ಸಂಗ್ರಹಿಸಬಹುದಾದಷ್ಟು ವಿಚಾರಗಳ ಲಾಭವನ್ನು ಸಂಶಯವಿಲ್ಲದೆ ಪಡೆಯುತ್ತಾರೆ. ಹೀಗೆ ಪೂಜ್ಯ ಶ್ರೀಗಳವರ ಗ್ರಂಥರಚನೆ, ಗ್ರಂಥಸಂಪಾದನೆ, ಅನುವಾದ-ಎಲ್ಲವೂ ಉಚ್ಚತರಗತಿಯ ಕೆಲಸಗಳಾಗಿದ್ದು ಅವುಗಳ ಬೆಲೆಯನ್ನು ಕಟ್ಟಲು ಅಸಾಧ್ಯವೆನಿಸುತ್ತದೆ. ಅದರಲ್ಲಿಯೂ ವೇದಾಂತಕ್ಷೇತ್ರದಲ್ಲಿ ಇಂಥ ಅಸಾಧಾರಣವಾದ ಕೆಲಸವು ಕೆಲವು ಶತ ಮಾನಗಳಿಂದೀಚೆಗೆ ಆಗಿಲ್ಲವೆಂದರೆ ಅತಿಶಯೋಕ್ತಿಯೆನಿಸಲಾರದು. ನಾನಂತೂ ಶ್ರೀ ಗಳವರ ಸಂಸ್ಕೃತ, ಇಂಗ್ಲಿಷ್ ಗ್ರಂಥಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆದಿರುತ್ತೇನೆ.

ಶ್ರೀಶ್ರೀಗಳವರು ಇಷ್ಟೆಲ್ಲ ಚಿಂತಿಸಿ ಬರೆಯಬೇಕಾದರೆ ಅವರು ಬಹುಶ್ರುತರೂ ಅನುಭವಿಗಳೂ ವಾಗ್ಮಿಗಳೂ ಲೇಖಕರೂ ಆಗಿಯೇ ಇರಬೇಕೆಂಬುದು ಯಥಾರ್ಥ ವಾದ ಸತ್ಯವಾಗಿದೆ. ಅವರು ಮುಂದಿನ ಪೀಳಿಗೆಯವರಿಗೆ ಶ್ರಮವನ್ನು ಕಡಿಮೆಮಾಡಿ ನಿಜವಾದ ವೇದಾಂತದರ್ಶನದ ಸಾರವನ್ನು ಅಚ್ಚುಕಟ್ಟಾಗಿ ತಮ್ಮ ಗ್ರಂಥಗಳಲ್ಲಿ ಮಾಡಿಸಿಕೊಟ್ಟಿರುತ್ತಾರೆ. ಅವರ ಗ್ರಂಥಗಳೆಲ್ಲವೂ ಪಠನಕ್ಕೆ ತಕ್ಕವಾಗಿವೆ. ಅವರು ಕೇವಲ ಗ್ರಂಥಕರ್ತರು ಮಾತ್ರವಲ್ಲದೆ ಪ್ರಕಾಶಕರೂ ಆಗಿ ತಾವು ಬರೆದ ಕೃತಿಗಳನ್ನೆಲ್ಲ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಹೊರತಂದಿರುವದಂತೂ ಪವಾಡ ಸದೃಶವಾಗಿದೆ. ಇಂಥ ಶ್ರೀಗಳವರಿಗೆ ವಂದನೆಗಳು.

★ ★ ★ ★

## ಗುರುಗಳು – ನಾ ಕಂಡಂತೆ

ಶ್ರೀಶ್ರೀ ಆತ್ಮಾನಂದೇಂದ್ರ ಸರಸ್ವತೀ ಸ್ವಾಮಿಗಳು
ಹಲಗೈಯ್ಯನಹುಂಡಿ, ವಾಜಮಂಗಲ ಅಂಚೆ, ಮೈಸೂರು - 570 010.

''ತಸ್ಮಾದ್ಬ್ರಾಹ್ಮಣಃ ಪಾಣ್ಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್''
(ಬೃ.ಉ. 3-5-1)

1. ವೇದಾಂತಕ್ಕೆ ಸ್ವಾಮಿಗಳ ಅಸಾಧಾರಣ ಅತ್ಯನ್ತ ವಿಶಿಷ್ಟ ಕೊಡುಗೆಯ ವಿಷಯದಲ್ಲಿ ವಿದ್ವಾಂಸರನೇಕರ ಲೇಖನಗಳು ಉಪನ್ಯಾಸಗಳು ಕನ್ನಡದಲ್ಲಿ ಪ್ರಚುರ ವಾಗಿವೆ. ಕರ್ಣಾಟಕದಲ್ಲಿ ಪ್ರಸಿದ್ಧರಾಗಿದ್ದರಲ್ಲದೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶಗಳಲ್ಲೂ ಅವರು ಅಪರಿಚಿತರಾಗಿರಲಿಲ್ಲ. ದೇಶಾದ್ಯನ್ತ ಪ್ರವಾಸ ಮಾಡಿ ಅವರ ಜೀವನಕಾಲದಲ್ಲೇ ಅನೇಕ ಪ್ರತಿಷ್ಠಿತ ವಿದ್ವಾಂಸರ ಪ್ರಶಂಸೆಗೆ ಕಾರಣ ವಾಗಿದ್ದರು. ಒಂದೆರಡು ಸನ್ನಿವೇಶಗಳು ವಿಶೇಷವಾಗಿ ನೆನಪಿಗೆ ಬರುತ್ತವೆ. ಒಮ್ಮೆ ಭಾಗೀರಥಿ ತೀರದಲ್ಲಿರುವ ಉತ್ತರ ಕಾಶಿಯಲ್ಲಿ ಪ್ರಸಿದ್ಧ ಮಣ್ಡಲೇಶ್ವರರೊಬ್ಬರು ಶ್ರುತಿಶ್ರವಣ ಮಾಡಿಸುತ್ತಿದ್ದಾಗ ಶಂಕರಭಾಷ್ಯಗಳು ದೇಶದ ಎಲ್ಲ ಭಾಷೆಗಳಲ್ಲೂ ಭಾಷಾನ್ತರಗೊಳ್ಳಬೇಕೆಂದು ಆಶೆ ವ್ಯಕ್ತಪಡಿಸಿದರು. ಶ್ರವಣ ಮಾಡುತ್ತಿದ್ದ ಬಹುತೇಕ ಯತಿಗಳಲ್ಲಿ ವಂಗದೇಶದ ಯತಿಗಳೊಬ್ಬರು, ವಂಗ ಆಚಾರ್ಯರೊಬ್ಬರ ಹೆಸರನ್ನು ಉಲ್ಲೇಖಿಸಿ, ಅವರು ಭಾಷ್ಯಗಳನ್ನೆಲ್ಲ ವಂಗಭಾಷೆಗೆ ಮಾಡಿದ್ದಾರೆಂದು, ಸ್ವಲ್ಪ ಅಭಿ ಮಾನದಿಂದ ತಿಳಿಸಿದರು. ಆಗ ಮಣ್ಡಲೇಶ್ವರರು ನನ್ನ ಕಡೆಗೆ ಕೈ ತೋರಿಸಿ, ಇವರ ಗುರುಗಳು ಭಾಷ್ಯಗಳನ್ನೇ ಅಲ್ಲದೆ ಅನೇಕ ಪ್ರಕರಣ ಗ್ರಂಥಗಳನ್ನೂ ಕನ್ನಡಿಸಿ, ಸಂಸ್ಕೃತ, ಆಂಗ್ಲಭಾಷೆ, ಕನ್ನಡ ಭಾಷೆಗಳಲ್ಲಿ ಸ್ವತಂತ್ರ ಉದ್ದಾಮಗ್ರಂಥಗಳನ್ನು ರಚಿಸಿದ್ದಾರೆ ಎಂದು ತಿಳಿಸಿದಾಗ ಸಭೆಯಲ್ಲಿದ್ದವರಿಗೆ ಆಶ್ಚರ್ಯವಾದದ್ದು ಹೆಮ್ಮೆಯ ಸಂಗತಿ.

2. ಬೃಂದಾವನದ ಪರಮ ಪೂಜ್ಯ ಅಖಣ್ಡಾನನ್ದ ಸರಸ್ವತೀಸ್ವಾಮಿಗಳು, ಗುರುಗಳ ''ಮಾಣ್ಡೂಕ್ಯರಹಸ್ಯವಿವೃತಿ''ಯನ್ನು ಆಧರಿಸಿಕೊಂಡು ಪ್ರವಚನಗಳನ್ನು ನೀಡಿದ್ದಾರೆ. ಸ್ವಾಮಿಗಳ ''ಗಮ್ಭೀರ ಚಿನ್ತನೆ''ಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಇಂಗ್ಲೆಂಡಿನ ಪ್ರೊ. ಆಲ್‌ಸ್ಟನ್, ಹಾಲೆಂಡಿನ ಪ್ರೊ. ಹ್ರೊಂಡ (GONDA), ಜರ್ಮನಿಯ ಪ್ರೊ. ಹಕೆರ್ – ಮುಂತಾದವರು ಯೂರೋಪಿನಲ್ಲಿ ಸ್ವಾಮಿಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಅಮೇರಿಕದಲ್ಲಿ 'ಭಾರತೀಯ ತತ್ತ್ವಶಾಸ್ತ್ರದ ವಿಶ್ವಕೋಶ'ದ ಪ್ರಧಾನ ಸಂಪಾದಕರಾದ ಪ್ರೊ. ಕಾರ್ಲ್ ಪಾಟ್ಟರ್ ಅವರು ಸ್ವಾಮಿಗಳ ಪ್ರಕ್ರಿಯೆಗೆ ಪೂರ್ಣಬೆಂಬಲ ಈಚೆಗೆ ನೀಡಿದ್ದಾರೆ.

3. ಇವಷ್ಟು ಕೂಡಾ ಸ್ವಾಮಿಗಳ ತಪೋನಿಷ್ಠೆ, ವಿದ್ವತ್ ಮತ್ತು ಜ್ಞಾನಾನುಭವದ ಪ್ರತಿಭೆ ಮಾತ್ರ ಎಂದು ಎಲ್ಲರೂ ಒಪ್ಪಿದ್ದಾರೆ. ಭಗವತ್ಪಾದರು, ಆಚಾರ್ಯ ಸುರೇಶ್ವರರ ನಂತರ ವ್ಯಾಖ್ಯಾನಕಾರರು ಶ್ರುತಿ, ಭಾಷ್ಯ, ವಾರ್ತಿಕಗಳಲ್ಲಿ ಎಲ್ಲೂ ಕಾಣದ ವಿಷಯಗಳನ್ನು ಆಚಾರ್ಯರ ಹೆಸರಿಗೆ ಸಂಬಂಧಿಸಿ ವೇದಾಂತ ಸಿದ್ಧಾಂತವನ್ನೇ ತಲೆಕೆಳಕು ಮಾಡಿದ್ದನ್ನು ವಿರೋಧಿಸಿ, ಆಚಾರ್ಯರ ಶುದ್ಧಶಾಂಕರ ಪ್ರಕ್ರಿಯೆಯನ್ನು ವಿದ್ವಾಂಸರಲ್ಲಿ ಚರ್ಚಿಸಿ , ಗ್ರಂಥಗಳು ಉಪನ್ಯಾಸಗಳ ಮೂಲಕ ಸ್ವಾಮಿಗಳು ಪ್ರತಿಪಾದಿಸಿದ್ದು ಸರ್ವರಿಗೂ ವಿದಿತವಾಗಿದೆ. ಇಷ್ಟೇ ಅಲ್ಲದೆ, ಶ್ರುತಿಯಲ್ಲಿ ಭಾಷ್ಯಗಳಲ್ಲಿ ಹುದುಗಿಕೊಂಡಿದ್ದ ಕೆಲವು ವಿಷಯಗಳನ್ನು ಎಲ್ಲರ ಗಮನಕ್ಕೆ ತಂದಿರುವದು ಸ್ವಾಮಿಗಳ ಅತ್ಯಮೂಲ್ಯ ಅನುಗ್ರಹ. ಪ್ರಧಾನವಾಗಿ :

ಅ) ಆಸ್ತಿಕ ಸಿದ್ಧಾಂತಗಳೆಲ್ಲ ಶ್ರುತಿಪ್ರಾಮಾಣ್ಯವನ್ನು ಒಪ್ಪುವವೇ. ಭಗವತ್ಪಾದರು ಇದು ಅನುಭವಾನುಸಾರಿಯಾಗಿರಬೇಕೆಂದು ಸಾರಿದವರಲ್ಲಿ ಅಗ್ರಗಣ್ಯರು. ಅನುಭವವೆಂದರೆ ಆತ್ಮಾನುಭವವೇ. ಇದು ಸಾರ್ವತ್ರಿಕ ಅನುಭವವೆಂದು ತೋರಿಸಿದ್ದು ಸ್ವಾಮಿಗಳಿಗೆ ಮೀಸಲು.

ಆ) ಆಕರ ಗ್ರಂಥಗಳಲ್ಲಿ , ಸಾಮಾನ್ಯ ಜನರ ಅನುಭವವನ್ನು ಅನುವಾದ ಮಾಡಿಕೊಂಡು ವಾಙ್ಮನಗಳಿಗೆ ಮೀರಿದ ಶಬ್ದಾತೀತವಾದ ವಿಷಯವನ್ನು ಲೋಕದ ಸ್ತರಕ್ಕೆ ತಂದು, ಈ ಹಂತ ಮುಗಿದೊಡನೆಯೇ ಇದನ್ನು ನಿರಸಮಾಡಿ, ಮೇಲಿನ ಸ್ತರದ ಉಪದೇಶ ಮಾಡುವದೊಂದು ಮಹತ್ತರ ಪ್ರಕ್ರಿಯೆ. ಇದನ್ನು ಅಧ್ಯಾರೋಪಾಪವಾದನ್ಯಾಯವೆಂದು ಭಗವತ್ಪಾದರು ಸೂಚಿಸಿದ್ದಾರೆ. ಈ ಪ್ರಧಾನಪ್ರಕ್ರಿಯೆಯನ್ನನುಸರಿಸದೆ ಶ್ರುತಿಯಲ್ಲಿ ಏಕವಾಕ್ಯತೆ ಮಾಡಲು ಸಾಧ್ಯವಿಲ್ಲ ಎಂದು ಅನೇಕ ಕಡೆಗಳಲ್ಲಿ ದೃಷ್ಟಾಂತಗಳೊಡನೆ ಬೆಳಕಿಗೆ ತಂದ ಖ್ಯಾತಿ ಸ್ವಾಮಿಗಳದ್ದೇ.

ಇ) 'ಅಧ್ಯಾಸಭಾಷ್ಯ' ಭಗವತ್ಪಾದರ ಸಿದ್ಧಾಂತದ ಅಡಿಗಲ್ಲು. ಅನೇಕ ಗ್ರಂಥಗಳಲ್ಲಿ ಭಾಷ್ಯದಲ್ಲಿ ಬರಬಹುದಾದ ಸಂಶಯಗಳನ್ನೆಲ್ಲ ಸ್ವಾಮಿಗಳು ನಿವಾರಣೆ ಮಾಡಿ ಮುಮುಕ್ಷುಗಳಿಗೆ ಅಮೋಘ ಅನುಗ್ರಹ ಮಾಡಿದ್ದಾರೆ.

ಈ) ಇದೇ ರೀತಿಯಾಗಿ, ಶ್ರುತಿಗಳಲ್ಲಿ ಅನೇಕ ಕಡೆ ಪ್ರತಿಪಾದಿತವಾಗಿದ್ದ, ಭಗವತ್ಪಾದರಿಂದ ಮಹಾತರ್ಕವೆನಿಸಿಕೊಂಡ, 'ಅವಸ್ಥಾತ್ರಯ ಪ್ರಕ್ರಿಯೆ' ಯನ್ನು ಅತಿ ಸುಲಭವನ್ನಾಗಿ ಮಾಡಿಕೊಟ್ಟವರು, 'ಪರಮಾರ್ಥಚಿಂತಾಮಣಿ' ಯಂತಹ ಅಗ್ರೇಸರ ಗ್ರಂಥವನ್ನು ಲೋಕಕ್ಕೆ ನೀಡಿದ ಮಹಾಯಶಸ್ಸು ಪಡೆದವರು ಸ್ವಾಮಿಗಳೇ.

3.1) ಅನೇಕ ಗುಣಗಳಿಂದ ಕೂಡಿದ್ದ ಸ್ವಾಮಿಗಳಲ್ಲಿ ಕೆಲವು ಎದ್ದುಕಾಣಿಸುತ್ತಿದ್ದವು. ಮೊದಲನೆಯದಾಗಿ, ಅವರ ಸರಳತೆ. 'ಆದ್ದರಿಂದ ಬ್ರಾಹ್ಮಣನು ಪಾಂಡಿತ್ಯವನ್ನು ಪೂರ್ಣವಾಗಿ ತಿಳಿದು ಬಾಲ್ಯದಿಂದ ನಿಲ್ಲಲೆಳಸಬೇಕೆಂದು' ಸಾರಿತು ಶ್ರುತಿ. ಹೆಜ್ಜೆ ಹೆಜ್ಜೆಗೂ ಪಾಂಡಿತ್ಯ ಪ್ರಕಟಗೊಳ್ಳುತ್ತಿದ್ದರೂ ಮಕ್ಕಳ ಸರಳತೆ ಅವರಲ್ಲಿ ಸ್ವಭಾವವಾಗಿತ್ತು. ಉಪನ್ಯಾಸಗಳಲ್ಲಿ, ಸಂಭಾಷಣೆಗಳಲ್ಲಿ ಎಂದೂ ತಾವು ಜ್ಞಾನಿ ಎಂದು ಹೇಳಿದ್ದನ್ನು ನಾನು ಕೇಳಿಲ್ಲ. 'ನಮ್ಮಂತಹ ಅಜ್ಞಾನಿಗಳು' ಅಂತಲೇ ಹೇಳುತ್ತಿದ್ದರಲ್ಲ, ಅದೆಂತಹ ಸರಳತೆ!

3.2) ಇನ್ನೊಂದು ಗುಣ ಅವರ ನಿಷ್ಠೆ. ಬೆಳಗ್ಗೆ ತಪ್ಪದೆ ನಾಲ್ಕು ಗಂಟೆಗೇ ಎದ್ದು ಸ್ನಾನ ಮಾಡಿ, ಆಹ್ನಿಕ ಮುಗಿಸಿ, ಭಾಷ್ಯಪಾಠವನ್ನು ತಪ್ಪದೆ ಮಾಡಿಕೊಂಡು, 7-15ಕ್ಕೆ ಸರಿಯಾಗಿ ಪಾಠ ಮಾಡಲು ತಯಾರಾಗುತ್ತಿದ್ದರು. ಮೂಲವ್ಯಾಧಿಯಿಂದ ಕುಳಿತುಕೊಳ್ಳಲು ಕೂಡ ಕಷ್ಟವಾಗುತ್ತಿದ್ದರೂ ಪಾಠ ತಪ್ಪುತ್ತಿರಲಿಲ್ಲ. ಬೆಂಗಳೂರಿನಲ್ಲಿದ್ದಾಗ ಸ್ವಾಮಿಗಳಿಗೆ 'PROSTATE' ಶಸ್ತ್ರ ಚಿಕಿತ್ಸೆಯಾದ ಮೇಲೆ, ಜ್ಞಾನಾನಂದೇಂದ್ರ ಸ್ವಾಮಿಗಳು (ಆಗಿನ್ನೂ ವೇ. ಬ್ರ. ವಿಠ್ಠಲಶಾಸ್ತ್ರಿಗಳಾಗಿದ್ದರು) ಮತ್ತು ಪಂಡಿತರು ಲಕ್ಷ್ಮೀನರಸಿಂಹಶಾಸ್ತ್ರಿಗಳ ಮುಂದಾಳತ್ವದಲ್ಲಿ ಕೂಷ್ಮಾಣ್ಡಹೋಮ ನಡೆಯಿತು. ಪೂರ್ಣಾಹುತಿಯಾಗುವ ವೇಳೆಗೆ ಸುಮಾರು ಮಧ್ಯಾಹ್ನವಾಗಿತ್ತು. ಆ ವೇಳೆಗಾಗಲೇ ಸ್ವಾಮಿಗಳು ಭಿಕ್ಷೆ ಮುಗಿಸಿದ್ದರು. ಶ್ರೀ ಶಾಸ್ತ್ರಿಗಳು ಪ್ರಸಾದ ತಂದು, 'ಬಾಯಿ ತೆಗೆಯಬೇಕು' ಅಂದರು. ಸ್ವಾಮಿಗಳ ಉತ್ತರ: 'ಯಾಕೆ'. 'ಯಜ್ಞಪ್ರಸಾದ' ಅಂದರು, ಶಾಸ್ತ್ರಿಗಳು. 'ಅದೇನು', ಸ್ವಾಮಿಗಳು, 'ನಾಲ್ಕು ಕಾಳು ಹಾಕಲೆ' ಅಂದರು ಶಾಸ್ತ್ರಿಗಳು. 'ಬೇಡ ಬೇಡ' ಅಂತ ಸ್ವಾಮಿಗಳು ತಡೆದರು. ಯಜ್ಞಕ್ಕೆ ಯಾವ ಅಡಚಣೆಯನ್ನೂ ಮಾಡಲಿಲ್ಲ ತಮ್ಮ ನಿಷ್ಠೆಯನ್ನೂ ಬಿಡಲಿಲ್ಲ!

★★★★

## ಶಂಕರವೇದಾಂತದ ಪುನರುದ್ಧಾರ

(ಡಾ|| ಕೆ.ಬಿ. ರಾಮಕೃಷ್ಣರಾಯರು, ವೇದಾಂತಪ್ರಾಧ್ಯಾಪಕರು, ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು)

"ವೇದಾಂತಶಾಸ್ತ್ರವು ಭರತಖಂಡದ ಅಮೂಲ್ಯವಾದ ಆಸ್ತಿ. ಶ್ರೀಶಂಕರ ಭಗವತ್ಪಾದರು ಪ್ರಪ್ರಥಮವಾಗಿ ವೇದಾಂತ (ಉಪನಿಷತ್ತು)ಗಳಿಗೆ ತಮ್ಮ ಅಮೋಘ ಭಾಷ್ಯವನ್ನು ರಚಿಸಿ ಲೋಕೋಪಕಾರವನ್ನು ಮಾಡಿದ್ದಾರೆ. ಶಂಕರರಿಗಿಂತ ಹಿಂದಿನ ವೇದಾಂತಾಚಾರ್ಯರುಗಳ ಗ್ರಂಥಗಳು ಈಗ ಲಭ್ಯವಿಲ್ಲ. ಪ್ರಕೃತ ಶಂಕರರು

ಅದ್ವೈತಸಂಪ್ರದಾಯಕ್ಕನುಗುಣವಾಗಿ ವೇದಾಂತಾರ್ಥವನ್ನು ಬಾದರಾಯಣರ ಸೂತ್ರಗಳಿಗೆ ಅನುಸಾರವಾಗಿ ವಿವರಿಸಿರುತ್ತಾರೆ. ಇಂಥ ಸಾಂಪ್ರದಾಯಿಕವಾದ ಅರ್ಥವೂ ಅದರ ಅನುಷ್ಠಾನವೂ ದೀರ್ಘಕಾಲಾವಧಿಯ ಪರಿಣಾಮವಾಗಿ ಕೊಂಚ ವ್ಯತ್ಯಾಸವನ್ನು ಹೊಂದಲಾರಂಭಿಸಿತು. ಇದಕ್ಕೆ ಮುಖ್ಯಕಾರಣ, ಶಂಕರರ ಅಭಿಪ್ರಾಯ ವನ್ನು ನೇರಾಗಿ ಶಂಕರರ ಗ್ರಂಥಗಳಿಂದಲೇ ಮುಂದಿನವರು ಸ್ವೀಕರಿಸದೆ ಇದ್ದದ್ದು. ಶಂಕರರ ಅನುಯಾಯಿಗಳು ಶಂಕರರದೆಂದು ಹೇಳುವ ಮತವನ್ನೇ ಶ್ರೀ ರಾಮಾನುಜಾ ಚಾರ್ಯರು ಸ್ವೀಕರಿಸಿ ಖಂಡಿಸಿರುತ್ತಾರೆ. ಹೀಗೆಯೇ ಮತ್ತೆ ಕೆಲವು ವಿದ್ವಾಂಸರು ಶಂಕರರ ಅಭಿಪ್ರಾಯಗಳನ್ನು ಪಾಶ್ಚಾತ್ಯರ ಗ್ರಂಥಗಳ ಆಧಾರದಿಂದ ತೆಗೆದುಕೊಂಡಿ ದ್ದಾರೆ. ಪಾಶ್ಚಾತ್ಯವಿದ್ವಾಂಸರಿಗೆ ನಮ್ಮ ದೇಶದ ಸಂಪ್ರದಾಯಗಳಾಗಲಿ, ಸಂಸ್ಕಾರ ವಾಗಲಿ, ಭಾಷೆಯಾಗಲಿ – ಎಲ್ಲವೂ ಅಪರಿಚಿತ, ಎಲ್ಲವೂ ಹೊಸದು. ಆದ್ದರಿಂದ ಅವರು ತಮ್ಮ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಏನನ್ನು ಶಂಕರರ ಅಭಿಪ್ರಾಯವೆಂದು ಪರಿಗಣಿಸಿ ತಮ್ಮ ಗ್ರಂಥಗಳಲ್ಲಿ ಬರೆದರೋ ಅದೇ ನಿಜವಾದ ಶಂಕರರ ಅಭಿಪ್ರಾಯವು ಹೇಗಾದೀತು ? ಪಾಶ್ಚಾತ್ಯರಿಗೆ ಸಂಸ್ಕೃತಭಾಷೆಯಾಗಲಿ, ಶಾಸ್ತ್ರವಾಗಲಿ, ನಮ್ಮಲ್ಲಿರುವ ಪಂಡಿತರುಗಳ ಸಹಾಯದಿಂದಲೇ ದೊರಕಿರುತ್ತದೆಯಾದ್ದರಿಂದ ಶಂಕರಾನುಯಾಯಿ ಗಳೆನಿಸಿಕೊಂಡ ಪಂಡಿತರುಗಳು ಕಾಲವ್ಯವಧಾನದಿಂದ ತಾವು ತಿಳಿದದ್ದನ್ನೇ ಶಂಕರರ ಅಭಿಪ್ರಾಯವೆಂತ ಪಾಶ್ಚಾತ್ಯರಿಗೆ ಬೋಧನೆ ಮಾಡಿರುತ್ತಾರೆ. ಅದನ್ನು ಅವಲಂಬಿಸಿ ಗ್ರಂಥರಚನೆಮಾಡಿರುವ ಪಾಶ್ಚಾತ್ಯರಿಂದ ನಾವು ಶಂಕರತತ್ತ್ವವನ್ನು ತಿಳಿಯಲೆಳಸಿದರೆ ಅದು ಎಷ್ಟರಮಟ್ಟಿಗೆ ಪ್ರಮಾಣವಾದೀತು ? ಹೀಗೆ ಶಂಕರರ ಮೂಲ ಉಪದೇಶಕ್ಕೆ ಮಸುಕು ಮುಚ್ಚಿದಂಥ ಸಂಧಿಕಾಲದಲ್ಲಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಅವತಾರವಾಯಿತು. ಅವರು ಶಂಕರವೇದಾಂತವನ್ನು ನೇರಾಗಿ ಶಂಕರರ ಭಾಷ್ಯಗಳಿಂದಲೇ ತಿಳಿಯಬೇಕೆಂದು ಬೋಧಿಸಿದರು. ಶಂಕರಭಾಷ್ಯಗಳನ್ನು ಓದಿ ಜೀರ್ಣಿಸಿಕೊಂಡು ಶಂಕರರ ಮೂಲ ಉಪದೇಶಗಳು ಸ್ವಲ್ಪವೂ ಮುಕ್ಕಾಗದಂತೆ ಭಾಷ್ಯಗ್ರಂಥಗಳಿಂದ ಮಥನಮಾಡಿ ತೆಗೆದು ಅವುಗಳನ್ನು ಸುಸ್ಪಷ್ಟವಾಗಿ ನೂರಾರು ಗ್ರಂಥಗಳ ಮೂಲಕ ಕನ್ನಡದಲ್ಲಿ, ಸಂಸ್ಕೃತ, ಇಂಗ್ಲಿಷ್‌ನಲ್ಲಿಯೂ ಹೊರಹಾಕಿದರು. ಇಂಥ ಸ್ವಾಮಿಗಳು ಕೊಹಿನೂರು ರತ್ನಕ್ಕೆ ಸಮಾನರು.

"ಸಾಮಾನ್ಯ ಜನರಿಗೆ ರತ್ನದ ಬೆಲೆಯನ್ನೂ ಸ್ವರೂಪವನ್ನೂ ತಿಳಿಯುವ ಶಕ್ತಿ ಸ್ವಾಭಾವಿಕವಾಗಿಯೇ ಕಡಿಮೆ. ಆದ್ದರಿಂದ ರತ್ನವು ಝುಗಝುಗಿಸುವಂತೆ ಅದನ್ನು ಸಾಣೆಹಿಡಿದು ಚಿನ್ನದ ಒಡವೆಯಲ್ಲಿ ಜೋಡಿಸಿ ತೋರಿಸಿದ ಹೊರತು ಅದರ ಪ್ರಭಾವವು ಎಲ್ಲರಿಗೂ ತಿಳಿಯಲಾರದು." ಹಾಗೆ ಶ್ರೀಸ್ವಾಮಿಗಳು ತಮ್ಮ ಆಳವಾದ

ಪಾಂಡಿತ್ಯ, ಚಿಂತನ, ಅನುಭವಗಳ ಮೂಲಕ ಹೊರಹೊಮ್ಮಿದ ಶಂಕರವೇದಾಂತದ ಅಸಾಧಾರಣತತ್ತ್ವಗಳನ್ನು ತಮ್ಮ ಗ್ರಂಥಗಳ ಮುಖಾಂತರ ಹರಡಿ ತಾವು ರತ್ನಪ್ರಾಯರಾಗಿ ಧವಳಕೀರ್ತಿಯನ್ನು ಸಂಪಾದಿಸಿದ್ದಾರೆ. ಶ್ರೀಸ್ವಾಮಿಗಳ ಕೀರ್ತಿಯನ್ನು ಅವರ ಒಂದೊಂದು ಗ್ರಂಥವೂ ದಿಕ್ಕುವಿದಿಕ್ಕುಗಳಲ್ಲೂ ಹರಡುವ ಸಾಮರ್ಥ್ಯವುಳ್ಳದ್ದಾಗಿದೆ. ನಾನು ಶ್ರೀ ಸ್ವಾಮಿಗಳ ಎಲ್ಲಾ ಗ್ರಂಥಗಳನ್ನೂ ಓದಿ ತುಂಬ ಪ್ರಭಾವಿತನಾಗಿದ್ದೇನೆ. ಎಷ್ಟೋ ವಿಷಯಗಳನ್ನು ಅವರ ಗ್ರಂಥಗಳಿಂದ ತಿಳಿದುಕೊಂಡಿದ್ದೇನೆ. ನನ್ನ ವಿಚಾರಸರಣಿಯನ್ನೂ ಚಿಂತನಕ್ರಮವನ್ನೂ ತಿದ್ದಿಕೊಂಡು ಮಾರ್ಗದರ್ಶನವನ್ನು ಪಡೆದಿರುತ್ತೇನೆ. ಅವರ ಒಂದೊಂದು ಗ್ರಂಥವನ್ನೂ ಓದಿದವರೂ ಸಹ ಅಲ್ಲಿರುವ ವಿಷಯಗಳನ್ನು ಅರಗಿಸಿಕೊಂಡು ಪ್ರಬಂಧಗಳನ್ನು ಬರೆದಲ್ಲಿ ಡಾಕ್ಟರೇಟ್ ಪದವಿಗಳನ್ನು ಸಂಪಾದಿಸಬಹುದಾಗಿದೆ. ಅವರ 'ಮಾಂಡೂಕ್ಯರಹಸ್ಯವಿವೃತಿಃ' ಎಂಬ ಗ್ರಂಥದಲ್ಲಿ ಆಂಗ್ಲಭಾಷೆಯಲ್ಲಿ ಶ್ರೀಶ್ರೀಗಳವರೇ ರಚಿಸಿರುವ ಸುಮಾರು ಎಪ್ಪತ್ತು ಪುಟಗಳ ಪೀಠಿಕೆಯೊಂದೇ ಅವರಿಗೆ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಯನ್ನು ಗಳಿಸಿಕೊಡಬಲ್ಲದ್ದಾಗಿದೆ, ಇಂಥ ಘನವಿದ್ವಾಂಸರು ಸ್ವಾಮಿಗಳು. ಶಾಂಕರವೇದಾಂತದಲ್ಲಿ ಅಧಿಕೃತವಾಗಿ ಬರೆಯಬಲ್ಲ ಹಾಗೂ ಮಾತನಾಡಬಲ್ಲ ಏಕೈಕ ಪಂಡಿತರಾಗಿದ್ದ ಶ್ರೀ ಸ್ವಾಮಿಗಳು ಪರಮಪೂಜ್ಯರು, ಜೀವನ್ಮುಕ್ತರು.

ನಾವು ಶಂಕರರ ಅಭಿಪ್ರಾಯಗಳನ್ನು ಬೇರೊಬ್ಬರ ಮುಖದಿಂದ, ಅದೂ ಸಹ ಎರಡುಮೂರು ಮುಖಗಳ ವ್ಯವಧಾನದಿಂದ ತಿಳಿಯುವದು ಖಂಡಿತ ಸರಿಯಲ್ಲ, ನೇರಾಗಿ ಶಂಕರರನ್ನೇ ಬಳಿಸಾರಿ ಅವರ ಗ್ರಂಥಗಳಿಂದಲೇ ತಿಳಿಯಬೇಕು. ಈ ಸತ್ಯವನ್ನು ಮನಗಂಡವರು ಶ್ರೀ ಸ್ವಾಮಿಗಳೊಬ್ಬರೇ - ಎಂದು ಧಾರಾಳವಾಗಿ ಹೇಳಬಹುದು. ಮಾನವನು ಎಷ್ಟೇ ಬುದ್ಧಿವಂತನಾದರೂ ಮತ್ತೊಬ್ಬರ ಅಭಿಪ್ರಾಯಗಳನ್ನು ಸಂಗ್ರಹಿಸಿ ತಾನು ಇನ್ನೊಬ್ಬರಿಗೆ ಹೇಳುವಾಗ ತನ್ನದನ್ನೇನಾದರೂ ಸೇರಿಸಿಯೇ ತೀರುತ್ತಾನೆ. ಇದು ಅನಿವಾರ್ಯ. ಹೀಗೆಯೇ ಶಂಕರರ ಕಾಲದಿಂದ ಈವರೆಗಿನ ಪರಂಪರೆಯಲ್ಲಿ ಶಂಕರರ ಮೂಲಾಭಿಪ್ರಾಯಕ್ಕೆ ಧಕ್ಕೆಯುಂಟಾಗಿದ್ದರೆ ಆಶ್ಚರ್ಯವೇನೂ ಇಲ್ಲ. ಆದ್ದರಿಂದ ಶ್ರೀ ಸ್ವಾಮಿಗಳು ತಿಳಿಸುವಂತೆ Back to Shankara – ಶಂಕರರ ಕಡೆಗೇ ಹಿಂದಕ್ಕೆ ಸರಿದು ಅವರ ಅಭಿಪ್ರಾಯಗಳನ್ನು ತಿಳಿಯಬೇಕು.

ಕೊನೆಯದಾಗಿ ಶ್ರೀಯುತರು ಹೀಗೆಂದರು : "ಒಬ್ಬ ವಿದ್ಯಾರ್ಥಿಯು ನಾಲ್ಕಾರು ದಿನಗಳು ಕಾಲೇಜಿಗೆ ಗೈರುಹಾಜರಾಗಿರುತ್ತಾನೆಂದು ಇಟ್ಟುಕೊಳ್ಳೋಣ. ಆ ಕಾಲದಲ್ಲಿ ನಡೆದ ಪಾಠಗಳ ನೋಟ್ಸನ್ನು ತನ್ನ ಮತ್ತೊಬ್ಬ ಸ್ನೇಹಿತನಿಂದ ಆತನು

ಎರವಲು ಪಡೆದು ಅದನ್ನು ಬರೆದುಕೊಂಡು ಅಭ್ಯಾಸಮಾಡಿ ಪರೀಕ್ಷೆಯಲ್ಲಿ ಉತ್ತರವನ್ನು ನೀಡುತ್ತಾನೆಂದು ಕೊಳ್ಳೋಣ. ಆ ವೇಳೆಗಾಗಲೇ ಎರಡು ಕೈ ದಾಟಿರುವ ಹಾಗೂ ನೇರಾಗಿ ಗುರುಮುಖದಿಂದ ಪಾಠವನ್ನೇ ಕೇಳಿರದ ಆತನ ಅಭಿಪ್ರಾಯಗಳು ಉಪಾಧ್ಯಾಯರ ಉಪದೇಶಕ್ಕಿಂತ ಭಿನ್ನವಾಗಿಯೇ ಇರುತ್ತದೆ. ಒಂದು ವೇಳೆ ಉಪಾಧ್ಯಾಯರು 'ಏನಯ್ಯ ಹೀಗೇಕೆ ಬರೆದಿದ್ದೀಯೆ?' ಎಂದರೆ 'ನೀವೇ ಹೇಳಿಕೊಟ್ಟ ಪಾಠವೇ ಇದು ಸಾರ್' ಎಂದರೆ ಉಪಾಧ್ಯಾಯನ ಗತಿ ಏನಾಗಬೇಕು ? ಹಾಗಾಗಿದೆ – ಈಗಿನ ಶಾಂಕರವೇದಾಂತದ ಸ್ಥಿತಿ. ಆದ್ದರಿಂದ ಶಾಂಕರಭಾಷ್ಯಗಳ ಮೂಲದಿಂದಲೇ ಶಾಂಕರವೇದಾಂತವನ್ನು ನಿರ್ಣಯಿಸುವ ಪ್ರಯತ್ನ ಬೇಕು.

★★★★

## ಅನನ್ಯ ಜ್ಞಾನ ತಪಸ್ವಿಗಳು : ಕನ್ನಡ ಭಾಷೆಗೆ ಮಹೋನ್ನತ ಕೊಡುಗೆ

(ಡಾ|| ಎ.ಎಸ್. ವೇಣುಗೋಪಾಲರಾವ್)

ಶ್ರೀಗಳು ತಮ್ಮ ಸಾರ್ಥಕ ಜೀವನದ ಕ್ಷಣಕ್ಷಣವನ್ನೂ ವೇದಾಂತ ಚಿಂತನೆಯಲ್ಲೇ ಕಳೆದವರು. ಸಂನ್ಯಾಸ ಜೀವನದ ನಿಷ್ಠುರ ನಿಯಮಗಳನ್ನು ಶ್ರದ್ಧೆಯಿಂದ ಪರಿಪಾಲಿಸುತ್ತಲೇ ಶಾಂಕರವೇದಾಂತದ ಅಧ್ಯಾಪನ, ಪ್ರವಚನ, ಗ್ರಂಥರಚನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡ ಅನನ್ಯ ಜ್ಞಾನ ತಪಸ್ವಿಗಳು. ಅವರು ನಡೆಸಿದ ಅಭ್ಯಾಸ, ಆಲೋಚನೆ, ಅಂತರಂಗದಲ್ಲಿ ಕಂಡುಕೊಂಡ ಒಳಹೊಳಹು ಲೋಕೋತ್ತರವಾದದ್ದು. ಶಾಂಕರ ವೇದಾಂತದ ಪರಿಶುದ್ಧ ರೂಪವನ್ನು ಕನ್ನಡಿಗರಿಗೆ, ಕನ್ನಡ ಭಾಷೆಯಲ್ಲಿ ಒದಗಿಸಬೇಕೆಂಬುದೇ ಶ್ರೀಶ್ರೀಗಳ ಮುಖ್ಯವಾದ ಕಾಳಜಿ. ವಿದ್ವತ್ಪೂರ್ಣವಾದ ವೇದಾಂತ ವಿಷಯವನ್ನು - ಪ್ರಸ್ಥಾನತ್ರಯ ಗ್ರಂಥಗಳ ಭಾಷ್ಯವನ್ನು ಇಷ್ಟು ತಿಳಿಯಾದ ಭಾಷೆಯಲ್ಲಿ ಬರೆಯುವದು ಸಾಧ್ಯವೇ ? ಎಂದು ಅಚ್ಚರಿಪಡುವಂತಿದೆ, ಈ ಭಾಷ್ಯಗಳ ಅನುವಾದಗಳು, ಶ್ರೀಶ್ರೀಗಳ ಸರಳ-ಸುಂದರ, ಅಷ್ಟೇ ನಿರ್ದಿಷ್ಟ-ಖಚಿತ ಭಾಷಾ ಶೈಲಿ, ನಮ್ಮ ಶ್ರೀಶ್ರೀಗಳ ಸೃಜನಶೀಲತೆ ಅಚ್ಚರಿಗೊಳಿಸುತ್ತದೆ.

ಅಂತರಂಗವನ್ನು ಕರಗಿಸುವದಕ್ಕಿಂತ ಬುದ್ಧಿಯನ್ನು ಪ್ರಚೋದಿಸಿ ಸ್ವಾನುಭವದಲ್ಲಿ ನೆಲೆನಿಲ್ಲಿಸುವದು ಅಲ್ಲಿ ಲಕ್ಷ್ಯ. ಆದರೆ, ಶಾಂಕರವೇದಾಂತ ಪ್ರತಿಪಾದನೆಗೆ ಅಗತ್ಯವಾದ ಅಂತಹ ಕನ್ನಡ ಶಬ್ದಗಳು ಕನ್ನಡದ್ದೇ ಎನ್ನುವಂತಹುದು ಎಷ್ಟು ಪ್ರಮಾಣದಲ್ಲಿದ್ದವು ? ಪಂಪ-ರನ್ನರಂತಹ ಸಮರ್ಥ ಪ್ರತಿಭಾನ್ವಿತರು ತಮ್ಮ ಪಂಡಿತಶ್ರೋತೃವರ್ಗವನ್ನು ಗಮನಿಸಿ ಸುಲಭವಾಗಿ ಈ ಸಮಸ್ಯೆಯನ್ನು ಬಗೆಹರಿಸಿಕೊಂಡುಬಿಟ್ಟರು. 'ವ್ಯಾಸ ಮುನೀಂದ್ರ ರುದ್ರ ವಚನಾಮೃತ ವಾರಿಧಿಯನೀಸುವೆನ್' ಎಂಬ ಪಂಪನ

ವಾಕ್ಯ ಮಾಣಿಕ್ಯ ಕೋಶದಲ್ಲಿ (!) ಈ ಸುವೆನ್ ಎಂಬ ಕನ್ನಡ ಕ್ರಿಯಾಪದವನ್ನುಳಿದು ಉಳಿದೆಲ್ಲ ಶಬ್ದಗಳೂ ಸಂಸ್ಕೃತವೇ ಅಲ್ಲವೇ ? ಹೊಸ ಪಾರಿಭಾಷಿಕ ಶಬ್ದಗಳಿಗೆ ಅವರು ತೊಡಗಲಿಲ್ಲ. ನಿಜವಾಗಿ ಅಂತಹ ಸಾಹಸಕಾರ್ಯಕ್ಕೆ ಕೈಹಾಕಿ ಕೃತಾರ್ಥರಾದವರು ಹನ್ನೆರಡನೆಯ ಶತಮಾನದ ವಚನಕಾರರು. ಅವರು ಸಂಸ್ಕೃತ ಮೂಲದ ಶಬ್ದಗಳ - ಕಾಯಕ, ಲಿಂಗ, ಸ್ಥಾವರ, ಜಂಗಮ, ಶೂನ್ಯ - ಅರ್ಥ ವ್ಯಾಪ್ತಿಯನ್ನು ಹಿಗ್ಗಿಸಿದರು. ಬಹುಮಟ್ಟಿಗೆ, ಸೋಣಗ, ಬಸವ, ಏಕೋಭಾವ, ಕಮ್ಮಟ ಮುಂತಾದ ತದ್ಭವಗಳನ್ನೇ ಪ್ರಯೋಗಿಸಿದರು.

ಶ್ರೀಶ್ರೀಗಳು ಕೆಲವು ನೂತನ ಶಬ್ದಸೃಷ್ಟಿ ಹಾಗೂ ಸಾರ್ಥಕ ಬಳಕೆಯನ್ನು ಗಮನಾರ್ಹವಾಗಿ ತಂದರು :

1) "ಸುಷುಪ್ತಿ" ಎಂಬ ಶಬ್ದ ಯಾವ ಅಧ್ಯಾತ್ಮವಿದ್ಯಾರ್ಥಿಗೆ ತಿಳಿಯದು ? ಸಂಸ್ಕೃತಶಬ್ದ-ಕುಂಭಕರ್ಣಗೋತ್ರದ ಕನ್ನಡಿಗರಿಗಂತೂ ತುಂಬ ಪ್ರಿಯವಾದದ್ದೇ. ಅವಸ್ಥಾತ್ರತಯಪ್ರಕ್ರಿಯೆಯ ವಿವರಣೆ ಇಲ್ಲದೆ ಶ್ರೀ ಶಾಂಕರತತ್ತ್ವ ಪ್ರತಿಪಾದನೆ ಪೂರ್ಣವಾಗುತ್ತದೆಯೆ ? ಅದು ಮಾಂಡೂಕ್ಯ ಉಪನಿಷತ್ತಿನ ಹೃದಯವೇ ಸರಿ. ಜಾಗ್ರತ್- ಸ್ವಪ್ನ-ಸುಷುಪ್ತಿ ಎಂಬ ಶಬ್ದಗಳನ್ನು ಹಾಗೆಹಾಗೆಯೇ ವೇದಾಂತೋಪನ್ಯಾಸ ಕಾರರು ಬಳಸಿಬಿಡುತ್ತಾರೆ. ತೀರ ಅನಿವಾರ್ಯವಾದಾಗ ಎಚ್ಚರ-ಕನಸು-ಗಾಢನಿದ್ರೆಗಳು ನುಸುಳುವು ದುಂಟು ! ಆದರೆ ಶ್ರೀಶ್ರೀಗಳು "ಸುಷುಪ್ತಿ" ಶಬ್ದಕ್ಕೆ ಸಂವಾದಿಯಾಗಿ ಬಳಸುವ ಶಬ್ದ "ತನಿನಿದ್ರೆ" ಎಂದು. ಗಾಢ-ಆಳವಾದ-ಅತಿಯವಾದ-ದಟ್ಟವಾದ, ಒತ್ತಾದ ಎಂಬ ಪರ್ಯಾಯಶಬ್ದ-ಅರ್ಥವನ್ನು ಉಳ್ಳದ್ದು ಸಂಸ್ಕೃತದ "ಸುಷುಪ್ತಿ". ಆದರೆ ಈ ಎಲ್ಲ ಅರ್ಥಗಳನ್ನೂ ಒಳಗೊಂಡು ಅದನ್ನೂ ಮೀರುವ "ತನಿ" ಎಂಬ ಶಬ್ದ ಕನ್ನಡದಲ್ಲಿ ಉಂಟಲ್ಲವೆ ? ಅಪ್ಪಟ ಕನ್ನಡಶಬ್ದ, ಮುದ್ದಾದ ಶಬ್ದ, ನಾಮಪದವಾಗಿ ತನಿ ಎಂಬುದರ ಅರ್ಥವಲಯವನ್ನು ಗಮನಿಸಿ : ಏಕಾಂತ, ತೃಪ್ತಿ, ಪಕ್ವತೆ, ಹಿತ, ಸವಿ, ನಿರ್ಮಲ, ಶುದ್ಧ, ತಂಪು, ಪ್ರತ್ಯೇಕ ! ನಿದ್ರೆಗೆ ಗುಣವಾಚಕವಾಗಿ ಬಳಸಿದಾಗ, ಅದರ ಅರ್ಥವಲಯವನ್ನೂ ಸಾರ್ಥಕತೆಯನ್ನೂ ಗಮನಿಸಿ. ಅದು ಜೀವದ ದ್ವಂದ್ವರಹಿತ ಸ್ತರ. ಅದು ನಿರ್ಮಲ. ಅದು ತಂಪು. ಅದು ಸವಿ. ಅಲ್ಲಿ ಯಾವ ಗೊಂದಲ, ಸಂಘರ್ಷ, ಅತೃಪ್ತಿಯೂ ಇಲ್ಲ, ಎಚ್ಚರ-ಕನಸುಗಳ ದೊಂಬರಾಟವಿಲ್ಲ, ಆ ನಿರ್ಮಲ ತೃಪ್ತಿಯ ನೆನಹುತಾನೆ ಎಚ್ಚರದಲ್ಲಿ ಚಪ್ಪರಿಸುವಂತಹುದು ? ನಿಜವಾಗಿ ಅದು ಚಪ್ಪರಿ ಸುವ ಸ್ಮರಣೆಯೇ ! ಮಾತಿಗೆ ಮೀರಿದ ಮೌನದ ಆಹ್ವಾನ. ಆಹಾ ! ಎಂತಹ ನಿದ್ರೆ ? ಎಂತಹ, ಎಂದರೆ ಹೇಳಲಾಗದು. ಆ-ಊ-ಹಾऽऽಉ, ಎಂಬ ನಾಮದ ಉದ್ಗಾರ ಅದು ! ನಮ್ಮ ನಾಗರಪಂಚಮಿಯಂದು ಪ್ರೀತಿಯ ತಮ್ಮನ ಬೆನ್ನಿಗೆ ಅಕ್ಕ ಎರೆವ ಬೆನ್ನಿನ

"ತನಿ" ನಿಮಗೆ ನೆನಪಿದ್ದರೆ ನನ್ನ ಮಾತು ಅದರ ಅರ್ಥ ವಿಸ್ತಾರ ನಿಮಗೆ ಆದೀತು. ವಾತ್ಸಲ್ಯಧಾರೆ ಅಲ್ಲಿ ದಬದಬ ಧುಮುಕುವದಿಲ್ಲ, ಹನಿಹನಿಯಾಗಿ ತೊಟ್ಟಿಕ್ಕುತ್ತದೆ. ಅಕ್ಕನ ಅಕ್ಕರೆಯೇ ಅಮೃತದ ಸಿಂಚನವೋ ಎನಿಸಿಬಿಡುತ್ತದೆ. ಆಕೆಯ ಕಣ್ಣ ಕಂಬನಿ ಯಾಗಿ ಸುಡುವ ಬಿಸಿಯಾಗದೆ ತಂಪಾಗಿಬಿಡುತ್ತದೆ. ಎಚ್ಚರವೂ ಅಲ್ಲದ, ನಿದ್ದೆಗೂ ಸಲ್ಲದ ನಿರ್ಮಲ ಆನಂದ, ತೃಪ್ತಿ, ತಣ್ಪು, ಈ ಕನ್ನಡದ "ತನಿ". ನಮ್ಮ ಸ್ವಾಮಿಗಳು ಎಷ್ಟು ಸವಿಯಾದ ಮುದ್ದು ಕನ್ನಡಶಬ್ದವನ್ನು ಪಾರಿಭಾಷಿಕವಾಗಿ ಮಾಡಿಬಿಟ್ಟರು !

2) "ಅನೇಕ ಚಂದ್ರದರ್ಶಿ" ಎಂಬ ಸಮಾಸ ಉಂಟಷ್ಟೆ, ಅಧ್ಯಾತ್ಮ ಪರಿಭಾಷೆ ಯಲ್ಲಿ. ಗೀತಾಭಾಷ್ಯ (829)ದಲ್ಲಿ ಭಗವತ್ಪಾದರು ಬಳಸಿದ ಶಬ್ದ "ತಿಮಿರದೃಷ್ಟಿ". ಕನ್ನಡದಲ್ಲಿ ಅದನ್ನು ಕತ್ತಲನೋಟ ಎನ್ನೋಣವೆ ? ಶ್ರೀಶ್ರೀಗಳು ಬಳಸುವ ಸಾರ್ಥಕಶಬ್ದ - "ಪರೆಗಣ್ಣಿನವ". ಕತ್ತಲ ದೃಷ್ಟಿಯಲ್ಲಿ ಏನೋ ಕಾಣುತ್ತದೆ, ಏನೇನೋ ಕಾಣುತ್ತದೆ ಅಥವಾ ಕಾಣದು. ಆದರೆ ಪರೆ ಬಂದವನಿಗೆ ಒಂದಕ್ಕೆ ಎರಡಾಗಿ, ಕಾಣುತ್ತದೆ. ಚಂದ್ರ, ದೀಪ, ದಾರಿ, ಎಲ್ಲವೂ ಪರೆ ಎಂದರೆ ಚದರು, ಕೆದರು, ಅಸ್ತವ್ಯಸ್ತ, ಕದಡು, ದಿಕ್ಕಾಪಾಲಾಗು, ಎಂಬುದು ಅರ್ಥವಲಯ. ಇಂತಹ ಸಾರ್ಥಕ ಪದಬಳಕೆ ನಮ್ಮ ಸ್ವಾಮಿಗಳದ್ದು, "ಮಿಥ್ಯಾಜ್ಞಾನ"ದ ಈ ವಿವರಣೆಗೆ !

3) ಅವ್ಯಯ ಎಂದರೆ ನಾಶವಾಗದ್ದು ಎಂದರೆ ಸಾಕು. ಆದರೆ ನಮ್ಮ ಸ್ವಾಮಿಗಳು ಸೊರಗದ ಆತ್ಮ ಎನ್ನುತ್ತಾರೆ (ಗೀ. ಭಾ. 545).

4) ಇತರೇತರಾಧ್ಯಾಸ : ಎಂದರೆ ಒಂದರಲ್ಲಿ ಮತ್ತೊಂದನ್ನು ಕಲ್ಪಿಸುವದು. ಸ್ವಾಮಿಗಳು ಅಪ್ಪಟ ಕನ್ನಡಶಬ್ದ ಬಳಸುತ್ತಾರೆ. "ಹುಟ್ಟುಗಟ್ಟುವದು".

5) ಇಂದ್ರಜಾಲ ಎಂಬುದಕ್ಕೆ "ಕಣ್ಣುಕಟ್ಟು", ಮಾಯಾಜಾಲವಲ್ಲ.

6) ಊಷರ ದೇಶ, ಚೌಳುನೆಲ - ಅಪ್ಪಟ ಗ್ರಾಮೀಣ ಶಬ್ದ

7) ನಾಗಾರ - ಎಂದರೆ ಮನೆಯಿಲ್ಲದವನು. ಅನಿಕೇತನ. ಅಂಥವನು ಭಗವಂತನಿಗೆ ಪ್ರಿಯನಂತೆ ... ಸಮೇ ಪ್ರಿಯಃ ! ಎಲಾ ಇದೇನು ಈ ಶಬ್ದದ ಅರ್ಥ ? (ಭ.ಗೀ.ಅ. 12-19). ಸ್ವಾಮಿಗಳ ವಿವರಣೆ ಎಷ್ಟು ಚೆನ್ನಾಗಿದೆ ನೋಡಿ. ನಾಗಾರ ಎಂದರೆ ಮನೆಯಿಲ್ಲದವನು ಅಲ್ಲ, ಮನೆಯಲ್ಲೇ ಇದ್ದರೂ ಅದರ ಆಸಕ್ತಿಯನ್ನು ತೊರೆದವನು ! ಈ ವಿವರಣೆ ಭಗವಂತನ ಮಾತಿನ ಅರ್ಥವನ್ನು ಹೇಗೆ ಧಿಗ್ಗನೆ ಬೆಳಗಿಬಿಡುತ್ತದೆ !

8) ನಾನು ಎಂಬ "ಅಹಂ", ಏಳುತ್ತದೆ ಅಲ್ಲ, "ಎದ್ದುಕೊಳ್ಳುತ್ತದೆ". ಈ ವಾಕ್ಯದಲ್ಲಿ ಕಡೆಯ ಕ್ರಿಯಾರೂಪದ ಸಮರ್ಥಸಾರ್ಥಕತೆಯನ್ನು ಗಮನಿಸಬಹುದು.

ಶ್ರೀಶ್ರೀಗಳು ಕನ್ನಡದ ಶಬ್ದ ಸೃಷ್ಟಿ, ಅರ್ಥವ್ಯಾಪಕತೆ, ಖಚಿತತೆ ಮಾತ್ರವಲ್ಲದೆ ಪ್ರಯೋಗದ ಸೊಗಸುಗಾರಿಕೆಯನ್ನು ತೋರುವ ಎಚ್ಚರ ಬೆರಗುಗೊಳಿಸುವಂತಹುದು.

ಪ್ರತಿಯೊಂದು ಭಾಷೆಗೂ ತನ್ನದೇ ಆದ ಜಾಯಮಾನ ಬಂದಿರುತ್ತದೆ. ಅದು ಆಯಾ ಭಾಷೆಯ ವಾಕ್ಯರಚನೆಯಲ್ಲಿ, ವ್ಯವಹಾರದಲ್ಲಿ ಬಳಸುವ ಮಾತಿನಲ್ಲಿ ಹಾಗೂ ವ್ಯಾಕರಣದಲ್ಲಿ ಸ್ಪಷ್ಟವಾಗಿ ಗುರುತಿಸುವಂತಿರುತ್ತದೆ. ಉದಾಹರಣೆಗೆ ಕರ್ಮಣೀ ಪ್ರಯೋಗ ಸಂಸ್ಕೃತದಲ್ಲಿ ತುಂಬ ಸಹಜ. ಕನ್ನಡದಲ್ಲಿ ಕೇವಲ ಅಲಂಕಾರಿಕ ಹಾಗೂ ಅಸಹಜ. "ರಾಮನಿಂದ ಹೇಳಲ್ಪಟ್ಟಿತು. ನನ್ನಿಂದ ನೋಡಲ್ಪಡುತ್ತದೆ" - ಇಂತಹ ವಾಕ್ಯಗಳಿಗಿಂತ "ರಾಮನು ಹೇಳಿದನು, ನಾನು ನೋಡುತ್ತೇನೆ" ಎಂಬಂತಹ ಸರಳ ಪ್ರಯೋಗಗಳೇ ಹೆಚ್ಚು ಸಹಜ. ಶಬ್ದಪ್ರಯೋಗದಲ್ಲಂತೂ ಒಂದು ಭಾಷೆಯಲ್ಲಿಯೇ ಪ್ರಾದೇಶಿಕ ವ್ಯತ್ಯಾಸಗಳಿವೆ. ಅದಕ, ಇದಕ, ಎದಕ ಎಂಬುದು ಧಾರವಾಡಕನ್ನಡ. ಅದಕ್ಕೆ, ಇದಕ್ಕೆ ಎಂಬುದು ಮೈಸೂರು ಕನ್ನಡ. ಎದಕ ಎಂಬುದು ಮೈಸೂರು ಪ್ರಾಂತ್ಯದಲ್ಲಿಲ್ಲ. ಒಂದು ಭಾಷೆಯ ಚೌಕಟ್ಟಿನಲ್ಲೇ ಇಂತಹ ವಿಭಿನ್ನತೆಗಳಿರುವಾಗ, ಇಂಡೋ ಆರ‍್ಯನ್ ಮೂಲದ, ದ್ರಾವಿಡ ಮೂಲವಲ್ಲದ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಮಾಡುವುದು ತುಂಬ ಸುಲಭವೇನಲ್ಲ.

ಈ ಅಂಶಗಳನ್ನು ಗಮನಿಸಿದಾಗ ಶ್ರೀಶ್ರೀಗಳ ಅನುವಾದದ, ಅಲ್ಲಿ ಅವರ ಭಾಷಾಪ್ರಯೋಗದ ಸೌಂದರ್ಯ ಹಾಗೂ ಸಾರ್ಥಕತೆ ಎದ್ದುಕಾಣುತ್ತದೆ. ಮೂಲದ ವಾಕ್ಯಗಳಿರಲಿ, ಪದಗಳನ್ನೂ ಒಂದಕ್ಷರದ ಪ್ರತ್ಯಯ, ಅವ್ಯಯಗಳನ್ನೂ ಸಹ ಅವರು ಬಿಡುವವರಲ್ಲ. ಕೇವಲ ತಾತ್ಪರ್ಯಗಳನ್ನು ನೀಡಿ ಹಾರಿಸುವವರಲ್ಲ. ಈ ಸಂದರ್ಭದಲ್ಲಿ ಮೂಲದ ಭಾಷೆಯ ಎತ್ತರಕ್ಕೇ ಅನುವಾದಿತ ಭಾಷೆಯನ್ನು ಎತ್ತಿಬಿಡುತ್ತಾರೆ. ಮೂಲದ ಖಚಿತತೆಯನ್ನೂ ಅನುವಾದಿತಭಾಷೆಯ ಚೆಲುವು, ಅರ್ಥವಂತಿಕೆ, ಜಾಯಮಾನ ವನ್ನು ಮನಗಾಣಿಸುತ್ತಾರೆ. ಒಂದೆರಡು ಉದಾಹರಣೆಗಳನ್ನು ನೋಡಬಹುದು.

| ಮೂಲ (ಕೇನ-ಭಾಷ್ಯ) | ಅನುವಾದ:- |
|---|---|
| 1) ಪ್ರಾಗೇತಸ್ಮಾತ್ ಕರ್ಮಾಣಿ ಅಶೇಷತಃ ಪರಿಸಮಾಪಿತಾನಿ। (ಭಾಷ್ಯ-1) | ಇದಕ್ಕಿಂತ ಮುಂಚೆ ಕರ್ಮಗಳನ್ನೆಲ್ಲವನ್ನೂ ತಿಳಿಸಿ ಮುಗಿಸಿದ್ದಾಗಿದೆ. |
| 2) ಭಿದ್ಯತೇ ಹೃದಯಗ್ರಂಥಿಃ ಛಿದ್ಯನ್ತೇ ಸರ್ವಸಂಶಯಾಃ। (ಭಾಷ್ಯ-4) | ಹೃದಯದ ಗಂಟು ಬಿಚ್ಚಿಕೊಳ್ಳುವುದು, ಸಂಶಯಗಳೆಲ್ಲ ಕತ್ತರಿಸಿ ಹೋಗುವವು. |

| | |
|---|---|
| 3) ಇಷಿತಮ್ ಇತಿ ಇಟ್ಪ್ರಯೋಗಸ್ತು ಛಾಂದಸಃ (ಭಾಷ್ಯ-10) | ಇಷಿತಮ್ ಎಂದು (ಮೂಲದಲ್ಲಿ) ಇಕಾರ ಸಹಿತವಾಗಿ (ಮಾಡಿರುವ ಪ್ರಯೋಗವೋ-ಎಂದರೆ (ಅದು) ವೈದಿಕವು. |
| 4) ಉಚ್ಯತೇ। (ಕಠ. ಭಾಷ್ಯ-2) | (ಉತ್ತರ) ಹೇಳುತ್ತೇವೆ (ಕೇಳಿರಿ) |
| 5) ಇತ್ಯತಸ್ತಾ ಯಥಾಪ್ರತಿಭಾನಂ ವ್ಯಾಚಕ್ಷ್ಮಹೇ। | ಆದ್ದರಿಂದ ಇವುಗಳನ್ನು ತಿಳಿದಮಟ್ಟಿಗೆ ವ್ಯಾಖ್ಯಾನ ಮಾಡುತ್ತೇವೆ. |
| 6) ಪೀತಮ್ ಉದಕಂ ಯಾಭಿಸ್ತಾಃ ಪೀತೋದಕಾಃ | ನೀರನ್ನು ಕುಡಿದದ್ದು ಆಗಲೆ ಆಗಿಬಿಟ್ಟಿದೆ. ಅಂಥವು ಪೀತೋದಕಾಃ (ಎನಿಸುವುವು). |
| 7) ಜಗ್ಧಂ ಭಕ್ಷಿತಂ ತೃಣಂ ಯಾಭಿಸ್ತಾಃ ಜಗ್ಧತೃಣಾಃ। ದುಗ್ಧೋ ದೋಹಃ ಕ್ಷೀರೋಽಖ್ಯೋ ಯಾಸಾಂತಾಃ ನಿರಿಂದ್ರಿಯಾಃ ಪ್ರಜನನಾಸಮರ್ಥಾಃ ಜೀರ್ಣಾಃ ನಿಷ್ಫಲಾ ಗಾವ ಇತ್ಯರ್ಥಃ।। (ಕ. ಭಾ.-9) ಯೇತೇ ಲೋಕಾಃ ತಾನ್ ಸಃ ಯಜಮಾನಃ ಗಚ್ಛತಿಃ | ಹುಲ್ಲನ್ನು ತಿಂದದ್ದು ಮೇದದ್ದು ಆಗಲೆ ಆಗಿಬಿಟ್ಟಿದೆ. ಅಂಥವು ಜಗ್ಧತೃಣಾಃ। ಹಾಲೆಂಬ ಕರೆಯುವ (ವಸ್ತುವನ್ನು) ಆಗಲೆ ಕರೆದದ್ದು ಆಗಿಬಿಟ್ಟಿದೆ. ಅಂಥವು ದುಗ್ಧದೋಹಾಃ । ನಿರಿನ್ದ್ರಿಯಾಃ ಎಂದರೆ ಕರು ಹಾಕಲಾರದೆ ಮುದಿಯಾಗಿರುವವು. ಬರಡಾಗಿರುವ ಆಕಳುಗಳು ಎಂದರ್ಥ, ಈ ಹೆಸರಿನ ಲೋಕಗಳಿವೆಯಲ್ಲ, ಅವುಗಳನ್ನು ಆ ಯಜಮಾನನು ಪಡೆಯುವನು. |

ಅನುವಾದದಲ್ಲಿ ಬಳಸಿದ - ತಿಳಿದಮಟ್ಟಿಗೆ, ಮೇದದ್ದು, ಮುದಿ, ಬರಡು, ಆಕಳು ಎಂಬ ಅಪ್ಪಟ ದೇಸಿ ಶಬ್ದಗಳನ್ನೂ "ಲೋಕಗಳಿವೆಯಲ್ಲ" ಎಂಬ ಕನ್ನಡ ಭಾಷೆಯ ಪ್ರಯೋಗವನ್ನೂ ಮುಖ್ಯವಾಗಿ ಗಮನಿಸಬೇಕು. ಅಲ್ಲದೆ ಪೀತೋದಕಾಃ, ಜಗ್ಧತೃಣಾಃ, ದುಗ್ಧದೋಹಾಃ, ನಿರಿಂದ್ರಿಯಾಃ ಎಂಬ ಸಂಸ್ಕೃತಭಾಷೆಯ ಬಹುಮಟ್ಟಿನ ಪಾರಿಭಾಷಿಕ ಶಬ್ದಗಳನ್ನು ಕನ್ನಡದಲ್ಲಿಯೂ ಉಳಿಸಿ, ಬಳಸಿಕೊಳ್ಳಬೇಕು ಎಂಬ ಅನುವಾದಕರ ಹಂಬಲವನ್ನೂ ಮೆಚ್ಚಲೇಬೇಕು! ಹಾಗೆ ಮಾಡುವಲ್ಲಿ ವಸ್ತುತಃ ಅವರು ಕನ್ನಡ ಭಾಷೆಗೇ ಹೊಸಮೆರಗು-ಕಾಂತಿಯನ್ನು ತಂದಿತ್ತರು. ಕನ್ನಡ ಭಾಷೆಯಲ್ಲಿ ಸಶಕ್ತ ಹಾಗೂ ಅರ್ಥಪೂರ್ಣ ಅಭಿವ್ಯಕ್ತಿಯನ್ನು ಸಾಧಿಸಿತೋರಿಸಿದರು.

ಭಾಷಾ ಪ್ರಯೋಗದಲ್ಲಿ ಅನುವಾದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯ, ಸ್ವಂತಿಕೆಗೆ ಇಲ್ಲಿ ಎಡೆಯುಂಟು. ಒಂದೆರಡು ಉದಾಹರಣೆಗಳನ್ನು ಗಮನಿಸಿದರೂ ಸಾಕು, ಶ್ರೀಗಳ ಕನ್ನಡಭಾಷೆಯ ಮುದ್ದುಗಾರಿಕೆ, ಸರಳತೆ, ಖಚಿತತೆ ಅರಿವಿಗೆ ಬರುತ್ತದೆ: "ನಾನೆಂಬ"

ಅಭಿಮಾನವು ಶರೀರ, ಪ್ರಾಣ, ಮನಸ್ಸು, ಬುದ್ಧಿ, ಹೆಂಡಿರುಮಕ್ಕಳು - ಮುಂತಾದವುಗಳಲ್ಲೆಲ್ಲ ಒಂದೊಂದು ಸಲಕ್ಕೆ ಒಂದೊಂದರಲ್ಲಿ ಕುಳಿತಿರುತ್ತದೆ. ಆದರೂ "ನಾನು" ಎಂಬುದು ಸ್ವತಂತ್ರವಾದ ಒಂದು ತತ್ತ್ವವೆಂದೇ ಬಗೆಯುತ್ತಿರುವೆವು - ಇದೆಂಥ "ಮಾಯೆ" (ಪುಟ 23 (77))

"ನಾನು" ಎಂಬುದು ಎದ್ದುಕೊಂಡಾಗ ಇದು ಇವನು ಅವನು ಅವರು ಮಿಕ್ಕವರು - ಎಂಬುದು ತೋರದೆ ಇರುವದಿಲ್ಲ, ಆಗ ನನಗೆ ಇವರು ಗೆಳೆಯರು, ಇವರು ಹಗೆಗಳು, ಇವರು ಉದಾಸೀನರು ; ಇದು ನನಗೆ ಬೇಕಾದದ್ದು, ಇದು ನನಗೆ ಬೇಡವಾದದ್ದು ಇದು ಉದಾಸೀನವಾಗಿರುವದಕ್ಕೆ ತಕ್ಕದ್ದು - ಎಂಬ ಭಾವಗಳು ಅವಶ್ಯವಾಗಿ ಎದ್ದುಕೊಳ್ಳುವವು. ರಾಗದ್ವೇಷ ಮೋಹಾದಿಗಳಿಗೆ "ನಾನು" ಎಂಬುದೇ ತಾಯಿಬೇರೆಂಬುದಕ್ಕೆ ಇದೇ ಕಾರಣ.

ಎಲೆಯಲ್ಲಿ ಬಡಿಸಿರುವ ಅನ್ನವು ಎಲೆಯ ಮೇಲಿರುವವರೆಗೆ ಅನಾತ್ಮವು. ಅದು ನಮ್ಮ ಶರೀರಕ್ಕೆ ಸಂಬಂಧಿಸಿದ್ದಲ್ಲ, ನಮಗಿಂತ ಬೇರೆಯಾದ ಪದಾರ್ಥ. ಆದರೆ ಅದನ್ನು ಉಂಡ ಬಳಿಕ ಅದನ್ನು ಸೇರಿಸಿಕೊಂಡು 'ನಾನು' ಎಂದು ವ್ಯವಹರಿಸುವೆವು.

"ಶರೀರದಲ್ಲಿ ಜನರಿಗೆ 'ಅದೇ ನಾನು' ಎಂಬ ಒಂದು ವಿಲಕ್ಷಣಮೋಹವು ಇರುತ್ತದೆ. ಆದರೆ ಅದೇ ಶರೀರದಲ್ಲಿ ಯಾವದಾದರೊಂದು ಭಾಗವು ವಿಂಗಡಿಸಿಕೊಂಡು ಹೊರಬಂದರೆ ಅದನ್ನು ತಾವೆಂದು ಎನಿಸಿ ಎಣಿಸುವದಿಲ್ಲ, ಶರೀರದ ಮಾಂಸ, ರಕ್ತ, ಬೆವರು, ಕೂದಲು, ಉಗುರು, ಕಣ್ಣುಪಿಸುರು, ಕಿವಿಯ ಕುಗ್ಗಿ, ಮೂಗಿನ ಸಿಂಬಳ ಮುಂತಾದವು ನಮ್ಮ ಶರೀರದಿಂದ ಹೊರಕ್ಕೆ ಬಂದಮೇಲೆ ಅವುಗಳಲ್ಲಿ ಅಸಹ್ಯವಾದ ಹೇಸಿಕೆಯ ಬುದ್ಧಿ ಉಂಟಾಗುತ್ತದೆ. ಆದರೆ ಅವೇ ಶರೀರದೊಳಗೆ ಇರುವವರೆಗೆ ಒಟ್ಟು ಶರೀರದಲ್ಲಿ ನಾನು - ಎಂಬ ಬುದ್ಧಿಯಿರುತ್ತದೆ. ಇದೆಂತಹ ಮೋಹವು" ! (ಪುಟ 22 (66)) ಎಂತಹ ಆದರ್ಶ ಗದ್ಯ ಇದು ! ಎಷ್ಟು ಮೋಹಕವಾದ ಗದ್ಯ ಇದು !

ಅರಿವು, ಇರವು, ಹುಟ್ಟುಗಟ್ಟು, ಎದ್ದುಕೊಳ್ಳುವದು, ಝುಳಕು, ಕೋರಡೆಯ ಪೆಟ್ಟು, ಸುತ್ತುವಳೆ, ತನಿನಿದ್ರೆ, ಸೀಳುಹಾದಿ, ವೇದನ (ಮನೋಭಾವ) ಕಣ್ಣುಕಟ್ಟಿನ ಗಿಡ, ಹೊರಚ್ಚು, ಇಂತಹ ಅದೆಷ್ಟು ಸಾರ್ಥಕವೂ ಸುಂದರವೂ ಆದ ತಿರುಳ್ಗನ್ನಡ ಶಬ್ದ ಪ್ರಯೋಗಗಳು ಕನ್ನಡಭಾಷೆಯ ಸತ್ವ ಹಾಗೂ ಚೆಲುವನ್ನು ಮೆರೆಯುವುದಿಲ್ಲವೆ ?

1) ಹಸು ಗಬ್ಬವಾಗಿ ಕರು ಹಾಕುವದಕ್ಕೆ ಇಂತಿಷ್ಟು ತಿಂಗಳು ಬೇಕೆಂಬ ನಿಯಮವುಂಟು ಆದರೆ ಕನಸಿನಲ್ಲಿ ಹೀಗಿರುವದಿಲ್ಲ, ಒಂದು ಹಸು ನಮ್ಮ ಕಣ್ಣ

ಮುಂದೆಯೇ ಗಬ್ಬವಾಗಿ ಐದಾರು ನಿಮಿಷಗಳಲ್ಲಿ ಕರುವನ್ನೂ ಹಾಕಿದಂತೆ ತೋರಬಹುದಾಗಿದೆ.

2) ಮಾವಿನ ಹೀಚು ಕಾಯಾಗಿ ಕೊನೆಗೆ ಹಣ್ಣಾಗುವುದಷ್ಟೆ? ಇಲ್ಲಿ ಹೀಚು ಸಣ್ಣಗಿರುವದು. ಕಾಯಿ ದಪ್ಪನಾಗಿರುವದು, ಹಣ್ಣು ದಪ್ಪನಾಗಿದ್ದು, ಒತ್ತಿ, ಮತ್ತೆ ಸಣ್ಣದಾಗುವದು (ಗಾತ್ರ) ಹೀಚಾದಾಗ ನಾಲಗೆಗೆ ಒಗರಾಗಿದ್ದು, ಕಾಯಾದಾಗ ಹುಳಿಯಾಗಿ, ಹಣ್ಣಾದಾಗ ಸಿಹಿ ತೋರುವದು (ಸವಿ). ಇದೇ ರೀತಿ ಬಣ್ಣದಲ್ಲಿಯೂ, ವಾಸನೆಯಲ್ಲಿಯೂ, ಸ್ಪರ್ಶ ದಲ್ಲಿಯೂ ಹೀಚುಕಾಯಿ ಹಣ್ಣುಗಳಲ್ಲಿ ಬೇರೆ ಬೇರೆ ಧರ್ಮಗಳು ತೋರಿಬರುವವಲ್ಲವೆ ? (ಅವಸ್ಥಾಪ್ರಕ್ರಿಯೆಯ ರೂಪರೇಖೆ) (ಆದರೆ) ನಾವು ಎಚ್ಚರವನ್ನೂ ಕನಸನ್ನೂ ಪಡೆಯು ವಾಗ ಹೀಚು ಕಾಯಾದಂತೆ, ಕಾಯಿ ಹಣ್ಣಾದಂತೆ, ಯಾವ ಮಾರ್ಪಾಡೂ ಆಗುವದಿಲ್ಲ, ನೋಡಿ, ಎಷ್ಟು ಸರಳವಾದ ದೃಷ್ಟಾಂತವಾಕ್ಯಗಳು, ಬದುಕಿನಿಂದ ನೇರವಾಗಿ ಎತ್ತಿತೆಗೆದ ಉದಾಹರಣೆಗಳು ! ವೇದಾಂತಗ್ರಂಥ ಕ್ಲಿಷ್ಟ - ಎನ್ನುವವರಾರು !!

ಸತ್ಯನಿಷ್ಠೆ, ನೇರನುಡಿ, ಉದಾರಮನಸ್ಸು, ಪ್ರಖರಚಿಂತನೆ, ಸರಳ ಅಭಿವ್ಯಕ್ತಿ ಶ್ರೀಶ್ರೀ ಸಚ್ಚಿದಾನಂದೇಂದ್ರಮಹಾಸ್ವಾಮಿಗಳವರದ್ದು.

ಕಾಂಚೀಪರಮಾಚಾರ್ಯರು ಅಧ್ಯಾತ್ಮ ಜಗತ್ತಿನ ಧ್ರುವತಾರೆ ಎಂದು ಸರ್ವವಿದಿತ. ಅಂತಹ ಜ್ಞಾನನಿಧಿಗಳು ನಮ್ಮ ಸ್ವಾಮಿಗಳನ್ನು ಎಷ್ಟು ಸರಿಯಾಗಿ ಗುರುತಿಸಿದ್ದಾರೆ ಎಂಬುದನ್ನು ನೆನೆದರೆ ರೋಮಾಂಚನ ಉಂಟಾಗುತ್ತದೆ. ವೇದಾಂತ ವಾಕ್ಯಗಳನ್ನು ಬಾಯಿಪಾಠ ಮಾಡುತ್ತೇವೆ. ವ್ಯಾಖ್ಯಾನ ಮಾಡುತ್ತೇವೆ. ಆದರೆ ಅಂಥ ವಾಕ್ಯವೇ ಮೂರ್ತಿವೆತ್ತು ಕಣ್ಣೆದುರು ನಿಂತಾಗ ನಮ್ಮ ಅಲ್ಪಮತಿಯಿಂದ ಕಣ್ಣಿದ್ದೂ ಕುರುಡರಾಗುತ್ತೇವೆ. ಇದು ಎಂಥ ವಿಷಾದದ ಸಂಗತಿ ! ಶ್ರೀರಾಮಕೃಷ್ಣ ಪರಮಹಂಸರ ಜೀವನ್ಮುಕ್ತಸ್ಥಿತಿಯನ್ನು ಪಂಡಿತ ಮಂಡಲಿಗೆ ವಿವರಿಸಿ ಹೇಳಲು ಭೈರವೀ ಬ್ರಾಹ್ಮಣಿಯೇ ಬರಬೇಕಾಯಿತು. ಭಗವಾನ್ ಶ್ರೀರಮಣ ಮಹರ್ಷಿಗಳನ್ನು ಜಗತ್ತಿಗೆ ಪರಿಚಯಿಸಲು ಕಾವ್ಯಕಂಠಗಣಪತಿಗಳು ಅರುಣಾಚಲದ ಬೆಟ್ಟವನ್ನೇರಿ ಬರಬೇಕಾಯಿತು. ನಮಗೆ ಇಷ್ಟು ಸಮೀಪಸ್ಥರಾಗಿದ್ದ ಶ್ರೀ ಸಚ್ಚಿದಾನಂದೇಂದ್ರರು ಏರಿದ ಎತ್ತರವನ್ನು ಪರಿಚಯಿಸಲು ಬಹುದೂರದ ತಮಿಳುನಾಡಿನ ಪರಮಾಚಾರ್ಯರು ಕೃಪೆ ಮಾಡಬೇಕಾಯಿತು. ನಿಜ, ಮಹಿಮೆಯು ಮಾತ್ರ ಮಹಿಮೆಯನ್ನು ಗುರುತಿಸಬಲ್ಲದು.

★★★★

# ವೇದಾಂತ ವಿಜ್ಞಾನ ಸುನಿಶ್ಚಿತಾರ್ಥರು

ವಿದ್ವಾನ್ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು, ಹೊಳೆನರಸೀಪುರ

''ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ''– ಎಂಬ ವಾಕ್ಯವೊಂದು ತೈತ್ತಿರೀಯಮಹಾನಾರಾಯಣೋಪನಿಷತ್ತಿನಲ್ಲಿಯೂ ಮುಂಡಕೋಪನಿಷತ್ತಿನಲ್ಲಿಯೂ ಕಂಗೊಳಿಸುತ್ತಿದೆ. ಬಹಳ ಮಟ್ಟಿಗೆ ಈ ಮಂತ್ರಭಾಗವನ್ನು ಸಂನ್ಯಾಸಿಗಳನ್ನು ಕಂಡಾಗ ಶಿಷ್ಯಮಹಾಜನರು ಪಠನಮಾಡುತ್ತಾ ನಮಸ್ಕರಿಸುತ್ತಾರೆ. ಇದರಲ್ಲಿ ಅಡಗಿರುವ ವೇದಾಂತವಿಜ್ಞಾನದ ಸುನಿಶ್ಚಿತವಾದ ತತ್ತ್ವವನ್ನು ತಮ್ಮ ಜೀವನದಲ್ಲಿ ಕಂಡುಕೊಂಡು ಅದರ ನಿಜಸ್ವರೂಪವನ್ನು ಶಿಷ್ಯಕೋಟಿಗೆ ಪ್ರವಚನ, ಗ್ರಂಥರಚನೆ, ಅನುಷ್ಠಾನಗಳ ಮೂಲಕ ಬೋಧಿಸಿದವರು, ಪರಮಹಂಸ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರು.

ನಾನು ಅವರ ಸನ್ನಿಧಿಗೆ ಬರುವ ವೇಳೆಗೆ ಅವರು ಸರ್ಕಾರಿ ಕೆಲಸದಿಂದ ನಿವೃತ್ತರಾಗಿ ಹೊಳೆನರಸೀಪುರದಲ್ಲಿದ್ದರು. ಪತ್ನೀವಿಯೋಗವಾಗಿ ಸುಮಾರು ಮೂವತ್ತು ವರ್ಷಗಳಾಗಿದ್ದರಿಂದ ಅವರು ಬಹಳ ಮಟ್ಟಿಗೆ ವಾನಪ್ರಸ್ಥಧರ್ಮದಲ್ಲಿಯೇ ಇದ್ದುಕೊಂಡಿದ್ದರು. ಏಕಭುಕ್ತ, ಉಪವಾಸ ವ್ರತಾದಿಗಳು, ದೇವತಾರ್ಚನ-ಜಪಾದಿಗಳು ಇವುಗಳ ಜೊತೆಗೆ ಸದಾ ವೇದಾಂತಚಿಂತನ, ಲೇಖನ, ಪ್ರವಚನ, ಸಂಭಾಷಣೆಗಳಲ್ಲದೆ, ಭಗವಾನ್ ಯಾಜ್ಞವಲ್ಕ್ಯರಂತೆಯೇ ಜ್ಞಾನವೈರಾಗ್ಯಸಂಪನ್ನರಾಗಿದ್ದ ಈ ಮಹನೀಯರು ಜ್ಞಾನನಿಷ್ಠೆಗಾಗಿಯೇ ಸಂನ್ಯಾಸವನ್ನು ಬಯಸಿದ್ದು. ಇದು ಅನ್ವರ್ಥವಾದ ಪರಮಹಂಸಪಾರಿವ್ರಾಜ್ಯವು.

''ವೇದಾಂತ''ವೆಂದರೇ ಬಹಳ ಜನರು ಮೂಗು ಮುರಿಯುವ ಪರಿಸ್ಥಿತಿ ಯಾವಾಗಲೂ ಇದ್ದದ್ದೇ ಆಗಿದೆ. ಶ್ರೀ|| ರಾಯರು ಬಾಲ್ಯದಿಂದಲೂ ಈ ವೇದಾಂತಕ್ಕಾಗಿ ಆಸೆಪಟ್ಟವರೇನಲ್ಲ. ಆದರೂ ವರ್ಣಾಶ್ರಮಧರ್ಮಪ್ರಿಯರೂ ಸದಾಚಾರ ಸಂಪನ್ನರೂ ಆಗಿದ್ದವರು; ರಾಯರು ಸಹ ಆಗಿನ ಕಾಲಕ್ಕೆ ಆಂಗ್ಲವಿದ್ಯೆಯನ್ನೇ ಅವಕಾಶ ದೊರೆತಷ್ಟು ಅಭ್ಯಾಸಮಾಡಿದ್ದರು. ಹದಿನಾಲ್ಕನೆಯ ವಯಸ್ಸಿನಲ್ಲಿಯೇ ''ಮದುವೆ'' ಯಾದ್ದರಿಂದ ಲೌಕಿಕ ವಿದ್ಯಾಭ್ಯಾಸವು ಪ್ರೌಢಮಟ್ಟಕ್ಕೆ ಏರಲು ಸನ್ನಿವೇಶವು ದೊರೆಯಲಿಲ್ಲ. ಆದರೆ ಭಗವದನುಗ್ರಹವು ಅವರನ್ನು ಆಧ್ಯಾತ್ಮಿಕ ಜೀವನಕ್ಕೆ ಹಂತಹಂತದಲ್ಲೂ ಸೆಳೆದು ಅವರನ್ನು ಶಾಂಕರವೇದಾಂತ ಪ್ರಪಂಚದಲ್ಲಿ ಅತ್ಯುನ್ನತ ಪದವಿಗೇರಿಸಿ ಎಂದೆಂದಿಗೂ ಅವರು ಧ್ರುವತಾರೆಯಾಗಿ ಬೆಳಗುವಂತೆ ಮಾಡಿದ್ದೇ ಒಂದು ಪವಾಡವಾಗಿದೆ. ಇದರಿಂದ ಭಗವಂತನ ಅಘಟಿತಘಟನಾ ಸಾಮರ್ಥ್ಯವೂ ಆತನ ಲೋಕೋದ್ಧಾರ ಸಂಕಲ್ಪವೂ ವ್ಯಕ್ತವಾಗುತ್ತದೆ.

ವೇದಾಂತವು ನಿಜವಾಗಿ ರಾಯರ ಜೀವನದಲ್ಲಿ ಅನೇಕ ಸನ್ನಿವೇಶಗಳ ಮೂಲಕ ಒಳಹೊಕ್ಕಾಗ ಅವರಿಗೆ ಶಂಕರ ಭಗವತ್ಪಾದರ ಭಾಷ್ಯಗಳನ್ನು ಓದಿಯೇ ಜ್ಞಾನದ ಹಸಿವನ್ನು ನೀಗಿಸಿಕೊಳ್ಳಬೇಕೆಂಬ ದೃಢಸಂಕಲ್ಪವುಂಟಾಯಿತು. ತೀಕ್ಷ್ಣವಾದ ಹಾಗೂ ಆಳವಾದ ವಿಚಾರಬುದ್ಧಿಯ ಅವರಿಗೆ "ಧಿಯೋ ಯೋ ನಃ ಪ್ರಚೋದಯಾತ್" ಎಂಬ ಗಾಯತ್ರೀ ಮಂತ್ರದ ಜಪವು ಬೇಗನೆ ಸಿದ್ಧಿಸಿದುದರ ಫಲವೇ, ಈ ಪ್ರಚೋದನೆಯಾಗಿರಬೇಕು, ಅಲ್ಪಶ್ರಮದಿಂದಲೇ ನಿಜವಾದ ಸದ್ಗುರುಗಳ ಪ್ರಾಪ್ತಿಯೂ ದೊರಕಿತು. ಶಾಂಕರಭಾಷ್ಯಗಳನ್ನು ಓದುವದಕ್ಕೆ ಪ್ರವೇಶಿಕೆಯಾಗಿ ಕಾಲಟೀ ಕ್ಷೇತ್ರದಲ್ಲಿ ಶ್ರೀ ಶೃಂಗೇರೀ ಜಗದ್ಗುರುಗಳವರ ಸಮ್ಮುಖದಲ್ಲಿ "ಭಾಷ್ಯಶಾಂತಿ" ಲಾಭವು ಆಯಿತು. ಇಡಿಯ ಜನ್ಮವೆಲ್ಲ ನಿಜವಾದ ಗುರುಗಳ ಅನ್ವೇಷಣೆಗಾಗಿ ತಡಕಾಡಿ ನಿರಾಶರಾಗುವವರಿಗೇನೂ ಕಡಿಮೆಯಿಲ್ಲ. ಆದರೆ ಶ್ರೀ॥ರಾಯರು ಮಾತ್ರ ಈ ವಿಷಯದಲ್ಲಿ ತುಂಬ ಪುಣ್ಯವಂತರೆನಿಸಿದರು. ಮುಂದೆ ಅವರ ಸತತಪ್ರಯತ್ನಗಳು, ದೃಢವಾದ ಅಭ್ಯಾಸಗಳ ಫಲವಾಗಿ ಸಂಸ್ಕೃತಭಾಷಾಸ್ವಾಧೀನವೂ ಶಾಂಕರಭಾಷ್ಯಗಳ ಮೂಲಾಧ್ಯಯನದ ಸದವಕಾಶವೂ ಒದಗಿದವು. ಆಗಾಗ್ಗೆ ಸ್ವಲ್ಪಮಟ್ಟಿಗೆ ವೇ॥ ಆಸ್ಥಾನಮಹಾವಿದ್ವಾನ್ ವಿರೂಪಾಕ್ಷಶಾಸ್ತ್ರಿಗಳು, ಶ್ರೀ॥ ಕೆ. ಎ. ಕೃಷ್ಣಸ್ವಾಮಿ ಅಯ್ಯರ್‌ರವರು ಮುಂತಾದ ವಿದ್ವಜ್ಜನರೊಡನೆ ದೊರಕಿದ ಸಾಧುಸಂಗದ ಮೂಲಕ ಶ್ರೀ ರಾಯರು ತಮ್ಮ ಭಾಷ್ಯವ್ಯಾಸಂಗವನ್ನು ಚೆನ್ನಾಗಿ ಬೆಳೆಯಿಸಿಕೊಂಡರು. ಕ್ರಮೇಣ ಶಂಕರರಿಗೂ ಶಂಕರರ ಅನುಯಾಯಿಗಳೆನಿಸಿರುವ ವ್ಯಾಖ್ಯಾನಕಾರರಿಗೂ ಇರುವ ವಿಚಾರ ಸರಣಿಯ ವ್ಯತ್ಯಾಸವನ್ನೂ ಮನಗಂಡರು. ಅದ್ವೈತವೇದಾಂತಸಿದ್ಧಾಂತವನ್ನು ತರ್ಕಶಾಸ್ತ್ರ, ಪಾತಂಜಲ ಯೋಗಾದಿಗಳ ನೆರವಿಲ್ಲದೆ ಸ್ವತಂತ್ರವಾಗಿಯೇ ವಿಚಾರ ಮಾಡಿ ಶ್ರವಣಾದಿ ಸಾಧನಗಳ ಮೂಲಕ ಜೀವನ್ಮುಕ್ತಿಯನ್ನು ಪಡೆಯಲು ಶಾಂಕರಪ್ರಸ್ಥಾನತ್ರಯ ಭಾಷ್ಯಗಳು ಮಾತ್ರವೇ ನಿಜವಾದ ಸಹಕಾರಿಗಳೆಂಬುದು ಶ್ರೀ ರಾಯರಿಗೆ ಚೆನ್ನಾಗಿ ದೃಢಪಟ್ಟಿತು. ಹೀಗೆ ರಾಯರು ವೇದಾಂತಜ್ಞಾನದ ನಿಶ್ಚಿತವಾದ ದೃಷ್ಟಿಯನ್ನು ಸಂಪಾದಿಸಿದರು.

ಈ ಜ್ಞಾನವು ವಿಜ್ಞಾನವಾಗಿ ಪರಿಣಮಿಸಿ ಜ್ಞಾನನಿಷ್ಠೆಯಲ್ಲಿ ನೆಲೆಗೊಳ್ಳುವ ಸ್ಥಿತಪ್ರಜ್ಞತ್ವರೂಪವಾದ ಜೀವನ್ಮುಕ್ತಸ್ಥಿತಿಯನ್ನು ಹೊಂದಲು ಕಾರಣವಾದದ್ದು, ಭಾಷ್ಯಶಾಂತಿಯಾದ ಸುಮಾರು ಮೂರು ವರ್ಷಗಳ ಅನಂತರ. **ಗೋಂದಾವಳಿ** ಶ್ರೀ ಬ್ರಹ್ಮಚೈತನ್ಯಸದ್ಗುರು ಮಹಾರಾಜರ ದರ್ಶನವೂ ಅವರಿಂದಲೇ ಮಂತ್ರೋಪದೇಶವೂ ಲಭಿಸಿದವು. ರಾಯರು ಈ ಘಟನೆಯನ್ನು ತಮ್ಮ ಜೀವಮಾನದ ಮುಖ್ಯ ಘಟನೆಯಾಗಿ ಭಾವಿಸಿ ಗುರುಗಳು ಅನುಗ್ರಹಿಸಿದ ಮಂತ್ರಪುರಶ್ಚರಣೆಯ ಮೂಲಕ ಜ್ಞಾನಸಾಧನಗಳಾದ ಅಮಾನಿತ್ವಾದಿಗಳನ್ನೂ ಚಿತ್ತಶುದ್ಧಿಯೇ ಮುಂತಾದ ಆತ್ಮಜ್ಞಾನಕ್ಕೆ

ಬೇಕಾದ ಸಲಕರಣೆಗಳನ್ನೂ ಒದಗಿಸಿಕೊಂಡು ವೇದಾಂತವೆಂಬುದು ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದು ಕೊಂಡಿರುವ ತತ್ತ್ವದ ನಿಜವನ್ನು ಕಂಡುಕೊಳ್ಳುವ ವಿಚಾರ ಕ್ರಮವೇ - ಎಂಬುದನ್ನು ದೃಢಪಡಿಸಿಕೊಂಡರು.

ರಾಯರು 1948ರಲ್ಲಿ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದಾಗ ಅನಂತರವೂ ತಮ್ಮ ಸರ್ವಸ್ವವಾಗಿದ್ದು ತಮ್ಮ ತನುಮನಧನಗಳನ್ನೆಲ್ಲ ಧಾರೆಯೆರೆದು ಕಟ್ಟಿಬೆಳೆಯಿಸಿದ ಕಾರ್ಯಾಲಯವನ್ನು ತಾವು ನಿರ್ಲಿಪ್ತರಾಗಿ ಮಹಾಜನರಿಗೇ ಅರ್ಪಿಸಿಬಿಟ್ಟರು ; ಮಠವನ್ನಾಗಿ ಮಾಡಲಿಲ್ಲ, ಪೀಠಾಧಿಪತಿಗಳಾಗಲಿಲ್ಲ, ಇಂಥ ಸಂನ್ಯಾಸವನ್ನು ನಾವು ಬೇರೆಲ್ಲಿಯೂ ಕಾಣಲಾರೆವು.

ನನ್ನ ನೂರಾರು ಜನ್ಮಗಳ ಸುಕೃತವಿಶೇಷದಿಂದಲೋ, ಎಂಬಂತೆ ಪೂಜ್ಯ ಶ್ರೀಶ್ರೀಗಳವರಲ್ಲಿ ಶಿಷ್ಯನಾಗಿ ಐದು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ, ಅನಂತರ ಜೀವನೋಪಾಯಕ್ಕಾಗಿ ಅವರ ಸಂಸ್ಥೆಯಲ್ಲೇ ಪಂಡಿತನಾಗಿ ಸುಮಾರು 59 ವರ್ಷಗಳನ್ನು ಕಳೆದಿರುವ ನನಗೆ "ತ್ವಮೇವ ಮಾತಾ ಚ....ಸರ್ವಂ ಮಮ ದೇವ ದೇವ" ಎಂಬಂತೆ ಸರ್ವಸ್ವವೂ ಆ ಸದ್ಗುರುಗಳೇ ಆಗಿರುತ್ತಾರೆ. ಆ ಮಹಾಮಹಿಮರ ಪಾದಾರವಿಂದಗಳಿಗೆ ನಮಿಸುತ್ತೇನೆ.

★★★★

## ಶ್ರೀ ಶಂಕರರೂಪಿ ಶ್ರೀಶ್ರೀಗಳವರು

### ಶ್ರೀ ಎಸ್. ವಿಠಲಶಾಸ್ತ್ರಿಗಳು

ಉಪನಿಷತ್ಪ್ರತಿಪಾದ್ಯನಾದ ಶ್ರೀ ಶಂಕರನೇ ಶ್ರೀ ಶಂಕರಾಚಾರ್ಯರೂಪದಿಂದ ಅವತರಿಸಿ ಉಪನಿಷತ್ತುಗಳಿಗೆ 'ಕರ್ಮಜ್ಞಾನ ಸಮುಚ್ಚಯದಲ್ಲಿ ತಾತ್ಪರ್ಯವಿದೆ' ಎಂದು ಮುಂತಾಗಿ ಹೇಳುತ್ತಿದ್ದ ವೃತ್ತಿಕಾರರ ಮತದಲ್ಲಿದ್ದ ದೋಷಗಳನ್ನು ಎತ್ತಿ ತೋರಿಸಿ, ಜ್ಞಾನವೊಂದೇ ಮೋಕ್ಷಕ್ಕೆ ಸಾಧನ, ದೇಹದಲ್ಲಿ ನಾನು ಎಂಬ ತಪ್ಪು ತಿಳಿವಳಿಕೆಯುಳ್ಳವರೇ ಕರ್ಮಕ್ಕೂ ಉಪಾಸನೆಗೂ ಅಧಿಕಾರಿಗಳು, ಮೂರು ಕಾಲಗಳಲ್ಲಿಯೂ ನಾನು ಕರ್ತೃವಲ್ಲದವನು, ಭೋಕ್ತೃವಲ್ಲದವನು, ಶುದ್ಧ ಸಚ್ಚಿದಾನಂದ ಸ್ವರೂಪನು ಎಂಬ ಜ್ಞಾನವನ್ನು ಪಡೆದಮೇಲೆ ಕರ್ಮಮಾಡಲು ಅವಕಾಶವಿಲ್ಲ, ಅಂತಹಜ್ಞಾನವು ಬರುವದಕ್ಕೆ ಚಿತ್ತಶುದ್ಧಿದ್ವಾರಾ ಕರ್ಮವು ಪ್ರಯೋಜನವಾಗುತ್ತದೆ, ದೇಹದಲ್ಲಿ ನಾನು ಎಂಬ ತಪ್ಪು ತಿಳಿವಳಿಕೆಯೇ ಪ್ರಪಂಚಕ್ಕೆ ಕಾರಣ ಅಥವಾ ಈ ಅವಿದ್ಯೆಯಿಂದ ಕಲ್ಪಿತವಾದ ಮಾಯೆಯು ಜಗತ್ತಿಗೆ ಕಾರಣ, ನಿಜವಾಗಿ ಮಾಯೆಯಾಗಲೀ, ಪ್ರಪಂಚವಾಗಲೀ ಇಲ್ಲವೇ ಇಲ್ಲ - ಇದ್ದಂತೆ ತೋರುತ್ತದೆ. ಆದುದರಿಂದಲೇ ತತ್ತ್ವಜ್ಞಾನದಿಂದ ಬಾಧಿತವಾಗುತ್ತದೆ, ಎಂಬ ಉಪನಿಷತ್ಸಿದ್ಧಾಂತವನ್ನು ಭಾರತ

ದಲ್ಲೆಲ್ಲಾ ತಿರುಗಾಡಿ ಪ್ರಕಟಪಡಿಸಿದರು. ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು, ವ್ಯಕ್ತಾವ್ಯಕ್ತ ಪ್ರಪಂಚವು ದೇಹವನ್ನು ನಾನು ಎಂದು ತಿಳಿದಿರುವ ಅವಿದ್ಯೆಯಿಂದಲೇ ಉಂಟಾದದ್ದು, ತಪ್ಪು ತಿಳಿವಳಿಕೆಗೆ ಸರಿಯಾದ ತಿಳಿವಳಿಕೆ ಇಲ್ಲದಿರುವದೇ ಕಾರಣ ; ಬೇರೆ ಉಪಾದಾನ ಕಾರಣವಿರುವದೇ ಇಲ್ಲ. ಭ್ರಾಂತಿಯಿಂದ ಕಲ್ಪಿತವಾದ ಮಾಯೆಯನ್ನು ಉಪಾದಾನ ಕಾರಣವಾಗಿ ಇಟ್ಟುಕೊಳ್ಳಲೂಬಹುದು. ಕಾರ್ಯವಾದ ಪ್ರಪಂಚವು ಇಲ್ಲದಿದ್ದ ಹುಸಿತೋರಿಕೆಯು ಎಂದು ಗೊತ್ತಾದರೆ ಆಗ ಅದ್ವಿತೀಯವಾದ ಆತ್ಮತತ್ತ್ವವೊಂದೇ ಪರಮಾರ್ಥವಾದದ್ದೆಂಬ ಘನ ಸಿದ್ಧಾಂತವು ತಿಳಿಯಬರುತ್ತದೆ ಎಂಬ ಶಂಕರ ಸಿದ್ಧಾಂತವನ್ನು 180 ಗ್ರಂಥಗಳಿಂದ ಪ್ರಕಟಿಸಿರುತ್ತಾರೆ.

★★★★

## ಪರಿಶುದ್ಧ ಶಾಂಕರಾದ್ವೈತ ವೇದಾಂತ ಸೂರ್ಯ

**ಶ್ರೀ ಕೆ.ಜಿ. ಸುಬ್ರಾಯಶರ್ಮಾ**

ತಮ್ಮ ಭಾಷ್ಯಗಳಿಗೆ ಆಗುತ್ತಿದ್ದ ಅಪವ್ಯಾಖ್ಯಾನಗಳನ್ನೂ, ತಪ್ಪು ಪ್ರಚಾರಗಳನ್ನೂ ತಿಳಿದು, ಸರ್ವಜ್ಞರಾದ ಶ್ರೀ ಶಂಕರಾಚಾರ್ಯರವರು ಮತ್ತೊಮ್ಮೆ ಮುಮುಕ್ಷು ಜನಗಳಿಗೆ ಅನುಗ್ರಹ ಮಾಡುವದಕ್ಕಾಗಿಯೂ, ತಮ್ಮ ಪ್ರಸ್ಥಾನತ್ರಯ ಭಾಷ್ಯಗಳಿಗೆ ಸರಿಯಾದ ವ್ಯಾಖ್ಯಾನವನ್ನು ಮಾಡುವದರ ಮೂಲಕ ತಮ್ಮ ಹೃದಯದ ಅಭಿಪ್ರಾಯವನ್ನು ತಾವೇ ತಿಳಿಸುವದಕ್ಕಾಗಿಯೂ ಪುನಃ ಅವತಾರ ಮಾಡಿದರೆನ್ನುವಂತೆ ಪರಮಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು ಶಂಕರ ಸೂರ್ಯನಂತೆ ಉದಿಸಿದರು. ವ್ಯಾಖ್ಯಾನ ಗ್ರಂಥಗಳು ಶಾಂಕರಭಾಷ್ಯಾಭಿಪ್ರಾಯಗಳನ್ನು ಅನೇಕ ಸ್ಥಳಗಳಲ್ಲಿ ಸುಸ್ಪಷ್ಟವಾಗಿ ವಿವರಿಸಿದರೂ, ವ್ಯಾಖ್ಯಾನ ಸಿದ್ಧಾಂತವು ಮಾತ್ರ ಶಾಂಕರಭಾಷ್ಯ ಸಿದ್ಧಾಂತಕ್ಕೆ ಬಾಹ್ಯವೆಂದಷ್ಟೇ ಅಲ್ಲ, ಕೆಲವೆಡೆಗಳಲ್ಲಿ ತೀರ ವಿರುದ್ಧವಾಗಿಯೇ ಇದೆ, ಆದರೆ ವಾರ್ತಿಕ ಗ್ರಂಥಗಳು ಭಾಷ್ಯಕ್ಕೆ ಅನುಗುಣವಾಗಿದೆ, ಎಂಬ ಸತ್ಯಾಂಶವನ್ನು ಚೆನ್ನಾಗಿ ಮನಗಂಡು ಶ್ರೀಶ್ರೀಗಳವರು ಶಾಂಕರ ಸಿದ್ಧಾಂತವನ್ನು ನೇರಾಗಿ ತಿಳಿಸಿಕೊಡುವ ಸದುದ್ದೇಶದಿಂದ ಇಡೀ ಪ್ರಸ್ಥಾನತ್ರಯ ಭಾಷ್ಯಗಳನ್ನು ಕನ್ನಡ ಭಾಷೆಗೆ ಅನುವಾದಿಸಿದರು. ಗೀತಾಭಾಷ್ಯದಲ್ಲಿರುವ ರಹಸ್ಯಗಳನ್ನು ಗೀತಾಶಾಸ್ತ್ರಾರ್ಥವಿವೇಕಃ ಎಂಬಲ್ಲಿ, ಬ್ರಹ್ಮಸೂತ್ರ ಶಾಂಕರಭಾಷ್ಯದ ಮರ್ಮವನ್ನು ಸುಗಮಾ, ಸೂತ್ರಭಾಷ್ಯಾರ್ಥ ತತ್ತ್ವವಿವೇಚನೀ ಎಂಬಲ್ಲಿ, ಉಪನಿಷದ್ಭಾಷ್ಯ ತಾತ್ಪರ್ಯವನ್ನು ಭಾಷ್ಯಾರ್ಥ ವಿಮರ್ಶಿನೀ, ಮಾಂಡೂಕ್ಯರಹಸ್ಯವಿವೃತಿಃ ಮೊದಲಾದ ಗ್ರಂಥಗಳಲ್ಲಿಯೂ ತಿಳಿಸಿರುತ್ತಾರೆ.

★★★★

## ಓಂ ನಾರಾಯಣ

ಎಮ್. ಹನುಮಂತರಾವ್, ಅಧ್ಯಕ್ಷರು, ಅಧ್ಯಾತ್ಮ ಪ್ರಚಾರ ಸೇವಾ ಸಮಿತಿ,
ಸದಾಶಿವಪೇಟೆ, ಆದೋನಿ - 518 301. ದೂರವಾಣಿ : 08512-222187.

ನನಗೆ 1970ರಲ್ಲಿ ಶಂಕರ ಜಯಂತಿ ಸಂದರ್ಭ ಸತ್ಸಂಗ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಶ್ರೀಗಳವರ ದರ್ಶನವಾಯಿತು. ಅವರ ಮತ್ತು ಪಂಡಿತರ ಪ್ರವಚನಗಳನ್ನು ಕೇಳುವ, ಶ್ರೀಶ್ರೀಗಳವರ ಅಧ್ಯಾತ್ಮಗ್ರಂಥಗಳನ್ನು ಓದುವ ಸದವಕಾಶ ಸೌಭಾಗ್ಯ ಸಿಕ್ಕಿತು. ಆಗಿನಿಂದಲೇ ಶ್ರೀಶ್ರೀಗಳವರ ಪ್ರಭಾವ ನನ್ನ ಮೇಲೆ ಬೀರಿತು, ಪರಿಣಾಮ ಆರಂಭವಾಯಿತು.

ಶ್ರೀಶ್ರೀಗಳವರ ಪರಮಾರ್ಥ ಚಿಂತಾಮಣಿ ಮತ್ತು ಕನ್ನಡದಲ್ಲಿ ಬರೆದಿರುವ ಬೇರೆ ಗ್ರಂಥಗಳನ್ನು ತೆಲುಗು, ಹಿಂದಿ ಮತ್ತು ಇಂಗ್ಲಿಷಿನಲ್ಲಿ ಅನುವಾದಮಾಡಿ ಅಚ್ಚು ಮಾಡಬೇಕೆಂದಿದ್ದೇವೆ. ಆದ್ದರಿಂದ ಆಯಾ ಭಾಷೆಗಳಲ್ಲಿ ಅನುವಾದಮಾಡಿ ಆಂಧ್ರಪ್ರದೇಶ ಮತ್ತು ಉತ್ತರಾದಿಕಡೆ ಪ್ರಚಾರ ಮಾಡುವದಕ್ಕಾಗಿ ಧನಸಹಾಯ ಮಾಡಬೇಕೆಂದು ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಬಿನ್ನಹ ಹಾಕಿದ್ದರು. ಇದರಂತೆ ಹೊಳೆನರಸೀಪುರದ ಕಾರ್ಯಾಲಯಕ್ಕೆ ಕಳಿಸಿದ ಕಾಣಿಕೆ ಪತ್ರಕ್ಕೆ ಉತ್ತರವಾಗಿ, ಶ್ರೀಶ್ರೀಗಳವರು ವ್ಯಾಸ ಪೂರ್ಣಿಮ ಮಹೋತ್ಸವದಲ್ಲಿ ಭಾಗವಹಿಸಬೇಕೆಂದು ಪತ್ರ ಹಾಕಿಸಿದರು. ಹಾಗೆ ಹೋದಾಗ ಅವರ ಹತ್ತಿರವೇ ಕೂಡಿಸಿಕೊಂಡು ತಾವು ಏನೇನು ಸಾಧನೆ ಮಾಡುತ್ತೀರಿ, ಎಂಥ ಪುಸ್ತಕಗಳನ್ನು ಓದುತ್ತೀರೆಂದು ನನಗೆ ಕೇಳಿದರು. ಪೂಜೆ, ಭಜನೆ, ಯಥಾಶಕ್ತಿ ದಾನಧರ್ಮಗಳು ಮತ್ತು ಪಂಚದಶಿ, ವಿಚಾರಸಾಗರ - ಇಂಥ ಕೆಲವು ಪುಸ್ತಕಗಳನ್ನು ಮಾತ್ರ ಓದಿದ್ದೇನೆ ಮತ್ತು ಕೇಳಿದ್ದೇನೆ ಎಂದು ವಿನಂತಿ ಮಾಡಿಕೊಂಡೆ. ತದನಂತರ ಶ್ರೀಶ್ರೀಗಳವರು ಎರಡು ಮುತ್ತಿನಂಥ ಮಾತುಗಳನ್ನು ಹೇಳಿದರು : 1) ನಿಮ್ಮ ಸಾಧನೆ ಸರಿಯಾಗಿದೆ - ಅದನ್ನೇ ಮುಂದುವರಿಸಬೇಕು. 2) ತಾವು ಓದಿರುವ ಪುಸ್ತಕಗಳನ್ನು ಸದ್ಯಕ್ಕೆ ನಿಲ್ಲಿಸಿಬಿಡಿರಿ. ಹಾಗೆ ಹೇಳಿದನಂತರ ಶ್ರೀಶ್ರೀಗಳವರು ಪರಮಾರ್ಥ ಚಿಂತಾಮಣಿ, ಭಕ್ತಿಚಂದ್ರಿಕೆಗಳನ್ನು ನನ್ನ ಕೈಯ್ಯಿಗೆ ಕೊಟ್ಟು ಶಂಕರರು ನಿಮಗೆ ಅನುಗ್ರಹ ಮಾಡಲೆಂದು ಆಶೀರ್ವಾದ ಮಾಡಿದರು. ಊಟ ಮಾಡಿಸಿ ಕಳಿಸಿಕೊಡಬೇಕೆಂದು ಲಕ್ಷ್ಮೀದೇವಮ್ಮನವರಿಗೆ ಅಪ್ಪಣೆ ಮಾಡಿದರು. ಈ ಭೇಟಿ ಆದನಂತರ ನನ್ನ ಜೀವಮಾನದಲ್ಲಿ ಶ್ರೀಶ್ರೀಗಳವರ ಪ್ರಭಾವದಿಂದ ಅವರ ಅನುಗ್ರಹದಿಂದ ಕೆಲವು ಘಟನೆಗಳು ನಡೆದವು.

1) 1978 ರಿಂದ 1995ರ ವರೆಗೆ ಶುಕಬ್ರಹ್ಮ ಮಹಾಮುನಿಯಂತೆ ತೇಜಸ್ವಿಯಾದ ಸಂನ್ಯಾಸಿಗಳಾದ ಪೂಜ್ಯಶ್ರೀ ಶ್ರೀಭಗವತ್ಪಾದಸ್ವಾಮಿಗಳವರ ಸನ್ನಿಧಿ

ಯಲ್ಲಿ ಭಗವದ್ಗೀತಾ ಮತ್ತು ಪರಮಾರ್ಥ ಚಿಂತಾಮಣಿ ಪ್ರವಚನಗಳನ್ನು ಆದೋನಿ ಪಟ್ಟಣದಲ್ಲಿ ಸತ್ಸಂಗ ಏರ್ಪಾಟು ಮಾಡಿಸಿ ಕೇಳುವ ಸದವಕಾಶ ದೊರೆಯಿತು. ಬ್ರಹ್ಮರ್ಷಿಕವಿ ಶ್ರೀ ದೇವರಾಯ ಕುಲಕರ್ಣಿಯವರು (ದಿವಂಗತ) ನನಗೆ ಬಹಳ ಪರಿಚಯ. ಪೂಜ್ಯ ಭಗವತ್ಪಾದರಂತೆ ಪರಮಾರ್ಥ ಚಿಂತಾಮಣಿ ವಿಚಾರ ಹೇಳುವದಕ್ಕೆ ನನಗೆ ಆಗುವದಿಲ್ಲ, ಅವರು ಆದರ ಮರ್ಮವನ್ನು ಬಿಡಿಸಿ ಹೇಳುವದಕ್ಕೆ ಸರಿಯಾದ ಅನುಭಾವಿಗಳು ಎಂದು ಒಪ್ಪಿಕೊಂಡಂಥ ನಿರಭಿಮಾನಿಗಳು ಕುಲಕರ್ಣಿಯವರು. ಶ್ರೀಶ್ರೀಗಳವರು ಪರಮಾರ್ಥ ಚಿಂತಾಮಣಿ ವಿಚಾರವನ್ನು ಪ್ರತ್ಯೇಕವಾಗಿ ಭಗವತ್ಪಾದರವರಿಗೆ ಮಾತ್ರ ಹೇಳಿದ್ದಾರೆಂದು ಕುಲಕರ್ಣಿಗಳು ಹೇಳುತ್ತಿದ್ದರು. 1980ರಿಂದ 1995ರವರೆಗು ಪ್ರತಿವರ್ಷ ಒಂದು ತಿಂಗಳಕಾಲ ಆದೋನಿಯಲ್ಲೆ ವಾಸಮಾಡಿ ಬೆಳಿಗ್ಗೆ ಪರಮಾರ್ಥಚಿಂತಾಮಣಿ ಮತ್ತು ಸಾಯಂಕಾಲ ಭಗವದ್ಗೀತೋಪನ್ಯಾಸಗಳನ್ನು ಹೇಳುತ್ತಿದ್ದರು. ಈ 15 ವರ್ಷಗಳ ಕಾಲ ಸತ್ಸಂಗಸೇವೆ ಮತ್ತು ಭಗವತ್ಪಾದರ ಪ್ರವಚನಗಳು ಕೇಳುವ ಅಧ್ಯಾತ್ಮಯೋಗ ನನಗೆ ಸಿಕ್ಕಿತು. ಇದೆಲ್ಲಾ ಸದ್ಗುರು ಕೃಪೆಯಿಂದ ನನಗೆ ಪ್ರಾಪ್ತವಾಯಿತೆಂದು ನನ್ನ ಪೂರ್ಣವಿಶ್ವಾಸ. ಸದ್ಗುರು ಕೃಪೆಯಿಂದಲೇ ನನ್ನ ಜೀವನದಲ್ಲಿ ಪರಿಪೂರ್ಣ ಪರಿವರ್ತನೆ ಆಯಿತೆಂದು, ಅಧ್ಯಾತ್ಮ ಮಾರ್ಗದಲ್ಲಿ ಮುಂದುವರಿಯಬೇಕಾದರೆ ಭಗವದನುಗ್ರಹ ಶ್ರದ್ಧಾಭಕ್ತಿಗಳು ಮತ್ತು ತೀವ್ರ ಇಚ್ಛೆ ಅತ್ಯಾವಶ್ಯ ಎಂದು ತಿಳಿದಿದ್ದೇನೆ.

ಶ್ರೀಶ್ರೀಗಳವರು ತಮ್ಮ ಪ್ರಚಾರವನ್ನು ಪ್ರಾರಂಭಮಾಡುವಾಗ "ಕಾರ್ಯಾಲಯ" ಎಂದು ಹೆಸರಿಟ್ಟಿದ್ದಾರೆ. ಆಶ್ರಮ ಎನ್ನಲಿಲ್ಲ. ಯಾಕೆಂದರೆ ಸಾಧುಸತ್ಪುರುಷರುಗಳಿಗೆ, ಆಶ್ರಮಗಳಿಗೆ ಅಧ್ಯಾತ್ಮಪ್ರಚಾರ ಮಾಡುವದೇ, ಲೋಕಕಲ್ಯಾಣಕ್ಕಾಗಿ ದುಡಿಯುವದೆ ಎನ್ನುತ್ತಿದ್ದರು.

*"It is not mere Ashrams that we want, but more men of sterling faith, character, insight, selfless service and burning desire for God realisation and eternal peace. Ashrams are only institutions through which these great souls radiate their love and good will towards the world and people"* - **Swami Ramadas.**

ಶಾಂಕರವೇದಾಂತ ಸಾಂಪ್ರದಾಯಕ ಸಿದ್ಧಾಂತವೆಂದರೇನು ? 1) ಜನ್ಮರಹಿತನಾದ ಅದ್ವಿತೀಯನಾದ ಪರಮಾತ್ಮತತ್ತ್ವವನ್ನು ತಿಳಿಸಿಕೊಡುವದೇ ಉಪನಿಷತ್ತುಗಳ ಮುಖ್ಯಲಕ್ಷ್ಯ. ಸ್ವರ್ಗಲೋಕ, ಬ್ರಹ್ಮಲೋಕ ಭೋಗಗಳನ್ನು ಅನುಭವಿಸಬೇಕೆಂದು ಬಯಸುವವರಿಗೆ (ತೀವ್ರ ಇಚ್ಛೆಯಿದ್ದವರಿಗೆ) ಕರ್ಮೋಪಾಸನೆಗಳನ್ನು ಬೋಧಿಸಿದೆ.

2) ವೇದಾಂತವೆಂಬುದು ಒಂದು ಮತವಲ್ಲ; ಶಂಕರರು ಮತಪ್ರಚಾರಕರಲ್ಲ, ಉಪನಿಷತ್ ಸಿದ್ಧಾಂತವನ್ನು ಪ್ರತಿಪಾದನೆ, ಪ್ರಚಾರಮಾಡಿ ಜಗತ್ತಿನ ಜಿಜ್ಞಾಸುಗಳು ಮತ್ತು ಮುಮುಕ್ಷುಗಳೆಲ್ಲರಿಗೂ ಮಹೋಪಕಾರ ಮಾಡಿದ ಕರುಣಾಮೂರ್ತಿ ಸದ್ಗುರುಗಳು.

3) ಅದ್ವೈತ ದರ್ಶನವು ಅವಿವಾದವಾದದ್ದು, ಯಾವಮತಕ್ಕೂ ವಿರೋಧ ವಲ್ಲ. ಏಕೆಂದರೆ ದ್ವೈತ ವ್ಯವಹಾರವೆಲ್ಲವೂ ಮಾಯಾಕಾರ್ಯವು. ಅದ್ವೈತಾತ್ಮ ಒಂದೇ ಪರಮಾರ್ಥ ಸತ್ಯವಾದದ್ದು. ಸದ್ರೂಪವಾದ ಪರಮಾತ್ಮನಿಗಿಂತ ಭಿನ್ನವಾಗಿ ಸ್ವತಂತ್ರವಾದ ಇರುವಿಕೆ (ಅಸ್ತಿತ್ವ) ಜಗತ್ತಿಗಾಗಲಿ ಜೀವರುಗಳಿಗಾಗಲಿ ಇಲ್ಲವೇ ಇಲ್ಲ. ವೇದಾಂತವು ಬ್ರಹ್ಮ ಸ್ವರೂಪವನ್ನು ಇದ್ದದ್ದು ಇದ್ದಂತೆ ತಿಳಿಸಿ, ನಮ್ಮ ತಪ್ಪು ತಿಳಿವಳಿಕೆಯನ್ನೂ ಅದರಿಂದ ನಮಗೆ ಸಂಭವಿಸಿರುವ ಸಂಸಾರ ಅನರ್ಥಗಳನ್ನೆಲ್ಲವನ್ನು ತೊಲಗಿಸಿ ಜೀವನ್ಮುಕ್ತಿಯನ್ನು ಕೊಡುತ್ತದೆ.

4) ಶಾಂಕರವೇದಾಂತ ಬೋಧೆಯ ಅಸಾಧಾರಣ ಧರ್ಮವೇನೆಂದರೆ, ಸರ್ವಪ್ರಾಣಿಗಳಿಗೂ ಸಹಜವಾಗಿರುವ ಅನುಭವವನ್ನೇ ಆಧಾರವಾಗಿಟ್ಟುಕೊಂಡು ಪೂರ್ಣಾನುಭವದಿಂದ ಸಿದ್ಧವಾಗಿರುವ ಬ್ರಹ್ಮಜ್ಞಾನವೇ ಉಪನಿಷತ್ಸಿದ್ಧಾಂತ. ವ್ಯಕ್ತಿಗಳ ವಿಶೇಷಾನುಭವವೆಂಬುದು ಸಾಧನದಿಂದ ಪ್ರಯತ್ನ ಮಾಡಿ ಸಂಪಾದನೆ ಮಾಡ ಬೇಕಾಗಿರುವುದರಿಂದ ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

5) ಜ್ಞಾನದೃಷ್ಟಿ ಎಂಬುದು ಯಾವದೋ ಒಂದು ವಿಚಿತ್ರವಾದ ದೃಷ್ಟಿ ಎಂದೂ, ಅದು ಯಾವದೋ ದೊಡ್ಡ ತಪಸ್ಸು ಮಾಡಿದವರಿಗೆ ಮಾತ್ರ ಸಿಗುತ್ತದೆಂದೂ ತಿಳಿದು ಕೊಳ್ಳಬಾರದು. ನಮ್ಮಂಥ ಸಾಮಾನ್ಯರೂ ಸಹ ಸರಿಯಾದ ಮಾರ್ಗದಿಂದ ಪ್ರಯತ್ನ ಮಾಡಿದರೆ ಯಾವದೋವೊಂದು ಕಾಲಕ್ಕೆ ಜ್ಞಾನದೃಷ್ಟಿಯನ್ನು ಸಂಪಾದಿಸಬಹುದು. ಜ್ಞಾನದೃಷ್ಟಿ- ಅನುಭವದೃಷ್ಟಿ-ಶಾಸ್ತ್ರದೃಷ್ಟಿ-ವಿವೇಕದೃಷ್ಟಿ- ಅಂತರ್‌ದೃಷ್ಟಿ-ಪರಮಾರ್ಥ ದೃಷ್ಟಿ ಇವೆಲ್ಲಾ ಪರ್ಯಾಯಪದಗಳು. ಯಾರೇ ಆಗಲಿ ಎಂಥ ಮೇಧಾವಿಗಳಾಗಲಿ ದೇವತೆಗಳೇ ಆಗಲಿ ಅಂತರ್‌ದೃಷ್ಟಿ ಅವಲಂಬಿಸದೆ ಹೋದರೆ ಬ್ರಹ್ಮಜ್ಞಾನ ಹುಟ್ಟುವ ದಿಲ್ಲ. ಈ ಪರಮಾರ್ಥಜ್ಞಾನವನ್ನು ಸಂಪಾದಿಸುವದಕ್ಕಾಗಿ ನಾವು ಮಹಾವೀರ್ಯರಾದ ದೇವತೆಗಳಾಗಲಿ, ಋಷಿಗಳಾಗಲಿ ಆಗಿರಬೇಕೆಂಬ ನಿಯಮವೇನೂ ಇಲ್ಲ. ಮನಸ್ಸು ಕಾಮರಹಿತವಾಗುವದೇ ಸಾಧನ ಸಂಪತ್ತಿನ ಗುರಿ. ನಿಷ್ಕಾಮವಾದ ಪವಿತ್ರ ಹೃದಯ, ಭಗವದನುಗ್ರಹ ಮತ್ತು ಶಾಸ್ತ್ರಸದ್ಗುರುಗಳ ಅನುಗ್ರಹ ಅತ್ಯಾವಶ್ಯಕವು.

6) ಪರಮಾರ್ಥತತ್ತ್ವವು ಯಾರೋ ಒಬ್ಬರ ಪ್ರತ್ಯೇಕವಾದ ಹಕ್ಕಲ್ಲ. ಜೀವ, ಜಗತ್ತು, ಈಶ್ವರ, ಇದರ ಪರಮಾರ್ಥವನ್ನು ಕಂಡುಕೊಂಡು ಆನಂದಿಸುವ ಹಕ್ಕು

ಎಲ್ಲರಿಗೂ ಸಮಾನವಾಗಿದೆ. ವೇದಾಂತದರ್ಶನವು ಶಾಸ್ತ್ರಸಮ್ಮತವಾದರೂ ಪರಮಾರ್ಥತತ್ತ್ವ ಶಾಸ್ತ್ರವಾಗಲಿ ಯಾರೋ ಒಬ್ಬ ಆಚಾರ್ಯನ ಮಾತುಗಳನ್ನು ಅವಲಂಬಿಸಿ ಕೇವಲ ಶಾಸ್ತ್ರವಲ್ಲದೇ ಅನುಭವವೂ ಪ್ರಮಾಣವಾಗಿದೆ. "ಅನುಭವಾವಸಾನತ್ವಾತ್" ಅನುಭವದಲ್ಲಿ ಪರ್ಯವಸಾನ ಆಗಬೇಕೆಂದು ಶ್ರುತಿ ಡಂಗೂರ ಹಾಕಿ ಹೇಳುತ್ತದೆ. ವೇದಾಂತ ವಿಚಾರದಲ್ಲಿ ಜೀವತತ್ತ್ವ-ಪ್ರಪಂಚತತ್ತ್ವ-ಈಶ್ವರತತ್ತ್ವ-ಜ್ಞಾನತತ್ತ್ವ- ನೀತಿತತ್ತ್ವ- ಧರ್ಮತತ್ತ್ವ-ಉಪಾಸನಾತತ್ತ್ವ-ಪುರುಷಾರ್ಥತತ್ತ್ವ ಇಂಥ ಅಮೋಘವಾದ ವಿಷಯಗಳೆಲ್ಲ ಅಡಕವಾಗಿವೆ ಎಂಬುದನ್ನು ಗಮನಿಸಬೇಕು. ವೇದಾಂತವು ತತ್ತ್ವಗಳ ನಿಜ ಸ್ವರೂಪವನ್ನು ನಿರ್ಧಾರ ಮಾಡುವ ದರ್ಶನವೇ, ತರ್ಕಶಾಸ್ತ್ರವಲ್ಲ, ವ್ಯಕ್ತಿಗತ ಅನುಭವದ ಮೇಲೆ ಆಧಾರಪಟ್ಟಿದ್ದಲ್ಲ. ಅಧ್ಯಾತ್ಮವಿಚಾರಕ್ಕೆ ಅನುಭವವೇ ಕಡೇ ಮಜಲಾದುದರಿಂದ ಅನುಭವಾನುಸಾರವಾಗಿ ವಿಚಾರ ಮಾಡುವ ಶಕ್ತಿ ಮತ್ತು ತೀವ್ರ ಇಚ್ಛೆ ಅತ್ಯಾವಶ್ಯಕವು.

|| ಓಂ ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂಗಮಯ - ಓಂ ಶಾಂತಿಃ ಶಾಂತಿಃ ಶಾಂತಿಃ ||

★★★★

## ಅಭಿನವಶಂಕರ ನಮೋ ನಮಃ

ವೇ|| ಬಿ. ವೆಂಕಟರಾಮ ಶರ್ಮ, 'ಶ್ರೀಷ', 545ಡಿ, 7ನೇ ಬ್ಲಾಕ್, ರೂಪನಗರ,
ಮೈಸೂರು - 570 005. ದೂ : 0821-2598400

ಶ್ರೀಮದಭಿನವಶಂಕರರೆಂದು ಸುಖ್ಯಾತನಾಮರಾಗಿರುವ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಅಧ್ಯಾತ್ಮಪಿಪಾಸುಗಳೆಲ್ಲರಿಗೂ ಸದ್ಗುರುವಾಗಿರುವರು. ಯಸ್ಯದೇವೇ ಪರಾಭಕ್ತಿಃ ಯಥಾದೇವೇ ತಥಾಗುರೌ । ತಸ್ಯೈತೇ ಕಥಿತಾಃ ಹ್ಯರ್ಥಾಃ ಪ್ರಕಾಶಂತೇಃ ಮಹಾತ್ಮನಃ || (ಶ್ವೇತಾಶ್ವತರ ಉಪನಿಷತ್ತು 6-23) ಎಂದರೆ ಯಾರಿಗೆ ಪರಮೇಶ್ವರನಲ್ಲಿ ಹಾಗೆ ಗುರುವಿನಲ್ಲಿಯೂ ಪರಾಭಕ್ತಿಯಿರುವದೊ, ಅಂಥ ಮಹಾತ್ಮರು ಹೇಳಲ್ಪಟ್ಟ ಅರ್ಥಗಳು ಸ್ವಾನುಭವಕ್ಕೆ ಬರುತ್ತವೆ.

ತಮ್ಮ ದರ್ಶನಕ್ಕಾಗಿ ಬಂದವರಲ್ಲಿ ಭಕ್ತಿ ಶ್ರದ್ಧೆಗಳು ಬೆಳೆಯುವಂತೆ ಮಾಡಿದ್ದು ಮಾತ್ರವಲ್ಲದೆ, ಅವರಲ್ಲೂ ಸಂಪ್ರದಾಯಬದ್ಧವಾದ ಪರಿಶುದ್ಧವಾದ ವೇದಾಂತವು ಪ್ರಕಾಶವಾಗುವಂತೆ ಮಾಡುತ್ತಿದ್ದರು, ಅಧ್ಯಾತ್ಮಪಥದಲ್ಲಿನ ದಿವ್ಯ ದಾರಿದೀಪವಾದರು. ಪ್ರತಿಯೊಬ್ಬರೂ ಬ್ರಹ್ಮಜ್ಞಾನಿಗಳಾಗಬೇಕೆಂಬ ಅವರ ಸತ್ಸಂಕಲ್ಪವು ಅಮೋಘವಾ

ದುದು. ಅವರು ಅಪ್ರತಿಮ ಜ್ಞಾನಜ್ಯೋತಿಯಾದುದರಿಂದಲೇ ಅವರು ಆರಂಭಿಸಿದ ಅಧ್ಯಾತ್ಮಪ್ರಕಾಶಮಾಸಪತ್ರಿಕೆಯು ಎಲ್ಲರ ಮನೆ ಮನಗಳನ್ನು ಬೆಳಗುತ್ತಲಿರುವದು.

ಸದ್ಗುರುವಿನ ಸದುಪದೇಶದಂತೆ ಸನ್ಮಾರ್ಗದಲ್ಲಿ ನಡೆಯುತ್ತಿರುವವರಿಗೆ ಸಾಕ್ಷಾತ್ಕಾರ ಪಥದಲ್ಲಿ ಎಡರುತೊಡರುಗಳಿರುವುದಿಲ್ಲ. ಶ್ರೀ ಗುರುವಾಕ್ಯವೇ ವೇದ ವಾಕ್ಯವೆಂದು ತಿಳಿದು ಶ್ರದ್ಧೆಯಿಂದ ಬಾಳುವವರ ಬಾಳು ಬೆಳಕಿನಮಯವಾಗುವದು. ಜೀವನ್ಮುಕ್ತ ಗುರುವು ಜಗತ್ತಿನ ವರಪ್ರಸಾದ. ಆ ಗುರುವು ಹೃದಯಕಮಲದಲ್ಲಿ ಹಚ್ಚಿಟ್ಟ ಅಧ್ಯಾತ್ಮಜ್ಯೋತಿಯು ಎಂದೆಂದೂ ಆಲಸ್ಯದಿಂದ ಅಸ್ತಮಿಸದಂತೆ ಎಚ್ಚರಿಕೆ ವಹಿಸಿ, ನಿತ್ಯಾನುಸಂಧಾನದಿಂದ, ಜ್ಞಾನಪ್ರಸಾರ ಮಾಡುವದರಿಂದ ಶಿಷ್ಯರ ಜನ್ಮ ಸಾರ್ಥಕ ವಾಗುವದು. ಗುರುವಿನಂತೆ ಬ್ರಹ್ಮಜ್ಞನಾಗಿ ಗುರುವಾಗಿ ಪೂಜ್ಯನಾಗುವನು.

ಯಾರ ಸತ್ಸಂಗದಿಂದ ನಾವು ಪ್ರಗತಿಶೀಲರಾಗುವೆವೋ, ಯಾರ ಸರಳ ಸ್ವಭಾವವನ್ನು ಅರಿತು ಆಚರಣೆಯಲ್ಲಿ ತರುವೆವೋ, ದುರಭಿಮಾನ, ಸ್ವಾರ್ಥ, ಸಂಕುಚಿತ ಪ್ರವೃತ್ತಿಗಳಿಗೆ ಅವಕಾಶ ಕೊಡುವುದಿಲ್ಲವೋ ಆಗ ಆ ಆಕಾರರಹಿತನಾದ ದಯಾಸಾಗರನಾದ, ದೇವ ದೇವತೆಗಳಿಗಿಂತಲೂ ಮಿಗಿಲಾದ, ನಿಷ್ಕಾಮ, ಪ್ರೇಮ ಮಯಿ, ಸತ್ಯನಿಷ್ಠ ಸದ್ಗುರು ಸಚ್ಚಿದಾನಂದೇಂದ್ರಸರಸ್ವತಿಯ ಆಶೀರ್ವಾದವು ಇದ್ದೇ ಇರುವುದು.

★★★★

## ಉತ್ತಮ ಬೋಧಕ

(ಬ್ರಹ್ಮಜ್ಞಕವಿ ದೇವರಾಯ ಕುಲಕರ್ಣಿಗಳು)

ಹೊರಗಿನ ವಸ್ತುಗಳನ್ನು ಇಂದ್ರಿಯ-ಮನಸ್ಸು-ಬುದ್ಧಿಗಳಿಂದ ವಿಷಯೀಕರಿಸಿ ಅರಿಯುವಂತೆ ಅಥವಾ ಸುಖ ದುಃಖಗಳನ್ನು ಅನುಭವಿಸಿ ಅರಿಯುವಂತೆ ಈ ಆತ್ಮನನ್ನು ಅರಿಯಲಾಗುವುದಿಲ್ಲ. ಏಕೆಂದರೆ ಅರಿಯುವವನ ನಿಜಸ್ವರೂಪವೇ ಈ ಆತ್ಮನು. ಇಂದ್ರಿಯ-ಮನಸ್ಸು-ಬುದ್ಧಿಗಳಿಂದ ವಿಷಯೀಕರಿಸಿ ಅಥವಾ ಸುಖ ದುಃಖಗಳಂತೆ ಅನುಭವಿಸಿ ಈ ಆತ್ಮನನ್ನು ಅರಿಯಲಾಗುವುದಿಲ್ಲ, ಇವೆಲ್ಲವುಗಳನ್ನೂ ಬೆಳಗುವ ನಿತ್ಯಾನುಭವ ಸ್ವರೂಪನಾಗಿಯೇ ತಾನಿರುವುದನ್ನು ಅನುಭವದಲ್ಲಿ ಕಂಡುಕೊಳ್ಳುವುದೇ 'ಆತ್ಮನನ್ನರಿಯುವುದು' ಎಂಬ ಮಾತಿಗೆ ಅರ್ಥ. ಈ ರಹಸ್ಯವನ್ನು ಒಬ್ಬ ವಿದೇಶಿ ಭಕ್ತನಿಗೆ ಶ್ರೀಶ್ರೀಗಳು ಹೇಳಿದರು :- **We have to intuit that the Self is neither objectifiable nor experienceable by any means. This is called Self- knowledge.**

ನಿದ್ರೆಯಲ್ಲಿ ತ್ರಿಪುಟಿ ಇದೆ ಎಂಬುದು ನಮ್ಮ ಮತವು ಎಂಬುದಾಗಿ ಶ್ರೀಗಳವರಿಗೆ ಹೇಳಿದರಂತೆ ಒಬ್ಬ ಶಾಸ್ತ್ರಿಗಳು. ನಿಮ್ಮ ಮತವು ಹೇಗೂ ಇರಲಿ. ನಿಮ್ಮ ಅನುಭವವೋ ? ಎಂದರಂತೆ ಶ್ರೀಗಳವರು. ಶಾಸ್ತ್ರಿಗಳು ಸುಮ್ಮನಾದರು.

ಮತ್ತೆ ಬೋಧಕನಿಲ್ಲ। ತತ್ತ್ವಕ್ಕನನ್ಯದಲ್ಲಿ। ನಿತ್ಯವೂ ನಿಂತು ಬೋಧಿಸಲು ಕೇಳುವವನಾತ್ಮನೇ ಅಕ್ಕು। ಬ್ರಹ್ಮಜ್ಞ॥ ಹೊರಗೆ ಜಗಕಂಡರೂ ಕರಣಮನವಿದ್ದರೂ। ಅರಿವಿನಲಿ ಮತ್ತೆ ಕರಗಿಸುತೆ ತಾನಾಗಿ ಇರಲು ಪರಿಪಾಕ। ಬ್ರಹ್ಮಜ್ಞ॥

★★★★

## ತಿಳಿದದ್ದು ಹೇಗೆ ?

### (ಬ್ರಹ್ಮಜ್ಞಕವಿ ದೇವರಾಯ ಕುಲಕರ್ಣಿಗಳು)

ದಾವಣಗೆರೆಯಲ್ಲಿ 1966ರಲ್ಲಿ ಶಂಕರ ಸಪ್ತಾಹಕ್ಕೆ ಪೂರ್ವಾನುಭಾವಿಯಾಗಿ 11 ದಿನ ಶ್ರೀ ಶ್ರೀಗಳವರ ಉಪನ್ಯಾಸಗಳು ನಡೆದಿದ್ದವು. ಅನೇಕ ವಿಷಯಗಳನ್ನು ಹೇಳಿದ ಬಳಿಕ ಒಂದುದಿನ ಸಭಿಕರನ್ನುದ್ದೇಶಿಸಿ ಶ್ರೀಶ್ರೀಗಳು ಹೇಳಿದ್ದೇನೆಂದರೆ : ನೀವು ನನಗೆ ಹೇಳಿರಿ ಏನೆಂದರೆ - "ಸ್ವಾಮಿ ತಾವು ಏನೇನೋ ದೊಡ್ಡ ದೊಡ್ಡ ವಿಷಯಗಳನ್ನು ಹೇಳಿದಿರಿ. ಆದರೆ ಅವು ನಮ್ಮ ಬುದ್ಧಿಗೆ ಹೊಳೆಯಲಿಲ್ಲ. ಒಂದೇ ಮಾತೆಂದರೆ ನೀವು ಹೇಳಿದ್ದು ನಮಗೇನೂ ತಿಳಿಯಲಿಲ್ಲ" ಎಂದು ಹೇಳಿರಿ. ಇದಕ್ಕೆ ನನ್ನ ಪ್ರಶ್ನೆ ಏನೆಂದರೆ ನಾನು ಹೇಳಿದ್ದು ನಿಮಗೆ ತಿಳಿಯಲಿಲ್ಲ ಅರ್ಥಾತ್ ನಮ್ಮ ಬುದ್ಧಿಗೆ ಹೊಳೆಯಲಿಲ್ಲ ಎಂಬುದು ನಿಮಗೆ ಏತರಿಂದ ಗೊತ್ತಾಯಿತು ? ನೀವು ಅದು ನಮ್ಮ ಅನುಭವ ಎಂದಿರಲ್ಲವೆ ? ಯಾವ ಅನುಭವದ ಬೆಳಕಿನಲ್ಲಿ ನಮ್ಮ ಬುದ್ಧಿಗೆ ಈ ವಿಷಯ ಹತ್ತಲಿಲ್ಲ ಎಂಬುದನ್ನು ಕಂಡುಕೊಳ್ಳುತ್ತಿರುವಿರೋ ಆ ಅನುಭವದ ಸ್ವರೂಪವಾದ ನಿಮ್ಮ ನಿಜವನ್ನೇ ಕುರಿತು ನಾನು ಈವರೆಗೆ ಹೇಳಿದ್ದೇನೆ.

ಒಟ್ಟಿನಲ್ಲಿ "ನನಗೆ ತಿಳಿಯಿತು, ನನಗೆ ತಿಳಿಯಲಿಲ್ಲ" ಎಂಬೆರಡೂ ಯಾವ ಅನುಭವಕ್ಕೆ ಗೋಚರವಾಗುವವೋ ಆ ಅನುಭವ ಸ್ವರೂಪವೇ ನೀವು. ಅದೇ ಆತ್ಮ. ಅಲ್ಲಿ ಜ್ಞಾನ ಅಜ್ಞಾನ ಎಂಬ ವ್ಯವಹಾರಗಳಿಲ್ಲ. ಹೀಗೆ ತಿಳಿಯಲಾಗದ ಆತ್ಮತತ್ತ್ವವನ್ನು ಉಪಾಯಾಂತರದಿಂದ ಸುಲಭವಾಗಿ ಸಾಮಾನ್ಯರಿಗೂ ತಿಳಿಯುವಂತೆ ಹೇಳುವ ಕುಶಲತೆಯು ಅನುಭಾವಿಗಳಾದ ಸ್ವಾಮಿಗಳವರಿಗೆ ಕರತಲಾಮಲಕವಾಗಿತ್ತು

ಅರಿವಿಲ್ಲ ನನಗೆಂಬ। ಅರಿವೆ ನಮ್ಮೊಳು ಸಾಕ್ಷಿ। ಅರಿಯಲ್ಕೆ ಮತಿಗೆ ಬಂತೀಗ ಜ್ಞಾನವೆಂಬರಿವು । ಸಹಸಾಕ್ಷಿ ಬ್ರಹ್ಮಜ್ಞ॥ ಬೊಮ್ಮವನು ತಿಳಿದವನು ಬೊಮ್ಮವೇ ಆಗುವನು ಬೊಮ್ಮಕ್ಕೆ ಜ್ಞಾನವಜ್ಞಾನ ಸವನಿಪುದೆ ? ಸುಮ್ಮನಾರೋಪ। ಬ್ರಹ್ಮಜ್ಞ॥

ಫ್ರಾನ್ಸ್‌ದೇಶದ ಶ್ರೀ ಯಾನ್‌ರವರು ವ್ಯವಸ್ಥಿತವಾದ ಹತ್ತಾರು ಫೈಲುಗಳನ್ನಿಟ್ಟು ಕೊಂಡು ಪ್ರತಿಯೊಂದು ವಿಷಯವನ್ನೂ ಕೇಳಿದ ನಂತರ 'ನೋಟ್' ಮಾಡಿಕೊಳ್ಳು ತ್ತಾರೆ. ಯಾವದೇ ವಿಚಾರವನ್ನು ಹೇಳಿದರೂ ಬಹಳ ಚೆನ್ನಾಗಿ ಕೂಲಂಕಷವಾಗಿ ವಿಚಾರಿಸಿ ನಿರ್ಣಯಿಸಿ ಇವರು ತಿಳಿದುಕೊಳ್ಳುತ್ತಾರೆ. ಈ ಪಾಠಗಳ ಸಂದರ್ಭದಲ್ಲಿ ಶ್ರೀ ಯಾನ್‌ರವರು ತೆಗೆದ ಉದ್ಗಾರಗಳು ಹೀಗಿರುತ್ತವೆ (1) ಶ್ರೀಶ್ರೀಸಚ್ಚಿದಾ ನಂದೇಂದ್ರಸರಸ್ವತೀಸ್ವಾಮಿಗಳವರ ಬೋಧನ ಕ್ರಮವು ಮೂಲಭೂತವಾದದ್ದಲ್ಲ ; ಇವರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಎಳೆದುಕೊಂಡು ಶಾಂಕರಭಾಷ್ಯಗಳನ್ನು ವಿವರಿಸುತ್ತಿದ್ದಾರೆ ; ಏಕೆಂದರೆ ನಾನು ಭಾರತದಲ್ಲಿ ಸಂಚಾರಮಾಡಿದಾಗ ಎಲ್ಲಿಯೂ ಈ ವಿಚಾರಸರಣಿಯು ಕಂಡುಬರಲಿಲ್ಲ, ಆದ್ದರಿಂದ ಇದು ಸರಿಯಲ್ಲವೇನೊ, ಎನಿಸಿತ್ತು, ಆದರೆ ಶ್ರೀಗಳವರ ಪ್ರಕ್ರಿಯೆಯೇ ಶಂಕರರ ನಿಜವಾದ ಉಪದೇಶ ; ಇದೇ ವೇದಾಂತದ ಮೂಲತತ್ತ್ವ ಎಂದು ಈಗ ನನಗೆ ಚೆನ್ನಾಗಿ ಮನವರಿಕೆಯಾಗಿದೆ. (2) ವೇದಪ್ರಾಮಾಣ್ಯವನ್ನೂ ಉಪನಿಷದ್ವಾಕ್ಯಗಳ ಸಮನ್ವಯದಿಂದಲೇ ಆತ್ಮಸ್ವರೂಪ ನಿರ್ಧಾರಣೆಯನ್ನು ಮಾಡಿಕೊಳ್ಳಬೇಕೆಂಬುದನ್ನೂ ಈವರೆಗೂ ನಾನು ಮತಧರ್ಮ ಗಳ ಉಪದೇಶಗಳಂತೆ ನಂಬಿಕೆಯಿಂದ ಮಾತ್ರವೇ ಒಪ್ಪಿಕೊಳ್ಳಬೇಕೆಂದು ತಿಳಿದಿದ್ದೆನು. ಆದರೆ ವಾಕ್ಯಾರ್ಥದಿಂದ ನಿರ್ಣಯಿಸಲ್ಪಟ್ಟ ಬ್ರಹ್ಮಾವಗತಿಪರ್ಯಂತವಾಗಿರುವ ತತ್ತ್ವ ಜ್ಞಾನವು ಸಾರ್ವತ್ರಿಕ ಪೂರ್ಣಾನುಭವರೂಪವಾಗಿದ್ದು ಕೊಂಡಿರುವದೆಂದೂ ಇದು ಕೇವಲ ನಂಬಿಕೆಯ ತೀರ್ಮಾನಮಾತ್ರವಲ್ಲವೆಂದೂ ಈಗ ಮನವರಿಕೆಯಾಗಿದೆ. (3) ವೇದಾಂತಶಾಸ್ತ್ರವು ಉಪದೇಶಕ್ಕಾಗಿ ಅಂಗೀಕರಿಸಿರುವ ಅಧ್ಯಾರೋಪಾಪವಾದ ಪ್ರಕ್ರಿಯೆಯು ಧಾರ್ಮಿಕ ಪ್ರಪಂಚಕ್ಕೂ ಆಧಾರಸ್ತಂಭವಾಗಿದೆ. ಏಕೆಂದರೆ ಮತಧರ್ಮಗಳನ್ನೆಲ್ಲ ಮೂಢ ನಂಬಿಕೆಗಳೆಂದು ಜರಿಯುವವರು ಕೂಡ ಈ ಪ್ರಕ್ರಿಯೆಯ ಮೂಲಕ ಪ್ರತ್ಯಗಾತ್ಮನ ಸ್ವರೂಪದ ಕಡೆಗೆ ಲಕ್ಷ್ಯವಿಟ್ಟಾಗ ಉಂಟಾಗುವ ಸ್ವಾನುಭವದ ನಿಮಿತ್ತವಾಗಿ ವೇದಾಂತಕ್ಕೆ ಶರಣಾಗಲೇಬೇಕಾಗುವದು. ಆಗ ಶಾಂತಿ, ಸುಖಗಳ ಸಾಧನೆಗೂ ಐಹಿಕಪ್ರಯೋಜನಗಳಿಗೂ ವೇದಾಂತವೇ ಮತಧರ್ಮಗಳ ಮೂಲಕವೂ ಉಪಕಾರಿಯಾಗಿರುವದೆಂದು ತಾನೇ ಗೊತ್ತಾಗಲಿದೆ. ಇಂಥ ದೃಷ್ಟಿಕೋನವು ಶ್ರೀಶ್ರೀಗಳವರ ತಪಸ್ಸು ಹಾಗೂ ಚಿಂತನೆಯ ಫಲವಾಗಿಯೇ ಹೊರಬಂದಿದೆ.

# ವ್ಯಕ್ತಿ ವಿಶಿಷ್ಟರು

## ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

(ಶ್ರೀ ಡಿ.ವಿ. ಗುಂಡಪ್ಪ)

ಶ್ರೀ ಶ್ರೀಗಳವರನ್ನು ಅವರ ಪೂರ್ವಾಶ್ರಮದ ಕಾಲದಿಂದ ತಿಳಿದಿರುವವರಲ್ಲಿ ನಾನೂ ಒಬ್ಬ. ಆಗ-ಈಗ ಸುಮಾರು 50 ವರ್ಷಗಳ ಹಿಂದೆ - ಶ್ರೀ ಶ್ರೀಗಳವರು ಯಳ್ಳಂಬಳಸೆ ಸುಬ್ರಹ್ಮಣ್ಯಶರ್ಮಾ ಎಂದು ಸುವಿಖ್ಯಾತರಾಗಿ ಬೆಂಗಳೂರು ಕೋಟೆ ಯಲ್ಲಿದ್ದ ಶ್ರೀ ಚಾಮರಾಜೇಂದ್ರ ಸಂಸ್ಕೃತಪಾಠಶಾಲೆಯ ಇಂಗ್ಲಿಷ್ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಆಗ ಆ ಕಾಲೇಜು ಟಿಪ್ಪೂಸುಲ್ತಾನ್ ಅರಮನೆಗೆದುರಾಗಿ ಈಗ ಚಂದ್ರಶೇಖರಯ್ಯರ್ ಪಾರ್ವತಮ್ಮ ಜ್ಞಾಪಕಾರ್ಥವಾದ ಪ್ರಸೂತಿ ಆಸ್ಪತ್ರೆಯಿರುವ ಜಾಗದಲ್ಲಿ ಇತ್ತು. ಮತ್ತು ಆಗ ಅದರಲ್ಲಿ ಸ್ವಲ್ಪ ಮಟ್ಟಿಗೆ ಸ್ಕೂಲ್ ರೀತಿಯ ಇಂಗ್ಲಿಷ್ ಪಾಠವೂ ನಡೆಯುತ್ತಿತ್ತು. ಶ್ರೀ ಸುಬ್ರಹ್ಮಣ್ಯ ಶರ್ಮಾರವರು ಒಳ್ಳೆಯ ಬೋಧಕರೆಂದು ಹೆಸರಾಗಿತ್ತು. ನಾನು ನನ್ನ ಚಿರಂಜೀವಿ ಒಬ್ಬ ಹುಡುಗನನ್ನು ಅಲ್ಲಿಗೆ ಸೇರಿಸಬೇಕೆಂದು ದ್ದೇಶಿಸಿ ಹೋಗಿದ್ದಾಗ ಪ್ರಾರಂಭವಾದದ್ದು ನಮ್ಮ ವ್ಯಕ್ತಿ ಪರಿಚಯ.

ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಉಪಾಧ್ಯಾಯರಾಗಿದ್ದ ಶ್ರೀ ಕೃಷ್ಣಸ್ವಾಮಿ ಐಯ್ಯರ್‌ರಲ್ಲಿಗೆ ನಾನು ಆಗಾಗ ಹೋಗಿ ಬರುತ್ತಿದ್ದುದುಂಟು. ಅವರು ಅತ್ಯಂತ ಗೌರವನ್ನಿಟ್ಟಿದ್ದ ಗಾಢಮಿತ್ರರಾದ, ಶ್ರೀ ಸುಬ್ರಹ್ಮಣ್ಯ ಶರ್ಮಾರವರ ವಿಷಯ ಶ್ರೀ ಕೃಷ್ಣಸ್ವಾಮಿಅಯ್ಯರ್ ಮೂಲಕ ನನಗೆ ತಿಳಿದುಬಂತು. ನಾನು ಬ್ರಹ್ಮಶ್ರೀ ವಿರೂಪಾಕ್ಷ ಶಾಸ್ತ್ರಿಗಳಲ್ಲಿ ಶಂಕರಭಾಷ್ಯ ವ್ಯಾಸಂಗಿಯಾಗಿದ್ದಾಗ ಶ್ರೀ ಕೃಷ್ಣಸ್ವಾಮಿ ಐಯ್ಯರವರು ನನ್ನನ್ನು ಆಗಾಗ್ಗೆ ಆ ವಿಷಯವಾಗಿ ಪ್ರಶ್ನೆ ಮಾಡುವರು. ಮಧ್ಯೆ ಮಧ್ಯೆ ಚರ್ಚೆಗಳೆದ್ದಾಗ ಅವರು ಶ್ರೀ ಸುಬ್ರಹ್ಮಣ್ಯ ಶರ್ಮಾರವರ ವಾದ ವಿವರಣೆಗಳನ್ನು ಉದಾಹರಣೆಯಾಗಿ ಹೇಳುವರು. ಈ ರೀತಿ ಬೆಳೆಯಿತು, ನನಗೆ ಶ್ರೀ ಶ್ರೀಗಳವರ ವಿಷಯದಲ್ಲಿ ಮೆಚ್ಚುಗೆ. ಅಲ್ಲಿಂದ ಶ್ರೀಶ್ರೀಗಳವರು ಸಂನ್ಯಾಸ ಸ್ವೀಕಾರ ಮಾಡಿದ ಮೇಲೆ ನಾನು ಸನ್ನಿಧಾನಕ್ಕೆ ಹೋಗಿ ಬರುವುದು ಹೆಚ್ಚಾಯಿತು. ಶ್ರೀ ಸನ್ನಿಧಾನದ ಕೃಪೆ ನನ್ನಲ್ಲಿ ಇದ್ದದ್ದು ನನಗೆ ಒಂದು ಮಹಾಭಾಗ್ಯವಾಗಿತ್ತು.

ಶ್ರೀ ಶ್ರೀಗಳವರಲ್ಲಿ ಮೆಚ್ಚತಕ್ಕದ್ದು ಅವರ ಆಶ್ರಮ ಸ್ವೀಕಾರವೊಂದೇ ಅಲ್ಲ. ಅವರ ಪಾಂಡಿತ್ಯ ಅದ್ಭುತವಾದದ್ದು. ಸಂಸ್ಕೃತ, ಸಾಹಿತ್ಯ, ವ್ಯಾಕರಣ ಮೊದಲಾದ ಭಾಗಗಳಲ್ಲಿಯೂ, ತರ್ಕ, ಮೀಮಾಂಸಾದಿಗಳಲ್ಲಿಯೂ ಅವರಿಗಿರುವ ಪಾಂಡಿತ್ಯ

ಪ್ರಮಾಣ ಭೂತವಾದದ್ದೆಂದು ತಕ್ಕ ಅಧಿಕಾರಿಗಳಾದ ಪಂಡಿತರು ನನ್ನೊಡನೆ ಹೇಳಿದ್ದಾರೆ. ಶ್ರೀ ಸ್ವಾಮಿಗಳ ಕರ್ಮನಿಷ್ಠೆ, ಆಶ್ರಮ ನಿಷ್ಠೆಗಳು ಸರ್ವಪೂಜ್ಯವಾಗಿವೆ. ಅವರ ಪ್ರವಚನ ಶೈಲಿಯ ಸೊಗಸನ್ನು ನಾನು ಮಾತಿನಿಂದ ವರ್ಣಿಸಲಾರೆ. ಅವರ ಉಪನ್ಯಾಸಗಳು ವಿಶದವಾಗಿ, ಮನೋರಂಜಕವಾಗಿ ಎಲ್ಲರಿಗೂ ಮನಸ್ಸಿನ ಒಳಗಡೆ ರುಜುವಾತು ಕೊಡಬಲ್ಲವಾಗಿರುತ್ತವೆ.

ಅವರ ಲೇಖನ ಶೈಲಿಯಲ್ಲಿ ಅಪೂರ್ವವಾದ ವೈವಿಧ್ಯ ಸಾಮಂಜಸ್ಯ, ಮತ್ತು ಬುದ್ಧಿ ಸ್ವಾತಂತ್ರ್ಯಗಳು ಎದ್ದು ಕಾಣುತ್ತವೆ. ಗಂಭೀರವಾದ ಕನ್ನಡ ಶೈಲಿಯನ್ನು ನೋಡ ಬೇಕೆನ್ನುವವರು ಶ್ರೀ ಶ್ರೀಗಳವರ ಲೇಖನಗಳನ್ನು ನೋಡಬೇಕು. ''ಅಧ್ಯಾತ್ಮ ಪ್ರಕಾಶ'' ಪತ್ರಿಕೆಯಲ್ಲಿ ಆಗಾಗ ಸಂಗೀತ ರಚನೆಗಳು ಪ್ರಕಟವಾಗುತ್ತವೆ. ಅವುಗಳಲ್ಲಿ ಅನೇಕ ಸಂಖ್ಯೆಯವು ಶ್ರೀಶ್ರೀಗಳವರ ರಚನೆಯೆಂದು ನನಗನ್ನಿಸುತ್ತದೆ. ಈ ಗೀತೆಗಳು ಭಕ್ತಿ ವೈರಾಗ್ಯ ತತ್ತ್ವಗಳನ್ನು ಬೋಧಿಸುತ್ತವೆ. ಪಂಕ್ತಿಗಳು ಶ್ರುತಿಹಿತವಾಗಿ, ತಾಳಲಯ ಬದ್ಧವಾಗಿ, ಅರ್ಥಸ್ವಾರಸ್ಯದಿಂದ ಕೂಡಿರುತ್ತವೆ.

ಎಲ್ಲ ಗ್ರಂಥಗಳೂ ಸ್ವಾಮಿಗಳವರ ಗಾಢವಾದ ಸ್ವತಂತ್ರ ವಿಚಾರ ಪ್ರವೃತ್ತಿಯನ್ನು ತೋರಿಸುತ್ತವೆ. ಇದಕ್ಕೆ ಅವರ ''ಶ್ರೀ ಶಂಕರ ಭಗವತ್ಪಾದ ವೃತ್ತಾಂತ ಸಾರ ಸರ್ವಸ್ವ'' ಎಂಬ ಗ್ರಂಥ ನಿದರ್ಶನವಾಗಿದೆ. ಆ ಗ್ರಂಥದಲ್ಲಿ ಅವರು ಶ್ರೀ ಶಂಕರಾಚಾರ್ಯರನ್ನು ಕುರಿತು ಇದುವರೆಗೆ ದೊರೆತಿರುವ ನಾನಾ ಗ್ರಂಥಗಳನ್ನು ವಿಮರ್ಶೆಮಾಡಿ, ಈ ನಾನಾ ಕಥೆಗಳಲ್ಲಿರುವ ಸಾರವನ್ನು ಸಂಗ್ರಹಿಸಿ, ಒಂದು ಮಹೋಪಕಾರ ಮಾಡಿದ್ದಾರೆ. ನ್ಯಾಯವಾಗಿ ಈ ಗ್ರಂಥ ಅಕ್ಯಾಡಮಿಗಳ ಗಮನಕ್ಕೆ ಬಂದು ಗೌರವ ಪಡೆಯ ಬೇಕಾದದ್ದಾಗಿದೆ.

ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಶ್ರೀಶ್ರೀಗಳವರು ಶಸ್ತ್ರ ಚಿಕಿತ್ಸೆಗಾಗಿ ಒಂದು ಚಿಕಿತ್ಸಾಲಯವನ್ನು ಸೇರಬೇಕಾಗಿತ್ತಷ್ಟೆ ? ಅಲ್ಲಿಂದ ಅವರು ಸ್ಥಾನಕ್ಕೆ ಹಿಂತಿರುಗಿದ ಬಳಿಕ ಮತ್ತು ಹದಿನೈದು ದಿವಸವಾದ ಮೇಲೆ ನಾನು ದರ್ಶನಕ್ಕೆಂದು ಹೋಗಿದ್ದೆ. ಆಗ ಬಸವನಗುಡಿಯಲ್ಲಿ ಎಲ್. ಶ್ರೀನಿವಾಸಯ್ಯಂಗಾರ್ಯರದೆಂದು ಹೆಸರಾಗಿದ್ದ ದೊಡ್ಡ ಮನೆಯಲ್ಲಿದ್ದರು. ಹೊತ್ತು ಬಹುಶಃ ಮೂರುವರೆ-ನಾಲ್ಕು. ನಾನು ಅಲ್ಲಿಗೆ ಹೋಗಿದ್ದನ್ನು ಶ್ರೀಗಳವರು ಕೇಳಿ ನನ್ನನ್ನು ಅನುಗ್ರಹಿಸಲು ತಾವಿದ್ದ ಕೋಣೆಯಿಂದ ಹೊರಕ್ಕೆ ಕುಳಿತು ದೇಕಿಕೊಂಡೇ ಬಂದರು. ದೇಹ ದುರ್ಬಲ ವಾಗಿತ್ತು, ಆದರೆ ಮುಖ ಮುಗುಳ್ನಗೆಯಿಂದ ಕೂಡಿತ್ತು. ನಾನು ಆ ಹಜಾರದಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಸಣ್ಣ ಬೂದಿರಾಶಿಗಳ ಕಡೆಗೆ ಕಣ್ಣು ಹೊರಳಿಸಿದೆ. ಶ್ರೀಗಳವರು ನನ್ನ

ಇಂಗಿತವನ್ನು ಗ್ರಹಿಸಿ ಹೇಳಿದರು : "ಆಸ್ಪತ್ರೆಯಿಂದ ಬಂದ ಮೇಲೆ ಪಂಚಗವ್ಯ ಮಾಡಿಕೊಂಡದ್ದಾಯಿತು ; ಹೋಮಮಾಡಿದ್ದಾಯಿತು. ಅದರದು ಈ ಬೂದಿ."

ಈ ಸಂಗತಿಯನ್ನು ಇಲ್ಲಿ ಹೇಳಿರುವುದೇತಕ್ಕೆಂದರೆ, ಸ್ವಾಮಿಗಳವರ ಶಾಸ್ತ್ರ ಶ್ರದ್ಧೆಯನ್ನು ತೋರಿಸುವುದಕ್ಕಾಗಿ. ತಮ್ಮ ಸಂಸ್ಕಾರೋಪಾಸನ ಕ್ರಮದಲ್ಲಿ ಸ್ವಾಮಿಗಳವರು ಜ್ಞಾನ ಭಕ್ತಿ ಕರ್ಮಗಳನ್ನು ಸಮನ್ವಯ ಮಾಡಿಕೊಂಡಿದ್ದಾರೆ. ಇದು ನಮ್ಮಲ್ಲಿ ಪ್ರಬಲವಾಗಿದ್ದ ಒಂದು ಪ್ರಶ್ನೆಗೆ ಸರ್ವಸಮಾಧಾನಕರವಾದ ಉತ್ತರ : ಭಕ್ತಿ ಕರ್ಮಾನುಷ್ಠಾನಗಳನ್ನು ಬಿಟ್ಟು ಜ್ಞಾನವಿಲ್ಲ. ಶ್ರೀಗಳವರಲ್ಲಿ ಜ್ಞಾನ-ಕರ್ಮ-ಭಕ್ತಿಗಳು ತೀರಾ ಬೇರೆ ಬೇರೆಯಾಗಿ ಅಸಂಬದ್ಧಗಳಾಗಿರು ವವುಗಳಲ್ಲವೆಂದು ಅವರ ಆಚಾರ ಅನುಷ್ಠಾನಗಳಿಂದ ಚೆನ್ನಾಗಿ ತೋರಿಬರುತ್ತದೆ. ಜೀವಕ್ಕೆ ಸಂಸ್ಕಾರವಾಗಬೇಕಾದದ್ದು ಮುಖ್ಯ. ಅದನ್ನು ಯಾರೂ ಬಿಡತಕ್ಕದ್ದಲ್ಲವೆಂಬುದು ಶ್ರೀಗಳವರಿಂದ ಬೋಧ್ಯವಾಗಿದೆ.

★ ★ ★ ★

ಶ್ರೀ ಭಗವದ್ಗೀತೆಯನ್ನು ಕುರಿತು ಉಪನ್ಯಾಸಮಾಡಹೊರಡುವವರಿಗೆ ಮೂರು ಬಗೆಯ ಅರ್ಹತೆ ಆವಶ್ಯಕವೆಂದು ನನಗನ್ನಿಸುತ್ತದೆ. 1) ಶಾಸ್ತ್ರಪಾಂಡಿತ್ಯ, 2) ಲೋಕಾನುಭವ, 3) ಅಂತರ್ದೃಷ್ಟಿ.

ಶ್ರೀ ಸ್ವಾಮಿಗಳವರು ಬಹುಶಾಸ್ತ್ರ ನಿಷ್ಣಾತರಾಗಿರುವರೆಂಬುದು ಪ್ರಸಿದ್ಧ ಸಂಗತಿಯಾಗಿದೆ. ವೇದ, ವ್ಯಾಕರಣ, ತರ್ಕ, ಮೀಮಾಂಸಾದಿ ಶಾಸ್ತ್ರಗಳಲ್ಲಿ ಅವರ ಪಾಂಡಿತ್ಯವನ್ನು ಅಳೆಯಲು ಮಾನದಂಡ ನನ್ನಲ್ಲಿಲ್ಲ. ಬಹುಶ್ರುತರೆಂದು ಮಾತ್ರ ಹೇಳಬಲ್ಲೆ. ಮಹಾನುಭಾವರಾದ ಮಧುಸೂದನ ಸರಸ್ವತಿಗಳನ್ನು ಕುರಿತು ಪೂರ್ವಿಕರೊಬ್ಬರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಮಧುಸೂದನಸರಸ್ವತ್ಯಾಃ ಪಾರಂ ವೇತ್ತಿ ಸರಸ್ವತೀ । ಪಾರಂ ವೇತ್ತಿ ಸರಸ್ವತ್ಯಾಃ ಮಧುಸೂದನಸರಸ್ವತೀ ॥

ಶ್ರೀ ಕೃಷ್ಣಸ್ವಾಮಿ ಐಯ್ಯರ್ ಅವರು ಮಹಾಪಂಡಿತರು ; ಮೇಧಾವಿಗಳು ; ವೇದಾಂತಿಗಳು. ಅವರ ಮನೆಯಲ್ಲಿ, ಆಗ ಲೌಕಿಕರಾಗಿದ್ದ ಶ್ರೀಗಳವರ ದರ್ಶನಭಾಗ್ಯ ನನಗೆ ಆಗಾಗ ದೊರೆಯುತ್ತಿದ್ದದ್ದು ನನ್ನ ಪೂರ್ವಪುಣ್ಯದಿಂದ ಎಂದು ತಿಳಿದುಕೊಂಡಿದ್ದೇನೆ. ಆಗಲೂ, ಅಲ್ಲಿಂದೀಚೆಗೆ ಕೆಲವು ವರ್ಷಗಳ ಕಾಲವೂ, ಶ್ರೀಗಳವರು ಗೃಹಸ್ಥರಾಗಿದ್ದು ಕೊಂಡು, ಸದಾಚಾರಶೀಲರಾಗಿ ಸಂಸಾರದ ಕಷ್ಟನಿಷ್ಠುರಗಳನ್ನೂ ತಾಪಕಾರ್ಪಣ್ಯಗಳನ್ನೂ ಸಮಾಹಿತಚಿತ್ತರಾಗಿ ಅನುಭವಿಸಿದ್ದು ನನಗೆ ಗೊತ್ತಿದೆ. ಹೀಗೆ ಅವರಿಗೆ ಲೋಕಾನುಭವ ಆಳವಾಗಿ ದೊರೆತು ಮನುಷ್ಯಜೀವನದ ಎಲ್ಲ ಮುಖಗಳೂ ಪರಿಚಿತವಾಗಿವೆ. ಅರ್ಜುನನು ಅಂಥ

ಲೋಕಾನುಭವಿ, ಲೋಕದ ಕಷ್ಟಗಳ ತಾಪದಲ್ಲಿ ಬೆಂದಿದ್ದವನು. ಅಂತದೃಷ್ಟಿ ಕುರಿತು ನಾನು ಹೇಳಬಹುದಾದ ಮಾತು ಊಹೆಯದು, ಸ್ವಯಮನುಭವದ್ದಲ್ಲ. ಅದು ತಪಸ್ಸಿದ್ಧವಾದ ವರ – ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಈಶ್ವರಾನುಗ್ರಹ ; ಕಲಿತು ಬರುವದಲ್ಲ. ''ಈಶ್ವರಾನುಗ್ರಹಾದೇವ ನೃಣಾಂ ವೇದಾಂತವಾಸನಾ''

ಬಹುಕಾಲದ, ಸಂತತವಾದ, ತಪಸ್ಸಿನ ಫಲವಾಗಿ ಬಹುಶಃ ಮನುಷ್ಯನ ಅಂತರಂಗದಲ್ಲಿ ಒಂದು ಜ್ಯೋತಿಯು, ಒಂದು ತೇಜಸ್ಸಿನ ಅನುಭವವಾಗುತ್ತದೆ. ಈ ಅಂತರಂಗ ಪ್ರಕಾಶದಿಂದಲೇ ತತ್ತ್ವಾನುಭವ, ಅದು ಇಲ್ಲದೆ ಬರಿಯ ಪುಸ್ತಕ ಪಾಂಡಿತ್ಯವಿದ್ದಲ್ಲಿ ಅದರ ಪ್ರಯೋಜನ ಹೊಟ್ಟೆಯಪಾಡಿಗೆ ಆಗಬಹುದು ; ಜೀವನ ಸರ್ವಸ್ವಕ್ಕೂ ಅದು ಆಗಲಾರದು. ಇಂಥ ಮಹಾ ಅಪರೂಪವಾದದ್ದು ಅಂತರ್ದೃಷ್ಟಿ. ಶ್ರೀಗಳವರು ತಪೋನಿಷ್ಠರಾಗಿದ್ದವರು. ಅವರ ವಾಣಿಯಲ್ಲಿ ಅಂತಸ್ತೇಜಸ್ಸು ಪ್ರಕಾಶಿಸುತ್ತದೆ. ಇದು ಲೋಕಕ್ಕೆ ಬೇಕಾದ ಬೆಳಕು.

ಶ್ರೀಗಳವರು ಕೊಡುವ ನಿರ್ಧಾರಣೆಗಳು ವಿಚಾರ ವಿಮರ್ಶೆಯಿಂದ ಸಿದ್ಧವಾದವು. ಬರಿಯ ಕುರುಡು ನಂಬಿಕೆಯ ಅಥವಾ ಕೇವಲ ಸಂಪ್ರದಾಯಾನುಸಾರಿಯಾದ ಮಾತಲ್ಲ. ಅವರ ರೀತಿ ಸ್ವತಂತ್ರಬುದ್ಧಿ ಕ್ರಿಯೆಯದು, ವಿಮರ್ಶನಪೂರ್ವಕವಾದದ್ದು ; ಪೂರ್ವಪಕ್ಷ ಸಮಾಧಾನಗಳ ರೂಪವಾದ ವಾದಕಥೆ ಎಂಬುದು ಅವರ ಇತರ ಲೇಖನಗಳನ್ನು ನೋಡಿದವರಿಗೆ ಗೊತ್ತಾಗದೆ ಇರದು.

ಅವರು ಅನೇಕ ಗ್ರಂಥಗಳನ್ನು ಕನ್ನಡದ ಜನರಿಗೂ, ಕನ್ನಡ ತಿಳಿಯದ ಇಂಗ್ಲಿಷ್ ಬಲ್ಲ ಜನರಿಗೂ, ಸಂಸ್ಕೃತ ಭಾಷಾಪರಿಣತರಾದ ಮಹಾಜನರಿಗೂ ಒದಗಿಸಿ ಕೊಟ್ಟಿದ್ದಾರೆ. ಈ ಮೂರು ಭಾಷೆಗಳಲ್ಲಿಯ ಯಾವ ಗ್ರಂಥವನ್ನು ನೋಡಿದರೂ ಶ್ರೀ ಸ್ವಾಮಿಗಳವರ ದಾರಿ ವಿಚಾರದ್ದೆಂಬುದು ಚೆನ್ನಾಗಿ ವ್ಯಕ್ತಪಡುತ್ತದೆ. ಶ್ರೀ ಸ್ವಾಮಿಗಳವರ ಸಾಧನ ವಿಚಾರ ರೂಪವಾದದ್ದು, ಆದರೆ ಶ್ರದ್ಧೆಯನ್ನು ಬಿಟ್ಟದ್ದಲ್ಲ, ಶ್ರದ್ಧಾಭಕ್ತಿ ಸಮನ್ವಿತವಾದ ಬುದ್ಧಿ ವಿಚಾರವು ಅವರ ದಾರಿ.

ಅಧಿಕಾರ, ಅನಧಿಕಾರ ವಿವೇಚನೆಯ ಅಭ್ಯಾಸವು ಜನರಲ್ಲಿ ಕ್ಷಯಿಸುತ್ತಿರುವ ಈ ಕಾಲದಲ್ಲಿ ತಾರತಮ್ಯ ವಿವೇಕವನ್ನು ಇನ್ನೂ ಉಳಿಸಿಕೊಂಡಿರುವವರಿಗೆ ಶ್ರೀ ಸ್ವಾಮಿಗಳವರ ಈ ಗ್ರಂಥವು ಕುಂಬಾರನ ಆವಿಗೆಯಲ್ಲಿ ಕೈಯಿಟ್ಟವರಿಗೆ ಚಿನ್ನದ ಪಾತ್ರೆ ಸಿಕ್ಕಿದಂತೆ ಆಗುತ್ತದೆ. ಈ ಕಾಲದಲ್ಲಿ ಅಕ್ಷರವಿದ್ಯೆ ಹರಡುತ್ತಿದೆ. ಅಚ್ಚಿನ ಕಾರ್ಖಾನೆಗಳು ಬೀದಿಬೀದಿಯಲ್ಲೂ ಇವೆ. ಆದದ್ದರಿಂದ ಎಲ್ಲರೂ ಗ್ರಂಥಲೇಖನಕ್ಕೆ ಉದ್ಯುಕ್ತರಾಗಬಹುದಾಗಿದೆ. ಈಗ ಎಲ್ಲ ಸರ್ವಸಮಾನ ; ಎಲ್ಲರೂ ವಿದ್ವಾಂಸರು ; ಎಲ್ಲರೂ

ಗ್ರಂಥಕರ್ತರು. ವಸನಾಶನ ಮಾತ್ರಸಂಭವೇ। ಧನದಾದಪ್ಯಧಿಕಾಯತೇ ಜನಃ॥ ಅಥ ವೇತ್ತಿ ಷಡಕ್ಷರಾಣಿ ಚೇತ್। ಉಪದೇಷ್ಟುಂ ಶಿತಿಕಂಠಮಿಚ್ಛತಿ॥ (ಹೊಟ್ಟೆಗೆ, ಲಂಗೋಟಿಗೆ ಇದ್ದರೆ ''ಕುಬೇರನದೇನು ?'' ಎನ್ನುತ್ತಾನಂತೆ ; ಅ, ಆ, ಇ, ಈ, ಉ, ಊ – ಇಷ್ಟು ಬಂದವನು ''ಪರಮೇಶ್ವರನೇ ತನಗೆ ಶಿಷ್ಯನಾಗಲಿ'' ಎನ್ನುತ್ತಾನಂತೆ.) ಇಂಥಾದ್ದು ಈಗಿನ ಜನದ ಲಕ್ಷಣ.

ಗೀತೆಯ ಮೇಲಿನ ವ್ಯಾಖ್ಯಾನ ಗ್ರಂಥಗಳಿಗೆ ಲೆಕ್ಕವಿಲ್ಲ. ಆದರೆ, ಒಂದು ಮಾತಿಗೆ ಬೆಲೆಬರುವುದು ಅದನ್ನಾಡಿದವರ ವ್ಯಕ್ತಿವಿಶೇಷದಿಂದ ಎಂಬುದನ್ನು ಲೇಖಕರೂ ವಾಚಕರೂ ಮರೆಯಬಾರದು. ''ಶಿವ ಶಿವಾ'' ಎಂದು ಭಾಗವತನೂ ಹೇಳುತ್ತಾನೆ, ಭಂಗೀಕೋರನೂ ಹೇಳುತ್ತಾನೆ. ಅದು ಸಾರ್ಥಕವಾಗುವುದು ನಿಜವಾದ ಭಾಗವತನ ಬಾಯಿಂದ ಬಂದಾಗ ಮಾತ್ರ.

ಈಗ ಗ್ರಂಥರಚನೆಗೆ ಅಭಾವವಿಲ್ಲ. ಆದರೆ ಬೆಲೆಬಾಳುವ ಗ್ರಂಥವನ್ನು ಹುಡುಕಿ ವಿಮರ್ಶೆಮಾಡಿದರೆ ತಾನೆ, ಗೊತ್ತಾಗುವುದು ? ಹಾಗೆ ವಿಮರ್ಶೆ ಮಾಡಿ ನೋಡುವವರಿಗೆ ಶ್ರೀ ಸಚ್ಚಿದಾನಂದೇಂದ್ರ ಸ್ವಾಮಿಗಳವರಿಂದ ಅನುಗ್ರಹೀತವಾದ ಈ ಗ್ರಂಥವು, ಕತ್ತಲೆಯಲ್ಲಿ ಸಂಚಾರಮಾಡುತ್ತಿರುವವರಿಗೆ ವಿದ್ಯುತ್ಪ್ರಕಾಶ ಬಂದಾಗ ಹೇಗಾಗುತ್ತದೋ ಅಂಥಾ ಅನುಭವದಾಯಕವಾದೀತೆಂದು ನನಗೆ ಅನ್ನಿಸುತ್ತದೆ.

ನಮ್ಮ ಧಾರ್ಮಿಕ ಸಾಹಿತ್ಯ ಗ್ರಂಥಗಳ ರಾಶಿ ಅಪಾರವಾಗಿದೆ. ಅದರಲ್ಲಿ ಭಗವದ್ಗೀತೆಯು ವಿಶೇಷ ಮಹತ್ತ್ವದ ಸ್ಥಾನವನ್ನು ಸಂಪಾದಿಸಿಕೊಂಡಿದೆ. ಇಷ್ಟು ಜನಪ್ರೀತಿಗೆ ಕಾರಣವಾದದ್ದು ಅದರ ಸರ್ವಾಂಗ ಸುಂದರತೆ ಮತ್ತು ಅದರ ಐತಿಹಾಸಿಕ ಹಿನ್ನೆಲೆ. ಗೀತೆಯಲ್ಲಿ ಪ್ರಸ್ತಾವವಾಗದಿರುವ ಮಾನುಷಜೀವನ ಪ್ರಶ್ನೆ ಯಾವುದೂ ಇಲ್ಲ. ಜಿಜ್ಞಾಸುವಿಗೆ ತೋರಬಹುದಾದ ಎಲ್ಲ ಪ್ರಶ್ನೆಗಳಿಗೂ ಇಲ್ಲಿ ಸಮಂಜಸವಾದ ಉತ್ತರ ದೊರೆಯುತ್ತದೆ. ಸಾವಧಾನವಾಗಿ ಈ ಗ್ರಂಥವನ್ನು ವ್ಯಾಸಂಗಮಾಡುವವರಿಗೆ ಬೇರೆ ಯಾವ ಗ್ರಂಥವೂ ಬೇಕೆನ್ನಿಸಲಾರದು. ಕೇಳಬಹುದಾದ ಪ್ರಶ್ನೆಗಳಿಗೆ ಸಕಾರಣವೂ ಸಮಗ್ರವೂ ಆದ ಉತ್ತರಗಳು ಗೀತೆಯಲ್ಲಿ ಹೊರಡುತ್ತವೆ. ಇಂಥ ಮಹಾಗ್ರಂಥವನ್ನು ಓದಿದ ಬಳಿಕ ಜೀವನದ ಸಮಸ್ಯೆಗಳು ಸುಲಭವಾಗಿ ಉತ್ತರ ಪಡೆದು, ಮನಸ್ಸಿಗೆ ಶಾಂತಿ ಬರಬಹುದಾಗಿದೆ. ಹೀಗೆ ಶಾಂತಿರಸ ಪ್ರಧಾನವಾದದ್ದು ಈ ಗ್ರಂಥ. ಮನಸ್ಸಿನ ನೆಮ್ಮದಿಯನ್ನು ಬಯಸುವವರು ಇದರಿಂದ ಉಪಕೃತರಾಗುವಂತೆ ಮತ್ತಾವ ಗ್ರಂಥದಿಂದಲೂ ಆಗಲಾರದು. ಹೀಗೆ ಈ ಗೀತಾವ್ಯಾಖ್ಯಾನ ದಿಂದ ನಮ್ಮ ಪರಮಹಂಸ ಸ್ವಾಮಿಗಳವರು ಲೋಕಕ್ಕೆ ಮಹೋಪಕಾರ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಸಹಸ್ರ ನಮಸ್ಕಾರ. ಇಂತು ಸರ್ವಂ ಶಿವಂ.

★★★★

## ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸದ್ಗುರುಭ್ಯೋ ನಮಃ

ಬಾಣಾವರದ ಪುರಾಣಿಕ ಶ್ರೀನಿವಾಸಭಟ್ಟನಾದ ನಾನು, ನನಗೆ ಶ್ರೀಶ್ರೀಯವರ ದರ್ಶನಾದಾರಾಭ್ಯ ಆದ ಅವರ ಅನುಗ್ರಹಾದಿಗಳ ಸಂಕ್ಷೇಪವನ್ನು ತಿಳಿಸುತ್ತೇನೆ.

1934ರಲ್ಲಿ, ನನ್ನ 23ನೇ ವಯಸ್ಸಿನಲ್ಲಿ ಶಿವಮೊಗ್ಗಾದಲ್ಲಿ ಅಧ್ಯಾತ್ಮಪ್ರಕಾಶ-ಕಾರ್ಯಾಲಯದ ವತಿಯಿಂದ ನಡೆಯುವ ಶಂಕರಸಪ್ತಾಹಕ್ಕೆ ನನ್ನ ಮಿತ್ರರಾದ ಹಾಗೂ ಶ್ರೀಯವರ ಹಿರಿಯ ಅಳಿಯಂದಿರಾದ, ಕಣಕಟ್ಟೆ ಶ್ರೀ ಸೀತಾರಾಮ ದೀಕ್ಷಿತರು ನನ್ನನ್ನು ಕರೆದುಕೊಂಡು ಹೋದರು. ಸಪ್ತಾಹವೆಲ್ಲಾ ನಡೆದು ರೈಲಿನಲ್ಲಿ ವಾಪಸ್ ಬರುವಾಗ ಶ್ರೀಗಳೂ* ಜೊತೆಯಲ್ಲೇ ಇದ್ದರು. ಆಗ ಅವರಲ್ಲಿ ನಾನೂ ವೇದಾನ್ತಾಭ್ಯಾಸ ಮಾಡಬೇಕಂತ ತುಂಬ ಕುತೂಹಲವಿದೆ, ಆದರೆ ನನಗೆ ಸ್ವಲ್ಪ ಸಂಸ್ಕೃತಜ್ಞಾನವನ್ನು ಬಿಟ್ಟರೆ ಇನ್ನಾವ ವಿಷಯದ ಅರಿವೂ ಇಲ್ಲ ಎಂದೆ. ಅದಕ್ಕೆ ಅವರು "ನೀವು ವೇದಾನ್ತ ಉಪನ್ಯಾಸಕರಾಗಬೇಕೆ ?" ಎಂದು ಕೇಳಿದರು. ನಾನು - ಹಾಗೇನಿಲ್ಲ, ಜೀವನಕ್ಕೆ ತೆಂಗಿನ ತೋಟವಿದೆ. ನಾನೇ ಮನೆಯಲ್ಲಿ ಹಿರಿಯ ಗೃಹಸ್ಥ ನಾಗಿರುವದರಿಂದ ಕ್ರಮವಾಗಿ ಪಾಠಾಭ್ಯಾಸಮಾಡಲು ಆಗುವದಿಲ್ಲ. ಆದರೂ ಸಾಧ್ಯವಾದಷ್ಟು ಅವಕಾಶ ಮಾಡಿಕೊಂಡು ಶ್ರೀಶಂಕರಭಾಷ್ಯ ತಿಳಿಯಲು ಸಾಧ್ಯವೇ ? ಎಂದೆ. ಅದಕ್ಕೆ ಅವರು, ಶ್ರೀ ಶಂಕರಾಚಾರ್ಯರು ಯಾರಿಗೆ ವೇದಾಂತ ಬೇಕೇಬೇಕೆನ್ನಿಸುತ್ತದೆಯೋ ಅವರಿಗೆ ತಿಳಿಯುವಂತೆಯೇ ಭಾಷ್ಯವನ್ನು ಬರೆದಿರು ತ್ತಾರೆ. ಗೀತಾಭಾಷ್ಯಾದಿಗಳು ಸುಲಭವಾಗಿರುತ್ತವೆ ಎಂದರು.

ಒಂದೆರಡು ತಿಂಗಳುಗಳನಂತರ ಶ್ರೀ ಸೀತಾರಾಮದೀಕ್ಷಿತರು, ನಾನು ಬೆಂಗಳೂರಿಗೆ ಹೋದೆವು. ಅಲ್ಲಿ ಗೀತಾಭಾಷ್ಯಪಾಠ ನಡೆಯುತ್ತಿತ್ತು. ನಮಗೆ ಈಶಾವಾಸ್ಯ, ವೇದಾನ್ತ ಡಿಂಡಿಮ ಪಾಠ ಪ್ರಾರಂಭವಾಯಿತು. ಅಲ್ಲಿರುವಾಗ ಒಂದು ದಿವಸ ಶ್ರೀ ಕೃಷ್ಣಸ್ವಾಮಿ ಅಯ್ಯರ್ ಅವರ ದರ್ಶನಕ್ಕೆ ಶ್ರೀ ದೀಕ್ಷಿತರು ನನ್ನನ್ನು ಕರೆದುಕೊಂಡು ಹೋದರು. ಏನು ಅಳಿಯಂದಿರು ಗಿಳಿಯನ ಜೊತೆಯಲ್ಲೇ ಬಂದಿದ್ದೀರಿ ಎಂದು ಅವರು ಹಾಸ್ಯಮಾಡಿದರು. ಆಗ ನಾವು ಶ್ರೀಯವರಲ್ಲಿ ವೇದಾನ್ತಪಾಠಕ್ಕೆ ಬಂದಿರುವದಾಗಿ ತಿಳಿಸಿದೆವು. ಆಗ ಅವರು ಈಗಲೂ ವೇದಾನ್ತ ಪಾಠಕ್ಕೆ ಬರುವವರಿದ್ದಾರಲ್ಲಾ! ಅಂದರು. ನಾವು ಏನಾದರೂ ಉಪದೇಶ ತಿಳಿಸ ಬೇಕಂತ ಕೇಳಲು ಶ್ರೀಯವರೇ ಎಲ್ಲಾ ಹೇಳುತ್ತಾರೆಂದರು. ಆದರೂ ಮತ್ತೆ ಕೇಳಿದೆವು. ಆಗ ಅವರು ನೋಡಿ ಒಂದು ಮನೆಯಲ್ಲಿ ಅಜ್ಜ-ಮೊಮ್ಮಗಳು

---

*1948ರವರೆಗೂ ಶ್ರೀಗಳು ಎಂಬಲ್ಲಿ ಪೂರ್ವಾಶ್ರಮದ ರಾಯರು ಎಂದೇ ಓದಿಕೊಳ್ಳಬೇಕು.

ಮಾತನಾಡುತ್ತಿರುವಾಗ ಹುಡುಗಿ ಕಥೆ ಹೇಳು ಅಂತ ಕೇಳಲು, ಅವರು ಒಂದೂರಲ್ಲಿ ಒಂದು ಹುಡುಗಿ ಇತ್ತು, ಆ ಹುಡುಗಿ ಬಹಳ ಮಾತನಾಡುತ್ತಿತ್ತು, ಹಬ್ಬದ ದಿವಸ ಇಂಥಾ ಬಣ್ಣದ ಲಂಗ ಹಾಕಿಕೊಂಡು ನರ್ತನ ಮಾಡುತ್ತಿತ್ತು, ಹೀಗೆ ಹೇಳುತ್ತಾ ಹೋದಮೇಲೆ ಆ ಹುಡುಗಿ ಇವೆಲ್ಲ ನನ್ನ ಗುರುತೇ ಆಗಿದೆ. ಇದು ನನ್ನ ಕಥೆಯೆ ಎಂದಿತು. ಹೀಗೆ ನಮಗೆ ಉಪನಿಷತ್ತುಗಳು ನಮ್ಮ ವಿಚಾರವನ್ನೇ ಜ್ಞಾಪಕವಾಗುವಂತೆ ಮಾಡಿ ನಮ್ಮ ಸ್ವರೂಪವನ್ನೇ ತಿಳಿಸುತ್ತವೆ, ಅಂತ ಉಪದೇಶಿಸಿದರು.

ಪ್ರತಿದಿನ ಅಲ್ಲಿ ಒಂಬತ್ತೂವರೆಗೆ ವೇದಾನ್ತಪಾಠ ನಡೆಯುತ್ತಿತ್ತು. ಲಾಯರ್‌ಗಳು, ಹಿರಿಯರು ಆದ 4-5 ಜನ ವೇದಾನ್ತಪಾಠ ಶ್ರವಣಕ್ಕೆ ಬರುತ್ತಿದ್ದರು. ಕ್ರಮವಾಗಿ ಭಾಷ್ಯಪಾಠ ವ್ಯಾಸಂಗಮಾಡುವ ವಿದ್ಯಾರ್ಥಿಗಳಿರಲಿಲ್ಲ. ನನ್ನನ್ನು ಬಹಳ ದೂರದಿಂದ ವೇದಾನ್ತ ತಿಳಿದುಕೊಳ್ಳಲು ಬಂದಿರುವ ವಿದ್ಯಾರ್ಥಿ ಅಂತ ಅವರುಗಳಿಗೆ ಶ್ರೀಗಳು ತಿಳಿಸಿದರು. ಹೊರಗಿನಿಂದ ಬಂದವರಲ್ಲಿ ನಾನೇ ಮೊದಲನೆಯವನಾದೆ. ಹೀಗೆ ಶ್ರೀಶ್ರೀಗಳ ಪೂರ್ವಾಶ್ರಮದಲ್ಲಿ ವೇದಾನ್ತಪಾಠ ತಿಳಿಯುವ ಲಭ್ಯ ದೊರೆತು ಶ್ರೀಗಳವರ ತುರೀಯಾಶ್ರಮದಲ್ಲಿಯೂ ಮುಂದುವರೆದು, ಕಾರ್ಯಾಲಯದ ಈಗಿನ ಪಂಡಿತರುಗಳ ಪಾಠಪ್ರವಚನಗಳನ್ನು ಕೇಳುವ ಸೌಭಾಗ್ಯ ನನ್ನದಾಯಿತು. ನಾನು ಗೃಹಸ್ಥನಾದ್ದರಿಂದ ಆಗಾಗ್ಗೆ ಕಾಲಾವಕಾಶಮಾಡಿಕೊಂಡು ಹೊಳೆನರಸೀಪುರ ಮತ್ತು ಇತರೆ ನಗರಗಳಲ್ಲಿ ನಡೆಯುತ್ತಿದ್ದ ಎಲ್ಲಾ ಅನುಷ್ಠಾನಗಳಿಗೂ ಹೋಗಿ ಬರುತ್ತಿದ್ದೆ.

ಶ್ರೀಯವರ ಪೂರ್ವಾಶ್ರಮದಲ್ಲಿನ ನಿತ್ಯಾನುಷ್ಠಾನಗಳು ಬೆಳಿಗ್ಗೆ 4 ಗಂಟೆಗೆ ಎದ್ದರೆ - ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ, ಬ್ರಹ್ಮಯಜ್ಞ, ಕಲಶದಲ್ಲಿ ಜಲವನ್ನಿಟ್ಟುಕೊಂಡು ಸೂರ್ಯಧ್ಯಾನಶ್ಲೋಕ, ತ್ರಿಚಕಲ್ಪ 24 ನಮಸ್ಕಾರಗಳನ್ನು ಮಾಡಿ ತೀರ್ಥತೆಗೆದುಕೊಂಡು, ಶ್ರೀಮದ್ರಾಮಾಯಣ ಪಾರಾಯಣಮಾಡಿ, 7.30ಕ್ಕೆ ಮೂಲ ವೇದಾನ್ತಪಾಠಗಳನ್ನು ಭಾಷ್ಯಸಮೇತ ವೈದಿಕಸಂಪ್ರದಾಯದಂತೆ ಮಾಡಿ, ಮಧ್ಯಾಹ್ನ ಊಟ ಮಾಡುವಾಗ ತ್ರಿಸುಪರ್ಣ ಪಠನ, ಹರೇರಾಮಮಂತ್ರ, ಶ್ರೀರಾಮ ಮಂತ್ರ ಹೇಳುತ್ತಿದ್ದರು. ಹಾಗೂ ಪ್ರತಿದಿನವೂ ಒಬ್ಬ ವಿದ್ಯಾರ್ಥಿಗೆ ಭೋಜನ ಮಾಡಿಸುತ್ತಿದ್ದರು. ಸಂಧ್ಯಾಕಾಲದಲ್ಲಿ ನಾರುಮಡಿ ಉಟ್ಟು ಸಂಧ್ಯಾ, ದೇವರಿಗೆ ದೀಪಾರಾಧನೆ ಹಾಲುನ್ನೈವೇದ್ಯ, 10 ನಿಮಿಷ ಭಜನೆ ನಡೆಸುತ್ತಿದ್ದರು. ಇದು ನಿತ್ಯವಾದರೂ, ನೈಮಿತ್ತಿಕಗಳಾಗಿ ಏಕಾದಶಿಯ ಉಪವಾಸ, ಸಹಸ್ರನಾಮಾದಿಗಳ ಪಾರಾಯಣ, ಭಜನೆ, ಸತ್ಯನಾರಾಯಣವ್ರತ, ಗಣಪತಿವ್ರತ, ಅನಂತಪದ್ಮನಾಭವ್ರತ ಇತ್ಯಾದಿ ವ್ರತಗಳನ್ನಾಚರಿಸಿ ಸಂಧ್ಯಾಕಾಲದಲ್ಲಿ ಕಥಾ-ಪಾರಾಯಣಶ್ರವಣವನ್ನೂ

ಅವರೇ ಮಾಡುತ್ತಿದ್ದರು. ಆಗ್ಗೆ ಅವರು ಶ್ರುತಿ, ಸ್ಮೃತಿ, ಪುರಾಣ ಇವುಗಳೆಲ್ಲವೂ, ಮುಖ್ಯವಾಗಿ ಭಗವಂತನನ್ನು ಕುರಿತು ಆಚರಿಸುವದರಿಂದ ಇಹಪರ ಫಲಪ್ರಾಪ್ತಿಗಳಾಗುತ್ತವೆ ಎಂದು ಹೇಳುತ್ತಿದ್ದರು. ನಾನು ವೈದಿಕರ ಮನೆಯವನಾದರೂ ಇಷ್ಟು ಆಚಾರಗಳನ್ನು ತಿಳಿದು ಮಾಡುತ್ತಿರಲಿಲ್ಲ. ಅಲ್ಲೇ ಬ್ರಹ್ಮಯಜ್ಞ, ಸೂರ್ಯನಮಸ್ಕಾರ, ಜಪ, ವಿಷ್ಣುಸಹಸ್ರನಾಮಪಾರಾಯಣ ಮಾಡುವುದನ್ನು ತಿಳಿದುಕೊಂಡೆ. ಅವೇ ನನಗೆ ಸಾಧನ ಸಂಪತ್ತುಗಳಾಯ್ತು. ಗೃಹಸ್ಥರು ನಡೆಸಬೇಕಾದ ವೇದೋಕ್ತವಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಶ್ರೀಯವರು ಉಕ್ತಕಾಲಗಳಲ್ಲೇ ನಿಷ್ಠೆಯಿಂದ ಆಚರಿಸುತ್ತಿದ್ದರು. ಆಗ ಅವರ ಅಳಿಯಂದಿರು, ಹೆಣ್ಣು ಮಕ್ಕಳು, ಶ್ರೀ ನಂಜಪ್ಪಭಾಗವತರು ಬರುತ್ತಿದ್ದರು. ಹೀಗೆ ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳುಗಳ ಜೊತೆ ಅವರವರಿಗೆ ತಕ್ಕಂತೆ ವಿನೋದವಾದ ಮಾತುಗಳನ್ನು ಆಡುತ್ತಿದ್ದರು. ಸಾಯಂಕಾಲ ಮನೆಯವರ ಜೊತೆ ಸ್ತೋತ್ರಪಾಠ, ಭಜನೆಗಳಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ಬೆಳಿಗ್ಗೆ ವೇದಾಂತ ಪಾಠವಾಗುತ್ತಲು ಶ್ರೀಶಂಕರಭಾಷ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡುವುದು, ಮಾಸಪತ್ರಿಕೆಗೆ ಲೇಖನ ಸಿದ್ಧಮಾಡುವದು - ಹೀಗೆ ಯಾವಾಗಲೂ ಗ್ರಂಥ ಪಠನದಲ್ಲಿಯೇ ಇರುತ್ತಿದ್ದರು.

ಶ್ರೀಯವರು ಬೆಂಗಳೂರು ತರಗುಪೇಟೆಯಲ್ಲಿದ್ದಾಗ ಸಂಚಿಕೆಯ ಒಂದು ಪ್ರೂಫ್‌ನ ನಕಲನ್ನು ಕೊಟ್ಟು ನೋಡಿ ಸರಿಯಾಗಿದೆಯೆ ಹೇಗೆ ಅಂದರು. ಅದರಲ್ಲಿ ತ್ರಯ ಆವಸಥಾಃ ಅಂತ ಇತ್ತು, ನಾನು ಅವಸ್ಥಾ ಅಂತ ಇರಬೇಕೆಂದು ತಿಳಿದು ತೋರಿಸಿದೆ. ಅದಕ್ಕೆ ಅವರು ಉಪನಿಷತ್ತನ್ನೇ ತಂದು ತ್ರಯ ಆವಸಥಾಃ ತ್ರಯ ಸ್ವಪ್ನಾಃ ಅಂತ ಇದೆ ಅಂತ ತೋರಿಸಿದಾಗ, ಎಂಥಾ ತಪ್ಪು ತಿಳಿದು ಕೇಳಿದೆನಲ್ಲಾ ಅಂತ ಬಹಳ ವ್ಯಥೆಯಾಗಿ ಎಚ್ಚೆತ್ತುಕೊಂಡೆ.

ಒಮ್ಮೆ ವಿಶ್ವೇಶ್ವರಪುರದ ಸಜ್ಜನರಾವ್ ಸಭಾಂಗಣದಲ್ಲಿ ಗೀತಾಪ್ರಚಾರಸಭಾದ ಶ್ರೀಶಂಕರಾನಂದಸ್ವಾಮಿಗಳ ಸಪ್ತಾಹ ಏರ್ಪಡಿಸಿದ್ದರು. ಅದರಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಹೀಗೆ ವಿಷಯಗಳಿತ್ತು. ಶ್ರೀಯವರು ಶಂಕರಾದ್ವೈತ ಅಂತ ವಿಷಯ ಇಟ್ಟುಕೊಂಡಿದ್ದರು. ಪ್ರತಿದಿನ ಶ್ರೀಯವರ ಪಾಠಕ್ಕೆ ಬರುತ್ತಿದ್ದ ಶ್ರೀ ನಂಜುಂಡಯ್ಯ ಮುಂತಾದವರು ಅವರ ಜೊತೆ ಅಲ್ಲಿಗೆ ಹೋಗುತ್ತಿದ್ದರು. ಶ್ರೀಯವರ ಉಪನ್ಯಾಸದ ಬೆಳಿಗ್ಗೆ ಶ್ರೀಗಳವರ ಪಾಠಕ್ಕೆ ಬರುತ್ತಿದ್ದ ಮಹನೀಯರುಗಳು ಶ್ರೀಗಳಿಗೆ ಚಿಟ್ಟೆಯ ಕಸೂತಿಯಿದ್ದ ಒಂದು ಹೊಸ ಶಾಲನ್ನು ತಂದಿದ್ದರು. ಅವರ ಆಶಯ, ಎಲ್ಲಾ ಉಪನ್ಯಾಸಕರಂತೆ ಶ್ರೀಗಳೂ ಅದನ್ನು ಹೊದೆದುಕೊಂಡು ಉಪನ್ಯಾಸಮಾಡಲಿ ಎಂದು. ಆದರೆ ಶ್ರೀಗಳು ನನಗೆ ತಿಳಿಸದೆ ಯಾಕೆತಂದಿರಿ,

ಯಾತಕ್ಕೆ ಬೇಕು ಈ ತಾಡವೆಂದರು. ಆ ಶಾಲನ್ನು ನೋಡಿ, ಈ ಅಂಚಿನ ಶಾಲನ್ನು ಹೊದ್ದರೆ ಉಪನ್ಯಾಸ ಚೆನ್ನಾಗಿ ಬರುತ್ತದೆಯೋ ? ಥಳಿಹೋಗಿಸುತ್ತದೆಯೋ ಎಂದು ಹಾಸ್ಯಮಾಡಿದರು.

ಶ್ರೀಯವರ ಉಪನ್ಯಾಸದ ದಿವಸ ಅಮೇರಿಕದಿಂದ ಫಿಟ್‌ಸಫರ್ ಎಂಬ ಒಬ್ಬ ಸಂತ ಬಂದಿದ್ದರು. ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯನ್ತೇ ಮಂತ್ರಗಳನ್ನು ವಿಸ್ತರಿಸಿ, ಆನಂದಾತ್ಮ, ಪ್ರಜ್ಞಾನಘನ ಹೀಗೆ ಆತ್ಮನು ಸ್ವರೂಪತಃ ಇರುವವನಾಗಿದ್ದಾನೆ. ಅದನ್ನು ಉಪನಿಷತ್ತುಗಳ ಮೂಲಕ ವಿಚಾರಮಾಡಿ ತಿಳಿದರೆ ನಮ್ಮ ಸ್ವರೂಪವೇ ಆಗಿರುತ್ತೆ ಎಂದು ತಮಗೆ ಕೊಟ್ಟ ಐದೇ ನಿಮಿಷಗಳಲ್ಲಿ ವಿವರಿಸಿದರು. ಇದನ್ನು ಕೇಳಿ ಶ್ರೀಯವರು, ನೋಡಿ ಹೇಗೆ ಅವರು ಐದೇ ನಿಮಿಷಗಳಲ್ಲಿ ಬಹಳ ಚೆನ್ನಾಗಿ ವಿವರಿಸಿ ಅವರಿಗೆ ಗೊತ್ತುಪಡಿಸಿದ ಸಮಯದಲ್ಲಿ ತಿಳಿಸಿದರಲ್ಲಾ, ಅಂತ ಸಂತೋಷಪಟ್ಟರು.

ಅವರ ಹತ್ತಿರ ಬಹಳ ಜನ ಬಂದು ಪ್ರಶ್ನೆಗಳನ್ನು ಕೇಳುತ್ತಿದ್ದರು. ನೋಡಲು ಬಂದವರನ್ನು ಆದರದಿಂದ ಪ್ರಶ್ನೆಮಾಡಿ, ಅವರ ಮನಸ್ಸಿನಲ್ಲಿ ಉಂಟಾಗಿರುವ ಸಂಶಯಗಳನ್ನು ನಿವಾರಣೆಮಾಡಿ, ಗೀತೆಯಲ್ಲಿ ತಿಳಿಸಿರುವ ಕರ್ಮಯೋಗ, ಭಕ್ತಿ ಯೋಗ, ಜ್ಞಾನಯೋಗ - ಇವುಗಳ ಸೂಕ್ಷ್ಮಗಳನ್ನು ತಿಳಿಸುತ್ತಿದ್ದರು, ನಾವೂ ತಿಳಿದು ಕೊಳ್ಳುತ್ತಿದ್ದೆವು. ಒಮ್ಮೆ ಒಬ್ಬ ಮಹನೀಯರು ಗೀತೋಪದೇಶವನ್ನು ಅನುಗ್ರಹಿಸ ಬೇಕೆಂದಾಗ ಅವರು ಇದು ಮಂತ್ರೋಪದೇಶವೂ ಅಲ್ಲ, ಭಕ್ತಿಯಿಂದ ಪಾರಾಯಣ ಮಾಡುವ ಸ್ತೋತ್ರಾದಿಗಳಂತೆಯೂ ಅಲ್ಲ, ಗೀತೆಯಲ್ಲಿ ಹೇಳಿರುವ ಅಂತರಂಗ ಸಾಧನಗಳನ್ನು ವಿವೇಕವೈರಾಗ್ಯದಿಂದ ಅಭ್ಯಾಸಮಾಡಿ ಗೀತೆಯಲ್ಲಿ ಹೇಳಿರುವ ವಾಸುದೇವ ತತ್ತ್ವವನ್ನು ತಿಳಿದು ಕೃತಾರ್ಥರಾಗಬಹುದೆಂತ ತಿಳಿಸಿದರು.

ಒಮ್ಮೆ ಪಾಠಕ್ಕೆ ಕುಳಿತಾಗ ನನಗೆ ಸ್ವಲ್ಪ ಎದೆನೋವು ಉಂಟಾಗಿತ್ತು ಪಾಠವಾದಮೇಲೆ ಗುರುಗಳು ಆರೋಗ್ಯಂ ಭಾಸ್ಕರಾದಿಚ್ಛೇತ್, ಸೂರ್ಯನಮಸ್ಕಾರ ಮಾಡಿ ಎಲ್ಲಾ ಸರಿಹೋಗುತ್ತೆ ಅಂದಂತೆ ನಡೆದೆ. ಅವರ ಅನುಗ್ರಹದಿಂದ ಆರೋಗ್ಯ ಸುಧಾರಿಸಿತು.

ಶ್ರೀಯವರು ಹೊಳೆನರಸೀಪುರಕ್ಕೆ ಬಂದಮೇಲೆ, ನಾನು ಅಲ್ಲಿಗೆ ಹೋಗುವ ಹೊತ್ತಿಗೆ ಮತ್ತೂರಿನ ವೇ|| ಸುಬ್ಬರಾಯ ಅವಧಾನಿಗಳೂ ವೇದಾನ್ತಾಭ್ಯಾಸಕ್ಕೆ ಬಂದಿದ್ದರು. ಇವರು ಸಾಂಗವಾಗಿ ವೇದಾಧ್ಯಯನ ಶ್ರೌತಸ್ಮಾರ್ತಕರ್ಮಾನುಷ್ಠಾನ ಗಳನ್ನು ತಾವು ತಿಳಿದು ಶಿಷ್ಯರಿಗೂ ತಿಳಿಸುವವರಾಗಿದ್ದವರು. ಒಮ್ಮೆ ಶ್ರೀಗಳ ವೇದಾಂತ ಉಪನ್ಯಾಸ ಶ್ರವಣಕ್ಕೆ ಬಂದವರು ಅದನ್ನು ಕೇಳಿ ಪ್ರಭಾವಿತರಾಗಿ ಶ್ರೀಶಂಕರ

ಭಾಷ್ಯವನ್ನು ಕ್ರಮವಾಗಿ ಪಾಠ ಮಾಡಿಸಿಕೊಂಡು ತತ್ತ್ವವನ್ನು ತಿಳಿಯಲೇಬೇಕಂತ ಹೊಳೆನರಸೀಪುರಕ್ಕೆ ಬಂದಿದ್ದರು.

ಶ್ರೀಯವರು ಹೊಳೆನರಸೀಪುರಕ್ಕೆ ಬಂದ ವರ್ಷ ಒಂದು ಸಪ್ತಾಹ ನಡೆಯಿತು. ಚತುರ್ಭುಜ ಪಟ್ಟಾಭಿರಾಮ ದೇವಾಲಯದಲ್ಲಿ ಉಪನ್ಯಾಸಕ್ಕೂ, ಒಂದು ದೊಡ್ಡ ಮನೆಯಲ್ಲಿ ವಸತಿ, ಊಟಕ್ಕೂ ಏರ್ಪಾಡಾಗಿತ್ತು. ಶ್ರೀಯವರೇ ಖುದ್ದಾಗಿ ಅಡಿಗೆಗೆ ಬೇಕಾದ ಸಾಮಾನುಗಳನ್ನು ಹೊತ್ತುಕೊಂಡು ತಂದು ಇಟ್ಟರು. ನಾನು ಅವಧಾನಿಗಳು ಇದ್ದೆವು. ಅವಧಾನಿಗಳದೇ ಅಡಿಗೆ. ಅಲ್ಲಿ ಸೋಮವಾರವೇ ಸೌದೆ ಗಾಡಿ ಬರುತ್ತಿತ್ತು. ನಾನು ಸೌದೆಗಾಡಿ ಗೊತ್ತುಮಾಡಿ ಪಾಕಶಾಲೆಯ ಹತ್ತಿರ ಹಾಕಿದೆ. ಅಷ್ಟರಲ್ಲಿ ಶ್ರೀಯವರು ಬಂದು, ನಮಗೆ ಮನೆಗೆ ಹೋಗಿ ಊಟಮಾಡಿಕೊಂಡು ಬನ್ನಿ ಎಂದರು. ನಾವು ಬರುವದರಲ್ಲಿ ಒಂದು ಗಾಡಿ ಸೌದೆಯನ್ನೆಲ್ಲಾ ಒಬ್ಬರೇ ಒಳಗೆ ಹಾಕಿದ್ದರು. ತಾವೇ ಎಲ್ಲಾ ಕೆಲಸಗಳಲ್ಲಿ ತೊಡಗಿಕೊಂಡು ಬಹಳ ಶಿಸ್ತಿನಿಂದ ಪೂರ್ಣಗೊಳಿಸುತ್ತಿದ್ದರು. ಮತ್ತು ಬಂದವರನ್ನೂ ಎಲ್ಲಾ ಸರಿಯಾಗಿದೆಯಷ್ಟೇ ? ಊಟವಾಯಿತೆ ? ಅಂತ ವಿಚಾರಿಸುತ್ತಿದ್ದರು.

1946ರ ಸುಮಾರಿನಲ್ಲಿ ಗೀತಾಭಾಷ್ಯಪಾಠ ನಡೆಯುತ್ತಿದ್ದಾಗ ಒಂದು ಸೂರ್ಯಗ್ರಹಣ ಬಂದಿತ್ತು. ಆಗ ಹೊಳೆಗೆ ಹೋಗಿ ಸ್ನಾನಮಾಡಿ ಜಪಮಾಡುವಾಗ ಶ್ರೀಯವರು ನಿಮಗೆ ಯಾವುದಾದರೂ ಮಂತ್ರ ಉಪದೇಶವಾಗಿದೆಯೇ ? ಎಂದು ಕೇಳಿದರು. ಆಗ ನಾನು ಯಾವದೂ ಆಗಿಲ್ಲ ಅಂದಾಗ ಶ್ರೀಯವರು ಶಿವಪಂಚಾಕ್ಷರೀ ಮಹಾಮಂತ್ರ ಉಪದೇಶಿಸಿದರು. ಪ್ರತಿದಿನ ಬೆಳಿಗ್ಗೆ ಸಾಯಂಕಾಲ ಐದುಸಾವಿರ ಜಪ ಮಾಡಬೇಕು. ಶಿವ ಸಂಬಂಧವಾದ ಸ್ತೋತ್ರ ಹೇಳಿಕೊಳ್ಳಿ ಅಂತ ತಿಳಿಸಿದರು. ಆಗ ಹೊಸದಾದ್ದರಿಂದ ನಿತ್ಯ ಇದೇ ಜಪಮಾಡುತ್ತಿದ್ದೆ. ಅನುಷ್ಠಾನಗಳಲ್ಲಿಯೂ ಅದನ್ನೇ ಜಪಮಾಡುವಂತೆ ತಿಳಿಸಿದ್ದರು. ಮತ್ತೊಮ್ಮೆ ಒಂದು ಚೈತ್ರಮಾಸದ ನವರಾತ್ರಿಯಲ್ಲಿ ರಾಮಾಯಣ ಪಾರಾಯಣ ಮಾಡುವವರು ಕಮ್ಮಿಯಾಗಿದ್ದಾರೆಂದು ಶ್ರೀಯವರು ನನ್ನನ್ನು ಒಳಗಡೆಗೆ ಕರೆದುಕೊಂಡು ಹೋಗಿ ದೇವರ ಮುಂದೆ ಕೂಡಿಸಿಕೊಂಡು ಶ್ರೀರಾಮತಾರಕಮಂತ್ರವನ್ನು ಉಪದೇಶಿಸಿ, ಜಪಮಾಡಿ ಪಾರಾಯಣಮಾಡಬೇಕೆಂದು ಆದೇಶಿಸಿ ಅನುಗ್ರಹಿಸಿದರು. ಹೀಗೆ ಶ್ರೀಶ್ರೀಗಳಿಂದ ಶ್ರೀಶಿವಪಂಚಾಕ್ಷರೀ ಮತ್ತು ಶ್ರೀರಾಮತಾರಕ ಮಂತ್ರಗಳ ಉಪದೇಶ ವಾಯಿತು. ಯಾವದೋ ಒಂದು ಸಮಯದಲ್ಲಿ ನಮ್ಮ ಮನೆಯಲ್ಲಿ ಒಂದು ಮದುವೆ ಆಗಬೇಕಿತ್ತು, ಅದಕ್ಕೆ ಏನು ಮಾಡಬೇಕೆಂದು ಗುರುಗಳಲ್ಲಿ ಕೇಳಲಾಗಿ ಸುಂದರಕಾಂಡ ಸಪ್ತಸರ್ಗ ಪಾರಾಯಣ ಮಾಡುವಂತೆ ತಿಳಿಸಿದರು. ಹಾಗೆ ಮಾಡಲಾಗಿ ಅವರ ಅನುಗ್ರಹ ಸತ್ಯವಾಯ್ತು.

1948ರ ಜೂನ್ ತಿಂಗಳಲ್ಲಿ ಅಂದರೆ ಜೇಷ್ಠಮಾಸದಲ್ಲಿ ಶ್ರೀಯವರು ಸಂನ್ಯಾಸ ಸ್ವೀಕರಿಸಿದರು. ಅವರು ಆಗ ತ್ರಿಕಾಲ ಸ್ನಾನಕ್ಕೆ ಹೊಳೆಗೆ ಹೋಗುವಾಗ ಸಾಧನ ವಿಷಯಗಳನ್ನೇ ಹೆಚ್ಚು ಹೇಳುತ್ತಿದ್ದರು. ಅವರ ದರ್ಶನಕ್ಕೆ ಬಂದ ಜನಗಳು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರಿಸುವಾಗ ಅವರು ಹೇಳುತ್ತಿದ್ದ ವಾಕ್ಯವಿಚಾರಗಳು ಈಗಲೂ ನೆನಪಿಗೆ ಬರುತ್ತವೆ. ಯಾವಾಗಲೂ ಗೀತಾಭಾಷ್ಯವನ್ನು ಚೆನ್ನಾಗಿ ಮನದಂದರೆ ಸಾಧನ ಸಿದ್ಧಾಂತಗಳು ಮೈಗೂಡುತ್ತವೆ, ಗೀತೆಯ 16-17ನೇ ಅಧ್ಯಾಯದಲ್ಲಿರುವಂತೆ ಮನಸ್ಸಿನ ಸಾತ್ವಿಕತೆಯನ್ನು ಬೆಳಸಿಕೊಂಡು ಜ್ಞಾನಿಯ ಲಕ್ಷಣವನ್ನು ತಮ್ಮ ಸಾಧನವಾಗಿ ತಿಳಿದುಕೊಂಡು ಅಭ್ಯಾಸನಿರತರಾಗಬೇಕು, ಆಗ ವಿವೇಕವೈರಾಗ್ಯ ದಿಂದ ಒಡಗೂಡಿದ ಜೀವಿಗೆ ತತ್ತ್ವವು ತನಗೇ ಅನುಭವದಲ್ಲಿ ತಿಳಿಯಬರುತ್ತದೆ, ಎನ್ನುತ್ತಿದ್ದರು. ಮಾಂಡೂಕ್ಯಭಾಷ್ಯಪಾಠವಾದ ಮೇಲೆ - ಇದರಲ್ಲಿ ತಿಳಿಸಿರುವದನ್ನು ಬಹಳ ಸೂಕ್ಷ್ಮವಾಗಿ ತಮ್ಮಲ್ಲೇ ಹೊಂದಿಸಿಕೊಂಡು ಯಾವಯಾವ ಉಪಾಧಿಗಳನ್ನು ಇಟ್ಟುಕೊಂಡು ಉಪೇಯವನ್ನು ತಿಳಿಸಿದೆಯೋ ಹಾಗೆ ಅನುಭವದ ಕಡೆಗೆ ತಿರುಗಿ ನೆಲೆನಿಲ್ಲುವಂತೆ ಮಾಡಿಕೊಳ್ಳಬೇಕು, ತಿಳಿದಿದ್ದರೂ ಮೆಲುಕು ಹಾಕಬೇಕು, ಹಸುಗಳು ಹುಲ್ಲನ್ನೆಲ್ಲಾ ತಿಂದು ರಾತ್ರಿ ಮಲಗಿ ಮೆಲಕನ್ನು ಹಾಕುತ್ತಾ ರಕ್ತಗತ ಮಾಡಿಕೊಳ್ಳು ವಂತೆ ಅಂತ ತಿಳಿಸಿದರು.

1942ರ ಸುಮಾರಲ್ಲಿ ನಮ್ಮ ತಾಯಿ ಶೇಷಮ್ಮನವರು ಗುರುಗಳ ಸೇವೆಮಾಡಿ ಕೊಂಡಿರುತ್ತೇನೆಂತ ಹೊಳೆನರಸೀಪುರಕ್ಕೆ ಹೋದರು. ಅವರು ಸ್ವತಃ ವೇದಾನ್ತ ತತ್ತ್ವದ ಹಾಡುಗಳನ್ನು ಹೇಳುತ್ತಿದ್ದರು. ಅವರಿಗೆ ಕಾಶಿವಾಸಿಗಳೆಂಬ ಸಾಧುವರ್ಯರಿಂದ ಉಪದೇಶವಾಗಿತ್ತು. ಅವರು ಊರಲ್ಲಿ ಒಂದು ಕೊಠಡಿ ಮಾಡಿಕೊಂಡಿದ್ದರು. ಬೆಳಿಗ್ಗೆ ಹೊಳೆಸ್ನಾನ ಮಾಡಿಕೊಂಡು, 8 ಗಂಟೆಯ ಮೇಲೆ ಕಾರ್ಯಾಲಯಕ್ಕೆ ಹೋಗಿ ಗುರುಗಳಿಗೆ ಅಡಿಗೆಮಾಡಿ ಬಡಿಸಿ ಎಲ್ಲಾ ಕೆಲಸ ಮಾಡಿಕೊಟ್ಟು ಮನೆಗೆ ಬಂದು ತಮ್ಮ ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದರು. ಸಾಯಂಕಾಲ 4 ಗಂಟೆಗೆ ಮತ್ತೆ ಕಾರ್ಯಾಲಯಕ್ಕೆ ಹೋಗುತ್ತಿದ್ದರು. ಪುರಾಣಶ್ರವಣ ಕಾರ್ಯಾಲಯದ ಕೆಲಸಗಳನ್ನು ಮುಗಿಸಿಕೊಂಡು ರಾತ್ರೆ ಕೊಠಡಿಗೆ ಬರುತ್ತಿದ್ದರು.

ಶ್ರೀಯವರು ಸಂನ್ಯಾಸ ಸ್ವೀಕರಿಸಿದ ವರ್ಷ, 1948, ಪುಷ್ಯ ಶುದ್ಧ ಚತುರ್ಥಿ ಸೋಮವಾರ ಬೆಳಿಗ್ಗೆ 7.00 ಗಂಟೆಯಲ್ಲಿ ನಮ್ಮ ತಾಯಿ ಶೇಷಮ್ಮನವರು ಕೃಷ್ಣಪ್ಪ ಎಂಬುವರಿಗೆ ಕಾಫಿ ಮಾಡಿಕೊಟ್ಟು 8.00 ಗಂಟೆಗೆ ತಮ್ಮ ಆರೋಗ್ಯ ಸರಿಯಾಗಿಲ್ಲ ಅಂತ ಕಾರ್ಯಾಲಯದ ಷೀಟ್ ಮನೆಯಲ್ಲಿ ಮಲಗಿಕೊಂಡು ಕಾರ್ಯಾಲಯದ ಕ್ಲಾರ್ಕನ್ನು ಕರೆದು ತಮಗೆ ಆರೋಗ್ಯವಿಲ್ಲವೆಂದೂ, ಈ ವಿಷಯವನ್ನು ತಿಳಿಸಿ ಅಂತ

ಅವರೆ ದುಡ್ಡು ಕೊಟ್ಟು ತಮ್ಮ ಊರಾದ ಬಾಣಾವರದ ಅಗ್ರಹಾರದಲ್ಲಿ ತಮ್ಮ ಮಕ್ಕಳಿದ್ದಾರೆ ಅವರಿಗೆ, ಬೇಲೂರಲ್ಲಿದ್ದ ನಮ್ಮ ತಾಯಿಯ ಅಣ್ಣ ಸೀತಾರಾಮ ಭಟ್ಟರಿಗೂ ಮತ್ತು ಅಲ್ಲೇ ಇದ್ದ ನನ್ನ ತಂಗಿಗೂ ಟೆಲಿಗ್ರಾಂ ಮಾಡಿಸಿದರಂತೆ. ಬಂದ ಪ್ಲೀಡರ್ ಶ್ರೀ ನರಸಿಂಹಯ್ಯನವರು ಇವರು ಕೇಳಿದಂತೆ ಶ್ರೀವಿಷ್ಣುಸಹಸ್ರನಾಮ ಪಾರಾಯಣ ಮಾಡಿದರಂತೆ. ಅಷ್ಟರಲ್ಲಿ ಅಲ್ಲಿಗೆ ಬಂದ ಅರಕಲಗೂಡು ಶ್ರೀ ಶ್ರೀಕಂಠಯ್ಯನವರು ನನ್ನ ತಾಯಿಯವರು ತಮ್ಮನ್ನು ಹೊರಗೆ ಮಲಗಿಸಿ ಅಂತ ಕೇಳಲು ಅವರು ನೀವೂ ಕಾರ್ಯಾಲಯದವರೇ ಇಲ್ಲೇ ಇರಿ ಎಂದರಂತೆ. ಸುಮಾರು 11 ಗಂಟೆ ಆಗಲು, ಅಲ್ಲಿದ್ದವರಲ್ಲಿ ಶ್ರೀ ಸ್ವಾಮಿಗಳಿಗೆ ಭಿಕ್ಷೆ ಆಗುತ್ತಲೂ ಅವರಿಗೆ ನನ್ನ ಸ್ಥಿತಿಯನ್ನು ತಿಳಿಸಿ ಎಂದು ನಮ್ಮ ತಾಯಿ ಹೇಳಲು ಅವರು ಹನ್ನೆರಡು ಗಂಟೆಗೆ ತಿಳಿಸಿದರಂತೆ. ಶ್ರೀ ಸ್ವಾಮಿಗಳು ಬಂದು ವಿಚಾರಿಸಿದ ಮೇಲೆ ತೀರ್ಥಕೊಡಿ ಅಂತ ಕೇಳಲು ಆಗ ಶ್ರೀಗಳು ಕಮಂಡಲು ತಂದು ತೀರ್ಥ ಕೊಟ್ಟರಂತೆ. ಆಗ ತೀರ್ಥಕುಡಿದು ನಾರಾಯಣ ಎಂದು ಕಣ್ಣು ಮುಚ್ಚಲು......

ತಾಯಿಯವರು ನಮ್ಮ ಊರಿನಿಂದ ಹೊಳೆನರಸೀಪುರಕ್ಕೆ ಗುರುಸೇವೆಗೆ ಹೋಗುತ್ತೇನೆ ; ನಾನು ಅಲ್ಲಿ ಹೊಳೆದಡದಲ್ಲಿ ಮುಕ್ತಿಯನ್ನೂ ಪಡೆಯುತ್ತೇನೆ ; ಆನಂತರ ನಿಮ್ಮದೇನಿದೆಯೋ ನಡೆಯಿಸಿ ಅಂತ ತಿಳಿಸಿದ್ದರು. ಅದು ಹಾಗೇ ಆಯಿತು. ಗುರುಗಳ ಸೇವೆ ಮಾಡುತ್ತಾ ಕಾರ್ಯಾಲಯದ ಷೀಟ್ ಮನೆಯಲ್ಲೇ ಮುಕ್ತರಾದರು. ಅದು ಅವರ ಮತ್ತು ನಮ್ಮ ಸೌಭಾಗ್ಯವೇ ಸರಿ. ಶ್ರೀಗಳು ಶ್ರೀಮದ್ಭಗವದ್ಗೀತಾ ಉಪನ್ಯಾಸಮಾಲಿಕೆಯಲ್ಲಿ 9.1.1949ರಂದಿನ ಉಪನ್ಯಾಸ ಮಾಡುವಾಗ ವಿವಿಕ್ತದೇಶಸೇವೆ (ಗೀತಾ 13-10) ಎಂಬ ಸಾಧನವನ್ನು ತಿಳಿಸುವಾಗ ನಮ್ಮ ತಾಯಿಯವರನ್ನು ಉದಾಹರಿಸಿರುತ್ತಾರೆ.

ಶ್ರೀಸ್ವಾಮಿಗಳು ಭದ್ರಾವತಿಯಲ್ಲಿ ಗೀತಾ ಉಪನ್ಯಾಸಮಾಡುವಾಗ ಕೆಲ ಶ್ರೋತೃಗಳು ವ್ಯವಹಾರ-ಪರಮಾರ್ಥಗಳನ್ನು ಹೇಗೆ ಹೊಂದಿಸುವದು ? ನಾವು ಕಾರ್ಮಿಕರು, ವೈದಿಕಕರ್ಮವೇ ತಿಳಿಯುವಂತಿಲ್ಲ, ಇನ್ನು ಹೇಗೆ ಕರ್ಮಯೋಗ ಮಾಡುವದು ? ಎಂದು ಪ್ರಶ್ನೆಮಾಡಿದರು. ಶ್ರೀಗಳು ವ್ಯವಹಾರದಲ್ಲಿ ಕರ್ಮ ಯೋಗ ಅಂತ ಉಪನ್ಯಾಸಕ್ಕೆ ವಿಷಯವನ್ನು ಇಟ್ಟುಕೊಂಡು, ನಿಮಗೆ ಭಗವಂತನು ಶರೀರ ಇಂದ್ರಿಯಗಳು ಮನಸ್ಸು ಎಲ್ಲಾ ಆಯಾಯ ಕೆಲಸ ಮಾಡುವಂತೆ ಅನುಗ್ರಹಿಸಿ ರುತ್ತಾನೆ. ಜೀವನಕ್ಕಾಗಿ ಕೆಲಸವನ್ನು ಒದಗಿಸಿರುತ್ತಾನೆ. ಅದಕ್ಕೆ ತಕ್ಕ ಫಲವೂ ಸಿಗುವಂತೆ ಅನುಗ್ರಹಿಸಿರುತ್ತಾನೆ. ಅಂಥ ಭಗವಂತನನ್ನು ಮನಸ್ಸಿನಲ್ಲಿ ಭಾವಿಸಿಕೊಳ್ಳಿ. ಇದನ್ನು ಅಲ್ಲಿ ಮನಃಪೂರ್ವಕವಾಗಿ ಕರ್ತವ್ಯದೊಡನೆ

ಭಗವಂತನಿಗೇ ಅರ್ಪಣೆ ಮಾಡುತ್ತೇನೆ ಅಂತ ರಾಂ ರಾಂ ಅಂದು ಕೊಳ್ಳುತ್ತಾ ಕೆಲಸ ಮಾಡಿದರೆ ಅದೇ ಕರ್ಮಯೋಗ ಎಂದು ಅನುಗ್ರಹಮಾಡಿದರು.

ಒಂದು ಕಾರ್ಯಕ್ರಮದಲ್ಲಿ ಅವರಿಗೆ ಛಳಿಜ್ವರ ಬಂದಿತ್ತು, ಅವರು ಈ ದಿನ ಏನು ಉಪನ್ಯಾಸ ವಿಷಯ ಅಂತ ಕೇಳಿದರು. ನಿದಿಧ್ಯಾಸನ ಅಂದಾಗ ನಾನು ಈಗ ಮಾಡುತ್ತಾ ಇದ್ದೇನಲ್ಲ ಇದೇ ತಾನೆ ? ನಿದಿಧ್ಯಾಸನ ಅಂದರು. ಜ್ವರದಲ್ಲೇ ಉಪನ್ಯಾಸಮಾಡಲು ನಿಶ್ಚಯಿಸಿ ನನಗೆ ಮನೆಗೆ ಹೋಗಿ ಬೃಹದಾರಣ್ಯಕ ವಾರ್ತಿಕ ತನ್ನಿ ಎಂದರು. ಕೂರುವದಕ್ಕೂ ಆಗುತ್ತಿರಲಿಲ್ಲ, ಮಲಗಿಕೊಂಡೆ 4-5 ಪಂಕ್ತಿಗಳನ್ನು ಬರೆದುಕೊಂಡು ಟಿಪ್ಪಣಿ ಮಾಡಿಕೊಂಡು ಉಪನ್ಯಾಸಮಾಡಿದರು. ಶ್ರೀಗಳವರು ಯಾವಾಗಲೂ ಉಪನ್ಯಾಸ ಮಾಡುವ ಮೊದಲು ತಮ್ಮಲ್ಲಿಯೇ ಆ ವಿಷಯದ ಬಗ್ಗೆ ಚೆನ್ನಾಗಿ ಯೋಚಿಸಿ, ಟಿಪ್ಪಣಿ ಮಾಡಿಕೊಂಡು ಅನಂತರ ಉಪನ್ಯಾಸಮಾಡುತ್ತಿದ್ದರು. ಯಾವ ವಿಷಯದ ಉಪನ್ಯಾಸ ಮಾಡಿದರೂ ಆ ವಿಷಯಕ್ಕೆ ಒಂದು ಆಕಾರವನ್ನು ಕೊಡುತ್ತಿದ್ದ ಮಹಾಶಿಲ್ಪಿಗಳು.

ಒಮ್ಮೆ ನಾನು, ನನಗೆ ಸೂತ್ರಭಾಷ್ಯಪಾಠ ಅನುಗ್ರಹ ಆಗಲಿಲ್ಲವಲ್ಲ ಅಂತ ಕೇಳಿದೆ. ಅದಕ್ಕೆ, 'ವಿಷ್ಣುಸಹಸ್ರನಾಮ' ನಿತ್ಯಪಾರಾಯಣ ಮಾಡಿ, ಅದರಲ್ಲಿ ವೇದಾಂತಗೋ ಬ್ರಾಹ್ಮಣಸ್ಯಾತ್ ಅಂತ ಇಲ್ಲವಾ ? ಅದಕ್ಕಿಂತ ಇನ್ನೇನು ಅನುಗ್ರಹಬೇಕು ಅಂತ ತಿಳಿಸಿದರು. ಹೀಗೆ, ಗುರುಗಳ ಹತ್ತಿರ ಯಾರಾದರೂ ಬಂದು, ತಮಗೆ ಈ ರೀತಿಯಾದ ತೊಂದರೆ ಇದೆ ಎಂದು ಪರಿಹಾರ ಕೇಳಿದಾಗ ತಾವು ಸ್ವಂತವಾಗಿ ಏನನ್ನೂ ಹೇಳದೆ, ಯಾವದಾದರೂ ಜಪ, ಪಾರಾಯಣ ಇತ್ಯಾದಿಗಳನ್ನು ತಿಳಿಸಿ ಅದಕ್ಕೆ ಫಲವನ್ನು ಶಿಷ್ಟರು ಹೀಗೆ ಹೇಳಿರುತ್ತಾರೆ, ಹಾಗೆ ನಡೆಸಿ ಎನ್ನುತ್ತಿದ್ದರು.

ಶ್ರೀಯವರು ಬೆಂಗಳೂರಿಗೆ ಹೋಗಿಬಂದು ಮಾಡುತ್ತಿದ್ದರು. ಒಂದು ಅನುಷ್ಠಾನದಲ್ಲಿ ಹೊಳೆನರಸೀಪುರದಲ್ಲಿ ನಾವುಗಳು ಇದ್ದಾಗ ಸಮಾಧಿ ವಿಷಯ ಪ್ರಸ್ತಾಪವಾಯ್ತು, ಆಗ, ಈಗ ಸಮಾಧಿ ಆಗಿರುವ ಜಾಗವನ್ನೇ ತೋರಿಸಿ ಇಲ್ಲೇ ಮಾಡಬೇಕು, ನಾನು ಈ ಪ್ರಿಂಟಿಂಗ್ ಪ್ರೆಸ್ಸಲ್ಲಿ ಆಗುವ ಶಬ್ದವನ್ನು ಕೇಳುತ್ತಲೇ ಇರಬೇಕು, ಪುಸ್ತಕಗಳು ಹೊರಗೆ ಬರುತ್ತಿರಬೇಕು ಅಂತ ತಿಳಿಸಿದ್ದರು. ನಾನು ಅವಧಾನಿಗಳು ಸಮಾಧಿಯ ಮೇಲೆ ಲಿಂಗಪ್ರತಿಷ್ಠೆ ಮಾಡಬೇಕೆಂದಿರುತ್ತೇವೆ ಎಂದೆವು, ಅವರು ಯಾವದೂ ಬೇಡ. ಬಿಲ್ವಪತ್ರೆ ಮರವನ್ನು ಬೇಕಾದರೆ ಹಾಕಬಹುದು ಎಂದರು. ಸಮಾಧಿಯಾಗುವಾಗ ಅವಧಾನಿಗಳಿಗೂ ನನಗೂ, ಶಾಸ್ತ್ರೋಕ್ತವಾಗಿ ನಾವೇ ನಡೆಸಬೇಕು ಎಂದಿದ್ದರು. ಅದರಂತೆ ಯಾವ ಸುಕೃತ

ದಿಂದಲೋ ಅವರ ಪ್ರೇಮಾತಿಶಯದಿಂದಲೋ ನಮ್ಮಗಳಿಗೆ ಆ ಭಾಗ್ಯವು ದೊರೆತದ್ದು ಅವರ ಅನುಗ್ರಹವೇ. ಅದು ಯಾವಾಗಲೂ ನಮ್ಮ ಮೇಲೆ ಇರುತ್ತದೆ.

ಶ್ರೀಶ್ರೀಯವರು ಒಮ್ಮೆ ಶಿವಮೊಗ್ಗಾದ ಸಪ್ತಾಹದಲ್ಲಿ ಉಪನ್ಯಾಸಮಾಡುವಾಗ, ಶ್ರೀ ಶಂಕರಾಚಾರ್ಯರವರು ಬರೆದಿರುವ ಉಪನಿಷತ್ತು ಭಾಷ್ಯದಲ್ಲಿ ಹೇಳಿರುವ ಆತ್ಮಜ್ಞಾನವನ್ನು ತಿಳಿದುಕೊಂಡು ಕೃತಾರ್ಥರಾಗಬೇಕೆಂಬುದು ಸರಿಯೇ. ಆದರೆ ಶಾಸ್ತ್ರಾದಿಗಳನ್ನು ಅಭ್ಯಾಸಮಾಡಿ ಅದರ ತತ್ತ್ವವನ್ನು ತಿಳಿಯುವದು ಸಾಮಾನ್ಯ ರಿಗೆ ಆಗುವದಿಲ್ಲ. ಆದ್ದರಿಂದ ನಾವು ನಮ್ಮ ಅಧಿಕಾರಕ್ಕೆ ತಕ್ಕಂತೆ ನಮ್ಮ ಆಡುಭಾಷೆಯಲ್ಲಿ ವಿಚಾರಮಾಡಿ ತಿಳಿಯಬೇಕು. ನಮ್ಮ ಅನುಭವದಲ್ಲಿರುವ ನಮ್ಮ ಆತ್ಮನ ವಿಚಾರವನ್ನೇ ಅನುಭವದಲ್ಲೇ ಗೊತ್ತಾಗುವಂತೆ ತಿಳಿದುಕೊಳ್ಳ ಬೇಕು. ನಮಗೆ ಆಸ್ತಿಕ್ಯಬುದ್ಧಿ, ತತ್ವವನ್ನು ತಿಳಿಯುವ ಆದರ ಇದ್ದು, ಅದನ್ನೇ ವಿಚಾರಮಾಡುತ್ತಿದ್ದರೆ ತಿಳಿದೇ ತಿಳಿಯುತ್ತದೆ ಎನ್ನುತ್ತಿದ್ದರು. ಅವರು ಶಾಸ್ತ್ರೋಕ್ತ ಧರ್ಮವನ್ನೆಲ್ಲ ಸುಲಭವಾಗಿ ನಮ್ಮ ಮನಸ್ಸಿಗೆ ಬರುವಂತೆ ತಿಳಿಮಾಡಿ, ಹಾಲನ್ನು ಚೆನ್ನಾಗಿ ಕಾಯಿಸಿ ಹೆಪ್ಪುಹಾಕಿ, ಕಡೆದು ಬೆಣ್ಣೆಯನ್ನು ತೆಗೆದು ಚೆನ್ನಾಗಿ ಘಮಘಮ ವಾಸನೆಬರುವಂತೆ ಕಾಯಿಸಿ ಹತ್ತಿರವಿದ್ದವರ ಮೂಗಿಗೆ ಆ ವಾಸನೆ ಸೇರುವಂತೆಮಾಡಿ ನಮ್ಮ ಅಂತಃಕರಣದಲ್ಲಿರುವ ಹಿಂದಿನ ವಾಸನೆಗಳನ್ನು ಕಳೆದು ಈ ವಾಸನೆಯನ್ನೇ ಹುಡುಕಿಕೊಂಡು ಹೋಗುವಂತೆ ವೇದಾನ್ತತತ್ತ್ವವನ್ನು ತಿಳಿಸುತ್ತಿದ್ದರು. ಹೀಗೆ ಅದನ್ನು ಪಡೆಯಲು ಗುರುಗಳ ಸೇವೆಮಾಡಿ ಅವರ ಅನುಗ್ರಹಕ್ಕೆ ಪಾತ್ರರಾಗಿ ನಾವೂ ಸಾಧನ ಗಳನ್ನು ಸಾಧಿಸಿ ಶಾಂತರಾಗಿ ನಮ್ಮಲ್ಲಿಯೇ ನಾವು ತಿಳಿದು ಆನಂದಪಡುವಂತಾಗಲು ಸಾಧ್ಯ ಎಂದು ತೋರಿದ ಪರಮಗುರುಗಳು. ಗುರುಗಳು ನಿತ್ಯದಲ್ಲಿ ನಡೆಸುತ್ತಿದ್ದ ಭಾಷ್ಯಪಾಠ, ಕಾಲಕಾಲಕ್ಕೆ ನಡೆಸುತ್ತಿದ್ದ ತುರೀಯಾಶ್ರಮವಿಹಿತ ಕರ್ಮಾನುಷ್ಠಾನ ಗಳು, ಅವರ ನಡೆ-ನುಡಿ, ಆಚಾರವಿಚಾರಗಳು ಮತ್ತೆ ಎಲ್ಲವೂ ಭಗವದಾರಾಧನೆ ಎಂಬ ಭಾವ, ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೆ ಬಂದು ತಂಗುತ್ತಿದ್ದ ಜಿಜ್ಞಾಸುಗಳಿಗೆ ಪ್ರೇರಕವೂ, ದಿವ್ಯಾನುಭವವೂ, ಮಂಗಳಕರವಾದ ಅನುಗ್ರಹವೂ ಆಗಿರುತ್ತಿತ್ತು.

ಈ ಜನ್ಮದಲ್ಲಿ ಇಂಥ ವೇದಾನ್ತತತ್ತ್ವಾನುಭವಿಗಳಾದ ಗುರುಗಳ ದರ್ಶನ, ಉಪದೇಶ ದೊರೆತಿರುವದು ನಮ್ಮಗಳ ಭಾಗ್ಯ. ಕರ್ಮ, ಭಕ್ತಿ, ಜ್ಞಾನ ಈ ಯೋಗಗಳಿಂದ ಯಾವ ಪರಮಾರ್ಥತತ್ತ್ವ ತಿಳಿದುಬರುತ್ತದೆ ಎಂದು ಯಾವ ಶಿಷ್ಟರು ಹೇಳಿರುತ್ತಾರೋ ಅದು ನಮಗೆ ಸಾಕ್ಷಾತ್ತಾಗಿ ಅನುಭವಕ್ಕೆ ಬರುವಂತೆ ಶ್ರೀಶ್ರೀಗಳೇ ನಡೆದು ತೋರಿಸಿಕೊಟ್ಟಿರುತ್ತಾರೆ.

★★★★

# ಪರಮಾರ್ಥದ ಪಥದಲ್ಲಿ

## (ಶ್ರೀ ದೇವರಾಯ ಕುಲಕರ್ಣಿ, ಹೊಂಬಳ)

1943ನೆಯ ಇಸವಿಯ ಮಾತು. ಒಂದು ದಿನ ಗದಗ್ ರೈಲ್ವೆ ಸ್ಟೇಷನ್ನಿನ ಬುಕ್‌ಸ್ಟಾಲಿನಲ್ಲಿ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯನ್ನು ಮೊದಲನೆಯ ಸಲ ಕಂಡಾಗ ನನಗಾದ ಆನಂದಕ್ಕೆ ಪಾರವೇ ಇಲ್ಲ. ಏಕೆಂದರೆ 1941ನೆಯ ಡಿಸೆಂಬರ್ ತಿಂಗಳಿನಿಂದಲೇ ನನ್ನ ಸ್ವಂತ ಊರಾದ ಹೊಂಬಳ (ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನ ಒಂದು ಗ್ರಾಮ)ದಲ್ಲಿ ಸದ್ಗುರು ಬ್ರಾ॥ ಶ್ರೀ ಅಗ್ನಿಹೋತ್ರಿ ಶಂಕರಭಟ್ಟ ಮಾಸ್ತರರಿಂದ 'ವೇದಾಂತಪಂಚದಶಿ'ಯನ್ನು ಶ್ರವಣಮಾಡುತ್ತಿದ್ದೆನಾದ್ದರಿಂದ ಆ ಸಮಯದಲ್ಲಿ ಇಂಥ ವಿಷಯವನ್ನೇ ತಿಳಿಸುವ ಒಂದು ಪತ್ರಿಕೆಯೂ ಇದೆ ಎಂಬುದನ್ನರಿತಾಗ ಮನಸ್ಸಿಗೆ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಓದಿದಾಗ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಸಾಧಾರಣಪರಿಚಯವುಂಟಾಯಿತು.

ಮುಂದೆ ಚಂದಾದಾರನಾಗಿ ಕಾರ್ಯಾಲಯದಿಂದ ಕೆಲವು ಪುಸ್ತಕಗಳನ್ನೂ ಸಹ ನಮ್ಮೂರಿಗೆ ತರಿಸಿ, ಒಂದು 'ವೇದಾಂತವಾಚನಾಲಯ'ವನ್ನು ಏರ್ಪಡಿಸಿದ್ದೂ ಆಯಿತು. 1948ರಲ್ಲಿ ಪ್ರಪ್ರಥಮವಾಗಿ ನಾನೇ ಹೊಳೆನರಸೀಪುರದ ಕಾರ್ಯಾಲಯಕ್ಕೆ ಬಂದು ಶ್ರೀಚತುರ್ಭುಜಪಟ್ಟಾಭಿರಾಮದೇವಸ್ಥಾನದಲ್ಲಿ 'ನಚಿಕೇತೋಪಾಖ್ಯಾನ' ಎಂಬ ಹರಿಕಥೆ ಯನ್ನೂ ಸಹ ಶ್ರೀಗಳ ಸನ್ನಿಧಿಯಲ್ಲಿ ಹೇಳಿ ತೋರಿಸಿದೆ. ಹೀಗೆಯೇ ಮುಂದೆ 1952ರ ವರೆಗೂ ಕಾರ್ಯಾಲಯದ ಪರಿಚಯ ಬೆಳೆಯುತ್ತಲೇ ಹೋಯಿತು.

ಶ್ರೀಗಳವರ ಪುಸ್ತಕ, ಉಪದೇಶ – ಮುಂತಾದವುಗಳ ಬಗ್ಗೆ ಆದರವಿತ್ತಾದರೂ ಒಟ್ಟಿನಲ್ಲಿ ನಾವು ಹೇಳುವಂತೆಯೇ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬುದನ್ನೇ ಭಾಷ್ಯದ ಮೂಲಕ ಶ್ರೀಗಳು ಹೆಚ್ಚು ವ್ಯವಸ್ಥಿತರೂಪದಿಂದ ಹೇಳುವರು ; 'ತತ್ತ್ವವೆಲ್ಲಾ ಒಂದೇ, ರೀತಿಗಳು ಭಿನ್ನ' – ಎಂದು ನಾನು ಅಭಿಪ್ರಾಯಮಾಡಿಕೊಂಡಿದ್ದೆ.

ಹುಬ್ಬಳ್ಳಿಯ ಚಾತುರ್ಮಾಸ್ಯಸಂಕಲ್ಪವು ಮುಗಿದಾಗ ಶ್ರೀಗಳು ಹೊಳೆನರಸೀಪುರಕ್ಕೆ ಹೋಗುವ ದಾರಿಯಲ್ಲಿ ರಾಣಿಬೆನ್ನೂರಿಗೆ ನಾನೂ ಶ್ರೀಗಳ ಜೊತೆಯಲ್ಲೇ ಪ್ರವಾಸಮಾಡಿದೆ. ಆಗ ಶ್ರೀಗಳು 'ಪಂಚದಶಿಯಲ್ಲಿ ಆತ್ಮಜ್ಞಾನಕ್ಕೆ ನಿರ್ವಿಕಲ್ಪ ಸಮಾಧಿಯು ಅವಶ್ಯವೆಂದು ಹೇಳಿದೆಯೆ ?' ಎಂದು ನನ್ನನ್ನು ಕುರಿತು ಕೇಳಿದರು. ನಾನು ತೃಪ್ತಿದೀಪಪ್ರಕರಣದಲ್ಲಿಯ ಈ ವಿಚಾರವನ್ನು ಕುರಿತು 'ಯತ್ರ ತ್ವಸ್ಯ' ಎಂಬ ಶ್ರುತಿ

ಯೊಂದಿಗೆ ವಿವರಿಸಿ ಹೇಳಿ, ಆತ್ಮಜ್ಞಾನಕ್ಕೂ ನಿರ್ವಿಕಲ್ಪಸಮಾಧಿಗೂ ಸಂಬಂಧವಿಲ್ಲ ಎಂದು ಹೇಳಿದೆ. ಅಷ್ಟರಲ್ಲಿ ರೈಲು ರಾಣೇಬೆನ್ನೂರು ನಿಲ್ದಾಣಕ್ಕೆ ಬಂದಿತು. ಅದೇ ಸಂಜೆ ರಾಣೇಬೆನ್ನೂರಿನ ಶ್ರೀ ಗುಂಡೇರಾವ್ ನಾಡಿಗೇರರ ಮನೆಯಲ್ಲಿ ಶ್ರೀಗಳು ಉಪನ್ಯಾಸಮಾಡುವಾಗ 'ಯತ್ರ ತ್ವಸ್ಯ' ಎಂಬ ಮಂತ್ರವನ್ನೇ ಭಾಷ್ಯಾಭಿಪ್ರಾಯ ದೊಂದಿಗೆ ವಿವೇಚಿಸಿದರು. ನಾನು ಹೇಳಿದ್ದಕ್ಕೂ ಶ್ರೀಗಳು ವಿವೇಚಿಸಿದ್ದಕ್ಕೂ ಮಹ ದಂತರವಾಯಿತು. ಈ ಶ್ರುತಿಯು ಸುಷುಪ್ತಿ ಹಾಗೂ ವಿದೇಹಕೈವಲ್ಯವನ್ನು ಕುರಿತು ಹೇಳುತ್ತದೆ ಎಂದು ನಾನು ಹೇಳಿದ್ದೆ. ಆದರೆ ಶ್ರೀಗಳು ತಮ್ಮ ಉಪನ್ಯಾಸದಲ್ಲಿ ಇದು ಜ್ಞಾನನಿಷ್ಠೆಯನ್ನೇ ಹೇಳುವದಕ್ಕೆ ಬಂದಿದೆ ಎಂಬುದನ್ನು ಸಕ್ಕರೆಯ ಅಚ್ಚಿನ ದೃಷ್ಟಾಂತ ವನ್ನು ಕೊಟ್ಟು ತಿಳಿಸಿದ್ದರು. ನಾನು ಶ್ರೀಗಳಿಗೆ ಆಗಲೇ ನನ್ನ ಸಂತೋಷವನ್ನು ವ್ಯಕ್ತ ಪಡಿಸಿ 'ತಾವು ನಿರೂಪಿಸಿದ್ದು ನಾನು ತಿಳಿಸಿದ್ದಕ್ಕಿಂತಲೂ ಹೆಚ್ಚಿನ ತರಗತಿಯದಾಗಿದೆ. ಈ ಶ್ರುತಿಯ ಬಗ್ಗೆ ನನಗೊಂದು ಹೊಸಬೆಳಕು ಸಿಕ್ಕಂತಾಯಿತು' ಎಂದು ಹೇಳಿಯೇ ಬಿಟ್ಟೆ.

ಶ್ರೀಗಳ ಹುಬ್ಬಳ್ಳಿಯ ಚಾತುರ್ಮಾಸ್ಯದ ಉಪನ್ಯಾಸಗಳು ಪತ್ರಿಕೆಯಲ್ಲಿ ಬರತೊಡಗಿ ಅವುಗಳಲ್ಲಿಯ 1954ನೆಯ ಜೂನ್ ಸಂಚಿಕೆಯಲ್ಲಿ ಈಗ ವೇದಾಂತವನ್ನು ಹೇಳುವ ಪದ್ಧತಿಯು ಹೀಗಿದೆ ಎಂದು ಮೊದಲಾಗಿ ಸಾಧಾರಣ ಪಂಚದಶಿಯ ಒಂದನೆಯ ಅಧ್ಯಾಯ 1 ರಿಂದ 30 ಶ್ಲೋಕಗಳವರೆಗಿನ ಅಭಿಪ್ರಾಯ ವನ್ನು ಭಾಷಾಂತರಿಸಿದಂತಿದ್ದ ವಾಕ್ಯಗಳನ್ನು ಉದಾಹರಿಸಿ 'ಈ ಅಭಿಪ್ರಾಯಗಳು ಶ್ರುತಿ, ಮುಕ್ತಿ, ಅನುಭವ, ಭಾಷ್ಯಗಳಿಗೆ ವಿರೋಧವಾಗಿವೆ' ಎಂದು ಬರೆದಿತ್ತು. ನಮ್ಮ ಗುರುಗಳಾದ ಶ್ರೀ ಅಗ್ನಿಹೋತ್ರಿ ಮಾಸ್ತರರು 'ಶ್ರೀಗಳು ಪಂಚದಶಿಯನ್ನು ಖಂಡಿಸಿ ದ್ದಾರೆ, ಇದು ಯೋಗ್ಯವಲ್ಲ' ಎಂದು ನನಗೊಂದು ಪತ್ರ ಬರೆದರು. ಶ್ರೀ ನಾರಾಯಣಗಿರಿ ದೀಕ್ಷಿತರ ಮನೆಯಲ್ಲಿ ಸಾಧಾರಣ ಸಭೆ ಸೇರಿ 'ಪಂಚದಶಿಯನ್ನು ಖಂಡಿಸಿದ್ದು ತಪ್ಪು' ಎಂದು ನಿರ್ಣಯಿಸಿ ಶ್ರೀಗಳಿಗೊಂದು ಮನವಿಯನ್ನು ಅನೇಕರ ರುಜುಗಳೊಡನೆ ಕಾರ್ಯಾಲಯಕ್ಕೆ ದಾವಣಗೆರೆಯಿಂದ ಕಳುಹಿಸಲಾಯಿತು.

ಶ್ರೀಗಳಿಂದ ಬಂದ ಉತ್ತರದಲ್ಲಿ "ನಾವು ಬರೆದ ಅಭಿಪ್ರಾಯಗಳು ಪಂಚದಶಿಯ ಭಾಷಾಂತರವಲ್ಲ, ಪಂಚದಶಿಗೆ ವಿವರಣವ್ಯಾಖ್ಯಾನವೂ ಅದಕ್ಕೆ ಪಂಚಪಾದಿಕಾವ್ಯಾಖ್ಯಾನವೂ ಮೂಲವಾಗಿವೆ. ನಾವೂ ಪಂಚಪಾದಿಕೆಯನ್ನೇ ಹಿಡಿದು ಖಂಡಿಸಿದ್ದೇವೆ" ಎಂದು ತಿಳಿಸಲಾಗಿತ್ತು. ಆದರೂ ನನಗಾಗಲಿ ನಮ್ಮ ಗುರುಗಳಿಗಾಗಲಿ ಆ ಉತ್ತರವು ಚೆನ್ನಾಗಿ ಅರ್ಥವಾಗಲಿಲ್ಲ ; ಆದರಿಂದ ಸಮಾಧಾನವೂ ಆಗಲಿಲ್ಲ, ಹಾಗೆಂದು ಪುನಃ ಶ್ರೀಗಳಿಗೆ ನಾವೇ ಬರೆದು ತಿಳಿಸಿದೆವು.

ಇಷ್ಟರಲ್ಲಿ ಮೊದಲನೆಯ ಮನವಿಯಲ್ಲಿ ರುಜುಹಾಕಿದವರ ಪೈಕಿ ಕೆಲವರಿಗೆ ಕಾರ್ಯಾಲಯದಿಂದ ಪತ್ರಬರೆದು 'ಈ ಕಾಗದಕ್ಕೆ ನೀವು ರುಜಹಾಕಿರುವಿರಲ್ಲವೆ ? ಇದರಲ್ಲಿ ನಿಮಗೆ ಯಾವ ವಿಷಯದಲ್ಲಿ ಸಂದೇಹಬಂದಿದೆ ?' ಎಂದು ವೈಯಕ್ತಿಕ ವಾಗಿ ಕಾರ್ಯಾಲಯದವರು ಕೇಳಿದ್ದರು. ಆ ಕಾಗದವನ್ನು ಕಂಡು ಕೆಲವರು 'ನಮಗೆ ಈ ಬಗ್ಗೆ ಏನೂ ತಿಳಿಯದು. ರುಜುಹಾಕಿದ್ದಕ್ಕಾಗಿ ಕ್ಷಮಿಸಿ' ಎಂದು ಕಾರ್ಯಾಲಯಕ್ಕೆ ಬರೆದುಕೊಂಡರು. ಈ ಸಮಾಚಾರಸಮೇತ ನಮಗೆ ಕಾರ್ಯಾಲಯದಿಂದ ಕಾಗದವು ಬಂದಾಗ ನಾನೂ ಹಾಗೂ ಶ್ರೀ ದೇಶಪಾಂಡೆ ನಾರಾಯಣರಾಯರು ಪ್ರತ್ಯೇಕ ಪತ್ರಗಳನ್ನು ಬರೆದು 'ಈ ಬಗ್ಗೆ ಪತ್ರವ್ಯವಹಾರ ನಿಲ್ಲಲಿ. ನಾವು ಶ್ರೀಗಳವ ರೊಂದಿಗೆ ಮಾತನಾಡಿ ನಿರ್ಣಯಿಸಿಕೊಳ್ಳುವೆವು. ನಮಗೆ ನಿಮ್ಮ ಉತ್ತರಗಳಿಂದ ಸಮಾಧಾನವಾಗಿಲ್ಲ. ಮಿಕ್ಕವರಬಗ್ಗೆ ನಾವು ಹೊಣೆಗಾರರಲ್ಲ', ಈ ಪತ್ರವ್ಯವಹಾರ ವನ್ನು ಪತ್ರಿಕೆಯಲ್ಲಿ ಹಾಕಬಾರದೆಂದು ಕೇಳಿಕೊಂಡೆವು.

1954ನೆಯ ಡಿಸೆಂಬರ್ ತಿಂಗಳಲ್ಲಿ ಶ್ರೀಗಳು ದಿಗಂಬರ ಸಪ್ತಾಹಕ್ಕೆ ಹಾವೇರಿಗೆ ಹೋಗಲು ಮಧ್ಯೆ ದಾವಣಗೆರೆಯಲ್ಲಿ ಕ್ಯಾಂಪ್ ಮಾಡಿದರು. ಆಗ ನಾನೂ ಹಾಗೂ ನಮ್ಮ ಗುರುಗಳ ಪುತ್ರರಾದ ಶ್ರೀ ಜಿ.ಎಸ್. ಅಗ್ನಿಹೋತ್ರಿಗಳೂ ಸೇರಿ ಶ್ರೀಗಳೊಂದಿಗೆ ಚರ್ಚಿಸಲು ಆರಂಭಮಾಡಿದೆವು. ಪಂಚದಶಿಯ ಒಂದನೆಯ ಪ್ರಕರಣದ ಮೊದಲಿನ 10 ಶ್ಲೋಕಗಳಿಗೆ ಅರ್ಥ, ತಾತ್ಪರ್ಯವನ್ನು ವಿವರಿಸುವಾಗಲೇ ಸಾರ್ವತ್ರಿ ಕಾನುಭವ, ಶ್ರುತಿ, ಅನುಭವಾನುಸಾರಿಯಾದ ಯುಕ್ತಿ, ಭಾಷ್ಯಾಭಿಪ್ರಾಯಗಳಿಗೆಲ್ಲ ವಿರೋಧವಿರುವದನ್ನು ಶ್ರೀಗಳು ಚೆನ್ನಾಗಿ ತೋರಿಸಿಕೊಟ್ಟರು. ಕೂಡಲೆ ನನಗಂತೂ ಹೊಸಕಣ್ಣು, ಹೊಸಬೆಳಕು ದೊರಕಿದಂತಾಗಿ ಅತ್ಯಾಶ್ಚರ್ಯಭಾವವು ಮನದಲ್ಲಿ ಮೂಡಿ ನಾವು ತಿಳಿದುದಕ್ಕಿಂತಲೂ ಸತ್ಯವು ಬೇರೆಯಾಗಿಯೇ ಇದೆ, ನಾವು ತಪ್ಪು ದಾರಿಯನ್ನು ಹಿಡಿದಿದ್ದೇವೆ, ಎಂದು ಹೃದಯವೇ ಹೇಳಿದಂತಾಯಿತು. ಹೀಗೆಯೇ ಶ್ರೀಗಳು ತಿರುಗಿಬರುವಾಗಲೂ ನನಗೆ ಉಪದೇಶಿಸಿ ಮತ್ತೆ ಮತ್ತೆ ಕಣ್ತೆರೆಯಿಸಿದರು. ದೈವಯೋಗದಿಂದ ಬೇರೆಬೇರೆ ನಿಮಿತ್ತದಿಂದ ಎರಡು ಮೂರು ಸಲ ಅವರು ದಾವಣಗೆರೆಗೆ ಬಂದಾಗಲೂ ಕೇವಲ ನನಗಾಗಿಯೇ ಹೆಚ್ಚುಕಾಲ ವಿನಿಯೋಗಿಸಿ ಪಂಚದಶಿಯ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಲೂ ಭಾಷ್ಯಾಭಿಪ್ರಾಯಗಳನ್ನು ವಿವರಿಸುತ್ತಲೂ ಬೋಧಿಸತೊಡಗಿದರು. ಕೊನೆಗೆ 1955ರಲ್ಲಿ ಚಾತುರ್ಮಾಸ್ಯವನ್ನು ದಾವಣಗೆರೆಯ ಶ್ರೀಶಿವಾನಂದತೀರ್ಥಗುರು ಅಧ್ಯಾತ್ಮಮಂದಿರದಲ್ಲಿಯೇ ಶ್ರೀಗಳು ನೆರವೇರಿಸಿದಾಗ ಮಾತ್ರ 'ನಾವು ಅನುಸರಿಸಿದ ವೇದಾಂತಮಾರ್ಗದಲ್ಲಿ ಸಿದ್ಧಾಂತ ವನ್ನು ವಿವರಿಸುವ ಪ್ರಕ್ರಿಯೆ ಹಾಗೂ ಸಾಧನೆಗಳ ಬಗೆಗಿದ್ದ ಭಾವನೆಗಳೆರಡೂ

ಸಂಪೂರ್ಣ ತಪ್ಪಾಗಿದ್ದು ಬರಿಯ ಉತ್ತರಕ್ಕೆ ಮೇಳುಗೋಳಿಸುವ ಬಾಯಿಮಾತಿನ ವಿದ್ಯೆಯಾಗಿದೆ' ಎಂಬುದು ಚೆನ್ನಾಗಿ ಮನವರಿಕೆಯಾಯಿತು. ಆಗ ಶ್ರೀಗಳವರ ಚರಣಗಳಲ್ಲಿ ಶರಣಾಗತನಾಗಿ ನಿಲ್ಲಬೇಕಾಯಿತು.

''ಹಿಂದಿನ ಮನೆಯ ಭಿಕ್ಷೆಹೋಯಿತು ; ಮುಂದಿನ ಮನೆಯ ಕೋರಾನ್ನ ಹೋಯಿತು'' ಎಂಬ ಗಾದೆಯಂತೆ ಹಿಂದೆ ಅಭ್ಯಾಸಮಾಡಿದ್ದು ತಪ್ಪೆಂದಾಯಿತು. ಮುಂದೆ ಶಾಂಕರಭಾಷ್ಯದ ಪ್ರಕ್ರಿಯೆ ಗೊತ್ತಿಲ್ಲ. ಈ ಸಂದಿಗ್ಧ ಸ್ಥಿತಿಯಲ್ಲಿ ಜೀವನೋಪಾಯಕ್ಕೆ ಬೇರೆ ಮಾರ್ಗವೇ ತೋಚದೆ ಕೆಲದಿನ ಹಾಗೆಯೇ ನೂಕಿದೆ. ಆದರೂ 1950ರಿಂದಲೇ ನನ್ನಲ್ಲಿ ಸುಪ್ತವಾಗಿ ಬೆಳೆಯುತ್ತಾಬಂದಿದ್ದ ಶ್ರೀದತ್ತಾತ್ರೇಯ ಸದ್ಗುರುವಿನ ಉಪಾಸನೆಯ ಆಧಾರಮಾತ್ರದಿಂದಲೇ ಧೈರ್ಯತಂದುಕೊಂಡು ''ಶ್ರೀದತ್ತ ಭಗವಂತಾ ! ಈಗ ನೀನೇ ಗತಿ. ಏನೇ ಕಷ್ಟ ಬರಲಿ, ಸತ್ಯಮಾತ್ರ ಸಿಕ್ಕಲಿ'' ಎಂದು ಅನನ್ಯಶರಣನಾಗಿ ಉಪಾಸ್ಯನನ್ನು ಪ್ರಾರ್ಥಿಸಿಕೊಂಡೆ.

1957ನೆಯ ಮೇ ತಿಂಗಳಲ್ಲಿ ಬೆಂಗಳೂರು ಅಲಸೂರುಪೇಟೆಯ ಶ್ರೀರಾಮ ಮಂದಿರದಲ್ಲಿ ಶಂಕರಸಪ್ತಾಹಕ್ಕಾಗಿ ಬಂದಿದ್ದ ಶ್ರೀಗಳನ್ನು ಕಂಡು ''ನನಗೆ ಮುಂದೆ ಏನು ಗತಿ ?'' ಎಂದು ಪ್ರಶ್ನಿಸಿದೆ. 'ನೀವು ಶಾಂಕರಭಾಷ್ಯವನ್ನೋದಿರಿ' ಎಂದರು. ತರ್ಕ, ವ್ಯಾಕರಣ, ಮೀಮಾಂಸೆಗಳ ಗಂಧವಿಲ್ಲದ, ಹೆಚ್ಚಿನ ಸಂಸ್ಕೃತಭಾಷಾಜ್ಞಾನ ವಿಲ್ಲದ ನಾನು ಭಾಷ್ಯವನ್ನು ಹೇಗೆ ಜೀರ್ಣಿಸಿಕೊಂಡೇನು ? ಎಂಬ ಸಂಶಯವನ್ನು ವ್ಯಕ್ತಪಡಿಸಿದಾಗ ಶ್ರೀಗಳು ಈ ಮುಂದಿನ ರತ್ನದಂಥ ಮಾತುಗಳನ್ನು ಹೇಳಿದರು : ''ಭಾಷ್ಯಾಭ್ಯಾಸಕ್ಕೆ ವ್ಯಾಕರಣಮೀಮಾಂಸಾದಿಗಳ ಜ್ಞಾನವು ಬೇಕೆಂಬು ದೇನೋ ನಿಜವೇ. ಆದರೆ ಭಾಷ್ಯದಲ್ಲಿರುವ ಶ್ರೀಶಂಕರರ ವೇದಾಂತಪ್ರಕ್ರಿಯೆ ಯನ್ನರಿಯಲು ಮಾತ್ರ ಕೇವಲ ತರ್ಕಾದಿಶಾಸ್ತ್ರಗಳ ಆವಶ್ಯಕತೆ ಏನೂ ಇಲ್ಲ. ತತ್ತ್ವವು ಅನುಭವಗೋಚರವಾಗಿದೆ. ತತ್ತ್ವಕ್ಕೆ ಅನುಭವಾಂಗವಾದ ಶ್ರೌತ ತರ್ಕವೇ ಬೇಕಾಗಿದೆಯೇ ಹೊರತು ತರ್ಕಶಾಸ್ತ್ರವೆಂದು ಪ್ರಸಿದ್ಧವಾದ ಪ್ರಮಾಣತರ್ಕದ ಕೆಲಸವೇನೂ ಅಲ್ಲಿಲ್ಲ. ಮುಖ್ಯವಾಗಿ ಭಾಷ್ಯವು ಕೇವಲ ಪಂಡಿತರ ಸ್ವತ್ತಲ್ಲ. ನಿಜವಾದ ಮುಮುಕ್ಷುಗಳ ಸ್ವತ್ತಾಗಿದೆ. ಸಂಸ್ಕೃತದ ಜ್ಞಾನವು ಸಾಕಷ್ಟಿಲ್ಲದವರಿಗಾಗಿಯೇ ಕನ್ನಡದಲ್ಲಿ ನಾನು ಬರೆದಿಟ್ಟಿದ್ದೇನಲ್ಲದೆ ಇತರ ಗ್ರಂಥಗಳನ್ನೂ ಸಹ ಭಾಷ್ಯದ ಅಭಿಪ್ರಾಯವನ್ನು ವಿವರಿಸಲು ಬರೆದಿದ್ದೇನೆ. ಅದೆಲ್ಲವನ್ನೂ ಇಟ್ಟುಕೊಂಡು ಅಭ್ಯಾಸಮಾಡಿರಿ. ಹಾಗೂ ಸಾಧ್ಯವಿದ್ದ ಮಟ್ಟಿಗೂ ಸಂಧ್ಯಾದಿಸತ್ಕರ್ಮಗಳನ್ನು ಮಾಡುವದು, ಭಗವನ್ನಾಮಸ್ಮರಣೆ,

ಸರ್ವಾರ್ಪಣೆ ಮುಂತಾದವುಗಳಿಂದ ಭಗವದ್ಭಾವನೆಯನ್ನು ಬೆಳೆಸಿಕೊಳ್ಳು ವದು, ಆ ಭಗವಂತನೇ ನಮ್ಮ ಆತ್ಮನಾಗಿರುವದರಿಂದ ಆತ್ಮವಿಚಾರವಿವೇಕಾದಿ ಗಳನ್ನೂ ಮಾಡುತ್ತಿರುವದು ಹೀಗೆ ಸಾಧನೆಗಳನ್ನೂ ಸಿದ್ಧಾಂತವನ್ನೂ ಸಮರಸ ಗೊಳಿಸಿ ಜೀವನಕ್ಕಿಳಿಸಿಕೊಳ್ಳಲು ಯತ್ನಿಸಬೇಕು.''

ಕರ್ಮ-ಉಪಾಸನೆಗಳನ್ನು ತೆಗಳುವದೇ ವೇದಾಂತವೆಂದುಕೊಂಡು, ಕರ್ಮಗಳು ಬೇಡವೆನ್ನುವದಕ್ಕೆ ಭಾಷ್ಯವಾಕ್ಯಗಳ ಆಧಾರವನ್ನು ಬಳಸಿಕೊಂಡು 'ಅಹಂ ಬ್ರಹ್ಮಾಸ್ಮಿ' ಎಂದು ಹೇಳುತ್ತಾ ಈವರೆಗೆ ನಾನು ಜ್ಞಾನಿ ಎಂಬ ಅಹಂಕಾರದಿಂದ ಮನಬಂದಂತೆ ವರ್ತಿಸುತ್ತಿದ್ದ ನನಗೆ ಇವರ ಉಪದೇಶದಂತೆ ನಡೆಯಲು ಕಷ್ಟವೆನಿಸಿತಾದರೂ ತತ್ತ್ವವಿಚಾರದಲ್ಲಿಯೇ ನನ್ನನ್ನು ಪೂರ್ಣವಾಗಿ ಜಯಿಸಿದ್ದರಿಂದ ಮನಸ್ಸು ತುಟಿಪಿಟಕ್ಕೆನ್ನದೆ ಅವರ ಉಪದೇಶವನ್ನು ಹೃದಯದಲ್ಲಿಟ್ಟು ಸಾಧನೆಗೆ ತೊಡಗಲು ಒಪ್ಪಿಕೊಂಡಿತು. ಅಂದಿನಿಂದ ಕ್ರಮೇಣ ಜೀವನಕ್ರಮವನ್ನು ಮಾರ್ಪ ಡಿಸಿಕೊಳ್ಳಲು ಯತ್ನಿಸತೊಡಗಿದೆ. ಮುಂದೆ ಭಗವದ್ಗೀತಾಭಾಷ್ಯವನ್ನೇ ನಿತ್ಯವೂ ಶ್ರವಣಕ್ಕೆ ಇಟ್ಟುಕೊಂಡು ಭಾಷ್ಯಾಭ್ಯಾಸಕ್ಕೆ ಮೊದಲುಮಾಡಿದೆ. ಒಂದು ಶಂಕರ ಸಪ್ತಾಹದ ಸಮಯಕ್ಕೆ ಹೊಳೆನರಸೀಪುರಕ್ಕೆ ಹೋದಾಗ ಶ್ರೀಗಳೇ ಶಾಂತಿಪಾಠ ಹಾಕಿ ಸೂತ್ರಭಾಷ್ಯವನ್ನು ಆರಂಭಿಸಿ ಭಾಷ್ಯವೆಲ್ಲವೂ ತಿಳಿಯುವಂತೆ ಅನುಗ್ರಹಿಸಿದರು.

ಏಕಲವ್ಯನ ಕಥೆಯನ್ನು ಆದರ್ಶವಾಗಿಟ್ಟುಕೊಂಡು ನಾನು ಭಾಷ್ಯಾಭ್ಯಾಸಕ್ಕೆ ತೊಡಗಿದಾಗ, ಶ್ರೀಗಳ ಬರಹವನ್ನೋದುವಾಗ ಆ ಅಕ್ಷರಗಳ ಜೊತೆಗೆ ಅವರ ಧ್ವನಿಯೂ ಸಹ ನನ್ನ ಕಿವಿಗೆ ಕೇಳಿಸಿದಂತಾಗಿ ಅದು ಪುಸ್ತಕಾಭ್ಯಾಸವೆನಿಸದೆ ಪ್ರತ್ಯಕ್ಷಬೋಧೆ ಎಂದೇ ಅನಿಸುತ್ತಿತ್ತು. ಶ್ರೀಗಳವರ ಬರಹವು ಬರಿಯ ಪುಸ್ತಕ ವಲ್ಲ, ಅದರಲ್ಲಿ ಅವರ ಶಕ್ತಿ ಸರ್ವಸ್ವವೂ ಸೇರಿ, ಅದು ಜೀವಂತಸಾಹಿತ್ಯವೆನಿ ಸಿರುವದನ್ನು ನಾನು ಸ್ವತಃ ಮನಗಂಡಿರುವೆ.

5.11.66ಕ್ಕೆ ಶ್ರೀಕ್ಷೇತ್ರ ಗಾಣಗಾಪುರದಲ್ಲಿ ಶ್ರೀಗಳೊಡನೆ ಸಂಗಮ ಸ್ನಾನಕ್ಕೆ ಹೋಗಿದ್ದೆವು. ಅಂದು ಸಂಗಮದಲ್ಲಿ ಪೂಜೆಯ ಅನಂತರ ನಾನು ಪ್ರದಕ್ಷಿಣೆ ಹಾಕುತ್ತಿದ್ದೆ. ಬ್ರ॥ ಶ್ರೀ ಎಸ್. ವಿಠಲಶಾಸ್ತ್ರಿಗಳು ಗರ್ಭಗುಡಿಯಲ್ಲಿ ಶ್ರೀಪಾದಗಳನ್ನು ಪೂಜಿಸುತ್ತಿರುವಾಗ ಶ್ರೀಗಳೂ ಒಳಗೇ ಇದ್ದರು. ಮಂಗಳಾರತಿಯಾಗುತ್ತಿದ್ದಾಗ ನಾನು ಪ್ರದಕ್ಷಿಣೆಯನ್ನು ಮುಗಿಸಿ ಶ್ರೀದತ್ತನನ್ನೇ ಧ್ಯಾನಿಸುತ್ತಾ ಭಾವಪೂರಿತನಾಗಿ ನಿಂತಿದ್ದೆ. ಗರ್ಭಗುಡಿಯಿಂದ ಶ್ರೀಗಳು ಹೊರಬಂದಾಗ ಸಾಷ್ಟಾಂಗನಮಸ್ಕಾರಹಾಕಿ ಎದ್ದು ನಿಂತಿರಲು ಶ್ರೀಗಳ ಬದಲು ಸಾಕ್ಷಾತ್ ನರಸಿಂಹ ಸರಸ್ವತಿಗಳೇ ಎದುರಿನಲ್ಲಿದ್ದುದನ್ನು

ಕಣ್ಣಾರೆ ಕಂಡು ಪುನಃ ಸಾಷ್ಟಾಂಗನಮಸ್ಕಾರ ಮಾಡಿ ಆನಂದದಿಂದ ಕಣ್ಣೀರು ಸುರಿಸಿ 'ಭಗವಂತಾ, ಈ ಪಾಮರನಿಗೆ ಸಗುಣದರ್ಶನವಿತ್ತೆಯಲ್ಲ !' ಎಂದು ಗದ್ಗದಿತ ಕಂಠನಾಗಿ ನುಡಿಯುತ್ತಿರಲು ಆ ನರಹರಿರೂಪವು ಅದೃಶ್ಯವಾಗಿ ಪುನಃ ಶ್ರೀಗಳೇ ಕಾಣಿಸಿಕೊಂಡರು. ಆಗ ಶ್ರೀಗಳು 'ಇನ್ನು ಕೆಳಗಿಳಿಯ ಬಹುದೆ ?' ಎಂದು ಕೇಳಿದರು. ನನಗಂತೂ ರೋಮಾಂಚನದಿಂದ ಮಾತೇ ಬಾರದಾಯಿತು. ಅಂತೂ ಶ್ರೀಗಳು ಶ್ರೀದತ್ತ ಸ್ವರೂಪರೇ ಎಂದು ನಂಬಿದ್ದಕ್ಕೆ ಶ್ರೀ ದತ್ತಕ್ಷೇತ್ರದಲ್ಲಿ ಈ ಸಗುಣಸಾಕ್ಷಾತ್ಕಾರ ವನ್ನನುಗ್ರಹಿಸಿದ್ದರಿಂದ ಅವರಲ್ಲಿಯ ಭಕ್ತಿಯು ಇಮ್ಮಡಿಸುವ ಭಾಗ್ಯ ನನಗೆ ದೊರಕಿತು.

ತಾ|| 20-11-66ನೆಯ ದಿನ ಬೊಂಬಾಯಿಯಲ್ಲಿ ಶ್ರೀಗಳಿಂದ ಅಪ್ಪಣೆಪಡೆದು ಬೆಂಗಳೂರಿಗೆ ಹಿಂದಿರುಗುವದನ್ನು ನಿಶ್ಚಯಿಸಿದೆ. ಪ್ರವಾಸಕಾಲದಲ್ಲಿ ಬರಿಯ ಹರಟೆ ವೃತ್ತಪತ್ರಾದಿಗಳಿಂದ ಕಾಲಕಳೆಯುವ ಬದಲು ನಾಮಸ್ಮರಣೆ, ಮಾನಸಪೂಜೆ, ಗ್ರಂಥಾವಲೋಕನ ಇವುಗಳಲ್ಲಿ ಕಾಲಕಳೆದರೆ ಅಧ್ಯಾತ್ಮಸಾಧನೆಯೂ ಆಯಿತು, ಪ್ರವಾಸವೂ ಬೇಜಾರಾಗದು, ಎಂದು ಒಂದುಸಲ ಶ್ರೀಗಳು ಅಪ್ಪಣೆಕೊಡಿಸಿದ್ದನ್ನು ಸಾಮಾನ್ಯವಾಗಿ ಪ್ರವಾಸಮಾಡುವಾಗಲೆಲ್ಲಾ ಅನುಸರಿಸಲು ಯತ್ನಿಸುತ್ತಿದ್ದೆ. ಆ ದಿನವೂ ಶ್ರೀಕ್ಷೇತ್ರ ನರಸೋಬವಾಡಿಯ ಪಾದುಕೆಗಳಿಗೆ ಮಾನಸಪೂಜೆ ಆರಂಬಿಸಿದೆ. ಶ್ರೀಗಳು ಗಾಣಗಾಪುರದಲ್ಲಿ ಶ್ರೀನರಸಿಂಹಸರಸ್ವತಿಗಳ ರೂಪದಿಂದ ದರ್ಶನ-ವಿತ್ತುದನ್ನು ನೆನೆನೆನೆದು ಹರ್ಷಪುಲಕಿತನಾಗುತ್ತಾ ಶ್ರೀಪಾದಗಳನ್ನು ಅನನ್ಯ ಭಕ್ತಿಭಾವದಿಂದ ಮನದಲ್ಲಿಯೇ ಪೂಜಿಸುತ್ತಿರುವಾಗ ಒಂದು ಯೋಚನೆಯು ಬಂದಿತು. ಆದೇನೆಂದರೆ : ''ಸದ್ಗುರುದತ್ತ ಭಗವಂತ ! ನನ್ನಲ್ಲಿರುವ ಈ ನಾನೆಂಬುದೇ ಒಂದು ತುಳಸಿ, ಬಿಲ್ವ ಅಥವಾ ಪುಷ್ಪವಾಗಿದೆ, ಇದನ್ನೀಗ ನಿನ್ನ ಚರಣಕ್ಕರ್ಪಿಸಿದ್ದೇನೆ ಸ್ವೀಕರಿಸು''. ಹೀಗೆಂದು ಕೊಂಡಿದ್ದೊಂದೇ ಗೊತ್ತು, ಮುಂದಿನ ಕ್ಷಣದಲ್ಲಿಯೇ ಈ ಹೃದಯದಲ್ಲಿಂದ ನಾನೆಂಬುದನ್ನು ಎತ್ತಿಟ್ಟಂತಾಗಿ ದೇಹವೆಲ್ಲಾ ತೆರವಾಯಿತು. ತತ್‌ಕ್ಷಣ ಎಚ್ಚರವೂ ಹೋಯಿತು. ನಾನೆಂಬುದಾಗಲಿ, ನಿದ್ರೆ-ಸ್ವಪ್ನ-ಎಚ್ಚರವಾಗಲಿ ಏನೂ ಇಲ್ಲದ ಬರೀ...... ತಾನಾಗಿತ್ತು. ಈ ಅನುಭವ ರೂಪದಲ್ಲಿ ಒಂದಾಗಿರಲು ಕೊನೆಗೊಮ್ಮೆ ಮತ್ತೆ ಎಚ್ಚರಬಂದಿತು. ಆಗ ರೈಲು ಮಿರಜ್‌ಸ್ಟೇಷನ್ನಿನ ಸಮೀಪದಲ್ಲಿತ್ತು. ಈ ಮಧುರ ಸ್ಮೃತಿಯಲ್ಲಿಯೇ ಪ್ರಯಾಣ ಮುಂದುವರಿಯು ತ್ತಿರುವಾಗ ''ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್' (3-2-24) ಎಂಬ ಬ್ರಹ್ಮಸೂತ್ರದ ಅಭಿಪ್ರಾಯವನ್ನೊಮ್ಮೆ ಶ್ರೀಗಳು ವಿವರಿಸಿದ್ದು ಜ್ಞಾಪಕಕ್ಕೆ ಬಂದಿತು. ಭಗವಂತನನ್ನು ಅನನ್ಯವಾಗಿ ಆರಾಧಿಸಿ ಧ್ಯಾನಿಸಿದಾಗ ಭಕ್ತರು ಆತನ

ನಿರ್ಗುಣಸ್ವರೂಪದಲ್ಲಿಯೇ ಸೇರಿಹೋದ ಅನುಭವವು ಪರಮಾತ್ಮನು ನಿರ್ವಿಶೇಷನೆಂಬುದಕ್ಕೆ ಪ್ರಮಾಣವಾಗಿದೆ ಎಂಬುದು ಆ ಸೂತ್ರದ ಅಭಿಪ್ರಾಯ. ಅಂತೂ ಶ್ರೀಗಳ ಸೇವೆಯಿಂದ ಲಭಿಸಿದ ಅವರ ಕೃಪಾವಿಶೇಷವೇ ನನಗೆ ಈ ನಿರ್ಗುಣಸ್ವರೂಪಾವಸ್ಥಾನದ ರುಚಿಯನ್ನು ತೋರಿಸಿಕೊಟ್ಟಿತೆಂದು ನನ್ನ ನಂಬಿಕೆ.

★★★★

## ನಾನು ಕಂಡ ದೇವರು

### (ಮತ್ತೂರು ಲಕ್ಷ್ಮೀದೇವಮ್ಮನವರು)

'ಹೂವಿನಿಂದ ನಾರು ಸ್ವರ್ಗಕ್ಕೆ' ಎಂಬ ನಾಣ್ನುಡಿಯಂತೆ ನನ್ನನ್ನು ಅಧ್ಯಾತ್ಮವಿದ್ಯೆಯ ಪರಮಾನಂದರೂಪವಾದ ಸ್ವರ್ಗಕ್ಕೆ ಏರಿಸಿದವರು ನನ್ನ ಆರಾಧ್ಯದೈವವಾದ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು.

ಶ್ರೀ ಶ್ರೀಗಳವರ ದೃಷ್ಟಿಯಲ್ಲಿ ನೋಡಿದರೆ ನಾನು ತೀರ ಅಜ್ಞಳು ; ಏನೊಂದೂ ಅರ್ಹತೆಯಿಲ್ಲದವಳು. ನಾನೇನೂ ಅಂಥ ವಿದ್ಯಾವತಿಯಲ್ಲ. ಆದರೂ 'ಪಶುಪತಿ ಯಾದ್ದರಿಂದಲೇ ಎಲೈ ಸರ್ವಜ್ಞನಾದ ಪರಮೇಶ್ವರನೆ, ಈ ಪಶುವಾದ ನನ್ನನ್ನು ಕಾಪಾಡು. ನಾನು ಏತರಿಂದಲೂ ನಿನ್ನನ್ನು ಮೆಚ್ಚಿಸುವಂಥ ಚತುರನಲ್ಲ' ಎಂದು ಭಕ್ತನೊಬ್ಬನು ಹಾಡಿರುವಂತೆ ಗುರುಗಳ ಸನ್ನಿಧಿಯಲ್ಲಿ ನಿಜವಾಗಿಯೂ ನಾನು ಪಶು ಸಮಾನಳೇ ಸರಿ. ಆದರೂ ಆ ಗುರುದೇವರು ನನ್ನನ್ನು ಕೃಪಾದೃಷ್ಟಿಯಿಂದ ಕಂಡು ಆಶ್ರಯಕೊಟ್ಟು ಅನೇಕ ತಪ್ಪುಗಳಿಂದ ಕೂಡಿದ್ದರೂ ಸಹಿಸಿಕೊಂಡು ನನ್ನ ಸೇವೆಯನ್ನು ಸ್ವೀಕರಿಸಿ ನನಗೆ ಈ ಜನ್ಮದಲ್ಲಿ ಅಧ್ಯಾತ್ಮವಿದ್ಯೆಯ ಸವಿಯನ್ನೂ ಅದನ್ನು ಪಡೆಯಲು ಬೇಕಾದ ಸಾಧನವಿಶೇಷಗಳನ್ನೂ ಉಪದೇಶಿಸಿದರು.

ಗುರುಗಳ ಸನ್ನಿಧಿಯಲ್ಲಿ ನಾನಿದ್ದಷ್ಟು ಕಾಲವೂ ನನ್ನ ಜೀವನದ ಸುವರ್ಣಯುಗ. ಅವರು ದೊಡ್ಡ ದೊಡ್ಡ ವಿದ್ವಾಂಸರುಗಳೊಡನೆ ಮಾತಾಡುತ್ತಿದ್ದಂತೆಯೇ ನನ್ನೊಡನೆಯೂ ಮಾತನಾಡುತ್ತಾ ವೇದಾಂತವಿಚಾರಗಳನ್ನು ತಿಳಿಸುತ್ತಿದ್ದ ಸರಳರು. ನನ್ನನ್ನು ತಮ್ಮ ಮಗಳಿಗಿಂತ ಒಂದು ತೂಕ ಹೆಚ್ಚಾಗಿ ಭಾವಿಸಿ ಆಗಾಗ್ಗೆ ತಿಳಿವಳಿಕೆಯನ್ನು ಹೇಳುತ್ತಿದ್ದರು. "ನೀನು ಇಂಥ ಸಾಧುಸಂಗ, ಅಧ್ಯಾತ್ಮ ವಾತಾವರಣದಲ್ಲಿದ್ದರೂ ಕೆಲವು ವೇಳೆ ಮೋಸಹೋಗುತ್ತೀಯೆ, ಹೇಗೆಂದರೆ : ನಿನಗೆ ಗುರುಸೇವೆಯೆಂಬುದು ಎಲ್ಲಕ್ಕಿಂತ ದೊಡ್ಡದೆಂಬುದು ತಿಳಿಯದೆ 'ನಾನು ಏನೂ ವ್ರತಕಥೆಗಳನ್ನು ಮಾಡಲಿಲ್ಲ' ಎನ್ನುತ್ತೀಯೆ. ಅದು ಸರಿಯಲ್ಲ" ಎಂದು ಆಗಾಗ್ಗೆ

ಹೇಳುತ್ತಿದ್ದರು. ಸಾಧುಸಂನ್ಯಾಸಿಗಳ ಸೇವೆಯೆಂಬುದು ಕಷ್ಟಸಾಧ್ಯವಾದ ಸಾಧನೆ-ಯೆಂಬುದನ್ನು ಹೇಳಬೇಕಾಗಿಯೇ ಇಲ್ಲ. ನನ್ನ ನಡೆಯಲ್ಲಿ ದೋಷವನ್ನು ಕಂಡಾಗ ಸಿಟ್ಟಾಗುತ್ತಿದ್ದರಾದರೂ ಕೂಡಲೆ ನನ್ನಲ್ಲಿ ದಯೆತೋರಿ ನನ್ನ ದೋಷಗಳನ್ನು ತಿಳಿಸಿಕೊಟ್ಟು ಉದ್ಧಾರಮಾಡುತ್ತಿದ್ದರು. ಇಂಥ ಕರುಣಾಳುಗಳು ಗುರುದೇವರು.

ನನ್ನ ಗುರುದೇವರೊಡನೆ ನಾನು ಅನೇಕಬಾರಿ ತೀರ್ಥಯಾತ್ರೆಗಳನ್ನು ಕೈಗೊಳ್ಳುವ ಅವಕಾಶವು ಒದಗಿತ್ತು. ಆದರೆ ಯಾವದೇ ಪ್ರವಾಸದಲ್ಲಿಯೂ ಅವರು ತಮ್ಮ ಆಹ್ನಿಕ, ಸದಾಚಾರಯಮನಿಯಮಗಳನ್ನು ಸಾಸುವೆಕಾಳಿನಷ್ಟೂ ಮೀರಿದ್ದನ್ನು ನಾನು ಕಾಣಲಿಲ್ಲ. ಯಾತ್ರೆಯಕಾಲದಲ್ಲಿ ಬೆಳಗ್ಗೆ ಏಳುಗಂಟೆವೇಳೆಗೇ ಸ್ನಾನಾಹ್ನಿಕ ಭಿಕ್ಷಾದಿಗಳನ್ನು ಮುಗಿಸಿ ಪ್ರಯಾಣವನ್ನು ಆರಂಭಮಾಡಿದರೆಂದರೆ ಸಂಜೆ ಏಳಾದರೂ ತಲುಪಬೇಕಾದ ಜಾಗವನ್ನು ಮುಟ್ಟಿ ಸ್ನಾನಾಹ್ನಿಕಗಳನ್ನು ಮುಗಿಸಿದ ಅನಂತರವೇ ಬಾಯಿಗೆ ನೀರುಹಾಕುತ್ತಿದ್ದರು. ನಡುವೆ ಎಷ್ಟೇ ಕಷ್ಟವಾದರೂ ಏನೂ ತೆಗೆದುಕೊಳ್ಳುತ್ತಿರಲಿಲ್ಲ. ಪ್ರಯಾಣದ ಆಯಾಸವಿದ್ದರೂ ಲೆಕ್ಕಿಸದೆ ಆಯಾ ಸ್ಥಳದಲ್ಲಿ ಉಪದೇಶಾದಿಕಾರ್ಯಕ್ರಮಗಳನ್ನು ನಡೆಯಿಸಿದ ಅನಂತರವೇ ವಿಶ್ರಾಂತಿಯನ್ನು ಹೊಂದುತ್ತಿದ್ದರು. ಇಂಥ ಕ್ರಿಯಾಶಕ್ತಿಯೂ ಸಂಯಮವೂ ಗುರುಗಳಲ್ಲಿತ್ತು. ಉತ್ತರ ದೇಶಸಂಚಾರದಲ್ಲಿ ಚಳಿಗಾಲದಲ್ಲಿಯೂ ಬರಿಯ ಕೃಷ್ಣಾಜಿನದಮೇಲೆಯೇ ಮಲಗು ತಿದ್ದ ಹಾಗೂ ಹತ್ತಿಯಬಟ್ಟೆಗಳನ್ನು ಮಾತ್ರವೇ ಉಪಯೋಗಿಸುತ್ತಿದ್ದ ಅವರನ್ನು ನೋಡಿ ಶಿಷ್ಯರು ಬೆರಗಾಗುತ್ತಿದ್ದರು. ವಿದೇಶದ ಕೆಲವು ಭಕ್ತರೂ ಸಹ ಶ್ರೀಗಳವರನ್ನು ನೋಡಿದಾಗ 'ಇಂಥ ಸ್ವಾಮಿಗಳನ್ನು ನಾವು ಕಂಡೇ ಇಲ್ಲ' ಎನ್ನುತ್ತಿದ್ದರು.

ನನ್ನ ಗುರುದೇವರಿಗೆ ಭಜನೆಯಲ್ಲಿ ತುಂಬ ಪ್ರೀತಿ. ಜ್ಞಾನಿಗಳಿಗೆ ಯಾವ ಕರ್ತವ್ಯವೂ ಇಲ್ಲವೆಂಬ ಸ್ಥಿತಪ್ರಜ್ಞರ ಭೂಮಿಕೆಯನ್ನು ಏರಿದ್ದ ನನ್ನ ಗುರುದೇವರು 'ಭಜನೆ' ಎಂದಕೂಡಲೆ ಮೊದಲು ತಾವೇ ಹೇಳಿಕೊಡಲಾರಂಭಿಸುತ್ತಿದ್ದರು. ಭಜನೆ ಮಾಡುವಾಗ ಕಣ್ಣುಮುಚ್ಚಿಕೊಂಡೇ ತಾಳಹಾಕುತ್ತಾ ಮೈಮರೆತು ತಮ್ಮ ಬ್ರಾಹ್ಮೀ ಸ್ಥಿತಿಯನ್ನು ಪ್ರಕಟಿಸು ತ್ತಿದ್ದರು. ಇಪ್ಪತ್ತು ವರ್ಷಗಳ ಅವರ ಒಡನಾಟದಲ್ಲಿ ನಾನು ಕೆಲವು ಪವಾಡಗಳನ್ನೂ ಕಂಡಿದ್ದೇನೆ. ಆದರೆ ಜ್ಞಾನಿಗಳನ್ನು ಪವಾಡಗಳ ಪ್ರದರ್ಶ ನದ ಮೂಲಕ ಅಳೆಯಬಾರದೆಂಬ ನನ್ನ ಗುರುದೇವರ ಉಪದೇಶಕ್ಕನುಗುಣ ವಾಗಿ ಅವುಗಳನ್ನು ಇಲ್ಲಿ ಪ್ರಸ್ತಾಪಿಸಲಿಲ್ಲ. ಗುರುಗಳು ಸದಾ ನನ್ನ ಹೃದಯಾಂತ ರಾಳವನ್ನು ಹೊಕ್ಕು ಮಾರ್ಗದರ್ಶಿಗಳಾಗಿರಲೆಂದು ಬೇಡುವೆನು.

★★★★

# ಯತಿವರೇಣ್ಯರು

ಒ.ಆರ್. ಲಲಿತಮ್ಮ, ಮದನಪಲ್ಲಿ - 517 325, ದೂ : 08571-222762

ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ - ಆಧಾರವಾದ ಪರಬ್ರಹ್ಮವೇ ಶಂಕರಾಚಾರ್ಯರಾಗಿ, ಆ ಆಚಾರ್ಯರೇ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳಾಗಿ ಅವತಾರವನ್ನು ತಾಳಿ ಜಿಜ್ಞಾಸುಗಳಿಗೆ ಮಾರ್ಗದರ್ಶಕರಾಗಿ ಸುಲಭವಾಗಿ ಸರಳವಾಗಿ ಅರ್ಥವಾಗುವಂತೆ, ಸೂಕ್ಷ್ಮದಲ್ಲಿ ಮೋಕ್ಷವೆಂದೂ ವೇದಾಂತವೆಂದರೆ ಸುಲಭ, ಸುಖ, ಸೂಕ್ಷ್ಮ ಸಿದ್ಧವಾಗಿರುವುದೆಂದೂ, ವೈರಾಗ್ಯವೆಂದರೆ ಅಹಂಕಾರ-ಮಮಕಾರ ತ್ಯಾಗವೆಂದೂ ಹೃದಯಂಗಮವಾಗಿ ಪ್ರವಚನಗಳನ್ನು ಮಾಡಿ ನಮ್ಮ ಜೀವನವನ್ನು ಸುಖ-ಶಾಂತಿ, ನೆಮ್ಮದಿ, ಆನಂದದಿಂದ ಬಾಳಿ ನಮ್ಮ ಜೀವನದ ಗುರಿಯನ್ನು ಮುಟ್ಟಬೇಕೆಂದು ತಿಳಿಸಿಕೊಟ್ಟ ಪರಮದಯಾಳು,

ಅವರ ಜೀವನದಾದ್ಯಂತ ಪರಿಶುದ್ಧ ಶಾಂಕರವೇದಾಂತಕ್ಕೆ ಜೀವನವನ್ನು ಮುಡುಪಿಟ್ಟು ಮುಮುಕ್ಷುಗಳಿಗೆ ದಾರಿದೀಪವಾಗಿ ತೇಜಸ್ಸನ್ನು ತುಂಬಿ, ಬಹಿರಂಗ/ಅಂತರಂಗ, ಸಾಕ್ಷಾತ್ ಸಾಧನೆಗಳನ್ನು ತಿಳಿಸಿ, ಕರ್ಮಯೋಗವೆಂದರೆ ನನ್ನ ಪಾಲಿಗೆ ಬಂದ ಕರ್ತವ್ಯವನ್ನು ವಂಚನೆಯಿಲ್ಲದೆ ಮಾಡು ; ಭಕ್ತಿಯೋಗವೆಂದರೆ - ನಿನ್ನ ಅಹಂಕಾರ (ಜೀವತ್ವ)ವನ್ನು ಭಗವಂತನಿಗೆ ಅರ್ಪಿಸು ; ಜ್ಞಾನಯೋಗವೆಂದರೆ - ನಿನ್ನ ನಿಜ ಸ್ವರೂಪವನ್ನು ತಿಳಿ - ಎಂದು ನಮ್ಮ ಜೀವನದ ಗುರಿಯನ್ನು ತಿಳಿಸಿದ,

ನೇಹನಾನಾಸ್ತಿಕಿಂಚನ, ಬಹ್ಮೈವೇದಂ ವಿಶ್ವಂ, ಆತ್ಮೈವೇದಂ ಸರ್ವಂ, ಸರ್ವಂ ವಿಷ್ಣುಮಯಂ ಜಗತ್-ಎಂಬ ವಾಕ್ಯಗಳಿಗೆ ನಾಮರೂಪಗಳಿಂದ ತೋರುವ ಜಗತ್ತು ಪರಮಾತ್ಮನ ಸಗುಣರೂಪ, ಒಳಗಿರುವ ಚೇತನ ನಿರ್ಗುಣ ರೂಪ, ಈ ಎರಡಕ್ಕೂ ಆಧಾರವಾಗಿ ಎರಡೂಅಲ್ಲದ ಅದ್ವಯತತ್ತ್ವವೇ ಪರಬ್ರಹ್ಮವೆಂದೂ, ಅದೇ ನೀನೆಂದೂ ''ಅಜಾಯಮಾನೋ ಬಹುಧಾ ವಿಜಾಯತೇ'' ಎಂದು ತಿಳಿಸಿ

ಮೃತ್ಪಿಂಡಮೇಕಂ ಬಹುಭಾಂಡರೂಪಂ ಗೋಕ್ಷೀರಮೇಕಂ ಬಹುಧೇನುಜಾತಮ್ ।
ಸುವರ್ಣಮೇಕಂ ಬಹುಭೂಷಣಾನಿ ಪರಮಾತ್ಮಮೇಕಂ ಬಹುನಾಮರೂಪಮ್ ॥

ಎಂದು ಅನುಭವದಲ್ಲಿ ತೋರಿಸಿ ಮುಮುಕ್ಷುಗಳನ್ನು ಅನುಭವದಲ್ಲಿ ನೆಲೆನಿಲ್ಲಿಸಿದ,

''ಯತೋವಾಚೋನಿವರ್ತಂತೆ ಅಪ್ರಾಪ್ಯ ಮನಸಾ ಸಹಾ''. ಇನ್ನೊಂದು ಕಡೆ ''ಮನಸ್ಯೈವೇದಮಾಪ್ತವ್ಯಂ'' ಎಂಬ ವಾಕ್ಯಗಳಿಗೆ ಸಮನ್ವಯಮಾಡಿ ಶಾಸ್ತ್ರ, ಆಚಾರ, ಸಾಧನಚತುಷ್ಟಯದಿಂದ ಸುಸಂಸ್ಕೃತವಾದ ಮನಸ್ಸೇ ಕರಣವೆಂದು ತಿಳಿಸಿ, ಶಾಸ್ತ್ರವೇ ಪ್ರಮಾಣ ಎಂದಾಗ ಶಬ್ದಕ್ಕೆ ಗೋಚರವಾಗುವ ತತ್ತ್ವವು ಪ್ರಮೇಯವಾಗುತ್ತದೆ ಎಂಬ

ಶಂಕೆಗೆ ಶಾಸ್ತ್ರವು ವೇದ್ಯ, ವೇದಿತ್ಯ, ವೇದನಾದಿ ಭೇದಂ ಅಪನಯತಿ, ಶಾಸ್ತ್ರವು ಅಂತ್ಯಪ್ರಮಾಣವೆಂದು ತಿಳಿಸಿ ನಮ್ಮಲ್ಲಿ ಪ್ರಮಾತೃ , ಪ್ರಮಾಣ, ಪ್ರಮೇಯಗಳನ್ನು ಅಳಿಸಿ ಅನುಭವದಲ್ಲಿ ನೆಲೆಸಿದ,

ಶ್ರೀಗಳವರ ಅಭಯಹಸ್ತದ ಐದು ಬೆರಳುಗಳು ಶಾಂಕರವೇದಾಂತದ ಬೀಗದ ಕೈಗಳು. (i) ಸಾರ್ವತ್ರಿಕ ಪೂರ್ಣಾನುಭವ, (ii) ಸಾಕ್ಷ್ಯಾದನುಭವ (iii) ಅಧ್ಯಾರೋಪ-ಅಪವಾದ (iv) ವಸ್ತುತಂತ್ರ-ಕರ್ತೃತಂತ್ರ, (v) ವ್ಯವಹಾರದೃಷ್ಟಿ - ಪರಮಾರ್ಥ ದೃಷ್ಟಿ, ಹೀಗೆ ವಿಚಾರಮಾಡಿ ತಿಳಿಯಬೇಕೆಂದೂ, ಬರೀ ಅರಿವೆ ನಾವೆಂದೂ, ಆ ಅರಿವು ಒಂದಕ್ಕೂ ಸಿಕ್ಕುವುದಿಲ್ಲ, ಒಂದನ್ನೂ ಬಿಡುವುದಿಲ್ಲ, ಬಂದು ಹೋಗುವ ಅರಿವುಗಳನ್ನು ಬೆಳಗುವುದೇ ಬರಿ ಅರಿವೆಂದೂ, ಅದೇ ನಾವೆಂದೂ ನಮಗೆ ಗೊತ್ತಿಲ್ಲ ದಿರುವುದೆಂದೂ, ತಾನು ಇರುವಂತೆ ಇದ್ದು ಅನುಭವವನ್ನು ಕೊಡುವುದೆಂದೂ, ಜೀವನು ಬ್ರಹ್ಮವಾಗಲಾರ, ಜೀವತ್ವವೇ ಕಲ್ಪಿತವೆಂದೂ, ಅವಸ್ಥೆ ಎಂದರೆ ಪರಮಾರ್ಥ, ತೋರಿಕೊಳ್ಳುವ ಒಂದೊಂದು ಬಗೆ ಎಂದು ಹೇಳಿ ಭಗವಂತನು ಅಸಂಗ =ಎಚ್ಚರದ ಅವಸ್ಥೆಗೆ, ಸ್ವಯಂಜ್ಯೋತಿ = ಕನಸು, ಅದ್ವಿತೀಯ = ಸುಷುಪ್ತಿ ಎಂದು ತಿಳಿಸಿದರು. ನಾವು ಶಂಕರಾಚಾರ್ಯರನ್ನು ನೋಡಿಲ್ಲ. ಆ ಶಂಕರರೇ ಶ್ರೀಶ್ರೀ ಗಳಾಗಿ ಅವರಿಗಿಂತ ಹೆಚ್ಚು ಪರಿಶ್ರಮೆ ಮಾಡಿ ಮುಮುಕ್ಷುಗಳಿಗೆ, ಪರಿಶುದ್ಧ ವೇದಾಂತವೆಂಬ, ದೊಡ್ಡ ಕೊಡುಗೆಯನ್ನು ಕೊಟ್ಟಿರುವ ಶ್ರೀಶ್ರೀಗಳಿಗೆ ನಾವು ಚಿರಋಣಿಗಳು, ಶ್ರದ್ಧೆ ಇದ್ದವರಿಗೆ ಅನುಭವಪರ್ಯಂತವಾದ ಆತ್ಮವಿಚಾರದಿಂದ ನೆಲೆನಿಲ್ಲಿಸಲು ಆ ಪರಬ್ರಹ್ಮವೇ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಾಗಿ ಅವತರಿಸಿದ ಯತಿವರೇಣ್ಯರಿಗೆ ಸಹಸ್ರಕೋಟಿ, ದಶಕೋಟಿ, ಶತಕೋಟಿ, ಸಹಸ್ರ ಸಹಸ್ರ ಕೋಟಿ ನಮನಗಳು. ಓಂ ತತ್ ಸತ್ ಸಚ್ಚಿದಾನಂದಾರ್ಪಣಮಸ್ತು.

★★★★

## ಸಾಕ್ಷಾತ್ ಪರಮಾತ್ಮನೇ

**ಶ್ರೀ ಶ್ರೀ ಶ್ರೀ ಭಗವತ್ಪಾದ ಸ್ವಾಮೀಜಿ, ಶೀಗೇಹಳ್ಳಿ ಆಶ್ರಮ, ಬೆಂಗಳೂರು 560 067.**

**ದೂ : 080 - 2845 5635**

ಈ ಶರೀರವನ್ನು ಕೊಟ್ಟ ತಂದೆಯು ನಾನು ಬಾಗಲಕೋಟೆ ರಾಮಾರೂಢರ ಮಠದಲ್ಲಿ ಇರುವಾಗ ಅಲ್ಲಿಗೆ ಬಂದು ಬ್ರಾಹ್ಮಣ ಗುರುಗಳನ್ನು ಆಶ್ರಯಿಸಬೇಕು, ನಿನ್ನ ಇಷ್ಟಾರ್ಥವು ಸಿದ್ಧಿಯಾಗುತ್ತದೆ ಎಂದು ಹೇಳಿ ಹೊರಟುಹೋದರು. ಆ ಕಾಲವು ತಾನಾಗಿಯೇ ಒದಗಿ ಬಂದಿತು. ಶ್ರಾವಣ ಮಾಸದಲ್ಲಿ ರಾಮಾರೂಢರ ಮಠಕ್ಕೆ ಬಂದ

ಕೂನೂರು ಶಿವಪ್ಪನವರು "ಅಧ್ಯಾಸ ಅಂದರೆ ಮಿಥ್ಯಾ" ನಿಜಗುಣರ ಗ್ರಂಥದಲ್ಲಿ ಸತ್ಯಾಧ್ಯಾಸ ಅಂತ ಬರೆದಿದೆ, ದ್ವಿಜನ ದ್ವಿಜತೆಯಂತೆ ಅಂತ ದೃಷ್ಟಾಂತವನ್ನು ಕೊಟ್ಟಿದ್ದಾರೆ, ಅದರ ಅಭಿಪ್ರಾಯವನ್ನು ಹೇಳಬೇಕು ಅಂತ ರಾಮಾರೂಢರನ್ನು ಕೇಳಿದರು. ಅವರು ಬ್ರಾಹ್ಮಣನ ಹೆಂಡತಿಯಂತೆ, ಅಂತ ಹೇಳಿದರು. ಶಿವಪ್ಪನವರು ಒಪ್ಪಲಿಲ್ಲ, ಮಲ್ಲಾಪುರದ ಶಾಸ್ತ್ರಿಗಳು ಭಗವತ್ಪಾದರನ್ನು ಕೇಳಿರಿ ಅಂತ ಹೇಳಿದರು. ನಾನು ಸ್ವಾಮಿಗಳು ಇದ್ದಾರೆ ಹೇಗೆ ಹೇಳಲಿ, ಅಂದೆ. ಆಗ ರಾಮಾರೂಢರೇ ನಿನಗೆ ಗೊತ್ತಿದ್ದರೆ ಹೇಳು ಅಂದರು. ನನಗೆ ಗೊತ್ತಿತ್ತು. ಬ್ರಾಹ್ಮಣನು ಜ್ಞಾನಿಯಾದರೂ ವ್ಯವಹಾರ ಕಾಲದಲ್ಲಿ ಬ್ರಾಹ್ಮಣ ಅಂತಲೇ ಹೇಳುತ್ತಾನೆ. ಅದನ್ನೇ "ದ್ವಿಜನ ದ್ವಿಜತೆ"ಯೆಂತ ಹೇಳಿರುವುದು, ಸತ್ಯದಂತೆ ಹೇಳುತ್ತಾ ಇದ್ದಾರೆ, ನಿಜವಾಗಿ ಅದೇನು ಸತ್ಯವಲ್ಲ, ವ್ಯವಹಾರ ಮಾಡುವಾಗ ಬ್ರಾಹ್ಮಣತ್ವ ಹೇಳುವುದು ಅದನ್ನೆ ನಿಜಗುಣರು ಸತ್ಯಾಧ್ಯಾಸ ಅಂತಾ ಹೇಳಿರುವರು, ಅಧ್ಯಾಸ ಅಂದರೆ ಮಿಥ್ಯವೇ. ಆಗ ಶಿವಪ್ಪನವರು ಎಲ್ಲಿ ಅಭ್ಯಾಸ ಮಾಡಿದೀ ತಮ್ಮ ಅಂದರು, ನಾನು ರಾಮಾರೂಢರಲ್ಲಿಯೇ ಮಾಡಿದ್ದೇನೆ ಅಂತಾ ಹೇಳಿದೆ. ಅವರಿಗೆ ಗೊತ್ತಿಲ್ಲದ್ದು ನಿನಗೆ ಹೇಗೆ ಗೊತ್ತಾಯಿತು ? ಎಂದು ಕೇಳಿ ಹೊರಟು ಹೋದರು. ಅನಂತರ ನಿನ್ನಿಂದ ನನಗೆ ಅಪಮಾನವಾಯಿತು, ಇಂದಿನಿಂದ ನಮ್ಮ ಮಠದಲ್ಲಿ ಇರಬೇಡ ಹೊರಟುಹೋಗು ಅಂತ ರಾಮಾರೂಢರು ಹೇಳಿದರು.

ಆಗ, ಕಟಗೇರಿ ಲಕ್ಷ್ಮಣ ಅನ್ನುವವರು ನನ್ನನ್ನು ಕರೆದುಕೊಂಡು ತಮ್ಮ ಊರಿಗೆ ಬಂದರು. ಆಗ ನಾನು ಸ್ವಲ್ಪದಿನ ಇದ್ದು ದಾವಣಗೆರೆಯಲ್ಲಿ ಹೊಳೆನರಸೀಪುರದ ಸ್ವಾಮಿಗಳು ಚಾತುರ್ಮಾಸ್ಯಕ್ಕಾಗಿ 1955ರಲ್ಲಿ ಬಂದಿದ್ದು, ಮಾಂಡೂಕ್ಯ ಉಪನಿಷತ್ತನ್ನು ಹೇಳುತ್ತಾ ಇದ್ದರು. ಆಗ ಅವಸ್ಥೆಗಳ ವಿಷಯ ಗೊತ್ತಾಯಿತು. ಪರಮಾರ್ಥ ಚಿಂತಾಮಣಿ ತೆಗೆದುಕೊಂಡು ಓದಿರಿ ಹೆಚ್ಚಾಗಿ ವಿಷಯವು ಗೊತ್ತಾಗುತ್ತದೆ, ಎಂದು ಹೇಳಿದರು. ಅವರು ಚಾತುರ್ಮಾಸ್ಯವನ್ನು ಮುಗಿಸಿಕೊಂಡು ಹೋದರು. ನಾನೂ ಹೊಳೆನರಸೀಪುರಕ್ಕೆ ಹೋದೆ. ನನಗೆ ಸಂಶಯ ಬಂದದ್ದನ್ನು ಕೇಳ್ತಾ ಇದ್ದೆ. ಆಗ ಸ್ವಾಮಿಗಳು ನನ್ನ ಮೇಲಿನ ಪ್ರೀತಿಯಿಂದ ತತ್ತ್ವವನ್ನು ತಿಳಿದುಕೊಳ್ಳುವ ಆಸೆಯಿಂದ ಈ ಹುಡುಗನು ಬರ್‍ತಾ ಇದ್ದಾನೆ, ತತ್ತ್ವವನ್ನು ಯಾವಾಗ ತಿಳಿದುಕೊಳ್ಳುವನೋ ! ಎಂದು ಹತ್ತಿರದಲ್ಲಿದ್ದ ವಿಟ್ಠಲ ಶಾಸ್ತ್ರಿಗಳು ಮತ್ತು ನಂಜಪ್ಪ ಭಾಗವತರಿಗೆ ಹೇಳಿದರು. ಬ್ರಾಹ್ಮಣರಿಗೆ ಮಾತ್ರ ಹೇಳುತ್ತಾ ಇದ್ದಾರೆ, ಉಳಿದವರಿಗೆ ಅಷ್ಟು ಪ್ರೀತಿಯಿಂದ ಹೇಳುವುದಿಲ್ಲ ಅಂತಾ ಜನರು ಕಲ್ಪನೆ ಮಾಡಿ ಕೊಂಡಿದ್ದರು. ಆದರೆ ನಾನು ಬ್ರಾಹ್ಮಣನಲ್ಲದಿದ್ದರೂ ಪ್ರೀತಿಯಿಂದ ನನಗಾಗಿ ಕಾಯ್ದಿರಿಸಿದ್ದ ಮಧ್ಯಾಹ್ನ 3 ಘಂಟೆ

ಯಿಂದ 4 ಘಂಟೆಯವರೆಗೆ ಸ್ವಾಮಿಗಳು ಪಾಠ ಹೇಳಿಕೊಡುತ್ತಿದ್ದರು. ಜನರು ಕಲ್ಪನೆಯನ್ನು ಮಾಡಿಕೊಂಡಿದ್ದಲ್ಲ !, ಸುಳ್ಳುಅಪವಾದವನ್ನು ಮಾಡಿದರು. ಮುಂದೆ ನಾನು ಬೇರೆ ವಿಷಯವನ್ನು ಕೇಳದೆ ನನಗೆ ಸಂಶಯ ಬಂದಲ್ಲಿ ಅದರ ನಿವೃತ್ತಿಗಾಗಿ ಕೇಳ್ತಾ ಇದ್ದೆ. ಬೇರೆಯವರು ಸ್ವಾಮಿಗಳಲ್ಲಿಗೆ ಬಂದು ತಮ್ಮ ಸಂಶಯವನ್ನು ನಿವಾರಣೆಯನ್ನು ಮಾಡಿಕೊಳ್ಳುವದಕ್ಕೋಸ್ಕರ ಕೇಳುತ್ತಾ ಇದ್ದರು. ಅವರು ಹೀಗೆ ಹೇಳುತ್ತಾರೆ ಅನ್ನುತ್ತಿದ್ದರು. ಅದಕ್ಕೆ ಸ್ವಾಮಿಗಳು ಅವರು ಹೀಗೆ ಹೇಳುತ್ತಾರೆ, ನಾನು ಹೀಗೆ ಹೇಳುತ್ತೇನೆ, ನೀವು ಯಾವುದನ್ನಾದರೂ ತಿಳಿದುಕೊಳ್ಳಿ ಅಂತಾ ಹೇಳುತ್ತಾ ಇದ್ದರು.

ಶಿಷ್ಯನಾಗಿರತಕ್ಕಂತಹವನು ಮಲ, ವಿಕ್ಷೇಪ ದೋಷಗಳನ್ನು ಕಳೆದುಕೊಂಡು ಅಜ್ಞಾನವನ್ನು ಕಳೆದುಕೊಳ್ಳುವುದಕ್ಕಾಗಿ ಬ್ರಹ್ಮಜ್ಞಾನಿಗುರುವನ್ನೇ ಆಶ್ರಯಮಾಡಿಕೊಳ್ಳುತ್ತಾನೆ. ನಾನು ಒಮ್ಮೆ ಭಗವದ್ಗೀತೆಯನ್ನು ಓದುವಾಗ ಸ್ವಾಮಿಗಳು ''ಶಾಶ್ವತನಾದ ಭಗವಂತ ಮನಸ್ಸಿಗೆ ಬಂದು ಹೇಳ್ತಾ ಇದ್ದಾನೆ ಎಂಬೀ ಭಾವನೆಯಿಂದ ಓದಬೇಕು'' ಅದರಿಂದ ಅಂತಕರಣದಲ್ಲಿರುವ ದೋಷವು ಬರ್ತಾ ಬರ್ತಾ ಕಡಿಮೆಯಾಗುತ್ತದೆ, ತತ್ತ್ವವನ್ನು ತಿಳಿದುಕೊಳ್ಳಲು ಬರುತ್ತದೆ ಅಂತ ಹೇಳಿದರು. ಶಾಸ್ತ್ರದಲ್ಲಿ ಹುಲ್ಲುಕಡ್ಡಿಯಿಂದ ಹಿಡಿದು ಹಿರಣ್ಯಗರ್ಭನ ಪರ್ಯಂತ ಇರುವುದೆಲ್ಲಾ ಪರಮಾತ್ಮನ ಸ್ವರೂಪವೇ ಅಂತ ಹೇಳಿದೆ. ಮೋಕ್ಷದ ಇಚ್ಛೆಯುಳ್ಳವರು, ತಮ್ಮಲ್ಲಿ ಪರಮಾತ್ಮ ಸ್ವರೂಪನೇ ಇದ್ದಾನೆ ಅಂತ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗಿರುವಾಗ ಹೇಳಿಕೊಡತಕ್ಕಂತ ಗುರುವು ಬಲ್ಲವರು ಪರಮಾತ್ಮನಲ್ಲದೇ ಇನ್ನು ಬೇರೆ ಯಾರು ಇರುತ್ತಾರೆ ? ಈ ಭಾವನೆಯಿಂದ ಕೂಡಿಕೊಂಡು ಕೇಳಿದಾಗ ತನ್ನಲ್ಲಿರುವ ಅಜ್ಞಾನವು ನಿವೃತ್ತಿಯಾಗುತ್ತದೆ. ಆದ್ದರಿಂದಲೇ ಶಿಷ್ಯನು ತಿಳಿದು ಕೊಂಡಾಗ ಶೇಷತೀತಿ ಶಿಷ್ಯ ಅಜ್ಞಾನವು ಉಳಿದುಕೊಂಡಿರುವುದಿಲ್ಲ, ಅದು ಹೋಗಿಬಿಡುತ್ತದೆ. ಕೇಳುವವನ ಭಾವನೆಯಲ್ಲಿ ಗುರು ಎಂದರೂ, ಪರಮಾತ್ಮ ಎಂದರೂ, ಒಂದೇ ಅಂತ ಅನಿಸಿರುವುದರಿಂದ ಅವನು ಶಿಷ್ಯತ್ವವನ್ನು ಕಳೆದುಕೊಂಡು ಭಕ್ತಿಯಿಂದ ಕೂಡಿಕೊಂಡಿರುತ್ತಾನೆ. ಈಗ ಶಿಷ್ಯ ಗುರು ಇಬ್ಬರಲ್ಲಿ ಯಾವ ಭೇದವಿಲ್ಲ. ಸ್ವಾಮಿಗಳ ವಿಷಯದಲ್ಲಿ ಹೇಳುವುದಾದರೆ ಸಾಕ್ಷಾತ್ ಪರಮಾತ್ಮನೇ ಜನರನ್ನು ಉದ್ಧಾರ ಮಾಡುವುದಕ್ಕಾಗಿ ಶರೀರವನ್ನು ಧರಿಸಿಕೊಂಡು ಬಂದಿದ್ದಾನೆ. ಆ ಭಾವನೆ ಇರುವುದರಿಂದಲೇ ಗುರುಗಳ ಅನುಗ್ರಹದಿಂದ ತತ್ತ್ವವು ಗೊತ್ತಾಗಿ ಬಿಡುತ್ತದೆ. ಪರಸು ಕಬ್ಬಿಣವನ್ನು ಸೋಂಕಿದ ಮಾತ್ರದಿಂದ ಬಂಗಾರವಾಗುತ್ತದೆ. ಆದರೆ, ಇಲ್ಲಿ ಅದಕ್ಕಿಂತಲೂ ಹೆಚ್ಚಿನ ಯೋಗ್ಯತೆ ಬರುತ್ತದೆ. ಗುರುಗಳು ಹೇಳಿದಂತೆ ತತ್ತ್ವವನ್ನು ತಿಳಿದು ಕೊಂಡರೆ ಅವನೂ ಗುರುವಾಗುತ್ತಾನೆ, ಎಂದು ಲೋಕದಲ್ಲಿ ಪ್ರಸಿದ್ಧವಾಗಿದೆ.

ಹುಲ್ಲು ಕಡ್ಡಿ ಮಿಸುಕಬೇಕಾದರೆ ಪರಮಾತ್ಮನೇ ಇರಬೇಕು. ಈಗ ಹೇಳಿರುವ ವಿಷಯವನ್ನು ಪರಮಾತ್ಮನು ಹೇಗೆ ನುಡಿಸಿದನೋ ಹಾಗೆಯೇ ಹೇಳಿದ್ದೇನೆ. ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

★ ★ ★ ★

## ವೈರಾಗ್ಯ ಚಕ್ರವರ್ತಿಗಳ ಮೆಚ್ಚುಗೆ

**(ದಿ॥ ದೇವರಾಯ ಕುಲಕರ್ಣಿಗಳು – ಅಕ್ಟೋಬರ್ 1978ರ ಲೇಖನ)**

ಬಳ್ಳಾರಿ ನಗರದಿಂದ ಹತ್ತು ಮೈಲು ದೂರದಲ್ಲಿರುವ 'ಹಗರಿ' ಎಂಬಲ್ಲಿ ಚಾತುರ್ಮಾಸ್ಯವ್ರತಕ್ಕೆ ಕುಳಿತಿದ್ದ ಶ್ರೀ ಕಾಂಚೀಕಾಮಕೋಟಿ ಜಗದ್ಗುರುಗಳಾದ ವೃದ್ಧ ಶ್ರೀಶ್ರೀಗಳವರ ದರ್ಶನವನ್ನು ಪಡೆದೆನು. ಶ್ರೀಶ್ರೀಗಳವರು ಸ್ವಚ್ಛ ಕನ್ನಡದಲ್ಲಿ ಮಾತನಾಡುತ್ತಾರೆ. ಇಳಿವಯಸ್ಸಿನಲ್ಲಿಯೂ ಅವರಿಗೆ ಜ್ಞಾಪಕಶಕ್ತಿಯು ಚೆನ್ನಾಗಿದೆ. ಪ್ರತಿದಿನವೂ ಈಗಲೂ (ಚಾತುರ್ಮಾಸ್ಯಕಾಲ ಬಿಟ್ಟು) 25 ಕಿಲೋಮೀಟರು ನಡೆಯುತ್ತಾರೆ. ವಯಸ್ಸು 90 ವರ್ಷಗಳಿರಬಹುದು. ಅರ್ಧಕಟ್ಟಿದ ದೇವಾಲಯದಲ್ಲಿ, ಹಗರೀ ಹೊಳೆಯ ದಂಡೆಯಲ್ಲಿರುವ ಒಂದು ಫ್ಯಾಕ್ಟರಿಯ ಆವರಣದಲ್ಲಿ ಶ್ರೀಗಳವರ ಬಿಡಾರ. ಬಿದಿರುಚಾಪೆಗಳಿಂದ ಮರೆಮಾಡಲ್ಪಟ್ಟ (ಕುಟೀರದಂತಿರುವ) ಆ ದೇವಾಲಯದಲ್ಲಿ ಎಂಟೇ ಜನ ಪರಿವಾರದವರೊಂದಿಗೆ ಗುರುಗಳು ಇದ್ದಾರೆ. ದೇವರುಗಳ ಸಮೂಹ, ಪೂಜೆಗಳ ವೈಭವ, ಬೆಳ್ಳಿ, ಬಂಗಾರದ ವಸ್ತುಗಳಾಗಲೀ ಆರ್ಭಟವಾಗಲೀ ಅಲ್ಲಿರಲಿಲ್ಲ. ಮರದ ಲೋಟ, ಕೃಷ್ಣಾಜಿನ, ಕಮಂಡಲು, ಎರಡೇ ನೂಲಿನ ಬಟ್ಟೆಗಳು, ಶ್ರೀಗಳ ಆಸ್ತಿ. ಸರಳ, ಸಾತ್ತ್ವಿಕ, ಸದಾಚಾರಗಳ ಪ್ರತ್ಯಕ್ಷದರ್ಶನವು ಎಂಥವರನ್ನೂ ಭಕ್ತಿಭಾವ ಪರವಶರನ್ನಾಗಿ ಮಾಡುತ್ತದೆ. ಶ್ರೀಗಳವರು ದಕ್ಷಿಣೆಯನ್ನು ಸ್ವೀಕರಿಸುವದಿಲ್ಲ, ಅದು ಕಡ್ಡಾಯದ ಅಪ್ಪಣೆ. ಸಾರ್ವಜನಿಕರಿಗೆ ದರ್ಶನವನ್ನು ಕೊಡುವಾಗಲೂ ನೆಲದ ಮೇಲೆ ಒಂದು ಕೃಷ್ಣಾಜಿನವನ್ನು ಹಾಕಿಕೊಂಡು ಗುರುಗಳು ಕುಳಿತಿರುತ್ತಾರೆ. ಯಾರು ಬೇಕಾದರೂ ಬಂದು ದರ್ಶನವನ್ನು ಪಡೆಯಬಹುದು. ನಿಜವಾದ ವೈರಾಗ್ಯವೇ ಮೂರ್ತಿವೆತ್ತಂತಿರುವ ಪರಮಹಂಸಪರಿವ್ರಾಜಕರು ಶ್ರೀಗಳವರು. ಕಲಿಯುಗದಲ್ಲಿಯೂ ಇಂಥ ಆದರ್ಶಸಂನ್ಯಾಸಿಗಳನ್ನು ಕಂಡ ನಾನೇ ಧನ್ಯನು.

ಪ್ರಶ್ನೆ : ವಿಠಲಶಾಸ್ತ್ರಿಗಳು ಚೆನ್ನಾಗಿದ್ದಾರೆಯೆ ? ನಿಮ್ಮ ಶ್ರೀಗಳು 50 ವರ್ಷಗಳ ಕಾಲ ಮೂಲಾವಿದ್ಯೆಯ ಖಂಡನೆ ಮಾಡಿದರು, ಈಚೆಗೆ ಯಾರಾದರೂ ಅದಕ್ಕೆ ಸೂಕ್ತವಾದ ಖಂಡನೆಯನ್ನು ಬರೆದಿರುವರೇನು ?

ಉತ್ತರ : ಇಲ್ಲ, ಸ್ವಾಮಿ. ಆದರೆ ಈಚೆಗೆ ಶೃಂಗೇರಿಜಗದ್ಗುರುಗಳ ಸಂಮುಖದಲ್ಲಿ ಒಂದು ವಿದ್ವತ್ ಸಭೆ ನಡೆದು ವಾದವಿವಾದಗಳಾದಮೇಲೂ ವಿಠಲಶಾಸ್ತ್ರಿಗಳು 'ಮೂಲಾವಿದ್ಯಾ-ಭಾಷ್ಯವಾರ್ತಿಕವಿರುದ್ಧಾ' ಎಂಬ ಗ್ರಂಥವನ್ನು ಬರೆದು ಪ್ರಕಾಶ ಗೊಳಿಸಿದ್ದಾರೆ. ಮತ್ತೇನೂ ವಾದವಿವಾದಗಳು ಮುಂದುವರೆಯಲಿಲ್ಲ.

ಪ್ರಶ್ನೆ : ನಿಮ್ಮ ಶ್ರೀಗಳು ಸಿದ್ಧಿಹೊಂದಿ ಎಷ್ಟು ದಿನಗಳಾದವು ?

ಉತ್ತರ : ಮೂರು ವರ್ಷಗಳಾದವು ಸ್ವಾಮಿ.

ಪ್ರಶ್ನೆ : ಇನ್ನೊಂದು ವರ್ಷಕ್ಕೆ ಅವರ ಶತಮಾನೋತ್ಸವವಾಗಬೇಕಲ್ಲವೆ ? ಅವರು ದೇಹವನ್ನು ಬಿಟ್ಟಾಗ 96 ವರ್ಷಗಳು. ಆವರೆಗೂ ಕೆಲಸ ಮಾಡುತ್ತಿದ್ದರೆ ?

ಉತ್ತರ : ಕೊನೆಯ ಆರು ತಿಂಗಳು ಮಾತ್ರ ಕೆಲಸಮಾಡಲಾಗಲಿಲ್ಲ.

ಪ್ರಶ್ನೆ : ಹೌದು. ಶಾಂಕರವೇದಾಂತಕ್ಕಾಗಿ ತಮ್ಮ ಜೀವಿತವನ್ನೇ ಅರ್ಪಿಸಿಕೊಂಡ ಮಹನೀಯರವರು. (ಹೀಗೆ ಹೇಳುವಾಗ ಶ್ರೀಗಳು ಗದ್ಗದಕಂಠರಾದರು) ಹನ್ನೆರಡು ವರ್ಷಗಳ ಕೆಳಗೆ ಅವರು ನಮ್ಮನ್ನು ನೋಡಲು ಕಂಚಿಗೆ ಬಂದಿದ್ದರಲ್ಲವೆ ?

ಉತ್ತರ : ಹೌದು ಸ್ವಾಮಿ, ವಿಠಲಶಾಸ್ತ್ರಿಗಳವರೊಡನೆ ಬಂದಿದ್ದರು. ಆಗ್ಗೆ ತಾವು ಅವರಿಗೆ ವೈರಾಗ್ಯದ ಕುರುಹಾಗಿ ವ್ಯಾಘ್ರಾಜಿನವನ್ನು ಕೊಡೋಣವಾಗಿತ್ತು.

ಪ್ರಶ್ನೆ : ನೆನಪಿದೆ. ಆಗ "ವ್ಯಾಖ್ಯಾನತೋ ವಿಶೇಷಪ್ರತಿಪತ್ತಿಃ" – ಎಂದು ಹೇಳುವರಲ್ಲ, ನೀವು ವ್ಯಾಖ್ಯಾನಕಾರರನ್ನೇಕೆ ಖಂಡಿಸುವಿರಿ ?" ಎಂದು ಕೇಳಲಾಗಿತ್ತು.

ಉತ್ತರ : ಹೌದು. ಅದಕ್ಕೆ "ವಿಶೇಷಪ್ರತಿಪತ್ತಿಯಾದರೆ ಬಹಳ ಸಂತೋಷ. ಆದರೆ ಬದಲು ವಿರುದ್ಧಪ್ರತಿಪತ್ತಿಯಾದರೆ ಏನು ಮಾಡಬೇಕು ?" ಎಂದಿದ್ದರು.

ಪ್ರಶ್ನೆ : "ಹಾಗೆಲ್ಲಿದೆ ? ತೋರಿಸಿರಿ" ಎಂದು ಕೇಳಿದ್ದೆವಲ್ಲವೆ ?

ಉತ್ತರ : ಹೌದು. ಆಗ ನಮ್ಮ ಶ್ರೀಗಳು "ರೂಪೋಪನ್ಯಾಸಾಚ್ಚ" (ಬ್ರ.ಸೂ. 1-2-23) ಎಂಬ ಸೂತ್ರಕ್ಕೆ ಶಂಕರಾಚಾರ್ಯರು ಬರೆದಿರುವ ಭಾಷ್ಯಾಭಿಪ್ರಾಯಕ್ಕೆ ವಿರುದ್ಧವಾಗಿ 'ಭಾಮತೀ'ಕಾರರೂ ಅವರಿಗೆ ವಿರುದ್ಧವಾಗಿ 'ಕಲ್ಪತರು'ಕಾರರೂ ಅವರಿಗೆ ವಿರುದ್ಧವಾಗಿ 'ಪರಿಮಳ'ಕಾರರೂ ಬರೆದಿರುವದನ್ನು ಉದಾಹರಿಸಿ ವಿಶೇಷಪ್ರತಿಪತ್ತಿಯ ಬದಲು ವಿಪ್ರತಿಪತ್ತಿಯೇ ಆಗಿದೆ' ಎಂದಿದ್ದರು.

ಪ್ರಶ್ನೆ : ಹೌದು, ನಾನೂ ನೋಡಿದ್ದೇನೆ. ನಿಮ್ಮ ಶ್ರೀಗಳ ವಿರೋಧಿಗಳಿಗೆ ನಾವು ಉತ್ತರಕೊಡಬಹುದಾಗಿತ್ತಾದರೂ ನಾನು ಸಂನ್ಯಾಸಿಯಾದ್ದರಿಂದ ಸಂನ್ಯಾಸಧರ್ಮಕ್ಕೆ ವಿರುದ್ಧವಾಗಿ ಯಾರನ್ನೂ ನಿಂದಿಸುವ ಅಥವಾ ಮನಸ್ಸು ನೋಯಿಸುವ ಕೆಲಸಮಾಡಲು ಇಷ್ಟಪಡಲಿಲ್ಲ. ತಿಳಿಯಿತೆ ?

ಉತ್ತರ : ತಿಳಿಯಿತು. (ಹೀಗೆಂದು ನಮಸ್ಕರಿಸಿ ಅಲ್ಲಿಂದ ಹೊರಟೆನು).

★★★★

## ಶಂಕರ ಸಿದ್ಧಾಂತದ ಹಕ್ಕುದಾರರು

**(ಗೊರೂರು ರಾಮಸ್ವಾಮಯ್ಯಂಗಾರ್ಯರು)**

'ಶ್ರೀಶ್ರೀಗಳವರ ಗುಣಗಾನವು ನನ್ನಂಥವನಿಗೆ ಅಸಾಧ್ಯ. ಸಹಸ್ರನಾಮಗಳಿಂದ ಸ್ತುತಿಸಿದಾಗ್ಯೂ ಭಗವಂತನ ಗುಣಗಾನವು ಗೌಣವೇ ಆಗಿರುವಂತೆ ಭಗವತ್ಸ್ವರೂಪ ರಾದ ಶ್ರೀಗಳವರ ಗುಣಗಾನವೂ ಹಾಗೆಯೇ ಆಗಿರುತ್ತದೆ. ಈಗಿನ ವಿಜ್ಞಾನಯುಗದಲ್ಲಿ ಧರ್ಮವು ಖಿಲವಾಗುತ್ತಿದೆ ; ಅಧ್ಯಾತ್ಮವಂತೂ ಯಾರಿಗೂ ಬೇಡವಾಗಿದೆಯಾದರೂ ಈಗ ಅನಿವಾರ್ಯವಾಗಿ ಆದರಕಡೆಗೆ ತಿರುಗಲೇಬೇಕಾಗಿದೆ. ಸಾವಿರಾರು ವರ್ಷಗಳ ಹಿಂದೆಯೇ ಭಗವಾನ್ ವೇದವ್ಯಾಸರು ಅನುಗ್ರಹಿಸಿದ ಜ್ಞಾನಭಂಡಾರವನ್ನು ಶ್ರೀಶಂಕ ರರು ಪ್ರಕಾಶಗೊಳಿಸಿ ನಾವು ಇನ್ನೂ ಸನಾತನಧರ್ಮಾವಲಂಬಿಗಳಾಗಿ ಉಳಿಯಲು ಅವಕಾಶ ಮಾಡಿಕೊಟ್ಟರು. ಅಂಥ ಜಗದ್ಗುರು ಶಂಕರರ ವೇದಾಂತಸಿದ್ಧಾಂತ ವಿಚಾರ ಮೌಲ್ಯಗಳ ಆಸ್ತಿಗೆ ನಿಜವಾದ ಹಕ್ಕುದಾರರು ಯಾರಾದರೂ ಇದ್ದಾರೆಯೆ ? ಎಂದು ಹುಡುಕಿದಲ್ಲಿ ಶ್ರೀಶ್ರೀಸಚ್ಚಿದಾನಂದೇದ್ರಸರಸ್ವತೀಸ್ವಾಮಿ ಗಳೊಬ್ಬರೇ!

★★★★

## ಉನ್ನತ ಮೌಲ್ಯ ಕೇಂದ್ರ

**ಡಾ|| ಹಾ. ಮಾ. ನಾಯಕ್**

''ಉತ್ತರ ಮುಖಿಯಂತ್ರವು ಎಲ್ಲಿದ್ದರೂ ಉತ್ತರಕ್ಕೇ ತಿರುಗುವಂತೆ ನನ್ನ ದೃಷ್ಟಿಯೂ ಗ್ರಂಥಗಳ ಕಡೆಗೇ ಕೇಂದ್ರೀಕೃತವಾಗಿರುತ್ತದೆ. ಆದ್ದರಿಂದಲೇ ನೂರಾರು ಗ್ರಂಥಗಳನ್ನು ಪ್ರಕಟಿಸಿರುವ ಈ ಸಂಸ್ಥೆಯನ್ನು ಕಣ್ಣಾರೆ ನೋಡಿ ಆನಂದ ಪಡುವದಕ್ಕೆ ಬಂದಿದ್ದೇನೆ. ಈ ಸಂಸ್ಥೆಯ ಪ್ರಕಟನೆಗಳೆಲ್ಲವೂ ನನ್ನಲ್ಲಿವೆ. ಈಗ ಜೀವನ ಮೌಲ್ಯಗಳ

ಬಗ್ಗೆ ಸುರಿಮಳೆಯೇ ನಡೆದಿದೆಯಾದರೂ ನಿಜವಾದ ಮೌಲ್ಯಕ್ಕೆ ಆತ್ಮಾರ್ಪಣೆ ಮಾಡಿಕೊಂಡು ಬಾಳನ್ನು ಸಾಗಿಸುವವರು ತೀರ ವಿರಳರಾಗಿದ್ದಾರೆ. ಕೆಲವು ಜೀವನ ಮೌಲ್ಯಗಳು ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಪರಿವರ್ತನೆಯಾಗಿರುವದು ನಿಜವಾದರೂ ಸತ್ಯ, ಧರ್ಮ, ಆಧ್ಯಾತ್ಮಿಕ ಮೌಲ್ಯಗಳು ಮಾತ್ರ ಕಾಲದ ಹಿಡಿತಕ್ಕೆ ಒಳಪಡದೆ ಇರುವದರಿಂದ ಇವು ಎಂದಿಗೂ ಬದಲಾಗಿಲ್ಲ. ಆಗುವುದೂ ಇಲ್ಲ. ಇಂಥ ಮೌಲ್ಯಗಳನ್ನು ಗುರಿಯಾಗಿಟ್ಟುಕೊಂಡು ಬ್ರಹ್ಮೀಭೂತ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ ಸಾಹಿತ್ಯವನ್ನು ರಚಿಸಿ ಕನ್ನಡಿಗರಿಗೆ ನೀಡಿದ್ದಾರೆ. ಇದಕ್ಕೆ ಸರ್ಕಾರದ ಪ್ರೋತ್ಸಾಹವು ಸಿಗಲಿಲ್ಲವಾದರೆ ಬೇಡವೇ ಬೇಡ, ಜನರೇ ಈ ಸಂಸ್ಥೆಯನ್ನು ಕಾಪಾಡಬಲ್ಲರು.

ಗ್ರಂಥಗಳಲ್ಲಿ ಎರಡು ಜಾತಿ : ಕೆಲವನ್ನು ಮುಟ್ಟಿ ಕೈತೊಳೆದುಕೊಳ್ಳಬೇಕಾಗುತ್ತದೆ. ಮತ್ತೆ ಕೆಲವನ್ನು ಕೈತೊಳೆದುಕೊಂಡೇ ಮುಟ್ಟಬೇಕಾಗಿರುತ್ತದೆ. ಶ್ರೀ ಶ್ರೀಗಳವರ ಗ್ರಂಥಗಳೆಲ್ಲವೂ ಕೈತೊಳೆದುಕೊಂಡು ಮುಟ್ಟುವಂಥವು.

★★★★

## ದರ್ಶನ ; ಒಡನಾಟ

**ಹೆಚ್.ಎಸ್. ಚಂದ್ರಶೇಖರ ಶಾಸ್ತ್ರಿ, ಮೈಸೂರು**

1952-53ನೇ ಇಸವಿಯಲ್ಲಿ, ನನ್ನ 15 ವಯಸ್ಸಿನಲ್ಲಿ ಹೊಳೆನರಸೀಪುರದ ಮುನಿಸಿಪಲ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯಾಗಿದ್ದೆ. ಬಿಡುವಿನ ಕಾಲದಲ್ಲಿ ಕಾರ್ಯಾಲಯದ ಮುದ್ರಣಾಲಯದಲ್ಲಿ ಅಚ್ಚಾದ ಹಾಳೆಗಳನ್ನು ಮಡಚುವುದು, ಮುದ್ರಣವಾದ ಅಚ್ಚು ಮೊಳೆಗಳನ್ನು ಆಯಾ ಗೂಡಿನಲ್ಲಿ ಹಾಕುವದು, ಅಚ್ಚಾದ ಗ್ರಂಥಗಳ ಹೊಲಿಗೆ ಮುಂತಾದ ಕೆಲಸಗಳನ್ನು ಮಾಡುತ್ತಿದ್ದೆ. ಆಗ್ಗೆ ಶ್ರೀ॥ ಶ್ರೀಗಳು ಕರಡು ಪ್ರತಿಗಳನ್ನು ತಿದ್ದಿದ ನಂತರ ತಾವೇ ಪ್ರೆಸ್‌ವರೆಗೆ ನಡೆದುಬಂದು "ನರಸಪ್ಪಾ! ಇದನ್ನು ತೆಗೆದುಕೋ. ಕರಕ್ಷನ್ ಎಲ್ಲಾ ಸರಿಯಾಗಿ ಹಾಕಿ ಇನ್ನೊಂದು ಪ್ರೂಫ್ ಕೊಡು" ಎಂದು ಹೇಳಿ ಮಾಡುತ್ತಿದ್ದ ಕೆಲಸವನ್ನು ಸುಮ್ಮನೆ ನೋಡಿ ಹೋಗುತ್ತಿದ್ದರು ಅಷ್ಟೆ.

ಕಾರ್ಯಾಲಯದಲ್ಲಿ ಶ್ರೀ ಶ್ರೀಗಳ ಕಾಲದಲ್ಲಿ ಪ್ರತಿ ಗುರುವಾರ, ಶನಿವಾರ, ಸೋಮವಾರಗಳು ಸಂಜೆ 7.00 ರಿಂದ 8.00ರ ವರೆಗೆ ಭಜನೆ ಕಾರ್ಯಕ್ರಮವು ತಪ್ಪದೆ ಇರುತ್ತಿತ್ತು. ಈ ಕಾರ್ಯಕ್ರಮ ಕಾರ್ಯಾಲಯದ ದೊಡ್ಡ ಹಾಲಿನಲ್ಲಿ ನಡೆಯುತ್ತಿತ್ತು.

ಅಲ್ಲಿ ಶ್ರೀ ಶ್ರೀಗಳು ಉಪನ್ಯಾಸ ಮಾಡುತ್ತಿದ್ದ ಒಂದು ಸಿಮೆಂಟಿನ ವೇದಿಕೆ ಇತ್ತು. ಇದರ ಮೇಲೆ ಶ್ರೀಶಂಕರ ಭಗವತ್ಪಾದರ, ಶ್ರೀ ಗೋಂದಾವಳಿ ಮಹಾರಾಜರ, ಶ್ರೀ ಸಮರ್ಥ ರಾಮದಾಸರ ಮತ್ತು ಶ್ರೀ ರಾಮದೇವರ ಚಿತ್ರಪಟಗಳಿರುತ್ತಿದ್ದವು. ಭಜನೆಯಲ್ಲಿ ನಮ್ಮ ಅಣ್ಣಂದಿರು ಬ್ರ॥ ಶ್ರೀ॥ ಲ. ನ. ಮೂರ್ತಿಗಳು, ಶ್ರೀ ನಂಜಪ್ಪಭಾಗವತರು, ನನ್ನ ತಮ್ಮ ಚಿ॥ ಬಾಲಕೃಷ್ಣ ಮತ್ತು ಶ್ರೀ ಕೆ. ಸತ್ಯನಾರಾಯಣ ಮುಂತಾದವರು ಇರುತ್ತಿದ್ದರು. ಶ್ರೀ ನಂಜಪ್ಪಭಾಗವತರು ಭಜನೆಯನ್ನು ಹೇಳಿಕೊಡುತ್ತಿದ್ದರು. ಭಜನೆಯ ಕೊನೆಯ 10-15 ನಿಮಿಷಗಳಲ್ಲಿ ಶ್ರೀ ಶ್ರೀಗಳು ದಯಮಾಡಿಸಿ ಅಲ್ಲಿ ಕುಳಿತು ಭಜನೆಯನ್ನು ಕೇಳಿ ತಾವೂ ಒಂದೆರಡು ಭಜನೆಗಳನ್ನು ಹೇಳಿಕೊಡುತ್ತಿದ್ದರು. ಎಂಟು ಗಂಟೆಗೆ ಸರಿಯಾಗಿ ಆರತಿ. ಅನಂತರ ಶ್ರೀ ಶ್ರೀಗಳು ತಮ್ಮ ಕೊಠಡಿಗೆ ದಯಮಾಡಿಸುತ್ತಿದ್ದರು.

ಶ್ರೀ ಶ್ರೀಗಳ ಭಿಕ್ಷಾಪ್ರಸಾದ ಪ್ರಾಪ್ತಿ : ಪ್ರತಿದಿನ ಶ್ರೀಗಳವರಿಗೆ ಹೊಳೆನರಸೀಪುರದ ಒಬ್ಬ ಗೃಹಸ್ಥರ ಮನೆಯ ಭಿಕ್ಷಾವಂದನೆ ಏರ್ಪಾಡು ಇತ್ತು. (ಅವರಲ್ಲಿ ಶ್ರೀಯುತರುಗಳಾದ ರುದ್ರಪಟ್ಣದ ಶ್ರೀ ರಾಮಸ್ವಾಮಯ್ಯನವರು, ಅರಕಲಗೂಡು ಶ್ರೀಕಂಠಯ್ಯನವರು, ಸಾಲಗ್ರಾಮ ಸುಬ್ಬರಾಯರು, ಸಂತೆಬಾಚಳ್ಳಿ ಸುಬ್ಬರಾಯರು, ಛತ್ರದ ವೈ. ರಾಮಚಂದ್ರರಾಯರು, ಲಾಯರ್ ಶಿವರಾಮಯ್ಯನವರು, ಕೊಣನೂರು ರಾಮಚಂದ್ರರಾಯರು, ಪಿ.ಎನ್. ನರಸಿಂಹಯ್ಯನವರು, ಮುಂತಾದವರು ಇದ್ದರು). ಇವರುಗಳು ತಮಗೆ ಗೊತ್ತಾದ ವಾರದ ದಿನ ಬೆಳಿಗ್ಗೆ ಶ್ರೀ ಶ್ರೀಗಳವರಿಗೆ ಬಂದು ನಮಸ್ಕರಿಸಿ ಇಂದು ತಮ್ಮ ಮನೆಯಲ್ಲಿ ಭಿಕ್ಷಾವಂದನೆ ಎಂದು ತಿಳಿಸುತ್ತಿದ್ದರು. ಶ್ರೀ ಶ್ರೀಗಳು ಅವರೊಂದಿಗೆ ಎರಡು ಮಾತಾಡಿ ಆಶೀರ್ವದಿಸುತ್ತಿದ್ದರು. ಆ ದಿನ 11 ಗಂಟೆಗೆ ಸರಿಯಾಗಿ ಶ್ರೀ ಲ.ನ. ಮೂರ್ತಿಯವರು ಊಟದ ಕ್ಯಾರಿಯರ್‌ನ್ನು ಮಡಿಯಲ್ಲಿ ಆ ಗೃಹಸ್ಥರ ಮನೆಗೆ ತೆಗೆದುಕೊಂಡು ಹೋಗಿ ಅದರಲ್ಲಿ ಶ್ರೀಗಳಿಗೆ ಭಿಕ್ಷೆಯನ್ನು ತರುತ್ತಿದ್ದರು. ಆ ಹೊತ್ತಿಗೆ ಶ್ರೀಗಳು ತಮ್ಮ ಮಧ್ಯಾಹ್ನದ ಸ್ನಾನಾದಿ ಅನುಷ್ಠಾನಗಳನ್ನು ಮುಗಿಸಿ ತಂದ ಭಿಕ್ಷೆಯನ್ನು ಸ್ವೀಕರಿಸುತ್ತಿದ್ದರು. ಬೆಟ್ಟದಪುರ ಸಾವಿತ್ರಮ್ಮ ಎನ್ನುವ ಭಕ್ತರು (ಇವರು ಮಡಿ ಹೆಂಗಸರು) ಶ್ರೀಗಳಿಗೆ ಅತ್ಯಂತ ಶ್ರದ್ಧಾಭಕ್ತಿಯಿಂದ ಭಿಕ್ಷೆಯನ್ನು ಬಡಿಸುತ್ತಿದ್ದರು. ಭಿಕ್ಷೆಯಾದನಂತರ ಅದರಲ್ಲಿ ಮಿಕ್ಕಿದ್ದ ಅನ್ನ ಮುಂತಾದವುಗಳ ಸಮೇತ ಆ ಊಟದ ಕ್ಯಾರಿಯರ್ ಅನ್ನು ಹೊರಗಡೆ ತೊಳೆಯಲು ಇಡುತ್ತಿದ್ದರು. ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಕೆ. ಸತ್ಯನಾರಾಯಣ ಅವರು ಕ್ಯಾರಿಯರ್ ತೊಳೆಯುವ ಕಾಲಕ್ಕೆ ಕ್ಯಾರಿಯರ್‌ನಲ್ಲಿ ಮಿಕ್ಕಿದ್ದ ಅನ್ನ ಮುಂತಾದವುಗಳನ್ನು ಬೆರೆಸಿ ನನಗೆ / ನನ್ನ ಸಹೋದರನಿಗೆ ಕೈತುತ್ತು ಹಾಕುತ್ತಿದ್ದರು. ಹೀಗೆ ನನಗೆ ಶ್ರೀಗಳ ಭಿಕ್ಷಾಪ್ರಸಾದ ಪ್ರಾಪ್ತವಾಗುತ್ತಿತ್ತು. ಭಿಕ್ಷೆ ಸಾಮಾನ್ಯವಾಗಿ ಅನ್ನ, ಬೇಳೆಯ ತೊವ್ವೆ, (ಖಾರ ರಹಿತ) ಕೆಲವು ವೇಳೆ ಪಾಯಸ ಮತ್ತು ಮೊಸರು ಇಷ್ಟೇ.

**ಶ್ರೀಗಳ ಮಡಿ, ಆಚಾರವಂತಿಕೆ :** ಒಮ್ಮೆ ಒಂದು ಅನುಷ್ಠಾನ ಮಹೋತ್ಸವದ ಮಂಗಳ ಕಾರ್ಯಾಲಯದಲ್ಲಿ ನಡೆದಿತ್ತು. ಭೋಜನದ ಏರ್ಪಾಡೂ ಇತ್ತು. ಕಾರ್ಯಾಲಯದಲ್ಲೇ ಅಡಿಗೆಯವರ ಸಹಾಯದಿಂದ ಮಡಿಯಲ್ಲಿ ಅಡಿಗೆ ಮಾಡಲಾಗಿತ್ತು. ಅಂದು ಒಬ್ಬಟ್ಟನ್ನು ಕಾರ್ಯಾಲಯದ ಒಬ್ಬ ಭಕ್ತರು ಮನೆಯಲ್ಲಿ ಮಾಡಿಸಿ ಕಾರ್ಯಾಲಯಕ್ಕೆ ಭೋಜನದ ವೇಳೆಗೆ ತಂದಿದ್ದರು. ಶ್ರೀ ಶ್ರೀಗಳು ಇದನ್ನು ಬಡಿಸಬೇಡಿರೆಂದು ತಿಳಿಸಿದರು. ಕಾರಣವನ್ನು ವಿನಂತಿಸಿಕೊಂಡಾಗ ಶ್ರೀಗಳು ಹೇಳಿದ್ದು : "ಕಾರ್ಯಾಲಯದಲ್ಲಿಯೇ ತಯಾರು ಮಾಡಿದ ಅಡಿಗೆಗಳನ್ನು ಮಾತ್ರ ಬಡಿಸತಕ್ಕದ್ದು. ಏಕೆಂದರೆ ಅದನ್ನು ಮಾಡುವಾಗ ಅದರ ಮಡಿಯ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಲಾಗಿರುತ್ತೆ. ಆದರೆ ಬೇರೆ ಕಡೆಯಲ್ಲಿ ತಯಾರಿಸಿ ಇಲ್ಲಿಗೆ ತಂದ ಪದಾರ್ಥದಲ್ಲಿ ಇದನ್ನು ನಿಷ್ಕರ್ಷೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲೆಗೆ ಬಡಿಸಬೇಡಿ" ಎಂದರು. ಆ ಭಕ್ತರು ತಾವೇ ಖುದ್ದಾಗಿ ನಿಂತು ಮಡಿಯಲ್ಲೇ ತಯಾರಿಸಿದ್ದೆಂದು ಹೇಳಿದರೂ ಶ್ರೀಗಳು ಒಪ್ಪದೆ "**ಈಗ ಅಂತಹ ಹೊರಗಿನ ತಯಾರಿಕೆಯನ್ನು ಬಡಿಸಲು ಒಪ್ಪಿದರೆ ಮುಂದೆ ಅದೇ ಒಂದು ಉದಾಹರಣೆಯಾಗಿ ಬೇರೆಯವರೂ ಮಾಡಿ ತಂದು** ಬಡಿಸುತ್ತೇವೆ ಎಂದಾಗ ಅವರಿಗೆ ನಿರಾಕರಿಸಲು ಸಾಧ್ಯವಾಗುವದಿಲ್ಲ. ಏನಿದ್ದರೂ ಇಲ್ಲೇ ತಯಾರಿಸಿ ಬಡಿಸಬಹುದು" ಎಂದು ಆ ಭಕ್ಷ್ಯವನ್ನು ಊಟದ ಜೊತೆಯಲ್ಲಿ ಬಡಿಸಲು ಅವಕಾಶ ಕೊಡಲೇ ಇಲ್ಲ. ಇದು ಶ್ರೀ ಶ್ರೀಗಳ ಮಡಿ ಮುಂತಾದ್ದರ ಬಗ್ಗೆ ಒಂದು ನಿಷ್ಠುರತೆಯ ಸಂದರ್ಭ ಅಷ್ಟೆ.

ಪ್ರತಿ ಭಾನುವಾರ ಅವರಿರುವಾಗ ಮಾತ್ರ ಸಂಜೆ 4.30ರಿಂದ 5.30ರವರೆಗೆ ಶ್ರೀಗಳವರ ಉಪನ್ಯಾಸವಿರುತ್ತಿತ್ತು. ನಾವುಗಳು ಅಷ್ಟು ಹೊತ್ತಿಗೆ ಸಭಾಂಗಣದಲ್ಲಿ ಜಮಖಾನಗಳನ್ನು ಹಾಸಿ ಮುಂಭಾಗದ (ಪೂರ್ವದ ಕಡೆ) ಮೂರು ಬಾಗಿಲುಗಳನ್ನೂ ತೆರೆದು ಸಭಾಂಗಣವು ಚೊಕ್ಕವಾಗಿ ಇರುವಂತೆ ನೋಡಿಕೊಳ್ಳುತ್ತಿದ್ದೆವು. ಉಪನ್ಯಾಸವು 4.30ಕ್ಕೆ ಸರಿಯಾಗಿ ಪ್ರಾರಂಭವಾಗಿ 5.30ಕ್ಕೆ ಕರಾರುವಾಕ್ಕಾಗಿ ಸಮಾಪ್ತವಾಗುತ್ತಿತ್ತು. ಅನಂತರ ಶ್ರೀಗಳು ಸ್ನಾನಾದಿಗಳಿಗೆ ದಯಮಾಡಿಸುತ್ತಿದ್ದರು.

ಶ್ರೀಗಳು ಅತ್ಯಂತ ಸರಳ ಉಡುಪನ್ನು ಧರಿಸುತ್ತಿದ್ದರು. ಅಂಚು ಇಲ್ಲದ ಬಿಳಿ ಬಟ್ಟೆಯನ್ನು ತರಿಸಿ ಅದಕ್ಕೆ ಕಾವಿ ಬಣ್ಣ ಹಾಕಿಸಿ ವ್ಯಾಸಪೂರ್ಣಿಮೆಯ ದಿನ ಸ್ವೀಕಾರ ಮಾಡುತ್ತಿದ್ದರು. ಅಂಚು ಇದ್ದ ವಸ್ತ್ರಗಳನ್ನು ಎಂದೂ ಉಪಯೋಗಿಸುತ್ತಿರಲಿಲ್ಲ. ಹಾಗೆಯೇ ದುಡ್ಡನ್ನು ಕೈಯಲ್ಲಿ ಮುಟ್ಟುತ್ತಿರಲಿಲ್ಲ. ಅವರು ರೈಲಿನಲ್ಲಿ ಪ್ರಯಾಣ ಮಾಡಬೇಕಾದಾಗ ಜೊತೆಯಲ್ಲಿ ಯಾರಾದರೂ ಇರುತ್ತಿದ್ದರು. ಒಬ್ಬರೆ ಹೋಗಬೇಕಾದಾಗ

ಟಿಕೆಟ್ಟನ್ನು ಯಾರಾದರೂ ತೆಗೆದುಕೊಂಡು ಅದನ್ನು ಒಂದು ಕಾವಿ ವಸ್ತ್ರದಲ್ಲಿ ಕಟ್ಟಿ ಶ್ರೀಗಳಿಗೆ ಕೊಡುತ್ತಿದ್ದರು. ಶ್ರೀಶ್ರೀಗಳು ಯಾವ ಸಮಾರಂಭ ಉತ್ಸವಗಳಿಗೂ ಹೋಗು ತ್ತಿರಲಿಲ್ಲ. ಬಂದು ಕೇಳಿದವರಿಗೆಲ್ಲರಿಗೂ ತಾವು ಸರ್ವಸಂಗಪರಿತ್ಯಾಗ ಮಾಡಿರು ವುದಾಗಿಯೂ ಕೇವಲ ಬ್ರಹ್ಮಚಿಂತನೆಯಲ್ಲೇ ಇರುವವರೆಂದು ಹೇಳುತ್ತಿದ್ದರು.

ಒಮ್ಮೆ ಅವರನ್ನು ಹೊಳೆನರಸೀಪುರದ ಭಕ್ತರೊಬ್ಬರು ರಂಗನಾಥನ ದರ್ಶನಕ್ಕೆಂದು ಮಾವಿನಕೆರೆಗೆ ಕರೆದುಕೊಂಡು ಹೋಗಿದ್ದರು. ದೇವಸ್ಥಾನಕ್ಕೆ ಹೋಗಲು ರೈಲ್ವೆ ಕಂಬಿಯನ್ನು ದಾಟುವಾಗ ಶ್ರೀಗಳವರ ಕಾಲು ರೈಲ್ವೆ ಕೈಮರದ ತಂತಿ (Signal Wire)ಗೆ ತೊಡರಿ ಶ್ರೀಗಳು ಆಯತಪ್ಪಿ ನೆಲದಮೇಲೆ ಬೀಳುವಂತಾಯಿತು. ತಕ್ಷಣ ಹತ್ತಿರವಿದ್ದವರು ಅವರಿಗೆ ಸಹಾಯ ನೀಡಿ ಎತ್ತಿದ್ದರು. ಆಗ ಶ್ರೀಗಳವರ ಕಾಲಿಗೆ ರೈಲ್ವೆ ಹಳಿಯಲ್ಲಿದ್ದ ಕಲ್ಲು ತಾಕಿ ಕೊಂಚ ರಕ್ತ ಬಂದಿತ್ತು. ಅದನ್ನು ನೋಡಿದ ಶ್ರೀಗಳು ಮುಂದಕ್ಕೆ ತಾವು ಬರುವುದಿಲ್ಲವೆಂದೂ ರಕ್ತದರ್ಶನವಾದ್ದರಿಂದ ತಾವು ಸ್ನಾನಮಾಡ ಬೇಕೆಂದೂ, ಹಾಗೆ ಅಲ್ಲೇ ಸ್ನಾನ ಮಾಡಿದರೆ ಬೇರೆ ಮಡಿ ವಸ್ತ್ರ ಇಲ್ಲದ ಕಾರಣ ಊರಿಗೆ ತಕ್ಷಣ ವಾಪಸ್ಸು ಹೊರಡಲು ಇಚ್ಛಿಸಿ ಹೊರಟೇಬಿಟ್ಟರು.

★★★★

## ನಿಷ್ಠಾವಿಶೇಷರು

ಓ.ಎ. ರಾಮಯ್ಯ

ಮಾರ್ಗದರ್ಶನಕ್ಕಾಗಿ ಶ್ರೀಗಳವರು ಎಂತಹ ಸಂದರ್ಭದಲ್ಲಿಯೂ ಮಡಿ ಶಿಷ್ಟಾಚಾರ ಸಂಪ್ರದಾಯಗಳನ್ನು ತಪ್ಪದೆ ಪಾಲಿಸಿಕೊಂಡು ಬರುತ್ತಿದ್ದರು. ಇದರಿಂದ ಶ್ರೀಗಳವರನ್ನು – 'ಗೊಡ್ಡು ಸಂಪ್ರದಾಯಬ್ರಾಹ್ಮಣರು, ಇವರಿಗೆಲ್ಲಿ ಬಂತು ವಿಶ್ವಾಸ ಭಾವನೆ, ವೇದಾಂತ ಹೇಳುವುದಕ್ಕೆ ಮಾತ್ರ' ಎಂಬುದಾಗಿ ದೂರಿದವರನೇಕರಿದ್ದಾರೆ. ಒಮ್ಮೆ ಸಂಪನ್ನರಾದ ನನ್ನ ಮಿತ್ರರೊಬ್ಬರು ಶ್ರೀಗಳವರನ್ನು ಶ್ರೀ ಅನಂತಾಶ್ರಮ ದಲ್ಲಿದ್ದಾಗ ಕಾಣಲು ಬಂದರು. ಪದ್ಧತಿಯಂತೆ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಲು ಪ್ರಯತ್ನಪಟ್ಟಾಗ ಸ್ವಾಮಿಗಳವರು ದೂರ ಸರಿದು ನಿಂತರು. ಇದರಿಂದ ಬೇಸರಪಟ್ಟುಕೊಂಡ ನನ್ನ ಮಿತ್ರರು ಇಂದಿಗೂ ಶ್ರೀಗಳವರನ್ನು ಈ ಬಗ್ಗೆ ನಿಂದಿಸು ವುದನ್ನು ಬಿಟ್ಟಿಲ್ಲ. ಶ್ರೀಗಳವರು ಮಡಿಯಲ್ಲಿ ಪಾಠ ಹೇಳುತ್ತಿದ್ದ ಕ್ರಮವನ್ನೂ ಅಲ್ಲ ಗಳೆಯುವವರಿದ್ದಾರೆ. ಕ್ರಮಪಾಠಕ್ಕೆ ಕೆಲವು ನಿಯಮಗಳು ಅಗತ್ಯ. ಆದರೆ ಅದನ್ನೇ ದೊಡ್ಡದು ಮಾಡಿ ಅರ್ಹರಾದವರನ್ನು ದೂರಿಟ್ಟು ವಂಚಿಸಿದ ನಿದರ್ಶನಗಳೇನೂ ಕಂಡುಬಂದಿಲ್ಲ. ಶ್ರೀಗಳವರಿಂದಲೇ ವೇದಾಂತ ವಿಷಯಗಳನ್ನು ಕೇಳಿ ತಿಳಿದುಕೊಂಡು

ಉದ್ಧಾರರಾದವರನೇಕರಿದ್ದಾರೆ. ಶ್ರೀ ಭಗವತ್ಪಾದರೆಂಬ ಸಂನ್ಯಾಸಿಗಳು, ಶ್ರೀ ರಂಗ ಶ್ಯಾಮಯ್ಯ ಮೇಷ್ಟ್ರು ಮೊದಲಾದವರ ನಿದರ್ಶನಗಳಿವೆ.

ಮೈಸೂರಿನ ಗಣ್ಯ ಒಕ್ಕಲಿಗ ಮನೆತನಕ್ಕೆ ಸೇರಿದ ಶ್ರೀ ಚಿಕ್ಕಲಿಂಗಣ್ಣನವರೆಂಬ ವೇದಾಂತಿಗಳು ರಾಯರಲ್ಲಿಯೂ (ಶ್ರೀಗಳವರ ಪೂರ್ವಾಶ್ರಮದ ರೂಢಿನಾಮ) ಶ್ರೀ ಕೆ.ಎ. ಕೃಷ್ಣಸ್ವಾಮಿಅಯ್ಯರ್‌ರವರಲ್ಲಿಯೂ ವೇದಾಂತದ ಅತಿ ಸೂಕ್ಷ್ಮವಿಷಯಗಳನ್ನು ಕುರಿತು ಆಗಾಗ ಚರ್ಚೆಮಾಡುತ್ತಿದ್ದರು. ರಾಯರು ಶ್ರೀ ಲಿಂಗಣ್ಣನವರ ಪ್ರತಿಭೆ ಹಾಗೂ ಸುಸಂಸ್ಕೃತಿಯ ಲಕ್ಷಣಗಳನ್ನು ಕಂಡು ಅವರ ಅನೇಕ ಅನುಮಾನಗಳನ್ನು ಪರಿಹರಿಸಿ ಸಹಾಯಮಾಡಿದ್ದಾರೆ. ಹುಲಕೋಟೆಯ ಶ್ರೀ ಕೃಷ್ಣಗೌಡರು ಶ್ರೀಗಳವರು ಹೇಳುತ್ತಿದ್ದ ಪಾಠವನ್ನು ಏಕಾಗ್ರತೆಯಿಂದ ಕೇಳಿ ಒಪ್ಪಿಸಿದ ವಿಷಯವನ್ನು ತಮ್ಮ ಮಡಿವಂತ ಶಿಷ್ಯರಲ್ಲಿ ತಿಳಿಸುತ್ತಾ ಮುಖ್ಯವಾಗಿ ಮನಸ್ಸಿನಲ್ಲಿ ಮಡಿವಂತಿಕೆ (ಅಂತಃಕರಣಶುದ್ಧಿ) ಇರಬೇಕೆಂಬುದನ್ನು ಆಗಾಗ ಒತ್ತಿ ಹೇಳುತ್ತಿದ್ದರಂತೆ.

ಅಲ್ಲದೆ ಪಾಶ್ಚಾತ್ತ್ಯ ದೇಶಗಳಿಂದ ಬಂದಿದ್ದ ಮುಮುಕ್ಷುಗಳಿಗೆ ವೇದಾಂತದ ರಹಸ್ಯಗಳನ್ನು ತಿಳಿಸಿಕೊಟ್ಟು ಉದ್ಧಾರ ಮಾಡಿರುವ ನಿದರ್ಶನಗಳು ಅನೇಕವಿವೆ. ಇಂಥ ಒಬ್ಬ ಮುಮುಕ್ಷುವು ನಾನು ಹಿಂದುವಾಗಿ ಮತಾಂತರಗೊಂಡು ಶಾಸ್ತ್ರ ಪಾಠ ಕೇಳಬೇಕೆಂದಿದ್ದೇನೆ ! ತಮ್ಮ ಅಪ್ಪಣೆಯೇನು ? ಅಂದಾಗ 'ಅದೇನೂ ಅಗತ್ಯವಿಲ್ಲ ! ನಿಮ್ಮ ಮತದಲ್ಲಿ ಏನು ಕೊರತೆಯಿದೆ ? ವೇದಾಂತ ತಿಳಿಯಲು ಮತ ಬದಲಾವಣೆಯ ಗೋಜಿಗೆ ಹೋಗಬೇಡಿ! ನಿಮ್ಮ ನಿಮ್ಮ ಆತ್ಮ ತತ್ತ್ವವನ್ನು ತಿಳಿಯಲು ಅಡ್ಡಿಯೇನು ? ನಿಮ್ಮ ನಿಮ್ಮ ಧರ್ಮದಲ್ಲಿ ಹೆಚ್ಚಿನ ಶ್ರದ್ಧೆಯನ್ನುಂಟುಮಾಡುವುದು ವೇದಾಂತದ ಮರ್ಮ ! ಎಂದರಂತೆ.

ಊಟೋಪಚಾರ, ಮಡಿಮೈಲಿಗೆ, ಅಂಟುಮುಟ್ಟು, ಆಚಾರವಿಚಾರಗಳು ಬಹುಮಟ್ಟಿಗೆ ವೈಯಕ್ತಿಕ. ಅವು ಆತ್ಮರಕ್ಷಣೆಗೆ ಅಗತ್ಯವಾಗುವ ಉಪಾಯಗಳು. ಇವುಗಳ ಆಧಾರದ ಮೇಲೆ ಸಮಾನತೆಯನ್ನುಂಟುಮಾಡುವ ಪ್ರಯತ್ನ ಸುಸಂಸ್ಕೃತಿಯ ಲಕ್ಷಣವಾಗಲಾರದು. ಹೊರ ಮತದವರು ರಾಜಕೀಯ ಉದ್ದೇಶಗಳಿಗಾಗಿ ಉಪಯೋಗಿಸುತ್ತಿರುವ ಸಮಾನತೆಯ ಸೋಗಿನ ಉಪಾಯಗಳಾಗಿರುವ ಇವಕ್ಕೆ ಸುಲಭವಾಗಿ ಮೋಸಹೋಗುವುದು ಈಗ ರೂಢಿಯಾಗಿದೆ. "ಶೌಚಾತ್ಸ್ವಾಂಗ ಜುಗುಪ್ಸಾ ಪರೈರಸಂಸರ್ಗಃ" – (ಪಾ. ಯೋ) – ಶೌಚಾಚರಣೆಯಿಂದ ತಮ್ಮ ತಮ್ಮ ಶರೀರದ ಮೇಲೆ ಹೇಸಿಗೆ ಭಾವನೆಯಾಗುವುದಲ್ಲದೆ ಬೇರೆಯವರ ದೇಹಾದಿಗಳೂ ಅಷ್ಟೇ ಅಪವಿತ್ರ ಎಂಬ ಅರಿವಾಗುತ್ತದೆ. ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಭಾರತೀಯರು

ಕೆಲವು ನಿಯಮಗಳನ್ನು ವಿಶೇಷವಾಗಿ ಪಾಲಿಸಿಕೊಂಡು ಬಂದಿದ್ದರು. ಮುಟ್ಟಿ ನಮಸ್ಕಾರ ಮಾಡುವುದು, ಸಹಪಂಕ್ತಿ ಭೋಜನ ಇವು ಶಿಷ್ಟಾಚಾರಗಳೆನಿಸಿಕೊಳ್ಳು ವುದಿಲ್ಲ. ಆದರೂ ಇವುಗಳ ನಿಮಿತ್ತದಿಂದ ದೊಡ್ಡವರಿಗೆ ನಿಂದನೆ ತಪ್ಪುವುದಿಲ್ಲ. ಶ್ರೀ ರಮಣ ಮಹರ್ಷಿಗಳ ಆಶ್ರಮದಲ್ಲಿ 1938ರಲ್ಲಿ ಒಬ್ಬ ಆರ್ಯಸಮಾಜದ ಪಂಡಿತರು ಪಂಕ್ತಿಬೇಧದ ವಿಷಯವಾಗಿ ಘಂಟೆಗಟ್ಲೆ ಚರ್ಚೆ ಮಾಡಿದ್ದನ್ನು ನೋಡಿದ್ದೇನೆ. ರಮಣ ಮಹರ್ಷಿಗಳವರ ಪಾದವನ್ನೂ ಮುಟ್ಟಲು ಅವಕಾಶವಿರಲಿಲ್ಲ. ಶ್ರೀ ಜೆ. ಕೃಷ್ಣ ಮೂರ್ತಿಯವರು ನೋ ! ಪ್ಲೀಸ್ ! ಸರ್ ! ಎಂದು ದೂರ ಸರಿಯುತ್ತಿದ್ದರು.

ಶ್ರೀಶ್ರೀಗಳವರು ಪಂಡಿತರಲ್ಲದ ಸಾಮಾನ್ಯ ಮುಮುಕ್ಷುಗಳ ಉದ್ಧಾರ ಕ್ಕಾಗಿಯೇ ದುಡಿದವರು. ಸತ್ಯನಿಷ್ಠರು, ಸತ್ಯವ್ರತರು, ಇದಲ್ಲವೆ ನಿಜವಾದ ವಿಶಾಲ ಹೃದಯ ! ವಿಶ್ವಾತ್ಮಭಾವ !

★★★★

## ವೈಶಿಷ್ಟ್ಯ ಏಕಾಗ್ರತೆ (ಸಮೀಪವರ್ತಿ)

ಒಮ್ಮೆ, ಸಾಯಂಕಾಲದ ಅನುಷ್ಠಾನವಾದ ಬಳಿಕ ಹಗುರವಾದ ಅರಳಿನ ಹಿಟ್ಟು ಮುಂತಾದವುಗಳನ್ನು ಸೇವಿಸುವುದು ಅವರ ಪದ್ಧತಿ. ಒಂದು ಸಲ, ಮಗಳು ಉಪಹಾರ ತಂದಿಟ್ಟಾಗ ಯಾವದೋ ವೇದಾಂತ ವಿಚಾರದ ಗಹನವಾದ ಚಿಂತನೆಯಲ್ಲಿ ಮುಳುಗಿದ್ದರು, ಪರಿಶೋಧನೆ ಬರಹ ನಡೆಯುತ್ತಲೇ ಇತ್ತು, ಅವರಿಗೆ ಈ ಕಡೆಯ ಅರಿವು ಬಂದದ್ದು ಬೆಳಗಿನ ಝಾವ ನಾಲ್ಕು ಗಂಟೆಗೆ.

ಮತ್ತೊಂದು ದಿನ, 'ಮೈಯಲ್ಲಿ ಚೆನ್ನಾಗಿಲ್ಲ, ಊಟಬೇಡ' ಎಂದು ರಾತ್ರಿ 8 ಗಂಟೆಗೆ ಮಲಗಲು ಹೋದರು. ಆ ಬಳಿಕ ಕಾಣಲು ಬಂದ ಪಂಡಿತರೊಡನೆ ವೇದಾಂತ ಚರ್ಚೆಗೆ ಆರಂಭಿಸಿದ ಶ್ರೀಶ್ರೀಗಳು ಚರ್ಚೆಯಿಂದ ಎಚ್ಚೆತ್ತಾಗ ಬೆಳಗಿನ ಜಾವ 5 ಗಂಟೆ.'

## ಅಂತರಂಗ

– ಪ್ರೊ. ಆರ್.ಬಿ. ಕಂಠಿ, ಧಾರವಾಡ

1950ರಲ್ಲಿ ಧಾರವಾಡದ ತತ್ತ್ವಾನ್ವೇಷಣ ಮಂದಿರದಲ್ಲಿ ಶ್ರೀಶ್ರೀಗಳವರು ಪ್ರತಿಪಾದಿಸಿದ 'ಅಂತರಂಗ' ಎಂಬ ಆಂತರಿಕ ಸಾಧನವು ಉಳಿದ ಬಾಹ್ಯೇಂದ್ರಿಯ ಸಾಧನಗಳಿಗೆ ವಿಲಕ್ಷಣವಾದ ಅದ್ವಿತೀಯ ಜ್ಞಾನದಾಯಕ ಸಾಧನವಾಗಿದೆ. 'ಅಂತರಂಗ' ಶಬ್ದವು ನನ್ನ ತ್ರಿಕರಣಗಳನ್ನೂ ಭೇದಿಸಿ ಇಂದಿಗೂ ಹಚ್ಚ ಹಸುರಾಗಿ

ಉಳಿದಿದೆ. ಇದು ಸ್ವಸ್ಥಾನದಿಂದ ಪಲ್ಲಟವಾಗಿ ಮಲಿನವಾಗದಿರಲಿ. ಏಕೆಂದರೆ, ಈ ಅಂತರಂಗವು ಶ್ರೀಶ್ರೀಗಳವರ ಶುದ್ಧ ಅಂತಃಕರಣವೇ ಆಗಿರುವದು. ಶ್ರೀಗಳವರ ಶರಣ ಸಂತತಿಯ ನಡು ಹೃದಯ ನಳಿನದಲ್ಲಿ ಮಹಾತ್ಮರ ದಿವ್ಯ ಪಾದಕಮಲವು ನಿರಂತರ ಶೋಭಿಸುವಂತಿದೆ.'

★★★★

## THE MAHATAPASVI

### Swami Brahmanandendra Saraswati

One Mahatma in Andhra Pradesh who was himself an ardent worshipper of Sankara Bhagavathpada, made it clear to me that one like me who sought absolute freedom from fear and sorrow here and now had to study the prasthana thraya bhasya of Sankara. When a rendering of Vivekachudamani, with its illuminating introduction fell to my hands, I leapt in joy that I got my teacher, and soon was at the feet of Satchidanandendra Saraswati Maharaj.

His assiduous application (anusthana sraddha) to work, which on a carefully formulated scale of values he has determined as the worthiest work, cannot but strike any one who has watched him at work over these decades. Such dedication is impossible unless the votary has taken Kartavya as the devata as one's whole and sole refuge. He is indeed a lesson in Karmayoga.

His attention to detail admittedly is the secret of success, His prodigious memory has served him well. Because of this asset we have today with us his massive renderings into Kannada of the whole of the prasthanathraya bhashya - a monument of dedicated labour. His short but comprehensive annotations seem to anticipate the reader's genuine doubts at each point and are hence invaluable to any one seeking to grasp the essentials of Sankara's monism.

A sharp aspirant can be sure of being led by him, an able teacher (bodha naipunya), to the basic truths without much ado while the slow one can equally be sure of being led to the same truths circuitously. This calls for patience, perseverance and compassion. The technique of super imposition and rescission (Adhyaropa Prakriya) which constitutes the corner stone of the system of vedanta has been developed and taught by His Holiness as indeed by no other.

His aversion to reform (Savadhana prakriti) can easily be mistaken for reaction ; no, it is only to frivolous change, in the guise of reform and is dictated by a fear of subversion and trampling of basic tested values, by a fear of having to throw the baby with the bath. Occasions are not wanting when he has without hesitation dexterously thrown overboard those indulging in foul play and treachery. Hasten slowly was his motto in secular dealings.

Assiduous application, attention to detail, ability as teacher, aversion to reform, absolute pragmatism make up the garland which I offer at the feet of His Holiness in adoration and deep reverence.

★★★★

## IN TOUCH WITH AN ANCIENT TRADITION

**Chaitanya and Mohan**

We, the co-authors of this article, are two Westerners, whose stumbling pilgrimage has taken us to the doors of many so-called spiritual guides, and then by the grace of God, to the feet of his Holiness Swami Satchidanandendra Saraswati. Here we drank freely the nectar like exposition of Shankara's vedanta, based on the undeniable facts of universal experience, free from the clutches of unquestioning faith, suggesting to the extrovert seeker that he should purify the mind, turn inwards and be established in the "True Self".

"For those who have secured the Grace of Guru, attained serenity of the mind and whose intellect has turned away from the external phenomena, there is nothing so blissful, so well known, so easily knowable, and quite so near as Brahman". *(Gita Bhashya - XVIII-50)*

Vedanta seen through the eyes of the Swamiji is not, as depicted by many others to whom we have listened, a speculative system postulating some logical theories which can result at best in an intellectual knowledge about the truth leaving the seeker still hanging in the noose of his knowership, but rather the means to direct experience of being one with the non-dual reality, benefit of the knower-known-knowledge, delusion. His Holiness went to lengths in pointing out that when the word experience (anubhava) is used in vedantic scriptures with reference to the self, it does not denote any particular mental-modification which depends on the sense organs or the mind for its manifestation, but to another type of

intuition which is common to all and implicit in the conventional dealings expressed in phrases like "In sleep I knew nothing", "I dreamt" and "I awoke". This intuition, although self manifest, immediate and desiderating no other means of knowledge for it's revelation, has been uniformly overlooked due to the extrovert nature of man's mind. It is only the traditional method of Vedanta (known to handful of people in the world today) that repeatedly directs us towards this experience, the universal experience of the witness (Sakshi-Anubhava) by negating all that is falsely super-imposed on the self owing to a lack of discrimination.

We came to Sri Swamiji with the conceit of being knowers of the self, but after acquainting ourselves with his teachings and receiving the indispensable guidance of his brilliant disciple Sri Devarao Kulkarni, we could appreciate the fact that to know the Self means to be the Self, and to be the Self only means to cease identifying with the non-Self. Those who think that the knowledge of Vedanta does not radically transform the attitudes, the conduct and the morality of the aspirant, are far from the truth. In other words, Vedanta does transform personality in its entirety,

Our prostrations unto Sri Swamiji.

★★★★

## ABHINAVA SHANKARA WHO TRANSFORMED MY LIFE.

***Sri D.B. Gangolli***

In 1970 I bought a booklet written by Shri Satchidanandendra Saraswati Swamiji entitled : "How to Recognize the method of Vedanta", from a bookstall in Bombay. As the catchy title of the book signifies, I came to know – for the first time in my life – that Advaita Vedanta, as expounded by Adi Shankara in his extant Bhaashyas on the Prasthaana Trayi, teaches a perfect and unique method of cognizing or Intuiting our innate, innermost Self. The treatise left a deep dent in my mind but it had totally rooted out certain deep-seated misconceptions that my mind had accumulated on studying many books written by the leading lights of the day.

I accepted the Swamiji as my spiritual guide. Eventually I went to Mysore, where he was ; it was a solemn moment, which -

as it later happened - was to transform my whole life. I had pleaded with Swamiji then to write more books on Advaita Vedanta of Shankara in English so as to cater to a larger section of people in our country as well as in foreign countries. Swamiji compiled nearly two dozens of books in English, many of them being masterpieces of this Spiritual Science of Vedanta.

**Single-handed Revolution in Vedanta :** He was a colossal, well-organized institution in himself. He was fortunate in having as his 'friend, philosopher and guide' a highly evolved holy man K. A. Krishnaswamy Iyer. He founded 'Adhyatma Prakasha Karyalaya' first at Bangalore during 1920 and later at Holenarsipur (1938), Hassan District, Karnataka State. He purposefully called it a 'Karyalaya' (a workshop) ; for, he wanted to work hard to bring about a 'revolution' in Advaita Vedanta by publishing numerous books dedicated to root out the deep misconceptions that had got established in people's mind.

He carried out research for over six decades and compiled a monumental historic record of Vedantic method in Sanskrit called 'Vedanta Prakriyaa Pratyabhijna', comprising nearly 800 pages. He wrote a masterly English introduction to that Sanskrit work entitled – 'How to Recognize the Method of Vedanta'. In this treatise Shri Sharma revealed clearly how alien doctrines had made inroads into the mainstream of Advaita Vedanta as expounded in Adi Shankara's Bhaashyas. This treatise also brought to light the perfect and unique method of 'Adhyaaroapa Apavaada (deliberate superimposition of certain adjuncts or attributes on the Non-dual Absolute Reality of Atman or the Self for the exclusive purpose of teaching, and subsequent rescission of those adjuncts when the student learns to Intuit the Reality). This masterly method is utilized in and through the Upanishadic texts and is adopted by Veda Vyaasa or Baadaraayanaa, Gaudapada, Shankara and Sureshwara - all of whom belong to a hoary tradition of Advaita Vedanta.

When he published earlier a booklet in Sanskrit called 'Moolaavidyaa Niraasa' (Refutation of the Causal Ignorance), he became the butt of scorn and criticism for many anchorites and heads of Ashrams as the booklet hit at the very root of this deep-seated ill-conceived theory that had totally corrupted Shankara's pristine pure Advaita Vedanta. Especially after he assumed

Sannyaasa, he carried out his crusade and campaign more vigorously and undauntedly only through books and articles against this totally erroneous theory that had been adopted by most of the preachers of Vedanta. He published scores of treatises elucidating the genuine tenets of Advaita Vedanta in consonance with Shankara's original Bhaashyas, arranged symposia inviting leading Vedantins of the time to participate in them and put forward their views. Many reputed scholars dared not face the challenge. Though a small number of scholars made bold to present their views, Swamiji pointed out their erroneous tenets as they were against universal experience and were fully illogical. He published a small book called 'Vedantins Meet' in 1962 to prove his point.

Finally when he gave up his mortal coil at the ripe age of 96 in 1975, his wish of establishing a centre for publishing and propagating unalloyed pure Advaita Vedanta - as propounded by an illustrious line of great preceptors had been fulfilled. Today, as things stand, Adhyatma Prakasha Karyalaya at Holenarsipur and its branch at Bangalore are the only centres propagating this perfect and unique method of Adhyaaroapa Apavaada in the world. The institution has continued to publish many more magnificent books to help all grades of students and seekers to attain Enlightenment.

**A source of inspiration and a model :** Not only did he preach and publish books on pure Shaankara Advaita Vedanta but also fully live a Vedantic way of life as per the traditional Varna-ashrama Dharma. While celebrating 'Shankara Jayanti Festival' in the Adhyatma Prakasha Karyalaya at Holenarsipur and elsewhere, the Swamiji laid down a model by selecting important topics from Shankara's Bhaashyas and elucidating their subtle implications and secrets. During the Chaaturmaasyas and at various centres in the State he gave a series of discourses on the salient features of Shaankara Vedanta. Later on those discourses became titles like – 'Intuition of Reality', 'The Salient Features of Shaankara Vedanta', "Upanishadic Approach to Vedanta', 'The Vision of Atman', 'Misconceptions about Shankara', 'Shuddha Shaankara Prakriyaa Bhaaskara' (in Sanskrit and English) etc. These are like Vedantic texts for any student of Advaita Vedanta.

These wonderful edifying books inspired me so much as to change my perspective and outlook on life and I decided to resign

my prestigious and lucrative post as a sportswriter of some repute in the leading English daily of our country, viz. 'The Times of India', in Bombay nearly six years before my usual retirement ago of 60. I was fortunate enough to associate myself with the noble cause of propagating genuine Shaankara Vedanta by translating Swamiji's wonderful works in Kannada into English. Even to this day I have been continuously translating his Kannada series called 'Upanyaasa Manjaris', which reveal the essence and many secrets of all the ten principal Upanishads on which Adi Shankara had written his Bhaashyas. These are helpful for the student to develop a deep interest in spiritual matters and in adopting a Vedantic way of life.

Inspired by Swamiji's example, I started conducting 'study circles' in the suburbs of Bangalore like Seshadripuram and Malleswaram, with Swamiji's works as texts for study. In the process I could recognize the hidden secrets of the perfect and unique method of 'Adhyaaropa Apavaada'.

**The Five Fundamental Principles culled out from Shankara's and Swamiji's works :** I would like to record my gratitude to the late Devarao Kulkarni, one of Swamiji's foremost disciples and who propagated his tenets throughout Karnataka, Andhra Pradesh and Maharashtra States. He shared with me a horde of secrets that he had learnt from Swamiji himself and later had unearthed many more subtle truths from Swamiji's works and Shankara's original Bhaashyas. We both were able to cull out five fundamental principles and collate them in a very systematic course of study. Shri Devarao's Kannada magnum opus – "Shankara Vedanta Sourabha" (Kannada) - is like a text book for a PhD course in Advaita Vedanta. I compiled the treatise entitled "The Perfect and Unique Method of Shankara's Non-dualism". I have been inspired by Swamiji's clear-cut teachings. – "The Scientific Approach of Shankara's Vedanta" – uses about two dozens of diagrams to bring home the subtle truths of the Vedantic Spiritual Science par excellence. It is in accordance with the modern methods of teaching in Schools and Colleges. Especially, the tribasic method of "Avasthaatraya Viveka" is a salient feature of this treatise.

Om Tat Sat

# ಪರಿಶಿಷ್ಟ - 1

## ಕಾರ್ಯಾಲಯದ ಸ್ಮರಣೀಯ ವ್ಯಕ್ತಿಗಳ ಕಿರುಪರಿಚಯ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಇತಿಹಾಸದಲ್ಲಿ ಅಲ್ಲಲ್ಲೇ ಮುಖ್ಯಪಾತ್ರ ವಹಿಸಿದ, ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ಕೆಲವು ಮಹನೀಯರ ಸೂಕ್ಷ್ಮ ಪರಿಚಯವನ್ನೂ ಕಾರ್ಯಾಲಯಕ್ಕೆ ಇವರುಗಳಿಂದಾಗಿರುವ ಉಪಕಾರವನ್ನೂ ಕೃತಜ್ಞತಾಪೂರ್ವಕವಾಗಿ ಸ್ಮರಿಸಿದೆ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರೇ ಇಲ್ಲಿನ ಮೊದಲ ನಾಲ್ಕು ಲೇಖನಗಳನ್ನು ಬರೆದಿರುವರು.

**ಮಹಾಪುರುಷ :** ಆ ವಿಭೂತಿ ಪುರುಷರನ್ನು ನಾನು ಮೊಟ್ಟ ಮೊದಲು ಕಂಡದ್ದು ಸುಮಾರು 1910ರಲ್ಲಿರಬೇಕು. ನನ್ನ ಸ್ನೇಹಿತರೊಬ್ಬರು ಯಜ್ಞಾದಿಕರ್ಮಗಳ ವಿಷಯದಲ್ಲಿ ಅವರಿಗೆ ಅನಾದರವೆಂದು ಹೇಳಿದ್ದರು, ಕರ್ಮಗಳಲ್ಲಿ ಶ್ರದ್ಧಾಜಾಡ್ಯವುಳ್ಳ ನಾನು ಅವರೊಡನೆ ಚರ್ಚೆಮಾಡಬೇಕೆಂಬ ಅಭಿಮಾನದಿಂದಲೇ ಅವರಲ್ಲಿಗೆ ಹೋದೆನು. ಆಗ್ಗೆ ನನ್ನ ಸ್ನೇಹಿತರು ದಿ|| ಹೊಸಕೆರೆ ಚಿದಂಬರಯ್ಯನವರೂ ನನ್ನೊಡನೆ ಬಂದಿದ್ದರು. ಅವರಿಗೆ ಯೋಗಾಭ್ಯಾಸದಲ್ಲಿ ಒಲವು. ಆ ಮಹಾವಿಭೂತಿಪುರುಷರ ದರ್ಶನ ಮಾತ್ರದಿಂದ ನಮ್ಮಿಬ್ಬರಿಗೂ ''ನಷ್ಟೋ ಮೋಹಃ'' ಎಂಬ ಅನುಭವ ವಾಯಿತು. ಬಂದವರನ್ನೆಲ್ಲ 'ಸಂಧ್ಯಾವಂದನೆಯಾಯಿತೊ ?'' ಎಂದು ಕೇಳುತ್ತಿದ್ದ ಅವ್ರರನ್ನು ಕರ್ಮವಿರೋಧಿಗಳೆನ್ನುವದು ಹೇಗೆ ಸರಿಯಾದೀತು ? - ಎಂದು ಕೊಂಡೆನು. 'ಗೋಂದಾವಳಿಯ ಮಹಾರಾಜರು ಬರಿ ನಾಮಸ್ಮರಣೆಯನ್ನೇ ಹೇಳುತ್ತಾರೆಯೆ ?' ಎಂದು ಚಿದಂಬರಯ್ಯನವರು ಕೇಳಿದ್ದಕ್ಕೆ 'ಅವರವರಿಗೆ ತಕ್ಕಂತೆ ಹೇಳುತ್ತಾರೆ, ಕೆಲವರಿಗೆ ಪ್ರಾಣಾಯಾಮಾದಿಗಳನ್ನೂ ಹೇಳುತ್ತಾರೆ' - ಎಂದುಬಿಟ್ಟರು. ನನ್ನ ಮಿತ್ರರಿಗೆ ಅದೇ ಬೇಕಾಗಿತ್ತು. ಆ ಮಹಾತ್ಮರು ಗಗನಾಚಾರ್ಯರಲ್ಲಿ ಯೋಗಾಭ್ಯಾಸವನ್ನು ಮಾಡಿದ್ದರೆಂದು ಹಿಂದಿನಿಂದ ತಿಳಿಯಿತು. ಇವರು ಪೂರ್ವಾಶ್ರಮದಲ್ಲಿ ಗದಗ್ ತಾಲ್ಲೂಕಿನ ಶ್ರೀಮಂತ ಜಮೀನ್ದಾರರ ಮನೆತನದವರು. ಲಿಂಗೇಶಗೌಡರೆಂದು ಹೆಸರು. ಬಹಳ ಮೇಧಾವಿಗಳು, ಸಂಸ್ಕೃತದಲ್ಲಿ ಬಹುವಾದ ಪಾಂಡಿತ್ಯ ಆದರವನ್ನಿಟ್ಟಿದ್ದರು. ಶ್ರೀ ಗೋಂದಾವಳೀ ಮಹಾರಾಜರ ಸಂಪರ್ಕ ಬಂದು, ಅವರ ಅಸಾಧಾರಣ ಮಹಿಮೆ, ವಿಚಾರಗಳಿಂದ ಆಕರ್ಷಿತರಾಗಿ ಹಲವಾರು ವರ್ಷ ಗುರುಗಳಲ್ಲಿ ಅದ್ವಿತೀಯ ಸೇವಾ ನಿರತರಾಗಿದ್ದರು, ಹಾಗೆಂದೇ ಮಹಾರಾಜರು ಇವರನ್ನು ಮಹಾಭಾಗವತರು ಎಂದು ಕರೆದರು.

1911ರಲ್ಲಿ ದಾವಣಗೆರೆಗೆ ಅವರು ದಯಮಾಡಿಸಿದ್ದಾಗ ನಾನು ಮನೆಗೆ ಕರೆದುಕೊಂಡು ಹೋಗಿ ಸತ್ಕಾರಮಾಡಲು ಪ್ರಯತ್ನಿಸಿದಾಗ 'ಉಪಚಾರದ ನೆಪದಿಂದ ಮಾಡಿದ ಅಪಚಾರಗಳನ್ನೆಲ್ಲ ಕ್ಷಮಿಸು' ಎಂದು ಧರ್ಮರಾಯನು ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿದ ವಾಕ್ಯವು ನೆನಪಿಗೆ ಬಂತು. ಅವರ ಸರಳತನವನ್ನೂ ತಮ್ಮಲ್ಲಿಗೆ ಬಂದವರಲ್ಲಿ ಅವರು ಇಡುತ್ತಿದ್ದ ಅಭಿಮಾನವು ಎಂಥದ್ದೆಂಬುದನ್ನೂ ಮನಗಂಡೆನು. ನಾನು ಆಗಿಂದಾಗ್ಗೆ ಕುರ್ತಕೋಟಿ, ಧಾರವಾಡಗಳಿಗೆ ಹೋಗಿ ಬರುತ್ತಿದ್ದೆನು. ದಿ॥ ಹೆಚ್. ಚಿದಂಬರಯ್ಯನವರು ಆಗ್ಗೆ ಮಹಾಭಾಗವತರ 'ಅಷ್ಟೋತ್ತರ ಶತಶ್ಲೋಕೀ' ಎಂಬ ಸಂಸ್ಕೃತ ಗ್ರಂಥಕ್ಕೆ 'ಭಕ್ತಿದೀಪಿಕೆ' ಎಂಬ ಹೆಸರಿನಿಂದ ಬರೆದ ಕನ್ನಡಪದ್ಯಾನುವಾದಕ್ಕೆ ನನ್ನ ಟಿಪ್ಪಣಿಯಿದ್ದುದನ್ನು ಕಂಡಾಗ ಅವರು ನಮ್ಮಿಬ್ಬರನ್ನೂ ಪ್ರೋತ್ಸಾಹಿಸುತ್ತಾ ಅಧ್ಯಾತ್ಮವಿಚಾರದ ಬರವಣಿಗೆಗೆ ಕೈಹಾಕುವಂತೆ ಮಾಡಿದರು. ಕಾಲಡಿಯಲ್ಲಿ ಶ್ರೀಶಂಕರಾಚಾರ್ಯರವರ ಮೂರ್ತಿಪ್ರತಿಷ್ಠೆಯಾದಾಗ ಶ್ರೀ ಶೃಂಗೇರೀ ಪೀಠಾಧಿಪ ಶ್ರೀಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರಿಂದ ಭಾಷ್ಯಶಾಂತಿಯನ್ನು ಮಾಡಿಸಿಕೊಳ್ಳುವದಕ್ಕೂ , ಅಲ್ಲಿಂದ ಬಂದನಂತರ ಗೋಂದಾವಳಿಯ ಶ್ರೀಬ್ರಹ್ಮಚೈತನ್ಯ ಸದ್ಗುರುಮಹಾರಾಜರವರ ದರ್ಶನವನ್ನು ಪಡೆಯುವದಕ್ಕೂ ನನ್ನನ್ನು ಪ್ರೋತ್ಸಾಹಿಸಿದ್ದು ಅವರೇ. ಧಾರವಾಡದಲ್ಲಿ ಅವರು ಮಾಡಿದ ಉಪನ್ಯಾಸಗಳನ್ನು ಕನ್ನಡದಲ್ಲಿ ''ಭಗವದ್ಗೀತಾಸಾರವಿಚಾರ'' ಎಂಬ ಹೆಸರಿನಿಂದ ಶ್ರೀ ಚಿದಂಬರಯ್ಯನವರು ಹೊರಕ್ಕೆ ತಂದರು. ಹುಬ್ಬಳ್ಳಿಯ ಶ್ರೀಶಂಕರ ಜಯಂತಿ ಉತ್ಸವಕ್ಕೆ ಹೋದಾಗ ಅವರ ಪ್ರೋತ್ಸಾಹದಿಂದ ನಾನು ಅವರ ಕೆಲವು ಉಪನ್ಯಾಸಗಳನ್ನು "The Highest Goal of Human Life" (ಪರಮ ಪುರುಷಾರ್ಥ), "Spiritual Knowledge" (ಅಧ್ಯಾತ್ಮಜ್ಞಾನ) ಎಂಬ ಹೆಸರಿನ ಗ್ರಂಥಗಳ ರೂಪದಿಂದ ಇಂಗ್ಲಿಷಿನಲ್ಲಿ ಬರೆದೆನು.

ದಾವಣಗೆರೆಯಿಂದ ಕಳೂರುಕಟ್ಟೆಗೆ (ಹೊಸನಗರಕ್ಕೆ) ನನಗೆ ವರ್ಗವಾದ ಮೇಲೆ ಸುಮಾರು ಒಂದು ವರ್ಷಕ್ಕಿಂತ ಹೆಚ್ಚಾಗಿಯೇ ರಜದಲ್ಲಿದ್ದು ಮಹಾಭಾಗವತರ ಛಾಯಾನುವರ್ತಿಯಾಗಿ ಕಾಲವನ್ನು ಕಳೆದೆನು. ಆಗ್ಗೆ ಕುರ್ತಕೋಟಿ, ಧಾರವಾಡ, ಬೊಂಬಾಯಿ, ತಿರುವಾದಿ, ತಂಜಾವೂರು, ಮಧುರೆ, ರಾಮೇಶ್ವರ - ಮುಂತಾದ ಕಡೆಗಳಲ್ಲಿ ಸಂಚರಿಸುತ್ತಿದ್ದೆನು. ಅವರ ಪ್ರತಿಭೆ, ಸಂಸ್ಕೃತದಲ್ಲಿದ್ದ ವಿದ್ವತ್ತು ಲೋಕಸಂಗ್ರಹವನ್ನು ಮಾಡುವ ಕರ್ತವ್ಯನಿಷ್ಠೆ - ಈ ಎಲ್ಲವುಗಳ ಅರಿವು ನನಗೆ ಆದದ್ದು ಆಗಲೇ. ಹಿಂದೂ ಮಿಷನೆರಿ ಎಂದು ಅವರಿಗೆ ಒಂದು ಮೊದಲನೆಯ ತರಗತಿಯ ರೈಲ್ವೆ ಪಾಸು ಬಂದಿತ್ತು; ಅವರ ಸೇವಕನಾಗಿ ಜೊತೆಯಲ್ಲಿ ಒಮ್ಮೆ ನಾನೂ

ಬೊಂಬಾಯಿಗೆ ಹೋಗಿದ್ದೆನು. "Study of Sanskrit" ಎಂಬ ಪುಸ್ತಕವನ್ನು ನನ್ನಿಂದ ಬರೆಯಿಸಿದರು.

1915ರಲ್ಲಿ ಅವರು ಬೆಂಗಳೂರಿನಲ್ಲಿ 'Sanskrit Academy" ಎಂಬ ಸಂಸ್ಕೃತಚಿಂತನೆಯ ಮಹಾಸಂಸ್ಥೆಯೊಂದನ್ನು ಸ್ಥಾಪಿಸಿದರು. ಆದರ ಸಮಿತಿಯಲ್ಲಿ ಭಾರತದೇಶದ ವಿವಿಧ ಪ್ರಾಂತ್ಯಗಳ ಘನವಿದ್ವಾಂಸರುಗಳು ಸದಸ್ಯರಾಗಿದ್ದರು. **''ಕುರ್ತಕೋಟಿ ಪಂಡಿತ ಲಿಂಗೇಶಮಹಾಭಾಗವತರು.....ವಿದ್ಯಾಭೂಷಣ, ವೇದಾಂತ ವಾಚಸ್ಪತಿ''** - ಎಂಬ ಹೆಸರಿನಿಂದ ಅವರ ಸಂಪಾದಕತ್ವದಲ್ಲಿ ಹೊರಟ "Sanskrit Research" **(संस्कृतसंशोध:)** ಎಂಬ ನಾಮಧೇಯದ ಆಂಗ್ಲ-ಸಂಸ್ಕೃತಭಾಷಾಪತ್ರಿಕೆಯ ಕೆಲವು ಸಂಚಿಕೆಗಳು ಈಗಲೂ ನನ್ನಲ್ಲಿವೆ. ಆ ಪತ್ರಿಕೆಗೆ ನಾನೂ ಶಂಕರಾಚಾರ್ಯರನ್ನು ಕುರಿತ ಲೇಖನವೊಂದನ್ನು ಬರೆದಿದ್ದೆನು. ಈ ಸಂಸ್ಥೆಗೆ ಬರೋಡೆಯ ಮಹಾರಾಜರಾದ ಶ್ರೀಮಂತ ಸಯಾಜಿರಾವ ಗಾಯಕವಾಡರವರೇ ಮೊದಲಾದವರು ಒಮ್ಮೊಮ್ಮೆ ಬರುತ್ತಿದ್ದರು.

1915ರಲ್ಲಿಯೇ ಇರಬಹುದು, ಹೊಳಲ್ಕೆರೆಯಲ್ಲಿ ನಾನಿದ್ದಾಗ ಮಹಾ-ಭಾಗವತರು ಕಾರಣಾಂತರದಿಂದ ಬಂದು ನಮ್ಮ ಮನೆಯಲ್ಲಿಯೇ ಇಳಿದುಕೊಂಡಿದ್ದರು. ಆಗ ಅವರು ದಾಸನವಮಿಯ ನಿಮಿತ್ತದಿಂದ ಅಲ್ಲಿ ಮಾಡಿದ **'ಚೋಖಾಮಿಳ'ನ ಕೀರ್ತನೆ,** ಊರಿನ ಮಾರುತಿಯ ದೇವಾಲಯದಲ್ಲಿ ರಾತ್ರೆ ಸುಮಾರು 11 ಗಂಟೆಯ ಹೊತ್ತಿನಲ್ಲಿ ಹೇಳಿದ **''ಶ್ರೀಸಮರ್ಥರಾಮದಾಸರ ಜೀವನಚರಿತ್ರೆ''**ಯನ್ನು ಕುರಿತ ಭಾಷಣ - ಇವುಗಳು ಶ್ರೋತೃಗಳ ಹೃದಯದಲ್ಲೆಲ್ಲ ವಿದ್ಯುತ್ಸಂಚಾರವಾದಂತೆ ಪ್ರಚೋದಕವಾಗಿದ್ದವು.

ತಿರುವಾದಿಯ ಪರಿಷತ್ತಿನಲ್ಲಿ ಅವರು ಮಾಡಿದ ಸಂಸ್ಕೃತಭಾಷಣವು ಸಭೆಯಲ್ಲಿ ನೆರೆದಿದ್ದ ನೂರಾರು ಸಂಸ್ಕೃತವಿದ್ವಾಂಸರನ್ನಲ್ಲದೆ ಇಂಗ್ಲಿಷುಮಾತ್ರವೇ ಪರಿಚಯವುಳ್ಳ ಶ್ರೋತೃಗಳನ್ನೂ ಬೆರಗುಮಾಡಿತು. ಮಾರನೆಯ ದಿನ ಇಂಗ್ಲಿಷು ವೃತ್ತಾಂತಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಆ ಭಾಷಣವನ್ನು ಓದುವದಕ್ಕೆ ಜನರು ತೋರಿದ ಕುತೂಹಲವು ಇನ್ನೂ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ನಿಂತಿದೆ. ಆ ಭಾಷಣವೂ, ಅಷ್ಟು ಹೊತ್ತಿಗೆ "Heart of the Bhagavadgita" ಎಂಬ ಗ್ರಂಥಕ್ಕೆ ಅಮೆರಿಕಾದ ಹಾರ್ವರ್ಡ್ ಸಕಲವಿದ್ಯಾನಿಲಯದಿಂದ ಅವರಿಗೆ ಬಂದಿದ್ದ ಡಾಕ್ಟರೇಟ್ ಪ್ರಶಸ್ತಿಯೂ ಎಲ್ಲೆಲ್ಲಿಯೂ ಹರಡಿದ್ದ ಅವರ ಕೀರ್ತಿಯೂ ಕೊಲ್ಹಾಪುರದ ಮಹಾರಾಜರವರ ಮನಸ್ಸಿನಮೇಲೆ ಹೆಚ್ಚಿನ ಪ್ರಭಾವವನ್ನು

ಬೀರಿತೆಂದು ಕಾಣುತ್ತದೆ. 1917ರಲ್ಲಿ ಅವರು ಮಹಾರಾಜರ ಮತ್ತು ಮಹಾಜನರ ಪ್ರಾರ್ಥನೆಯಂತೆ ''ಕರವೀರಪೀಠದ ಶ್ರೀಶಂಕರಾಚಾರ್ಯ''ರಾದರು. ನಾನು ಅಲ್ಲಿಗೂ ಒಮ್ಮೆ ಹೋಗಿ ದರ್ಶನವನ್ನು ಪಡೆದು ಎರಡುದಿನಗಳಿದ್ದು ಬಂದೆನು.

ಮಹಾರಾಜರಿಗೂ ಶ್ರೀಶಂಕರಾಚಾರ್ಯ ಡಾ|| ಕುರ್ತಕೋಟಿಯವರಿಗೂ ಕುಲಕರ್ಣಿಗಳನ್ನು ಉದ್ಯೋಗದಿಂದ ನಿವೃತ್ತಿಮಾಡಿದ ಸಂದರ್ಭದಲ್ಲಿ ಆದ ಭಿನ್ನಾಭಿಪ್ರಾಯಗಳೂ ಶ್ರೀಗಳು ಅಲ್ಲಿಂದ ಹೊರಬಿದ್ದು ಪಾದಚಾರಿಗಳಾಗಿ ಕೊನೆಗೆ ನಾಸಿಕದಲ್ಲಿ ನೆಲೆಸಿದ್ದೂ ನನಗೆ ಪರೋಕ್ಷವಾಗಿ ತಿಳಿದ ಘಟನೆಗಳು. ಶ್ರೀಶಂಕರಾಚಾರ್ಯರು 1933ರಲ್ಲಿ ನಡೆಯಿಸಿದ 'ಸರ್ವಮತಸಂಮೇಲನ'ಕ್ಕೆ ನನ್ನನ್ನು ಕರೆಯಿಸಿಕೊಂಡು ಅಲ್ಲಿ 'ಭಯಪರಾಜಯ' (Conquest of Fear) ಎಂಬ ವಿಷಯದಲ್ಲಿ ಒಂದು ಇಂಗ್ಲಿಷು ಭಾಷಣವನ್ನು ಮಾಡಿಸಿದರು. ಆಗ ಅವರ 'ಕೃಷ್ಣಮಂದಿರ'ದಲ್ಲಿ ಕೆಲವು ದಿನಗಳು ಇದ್ದುಬಂದೆನು. ಈಚೆಗೆ ವಲಾದ್ (ಗುಜರಾತ್)ನಲ್ಲಿದ್ದ ಬ್ರಹ್ಮೀಭೂತ ಶ್ರೀಮಾಧವ ತೀರ್ಥರವರ ಆಹ್ವಾನದಂತೆ ನಾನು ಬೊಂಬಾಯಿಗೆ ಹೋಗಿದ್ದಾಗ ಮತ್ತೊಮ್ಮೆ 1955ರಲ್ಲಿ ಅವರ ದರ್ಶನವನ್ನು ನಾಸಿಕದಲ್ಲಿ ಮಾಡಿಕೊಂಡಿದ್ದೆನು. ಕೊನೆಯಸಲ ನಾನು ಮಹಾಭಾಗವತರನ್ನು ಕಂಡದ್ದು 1966ರಲ್ಲಿ. ಉತ್ತರದೇಶದ ಯಾತ್ರೆಯ ನಿಮಿತ್ತದಿಂದ ನಾನು ನಾಸಿಕಕ್ಕೆ ಹೋದಾಗ ಶೃಂಗೇರಿ ಮಠದಲ್ಲಿ ತಂಗಿದ್ದು ಒಂದು ರಾತ್ರೆ ಅವರ ದರ್ಶನಕ್ಕೆ ಹೋದೆನು. ಸ್ವಲ್ಪ ಹೊತ್ತೂ ಆಗಿತ್ತು; ನನಗೂ ಅಷ್ಟು ಆರೋಗ್ಯವಿರಲಿಲ್ಲ. ನಾನು ಬರೆದಿದ್ದ ''ಪಂಚಪಾದಿಕಾ ಪರಿಶೀಲನೆ''ಯನ್ನು ಅವರಿಗೆ ಆಗ ಒಪ್ಪಿಸಿದೆನು. ಅದೇ ಕೊನೆಯ ದರ್ಶನವೆಂಬುದು ಆಗ ನನ್ನ ಮನಸ್ಸಿಗೆ ಬರಲೇ ಇಲ್ಲ. **29.8.69**ರಲ್ಲಿ ಇವರು ಅಂತರ್ಧಾನರಾದರು.

ಶ್ರೀ ಮಹಾಭಾಗವತರೆಂದರೆ ಸಮಾಜಸುಧಾರಕರು – ಎಂದು ಅನೇಕರು ಗೌರವಿಸುತ್ತಾರೆ. ಸಂಸ್ಕೃತಭಾಷಾಭಿಜ್ಞರು, ಆಶುಕವಿಗಳು - ಎಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ರಾಯಲ್ ಏಷ್ಯಾಟಿಕ್ ಸೊಸೈಟಿಯಿಂದಲೂ ಹಾರ್ವರ್ಡ್ ಸಕಲವಿದ್ಯಾನಿಲಯದಿಂದಲೂ ಪ್ರಶಸ್ತಿಯನ್ನು ಪಡೆದವರು ಎಂದು ಅವರಿಗೆ ಮನ್ನಣೆಯನ್ನು ಕೊಡುವವರಿಗೇನೂ ಕಡಿಮೆಯಿಲ್ಲ. ಅವರು ಕರ್ಣಾಟಕದ ಮಹಾದೇಶಭಕ್ತರೆಂಬುದಂತೂ ಸರಿಯೆ. ಅವರು ಪೀಠಾಧಿಪತಿಗಳಾಗಿದ್ದುದೂ ನಿಜ. ಆದರೆ ಅವರು ಇವೆಲ್ಲಕ್ಕೂ ಮಿಗಿಲಾಗಿ 'ಮಹಾಭಾಗವತರು', ಭಗವದ್ಭಕ್ತಿಯ ಆಳವನ್ನು ಕಂಡುಕೊಂಡಿದ್ದವರು. ಜ್ಞಾನಕ್ಕೂ ಭಕ್ತಿಗೂ ಇರುವ ನಿಕಟಸಂಬಂಧವನ್ನು ಅವರು ಅರಿತಿದ್ದರು. ಜನರ ಹೃದಯವನ್ನು ಕಲಕುವ ಭಗವತ್ಪ್ರೇಮದ ಗುಟ್ಟು ಅವರಿಗೆ

ತಿಳಿದಿತ್ತು. ವೇದಾಂತದ ಅಭ್ಯಾಸದಿಂದ ನನ್ನ ಹೃದಯದಮೇಲೆ ಒಂದಿಷ್ಟಾದರೂ ಪ್ರಭಾವವು ಬೀರಿದ್ದರೆ ಅದು ಅವರ ಸತ್ಸಂಗದಿಂದ ದೊರೆತ ಭಕ್ತಿಯ ಮಹಿಮೆಯ ಅರಿವಿನಿಂದಾದ ಹೃದಯಪರಿವರ್ತನೆಯಿಂದ - ಎಂದು ಹೇಳಿಕೊಳ್ಳಲು ನನಗೆ ಬಹು ಹೆಮ್ಮೆ. ಇಂಥ ಮಹಾತ್ಮರ ಮಾರ್ಗದರ್ಶನವು ನಮಗೆ ಸದಾ ದೊರಕಲಿ ! - ಎಂದು ಭಗವಂತನಾದ ನಾರಾಯಣನಲ್ಲಿ ಪ್ರಾರ್ಥಿಸುವೆನು.

**ಕೈ|| ವೇದಾಂತಿ ಚಿಕ್ಕಲಿಂಗಣ್ಣನವರು :** ವೇದಾಂತಿ ಚಿಕ್ಕಲಿಂಗಣ್ಣನವರು ಮೈಸೂರು ಕೃಷ್ಣರಾಜಮೊಹಲ್ಲದ ಹಳೆ ಅಗ್ರಹಾರದಲ್ಲಿ ಗಂಗಡಿಕಾರ ಒಕ್ಕಲಿಗರ ಜಾತಿಯ ಕಪಿನೀಪತಯ್ಯನವರೆಂಬವರ ಪುತ್ರರಾಗಿ ಕ್ರಿ.ಶ. 1864ರಲ್ಲಿ ಅವತರಿಸಿದರು; ಅವರ ಅಣ್ಣಂದಿರಾಗಿದ್ದ ದರೋಗ ಲಿಂಗಣ್ಣನವರು ಅಥವಾ ಬ್ಯಾಂಕು ಲಿಂಗಣ್ಣನವರು ಎಂಬುವರಿಗೆ ವಾಚಾದತ್ತ ಪುತ್ರರಾದರು. ದೇವಬ್ರಾಹ್ಮಣರಲ್ಲಿ ಭಕ್ತಿಯಿಟ್ಟಿದ್ದ ಸದ್ವಂಶದಲ್ಲಿ ಹುಟ್ಟಿದ್ದರ ಫಲವಾಗಿ ಚಿಕ್ಕಂದಿನಿಂದಲೂ ಮಹಾಮಹಾವಿದ್ವಾಂಸರ ಅನುಗ್ರಹದಿಂದ ಬಹುಬೇಗನೆ ಕನ್ನಡದಲ್ಲಿ ಧಾರಾಳವಾಗಿ, ಸಂಸ್ಕೃತದಲ್ಲಿಯೂ ತಕ್ಕಮಟ್ಟಿಗೆ, ವಿದ್ಯಾಭ್ಯಾಸವನ್ನು ಹೊಂದಿ ಹಿಂದಿನ ಜನ್ಮದ ಪುಣ್ಯವಾಸನೆಯಿಂದ ಪುರಾಣಶ್ರವಣದಲ್ಲಿ ಅಭಿರುಚಿಯನ್ನು ಸಂಪಾದಿಸಿಕೊಂಡರು. ಕನ್ನಡದಲ್ಲಿ ರಾಮಾಯಣಭಾರತಭಾಗವತಗಳನ್ನು ಅರ್ಥವಾಗುವಂತೆ ಇಂಪಾಗಿ ಓದುವದಲ್ಲದೆ ಅರ್ಥಮಾಡುವ ಶಕ್ತಿಯನ್ನೂ ಪ್ರದರ್ಶಿಸಿ ಸಭಿಕರನ್ನು ಬೆರಗು ಮಾಡುತ್ತಿದ್ದರು. ಯಾವದೋ ನಿಮಿತ್ತದಿಂದ ತಮ್ಮ ಮಾವನವರ ಮನೆಗೆ ಹೋಗಿರುವಲ್ಲಿ ದೈವಾನುಗ್ರಹದಿಂದ ಅದೇ ಪೂರ್ವಜನ್ಮದ ವಾಸನಾವಿಶೇಷದಿಂದಲೇ ಸತ್ಪುರುಷರೊಬ್ಬರ ದರ್ಶನವಾಗಿ ವಾಸಿಷ್ಠರಾಮಾಯಣವು ಇವರಿಗೆ ದೊರಕಲು ವೇದಾಂತದಲ್ಲಿ ಉತ್ಕಟವಾದ ಜಿಜ್ಞಾಸುತ್ವವನ್ನೂ ಸಂಪಾದಿಸಿಕೊಂಡರು.

ಪರಮಾರ್ಥವನ್ನು ತಿಳಿದುಕೊಳ್ಳಲೇಬೇಕೆಂಬ ಆಶೆಯು ನಿಜವಾಗಿ ಹುಟ್ಟಿ ಬೆಳೆದು ಮಾಗಿದರೆ ಕೂಡಲೆ ಪರಮೇಶ್ವರನು ಸದ್ಗುರುವಿನ ರೂಪದಿಂದ ಆ ಆಶೆಯನ್ನು ಪರಿಪೂರ್ತಿಗೊಳಿಸುವನೆಂಬುದು ಇವರ ವಿಷಯಕ್ಕೆ ಅಕ್ಷರಶಃ ನಿಜವಾಯಿತು. ಇವರಿಗೆ ಸದ್ಗುರುವನ್ನು ಹುಡುಕುವ ಆಯಾಸವೂ ಇಲ್ಲದಂತೆ ಕ್ರಿ.ಶ. 1906ರಲ್ಲಿ ಬೆಂಗಳೂರಿನಿಂದ ಶ್ರೀಸಹಜಾನಂದಭಾರತೀಸ್ವಾಮಿಗಳೆಂಬ ಮಹಾತ್ಮರೊಬ್ಬರು ಮೈಸೂರಿಗೆ ತಾವು ರಚಿಸಿದ್ದ ಪಂಚದಶೀಗ್ರಂಥದ ಕನ್ನಡದನುವಾದವನ್ನು ಅಚ್ಚುಮಾಡಿಸುವ ಉದ್ದೇಶದಿಂದ ದಯಮಾಡಿಸಿದರು. ಅವರ ಸೇವೆಯಿಂದ ನಮ್ಮ ಲಿಂಗಣ್ಣನವರು ಒಂದೂವರೆ ವರ್ಷದೊಳಗಾಗಿ ವೇದಾಂತಿ ಲಿಂಗಣ್ಣನವರಾದರು !

ಸಹಜಾನಂದಭಾರತಿಗಳವರು ಮೈಸೂರಿನಲ್ಲಿದ್ದಾಗ ಮುಮುಕ್ಷುಗಳಿಗೆ ತಾವು ಮಾಡಿಸುತ್ತಿದ್ದ ವೇದಾಂತಶ್ರವಣವನ್ನು ಮುಂದುವರಿಸುವದಕ್ಕೆ ಎಲ್ಲರ ಅನುಮತಿ ಯಿಂದ ಇವರನ್ನೇ ನೇಮಿಸಿ ತಾವು ಬೆಂಗಳೂರಿಗೆ ಹಿಂತಿರುಗಿದರು.

ಅಂದಿನಿಂದ 1937ನೆಯ ಇಸವಿಯಲ್ಲಿ ತಾವು ಪರಬ್ರಹ್ಮದಲ್ಲಿ ಲೀನರಾಗುವ ವರೆಗೂ ಲಿಂಗಣ್ಣನವರು ಮೈಸೂರಿನಲ್ಲಿ, ಬೇರೆ ಬೇರೆ ಕಡೆಗಳಲ್ಲಿ ನಿಯತರಾಗಿ ಪಾಠ ಪ್ರವಚನವನ್ನೂ, ವೇದಾಂತಶ್ರವಣವನ್ನೂ ಮಾಡಿಸುತ್ತಲೇ ಇದ್ದರು. ಅವರಲ್ಲಿ ಶ್ರದ್ಧಾ ಭಕ್ತಿಗಳಿಂದ ವಿಚಾರಮಾಡುತ್ತಿದ್ದವರಲ್ಲಿ ಅನೇಕರು ಬ್ರಾಹ್ಮಣರೂ ಅಬ್ರಾಹ್ಮಣರೂ ಇರುತ್ತಿದ್ದರು.

ಚಿಕ್ಕಲಿಂಗಣ್ಣನವರಲ್ಲಿ ವೇದಾಂತಜ್ಞಾನಕ್ಕೆ ಭೂಷಣವಾದ ವಿನಯವು ಒಡೆದುಮೂಡುತ್ತಿದ್ದದ್ದರಿಂದ ಅವರಿಗೆ ಅನೇಕ ವೇದಾಂತಿಗಳ, ವಿದ್ವಾಂಸರ, ಮಠಾಧಿ ಪತಿಗಳ ಮತ್ತು ಮತಾಂತರದ ಅನುಯಾಯಿಗಳ ಪ್ರೇಮವೂ ವಿಶ್ವಾಸವೂ ವಶವಾಗಿದ್ದವು. ಅವರು ತತ್ತ್ವಾರ್ಥವನ್ನು ಚರ್ಚಿಸುವದರಲ್ಲಿ ಯಾರಿಗೂ ಅಂಜುತ್ತಿರಲಿಲ್ಲ; ಆದರೆ ವಿನಯದಲ್ಲಿ, ವರ್ಣಾಶ್ರಮಗಳಿಗೆ ಉಚಿತವಾದ ನಡೆನುಡಿ ಗಳ ಸಂಪ್ರದಾಯದಲ್ಲಿ, ಮತ್ತು ಗುರುಹಿರಿಯರಲ್ಲಿ ತೋರಿಸಬೇಕಾದ ಶ್ರದ್ಧಾಭಕ್ತಿ ಗಳಲ್ಲಿ ಯಾರೊಬ್ಬರಿಗೂ ಹಿಂದೆನ್ನಿಸಿ ಕೊಂಡಿರಲಿಲ್ಲ. ಇದಕ್ಕೆ ಸಾಕ್ಷಿಯನ್ನು ಕೊಡಬಲ್ಲ ಬೇರೆಬೇರೆ ಮತಾನುಯಾಯಿಗಳು ಇನ್ನೂ ಹಲವರು ಜೀವಂತರಾಗಿರುತ್ತಾರೆ.

ಲಿಂಗಣ್ಣನವರು ತಮ್ಮ ಗುರುವರ್ಯರು ರಚಿಸಿದ್ದ ವೃತ್ತಿಪ್ರಭಾಕರದ ಅನು ವಾದವನ್ನು ಸಂಸ್ಕರಿಸಿ ಅಚ್ಚು ಮಾಡಿಸಿರುತ್ತಾರೆ. ಆ ಗ್ರಂಥವನ್ನೂ ವಿಚಾರ ಸಾಗರ ವನ್ನೂ ಪಂಚದಶಿಯಂತೆಯೇ ಅನೇಕರಿಗೆ ಪಾಠಹೇಳಿರುತ್ತಾರೆ. ಚಿದ್ಘನಾನಂದರವರು ಹಿಂದಿಯಲ್ಲಿ ರಚಿಸಿರುವ ''ತತ್ತ್ವಾನುಸಂಧಾನ''ವನ್ನು ಕನ್ನಡಿಸಿರುತ್ತಾರೆ. ಇದರಿಂ ದಲೂ ಕನ್ನಡದ ಭಾರತಾದಿಗಳನ್ನು ಶ್ರವಣಮಾಡಿಸಿರುವದರಿಂದಲೂ, ಅವರು ಕನ್ನಡವಾಙ್ಮಯಕ್ಕೆ ಮಾಡಿರುವ ಸೇವೆಯು ವ್ಯಕ್ತವಾಗುವದಲ್ಲದೆ ಅವರಲ್ಲಿದ್ದ ಹೆಚ್ಚಿನ ಅಂತಸ್ತಿನ ವೇದಾಂತಶಾಸ್ತ್ರದ ಪರಿಚಯವೂ ಸ್ಪಷ್ಟವಾಗುತ್ತದೆ. ಅನೇಕ ಮಹನೀ ಯರು ಅವರಿಗೆ ''ಗೌರೀಶಂಕರ''ವೆಂಬ ಕಂಠಾಭರಣವನ್ನು ಎರಡು ಸಂದರ್ಭದಲ್ಲಿ ಸನ್ಮಾನಸೂಚಕವಾದ ಸಂಭಾವನೆಯಾಗಿ ಅರ್ಪಿಸಿರುತ್ತಾರೆ. ಚುಂಚನಗಿರಿಯ ಮಠಕ್ಕೆ ಇವರನ್ನೇ ಮಠಾಧಿಪತಿಗಳಾಗಿ ಮಾಡುವದಕ್ಕೂ ಪ್ರಯತ್ನಿಸಿದರೆಂದು ತಿಳಿದುಬರುತ್ತದೆ.

ವೇದಾಂತಿ ಲಿಂಗಣ್ಣನವರೆಂದು ನಾನು ಈವರೆಗೆ ಕರೆದಿರುವ ಪೂಜ್ಯವ್ಯಕ್ತಿಯು ಶಿಷ್ಯಮಂಡಲಿಯವರಲ್ಲಿ "ರಾಜಯೋಗಿ ಚಿಕ್ಕಲಿಂಗಣ್ಣ ಸ್ವಾಮಿಗಳು" ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಈ ರಾಜಯೋಗಿಗಳ ಸ್ಮಾರಕವಾಗಿ ಮೈಸೂರಿನಲ್ಲಿ ಕೈ|| ಹಿರೋಡೆ ಮಲ್ಲಪ್ಪನೆಂಬವರು ವಿಚಾರಮಂದಿರವೊಂದನ್ನು ಕಟ್ಟಿಸಿರುತ್ತಾರೆ.

ಅಂತಃಕರಣಶುದ್ಧಿಯಿಂದ ಸದ್ಗುರುವಿನಲ್ಲಿ ತತ್ತ್ವವನ್ನು ತಿಳಿದುಕೊಂಡು ಅದನ್ನು ಮನಸ್ಸಿಗೆ ಅಳವಡಿಸಿಕೊಂಡದ್ದರ ಗುರುತಾಗಿ ಈ ಕರಾಳಕಲಿಗಾಲದಲ್ಲಿಯೂ ಅಜಾತಶತ್ರುವಾಗಿ ವರ್ತಿಸುತ್ತಾ ತನ್ನ ನಡೆನುಡಿಗಳಿಂದ ಸನ್ಮಾರ್ಗವನ್ನು ನೂರಾರು ಜನಗಳಿಗೆ ತೋರಿಸಿದ ಮಹನೀಯರು ಯಾರಿಗೆ ತಾನೆ ಪೂಜ್ಯರಲ್ಲ?

**ಶ್ರೀ ಕೃಷ್ಣಸ್ವಾಮಿ ಅಯ್ಯರವರು :** ಈ ಚಿತ್ರಭಾನುಸಂವತ್ಸರದ ತೃತೀಯೆಯ ಭಾನುವಾರ (ತಾ|| 7-2-43)ರ ಭರತಖಂಡದ ಜೀವಜ್ಯೋತಿಗಳಲ್ಲೊಂದರ ಪ್ರಖ್ಯಾತಪ್ರಭೆಯು ಅವ್ಯಕ್ತವಾಯಿತು. ಆ ಜ್ಯೋತಿಯ ಬೆಳಕಿನ ಆಶ್ರಯದಲ್ಲಿ ತಮ್ಮ ವ್ಯಾಪಾರವನ್ನು ಸರಿಯಾಗಿ ನಡೆಯಿಸುತ್ತಿದ್ದ ಅನೇಕರ ಹೃದಯದಲ್ಲಿ ಈಗ ಶ್ರೀಕೃಷ್ಣನು ಪರಂಧಾಮಕ್ಕೆ ತೆರಳಿದ ಬಳಿಕ ಆತನ ಭಕ್ತರ ಅಂತರಂಗದಲ್ಲುಂಟಾದ ಕಳವಳವು ಎದ್ದು ಕಾಣುತ್ತದೆ. ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರೆಂಬ ನಾಮರೂಪಗಳ ಸ್ಮರಣೆಯೊಂದೇ ಈಗ ಅವರಿಗೆ ಉಳಿದುಕೊಂಡಿರುವ ಚಿತ್ತಸಮಾಧಾನೋಪಾಯವಾಗಿರುತ್ತದೆ.

ಅಯ್ಯರವರನ್ನು ನಾನು ಮೊದಲು ಕಂಡದ್ದು 1901ರಲ್ಲಿ, ಸೆಂಟ್ರಲ್ ಕಾಲೇಜಿನಲ್ಲಿ ಓದಬೇಕೆಂಬ ಆಸೆಯಿಂದ ಅವರ ಸಹಾಯವನ್ನು ಬಯಸಿ ಒಂದು ಪರಿಚಯ ಪತ್ರವನ್ನು ಅವರಿಗೆ ಅಂದು ತಂದುಕೊಟ್ಟೆನು. ಮಿತ್ರಮಂಡಲಿಯ ನಡುವೆ ಕುಳಿತು ವಿನೋದದಿಂದ ಪಿಟೀಲು ಬಾರಿಸುತ್ತಾ ನಡುನಡುವೆ ರಸಹಾಸ್ಯದ ಮಾತುಗಳನ್ನು ಆಡುತ್ತಿದ್ದ ಅವರಿಗೂ ನನಗೂ ಮುಂದೆ ನಿಕಟಸಂಬಂಧವುಂಟಾದೀತೆಂಬ ಸೂಚನೆ ಯಾವದೂ ಆಗ ತೋರಲಿಲ್ಲ. "ಬೇಕಾದರೆ ನಮ್ಮ ಮನೆಗೂ ಒಂದು ವಾರ ಊಟಕ್ಕೆ ಬಾರಪ್ಪ" ಎಂದು ಉದಾಸೀನಭಾವದಿಂದ ಅವರು ನನಗೆ ಹೇಳಿದ ಉತ್ತರವಂತೂ ಅವರ ವಿಷಯದಲ್ಲಿ ನನಗೆ ಹೆಚ್ಚಿನ ಭಾವನೆಯುಂಟಾಗುವದಕ್ಕೆ ಯಾವ ಪ್ರೋತ್ಸಾಹವನ್ನೂ ಕೊಡಲಿಲ್ಲ. ಆದರೂ ದೈವ ಘಟನೆಯು ವಿಚಿತ್ರವಾದದ್ದು. ಅಂದಿನಿಂದಲೇ ಅವರಿಗೆ ನನ್ನ ಮೇಲೆ ಒಂದು ಬಗೆಯ ಅವ್ಯಾಜಪ್ರೇಮವುಂಟಾಯಿತೆಂದು ಈಗ ಹೇಳಬೇಕಾಗಿದೆ. ವಿದ್ಯಾರ್ಥಿಯ ದೆಶೆಯಲ್ಲಿ ನನಗೆ ಅವರು ಓದುಬರಹ, ನಡೆನುಡಿ-ಮುಂತಾದವುಗಳ ತಿದ್ದುಪಡಿಗೆ ಮೇಲು ಪಙ್ಕ್ತಿಯಾಗಿದ್ದಲ್ಲದೆ ಸದ್ಯಕ್ಕೆ ನನ್ನ ಜೀವನದ ಉಸಿರಾಗಿಬಿಟ್ಟಿರುವ ವೇದಾಂತ ಚಿಂತನೆಯಲ್ಲಿ ಅಭಿರುಚಿಯನ್ನು ಬೆಳೆಯಿಸಿ ಕ್ರಮವಾದ ದಾರಿಗೆ ಬಿಡುವದಕ್ಕೂ ಮುಖ್ಯಕಾರಣರಾದರು!

ಅನಾರೋಗ್ಯವೇ ಮುಂತಾದ ಕಾರಣಗಳಿಂದ ನಾನು ಬೆಂಗಳೂರಿನಲ್ಲಿ ಓದುವುದಕ್ಕಾಗದೆ ಹೊಟ್ಟೆಯ ಪಾಡಿಗಾಗಿ ಸರಕಾರಿಯ ಕೆಲಸಕ್ಕೆ ಸೇರಿಕೊಂಡೆನು. ನನಗೂ ಅವರಿಗೂ ಅಗಲಿಕೆಯಾಗಿ ಕೆಲವು ವರ್ಷಗಳಾದರೂ ಅವರು ನನ್ನನ್ನು ಮಾತ್ರ ತಮ್ಮ ಕುಟುಂಬದಲ್ಲೊಬ್ಬನನ್ನಾಗಿ ಭಾವಿಸಿ ತೋರಿಸಿದ್ದ ಪ್ರೇಮವು ಮಾತ್ರ ನನ್ನ ಕೃತಜ್ಞತೆಯನ್ನು ಸೆರೆಹಿಡಿದಿತ್ತು. ಮುಂದೆ ನಾನು ಕುರ್ತಕೋಟಿಯ ಶ್ರೀ ಮಹಾ ಭಾಗವತರೆಂಬ ಸಾಧುಗಳ ಆಸರೆಯಲ್ಲಿ ಕೆಲಕಾಲವಿದ್ದಾಗ ಅವರ ಉಪನ್ಯಾಸ ವೊಂದನ್ನು ಇಂಗ್ಲಿಷಿನಲ್ಲಿ ಬರೆದು ಭಾಷೆಯತಿದ್ದುಪಡಿಗಾಗಿ ಅಯ್ಯರವರ ನೆರವನ್ನು ಕೋರುವ ಸಮಯವು ಬಂತು. ಆಗ ಅವರು ಚಿಕ್ಕಬಳ್ಳಾಪುರದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಆ ಸಂದರ್ಭದಲ್ಲಿ ನನಗೆ ಅವರ ಜೀವನದ ಮತ್ತೊಂದು ಪಾರ್ಶ್ವದ ದರ್ಶನವಾಯಿತು. ಕೃಷ್ಣಸ್ವಾಮಿ ಅಯ್ಯರವರು ಮನೆಯಲ್ಲಿ ಆದರ್ಶ ಕುಟುಂಬಿಗಳೂ ಸ್ಕೂಲಿನಲ್ಲಿ ಆದರ್ಶವಿದ್ಯಾಗುರುಗಳೂ ಆಗಿದ್ದದ್ದಲ್ಲದೆ ಊರಿನ ಜನರ ಪೂರ್ಣಾನುರಾಗವನ್ನು ತಮ್ಮ ಕಡೆಗೆ ಸೆಳೆದುಕೊಂಡಿದ್ದರು. ಚಿಕ್ಕಬಳ್ಳಾಪುರದ ಲಾಯರುಗಳು, ವರ್ತಕರುಗಳು ಮುಂತಾದವರು ಇವರಲ್ಲಿ ಮಿಗಿಲಾದ ಗೌರವವನ್ನಿಟ್ಟುಕೊಂಡಿದ್ದರು. ಅದಕ್ಕೆ ಕಾರಣವು ಅಯ್ಯರವರ ದಿವ್ಯ ಸಂಭಾಷಣೆಯಿಂದ ಜನರಿಗೆ ಸಿಕ್ಕುತ್ತಿದ್ದ ಪರಮಲಾಭವೇ ಆಗಿತ್ತು. ಆ ಊರಿನ ರಾಮಮಂದಿರದಲ್ಲಿ ಜನರು ಮಾಡುತ್ತಿದ್ದ ಸತ್ಕಾಲಕ್ಷೇಪಕ್ಕೆ ಅವರಿಂದ ಒಂದು ಹೆಚ್ಚಿನ ಕಳೆ ಬಂದಿತ್ತು. ಆ ಮಂದಿರದಲ್ಲಿ ನನ್ನಿಂದ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿಸಿ ಅವರು ಕಂಡ ಅಲ್ಪಗುಣವನ್ನೇ ಪ್ರಶಂಸೆಮಾಡಿ ವೇದಾಂತವಿಚಾರದಲ್ಲಿ ಮತ್ತೊಂದು ಹೆಜ್ಜೆಯನ್ನು ಮುಂದಿಡುವದಕ್ಕೆ ಪ್ರೋತ್ಸಾಹವನ್ನು ಕೊಟ್ಟರು.

ಆಮೇಲೆ ನಾನು ಅವರನ್ನು ಕಂಡದ್ದು ತುಮಕೂರಿನಲ್ಲಿ. ಇಷ್ಟುಹೊತ್ತಿಗೆ ನನಗೆ ವೇದಾಂತವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಕುತೂಹಲವುಂಟಾಗಿತ್ತು. ಭಾಷ್ಯವನ್ನು ತಕ್ಕ ಮಟ್ಟಿಗೆ ಓದಿಕೊಂಡು ಚತುಸ್ಸೂತ್ರೀಭಾಗವನ್ನು ಕನ್ನಡಿಸಬೇಕೆಂದು ತವಕಿಸುತ್ತಿದ್ದೆನು. ಆದರೆ ಕೃಷ್ಣಸ್ವಾಮಿ ಅಯ್ಯರವರು ಅದನ್ನು ಆಗಲೆ ಅನುವಾದ ಮಾಡಿರುತ್ತಾರೆಂದು ಕೇಳಿ ಆ ಅನುವಾದವು ಯಾವ ಭಾಷೆಯಲ್ಲಿದೆ ಎಂಬುದನ್ನು ತಿಳಿಯಬೇಕೆಂಬ ಇಚ್ಛೆಯಿಂದ ಅವರಲ್ಲಿಗೆ ಬಂದೆನು. ಅಯ್ಯರವರ ಮನೆಯವರು ಆಗತಾನೆ ಕೋಲಾರ ದಿಂದ ಬಂದಿಳಿದಿದ್ದರು. ಸಾಮಾನನ್ನು ಇಳಿಸಿಕೊಳ್ಳುವ ಗಡಿಬಿಡಿಯಲ್ಲಿದ್ದರೂ ಅವರು ಬಹು ಸಂತೋಷದಿಂದ ಬರಮಾಡಿಕೊಂಡು ತಾವು ಬೆಂಗಳೂರು ಮಿಥಿಕ್‌ಸೊಸೈಟಿ ಯಲ್ಲಿ ಓದಿದ್ದ "Fundamentals of Vedanta" (ವೇದಾಂತದ ಅಡಿಗಟ್ಟು) ಎಂಬ ಇಂಗ್ಲಿಷು ಭಾಷಣದ ಪ್ರತಿಯನ್ನು ನನಗೆ ತೋರಿಸಿದರು. ಅದರಲ್ಲಿದ್ದ

ವಿಚಾರ ಸರಣಿಯು ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿತು. ಶ್ರೀ ಗೌಡಪಾದರವರ ಮಾಂಡೂಕ್ಯಕಾರಿಕೆಯಲ್ಲಿದ್ದ ಅವಸ್ಥಾತ್ರಯಪರೀಕ್ಷೆಯ ಫಲಿತಾಂಶವನ್ನು ಪಾಶ್ಚಾತ್ಯ ವಿದ್ಯಾಸಂಸ್ಕಾರವುಳ್ಳವರಿಗೆ ತಕ್ಕ ಆಧುನಿಕ ಭಾಷೆಯಲ್ಲಿ ಇಷ್ಟು ಸ್ವಲ್ಪದರಲ್ಲಿ ಅತ್ಯಂತ ಸ್ಫುಟವಾಗಿ ವಿವರಿಸಿರುವ ಅಯ್ಯರವರು ಸಾಮಾನ್ಯ ವ್ಯಕ್ತಿಯಲ್ಲವೆಂಬುದು ನನ್ನ ಮನಸ್ಸಿಗೆ ಚೆನ್ನಾಗಿ ಮೂಡಿತು.

ನಾನು ಮತ್ತೊಂದು ಸಲ ಅಯ್ಯರವರ ದರ್ಶನವನ್ನು ತೆಗೆದುಕೊಂಡದ್ದು ಬೆಂಗಳೂರಿನಲ್ಲಿ. ಈಗ ನಾನು ಅವರ ಸಿಫಾರಸಿನ ಫಲವಾಗಿ ಬೆಂಗಳೂರಿನಲ್ಲಿ ಒಂದು ಮಿಡಲ್‌ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಬಂದಿದ್ದೆನು. ಈಗ ನನಗೆ ಕೃಷ್ಣಸ್ವಾಮಿ ಅಯ್ಯರವರ ನಾನಾ ಮುಖವಾದ ಪಾಂಡಿತ್ಯವೂ ಪ್ರತಿಭೆಯೂ ದಾನಧರ್ಮ ಪರೋಪಕಾರ ಬುದ್ಧಿಗಳೂ ಜನಾನುರಾಗವೂ ವಿದ್ಯಾಪಕ್ಷಪಾತಿತ್ವವೂ ಅನಿತರ ಸಾಧಾರಣವಾದ ವೇದಾಂತ ವಿಚಾರನೈಪುಣ್ಯವೂ ಒಂದೊಂದಾಗಿ ಮನಸ್ಸಿಗೆ ಮಿಂಚಿದವು.

ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷು – ಈ ನಾಲ್ಕು ಭಾಷೆಗಳಲ್ಲಿ ಅವರಿಗೆ ಉತ್ತರೋತ್ತರವಾಗಿ ಹೆಚ್ಚಿನ ಪ್ರಾವೀಣ್ಯವಿತ್ತಲ್ಲದೆ ಕನ್ನಡದಲ್ಲಿ ಪ್ರೇಮವೂ ಆದರವೂ ಇತ್ತು. ಮನೆಯಲ್ಲಿ ಬಿಡುವಿದ್ದಾಗಲೆಲ್ಲ ಅವರು ಪಂಡಿತರೊಡನೆ ಗ್ರಂಥಕಾಲ-ಕ್ಷೇಪವನ್ನು ಮಾಡುತ್ತಲೂ ರಸವತ್ತಾದ ಸಂಭಾಷಣೆಯನ್ನು ಮಾಡುತ್ತಲೂ ಹೊಸ ಲೇಖಕರುಗಳಿಗೆ ಯಥೋಚಿತವಾಗಿ ಉತ್ತೇಜನವನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೂ ಇದ್ದರು. ಅವರಿರುವ ಸ್ಥಳವೇ ಒಂದು ವಿದ್ಯಾಸಭಾಮಂಟಪವೆಂಬಂತೆ ಶೋಭಿಸುತ್ತಿತ್ತು. ಜ್ಯೋತಿಷ, ಸಾಮುದ್ರಿಕ, ಆಯುರ್ವೇದ, ವೇದಾಧ್ಯಯನ, ವ್ಯಾಕರಣಾಲಂಕಾರ ಮುಂತಾದ ವಿಷಯಗಳಲ್ಲಿ ನಿಪುಣರಾದವರೊಡನೆ ಸಂಭಾಷಣೆ ಮಾಡುವದು, ಅವರಿಗೆ ತಕ್ಕ ಸಹವಾಸವನ್ನೂ ಸಲಕರಣೆಯನ್ನೂ ಒದಗಿಸಿಕೊಡು ವದು ಮುಂತಾದ ರೀತಿಗಳಿಂದ ಪ್ರೋತ್ಸಾಹಿಸುವದೂ ಅವರಿಗೆ ಮೆಚ್ಚಿನ ಕಾರ್ಯ ವಾಗಿರುತ್ತಿದ್ದವು. ದೃಶ್ಯಕಾವ್ಯ, ಶ್ರಾವ್ಯಕಾವ್ಯ ಎರಡರಲ್ಲಿಯೂ ಅವರಿಗೆ ಅಭಿರುಚಿ ; ಅವುಗಳಲ್ಲಿ ತಾವೂ ಲೇಖನಿಯನ್ನಾಡಿಸಿದವರಾದ್ದರಿಂದ ಬರಹಗಾರರೆಂದರೆ ಅವರಿಗೆ ಬಲು ಅಕ್ಕರೆ.

ಅಯ್ಯರವರು ಸಂಗೀತಕ್ಕೆ ತವರುಮನೆ. ಪಿಟೀಲು ಕೃಷ್ಣಸ್ವಾಮಿ ಅಯ್ಯರೆಂದೇ ಕೆಲವರು ಇಂದಿಗೂ ಅವರನ್ನು ಕರೆಯುವರು. ಅವರ ಮನೆಯಲ್ಲಿ ವೀಣೆ, ಕೊಳಲು, ಮೃದಂಗ - ಮುಂತಾದ ವಾದ್ಯಗಳ ಮತ್ತು ಚಿತ್ತಾಕರ್ಷಕದ ಗಾನದ ಇಂಪಿನ ಧ್ವನಿಯು

ಕಿವಿಗೆ ಕೇಳದಿರುವ ದಿನವೇ ಅಪೂರ್ವ. ಈ ವಿಷಯಕ್ಕೆ ಅವರ ಮನೆತನದವರೆಲ್ಲರೂ ಗಂಧರ್ವಾಂಶದವರೆಂದೇ ಹೇಳಬಹುದಾಗಿರುತ್ತದೆ. ಅವರು ಉತ್ತಮ ಸಂಗೀತ-ವಿದ್ವಾಂಸರುಗಳ ಪರಿಚಯವುಳ್ಳವರಾಗಿದ್ದರೆಂಬುದೂ ಸಂಗೀತಗಾರರಿಗೆ ಬಗೆ-ಬಗೆಯಿಂದ ಪ್ರೋತ್ಸಾಹವನ್ನು ಕೊಡುತ್ತಿದ್ದರೆಂಬುದೂ ಅನೇಕರಿಗೆ ತಿಳಿದಿರುವ ವಿಷಯಗಳು.

ತತ್ತ್ವಶಾಸ್ತ್ರವಿಚಾರವೆಂದರೆ ಅಯ್ಯರಿಗೆ ಪರಮಾದರ. ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಚಿಕ್ಕವಯಸ್ಸಿನಿಂದಲೂ ಅವರು ಅಭ್ಯಾಸಮಾಡುತ್ತಿದ್ದರೆಂದು ತಿಳಿದುಬಂದಿದೆ. ಡಾಯ್ಸನ್ ಎಂಬ ವಿದ್ವಾಂಸನು ಬರೆದಿರುವ Elements of Metaphysics (ಆಧಿಭೌತಿಕ ವಿಚಾರಗಳ ಮೂಲತತ್ತ್ವಗಳು) ಎಂಬ ಗ್ರಂಥದ ವಿಮರ್ಶೆಯಾಗಿ ಬರೆದಿದ್ದ Critical Reflections (ವಿಮರ್ಶಾತ್ಮಕವಿಚಾರಗಳು) ಎಂಬ ಲೇಖನವನ್ನು ಆ ಗ್ರಂಥಕರ್ತನೇ ಓದಿ ಮೆಚ್ಚಿಕೆಯ ಉತ್ತರಪತ್ರವೊಂದನ್ನು ಅವರಿಗೆ ಬರೆದಿರುತ್ತಾನೆ. ವೇದಾಂತಶಾಸ್ತ್ರವೆಂಬುದಂತೂ ಅವರ ಹೃದಯವು. ವೇದಾಂತವನ್ನು, ಅವರು ನಮ್ಮಗಳಂತೆ ಸಂಪ್ರದಾಯ ಗ್ರಂಥಗಳಿಂದ ಕ್ರಮಕ್ರಮವಾಗಿ ಓದಿ ಮಾಡಿದವರಲ್ಲ; ಅವರ ವಿಚಾರದ ರಾಶಿಯು ಸಾರ್ವತ್ರಿಕಾನುಭವವೆಂಬ ಭದ್ರವಾದ ತಳಗಟ್ಟಿನ ಮೇಲೆ ನಿಂತಿರುವಂಥದ್ದು. ಅವರು ತಮಗೆ ಆಗಾಗ ಹೊಳೆದ ವೇದಾಂತಭಾವನೆಗಳನ್ನು ಗ್ರಂಥಗಳಲ್ಲಿಯೂ ದಿನಚರಿಯ ಪುಸ್ತಕಗಳಲ್ಲಿಯೂ ಬರೆದಿಟ್ಟಿರುತ್ತಾರೆ. ಆ ಲೇಖನ ರಾಶಿಯೊಂದು ತಿಳಿವಳಿಕೆಯ ಗನಿಯೆಂದರೆ ಅತ್ಯುಕ್ತಿಯಲ್ಲ. ಪುಸ್ತಕವೇದಾಂತಿಗಳೊಡನೆಯೂ ಅನುಭವವೇದಾಂತಿಗಳೊಡನೆಯೂ ಚರ್ಚೆಮಾಡಿ ತತ್ತ್ವನಿರ್ಧಾರಣೆ ಮಾಡುವ ಉತ್ತಮಮಾರ್ಗವನ್ನು ಅವರು ಅವಲಂಬಿಸಿದ್ದರು. ಸ್ವಪ್ನದಲ್ಲಿ ತಮಗೆ ಶ್ರೀಶಂಕರಾಚಾರ್ಯರವರೇ ತತ್ತ್ವೋಪದೇಶವನ್ನು ಮಾಡಿದರೆಂದು ಅವರ ನಂಬಿಕೆಯಿತ್ತು. ಬೆಂಗಳೂರಿನಲ್ಲಿ ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳೊಡನೆ ಬಹುಕಾಲ ವಿಚಾರಗೋಷ್ಠಿಯ ಸುಖವನ್ನನುಭವಿಸುತ್ತಿದ್ದರೆಂದೂ ಸಾಧುಶ್ರೇಷ್ಠರಾದ ಅನಂತಪ್ಪಮಹಾರಾಜರವರ ಉಪದೇಶಗಳನ್ನು ಪೂಜ್ಯಬುದ್ಧಿಯಿಂದ ಸ್ವೀಕರಿಸಿದ್ದರೆಂದೂ ಅವರ ಹೇಳಿಕೆಯಿಂದಲೂ ಬರವಣಿಗೆಯಿಂದಲೂ ತಿಳಿದು ಬಂದಿರುತ್ತದೆ. ಶಾಂಕರವೇದಾಂತದ ಮೂಲಾವಿದ್ಯಾವಾದವನ್ನು ವ್ಯಾಖ್ಯಾನಕಾರರು ಹೊಸದಾಗಿ ಸೇರಿಸಿರುವರೆಂಬುದನ್ನು ಲಕ್ಷ್ಯಕ್ಕೆ ತಂದವರು ಅಯ್ಯರವರೇ ; ಅವರೊಡನೆ ಮಾಡಿದ ಚರ್ಚೆಯ ಫಲಿತವಾಗಿಯೇ ನಾನು ಭಾಷ್ಯವನ್ನೂ ವ್ಯಾಖ್ಯಾನಗ್ರಂಥಗಳನ್ನೂ ವಿಮರ್ಶನಾ ದೃಷ್ಟಿಯಿಂದ ಓದಿ ಅವರ ಪ್ರೇರಣೆಯಿಂದಲೇ ''ಮೂಲಾವಿದ್ಯಾನಿರಾಸ ಅಥವಾ ಶಂಕರಹೃದಯ''

ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದೆನು. ನಮ್ಮಿಬ್ಬರಿಗೂ ಆದ ಚರ್ಚೆಯಲ್ಲಿ ಎಷ್ಟೋ ವಿಷಯಗಳು ಅಯ್ಯರವರ ಮುಖದಿಂದ ನನಗೆ ಮನವರಿಕೆಯಾದ ಬಳಿಕವೇ ಭಾಷ್ಯದಲ್ಲಿಯೂ ಅವು ಇರುವವೆಂಬುದು ನನಗೆ ತಿಳಿಯಬರುತ್ತಿತ್ತು. ಸ್ವಾನುಭವ ದಿಂದಲೇ ಭಾಷ್ಯದ ಹಲವು ವಿಷಯಗಳನ್ನು ಹೊರಗೆಡಹುತ್ತಿದ್ದ ಅವರನ್ನು ನಾನು ಋಷಿಸಮಾನರೆಂದು ಭಾವಿಸಿದ್ದರೆ ಆಶ್ಚರ್ಯವೇನು ?

ಅಧ್ಯಾತ್ಮಪ್ರಕಾಶಮಾಸಪತ್ರಿಕೆಯ ಮೊದಲನೆಯ ಎರಡನೆಯ ಸಂಪುಟಗಳಲ್ಲಿ ಅವರು ಬರೆದಿರುವ ಹಲವು ಲೇಖನಗಳಲ್ಲಿ ಅವರ ಕನ್ನಡಶೈಲಿಯ ಲಾಲಿತ್ಯವೂ ಗಂಭೀರವಾದ ವಿಷಯಗಳನ್ನು ಹೃದಯಂಗಮವಾದ ಕಥೆಯ ಅಥವಾ ಸಂಭಾಷ ಣೆಯ ಅನುಪಾನದಿಂದ ಸವಿಗಟ್ಟಾಗಿ ಮಾಡುವ ಚಾತುರಿಯೂ ಎದ್ದು ಕಾಣುವದು. ಇಂಗ್ಲಿಷಿನ ವೇದಾಂತ ಕೇಸರಿಯಲ್ಲಿ ಅವರ ಅನೇಕ ತತ್ತ್ವವಿಚಾರದ ಪ್ರೌಢ ಲೇಖನ ಗಳು ಬಂದಿರುತ್ತವೆ. ಶ್ರೀರಾಮಕೃಷ್ಣ ಪರಮಹಂಸರವರ ಶತಮಾನೋತ್ಸವದ ಸ್ಮಾರಕ ವಾಗಿ ಪ್ರಕಾಶವಾಗಿರುವ The Cultural Heritage of India (ಭರತಖಂಡದ ಸಂಸ್ಕೃತಿಯ ಪಿತ್ರಾರ್ಜಿತ) ಎಂಬ ಮಹಾನಿಬಂಧಮಾಲೆಯಲ್ಲಿ Philosophy of Advaita or Nondualism (ಅದ್ವೈತಸಿದ್ಧಾಂತ) ಎಂಬ ಹೆಸರಿನ ಒಂದು ಉತ್ತಮ ನಿಬಂಧವಿರುತ್ತದೆ. "The Drum beat of Angels" (ದೇವತೆಗಳ ಡಂಗುರ) "Uma's Mirror" (ಉಮಾದರ್ಶ) ಎಂಬ ಎರಡು ಇಂಗ್ಲಿಷು ಕಾವ್ಯಗಳು ಅಚ್ಚಾಗಿವೆ. ಡಾಕ್ಟರು ಎಂ. ಶ್ರೀನಿವಾಸರಾಯರೊಡನೆ ಅವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಪಂಚ ದಶಿಯಲ್ಲಿರುವ ಅಮೋಘವಾದ ಟಿಪ್ಪಣಿಗಳು ಅವರ ವಿಚಾರದ ಪ್ರೌಢಿಮೆಯಲ್ಲಿ ವ್ಯಕ್ತಗೊಳಿಸುತ್ತವೆ. ಎಲ್ಲಕ್ಕೂ ಮೇಲಾಗಿ **Vedanta or The Science of Reality (ವೇದಾಂತವೆಂಬ ಪರಮಾರ್ಥ ವಿಜ್ಞಾನಶಾಸ್ತ್ರವು)** ಎಂಬ ಗ್ರಂಥರತ್ನ ವಂತೂ ವೇದಾಂತಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘವಾ ದೊಂದು ವಜ್ರದಂತೆ ಇರುತ್ತದೆ. ಶಾಂಕರವೇದಾಂತವನ್ನು ಭದ್ರವಾದ ಯುಕ್ತ್ಯನು ಭವಗಳ ತಳಗಟ್ಟಿನ ಮೇಲೆ ನಿಲ್ಲಿಸುವದಕ್ಕೆ ಶ್ರೀ ಕೃಷ್ಣಸ್ವಾಮಿ ಅಯ್ಯರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳವರೆಗೆ ಕೃತಜ್ಞತೆ ಯಿಂದ ಕೊಂಡಾಡತಕ್ಕದ್ದಾಗಿರುವದೆಂಬುದು ಅದೊಂದು ಗ್ರಂಥದಿಂದಲೇ ಸುಸ್ಪಷ್ಟ ವಾಗುತ್ತದೆ.

ಇಂಥ ಮಹಾವಿಭೂತಿಗಳ ಜೀವನಚರಿತೆಯನ್ನು ವಿಸ್ತಾರವಾಗಿ ಬರೆದು ಪ್ರಕಟಿಸುವದು ಅವರಲ್ಲಿ ಪ್ರೇಮಾದರವುಳ್ಳ ಅನುಬಂಧಿಗಳು ಮತ್ತು ಶಿಷ್ಯರ ಆವಶ್ಯಕರ್ತವ್ಯವಾಗಿರುತ್ತದೆ. ಹಾಗೆ ಮಾಡುವದರಿಂದ ನಮ್ಮ ದೇಶದ ಯುವಕರಿಗೆ

ಒಂದು ಉತ್ತಮವಾದ ಜೀವನಧ್ಯೇಯವನ್ನು ದೊರಕಿಸಿಕೊಟ್ಟ ಪುಣ್ಯವೂ ಲಭಿಸುತ್ತದೆ. ಆದ್ದರಿಂದ ಈ ಮಂಗಲಚರಿತ್ರೆಯ ವಿಶೇಷಾಂಶಗಳು ಯಾರುಯಾರಿಗೆ ಎಷ್ಟೆಷ್ಟು ತಿಳಿದಿದ್ದರೂ ಅಷ್ಟಷ್ಟನ್ನು ತಿಳಿಸಿಕೊಟ್ಟು ಉಪಕಾರಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಅಯ್ಯರವರ ಕುಟುಂಬದವರೆಲ್ಲರಿಗೂ ಅವರ ಅಗಲಿಕೆಯಿಂದಾಗಿರುವ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಪರಮೇಶ್ವರನು ಅನುಗ್ರಹಿಸಲಿ. ಅವರು ಬರೆದಿಟ್ಟಿರುವ ಗ್ರಂಥಗಳನ್ನು ಪ್ರಕಟಿಸುವದಕ್ಕೂ ಅಚ್ಚುಮಾಡಿಸಿರುವ ಪುಸ್ತಕಗಳನ್ನು ಪ್ರಚಾರಮಾಡುವದಕ್ಕೂ ಅವರ ಮೆಚ್ಚಿಗೆಯ ಶಿಷ್ಯರಿಗೂ ಇಷ್ಟಮಿತ್ರರಿಗೂ ಆ ಭಗವಂತನು ಪ್ರೇರಣೆಯನ್ನುಂಟುಮಾಡಲಿ ! ಆ ಮಹನೀಯರು ವೇದಾಂತವಿಚಾರಕ್ಕೆ ಉಂಟುಮಾಡಿರುವ ವಿಚಾರಪ್ರಚೋದನೆಯ ಫಲವು ವೇದಾಂತಿಗಳ ಹೃದಯದಲ್ಲಿ ಸ್ಥಿರವಾಗಿ ನೆಲಸಲಿ !

ವಿದ್ಯಾಮರ್ಥಂ ಚ ದಾರಾನ್ ಸುಕೃತಮಪಿ ಗೃಹಂ ಪುತ್ರಪೌತ್ರಾಭಿವೃದ್ಧಿಂ
ಸಂಪಾದ್ಯೈವಂ ಸ್ವಧರ್ಮಾಚರಣಮಥ ವಿಭೋರರ್ಚನಂ ಸಂವಿಧೇಯಮ್ ।
ದಾನಂ ದಾಸ್ತಿರ್ಧಯ್ಯೆವಂ ನಿಜಪರಸಮತಾಬುದ್ಧಿರಪ್ಯೇವಮೇವಂ
ಸ್ವಾಚಾರೇಣೈವ ದೇಷ್ಟಾ ಬತ ಕಥಮಿಹ ನೋ ದೃಶ್ಯತಾಮೇತಿ ಕೃಷ್ಣಃ ॥

**ದಿವಂಗತ ಹೊಸಕೆರೆ ಚಿದಂಬರಯ್ಯನವರು :** ಚಿದಂಬರಯ್ಯನವರನ್ನು ನಾನು ಮೊದಲು ಕಂಡದ್ದು ಕಡೂರಿನಲ್ಲಿ, ಕ್ರಿ.ಶ. 1903ರಲ್ಲಿ ಆ ಊರಿನ ಟೌನ್ ಓವರ್ಸಿಯರಾಗಿದ್ದ ನಾನು ಒಂದು ದಿನ ಊರಿನಲ್ಲಿ ಅಡ್ಡಾಡುತ್ತಾ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ಒಳಕ್ಕೆ ಹೋದೆ. ಕಟ್ಟಡದ ಬಲಭಾಗದಲ್ಲಿದ್ದ ಒಂದು ಕೋಣೆಯಲ್ಲಿ ಅವರು ಒಂದು ದೊಡ್ಡ ಪುಸ್ತಕವನ್ನು ಓದುತ್ತಾ ಕುರ್ಚಿಯಮೇಲೆ ಕುಳಿತಿದ್ದರು. ವ್ಯಕ್ತಿಯ ಉಡಿಗೆತೊಡಿಗೆಗಳಲ್ಲಾಗಲಿ ಮಾತುಕಥೆಗಳಲ್ಲಾಗಲಿ ಅಷ್ಟೇನೂ ವಿಶೇಷವು ಕಾಣಿಸಲಿಲ್ಲ, ಆದರೂ ಕಾಲ ಕರ್ಮ ಸಂಯೋಗದಿಂದ ದೊರೆತ ಆ ಪರಿಚಯವು ನಮ್ಮಿಬ್ಬರನ್ನೂ ತೀರ ಹತ್ತಿರದ ಗೆಳೆಯರನ್ನಾಗಿ ಮಾಡಿಬಿಟ್ಟಿತು.

ನಾವು ಆಗಾಗ್ಗೆ ಮತ್ತೆ ಮತ್ತೆ ಸೇರುವದಕ್ಕೆ ಮೊದಲಾಯಿತು. ಚಿದಂಬರಯ್ಯನವರು ಬಾಲ್ಯದಲ್ಲಿ ಅಷ್ಟೇನೂ ಸ್ಕೂಲಿನ ವಿದ್ಯಾಭ್ಯಾಸವನ್ನು ಪಡೆದವರಲ್ಲವಾದರೂ ತಮ್ಮ ಸ್ವಂತವ್ಯಾಸಂಗದಿಂದಲೂ ಉತ್ತಮಸಹವಾಸದಿಂದಲೂ ಕನ್ನಡ, ಸಂಸ್ಕೃತ, ಇಂಗ್ಲಿಷು – ಈ ಮೂರು ಭಾಷೆಗಳಲ್ಲಿಯೂ ತಕ್ಕಮಟ್ಟಿನ ಪರಿಚಯವನ್ನು ಸಂಪಾದನೆ ಮಾಡಿಕೊಂಡಿದ್ದರು. ಕನ್ನಡದಲ್ಲಿ ಆಗಾಗಲೆ ಒಂದೆರಡು ಗ್ರಂಥಗಳನ್ನು ಬರೆದಿದ್ದದ್ದಲ್ಲದೆ ಕಾವ್ಯರಸವನ್ನು ತಾವೂ ಈಂಟಬಲ್ಲವರಾಗಿದ್ದರು. ಜೊತೆಯವರಿಗೂ ಅದರ ಸವಿಯನ್ನು ನೋಡಿಸಬಲ್ಲ ಚತುರರಾಗಿದ್ದರು. ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ

ನನಗೂ ಸ್ವಲ್ಪ ಅಭಿರುಚಿಯಿದ್ದದ್ದರಿಂದಲೂ ಚಿದಂಬರಯ್ಯನವರು ಸಹಜವಾಗಿ ನನಗೆ ಸ್ವಲ್ಪ ಸಲುಗೆಯನ್ನು ಕೊಟ್ಟರು. ನಾವಿಬ್ಬರೂ ಒಕ್ಕಡೆಯಲ್ಲಿಯೇ ವಾಸ ಮಾಡುತ್ತಾ ಲಘುಕೌಮುದಿ, ಶಬ್ದಾನುಶಾಸನ, ಸಾಹಿತ್ಯದರ್ಪಣ, ಕುವಲಯಾನಂದ, ಚಿಕ್ಕದೇವ ರಾಜವಿಜಯ, ಚಿಕ್ಕದೇವರಾಯವಂಶಾವಳಿ, ಶಬರಶಂಕರವಿಲಾಸ ಮುಂತಾದ ಗ್ರಂಥಗಳನ್ನು ಜೊತೆಯಲ್ಲಿ ಅಭ್ಯಾಸ ಮಾಡುತ್ತಿದ್ದೆವು. ಚಿದಂಬರಯ್ಯನವರು ಸ್ಕೂಲು ಕೆಲಸದಲ್ಲಿ ಅತ್ಯಂತ ಆದರವುಳ್ಳವರಾಗಿದ್ದದ್ದು, ತಮ್ಮ ಕೆಲಸವನ್ನು ಮತ್ತೊಬ್ಬರಿಗೆ ಹೇಳದೇ ತಾವೇ ಮಾಡಿಕೊಳ್ಳುತ್ತಾ ಇದ್ದದ್ದು, ಬಿಡುವಿನ ಕಾಲದಲ್ಲಿ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಅಕ್ಕರೆಯಿಂದ ಗ್ರಂಥಗಳನ್ನು ಚಿಂತನೆಮಾಡುತ್ತಿದ್ದದ್ದು ಇವೆಲ್ಲವೂ ನನಗೆ ಅವರಲ್ಲಿ ಹೆಚ್ಚಿನ ಗೌರವವುಂಟಾಗುವಂತೆ ಮಾಡಿದವು.

ಚಿದಂಬರಯ್ಯನವರ ಶಿಫಾರಸಿನಿಂದ ನನಗೆ ವಿದ್ಯಾಭ್ಯಾಸದ ಇಲಾಖೆ ಯಲ್ಲಿ ಕೆಲಸವಾಯಿತು ; ನಾನು ಮೊಳಕಾಲ್ಮುರು ಹೊಸದುರ್ಗಗಳನ್ನು ದಾಟಿ ಹೊಳಲು ಕೆರೆಯ ಸ್ಕೂಲಿನ ಹೆಡ್‌ಮಾಸ್ಟರಾಗಿ ಬರುವ ಹೊತ್ತಿಗೆ ನಮ್ಮಿಬ್ಬರ ಸ್ನೇಹವು ಬಲ ವಾಗಿತ್ತು. ಚಿದಂಬರಯ್ಯನವರು ಕಡೂರಿನಲ್ಲಿ ಸ್ಥಾಪಿಸಿದ ಉಪಾಧ್ಯಾಯ ಸಂಘಕ್ಕೆ ನನ್ನನ್ನು 'ಜಾಯಿಂಟ್ ಸೆಕ್ರಟೆರಿ'ಯಾಗಿ ಸೇರಿಸಿಕೊಂಡಿದ್ದರು. ಸಂಘದಲ್ಲಿ ಅವರು ಓದಿದ 'ಮನಶ್ಶಿಕ್ಷಣ', 'ಬೋಧನಕ್ರಮ', 'ಬೋಧನೆಯ ಸ್ವಭಾವ' - ಮುಂತಾದ ಉಪನ್ಯಾಸಗಳು ಅಚ್ಚಾಗಿ ಅನೇಕ ಟ್ರೇನಿಂಗು ಸ್ಕೂಲುಗಳ ಮೆಚ್ಚುಗೆಯನ್ನು ಪಡೆದವು ; ಕಡೂರಿನಲ್ಲಿ ಒಂದು ವಿದ್ಯಾಭ್ಯಾಸದ ಪ್ರದರ್ಶನಮಹೋತ್ಸವವೂ ಆಯಿತು. (ಚಿದಂಬರಯ್ಯನವರಿಗೆ ಯಾವ ಟ್ರೈನಿಂಗೂ ಆಗಿರಲಿಲ್ಲ !) ಆ ಸುಮಾರಿನಲ್ಲಿ ಅವರು 'ಕಾಲಾಂತರ', 'ತಾರಾನಾಥ', 'ಸ್ತ್ರೀಧರ್ಮಸಂಗ್ರಹ', 'ಮಾಧವರಾವ್ ಸಿಂಧೆ', 'ಗುಣ ನಿರೂಪಣೆ', 'ಕೃಷ್ಣಮಹೀಶ್ವರೀ' (ನಾಟಕ) - ಮುಂತಾದ ಗ್ರಂಥಗಳನ್ನು ಬರೆದರು.

ಆದರೆ ಇಷ್ಟು ಹೊತ್ತಿಗೆ ಚಿದಂಬರಯ್ಯನವರಿಗೆ ನನ್ನ ಗಾಳಿ ಸ್ವಲ್ಪ ಬೀಸಿತ್ತು. ಕಡೂರಿನಲ್ಲಿದ್ದಾಗ ನಾನು 'ಪಂಚೀಕರಣ', 'ವೇದಾಂತಸಾರ' - ಮುಂತಾದ ವೇದಾಂತಪ್ರಕರಣಗಳನ್ನು ಓದುತ್ತಿರುವದ್ನು ಕಂಡು ಹಾಸ್ಯಮಾಡುತ್ತಿದ್ದ ಅವರು ಬಿಡುವು ದೊರೆತಾಗಲೆಲ್ಲ ಹೊಳಲುಕೆರೆಗೆ ಬಂದು ನನ್ನೊಡನೆ 'ಪಂಚದಶಿ'ಯನ್ನು ಓದುವದಕ್ಕೆ ಮೊದಲು ಮಾಡಿದರು. ಕ್ರಿ.ಶ. 1906ರಲ್ಲಿ ಅವರಿಗೆ ಪತ್ನಿ ವಿಯೋಗವಾದ ಮೇಲೆ ಅವರು ಪಂಚದಶಿಯನ್ನು ಮುಗಿಸಿ ಶಂಕರಾನಂದರ ಗೀತಾ ತಾತ್ಪರ್ಯಬೋಧಿ ನಿಯನ್ನು ಓದಿ ವೇದಾಂತದ ಹುಚ್ಚು ಹಿಡಿಸಿಕೊಂಡುಬಿಟ್ಟಿದ್ದರು. ಸಂನ್ಯಾಸವನ್ನು ತೆಗೆದುಕೊಂಡು ವೇದಾಂತಶ್ರವಣವನ್ನು ಮಾಡಬೇಕೆಂದು ಆಗಿಂದಾಗ್ಗೆ ಅವರು ಹೇಳುತ್ತಿದ್ದದ್ದು ಚೆನ್ನಾಗಿ ನನ್ನ ನೆನಪಿನಲ್ಲಿದೆ.

ಅಲ್ಲಿಂದ ಮುಂದಕ್ಕೆ ಜೊತೆಯಲ್ಲಿರಬೇಕೆಂಬ ಕುತೂಹಲವು ಇಬ್ಬರಲ್ಲಿಯೂ ಬಲವಾಗಿ ಬೇರೂರಿತು. ನಾವಿಬ್ಬರೂ ದಾವಣಗೆರೆಯಲ್ಲಿ ಮತ್ತೆ ಸೇರಿದೆವು. ಇಬ್ಬರೂ ಕಾಲಟಿಯಲ್ಲಿ ಶ್ರೀ ಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿಗಳಲ್ಲಿ ಭಾಷ್ಯ ಶಾಂತಿಯನ್ನು ಮಾಡಿಸಿಕೊಂಡು ಧಾರವಾಡದಲ್ಲಿದ್ದು (ಈಚೆಗೆ ಶ್ರೀವಾಲುಕೇಶ್ವರ ಸ್ವಾಮಿಗಳಾಗಿ ಮೈಸೂರಿನಲ್ಲಿ ಬ್ರಹ್ಮೀಭೂತರಾದ) ಹಾನಗಲ್ಲ ವಿರೂಪಾಕ್ಷ ಶಾಸ್ತ್ರಿಗಳವರಲ್ಲಿ ಸೂತ್ರಭಾಷ್ಯವನ್ನು ಅಭ್ಯಾಸಮಾಡತೊಡಗಿದೆವು. ಆದರೆ ಚಿದಂಬರಯ್ಯನವರ ಮನಸ್ಸು ಬರಿಯ ಪುಸ್ತಕಪಾಠಿಯಾಗಿರಲು ಒಪ್ಪಲಿಲ್ಲ. ಸುಮಾರು 1910ರಲ್ಲಿ ನಮ್ಮಿಬ್ಬರಿಗೆ ದೊರೆತಿದ್ದ ಶ್ರೀ ಮಹಾಭಾಗವತರೆಂಬ ಸಾಧುಗಳ ದರ್ಶನದ ಫಲವಾಗಿ ಅವರು ಉತ್ಕಟವೈರಾಗ್ಯದಿಂದ ಗೋಂದಾವಳಿಯ ಶ್ರೀ ಬ್ರಹ್ಮಚೈತನ್ಯಮಹಾರಾಜರೆಂಬ ಸದ್ಗುರುಗಳ ಸೇವೆಗೆಂದು ರಜವನ್ನು ಪಡೆದುಕೊಂಡು ಹೋಗಿಬಿಟ್ಟರು ; ಅವರ ಸೇವೆಯಲ್ಲಿ ಹಲವು ತಿಂಗಳುಗಳಿದ್ದು ಕೊನೆಗೆ ಕುರ್ತಕೋಟಿಯಲ್ಲಿ ಬ್ರಹ್ಮಚಿಂತನೆಯಲ್ಲಿಯೇ ಕಾಲಹರಣವನ್ನು ಮಾಡುತ್ತಾ ಇದ್ದುಬಿಟ್ಟರು. ಪುಸ್ತಕದ ವ್ಯಾಸಂಗವನ್ನು ನನ್ನ ಪಾಲಿಗೆ ಬಿಟ್ಟುಹೋಗಿದ್ದರು !

ಕುರ್ತಕೋಟಿಯಲ್ಲಿದ್ದಾಗ ಅವರ ಚಿತ್ತವು ಧ್ಯಾನಯೋಗ ಭಕ್ತಿಯೋಗಗಳಲ್ಲಿ ನೆಲೆಗೊಂಡಿತು. ಅವರು ಬೆಳಗ್ಗೆ ಸಾಯಂಕಾಲ ಎರಡು ಹೊತ್ತೂ ದೀರ್ಘಕಾಲ ಪ್ರಾಣಾಯಾಮ, ಸಗುಣಾರಾಧನೆ, ಲಯಚಿಂತನ ಮುಂತಾದ ಸಾಧನಗಳನ್ನು ಮಾಡುತ್ತಿದ್ದರು ; ಉಳಿದ ಕಾಲದಲ್ಲಿ ಭಕ್ತಿಪ್ರಧಾನವಾದ ಗ್ರಂಥಗಳನ್ನು ಓದುವದು, ಬರೆಯುವದು, 'ಪರಮಾರ್ಥ'ವೆಂಬ ಮಾಸಪತ್ರಿಕೆಯ ಸಂಪಾದಕತ್ವದ ಕೆಲಸವನ್ನು ನಿರ್ವಹಿಸುವದು ಹೀಗೆ ಕಾಲಕ್ಷೇಪಮಾಡುತ್ತಿದ್ದರು. ಅವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾಗ ಇಟ್ಟುಕೊಂಡಿದ್ದ ಉತ್ಸಾಹವನ್ನೆಲ್ಲ ಈಗ ಪರಮಾರ್ಥವಿದ್ಯಾಭ್ಯಾಸದ ಇಲಾಖೆಯ ಸೇವೆಗೆ ಧಾರೆಯೆರೆದಿದ್ದರೆನ್ನಬಹುದು. 'ಮೈತ್ರೇಯಿ', 'ಪರಮಾತ್ಮಸ್ತುತಿ', 'ವಾಲ್ಮೀಕಿಯ ಜಯ', 'ಭಗವದ್ಗೀತಾಸಾರವಿಚಾರ', 'ಗುರುಸ್ತುತಿಸುಮಾಂಜಲಿ', 'ಸುಧರ್ಮಪ್ರಭಾವ', 'ಗೀತಾರ್ಥ ವಿವರಣೆ' ಮುಂತಾದ ಗ್ರಂಥಗಳನ್ನು ಅವರು ಹೊರಕ್ಕೆತಂದದ್ದು ಈ ಕಾಲದಲ್ಲಿಯೇ.

ಚಿದಂಬರಯ್ಯನವರು ಈಗ ವಾನಪ್ರಸ್ಥಾಶ್ರಮಿಗಳಂತೆ ದೇಹಾಭಿಮಾನವನ್ನು ತೀರ ತೊರೆದುಬಿಟ್ಟಿದ್ದರು. ಅವರು ತಮ್ಮ ತನುಮನೋಧನಗಳನ್ನು ಕುರ್ತಕೋಟಿಯಲ್ಲಿ ಶ್ರೀಮಹಾಭಾಗವತರ ಸೇವೆಗೂ ಅಲ್ಲಿ ಭಕ್ತಮಂಡಲಿಯವರಿಗಿದ್ದ ಸತ್ರದ ಸೇವೆಗೂ ಒಪ್ಪಿಸಿಬಿಟ್ಟಿದ್ದರೆಂದರೆ ಅತ್ಯುಕ್ತಿಯಾಗದು. ಆಗಿನ ಅವರ ಮನಃಸ್ಥಿತಿಯನ್ನು ಮನದಟ್ಟು ಮಾಡಿಕೊಳ್ಳುವದಕ್ಕೆ ಒಂದು ಸಂದರ್ಭವನ್ನು ನೆನಪಿಗೆ ತಂದು

ಕೊಳ್ಳುವದು ಸಹಾಯಕವಾಗುತ್ತದೆ. ನಾನು ಒಮ್ಮೆ ಕುರ್ತಕೋಟಿಗೆ ಹೋಗಿ ಊಟವಾದ ಬಳಿಕ ಅವರ ಬಳಿಯಲ್ಲಿ ಕುಳಿತು ಮೇಜಿನಮೇಲಿದ್ದ ಒಂದು ಸರಕಾರಿಯ ಲಕೋಟೆಯನ್ನು ಕಂಡು ಇದೇನೆಂದು ಕೇಳಿದೆನು ; ಅವರು 'ಅದು ರಜ ವಿಷಯದ ಕಾಗದವಿರಬೇಕು' ಎಂದು ಉದಾಸೀನವಾಗಿ ಉತ್ತರಕೊಟ್ಟರು. ನಾನು ಅದನ್ನು ಒಡೆದುನೋಡಲು "ರಜಕೊಡುವದಾಗುವದಿಲ್ಲವೆಂದು ಇಂಡಾರ್ಸು ಕೊಟ್ಟರೂ ನೀವು ಮತ್ತೆ ಮತ್ತೆ ರಜಕ್ಕೆ ಬರೆದುಕೊಳ್ಳುತ್ತೀರಾದ್ದರಿಂದ ನಿಮ್ಮನ್ನು ಕೆಲಸದಿಂದ ತೆಗೆದು ಹಾಕಿದೆ" ಎಂದು ಬರೆದಿತ್ತು, ಅದನ್ನು ನಾನು ಓದುತ್ತಲೂ ಚಿದಂಬರಯ್ಯನವರು "ಸರಿ ಹಾಗಾದರೆ ; ಮತ್ತೆ ರಜಕ್ಕೆ ಬರೆದುಕೊಳ್ಳುವದೇ ತಪ್ಪಿತು" ಅಂದುಬಿಟ್ಟರು ! ನಾನು ಆ ಸಂದರ್ಭಕ್ಕೆ ತಕ್ಕಂತೆ ಒಂದು ಅರ್ಜಿ ಬರೆದು ಬಲಾತ್ಕಾರದಿಂದ ಅವರ ರುಜುಹಾಕಿಸಿ ಸರಕಾರಕ್ಕೆ ಕಳುಹಿಸಿಕೊಟ್ಟೆ ; ಸರಕಾರದವರೊ ದಯವಿಟ್ಟು ಹಿಂದಿನ ಹುಕುಂ ವಜಮಾಡಿ ಅವರಿಗೆ ವಿಶ್ರಾಂತಿವೇತನವನ್ನು ಕೊಡಿಸಿಕೊಟ್ಟರು.

ಚಿದಂಬರಯ್ಯನವರು ಮಹಾಭಾಗವತರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ-ಮೇಲೂ ಅವರೊಡನೆ ಸಂಚಾರಮಾಡಿ ಬಹುಕಾಲ ಸಂಚಾರದಿಂದಾದ ದೇಹಶ್ರಮವನ್ನೂ ಮನಃಶ್ರಮವನ್ನೂ ನಿವಾರಿಸಿಕೊಳ್ಳುವದಕ್ಕೆ ಸುಮಾರು ಕ್ರಿ.ಶ. 1919ನೆಯ ಮೊದಲಭಾಗದಲ್ಲಿ ಬೆಂಗಳೂರಿಗೆ ಬಂದರು. ಕೆಲಕಾಲ ನಾವಿಬ್ಬರೂ ವೇದಾಂತ ವಿಚಾರದಿಂದ ಕಾಲವನ್ನು ಕಳೆದೆವು. ಆ ಸುಮಾರಿಗೆ ಶ್ರೀಯುತ ಕೊಪ್ಪಳದ ಜಯರಾಮಾಚಾರ್ಯರು ಹರಿಕೀರ್ತನಸಮ್ಮೇಳನವೊಂದನ್ನು ಏರ್ಪಡಿಸಿ ಚಿದಂಬರಯ್ಯನವರ ಸಂಪಾದಕತ್ವದಲ್ಲಿ "ಭಕ್ತಬಂಧು" ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. (ಪರಮಾರ್ಥಪತ್ರಿಕೆಯು ಮೂರುವರ್ಷಗಳು ನಡೆದ ಮೇಲೆ ಬೆಂಗಳೂರಿನಲ್ಲಿದ್ದ ವೇ|| ಸಾಲಗ್ರಾಮದ ನಾರಾಯಣಶಾಸ್ತ್ರಿಗಳವರ ಸಂಪಾದಕತ್ವವನ್ನು ಪಡೆದಿತ್ತು.) ಆಗಿನಿಂದ ಚಿದಂಬರಯ್ಯನವರು ಪುರಾಣದ ಆಖ್ಯಾನಗಳನ್ನು ಕೀರ್ತನಪರವಾಗಿ ಬರೆಯುತ್ತಾ ಬಂದು ಕೊನೆಗೆ ಅವನ್ನು 'ಕೀರ್ತನಕಂಠಾಭರಣ'ವೆಂಬ ಹೆಸರಿನಿಂದ ಒಟ್ಟುಗೂಡಿಸಿ ಪ್ರಕಟಿಸಿದರು.

ಈ ನಡುವೆ ಧಾರವಾಡದ "ನ್ಯಾಷನಲ್ ಕಾಲೇಜ್" ಎಂಬ ದೇಶೀಯ ವಿದ್ಯಾಶಾಲೆಯವರ ಕರೆ ಬಂದದ್ದರಿಂದ ಅಲ್ಲಿಗೆ ಹೋಗಿ ಎರಡು ಮೂರು ವರ್ಷಗಳು ಅಲ್ಲಿದ್ದು ತಮ್ಮ ನೆರವನ್ನು ಅವರಿಗೆ ಕೊಟ್ಟದ್ದಲ್ಲದೆ ಸುತ್ತುವರಿಯಲ್ಲಿದ್ದಾಗ "ಭರತಖಂಡದ ಜೀವಜ್ಯೋತಿಗಳು", "ಆತ್ಮಶಕ್ತಿಯ ತೇಜಸ್ಸು", "ಆರ್ಯಧರ್ಮಪ್ರದೀಪ", "ವಿದ್ಯಾರಣ್ಯಕಾವ್ಯ" - ಮುಂತಾದ ಗ್ರಂಥಗಳನ್ನು ರಚಿಸಿದರು.

ಚಿದಂಬರಯ್ಯನವರು ಸ್ಫಟಿಕದಂತೆ ಸ್ವಚ್ಛರಾಗಿರುತ್ತ ಆಯಾ ಉಪಾಧಿಗಳಿಗೆ ತಕ್ಕಂತೆ ಜನರಿಗೆ ಒಪ್ಪಾಗುವ ರೀತಿಯಲ್ಲಿರುತ್ತಿದ್ದರು. ಅವರು ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಕಡೆಗೆ ತಮ್ಮ ಚಿತ್ತವನ್ನು ಓಲಬಿಟ್ಟರೆಂಬುದು ಒಂದೇಸಮನಾಗಿ ಹರಿಯುತ್ತಿದ್ದ ಅವರ ಲೇಖನಿಯಿಂದ ಬೆಳಕುಕಂಡಿರುವ ಗ್ರಂಥ ಗಳಿಂದಲೇ ತಿಳಿಯುವಂತಿದೆ. ಆದರೂ ಕಡಲಿನ ಮೇಲುಗಡೆಯಲ್ಲಿ ಅಲೆಗಳ ಹೊಡೆತ ವಿದ್ದರೂ ತೀರ ಆಳವಾಗಿ ಹೋಗಿ ನೋಡಿದರೆ ಶಾಂತಿಯೇ ಇರುವಂತೆಯೂ ವಾಯುಮಂಡಲಮೇಘಮಂಡಲಗಳ ಮುಸುಕಿನಲ್ಲಿ ಬಗೆಬಗೆಯ ಮಾರ್ಪಾಟು ಗಳನ್ನು ಪಡೆಯುವಂತೆ ತೋರುವ ಅಂಬರವು ನಿಜವಾಗಿ ನಿಷ್ಕಲಂಕವಾಗಿಯೇ ಇರುವಂತೆಯೂ ಇವರು ಅಂತರಂಗದಲ್ಲಿ ಪರಮಾರ್ಥವಾಸನೆಯನ್ನು ಒಂದೇಸಮನೆ ಬೆಳೆಸಿಕೊಂಡು ಹೆಸರಿಗೆ ತಕ್ಕಂತೆ ಚಿದಂಬರರೇ ಆಗಿರುತ್ತಿದ್ದರು. ಅವರು ಧಾರವಾಡದಿಂದ ಬೆಂಗಳೂರಿಗೆ ಬಂದ ಮೇಲಂತು ಯಾವಾಗಲೂ ಸತ್ಕರ್ಮ, ಸದ್ವಿಚಾರ, ಸದ್ಗ್ರಂಥಚರನೆ ಇವುಗಳಲ್ಲಿಯೇ ಹೆಚ್ಚಾಗಿ ಮನಸ್ಸನ್ನು ಮುಳುಗಿಸಿದ್ದರು. ಅವರು ಇತ್ತೀಚೆಗೆ ಬರೆದಿರುವ 'ಅನುಭವಾಮೃತ', 'ಮಾಂಡೂಕ್ಯ ಸಂವಾದ', 'ಗೀತಾರ್ಥಚಂದ್ರಿಕೆ', 'ಪಂಚದಶೀತತ್ತ್ವಾರ್ಥ', 'ವೇದಾಂತದ ಜೇವಾಳ', 'ವೇದಾಂತದ ರೂಪರೇಖೆ', 'ಬ್ರಹ್ಮಸೂತ್ರದ ಬೆಳಕು' – ಮುಂತಾದ ಗ್ರಂಥಗಳೇ ಅವರ ಮನಸ್ಸಿನ ಒಲುಮೆಯನ್ನು ಸರಿಯಾಗಿ ಅಳೆಯಬಲ್ಲ ಗ್ರಂಥಗಳು ; ಮಿಕ್ಕವು ಆಯಾ ಕಾಲದ ಆಯಾ ಸುತ್ತುವಳೆಯದ ಪ್ರೇರಣೆಯ ಫಲಗಳು.

ಚಿದಂಬರಯ್ಯನವರು ಹೆಚ್ಚು ಮಾತಿನವರಲ್ಲ, ಹೊರಗಿನ ಆಡಂಬರವನ್ನು ಕಂಡವರಲ್ಲ. ಬಡತನದ ಒತ್ತಡದಿಂದ ಚಿಕ್ಕಂದಿನಿಂದಲೂ ಕುಟುಂಬಪೋಷಣೆಗೆ ಹಣವನ್ನು ಗಳಿಸಲೇಬೇಕಾಗಿಬಂದರೂ ತಾವು ವಿದ್ಯಾಶಾಲೆಯಲ್ಲಿ ದೊರಕಿಸಲಾರದೆ ಹೋಗಿದ್ದ ವಿದ್ಯೆಯನ್ನು ಅವರು ತಮ್ಮ ಜೀವಿತದಲ್ಲೆಲ್ಲ ಸ್ವತಂತ್ರಪ್ರಯತ್ನದಿಂದ ಸಂಪಾದಿಸಿ ಅದನ್ನು ನಾಡಿನ ಸೇವೆಗೆ ಗ್ರಂಥರೂಪವಾಗಿ ಸೂರೆಗೊಡುತ್ತಲೇ ಇದ್ದರು. ಅವರು ಮೊದಮೊದಲು ಪ್ರೌಢಶೈಲಿಯಲ್ಲಿ ಕಾವ್ಯವನ್ನು ಬರೆಯುತ್ತಿದ್ದರಂತೆ ; ಆದರೆ ನಮಗೆ ಈಗ ದೊರುಕವ ಕವಿತೆಗಳೆಲ್ಲ ಅತ್ಯಂತಲಲಿತವಾಗಿರುತ್ತವೆ. ಸಂಪ್ರದಾಯ ಕ್ರಮವನ್ನನುಸರಿಸಿ ದ್ರಾಕ್ಷಾಪಾಕವಾಗಿ ಹೃದಯವನ್ನರಳಿಸುವಂತೆ ಬರೆದ ಅವರ ಕವಿತೆಗೆ ಮೆಚ್ಚಿ ಒಂದಾನೊಂದು ಸಭೆಯವರು ಅವರಿಗೆ 'ಕರ್ಣಾಟಕ ಕವಿರತ್ನ' ಎಂಬ ಬಿರುದನ್ನು ಕೊಟ್ಟಿದ್ದರು. 'ವಿದ್ಯಾರಣ್ಯ', 'ಚೂಡಾಲೆ', 'ಕೃಷ್ಣಮಹೀಶ್ವರಿ' ಮಂತಾದವು ಚಂಪುನಾಟಕಾದಿಗಳ ರಚನೆಯಲ್ಲಿ ಅವರಿಗಿದ್ದ ಕೌಶಲದ ಮಟ್ಟವನ್ನು ವ್ಯಕ್ತ ಗೊಳಿಸುತ್ತವೆ. ಕನ್ನಡಗದ್ಯವನ್ನು ಬರೆಯುವಾಗ ಅವರು ಬಳಕೆಗೆ ತಂದಿರುವ ನುಡಿಗಳ

ಬೆಡಗು ಎಷ್ಟೋ ಜನ ತರುಣರನ್ನು ಮುಗ್ಧಗೊಳಿಸಿ ಅವರ ಶೈಲಿಯನ್ನು ಅನುಕರಿಸುವಂತೆ ಹುರಿಗೊಳಿಸಿರುತ್ತದೆ. ಕನ್ನಡ ನಾಡಿನಲ್ಲಿಯೂ ಕನ್ನಡ ನುಡಿಯಲ್ಲಿಯೂ ಅವರಿಗಿದ್ದ ಅಭಿಮಾನವು ಮಿಕ್ಕ ಯಾವ ಕನ್ನಡಿಗರಿಗಿಂತಲೂ ಕಡಿಮೆಯಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದರೆ ಇವೆಲ್ಲಕ್ಕಿಂತಲೂ ಪರಮಾರ್ಥ ವಿಚಾರದಲ್ಲಿ ಅವರು ಮುಟ್ಟಿದ್ದ ಆಳವೂ ಅಧ್ಯಾತ್ಮಸಾಧನೆಯಲ್ಲಿ ಅವರು ತೋರಿಸುತ್ತಿದ್ದ ಶ್ರದ್ಧಾತತ್ಪರತೆಗಳೂ ತಮಗೆ ತಿಳಿದು ಬಂದ ವಿಷಯಗಳನ್ನು ತಿಳಿಗನ್ನಡದಲ್ಲಿ ಸೂರೆಗೊಟ್ಟ ಅವರ ಪ್ರತಿಭೆಯೂ ಔದಾರ್ಯವೂ ನನ್ನನ್ನು ಬೆರಗುಗೊಳಿಸಿರುತ್ತವೆ.

ಅಂತರಂಗದಲ್ಲಿ ನಾವಿಬ್ಬರೂ ಕಲೆತು ಮಾತಾಡುತ್ತಿದ್ದಾಗ ಅವರು ಸಂಭಾಷಣೆಯಲ್ಲಿ ತೋರಿಸುತ್ತಿದ್ದ ರಸಹಾಸ್ಯ, ತಮ್ಮ ಪರಿಚಯದವರಲ್ಲಿ ಒಬ್ಬನಾದ ನನ್ನಲ್ಲಿ ಅವರಿಟ್ಟಿದ್ದ ಪ್ರೇಮ ಮುಂತಾದ ವೈಯಕ್ತಿಕ ಜೀವನದ ಭಾಗವನ್ನು ಕುರಿತು ಇಲ್ಲಿ ಪ್ರಸ್ತಾಪಿಸಲು ಎಡೆಯಿಲ್ಲ. ಆದರೆ ಇತ್ತೀಚೆಗೆ ವೇದಾಂತವಿಚಾರದಲ್ಲಿ ನನಗೂ ಅವರಿಗೂ ಉಂಟಾದ ಕೆಲವು ಅಭಿಪ್ರಾಯಭೇದಗಳನ್ನು ಅವರು ಮುಚ್ಚುಮರೆಯಿಲ್ಲದೆ ಹೊರಗೆಡಹಿದ್ದು, ಈಚೆಗೆ ನನ್ನ ಅಭಿಪ್ರಾಯಗಳು ಸರಿಯೆಂದು ತಮಗೆ ಕಾಣಿಸಿದಮೇಲೆ ಮತ್ತೆ ನನ್ನಲ್ಲಿ ಮೊದಲಿಗಿಂತಲೂ ಹೆಚ್ಚಿನ ಬಳಕೆಯಿಂದ ಬೆರೆತಿರಬೇಕೆಂದು ಹವಣಿಸಿದ್ದು, ನನ್ನ ದುರ್ದೈವದಿಂದ ಅಷ್ಟಕ್ಕೆಡೆಯಿಲ್ಲದೆ ಕರಾಳಕಾಲನ ವಶದಿಂದ ಅವರು ಕಳೆದ ಚೈತ್ರ ಬಹುಳ ತದಿಗೆಯ ದಿನ (19-4-38) ಇಹಲೋಕವನ್ನು ಬಿಟ್ಟು ತೆರಳಿದ್ದು - ಇವುಗಳಿಂದ ನನ್ನ ಮನದಲ್ಲುಂಟಾಗಿರುವ ಮೆಚ್ಚುಗೆಯೂ, ಮೈತ್ರಿಯ ಹೊರಹೊಮ್ಮುಗೆಯೂ ವಿರಹಶೋಕವೂ ಒಳತೋಟಿಯಾಡುತ್ತಿರುವವು. ಪರಮಾತ್ಮನಲ್ಲಿ ನಾವಿಬ್ಬರೂ ಯಾವಾಗಲೂ ಒಂದಾಗಿಯೇ ಇರುವೆ ವೆಂಬ ಶಾಸ್ತ್ರೀಯ ದೃಷ್ಟಿಯ ಸಮಾಧಾನವೊಂದೇ ಚಿತ್ತದ ಈ ಏರಿಳಿತಗಳಿಗೆ ತಡೆಯಾಗಬಲ್ಲದು.

ಇಡಿಯ ಕರ್ಣಾಟಕಕ್ಕೇ ಪರಿಚಿತರಾಗಿರುವ ಈ ಮಹಾನುಭಾವರ ಜೀವನವನ್ನು ನನ್ನ ಕಣ್ಣಿಂದ ಅಳೆದು ಬರೆದಿರುವದಕ್ಕಾಗಿ ಕನ್ನಡಿಗರೆಲ್ಲರ ಕ್ಷಮೆಯನ್ನು ಬೇಡುತ್ತೇನೆ. ಕಷ್ಟಸಹಿಷ್ಣುಗಳಾಗಿ ನಿರಂತರವಿದ್ಯಾಭ್ಯಾಸಿಗಳಾಗಿ ಇಹಕ್ಕೂ ಪರಕ್ಕೂ ಬೇಕಾದ ಹೆಗ್ಗುರಿಯನ್ನು ನಡೆಯಿಂದಲೂ ನುಡಿಯಿಂದಲೂ ಜನರಿಗೆ ತೋರಿಕೊಡಬಲ್ಲ ಇಂಥ ಚಿದಂಬರಯ್ಯನವರುಗಳು ಕನ್ನಡನಾಡಿನಲ್ಲಿ ಹೇರಳವಾಗಿ ಉದಯಿಸಲಿ ! ಜಯ ಚಿದಂಬರ !!

ಇಲ್ಲಿಂದ ಮುಂದಿನ ಲೇಖನಗಳನ್ನು ಪಂಡಿತ ಶ್ರೀ ಲಕ್ಷ್ಮೀನರಸಿಂಹ ಮೂರ್ತಿಗಳವರು ಬರೆದಿರುವರು.

ಶ್ರೀ ಎ. ಸುಬ್ರಹ್ಮಣ್ಯ ಅಯ್ಯರವರು, ಶ್ರೀಶ್ರೀಗಳು ಚಿಕ್ಕಮಗಳೂರಿನ ಹೈಸ್ಕೂಲು ಸೇರಿದ ಕೆಲವೇ ಸಮಯದಲ್ಲಿ ಅಲ್ಲಿಯ ಹೆಡ್‌ಮಾಸ್ಟರಾಗಿ ಬಂದವರು. ಅವರು ಈ ಶಿಷ್ಯನ ಓದಿಗೆ ಸಹಾಯಕವಾಗಿ ವಾರವನ್ನೂ ಅನಂತರ ಮನೆಯಲ್ಲೇ ವಾಸಮಾಡಲು ಅನುಕೂಲವನ್ನು ಕಲ್ಪಿಸಿ ಕೊಟ್ಟವರು. ಇವರಿಂದ ಪೂರ್ವಾಶ್ರಮದ ಶ್ರೀಗಳಿಗೆ ನೆರಳು, ಅನ್ನ ಸಿಕ್ಕಿತು ; ಇವರ ಮನೆಯಲ್ಲಿ ಬರುತ್ತಿದ್ದ ಸ್ನೇಹಿತರ ಚರ್ಚೆಯಿಂದ ಕೆಲವು ವೇದಾಂತದ ಮಾತುಗಳು ಕಿವಿಯ ಮೇಲೆ ಬಿದ್ದು, ಆ ಕಡೆಗೆ ಮನಸ್ಸು ಪ್ರವೃತ್ತವಾಯಿತು. ಅದಕ್ಕೂ ಹೆಚ್ಚಾಗಿ ತಾವೇ ಸ್ವತಃ ಇಂಗ್ಲಿಷ್ ಪಾಠವನ್ನೂ ಹೇಳಿಕೊಟ್ಟ ಕ್ರಮದಿಂದಲೇ ಶಿಷ್ಯನಿಗೆ ಆ ಭಾಷೆಯ ಮೇಲೆ ಒಳ್ಳೆ ಹಿಡಿತ ಸಿಕ್ಕಿತು. ಇದು ಮುಂದೆ ಅವರ ಗ್ರಂಥ ರಚನೆಗೆ ತುಂಬಾ ಸಹಾಯಕವಾಯಿತು. ಅಯ್ಯರ್‌ರ ವಾತ್ಸಲ್ಯ ಎಷ್ಟು ಮುಂದುವರಿಯಿತೆಂದರೆ ಅವರು ಪರವೂರಿಗೆ ಪರೀಕ್ಷೆಗೆ ಹೋಗುವಾಗ ಖರ್ಚಿಗೆ ಬೇಕಾದೀತು ಎಂದು ಅಲ್ಪ ಹಣವನ್ನೂ ಕೊಟ್ಟಿದ್ದರು ; ಆಗೆಲ್ಲ, ಅವರ ಓದು ಪರೀಕ್ಷೆಯ ವಿಷಯದಲ್ಲಿ ಗುರುವಿನ ಕಳಕಳಿ ಅಪೂರ್ವವಾದುದು ; ತಾವೇ ಅತ್ಯುತ್ತಮ ಜೀವನ ಮಾರ್ಗಕ್ಕೊಂದು ಬುನಾದಿಯನ್ನು ಹಾಕಿಕೊಟ್ಟವರು. ಅದನ್ನು ಶಿಷ್ಯನ ಸಣ್ಣ ವಯಸ್ಸಿನಲ್ಲೇ ಸರಿಯಾದ ರೂಪಕ್ಕೆ ತಂದವರು. ಶಿಷ್ಯನು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಲು ಸೇರಿದಾಗ ಅವನಿಗನುಕೂಲವಾಗಲೆಂದು ವಾರ, ಇತ್ಯಾದಿಗಳ ಸೌಕರ್ಯಕ್ಕೆಂದು ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರವರಿಗೆ ಪರಿಚಯ, ಶಿಫಾರಸಿನ ಪತ್ರವನ್ನೂ ಕೊಟ್ಟು ಕಳಿಸಿದ್ದರು. ಇದರಿಂದ ಅಪೂರ್ವವಾದ ಸಹಾಯ ವಾಯಿತು, ಶಿಷ್ಯನ ವೇದಾಂತಜೀವನ ನಿಶ್ಚಿತವಾದ ರೂಪದಲ್ಲಿ ಪ್ರಾರಂಭವಾಗಿ, ಆ ಮಾರ್ಗದಲ್ಲೇ ಮುಂದುವರೆಯುವಂತೆ ಭದ್ರವಾದ ತಳಹದಿಯಾಯಿತು. ಶ್ರೀ ಕೃಷ್ಣ ಸ್ವಾಮಿ ಅಯ್ಯರ್‌ರವರಿಂದ ವೇದಾಂತದ ಒಲವು ನಿಶ್ಚಿತವಾಗಿ ಗರಿಗೆದರಿಕೊಂಡಿತು. ಈ ರೀತಿಯಲ್ಲಿ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರು, ಶ್ರೀಶ್ರೀಗಳವರ ಪೂರ್ವಾಶ್ರಮದ ಸಣ್ಣ ವಯಸ್ಸಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ, ಪ್ರಾತಃ ಸ್ಮರಣೀಯ ಮಹನೀಯರು. ಇಂತಹ ಅಪರೂಪದ ವಾತ್ಸಲ್ಯ, ಶ್ರದ್ಧಾಸಕ್ತಿಗಳಿಂದ ಶಿಷ್ಯನ ಯೋಗ ಕ್ಷೇಮ, ಪ್ರಗತಿಯನ್ನು ಬಯಸಿ, ಅದಕ್ಕಾಗಿ ಸಹಾಯಕರಾಗಿ ನಿಂತಂಥ ಗುರುಗಳು ಎಷ್ಟು ಜನರಿದ್ದಾರು !

**ವೇ|| ಬ್ರ|| ಶ್ರೀ ಹಾನಗಲ್ ವಿರೂಪಾಕ್ಷಶಾಸ್ತ್ರಿಗಳು** : ಇವರು ಮೈಸೂರಿಗೆ ದಯಮಾಡಿಸಿದ ಮೇಲೆ ಸಂಸ್ಕೃತಮಹಾಪಾಠಶಾಲೆಯ ಸುವರ್ಣ

ಮಹೋತ್ಸವವು ನಡೆಯಿತು. ಆಗ್ಗೆ ಪಂಡಿತ ಮದನಮೋಹನ ಮಾಳವೀಯರು ಬಂದಿದ್ದರು. ಆ ಕಾಲಕ್ಕೆ ನಡೆದ ಕೆಲವು ಮತಸುಧಾರಣಾವಿಷಯವಾದ ಚರ್ಚೆಯಲ್ಲಿ ವೇ॥ ಶಾಸ್ತ್ರಿಗಳು ವಿಧವಾವಿವಾಹವು ಅಶಾಸ್ತ್ರೀಯವೆಂದು ಮನಗಾಣಿಸಿಕೊಟ್ಟಿದ್ದರು. (ಶ್ರೀ ಮಾಳವೀಯರು ಬೆಂಗಳೂರಿಗೂ ಬಂದಿದ್ದಾಗ ಬ್ರಾಹ್ಮಣೇತರರಿಗೆ ಪುರಾಣಾದಿಗಳನ್ನು ಶ್ರವಣ ಮಾಡಿಸಬಹುದೆ ? ಪ್ರಣವಸಹಿತ ಪಂಚಾಕ್ಷರಿಯನ್ನು ಉಪದೇಶಿಸಬಹುದೆ ? ಮುಂತಾದ ಚರ್ಚೆಗಳನ್ನು ಪಂಡಿತರೊಡನೆ ನಡೆಯಿಸಿದ್ದರು. ಆಗ್ಗೆ ರಾಯರೂ ವೇ॥ ವಿಠಲಶಾಸ್ತ್ರಿಗಳೂ ಭಾಗವನ್ನು ವಹಿಸಿದ್ದರು. ಪ್ರಣವೋಪದೇಶಕ್ಕೆ ಅಬ್ರಾಹ್ಮಣರಿಗೆ ಅವಕಾಶವಿಲ್ಲವೆಂಬುದಕ್ಕೆ ರಾಯರು ಸೂತಸಂಹಿತಾವಾಕ್ಯವನ್ನು ತೋರಿಸಿದ್ದಕ್ಕೆ ಮಾಳವೀಯರು ಒಪ್ಪಿಕೊಂಡಿದ್ದರು.) ಶ್ರೀ ವಿರೂಪಾಕ್ಷಶಾಸ್ತ್ರಿಗಳು ಅನಂತರ ದರ್ಭಾಂಗದಲ್ಲಿ ನಡೆದ ಅಖಿಲಭಾರತ ಮಹಾಮಹೋಪಾಧ್ಯಾಯ ಸನ್ಮಾನ ಸಮಾರಂಭದಲ್ಲಿ ಉಪನ್ಯಾಸವನ್ನು ಕೊಟ್ಟು ಯಶಸ್ಸನ್ನು ಗಳಿಸಿದರು. ಕಾಶಿಯಲ್ಲಿ ಅಖಿಲಭಾರತ ಮಹಾವರ್ಷೀಯಬ್ರಾಹ್ಮಣ ಸಮ್ಮೇಳನಕ್ಕೆ ಹೋಗಿ ಸನಾತನಧರ್ಮದ ವಿಷಯವಾಗಿ ಭಾಷಣ ಮಾಡಿದ್ದರು. ಆಮೇಲೆ ಮೈಸೂರು ಶ್ರೀಮನ್ಮಹಾರಾಜರು ಇವರನ್ನು ಆಸ್ಥಾನ ಧರ್ಮಾಧಿಕಾರಿಗಳನ್ನಾಗಿ ನೇಮಿಸಿದರು. ಮುಂದೆ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತ ಶ್ರೀಮದಭಿನವ ವಾಲುಕೇಶ್ವರ ಭಾರತೀಸ್ವಾಮಿಗಳೆಂಬ ಹೆಸರಿನಿಂದ ಕೂಡಲಿ ಶೃಂಗಗಿರಿ ಜಗದ್ಗುರು ಪೀಠವನ್ನು ಅಲಂಕರಿಸಿದರು. ಅದಾದ ಒಂದು ವರ್ಷದ ಮೇಲೆ ರಾಯರು ಅವರ ದರ್ಶನವನ್ನು ಪಡೆದಿದ್ದರು. ಸುಮಾರು ಮೂರುವರ್ಷ ಕಾಲ ಜಗದ್ಗುರು ಪೀಠವನ್ನು ವಿರಾಜಮಾನರಾಗಿ ಶಿಷ್ಯರಿಗೆ ಧರ್ಮೋಪದೇಶ ಮಾಡುತ್ತಿದ್ದು ಶ್ರೀಶ್ರೀಗಳವರು 1936ನೇ ಏಪ್ರಿಲ್ ಮಾಹೆಯಲ್ಲಿ ಬ್ರಹ್ಮೀಭೂತರಾದರು. ರಾಯರಿಗೆ ಮಾತ್ರ ಕಡೆಯವರೆಗೂ ಮೂಲಾವಿದ್ಯಾನಿರಾಸಗ್ರಂಥದ ಬಗ್ಗೆ ಅವರೊಡನೆ ಚರ್ಚೆಮಾಡುವದಕ್ಕಾಗಲಿ ಅಭಿಪ್ರಾಯವಿನಿಮಯಕ್ಕಾಗಲಿ ಅವಕಾಶವೇ ದೊರೆಯಲಿಲ್ಲ. ಆ ಕಾಲಕ್ಕೆ ಉತ್ತರಾದಿ ಮಠದ ಶ್ರೀಗಳು ಹೊರಡಿಸಿದ್ದ "ದ್ವೈತಸಿದ್ಧಾಂತ ವಿಚಾರ" ಎಂಬ ಗ್ರಂಥಕ್ಕೆ ರಾಯರು ವಿಮರ್ಶೆಯನ್ನು ಬರೆದು ಬ್ರ॥ ಶ್ರೀ ವಿರೂಪಾಕ್ಷಶಾಸ್ತ್ರಿಗಳಿಗೆ ತೋರಿಸಿ ಅನುಮತಿಯನ್ನು ಪಡೆದಿದ್ದರು. ಅದನ್ನು ಪಂಡಿತರುಗಳು ಅಚ್ಚು ಮಾಡಿಸಿದರು.

**ಪಂಡಿತ ಶ್ರೀ ಬಿ.ಹೆಚ್. ರಾಮನಾಥಸ್ವಾಮಿಗಳು** (ಬಿ.ಹೆಚ್. ಮುನಿಸ್ವಾಮಿರಾವ್) ಬೆಂಗಳೂರು ನಿವಾಸಿಗಳು, ಶ್ರೀ ಚಿಕ್ಕಣ್ಣಲಿಂಗಣ್ಣ ಸ್ವಾಮಿಗಳ ಶಿಷ್ಯರು. ಹಲವು ಹತ್ತು ವರ್ಷಗಳಿಗೂ ಹಿಂದೆಯೇ ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಗುರುಗಳ ದರ್ಶನ ಉಪನ್ಯಾಸಾದಿಗಳಿಂದ ಪ್ರಭಾವಿತರಾದ ಈ ಮಹನೀಯರು ಶ್ರೀಶ್ರೀಗಳವರ ಅನುಯಾಯಿಗಳಲ್ಲಿ ಮುಖ್ಯರಾಗಿದ್ದರು. ತಮ್ಮ ಮನೆಯನ್ನೇ

'ಶಾಂಕರವೇದಾಂತ ಕುಟೀರ'ವೆಂಬ ನಾಮಧೇಯದಿಂದ ಅಲಂಕರಿಸಿ ಪ್ರತಿದಿನವೂ ಶಿಷ್ಯರಿಗೆ ವೇದಾಂತಪ್ರವಚನಾದಿಗಳನ್ನು ನಡೆಸುತ್ತಿದ್ದರು. ಶ್ರೀಶ್ರೀಗಳವರ ಮುಖ್ಯ ಕೃತಿಗಳನ್ನೆಲ್ಲ ಓದಿ ಗ್ರಹಿಸಿಕೊಂಡು ಅಧ್ಯಾಸವಾದದ ಹೆಚ್ಚುಗಾರಿಕೆಯನ್ನೂ ಮನಗಂಡು ಶುದ್ಧಶಾಂಕರವೇದಾಂತದ ಪ್ರಚಾರವನ್ನು ಮಾಡುತ್ತಿದ್ದರು. ಇವರು 'ಜಿಜ್ಞಾಸುಗಳ ತೊಡಕು' ಎಂಬ ಗ್ರಂಥವೊಂದನ್ನು ಕನ್ನಡದಲ್ಲಿ ಬರೆದಿದ್ದಾರೆ. ಸುಪ್ರಸಿದ್ಧ ಶಾಲ್ಯದರಸಿನವರ 'ವಿವೇಕಾಭರಣ'ವೆಂಬ ಕಾವ್ಯಗ್ರಂಥವನ್ನು ತಮ್ಮ ಸ್ವಂತವ್ಯಾಖ್ಯಾನಟಿಪ್ಪಣಿಗಳೊಡನೆ ಅಲಂಕರಿಸಿ ಪ್ರಕಟಿಸಿದ್ದಾರೆ. ಕಾರ್ಯಾಲಯದ ಚಟುವಟಿಕೆಗಳಿಗೆ ತುಂಬ ಪ್ರೋತ್ಸಾಹಕರಾಗಿದ್ದು ಪ್ರತಿವರ್ಷವೂ ಅಧ್ಯಾತ್ಮಪ್ರಕಾಶಮಾಸಪತ್ರಿಕೆಗೆ ಹೆಚ್ಚು ಹೆಚ್ಚು ಚಂದಾದಾರರನ್ನು ಒದಗಿಸಿಕೊಡುವದು, ಕಾರ್ಯಾಲಯದ ಗ್ರಂಥಗಳನ್ನು ಮಾರಾಟ ಮಾಡುವದು, ಶಂಕರಸಪ್ತಾಹಾದಿ ಉತ್ಸವಗಳಲ್ಲಿ ಭಾಗವಹಿಸುವದು, ಧನಧಾನ್ಯ ರೂಪವಾದ ಸಹಾಯವನ್ನು ತಾವೂ ಮಾಡಿ ತಮ್ಮ ಮಿತ್ರರಿಂದಲೂ ಕೊಡಿಸುವದು, ಶ್ರೀಶ್ರೀಗಳವರಿಗೆ ಅಗತ್ಯವಾದ ಔಷಧೋಪಚಾರಸಾಮಗ್ರಿಗಳನ್ನು ಒದಗಿಸುವದು - ಹೀಗೆ ಸೇವೆಯನ್ನು ಮಾಡುತ್ತಲೇ ಇದ್ದರು. ಶಾಖಾ ಕಾರ್ಯಾಲಯದ ಕಾರ್ಯಕಾರಿಸಮಿತಿಯ ಸದಸ್ಯರಾಗಿದ್ದರು. ಶ್ರೀ ಅನಂತಸ್ವಾಮಿ ಆಶ್ರಮ, ಬ್ರಹ್ಮವಿದ್ಯಾಶ್ರಮ, ಸಿದ್ಧಾಶ್ರಮ ಮುಂತಾದ ಸಂಸ್ಥೆಗಳಲ್ಲಿ ನಡೆಯುವ ಉತ್ಸವಗಳಲ್ಲಿ ಪ್ರವಚನಗಳನ್ನು ನೀಡುತ್ತಿದ್ದರು. ಉತ್ತರ ದಕ್ಷಿಣಭಾರತಯಾತ್ರೆಗಳನ್ನೆಲ್ಲ ಮಾಡಿದ್ದು ತಮ್ಮ ಸದಾಚಾರಸಾಧನಾನುಷ್ಠಾನಗಳಿಂದ ಉಳಿದವರಿಗೆ ಆದರ್ಶರಾಗಿದ್ದವರು.

**ಶ್ರೀ ಗರಡಿ ರಾಚಪ್ಪನವರು :** ಇವರು ಬೆಂಗಳೂರಿನವರು. ಬಾಲ್ಯದಿಂದಲೂ ಸಾಧುಸಂತರ ಸಂಗ, ದರ್ಶನಲಾಭಗಳನ್ನು ಪಡೆದವರು. ಇಡೀ ಭಾರತ ದೇಶವನ್ನೆಲ್ಲ ಒಂದುಬಾರಿ ಸುತ್ತಿದರು. ಬೊಂಬಾಯಿಯಲ್ಲಿ ಒಂದು ಬಾರಿ ಮಹಾತ್ಮ ಗಾಂಧಿಯವರನ್ನು ಕಂಡಿದ್ದರಂತೆ. ಮುಂದೆ ಬೆಂಗಳೂರಿನಲ್ಲಿಯೇ ಶ್ರೀ ಜವಳಿ ಚಿಕ್ಕಲಿಂಗಣ್ಣ ಸ್ವಾಮಿಗಳ ಸಂಗವೂ ಇವರಿಗೆ ದೊರಕಿತು. ಅವರ ಮೂಲಕ ಶ್ರೀ ಕೃಷ್ಣಸ್ವಾಮಿ ಅಯ್ಯರ್‌ರವರ ಹೆಸರು ಕೇಳಿ ಅವರನ್ನು ಭೇಟಿ ಮಾಡಿದರು. ಕೊನೆಗೆ ಅಯ್ಯರ್‌ರವರ ಪ್ರೇರಣೆಯಂತೆ ರಾಯರನ್ನು ಕಂಡಾಗ ರಾಯರ ವಿಚಾರಸರಣಿಯು ಇವರಿಗೆ ಬಹಳ ಚೆನ್ನಾಗಿ ಹಿಡಿಸಿತು. ಮುಂದೆ ರಾಯರ ಬಳಿಯಲ್ಲಿಯೇ ''ಉಪದೇಶಸಾಹಸ್ರಿ''ಯನ್ನು ಓದಿ ಕನ್ನಡದಲ್ಲಿ ಅದನ್ನು ಬರೆದುಕೊಂಡು ಮತ್ತು ಬರೆಯಿಸಿ ಅದರ ಪ್ರಕಟನೆಯ ವೆಚ್ಚವನ್ನೆಲ್ಲ ತಾವೇ ವಹಿಸಿಕೊಂಡು ಕಾರ್ಯಾಲಯದ ಕೆಲಸಗಳಿಗೆ ಆಶ್ರಯದಾತರಾದರು. ಈ ಮಹನೀಯರು ಇಂಗ್ಲಿಷ್ ಹಾಗು ಸಂಸ್ಕೃತ ಭಾಷೆಯ ಕೆಲವು ವೇದಾಂತ ಗ್ರಂಥಗಳನ್ನು ಕಾರ್ಯಾಲಯದ ಪುಸ್ತಕಭಂಡಾರಕ್ಕೆ ದಾನಮಾಡಿರುತ್ತಾರೆ. ಇವರು 21.11.1980ರಂದು ನಿಧನರಾದರು.

**ಶ್ರೀ ಹೊಂಬಳದ ದೇವರಾಯ ಕುಲಕರ್ಣಿಯವರು** ಧಾರವಾಡ ಜಿಲ್ಲಾ ಗದಗ ತಾಲ್ಲೂಕಿನ ಹೊಂಬಳ ಎಂಬ ಸ್ಥಳದವರು. 1941ನೆಯ ವರ್ಷದಿಂದ ವೇ|| ಅಗ್ನಿಹೋತ್ರಿ ಶಂಕರಭಟ್ಟರೆಂಬ ಮಹನೀಯರಲ್ಲಿ ಪಂಚದಶೀ ಮುಂತಾದ ಕೆಲವು ಅರ್ವಾಚೀನವೇದಾಂತಗ್ರಂಥಗಳನ್ನು ಅಭ್ಯಾಸಮಾಡಿ ಉತ್ತರಾದಿಪದ್ಧತಿಯ ಸಂಗೀತದಲ್ಲೂ ಪರಿಶ್ರಮವನ್ನು ಹೊಂದಿ ನಾಚಿಕೇತಾಖ್ಯಾನ - ಮುಂತಾದ ಅಧ್ಯಾತ್ಮ ಹರಿಕಥೆಗಳನ್ನೂ ಉಪನ್ಯಾಸಗಳನ್ನೂ ಮಾಡುತ್ತಿದ್ದರು. ಕಾರ್ಯಾಲಯದೊಡನೆ ಹಾಗೂ ಶ್ರೀಶ್ರೀಗಳವರೊಡನೆ ಸಂಬಂಧವು ಬೆಳೆದಂತೆಲ್ಲ ವೇದಾಂತ ವಿಚಾರವಾಗಿ ಗುರುಗಳಲ್ಲಿ ಸಮಯಾನುಸಾರ ಚರ್ಚಿಸಿ ಶಾಂಕರವೇದಾಂತದ ಒಳಮರ್ಮವನ್ನು ಅರಿತುಕೊಂಡರು. ನಿಜವಾದ ಶಾಂಕರಪ್ರಕ್ರಿಯೆಯನ್ನು ಅರಿಯಬೇಕಾದರೆ ಅವರ ಮೂಲಭಾಷ್ಯವನ್ನೇ ಓದಬೇಕೆಂಬುದು ಮನದಟ್ಟಾದಮೇಲೆ ಕನ್ನಡದಲ್ಲಿ ಶ್ರೀಶ್ರೀಗಳವರು ಬರೆದಿದ್ದ ಪ್ರಸ್ಥಾನತ್ರಯಭಾಷ್ಯಗಳನ್ನು ಅಭ್ಯಾಸ ಮಾಡಿದರು. ದೈವಯೋಗದಿಂದ ಇವರ ಜೀವನವು ಪ್ರವಚನೋಪನ್ಯಾಸಗಳ ಮೂಲಕವೇ ನಡೆಯಬೇಕಾದಂಥ ಪರಿಸ್ಥಿತಿಯು ಒದಗಿದಾಗ ಸುಮಾರು 1957ರಿಂದ ಬೆಂಗಳೂರು ನಗರದಲ್ಲೇ ನಿಂತು 'ಪರಮಾರ್ಥವಿಚಾರಸಂಘ'ವೆಂಬ ಸಂಸ್ಥೆಯ ಆಶ್ರಯದಲ್ಲಿ ಕ್ರಮವಾಗಿ ಭಾಷ್ಯ ಪಾಠಗಳನ್ನೂ ಪ್ರವಚನಗಳನ್ನೂ ನಡೆಸಲಾರಂಭಿಸಿದರು. ಆಗಾಗ್ಗೆ ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿದ್ದ ಶ್ರೀಶ್ರೀಗಳವರ ಕನ್ನಡ, ಸಂಸ್ಕೃತ, ಇಂಗ್ಲಿಷು ಗ್ರಂಥಗಳನ್ನೆಲ್ಲ ಓದಿ ಅರಗಿಸಿಕೊಂಡು ಶ್ರೀಶ್ರೀಗಳವರ ವಿಚಾರಸರಣಿಯನ್ನು ಚೆನ್ನಾಗಿ ಅಭ್ಯಸಿಸಿ ಗುರುಗಳ ಸಂದೇಶಗಳನ್ನು ಜನರಿಗೆ ಮುಟ್ಟಿಸುವ ಮೆಚ್ಚಿನ ಶಿಷ್ಯರಾದರು. ಕನ್ನಡದೇಶ ಮಾತ್ರವಲ್ಲದೆ ಬೊಂಬಾಯಿ, ಮದ್ರಾಸು, ಆಂಧ್ರಪ್ರದೇಶಗಳಲ್ಲೂ ಸುತ್ತಾಡಿ ಶ್ರೀಶ್ರೀಗಳವರ ಜ್ಞಾನಗಂಗೆಯನ್ನು ಜಿಜ್ಞಾಸುಗಳಿಗೆ ಪಾನಮಾಡಿಸಿದರು. ಬೆಂಗಳೂರಿನಲ್ಲಿ ಶಾಖಾಕಾರ್ಯಾಲಯವು ಸ್ಥಾಪಿತವಾಗುವ ಮಟ್ಟಕ್ಕೆ ಶಿಷ್ಯವರ್ಗದವರನ್ನೂ ಅಭಿಮಾನಿಗಳನ್ನೂ ತಯಾರಿಸಿ ಶ್ರೀಶ್ರೀಗಳವರ ವೇದಾಂತ ವಿಚಾರಸರಣಿಯನ್ನೂ ಗ್ರಂಥ ರಾಶಿಗಳನ್ನೂ ಅತ್ಯಂತ ಜನಪ್ರಿಯಗೊಳಿಸಿದ ಕೀರ್ತಿಯು ಇವರಿಗೆ ಸಲ್ಲಬೇಕು. 'ಬ್ರಹ್ಮಜ್ಞವಚನ'ಗಳೆಂಬ ತ್ರಿಪದಿಯಪದ್ಯಕಾವ್ಯ , ಶಂಕರಸಂಸ್ಮರಣ, ಗೀತಾಲಾವಣಿ - ಮುಂತಾದ ಜನಪ್ರಿಯಗ್ರಂಥಗಳನ್ನು ಬರೆದು ಗುರುಗಳ ಕೀರ್ತಿಯನ್ನು ಉನ್ನತಮಟ್ಟಕ್ಕೇರಿಸಿ 'ಬ್ರಹ್ಮಜ್ಞಕವಿ' ಎಂಬ ಗೌರವವನ್ನು ಸಂಪಾದಿಸಿದರು. ವೇದಾಂತ ಸೌರಭ - ಮೇರುಕೃತಿ ; ಈ ಮಹನೀಯರು ಗುರುಗಳ ಉತ್ಸವಮೂರ್ತಿಗಳಾಗಿದ್ದರು. ಶ್ರೀಚಿತ್ರಾಪುರಮಠದ ಧರ್ಮಪ್ರಚಾರಕರಾಗಿ ನಿಯಮಿತರಾಗಿದ್ದು ಮದ್ರಾಸು, ಡೆಲ್ಲಿ, ಬೊಂಬಾಯಿ, ಮಂಗಳೂರು, ಧಾರವಾಡ, ಹುಬ್ಬಳ್ಳಿ ಮುಂತಾದ ಸ್ಥಳಗಳಲ್ಲಿ ಪ್ರವಚನಗಳನ್ನು ನೀಡುತ್ತಿದ್ದರು. ಮುಖ್ಯವಾಗಿ ಶ್ರೀಶ್ರೀಗಳವರ ಆಂಧ್ರ

ಪ್ರವಾಸದಲ್ಲಿ, ಅವರಿಗೆ ವಿಶೇಷವಾಗಿ ನೆರವಾಗಿ, ಆ ಅತ್ಯಲ್ಪಕಾಲದಲ್ಲಿಯೇ ತೆಲುಗು ಭಾಷೆಯನ್ನು ಕಲಿತು, ಈ ಪ್ರವಾಸದ ಹಲವೆಡೆ ತೆಲುಗಿನಲ್ಲಿ ಪ್ರವಚನಗಳನ್ನೂ ನೀಡಿದರು. ಶ್ರೀಶ್ರೀಗಳವರ, ಕಾರ್ಯಾಲಯದ ಹೆಸರು ಬೆಳೆಯಲು, ಇವರ ಕೊಡುಗೆ ಅಮೂಲ್ಯವಾದುದು. 7.12.93ರಲ್ಲಿ ಇಹಲೋಕತ್ಯಜಿಸಿದ ಇವರು ಕಾರ್ಯಾಲಯದ ಸ್ಮರಣೀಯರು. ಶ್ರೀ ದತ್ತಗುರುವಿನ ಉಪಾಸನೆಯಲ್ಲೇ ಮನಸ್ಸನ್ನು ತೊಡಗಿಸಿದ್ದ ಈ ಅಸೀಮ ದತ್ತಭಕ್ತರ ವಿಗ್ರಹವನ್ನು ಆಂಧ್ರಪ್ರದೇಶದ ಸೀತಾಪುರದಲ್ಲಿ ಶ್ರೀಪಾದ ಶ್ರೀವಲ್ಲಭ ಸಂಸ್ಥಾನದವರು ಸ್ಥಾಪಿಸಿದ್ದಾರೆ.

**ವೇ। ಬ್ರ। ಶ್ರೀ ನುಲೇನೂರು ಶ್ರೀನಿವಾಸಮೂರ್ತಿಗಳು** ಚಿಕ್ಕಂದಿನಿಂದಲೂ ಅಧ್ಯಾತ್ಮಮಾರ್ಗದಲ್ಲೇ ಬೆಳೆದು ಬಂದವರು. ಉ।। ಕನ್ನಡ ಜಿಲ್ಲಾ ಬನವಾಸಿಯ ದತ್ತಾತ್ರೇಯಯೋಗೀಂದ್ರ ಸರಸ್ವತೀಪರಮಹಂಸಸದ್ಗುರುಗಳವರ ಶಿಷ್ಯರು. ಗುರುಗಳ ಆಜ್ಞಾನುಸಾರ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ವ್ಯವಹಾರದಲ್ಲಿ ಹೆಚ್ಚು ಆಸಕ್ತರಾಗದೆ ಅಂತರ್ಮುಖರಾಗಿದ್ದುಕೊಂಡು ಅಧ್ಯಾತ್ಮ ಸಾಧನಗಳಿಂದ ಆತ್ಮೋನ್ನತಿಯನ್ನು ಸಂಪಾದಿಸಿಕೊಂಡಿದ್ದರು. ಚಿತ್ರದುರ್ಗ ಜಿಲ್ಲಾ ಹೊಳಲ್ಕೆರೆ ತಾ।। ಆರ್. ನೂಲೇನೂರು ದತ್ತಾಶ್ರಮದ ಸಂಚಾಲಕರೂ ಆಗಿದ್ದರು. ತಮ್ಮ ಗುರುಗಳ ಜೀವನಚರಿತ್ರೆಯನ್ನೂ ಬರೆದು ಪ್ರಕಟಿಸಿದ್ದಾರೆ. ಇವರು ರಚಿಸಿದ 'ದೇವರು ಯಾರು ?' ಎಂಬ ಗ್ರಂಥವು ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ಶ್ರೀಶ್ರೀಗಳವರಿಂದ ವಿಮರ್ಶಿಸಲ್ಪಟ್ಟಿತು. ಅಲ್ಲಿಂದ ಕಾರ್ಯಾಲಯದೊಡನೆ ಇವರ ಸಂಬಂಧವು ಪ್ರಾರಂಭವಾಯಿತು. ಅನಂತರ ಇವರು ರಚಿಸಿದ ಗ್ರಂಥಗಳಾದ (1) ಸಮಗ್ರಸಾಧನ 1-2ನೆಯ ಭಾಗಗಳು. (2) ಚಿಚ್ಛಕ್ತಿಪ್ರಭಾವ ಈ ಗ್ರಂಥಗಳೂ ಶ್ರೀಶ್ರೀಗಳವರ ವಿಮರ್ಶೆಗೆ ಪಾತ್ರವಾದವು. 'ಚಿಚ್ಛಕ್ತಿಪ್ರಭಾವ'ವೆಂಬ ಇವರ ಅಮೋಘಗ್ರಂಥಕ್ಕೆ ಶ್ರೀಶ್ರೀಗಳವರು ತಮ್ಮ ಆಶೀರ್ವಾದವನ್ನು ದಯಪಾಲಿಸಿ ಶ್ರೀಯುತರ ಪ್ರತಿಭೆಯನ್ನು ಮೆಚ್ಚಿಕೊಂಡಿದ್ದಾರೆ. ಅನಂತರ ಇವರು ಸ್ವಾಮಿ ರಾಮತೀರ್ಥರವರ **'In Woods of God-Realisation'** ಎಂಬ ಗ್ರಂಥವನ್ನು 'ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ' ಎಂಬ ಹೆಸರಿನಿಂದ ಮೂರು ಭಾಗಗಳ ಕನ್ನಡ ಅನುವಾದವನ್ನು ''ರಮಣಮಹರ್ಷಿಗಳೊಡನೆ ದಿನದಿನವೂ'', ''ರಾಮತೀರ್ಥರ ಜೀವನಚರಿತ್ರೆ'', ''ಚೂಡಾಲಾಖ್ಯಾನ'', ''ಶ್ರೀರಾಮ ಹೃದಯ'' – ಎಂಬ ಗ್ರಂಥಗಳನ್ನೂ ಅವರ ಗುರುಗಳಾದ ಬನವಸಿಯ ದತ್ತಾತ್ರೇಯ ಯೋಗಿಂದ್ರರ ಚರಿತ್ರೆಯನ್ನು ಗದ್ಯದಲ್ಲೂ, ಪದ್ಯದಲ್ಲೂ, ಬರೆದರು. ''ಹೊಸ ಮನಸ್ಸು'', ''ಬಿಡುಗಡೆ'' ಎಂಬ ನವೀನರೀತಿಯ ಅಧ್ಯಾತ್ಮಗ್ರಂಥಗಳನ್ನೂ ಬರೆದು ಸುಪ್ರಸಿದ್ಧರಾದರು. 1965ರಿಂದ ಶ್ರೀ।। ದೇವರಾಯ ಕುಲಕರ್ಣಿಯವರೊಡನೆ ಶ್ರೀಶ್ರೀಗಳವರ ಮತ್ತು ಇವರ ಸಂಬಂಧವು ಹೆಚ್ಚು

ವ್ಯಾಪಕವಾಗಲಾರಂಭಿಸಿತು. ಶ್ರೀಶ್ರೀಗಳವರ ವಿಚಾರ ಸರಣಿಯನ್ನು ಮನನ-ಮಾಡುತ್ತಾ ತಮ್ಮ ವಿಚಾರಸರಣಿಗೂ ಅನುಭವಕ್ಕೂ ಒರೆ ಹಚ್ಚಿ ಕಡೆಗೆ ಶ್ರೀಶ್ರೀಗಳವರ ಅದ್ಭುತ ವಿಚಾರಶಕ್ತಿಯನ್ನೂ ಶಾಂಕರವೇದಾಂತಪ್ರಪಂಚದಲ್ಲಿ ಅವರು ಉಂಟು ಮಾಡಿರುವ ಮಹಾಕ್ರಾಂತಿಯನ್ನೂ ಕಂಡು ಗುರುಗಳಲ್ಲಿ ತುಂಬ ಭಕ್ತಿ ಶ್ರದ್ಧೆಯುಳ್ಳವರಾದರು. ಅಲ್ಲಿಂದ ಮುಂದೆ ಯಾವಾಗಲೂ ಶ್ರೀಶ್ರೀಗಳವರ ಗುಣಗಾನಮಾಡುತ್ತಾ ಸಮಯವು ದೊರೆತಾಗಲೆಲ್ಲ ತಮ್ಮ ಆಪ್ತರಿಗೆ ಗುರುಗಳ ಅಸಾಧಾರಣ ಯೋಗ್ಯತೆಯನ್ನು ತಿಳಿಸುತ್ತಾ ತಮ್ಮ ಶ್ರೀಮಂತಮಿತ್ರರ ಮೂಲಕ ಕಾರ್ಯಾಲಯಕ್ಕೂ ಶ್ರೀಶ್ರೀಗಳವರ ಸೇವೆಗೂ ನೆರವಾಗುತ್ತಾ ಬಂದರು. 1969ರಿಂದ ಶಾಖಾ ಕಾರ್ಯಾಲಯವು ಬೆಂಗಳೂರಿನಲ್ಲಿ ಪ್ರಾರಂಭವಾಗಿ ಗುರುಗಳು ಬೆಂಗಳೂರಿನಲ್ಲೇ ನೆಲಸಲು, ಸದವಕಾಶವನ್ನೂ ವಿಶೇಷ ನೆರವನ್ನೂ ಕಲ್ಪಿಸಿದ ಈ ಮಹನೀಯರು ಯಾವಾಗಲೂ ಶಾಖಾಕಾರ್ಯಾಲಯದ ಪುರೋಭಿವೃದ್ಧಿಯನ್ನೇ ಮುಖ್ಯಗುರಿಯಾಗಿಟ್ಟುಕೊಂಡು ತಮ್ಮ ಅಧ್ಯಾತ್ಮಸಾಧನಬಲದಿಂದ ದೊರೆತ ಶಕ್ತಿಯನ್ನೆಲ್ಲ ವಿನಿಯೋಗಿಸಿ ಉದಾರದಾನಿಗಳಿಗೆ ಸಮಯಾನುಸಾರ ಪ್ರೇರೇಪಿಸುತ್ತಾ ಆರ್ಥಿಕವಾಗಿ ಶಾಖಾಕಾರ್ಯಾಲಯವು ಚೆನ್ನಾಗಿ ಪುಷ್ಟವಾಗುವಂತೆ ಬೆಳೆಸಿದರು. ಇಷ್ಟೇ ಅಲ್ಲದೆ ಈ ಮಹನೀಯರು ಕಾರ್ಯಾಲಯದ ಸಂಬಂಧವುಳ್ಳ ಶ್ರೀಶ್ರೀಗಳವರ ಆಶ್ರಿತರಾದವರ, ಹಾಗೂ ಬಡವರಾದ ಅರ್ಹರಾದವರ ವಿಷಯದಲ್ಲೂ ಉದಾರಭಾವದಿಂದ ವರ್ತಿಸುತ್ತಾ ಔದಾರ್ಯದ ಹಾಗೂ ಪರೋಪಕಾರಬುದ್ಧಿಯ ಜೀವಂತಮೂರ್ತಿಯಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಇಂಥ ಮಹನೀಯರಿಗೆ ಕೂಡ್ಲಿ ಶೃಂಗೇರಿ ಜಗದ್ಗುರುಪೀಠದ ಉತ್ತರಾಧಿಕಾರಿಗಳಾಗುವ ಒಂದು ಅವಕಾಶವು ಒದಗಿಬಂದಿದ್ದು ದೈವಯೋಗದಿಂದ ಅದು ತಪ್ಪಿಹೋಯಿತು. ಆದರೆ ಅದು ಪ್ರಾಪ್ತವಾಗುವ ಸನ್ನಿವೇಶವಿದ್ದಾಗಲೂ ನಿವೃತ್ತಿಯಾದಮೇಲೂ ಇವರು ಮಾತ್ರ ಸಮಬುದ್ಧಿಯಿಂದಲೇ ಇದ್ದುಕೊಂಡು ಯಾವ ಹರ್ಷವಿಷಾದಗಳಿಗೂ ಒಳಗಾಗದೆ ತಮ್ಮ ಸ್ಥಿರಪ್ರಜ್ಞತ್ವವನ್ನೇ ವ್ಯಕ್ತಗೊಳಿಸಿದರು. ಅಧ್ಯಾತ್ಮನಿಷ್ಠೆ, ಆರ್ಜವ, ಸಮತ್ವ, ದಯೆ, ನಿಃಸ್ಪೃಹತೆ ಮುಂತಾದ ದೈವೀಗುಣಗಳಿಂದ ವಿರಾಜಮಾನರಾದ ಈ ಮಹನೀಯರು ಕಾರ್ಯಾಲಯದ ಅಭಿಮಾನಿಗಳಾಗಿ ಶ್ರೀಶ್ರೀಗಳವರಿಗೆ ನೆಚ್ಚಿನ ಅನುಯಾಯಿಗಳಾಗಿದ್ದುದೂ ಒಂದು ಸುಯೋಗವೆ, ಅಧ್ಯಾತ್ಮದಲ್ಲೇ ಜೀವನವನ್ನು ಸವೆಯಿಸಿ **28.5.89**ರಲ್ಲಿ ಅದರಲ್ಲೇ ಲೀನವಾದರು.

**ಹೊಸಕೆರೆ ಅನಂತಮೂರ್ತಿಶಾಸ್ತ್ರಿಗಳು** ಹೊಸಕೆರೆ ಚಿದಂಬರಯ್ಯನವರ ಪುತ್ರರು. ಪೂಜ್ಯ ಶಾಸ್ತ್ರಿಗಳನ್ನು ನಾನು ಪರಿಚಯ ಮಾಡಿಕೊಳ್ಳುವ ವೇಳೆಗೆ ಅವರು ಹಾಸನದಲ್ಲಿ ಹೈಸ್ಕೂಲಿನಲ್ಲಿ ಪಂಡಿತರಾಗಿದ್ದರು. ಆಗಾಗ್ಗೆ ಕಾರ್ಯಾಲಯದಲ್ಲಿ

ನಡೆಯುತ್ತಿದ್ದ ಅನುಷ್ಠಾನಗಳಿಗೆ ಬಂದು ಶ್ರೀಗಳವರ ಸಮ್ಮುಖದಲ್ಲಿ ಉಪನ್ಯಾಸಗಳನ್ನು ಅವರು ನಡೆಯಿಸುತ್ತಿದ್ದರು. ಪಾರಾಯಣ ಪೂಜಾದಿಗಳಲ್ಲಿಯೂ ಭಾಗವನ್ನುವಹಿಸು ತ್ತಿದ್ದರು. ಶ್ರೀಶ್ರೀಗಳವರು ನಡೆಯಿಸುತ್ತಿದ್ದ ಶಂಕರಸಪ್ತಾಹ ಮಹೋತ್ಸವಗಳಲ್ಲಿ ಶ್ರೀಯುತರ ಪ್ರವಚನಗಳು ಕಡ್ಡಾಯವಾಗಿ ಇರುತ್ತಿದ್ದವು. ಅದರಲ್ಲಿಯೂ ಗಡುಚಾ ದಂಥ ಶಾಸ್ತ್ರಾರ್ಥವಿಚಾರಗಳನ್ನೊಳಗೊಂಡ ಭಾಗಗಳನ್ನೇ ಶ್ರೀಗಳವರು ಪ್ರವಚನಕ್ಕೆ ಅವರಿಗೆ ಕೊಡುತ್ತಿದ್ದರು. ಕೆಲವು ಕಾಲಾನಂತರ ಶ್ರೀಯುತರು ಬೆಂಗಳೂರಿನಲ್ಲಿರುವ ಶ್ರೀ ಚಾಮರಾಜೇಂದ್ರ ಸಂಸ್ಕೃತಮಹಾಪಾಠಶಾಲೆಗೆ ತರ್ಕ ವಿದ್ವಾಂಸರಾಗಿ ದಯ ಮಾಡಿಸಿ ಅಲ್ಲೇ ಪ್ರೊಫೆಸರ್ ಆಗಿಯೂ ಕೆಲಸಮಾಡಿ ನಿವೃತ್ತಿ ಹೊಂದಿದರು. ಬೆಂಗಳೂರಿನಲ್ಲಿದ್ದಾಗಲೂ ಕಾರ್ಯಾಲಯದ ಅನುಷ್ಠಾನಗಳಿಗೆ ಆಗಾಗ್ಗೆ ಬರುತ್ತಿದ್ದರು. ಹೀಗೆ ನನಗೆ ಅವರ ಪರಿಚಯವು ಉಂಟಾಯಿತು.

ಶ್ರೀ ಶಾಸ್ತ್ರಿಗಳು ಬಾಲ್ಯದಿಂದಲೂ ಶ್ರೀಗಳವರಿಗೆ ಪರಿಚಿತರು. ಶ್ರೀಗಳವರ ವಿಷಯಕ್ಕೆ ಶಾಸ್ತ್ರಿಗಳಿಗೆ ಪಿತೃ-ಗುರುಬುದ್ಧಿಗಳು ದೃಢವಾಗಿದ್ದವು. ವಿದ್ಯಾಭ್ಯಾಸಕಾಲದಲ್ಲಿ ಶ್ರೀ ಶಾಸ್ತ್ರಿಗಳು ಗಳಿಸಿದ ಸಾಹಿತ್ಯ-ನ್ಯಾಯ-ವೇದಾಂತ-ವಿದ್ವತ್ ಪದವಿಗಳೇನೂ ಸಾಮಾನ್ಯವಾದವುಗಳಲ್ಲ. ಆಗಿನ ಕಾಲಕ್ಕೆ ಶಾಸ್ತ್ರದ ಚೌಕಟ್ಟಿನಂತೆ ಆಳವಾದ ಅಧ್ಯಯನ ಮಥನಾದಿಗಳಿಂದ ಅವರು ತಾವು ಕಲಿತಿದ್ದ ಪ್ರತಿಯೊಂದು ಶಾಸ್ತ್ರವನ್ನೂ ಕರತಲಾ ಮಲಕವಾಗಿ ಮಾಡಿಕೊಂಡಿದ್ದರು. ಅವರ ಪಾಂಡಿತ್ಯಪ್ರತಿಭೆಗೆ ತಕ್ಕಂತೆ ಶ್ರೀ ಶೃಂಗೇರಿ ಜಗದ್ಗುರುಗಳು ಏರ್ಪಡಿಸಿರುವ 'ಪಂಡಿತಪ್ರವರ' ಸ್ನಾತಕೋತ್ತರ ಪದವಿಯ ವ್ಯಾಸಂಗಕ್ಕೆ ಅವಕಾಶವನ್ನು ದಯಪಾಲಿಸಿದರು. ಶಾಸ್ತ್ರಿಗಳು ಅಲ್ಲಿ ತಮ್ಮ ವ್ಯಾಸಂಗವನ್ನು ಪೂರ್ಣಗೊಳಿಸಿ 'ಪಂಡಿತಪ್ರವರ'ರಾದರು.

ಮಾಧ್ವ ಮಠಾಧಿಪತಿಗಳೂ ಇವರ ತರ್ಕಶಾಸ್ತ್ರಪಾಂಡಿತ್ಯಕ್ಕೆ ಮನಸೋತು ತಮ್ಮ ವಿದ್ವತ್‌ಸಭೆಗಳಿಗೆ ಇವರನ್ನು ಕರೆಯಿಸಿ ವಾಕ್ಯಾರ್ಥಗಳನ್ನು ಏರ್ಪಡಿಸಿ ಗೌರವಿಸು ತ್ತಿದ್ದರು. ಶ್ರೀಯುತರು ಸರ್ಕಾರಿ ಕೆಲಸದಿಂದ ನಿವೃತ್ತರಾದ ಮೇಲೆ ಕೆಲವು ಕಾಲ ಶ್ರೀಸಿದ್ಧಗಂಗಾ ಮಠಾಧೀಶ್ವರರು ಸ್ಥಾಪಿಸಿರುವ ಸಂಸ್ಕೃತಕಾಲೇಜಿನಲ್ಲಿಯೂ ತರ್ಕ ಶಾಸ್ತ್ರದ ಉಪಾಧ್ಯಾಯರಾಗಿ ಕೆಲಸಮಾಡಿದರು. ಹೀಗೆ ತಮ್ಮ ವಿದ್ವತ್ ಪ್ರತಿಭೆಯಿಂದ 'ವಿದ್ವಾನ್ ಸರ್ವತ್ರ ಪೂಜ್ಯತೇ' ಎಂಬ ಆರ್ಯೋಕ್ತಿಯನ್ನು ಸಫಲಗೊಳಿಸಿದ್ದರು. ಜೀವನದ ಕಡೆಯ ಭಾಗದಲ್ಲಿ ಅವರು ತಮ್ಮ ಸ್ವಗೃಹವನ್ನೇ ಸಂಸ್ಕೃತಪಾಠಶಾಲೆಯಾಗಿ ಮಾಡಿಕೊಂಡು ನೂರಾರು ವಿದ್ಯಾರ್ಥಿಗಳಿಗೆ ಸಂಸ್ಕೃತ ಭಾಷಾಜ್ಞಾನದಿಂದಾರಂಭಿಸಿ ಶಾಸ್ತ್ರಪಾಠಗಳವರೆಗೂ ಹೇಳಿಕೊಟ್ಟು ವಿದ್ಯಾದಾನಮಾಡಿದರು.

ಕೇವಲ ಶಾಸ್ತ್ರಪಾಂಡಿತ್ಯದಲ್ಲಿಯೇ ತೃಪ್ತರಾಗದೆ ಅಂತರಂಗದಲ್ಲಿ ವೇದಾಂತ ಶಾಸ್ತ್ರದ ಹೆಚ್ಚುಗಾರಿಕೆಯನ್ನು ಮನಗಂಡು ಶ್ರೀಶ್ರೀಗಳವರ ವೇದಾಂತ ಚಿಂತನಕ್ರಮ ದಿಂದ ಆಕರ್ಷಿತರಾಗಿ ಬಹುಕಾಲ ತತ್ತ್ವಮನನಮಾಡಿ ಪಕ್ವವಾಗಿದ್ದರು. ಇವರ ಪಾಂಡಿತ್ಯವು 'ಬಾಲ್ಯೇನ ತಿಷ್ಠಾಸೇತ್' ಎಂಬ ಸ್ಥಿತಿಗೆ ಬಂದಿತ್ತು, ಎಂದರೆ ಶಾಸ್ತ್ರಾಧ್ಯ ಯನಗಳೆಲ್ಲವೂ ಅಂತರಂಗದ ಶಮದಮಾದಿಗಳು, ಪ್ರತ್ಯಗ್‌ದೃಷ್ಟಿಯ ಫಲವಾಗಿ ಚೆನ್ನಾಗಿಮಾಗಿದ್ದು ನಿಜವಾದ ವೇದಾಂತದ ಮರ್ಮವನ್ನು ತಿಳಿಸಲು ಇವರಿಗೆ ಸಹಾಯಕವಾಗಿದ್ದವು. ಆದ್ದರಿಂದಲೇ ವಿನಯವೂ ವಿವೇಕವೂ ಮೌನವೂ ಗಾಂಭೀರ್ಯವೂ ಇವರಲ್ಲಿ ತುಂಬಿತುಳುಕುತ್ತಿತ್ತು. ತಾನು ವಿದ್ಯಾವಂತನೆಂಬ ಅಹಂಕಾರದ ಲವಲೇಶವೂ ಶಾಸ್ತ್ರಿಗಳಲ್ಲಿರಲಿಲ್ಲ. ನಿರಾಡಂಬರವಾದ ಆಕೃತಿ, ವೇಷ ಸೌಶೀಲ್ಯ, ಶಾಂತಿದಾಂತ್ಯಾದಿಗಳ ಗನಿಯಾಗಿದ್ದ ಇವರನ್ನು ನೋಡಿದಾಗಲೆಲ್ಲ 'ಶಂಭುರಂಬರಹೀನೋಽಪಿ ಸರ್ವಜ್ಞಃ ಕಿಂ ನ ವೇತ್ತ್ಯಸೌ' ಎಂಬ ಉಕ್ತಿಯು ನೆನಪಾಗುತ್ತಿತ್ತು. ಎಲೆ ಮರೆಯ ಕಾಯಿಯಂತೆಯೂ ನೀರಿನಲ್ಲಿನ ತಾರೆಯ ಎಲೆಯಂತೆಯೂ ಜೀವನವನ್ನು ಸಾಗಿಸಿದ ಈ ಮಹಾತ್ಮರು ಎಂದೂ ಆಶಾಪಾಶಗಳಿಗೆ ಸಿಲುಕಿದವರಲ್ಲ. ಪಾಂಡಿತ್ಯವನ್ನು ಮಾರಿಕೊಂಡವರಲ್ಲ. ಶಾಸ್ತ್ರಪಾಂಡಿತ್ಯದ ಪೂರ್ಣ ಪ್ರಯೋಜನವನ್ನು ಪಡೆದಂಥ ನಿಜವಾದ ಪಂಡಿತ ಪ್ರಕಾಂಡರಿವರಾಗಿದ್ದರು.

ಶ್ರೀ ಶಾಸ್ತ್ರಿಗಳು ಮಾತ್ರ ತಮ್ಮ ತರ್ಕಪಾಂಡಿತ್ಯವನ್ನು ವೇದಾಂತದ ಒರೆಗಲ್ಲಿಗೆ ತಿಕ್ಕಿ ಅದರ ನಿಸ್ಸಾರತೆಯನ್ನರಿತು ಶ್ರೀಶ್ರೀಗಳವರ ಶಿಷ್ಯರಾಗಿಬಿಟ್ಟಿದ್ದರು. ಕೆಲವು ವೇಳೆ ಪಂಡಿತ ವರ್ಗದವರು ನಮ್ಮ ಶ್ರೀಗಳವರ ವಿಷಯಕ್ಕೆ ತರ್ಕದ ಚೌಕಟ್ಟನ್ನು ಅರಿಯದವರೆಂದೂ ಶಾಸ್ತ್ರಜ್ಞರಲ್ಲವೆಂದೂ ಭಾವಿಸಿ ಮಾತನಾಡಿದಾಗ ಶ್ರೀಯುತರು ಶ್ರೀಗಳವರ ವೇದಾಂತ ವಿಚಾರಸರಣಿಯನ್ನು ಪಂಡಿತರಿಗೆ ಒಪ್ಪಾಗುವ ಚೌಕಟ್ಟಿನಿಂದಲೇ ಮುಂದಿರಿಸಿ ಎಲ್ಲರನ್ನೂ ಬೆರಗುಮಾಡುತ್ತಿದ್ದರು. ಹೀಗೆ ಶುದ್ಧಶಾಂಕರ ಪ್ರಕ್ರಿಯೆಯ ಪರವಾಗಿ ನ್ಯಾಯವಾದಿ (ಅಡ್ವೋಕೇಟ್) ಗಳಾಗಿದ್ದು ಶ್ರೀ ಶಾಸ್ತ್ರಿಗಳು ಶ್ರೀಶ್ರೀಗಳವರ ಪಕ್ಷ ದವರಿಗೆ ಆಧಾರಸ್ತಂಭವಾಗಿದ್ದರು. ಹಾಗೆಯೇ ಶ್ರೀಶ್ರೀಗಳವರ ಸಂಸ್ಕೃತ ಬರವಣಿಗೆ ಗಳನ್ನೆಲ್ಲ ಶೋಧಿಸಿ ಯಾವ ಪಂಡಿತರೂ ಏನೂ ದೋಷಗಳನ್ನು ಕಂಡುಹಿಡಿಯದಂತೆ ಪರಿಷ್ಕರಿಸಿಕೊಡುತ್ತಿದ್ದರು. ತಾವೂ ಸ್ವತಃ ಕೆಲವು ಅಧ್ಯಾತ್ಮ ಲೇಖನಗಳನ್ನು ಬರೆದಿದ್ದರು.

ಶ್ರೀ ಶಾಸ್ತ್ರಿಗಳವರ ಅಂತ್ಯಕಾಲದ ವಿಷಯಕ್ಕೆ ಪ್ರತ್ಯಕ್ಷದರ್ಶಿಗಳಾದ ನಮ್ಮ ಬಂಧು ಗಳೊಬ್ಬರು ಬರೆದಿರುವದು ಹೀಗಿದೆ. "ಶ್ರೀರಾಮದೇವರು ನನ್ನನ್ನು ಕರೆಯುತ್ತಿದ್ದಾನೆ, ಮುಂದಕ್ಕೆ ನಡೆ-ಎಂದು ಬೆನ್ನನ್ನು ತಿವಿಯುತ್ತಿದ್ದಾನೆ....ಪುಸ್ತಕ, ಲೇಖನಗಳು...."

ಹೀಗೆ ಎನ್ನುತ್ತಿದ್ದರಂತೆ. ಕಡೆಗೆ ಅವರು ಬಹಳವಾಗಿ ವ್ಯವಸಾಯ ಮಾಡಿದ್ದ ಶ್ರೀಮದ್ಭಾಗವತ ಪುರಾಣವು ನೆನಪಿಗೆ ಬಂದಿರಬೇಕು. ಆ ಭಾಗವತದ ಶ್ಲೋಕಗಳನ್ನೇ ಹೇಳುತ್ತಿದ್ದರಂತೆ. ಅಂತಿಮವಾಕ್ಯವಾಗಿ "ಜಗತ್ ಶೂನ್ಯಮ್ ! ಅಹಂ ಬ್ರಹ್ಮಾಸ್ಮಿ" ಎಂದು ಹೇಳುತ್ತಾ ಕೊನೆಯುಸಿರನ್ನು ಎಳೆದರಂತೆ. ಇಂಥ ಅನುಸಂಧಾನವು ಜನ್ಮಜನ್ಮಾಂತರಗಳ ಅಭ್ಯಾಸದ ಫಲವಲ್ಲದೆ ಮತ್ತೇನಾಗಿದ್ದೀತು ! ಇವರು **4.11.79** ರಂದು ನಿಧನರಾದರು.

**ವೇ|| ಬ್ರ|| ಶ್ರೀ|| ಪರಕ್ಕಜೆ ಸುಬ್ರಹ್ಮಣ್ಯಭಟ್ಟರು :** ಇವರು ಮಂಗಳೂರು ಜಿಲ್ಲೆ ಬಂಟವಾಳ ತಾಲ್ಲೂಕಿನ ಕನ್ಯಾನಗ್ರಾಮದವರು. ಕಾಲೋಚಿತವೇದಪ್ರಯೋಗ ಭಾಗಗಳನ್ನು ಅಭ್ಯಾಸಮಾಡಿ ಸಂಸ್ಕೃತ ಭಾಷೆಯಲ್ಲಿ ಪಂಡಿತರಾಗಿ ಮದ್ರಾಸ್ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗಮಾಡಿ ವೇದಾಂತ ಶಿರೋಮಣಿ ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿದ್ದರು. ಸುಮಾರು 1954ನೆಯ ಇಸವಿಯಿಂದ ಕಾರ್ಯಾಲಯದೊಡನೆ ಸಂಬಂಧವನ್ನಿಟ್ಟುಕೊಂಡು ಆಗಾಗ್ಗೆ ಕಾರ್ಯಾಲಯಕ್ಕೆ ಬಂದು ಕೆಲವು ಕಾಲ ನಿಂತು ಶ್ರೀಶ್ರೀಗಳವರು ರಚಿಸುತ್ತಿದ್ದ ಸಂಸ್ಕೃತವೇದಾಂತ ಗ್ರಂಥಗಳನ್ನೆಲ್ಲ ಕೈಬರಹದ ಸ್ಥಿತಿಯಲ್ಲೇ ಪರಿಶೀಲಿಸಿ ಸೂಕ್ತಸಲಹೆಗಳನ್ನು ಕೊಡುತ್ತಾ ಕೆಲವುವೇಳೆ ಶ್ರೀಶ್ರೀಗಳವರೊಡನೆ ಚರ್ಚಿಸಿ ಅಭಿಪ್ರಾಯ ವಿನಿಮಯವನ್ನೂ ಮಾಡಿಕೊಂಡಿರುತ್ತಿದ್ದರು. ಇವರು ವ್ಯಾಕರಣ ಶಾಸ್ತ್ರದಲ್ಲಿ ತುಂಬ ಪರಿಶ್ರಮವುಳ್ಳವರು. ಶ್ರೀಶ್ರೀಗಳವರ ವೇದಾಂತ ಪ್ರಕ್ರಿಯೆಯನ್ನು ಚೆನ್ನಾಗಿ ಮನನಮಾಡಿದವರು. ಆಗಾಗ್ಗೆ ಕಾರ್ಯಾಲಯದಲ್ಲಿ ನಡೆಯುವ ಅನೇಕ ಅನುಷ್ಠಾನಗಳಲ್ಲಿ, ಸಪ್ತಾಹಗಳಲ್ಲಿ ಭಾಗವನ್ನುವಹಿಸಿ ಭಾಷ್ಯ ಪ್ರವಚನ, ಪುರಾಣಶ್ರವಣಾದಿಗಳನ್ನು ನಡೆಯಿಸಿದ್ದರು. ತಾವು ಕಾರ್ಯಾಲಯ ದಲ್ಲಿರುವ ಸಮಯಗಳಲ್ಲಿ ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೆಲವು ಸಾಹಿತ್ಯ ಪಾಠಗಳನ್ನೂ ಹೇಳಿಕೊಟ್ಟಿದ್ದರು. ತೀರ್ಥಹಳ್ಳಿ ತಾ|| ರಾಮಚಂದ್ರಾಪುರಮಠದಲ್ಲಿ ಸಂಸ್ಕೃತ ಪಂಡಿತರಾಗಿ ಆರುವರ್ಷಕಾಲ ಕೆಲಸ ಮಾಡಿದ್ದರು. ಬೊಂಬಾಯಿನ ಭಾರತೀಯ ವಿದ್ಯಾಭವನದಿಂದ ಪ್ರಕಟವಾಗುತ್ತಿರುವ 'ಸಂವಿತ್' ಎಂಬ ಸಂಸ್ಕೃತ ಪತ್ರಿಕೆಯಲ್ಲಿ 'ಅಧ್ಯಾಸ'ವಿಚಾರವಾಗಿ ಒಂದೆರಡು ಲೇಖನಗಳನ್ನು, ಬೊಂಬಾಯಿ ಯಿಂದ ಪ್ರಕಟವಾಗುತ್ತಿರುವ 'ಚಿಂತಾಮಣಿ' ಎಂಬ ಹಿಂದಿ ತ್ರೈಮಾಸಿಕ ಮತ್ತು ವಾರಣಾಸಿಯಿಂದ ಹೊರಡುವ 'ಗಾಂಡೀವ' ಎಂಬ ಸಂಸ್ಕೃತವಾರಪತ್ರಿಕೆ ಇವುಗಳ ಮೂಲಕವೂ ಲೇಖನಗಳನ್ನು ಪ್ರಕಟಿಸಿದ್ದರು. 'ಭಗವದ್ಗೀತೆಯ ನಿಗೂಢ ತತ್ತ್ವ' ಎಂಬ ಕನ್ನಡಪುಸ್ತಕವೊಂದನ್ನು ಬರೆದಿದ್ದರು. ಬ್ರಹ್ಮಚಾರಿಗಳಾಗಿಯೇ ಇದ್ದ ಇವರು ಕೊನೆಯವರೆಗೂ ಕಾರ್ಯಾಲಯದ ಸಂಬಂಧವನ್ನಿಟ್ಟುಕೊಂಡಿದ್ದು ಕೆಲವು

ಕಾಲಪಾಠಪ್ರವಚನಗಳನ್ನೂ ನಡೆಸಿದ್ದರು. ತಮ್ಮ ವಿದ್ವತ್ತಾವಿನಯಾದಿಗಳಿಂದ ಜನಪ್ರಿಯರಾಗಿದ್ದು **12-11-82**ರಂದು ದೈವಾಧೀನರಾದರು.

**ವೇ। ಮತ್ತೂರು ಸುಬ್ರಾಯಾವಧಾನಿಗಳು :** ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮದವರು; ತಕ್ಕಮಟ್ಟಿನ ಅನುಕೂಲಸ್ಥರೂ ಆಗಿದ್ದರು. ವೇದಾಧ್ಯಯನ ಸಂಪನ್ನರು. ಜ್ಯೋತಿಷ್ಯ , ವೈದ್ಯಶಾಸ್ತ್ರಗಳಲ್ಲಿಯೂ ಪರಿಶ್ರಮ ಹೊಂದಿದ್ದರು. ಶ್ರೀಶ್ರೀಗಳವರ ವೇದಾಂತವಿಚಾರಸರಣಿಯನ್ನು ಮೆಚ್ಚಿ, ಶಿಷ್ಯರಾಗಿ ಕೆಲವು ಸಪ್ತಾಹ ಗಳಲ್ಲಿ ಪುರಾಣಶ್ರವಣಾದಿಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದರು. 1938ರಿಂದ ಕಾರ್ಯಾಲಯದೊಡನೆ ಸಂಪರ್ಕವನ್ನು ಹೊಂದಿ ಉಪನಿಷತ್ತುಗಳು, ಗೀತೆ, ಬ್ರಹ್ಮ ಸೂತ್ರಗಳೆಂಬ ಪ್ರಸ್ಥಾನತ್ರಯ ಭಾಷ್ಯಗ್ರಂಥಗಳನ್ನು ಶ್ರೀಶ್ರೀಗಳವರಲ್ಲಿ ಅಭ್ಯಾಸ ಮಾಡಿದರು. ಇವರ ಮೂಲಕವೇ ಕಾರ್ಯಾಲಯದ ಸದ್ವ್ಯಾಪ್ತಿಯು ಈ ಪ್ರದೇಶ ದಲ್ಲೂ ಹರಡಿ, ಮತ್ತೂರು ಸಹ ಶ್ರೀಶ್ರೀಗಳವರ ಮುಖ್ಯವಿಚಾರಧಾರೆಗೆ ಕೇಂದ್ರ ವಾಯಿತು. ಇವರಿಂದಾಗಿ, ಇವರ ಕುಟುಂಬದ ಹಲವಾರು ಕಿರಿಯರೂ ಸಹ ಉತ್ತಮ ವೇದ-ವೇದಾಂತ ಪಟುಗಳಾಗಿದ್ದಾರೆ. ಇವರು **20.11.84**ರಲ್ಲಿ ಸಂನ್ಯಾಸ ಸ್ವೀಕರಿಸಿ, ಅದ್ವೈತಾನಂದ ಸರಸ್ವತಿಗಳೆಂದು ವಿರಾಜಮಾನರಾಗಿ **19-12-1999** ರಂದು ಭಾನುವಾರ ಮುಕ್ತರಾದರು. ಇವರ ಮಕ್ಕಳು, ಚಿ॥ ರಾಮಸ್ವಾಮಿ ಅವಧಾನಿಗಳು ಸುಮಾರು ಆರುವರ್ಷಗಳ ಕಾಲ ಪೂರ ಸಂಸ್ಕೃತವೇದಾಂತಪ್ರಸ್ಥಾನತ್ರಯಭಾಷ್ಯ ಗಳನ್ನು ಗುರುಗಳಲ್ಲಿ ಅಭ್ಯಾಸ ಮಾಡಿದರು. ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ವೇ॥ ಬ್ರ॥ ಶ್ರೀ ಚಂದ್ರಮೌಳಿ ಅವಧಾನಿಗಳು ಪಾಠಶಾಲೆಯನ್ನು ನಡೆಸುತ್ತಿದ್ದಾರೆ. ರಾಮಸ್ವಾಮಿಗಳ ಮಗನಾದ ಶ್ರೀ ಕೇಶವ ಅವಧಾನಿಗಳೂ ಇದೇ ಕಾರ್ಯದಲ್ಲಿ ಉತ್ತಮ ಮುನ್ನಡೆ ಯಶಸ್ಸು ಸಾಧಿಸಿದ್ದಾರೆ.

**ವೇ। ಮತ್ತೂರು ಅಶ್ವತ್ಥನಾರಾಯಣಾವಧಾನಿಗಳು** ಶ್ರೀ ಮತ್ತೂರು ಸುಬ್ರಾಯಾವಧಾನಿಗಳ ಪುತ್ರರು. ತಾ॥ 1965ರಲ್ಲಿ ಕಾರ್ಯಾಲಯಕ್ಕೆ ಬಂದು ಶ್ರೀಶ್ರೀಗಳವರ ಹತ್ತಿರ ಸುಮಾರು 2 ವರ್ಷ 6 ತಿಂಗಳು ಕಾಲ ಶಾಂಕರವೇದಾಂತ ಪಾಠವನ್ನು ಅಭ್ಯಾಸಮಾಡಿಕೊಂಡು ಹೋದರು. ಅನಂತರ ಕಾಲದಲ್ಲಿ ಶ್ರೀಶ್ರೀಗಳವರ ಕೊನೆಯವರೆಗೂ ಸಂಪರ್ಕವನ್ನಿಟ್ಟುಕೊಂಡಿದ್ದರು. ಈಗ ಮತ್ತೂರಿನಲ್ಲಿ ಪ್ರಧಾನ ಆಚಾರ್ಯರಾಗಿ ಸುಮಾರು 15 ಜನ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ವೇದಾಂತ ಪಾಠ ಗಳನ್ನು ಹೇಳುತ್ತಿದ್ದಾರೆ. ಇವರಿಂದ ಅನೇಕ ವಿದ್ಯಾರ್ಥಿಗಳು ವೇದಾಂತ ವಿದ್ಯಾಭ್ಯಾಸ ವನ್ನು ಮುಗಿಸಿಕೊಂಡು ಹೋಗಿರುತ್ತಾರೆ. ಇಂದಿಗೂ ಅನೇಕ ಕಡೆಗಳಲ್ಲಿ ವೇದಾಂತ ಪ್ರಚಾರವನ್ನೂ ಶ್ರೀಶ್ರೀಗಳವರ ಹೆಚ್ಚುಗಾರಿಕೆಯನ್ನೂ ಜನರಿಗೆ ತಿಳಿಸುತ್ತಲೇ ಇದ್ದಾರೆ.

ಮಾತಾಜಿ ಲಕ್ಷ್ಮೀದೇವಮ್ಮನವರು : ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರಲ್ಲಿ ಸುಮಾರು ಇಪ್ಪತ್ತೆರಡು ವರ್ಷಗಳ ಕಾಲ ಅವಿಚ್ಛಿನ್ನವಾಗಿ ಸೇವೆಯನ್ನು ಸಲ್ಲಿಸಿ, ಅನಂತರ ನಾಲ್ಕು ವರ್ಷಕಾಲ ಬೆಂಗಳೂರು ಕಾರ್ಯಾಲಯದಲ್ಲಿಯೇ ನೆಲೆಸಿದ್ದು, ಭಕ್ತರಿಗೆಲ್ಲ 'ಮಾತಾಜಿ'ಯವರಾಗಿದ್ದ ಶ್ರೀಮತಿಯವರ ಜೀವನವು ಒಂದು ದೊಡ್ಡ ತಪಸ್ಸಾಗಿತ್ತು. ತ್ಯಾಗ, ಪರೋಪಕಾರ, ನಿಸ್ವಾರ್ಥ ಸೇವೆ, ಶಿಷ್ಟಾಚಾರ, ಅಧ್ಯಾತ್ಮ ಸಾಧನೆಗಳಿಂದ ಅಧ್ಯಾತ್ಮ ಕ್ಷೇತ್ರದಲ್ಲಿ ಮುಂದುವರೆದಿದ್ದ ಶ್ರೀಮತಿಯವರು ಬೆಂಗಳೂರು ಕಾರ್ಯಾಲಯಕ್ಕೆ ಒಂದು ದಿಕ್ಕಾಗಿದ್ದರು. ಶ್ರೀ ಶ್ರೀಗಳವರನ್ನು ಅವರ ವಾರ್ಧಕ್ಯದಲ್ಲಿ ತಮ್ಮ ವಾತ್ಸಲ್ಯ ಸೇವೆಯಿಂದ ಚೆನ್ನಾಗಿ ನೋಡಿಕೊಂಡವರಾಗಿದ್ದರು. ಇವರಿಂದಾಗಿಯೇ ಶ್ರೀ ಶ್ರೀಗಳವರು ತಮ್ಮ ಹೆಚ್ಚಿನ ವೃದ್ಧಾಪ್ಯದಲ್ಲೂ ಮಡಿಯ ಆಚರಣೆಯನ್ನು ನಡೆಸಲು ಸಹಾಯಕವಾಯಿತು. ಶ್ರೀ ಶ್ರೀಗಳವರ ಅನಾರೋಗ್ಯ ಕಾಲಗಳಲ್ಲಿ, ಪ್ರವಾಸ ಕಾಲಗಳಲ್ಲಿ, ಸಾಮಾನ್ಯವಾಗಿಯೂ -ಹೀಗೆ ಎಲ್ಲಾ ಪರಿಸ್ಥಿತಿಯಲ್ಲೂ ಇವರು ತಾಯಿಯು ಮಗುವನ್ನು ಸಾಕುವಂತೆ ಗುರುಗಳ ಸೇವೆ ಮಾಡಿದರು. ಇದಲ್ಲದೆ, ಗುರುಗಳ ಸನ್ನಿಧಿಯಲ್ಲಿ ನಡೆಯುತ್ತಿದ್ದ ಪಾಠ ಪ್ರವಚನಗಳು, ಉಪನ್ಯಾಸ-ಚರ್ಚೆಗಳು ಇವುಗಳಿಂದ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ಸಾಧನತತ್ಪರರೂ ಆಗಿದ್ದರು. ಈಗಿನ ಕಾಲಕ್ಕೆ ಇಂಥ ಸೇವಾಮನೋಭಾವದ ಸ್ತ್ರೀಯರು ವಿರಳರೇ. ಇವರ ಉಪಚಾರ, ಸೇವೆ, ಆರೈಕೆಗಳಿಂದ, ಶ್ರೀಗಳವರು ದೀರ್ಘಕಾಲ ಬದುಕಿದ್ದು ಬರವಣಿಗೆ ಉಪನ್ಯಾಸಗಳನ್ನು ದೈನಂದಿನ ಕಾರ್ಯಗಳನ್ನು ನಡೆಸಲು ಶಕ್ತರಾಗಿದ್ದರು ಎನ್ನುವುದು ಅತಿಶಯೋಕ್ತಿಯಲ್ಲ. ಇವರು ಶಿವಮೊಗ್ಗ ಜಿಲ್ಲೆಯ ಮತ್ತೂರು ಅಗ್ರಹಾರ ಶ್ರೀ ಚೆನ್ನಕೇಶವಯ್ಯನವರ ಪುತ್ರಿ. ಬಾಲ್ಯದಲ್ಲೇ ವೈಧವ್ಯವನ್ನು ಹೊಂದಿದರೂ, ತಂದೆಯವರಲ್ಲಿ ಸಂಸ್ಕೃತ ಚಂಪೂ ನಾಟಕದವರೆಗೂ ವಿದ್ಯಾಭ್ಯಾಸ, ಮತ್ತು ಬೇರೆಯಂತೆ ಸಂಗೀತ ಶಿಕ್ಷಣವನ್ನೂ ಪಡೆದರು. ಶ್ರೀಶ್ರೀಗಳವರ ದರ್ಶನವನ್ನು ಪಡೆದ ಮೇಲೆ ಅವರ ಬ್ರಹ್ಮವಿದ್ಯೋಪದೇಶ, ಸಾಧನ ಸದಾಚಾರಗಳನ್ನು ಕಂಡು ಮಾತಾಪಿತೃಗಳ ಅನುಮತಿಯಿಂದ ಗುರುಸಾನಿಧ್ಯವನ್ನೇ 1953ರಿಂದ ದೃಢವಾಗಿ ಆಶ್ರಯಿಸಿದರು. 1962ರಿಂದಲಂತೂ ಇವರೇ ಪ್ರಧಾನರಾಗಿ ಗುರುಸೇವೆಯಲ್ಲಿ ನಿರತರಾದರು. ಅನೇಕ ವೇಳೆ ಕಾರ್ಯಾಲಯದ ಅನೇಕ ಕೆಲಸಗಳಲ್ಲಿ ಕೆಲವಕ್ಕೆ ಶಕ್ಯವಿದ್ದಷ್ಟು ಧನ ಸಹಾಯವನ್ನೂ, ಪ್ರತಿ ತಿಂಗಳೂ 50 ರೂ. ಕಾಣಿಕೆಯನ್ನೂ ನೀಡಿದರು. ಕಾರ್ಯಾಲಯದ ಅತಿಥಿಗಳು, ವಿದ್ಯಾರ್ಥಿಗಳಿಗೂ ಇವರು ಮಾತೃ ಸಮಾನರಾದ ರೀತಿ ಸತ್ಕಾರಾದಿಗಳನ್ನು ನಡೆಸಿದರು. ಒಟ್ಟಿನಲ್ಲಿ ಕಾರ್ಯಾಲಯದಲ್ಲಿ ಆ ಇಪ್ಪತ್ತೆರಡು, ಇಪ್ಪತ್ತೈದು ವರ್ಷಗಳಲ್ಲಿ, ಅನಂತರ ಗುರುಗಳ ನಿರ್ಯಾಣವಾದ ಮೇಲೂ ಪ್ರಧಾನ ಅತಿಥೇಯರಾಗಿದ್ದರು.

ಇಂಥ ಸೇವಾ ಧುರೀಣರೂ, ಭಕ್ತರೂ ಆದ ಶ್ರೀಮತಿಯವರು **10.9.79** ಸೋಮವಾರದಂದು ಅವರ ತಮ್ಮ ಶ್ರೀ ಮತ್ತೂರು ಗಂಗಾಧರ ಶಾಸ್ತ್ರಿಗಳ ಗೃಹದಲ್ಲಿ ಸ್ವರ್ಗಸ್ಥರಾದರು. ಇವರ ನೆನಪಿಗಾಗಿ ಶ್ರೀ ಗಂಗಾಧರ ಶಾಸ್ತ್ರಿಗಳ ಮಗ ಶ್ರೀ ಎಂ.ಜಿ. ಗೋಪಾಲ್‌ರವರು ಪ್ರತಿ ಭಾದ್ರಪದ ಕೃಷ್ಣ ಪಾಡ್ಯದಂದು ಬೆಂಗಳೂರು ಕಾರ್ಯಾಲಯದಲ್ಲಿ ದತ್ತಿ ಉಪನ್ಯಾಸದ ಏರ್ಪಾಡನ್ನು ಮಾಡಿದ್ದಾರೆ.

**ಶ್ರೀ ಅರಕಲಗೂಡು ಶ್ರೀಕಂಠಯ್ಯನವರು :** ಬಹಳ ಹಿಂದಿನಿಂದಲೂ ಹೊಳೆನರಸೀಪುರದಲ್ಲಿದ್ದ ಪ್ರಸಿದ್ಧ ನ್ಯಾಯವಾದಿಗಳು, ದೊಡ್ಡ ಕುಟುಂಬಿಗಳೂ ಸಾಕಷ್ಟು ಶ್ರೀಮಂತರೂ, ಆಸ್ತಿಕರೂ ಆಗಿದ್ದರು. ಪೂರ್ವಾಶ್ರಮದಲ್ಲಿ ಶ್ರೀಶ್ರೀಗಳವರು ಬಂದು ಆರೇಳು ವರ್ಷಗಳಾಗಿದ್ದರೂ, ಅವರಲ್ಲಿಯೂ ಕಾರ್ಯಾಲಯದಲ್ಲಿಯೂ ಹೆಚ್ಚಿನ ಸಂಪರ್ಕವನ್ನಿಟ್ಟುಕೊಳ್ಳದೆ ಇದ್ದವರಂತೆ ಕಂಡವರು. ಆದರೆ ಕಾರ್ಯಾಲಯಕ್ಕೆ ಸರಿಯಾದ ನಿವೇಶನ ಸಿಗದೆ, ಸಂಸ್ಥೆಗೆ ಒಂದು ಸ್ವಂತ ಕಟ್ಟಡವನ್ನು ನಿರ್ಮಿಸಿಕೊಳ್ಳಲು ಪ್ರಯತ್ನಿಸಿ ನಿರಾಶರಾಗಿ ಮೈಸೂರಿಗೆ ವರ್ಗಾಯಿಸುವದರ ಹಂತಕ್ಕೆ ಶ್ರೀಗಳು ಬಂದಿದ್ದರು. ಆಗ ಸಾಯಂಕಾಲದ ಸಂಚಾರದಲ್ಲಿ ಶ್ರೀ ಪಿ.ಎನ್. ನರಸಿಂಹಯ್ಯ, ಮತ್ತೊಂದಿಬ್ಬರಲ್ಲಿ ಈ ವಿಷಯವನ್ನು ಮಾತನಾಡುತ್ತಿದ್ದಾಗ, ದಾರಿಯಲ್ಲಿ ಸಿಕ್ಕಿದ ಶೀಘ್ರ ಗುಣಗ್ರಾಹಿಗಳಾಗಿ ಶ್ರೀಗಳವರ ಬೆಲೆಯನ್ನು ಅರಿತ ಶ್ರೀಶ್ರೀಕಂಠಯ್ಯನವರು ತಮ್ಮ ಸ್ವಯಾರ್ಜಿತ ಆಸ್ತಿಯಾಗಿದ್ದ ಮೂರುನಿವೇಶನಗಳನ್ನು ಗುರುಗಳಿಗೆ ತೋರಿಸಿ ಅವರು ಒಪ್ಪಿದ ಕೂಡಲೇ ಆ ಭೂಮಿಯನ್ನು ದಾನವಾಗಿ ನೀಡಿದರು. ಹೀಗೆ ಶ್ರೀಕಂಠಯ್ಯನವರೇ ಕಾರ್ಯಾಲಯವು ಹೊಳೆನರಸೀಪುರದಲ್ಲೇ ಇರಲು ಮುಖ್ಯಕಾರಣರಾದರು. ಮುಂದೆಯೂ ಇಂತಹ ಭೂದಾನವನ್ನು ಮಾಡಿದವರು. ಕಾರ್ಯಾಲಯದ ಉಪಾಧ್ಯಕ್ಷರಾಗಿ ಜೀವಮಾನ ಪರ್ಯಂತವೂ ಶ್ರದ್ಧೆ, ನಿಷ್ಠೆಯಿಂದ ಸೇವೆ ಸಲ್ಲಿಸಿದವರು. ಶ್ರೀ ದಿಗ್ವಿಜಯರಾಮರ ದೇವಸ್ಥಾನ ನಿರ್ಮಾಣದಲ್ಲೂ, ಇವರ ಉದಾರದಾನ, ಪ್ರಭಾವ ಬಹಳವಾದ ಕಾರಣವಾಯಿತು. ಆಗಾಗ ಸಮಯೋಚಿತವಾದ ದಾನವನ್ನು ನೀಡುತ್ತಿದ್ದವರು. ಸಂನ್ಯಾಸದ ಪ್ರಾರಂಭವರ್ಷಗಳಲ್ಲಿ ಶ್ರೀಶ್ರೀಗಳವರಿಗೆ ಕಾರ್ಯಾಲಯಕ್ಕೆ ಮಡಿಯಲ್ಲೇ ಭಿಕ್ಷೆಯನ್ನು ಕಳುಹಿಸುತ್ತಿದ್ದವರಲ್ಲಿ, ಸಂಸ್ಥೆಯ ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ವಾರವನ್ನು ಕೊಟ್ಟವರಲ್ಲಿ ಒಬ್ಬರಾಗಿದ್ದರು, ಅನುಷ್ಠಾನ ಕಾಲಗಳಲ್ಲಿ ಋತ್ವಿಜರಿಗೆ ಒಂದು ದಿನ ಭೋಜನವನ್ನೇರ್ಪಡಿಸುವದರ ಮೂಲಕ ಅನ್ನದಾನ ಮಾಡುತ್ತಿದ್ದ ಪುಣ್ಯಜೀವಿಗಳು. ಶ್ರೀಶ್ರೀಗಳವರ ಉಪನ್ಯಾಸಗಳಿಗೆ ತಪ್ಪದೆ ಕಾರ್ಯಾಲಯಕ್ಕೆ ಬರುತ್ತಿದ್ದರು. ಗಾಂಧಿವಾದಿಗಳೂ ಹೌದು. ಇವರ ಪುತ್ರರೇ

ಲಾಯರ್ ಶ್ರೀ ತಾಂಡವೇಶ್ವರರು, ಹೊಳೆನರಸೀಪುರದ ಕಾರ್ಯಾಲಯಕ್ಕೆ 1977ರಿಂದ ಅಧ್ಯಕ್ಷರೂ, ಟ್ರಸ್ಟಿಗೆ ಮೊದಲು ವಕೀಲರಾಗಿ ಅನಂತರ ಈಗ ಅದರ ಕನ್‌ವೀನರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶ್ರೀ ಪಿ.ಎನ್. ನರಸಿಂಹಯ್ಯನವರು : ರಾಯರು ಹಾಗೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯವು ಹೊಳೆನರಸೀಪುರಕ್ಕೆ ಬರಲು ಮುಖ್ಯಕಾರಣರಾದವರು ಈ ಮಹನೀಯರು. ಇವರ ಸಾಮಾನ್ಯ ಪರಿಚಯವು ರಾಯರಿಗೆ ಬೆಂಗಳೂರು ಶಂಕರ ಮಠದಲ್ಲಿ ಒಂದು ಬಾರಿ ಆಗಿತ್ತಂತೆ. ಮಾಸಪತ್ರಿಕೆಯ ಮೂರನೆಯ ಸಂಪುಟ ಪ್ರಾರಂಭವಾದಾಗ ಪತ್ರಿಕೆಗೆ ಪ್ರೋತ್ಸಾಹವನ್ನೂ ಹಾಗೂ ಚಂದಾದಾರರನ್ನೂ ಕೋರಿ ರಾಯರು ಬರೆದಿದ್ದ ಕಾಗದಕ್ಕೆ ಶ್ರೀಯುತರು ಸೂಕ್ತಸಹಾಯವನ್ನು ಮಾಡಿದರು. ಅನಂತರ ರಾಯರು ಸಂಚಾರಕ್ರಮದಿಂದ ಹೊಳೆನರಸೀಪುರಕ್ಕೆ ಬಂದಾಗ ಈ ಮಹನೀಯರು ಅವರನ್ನು ತಮ್ಮ ಮನೆಯಲ್ಲೇ ಇಳಿಸಿಕೊಂಡು ಉಪಚರಿಸಿದರು. ಮುಂದೆ ರಾಯರಿಂದ ರಜಾಕಾಲದಲ್ಲಿ ಕಠೋಪನಿಷತ್ತನ್ನೂ ಗೀತಾಭಾಷ್ಯವನ್ನೂ ಪಾಠಹೇಳಿಸಿಕೊಂಡರು. ಇದೇ ಪಾಠದ ಸಂದರ್ಭದಲ್ಲಿ ರಾಯರಿಗೆ ಶ್ರೀ ಆರ್. ಎಸ್. ಶ್ರೀನಿವಾಸಯ್ಯನವರು, ಶ್ರೀ ಆರ್. ರಾಮಸ್ವಾಮಯ್ಯನವರು ಇವರುಗಳ ಪರಿಚಯ ವಾಯಿತು. ಅಂತೂ ಹಾಸನ ಡಿಸ್ಟ್ರಿಕ್ಟಿನಲ್ಲಿ ಪತ್ರಿಕಾಪ್ರಚಾರಕ್ಕೆ ಇವರಿಂದ ಸಹಾಯ ವಾಯಿತು.

ಶ್ರೀ ವೈ. ನರಸಪ್ಪನವರು : (5.12.07-12.4.77) ಶ್ರೀಗಳವರ ಪೂರ್ವಾಶ್ರಮದ ಔರಸಪುತ್ರರು. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಇವರು ಪೂರ್ಣವಾಗಿ ತಂದೆಯವರ ಪಾಲನೆಯಲ್ಲೇ ಬೆಳೆದು, ಅನಂತರ ಅವರಿಗೆ ಮುದ್ರಣ ಕಾರ್ಯದ ಮೂಲಕವಾಗಿ ಅತಿಶಯ ಸಹಕಾರಿಯಾಗಿದ್ದರು ; ಮುದ್ರಣದ ಪೂರ್ಣ ಕೆಲಸವನ್ನೂ ಶ್ರದ್ಧೆ ಭಕ್ತಿಗಳಿಂದ ನಡೆಸಿಕೊಂಡು ಬಂದರು. ತಂದೆಯೂ ಗುರುವೂ ಆಗಿದ್ದ ಶ್ರೀಗಳ ಬಲಭುಜದಂತಿದ್ದು, ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ, ಗ್ರಂಥಗಳ ಪ್ರಕಟಣೆಗೆ ನೆರವಾಗಿದ್ದರು. ನಿಷ್ಕಲ್ಮಷ ಮನಸ್ಸಿನ, ಮೃದುಮಾತಿನ ಈ ಸತ್ಪುರುಷರು ಮಿತಭಾಷಿಗಳಾಗಿದ್ದರು. 1937ರಷ್ಟು ಹಿಂದೆಯೇ ಮುದ್ರಣ ಯಂತ್ರವನ್ನು ಕಾರ್ಯಾಲಯಕ್ಕೆ ಮಾರಿದಾಗ, ಆಗಿನ ಕಾಲಕ್ಕೆ ಹೆಚ್ಚಿನ ಮೊತ್ತವಾಗಿದ್ದ 2000 ರೂ.ನ್ನು, ಸೋಡಿಯಾಗಿ ಬಿಟ್ಟಿದ್ದು ಔದಾರ್ಯವೇ ಸರಿ. ತಾವು ಎಲೆಮರೆಯ ಕಾಯಿಯಂತಿದ್ದು ಜೀವನಾದ್ಯಂತದವರೆಗೂ, ಹೆಚ್ಚಿನ ಪ್ರತಿಫಲಾಪೇಕ್ಷೆಯಿಲ್ಲದೆ, ಕೇವಲ ಸಾಮಾನ್ಯ ಸಂಬಳದ ಮೇಲೆ ಹಗಲಿರುಳೂ ದುಡಿದವರು, (ಸಂಸಾರ

ಸಾಗಿಸಲು ಮುಂದಿನ ವರ್ಷಗಳಲ್ಲೊಂದು ದಿನ ಶ್ರೀಗಳವರಲ್ಲಿ ಕೇವಲ 5 ರೂ. ಹೆಚ್ಚಳವನ್ನು ಕೋರಿದ್ದರೂ, ಅದು ನಿಷ್ಫಲವಾಗಿತ್ತು ಎಂದು ಸಂಗತಿ), ಕರ್ಮಯೋಗಿ ಯಾಗಿ ಸೇವೆಯಲ್ಲೇ ಜೀವನವನ್ನು ಸಾರ್ಥಕಗೊಳಿಸಿಕೊಂಡವರು. 1948ರಂದು ಶ್ರೀಗಳವರು ಮಾಡಿದ ಕಾರ್ಯ ಸಮಿತಿಯ ಅಧ್ಯಕ್ಷರಾಗಿ, ಅನಂತರ 1965ರಲ್ಲಿ ಟ್ರಸ್ಟ್ ರಚಿತವಾದ ಮೇಲೆ ಹೊಳೆನರಸೀಪುರದ ಕಾರ್ಯಾಲ ಯದ ಅಧ್ಯಕ್ಷತೆ, ಮಾಸಪತ್ರಿಕೆಯ ವ್ಯವಸ್ಥಾಪಕ ಸಂಪಾದಕತ್ವವೂ ಸಹಿತ ಇವರ ಸೇವೆಯ ಇನ್ನೊಂದು ಮುಖವೇ ಆಗಿತ್ತು.

**ಶ್ರೀ ಸಂತೇಬಾಚಳ್ಳಿ ಸುಬ್ರಾಯರು** ಕಾರ್ಯಕಾರಿಸಮಿತಿಯ ಸದಸ್ಯರೂ ಪ್ರಸಿದ್ಧ ಆಡ್ವೋಕೇಟರೂ ಆಗಿದ್ದು ಬಹಳವರ್ಷಗಳಿಂದ ಕಾರ್ಯಾಲಯದಲ್ಲಿ ನಡೆಯುತ್ತಿದ್ದ ವೇದಾಂತಪಾಠಗಳು, ಉಪನ್ಯಾಸಗಳು, ಅನುಷ್ಠಾನಗಳು, ಭಜನೆ, ಇವುಗಳಲ್ಲಿ ತಪ್ಪದೆ ಭಾಗವನ್ನು ವಹಿಸುತ್ತಿದ್ದರು. ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ವಾರಗಳನ್ನು ಕೊಟ್ಟಿದ್ದರು. ಅನುಷ್ಠಾನಕಾಲಗಳಲ್ಲಿ ಕೆಲವು ವೇಳೆ ಅತಿಥಿಗಳ ಭೋಜ ನಾದಿಗಳಿಗೂ ಏರ್ಪಡಿಸುತ್ತಿದ್ದರು. ಅನೇಕ ತೀರ್ಥಯಾತ್ರೆಗಳನ್ನೂ ದಾನಧರ್ಮ ಗಳನ್ನೂ ಮಾಡಿದ್ದರು. ಕಾರ್ಯಾಲಯದ ಬೇರೆಬೇರೆಯ ನಿಧಿಗಳಿಗೆ ಯಥೋಚಿತ ವಾಗಿ ಸಹಾಯದ್ರವ್ಯವನ್ನು ಸಲ್ಲಿಸಿದ್ದರು. ಇಂಥ ಮಹನೀಯರು ನಿಧನರಾಗುವ ದಿನವೂ **14.6.59**ನೆಯ ಭಾನುವಾರ ಶ್ರೀಶ್ರೀಗಳವರ ಉಪನ್ಯಾಸಶ್ರವಣಕ್ಕಾಗಿ ಕಾರ್ಯಾಲಯಕ್ಕೆ ಬರುತ್ತಾ ದಾರಿಯಲ್ಲಿ ಆಶ್ರಮದ ಹತ್ತಿರವೇ ಕುಸಿದುಬಿದ್ದು ಅಲ್ಲಿಯೇ ಪ್ರಾಣತ್ಯಾಗ ಮಾಡಿದರು. ರಾಮಾಯಣದ ಜಟಾಯುವಿನಂತೆ ಪ್ರಾಣ ತ್ಯಾಗಕಾಲದವರೆಗೂ ವೇದಾಂತಶ್ರವಣಮನನ ವಿಚಾರಗಳನ್ನೇ ಮಾಡುತ್ತಾ ದೇಹವನ್ನು ಬಿಟ್ಟ ಈ ಮಹನೀಯರ ಜೀವನವು ಒಂದು ಆದರ್ಶಪ್ರಾಯವಾಗಿತ್ತು.

**ಶ್ರೀಮಾನ್ ಖೋಡೆ ಈಶ್ವರಸಾ ಅಂಡ್ ಸನ್ಸ್ :** ಸಂಸ್ಥೆಯ ಶ್ರೀಮಾನ್ ಖೋಡೆ ಲಕ್ಷ್ಮಣಸಾರವರು ಮತ್ತು ಇವರ ಸಹೋದರರಾದ ಶ್ರೀಮಾನ್ ಖೋಡೆ ಕೃಷ್ಣಸಾರವರು – ಆಗ್ಗೆ ಸುಮಾರು ಏಳೆಂಟುವರ್ಷಗಳ ಹಿಂದೆ ಶ್ರೀ ಪಂಡಿತ ಬಿ.ಹೆಚ್. ರಾಮನಾಥಸ್ವಾಮಿಗಳು ಮತ್ತು ಶ್ರೀ ನೂಲೇನೂರು ಶ್ರೀನಿವಾಸಮೂರ್ತಿಗಳು – ಈ ಮಹನೀಯರುಗಳ ಮೂಲಕ ಕಾರ್ಯಾಲಯಕ್ಕೆ ಪರಿಚಿತರಾದರು. ಶ್ರೀಶ್ರೀಗಳವರು ಹೊಳೆನರಸೀಪುರದಲ್ಲಿದ್ದಾಗಲೇ ತಾ|| 6-12-65 ರಲ್ಲು ಗೀತಾಜಯಂತಿಯ ಸಂದರ್ಭದಲ್ಲಿ ಒಂದುಬಾರಿ ಶ್ರೀ ಖೋಡೆ ಲಕ್ಷ್ಮಣಸಾರವರು ಸಪರಿವಾರರಾಗಿ ಕಾರ್ಯಾಲಯಕ್ಕೆ ದಯಮಾಡಿಸಿ ಗುರುಗಳ ದರ್ಶನವನ್ನು ಪಡೆದು ಪ್ರಭಾವಿತ

ರಾದರು. ಶ್ರೀಶ್ರೀಗಳವರ ವ್ಯಕ್ತಿತ್ವ , ವೇದಾಂತಜ್ಞಾನನಿಷ್ಠೆ, ತಪಸ್ಸು, ಅಧ್ಯಾತ್ಮವಿದ್ಯಾ ಪ್ರಚಾರಕ್ಕಾಗಿಯೇ ಹಗಲು ಇರುಳೂ ದುಡಿಯುತ್ತಿರುವ ಲೋಕಸಂಗ್ರಹ ರೂಪವಾದ ಕಾರ್ಯಗಳನ್ನು ಕಂಡು ಇಂಥ ಸದುದ್ದೇಶವುಳ್ಳ ಸಂಸ್ಥೆಯು ಚೆನ್ನಾಗಿ ಮುಂದುವರೆಯ ಬೇಕೆಂಬುದನ್ನೂ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ನೀಡಬೇಕೆಂಬುದನ್ನೂ ಮನಗಂಡರು. ಆಗಾಗ್ಗೆ ಗುರುಗಳಿಗೆ ಮತ್ತು ಕಾರ್ಯಾಲಯದ ಉದ್ದೇಶಗಳಿಗೆ ಯೋಗ್ಯವಾದ ಸಹಕಾರಗಳನ್ನು ನೀಡುತ್ತಿರುವಾಗ 1967ನೆಯ ವರ್ಷದ ಶಂಕರಸಪ್ತಾಹಕಾಲದಲ್ಲಿ ಶ್ರೀಶ್ರೀಗಳವರಿಗೆ ಒದಗಿದ ಬಾರಿ ಕಾಹಿಲೆಯಲ್ಲಿ ಶ್ರೀಯುತರು ತುಂಬ ಶ್ರದ್ಧೆವಹಿಸಿ ಚಿಕಿತ್ಸೆಮಾಡಿಸಿ ಸೇವೆಮಾಡಿದರು. ಈ ಸಂದರ್ಭದಲ್ಲಿ ಗುರುಗಳ ಸನ್ನಿಧಾನದಿಂದ ಪದೇಪದೇ ಪ್ರಭಾವಿತರಾದ ಇವರು ಗುರುಗಳು ತುಂಬ ವಯೋವೃದ್ಧರಾಗಿರು ವದರಿಂದ ಅವರ ದೇಹಾರೋಗ್ಯ ಹಾಗೂ ಸೌಕರ್ಯಗಳ ದೃಷ್ಟಿಯಿಂದ ಇನ್ನು ಮುಂದೆ ಅವರ ಜೀವಿತಕಾಲ ಪೂರ ಬೆಂಗಳೂರಿನಲ್ಲಿರುವದೇ ಕ್ಷೇಮಕರವೆಂತ ಭಾವಿಸಿದ್ದರು.

ಸ್ವತಃ ವೇದಾಂತಪ್ರೇಮಿಗಳೂ ತತ್ತ್ವವಿಚಾರರಸಿಕರೂ ಅಭ್ಯಾಸಿಗಳೂ ಆದ ಇವರು ಗುರುಗಳ ವಿಚಾರಸರಣಿ ಹಾಗೂ ಜ್ಞಾನನಿಷ್ಠೆಗಳ ಆಳವನ್ನು ಕಂಡು ಕೊಂಡಂತೆಲ್ಲ ವೇದಾಂತಾಭಿರುಚಿಯನ್ನು ಬೆಳೆಸಿಕೊಂಡು ಕಾರ್ಯಾಲಯವು ಹೊಳೆನರಸೀಪುರದಿಂದ ಬೆಂಗಳೂರಿಗೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸುವದು ಯೋಗ್ಯವೆಂತ ಭಾವಿಸಿ ಕಾಲಕಾಲಕ್ಕೆ ತಕ್ಕ ಪ್ರೋತ್ಸಾಹಗಳನ್ನು ನೀಡಿ ತಮ್ಮ ಮಿತ್ರರ ಮೂಲಕವೂ ಸಹಕಾರವನ್ನು ನೀಡಿಸಿ 1969ರಿಂದ ಗುರುಗಳು ಖಾಯಂ ಆಗಿ ಬೆಂಗಳೂರಿನಲ್ಲಿಯೇ ನೆಲಸುವಂತೆ ಏರ್ಪಡಿಸಿದರು. ಅನಂತರ ಗುರುಗಳು ಕಾರ್ಯಾ ಲಯದ ಸ್ಥಾಪನೆಗೂ ಅಧ್ಯಾತ್ಮವಿದ್ಯಾಪ್ರಚಾರಕ್ಕೂ ಅಗತ್ಯವಾದ ತಮ್ಮ ಚಟುವಟಿಕೆ ಗಳನ್ನು ಪ್ರಾರಂಭಿಸಿದಾಗ ಶ್ರೀಯುತರು ಗುರುಗಳ ಎಲ್ಲಾ ಪ್ರಯತ್ನಗಳಿಗೂ ಒತ್ತಾಸೆ ಯನ್ನೂ ಸಹಕಾರವನ್ನೂ ನೀಡಿ 1971ನೆಯ ವರ್ಷದ ವೇಳೆಗೆ ಶಾಖಾಕಾರ್ಯಾ ಲಯವು ತನ್ನ ಸ್ವಂತ ಕಟ್ಟಡವನ್ನು ಹೊಂದುವದಕ್ಕೂ ಮತ್ತು ಚಟುವಟಿಕೆಗಳನ್ನು ಮುಂದುವರಿಸುವದಕ್ಕೂ ಮುಖ್ಯಕಾರಣರಾದವರು.

ಇವರ ಸಹೋದರರಾದ ಶ್ರೀ ಖೋಡೆ ಕೃಷ್ಣಸಾರವರೂ ಗುರುಭಕ್ತ ಶಿರೋಮಣಿಗಳೇ ಆಗಿದ್ದರು. ಶ್ರೀಯುತರು ದೇವತಾಕಾರ್ಯಗಳಲ್ಲೂ ಉತ್ಸವಾದಿ- ಗಳಲ್ಲೂ ತುಂಬ ಆಸಕ್ತಿಯುಳ್ಳವರು, ದಾನಶೀಲರು ; ಅಣ್ಣಂದಿರಂತೆಯೇ ಎಲ್ಲಾ ವಿಧದಲ್ಲೂ ಗುಣಸಂಪನ್ನರು. ಇವರು ಶಾಖಾಕಾರ್ಯಾಲಯದ ಕಾರ್ಯಕಾರಿ ಸಮಿತಿಯ ಅಧ್ಯಕ್ಷಪದವಿಯಲ್ಲಿ ವಿರಾಜಮಾನರಾಗಿದ್ದರು. ಒಟ್ಟಿನಲ್ಲಿ ಹಿರಿಯ ಯಜಮಾನರಾದ ಶ್ರೀ ಖೋಡೆ ಲಕ್ಷ್ಮಣಸಾರವರ ಮಾರ್ಗದರ್ಶನಾನುಸಾರವಾಗಿ

ಕುಟುಂಬದ ಎಲ್ಲರ ಸಹಕಾರವೂ ಪ್ರೋತ್ಸಾಹವೂ ಕಾರ್ಯಾಲಯಕ್ಕೆ ದೊರೆತಿತ್ತು. ಶ್ರೀ ಖೋಡೆ ಈಶ್ವರಸಾ ಎಂಡ್ ಸನ್ಸ್‌ರವರು ಅಧ್ಯಾತ್ಮಪ್ರಕಾಶಕಾರ್ಯಾಲಯದ ವಿಷಯಕ್ಕೆ ತೋರಿಸುತ್ತಿದ್ದ ಗೌರವವೂ ಆಶ್ರಯವೂ, ಗುರುಭಕ್ತಿಯೂ ಔದಾರ್ಯವೂ ಅತಿಶಯವಾದದ್ದು. ಇಂಥ ಮಹನೀಯರುಗಳಿಗೆ ಕಾರ್ಯಾಲಯದವರು ತಮ್ಮ ಕೃತಜ್ಞತೆಯನ್ನು ಸಲ್ಲಿಸುವದು ಮುಖ್ಯಕರ್ತವ್ಯವೆಂಬ ದೃಷ್ಟಿಯಿಂದ ಇಲ್ಲಿ ಶ್ರೀಯುತರುಗಳನ್ನು ಸ್ಮರಿಸಲಾಗಿದೆ. ಭಗವಂತನು ಈ ಸಂಸ್ಥೆಯ ಯಜಮಾನರುಗಳಿಗೂ ಅವರ ಕುಟುಂಬಪುತ್ರ ಬಂಧುವರ್ಗದವರಿಗೂ ಇತೋಪ್ಯತಿಶಯವಾದ ಆಯುರಾರೋಗ್ಯ ಐಶ್ವರ್ಯಾದಿಗಳನ್ನೂ ಗುರುದೇವತಾ ಭಕ್ತಿ ಶ್ರದ್ಧಾದ್ಯಧ್ಯಾತ್ಮಸಂಪತ್ತನ್ನೂ ಅನುಗ್ರಹಿಸಿ ಕಾಪಾಡಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

**ಶ್ರೀ ಬಿ.ಎನ್. ಶ್ರೀನಿವಾಸಭಟ್ಟರು :** ಇವರು ಅರಸೀಕೆರೆ ತಾ॥ ಬಾಣಾವರ ಹೋಬಳಿ ಅಗ್ರಹಾರವೆಂಬ ಗ್ರಾಮದ ಜೋಡಿದಾರರು. ಇವರ ತಾಯಿಯವರೇ ಶೇಷಮ್ಮನವರು. ಶ್ರೀಶ್ರೀಗಳ ಪೂರ್ವಾಶ್ರಮದಿಂದಲೇ ಶಿಷ್ಯರಾಗಿದ್ದುಕೊಂಡು ಕೆಲವು ವೇದಾಂತಪಾಠಗಳನ್ನು ಅಭ್ಯಾಸಮಾಡಿದರು. ಅನಂತರ ಅನೇಕ ದಶಕಗಳವರೆಗೂ ಕಾರ್ಯಾಲಯದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಅನುಷ್ಠಾನಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು. ಬಾಣಾವರದಲ್ಲಿದ್ದಾಗ ಒಂದು ಸಂಸ್ಕೃತ ಪಾಠಶಾಲೆಯನ್ನೂ ನಡೆಸುತ್ತಿದ್ದರು. ಈಚೆಗೆ ಅವರ ಮಕ್ಕಳುಗಳು ಬೆಂಗಳೂರಿನಲ್ಲಿ ನೆಲೆಸಿದ್ದರಿಂದ ಬೆಂಗಳೂರಿನಲ್ಲೇ ನಿಂತು ಶಾಖಾಕಾರ್ಯಾಲಯದೊಡನೆ ಸಂಪರ್ಕವನ್ನಿಟ್ಟುಕೊಂಡು ಶ್ರೀಶ್ರೀಗಳವರ ಕೃಪಾಪಾತ್ರರಾಗಿದ್ದುಕೊಂಡಿರುತ್ತಾರೆ. ಈ ಸಂಪುಟದ ಪುಟಗಳಲ್ಲಿರುವ (258-266) ಅವರ ಲೇಖನವೇ ಇವರ ಹೆಚ್ಚಿನ ಪರಿಚಯವನ್ನು ನೀಡುತ್ತದೆ.

**ಶ್ರೀ ನಿಖಿಲಾನಂದ ಗುಪ್ತರು :** ಶ್ರೀಶ್ರೀಗಳಲ್ಲಿ ಅತಿಶಯ ಶ್ರದ್ಧೆ ಭಕ್ತಿಯನ್ನಿಟ್ಟ ಕಾರ್ಯಾಲಯದ ಹಿತೈಷಿಗಳು. 1966ರಲ್ಲಿ ತಮ್ಮ 86 ವರ್ಷದ ಇಳಿ ವಯಸ್ಸಿನಲ್ಲಿ ಶ್ರೀಶ್ರೀಗಳು ವಿಶ್ವಭಾರತ ಪ್ರವಾಸ ಹೊರಟಾಗ ಅವರ ಸಹಾಯಕರಾಗಿ ಶ್ರೀ ಗುಪ್ತರು ಪತ್ನೀ ಸಮೇತರಾಗಿ ಜೊತೆಯಲ್ಲೇ ಪ್ರಯಾಣ ಮಾಡಿ, ಅವರ ಯೋಗಕ್ಷೇಮವನ್ನು ನೋಡಿಕೊಂಡವರು. (ಪ್ರವಾಸ : 12.10.66 ರಿಂದ 12.1.67-3 ತಿಂಗಳು) ಈ ಪ್ರವಾಸದಲ್ಲಿ ಅಮೃತಶಿಲೆಯ ಶಂಕರರ ಪ್ರತಿಮೆಯನ್ನು ಕೊಂಡುತಂದು ಕಾರ್ಯಾಲಯಕ್ಕೆ ಕೊಟ್ಟರು. ಶ್ರೀಶ್ರೀಗಳ ಸಮಾಧಿಯಲ್ಲಿ ಚಲಪ್ರತಿಷ್ಠೆಯಾಗಿರುವ ಶ್ರೀ ಶಂಕರರ ಅಮೃತಶಿಲೆಯ ಮೂರ್ತಿಯು ಶ್ರೀ ಗುಪ್ತದಂಪತಿಗಳ ಕೊಡುಗೆ. ಶ್ರೀಶ್ರೀಗಳಲ್ಲಿ ಅಪಾರ ಅಭಿಮಾನ, ಗೌರವವನ್ನಿಟ್ಟಿರುವ ಇವರು ಮುಂದೆ ಬೆಂಗಳೂರು ಶಾಖಾಕಾರ್ಯಾಲಯ ಸಮಿತಿಯಲ್ಲೂ ಕೆಲಸ ಮಾಡಿದರು. ಅನೇಕ ಕಡೆಗಳಲ್ಲಿ- ಆಂಧ್ರದಲ್ಲಿ ಗೀತಾಪ್ರಚಾರ ಸಂಸ್ಥೆಗಳನ್ನು ಸ್ಥಾಪನೆ ಮಾಡಿದವರು. 108 ವರ್ಷ ವೃದ್ಧಾಪ್ಯದ ಇವರು

ಬೆಂಗಳೂರಿನಲ್ಲಿ ಮಗನ ಮನೆಯಲ್ಲೇ ವಾಸವಾಗಿರುತ್ತಾರೆ. ಈಚೀಚಿನವರೆಗೂ ಕಷ್ಟ ಪಟ್ಟಾದರೂ ಕಾರ್ಯಾಲಯಕ್ಕೆ ಬಂದು ಶ್ರೀಗಳ ಸನ್ನಿಧಿಯ ದರ್ಶನ ಪಡೆಯುತ್ತಿದ್ದಾರೆ.

**ಶ್ರೀ ಎ.ಆರ್. ನಾಗೇಶ್ವರ ಅಯ್ಯರ್‌ರವರು** ಕಾರ್ಯಾಲಯದ ಅಭಿಮಾನಿಗಳಲ್ಲಿ ತುಂಬ ಹಳಬರು. ಶ್ರೀಶ್ರೀಗಳವರು ಪೂರ್ವಾಶ್ರಮದಲ್ಲಿ ಹೊಳೆನರಸೀಪುರಕ್ಕೆ ಬರುವ ಮುಂಚೆ ಬೆಂಗಳೂರಿನಲ್ಲಿದ್ದಾಗಿನಿಂದಲೂ ಗುರುಗಳ ಶಿಷ್ಯರಾಗಿದ್ದರು. 1959ರಲ್ಲಿ ಮೊದಲಬಾರಿ ಶಾಖಾಕಾರ್ಯಾಲಯವು ಪ್ರಾರಂಭ ವಾದಾಗ ಅದರ ಅಧ್ಯಕ್ಷರೂ ಆಗಿದ್ದರು. ಮೈಸೂರು ಸರ್ಕಾರದ ಹೈಕೋರ್ಟ್ ಜಡ್ಜಿಗಳಾಗಿ ವಿಶ್ರಾಂತರಾಗಿದ್ದ ಇವರು ತಮ್ಮ ಅಧಿಕಾರಕಾಲದಲ್ಲೂ ಅನಂತರವೂ ಅಧ್ಯಾತ್ಮದ ಅಭಿರುಚಿಯನ್ನು ಬೆಳೆಯಿಸಿಕೊಂಡು ಶ್ರೀಶ್ರೀಗಳವರ ವಿಚಾರಸರಣಿಯನ್ನು ಮೆಚ್ಚಿ ಅನುಯಾಯಿಗಳಾಗಿದ್ದರು. ಬೆಂಗಳೂರು ಶಾಖಾಕಾರ್ಯಾಲಯದ ಕಟ್ಟಡಕ್ಕೂ ಯಥೋಚಿತ ಪ್ರೋತ್ಸಾಹ ನೀಡಿದ್ದರು. **13-4-76**ರಂದು ನಿಧನರಾದರು.

**ದಿ. ಕೆ.ಎನ್. ವಿಶ್ವೇಶ್ವರಯ್ಯನವರು** - ಶ್ರೀ ಅರಸೀಕೆರೆ ತಿಮ್ಮಪ್ಪದಾಸರು ಶ್ರೀಗಳವರಿಗೆ ಪೂರ್ವಾಶ್ರಮದಿಂದಲೂ ಚಿರಪರಿಚಿತರಾಗಿದ್ದವರು. ಅವರ ಮಗ ಶ್ರೀ ಕೆ. ನಾರಣಪ್ಪನವರು ಸ್ಕೂಲುಮಾಸ್ಟರಾಗಿದ್ದರು. ಶ್ರೀಶ್ರೀಗಳವರ ಆಪ್ತಶಿಷ್ಯರಲ್ಲಿ ಒಬ್ಬರು. ಗೋಂದಾವಳಿಯ ಮಹಾರಾಜರ ಭಕ್ತರಾಗಿದ್ದು ರಾಮನಾಮ ಜಪನಿಷ್ಠರಾದ ಒಬ್ಬ ಸತ್ಪುರುಷರು. ಇವರ ಪುತ್ರರೇ ಶ್ರೀ ವಿಶ್ವೇಶ್ವರಯ್ಯನವರು. ಇವರು ಸಂಗೀತ ವಿದ್ವಾಂಸರಾಗಿದ್ದು ಸರ್ಕಾರಿ ಉದ್ಯೋಗದಲ್ಲಿದ್ದರು. ತಮ್ಮ ಅಜ್ಜನವರಂತೆಯೇ ಹರಿಕಥೆಗಳನ್ನು ಮಾಡುತ್ತಿದ್ದರು. ಕೇವಲ ಹನ್ನೆರಡು ವರ್ಷದ ಬಾಲಕರಾಗಿದ್ದಾಗಲೇ ಇವರು ತಂದೆಯ ಜೊತೆಯಲ್ಲಿ ಶ್ರೀಗಳು ಏರ್ಪಡಿಸುತ್ತಿದ್ದ ಶಂಕರಸಪ್ತಾಹದಲ್ಲಿ ಭಾಗವಹಿಸಿ ಹರಿಕಥೆಮಾಡಿದ್ದರು. ಅನಂತರ ಒಂದು ವರ್ಷವೂ ತಪ್ಪದೆ ಸಪ್ತಾಹವು ಯಾವ ಊರಿನಲ್ಲಿಯೇ ನಡೆಯಲಿ, ಅಲ್ಲಿಗೆ ತಂದೆಯವರೊಡನೆ ಬಂದು ಭಜನೆಯಲ್ಲಿ ಭಾಗವನ್ನು ವಹಿಸುತ್ತಿದ್ದರು. ಶ್ರೀಗಳವರು ರಚಿಸಿದ "ಅಧ್ಯಾತ್ಮ ಗೀತಾವಳಿ"ಯ ಹಾಡುಗಳನ್ನು ರಾಗತಾಳಬದ್ಧವಾಗಿ ಸುಶ್ರಾವ್ಯವಾಗಿ ಭಾವಪೂರ್ಣ ವಾಗಿ ಹಾಡುವದರಲ್ಲಿ ಇವರದು ಎತ್ತಿದ ಕೈ. ಇಂಥ ಮಹನೀಯರು ಇನ್ನೂ ಚಿಕ್ಕ ವಯಸ್ಸಿನಲ್ಲಿಯೇ ಮಾತಾಪಿತೃಗಳನ್ನೂ ಪತ್ನೀಪುತ್ರರನ್ನೂ ಬಿಟ್ಟು ತಾ|| **16.6.52**ರಲ್ಲಿ ದೈವಾಧೀನರಾದರು. ಇವರ ವಿಯೋಗದಿಂದ ಇನ್ನು ಮುಂದಿನ ಸಪ್ತಾಹಗಳಲ್ಲಿ ಭಜನೆಯ ಕಳೆಯೇ ಕುಂದಿದಂತಾಯಿತು. ದೈವಗತಿಯು ವಿಚಿತ್ರ !

**ಶ್ರೀ ಜೆ.ಎಸ್. ತಿಮ್ಮಪ್ಪಯ್ಯನವರು** ಹಾಸನ ಜಿಲ್ಲೆಯ ಜಂಬೂರು ಗ್ರಾಮದವರು ; ಮೈಸೂರಿನಲ್ಲಿ ವಾಸವಾಗಿದ್ದರು. ಶ್ರೀಶ್ರೀಗಳವರ ಹಾಗೂ

ವೇ|| ಎಸ್. ವಿಠಲಶಾಸ್ತ್ರಿಗಳವರ ಸಂಪರ್ಕವು ಉಂಟಾದ ಅನಂತರ ಇವರು ತಮ್ಮ ಆಚಾರವಿಚಾರಗಳನ್ನು ಸರಿಪಡಿಸಿಕೊಂಡು ಶ್ರೀಶ್ರೀಗಳವರ ಶಿಷ್ಯರಾಗಿ ವೇದಾಂತ ಶ್ರವಣಸಾಧನಾನುಷ್ಠಾನಗಳಲ್ಲಿ ತತ್ಪರರಾದರು. ಶ್ರೀಶ್ರೀಗಳವರು ಒಂದು ಚಾತುರ್ಮಾಸ್ಯ (ಎರಡುತಿಂಗಳ) ಅವಧಿಯನ್ನು ಇವರ ಸ್ವಗೃಹದಲ್ಲೇ ನೆರವೇರಿಸಿದರು. ಮತ್ತೊಂದು ಚಾತುರ್ಮಾಸ್ಯವು 1965ರಲ್ಲಿ ಮೈಸೂರಿನ ಅನಾಥಾಲಯದಲ್ಲಿ ನಡೆದಾಗ ಇವರು ವಿಶೇಷಸೇವಾತತ್ಪರರಾಗಿದ್ದರು. ಶ್ರೀಶ್ರೀಗಳವರೊಡನೆ ಒಂದು ಬಾರಿ ದಕ್ಷಿಣದೇಶ ಪ್ರವಾಸದಲ್ಲೂ ಭಾಗವಹಿಸಿದ್ದರು. ಕಾರ್ಯಾಲಯದಲ್ಲಿ ನಡೆಯುವ ಶಂಕರಸಪ್ತಾಹ, ನವರಾತ್ರಿ, ಗೀತಾಜಯಂತಿ - ಮುಂತಾದ ಅನುಷ್ಠಾನಗಳಲ್ಲೂ ಭಾಗವಹಿಸುತ್ತಾ ಗುರುಗಳ ಆದರ್ಶಗಳನ್ನೂ ಉಪದೇಶಗಳನ್ನೂ ಪರಿಪಾಲಿಸುತ್ತಾ ಸಾಧನತತ್ಪರರಾಗಿದ್ದರು. ಕಾರ್ಯಾಲಯದ ಬೇರೆಬೇರೆಯ ನಿಧಿಗಳಿಗೆ ಯಥೋಚಿತ ಕಾಣಿಕೆಗಳನ್ನೂ ಸಲ್ಲಿಸಿದವರು. ಗುರುಮಂದಿರದಲ್ಲಿರುವ ನಕಾಶೆ ಹಾಕಿದ ರಜತ ಪಾದುಕೆಗಳು ಇವರ ಸೇವಾ ಕಾರ್ಯವೇ. ಮೈಸೂರಿನಲ್ಲಿ ಅಧ್ಯಾತ್ಮ ಪ್ರಕಾಶ ಶಾಖಾ ಕಾರ್ಯಾಲಯವನ್ನು ಸ್ಥಾಪಿಸಲು ಬಹಳ ಶ್ರಮವಹಿಸಿರುತ್ತಾರೆ, ಅದರ ಅಧ್ಯಕ್ಷರೂ ಆಗಿದ್ದರು.

**ವೇ. ಶ್ರೀ ಸಿ.ಎನ್. ಯಜ್ಞನಾರಾಯಣಶಾಸ್ತ್ರಿಗಳು** ತುಮಕೂರು ಜಿಲ್ಲಾ ಗುಬ್ಬಿ ತಾ. ಚಂದ್ರಶೇಖರಪುರಗ್ರಾಮದವರು. ಬಾಲ್ಯದಲ್ಲಿ ನಂಜನಗೂಡು ವೇದಪಾಠಶಾಲೆಯಲ್ಲಿ ಯಜುರ್ವೇದ ಅಧ್ಯಯನವನ್ನು ಮಾಡಿ 1944ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ವಿದ್ಯಾರ್ಥಿಯಾಗಿ ಸೇರಿ ಐದುವರ್ಷಗಳು ಪೂರ ಭಾಷ್ಯಪಾಠಗಳನ್ನು ಶ್ರೀಶ್ರೀಗಳವರಿಂದಲೂ ಮತ್ತು ಪಂಡಿತರಿಂದಲೂ ಅಭ್ಯಾಸ ಮಾಡಿದರು. ಅನಂತರ ತುಮಕೂರು ಬ್ರಾಹ್ಮಣ-ವಿದ್ಯಾರ್ಥಿಮಂದಿರದ ಸಂಚಾಲಕರಾಗಿದ್ದರು. ಶ್ರೀಶ್ರೀಗಳವರ ನೆಚ್ಚಿನ ಶಿಷ್ಯರಾಗಿದ್ದ ಇವರು ಕಾರ್ಯಾಲಯದ ಅನುಷ್ಠಾನಗಳಲ್ಲಿ ಭಾಗವಹಿಸುವದು, ಪತ್ರಿಕೆಗೆ ಚಂದಾದಾರರನ್ನು ಒದಗಿಸುವದು, ಪುರಾಣಶ್ರವಣಾದಿಗಳನ್ನು ನಡೆಯಿಸುವದರ ಮೂಲಕ ಅಧ್ಯಾತ್ಮವಿದ್ಯೆಯನ್ನು ಪ್ರಚಾರಮಾಡುವದು ಮುಂತಾದ ರೀತಿಗಳಿಂದ ಸಹಕರಿಸುತ್ತಿದ್ದರು. ಹಲವಾರು ವರ್ಷಗಳು ಬೆಂಗಳೂರು ಮಲ್ಲೇಶ್ವರದ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ನೆಲಸಿ, ಬಹಳ ಮೇಧಾವಿ ಅಧಿಕಾರಿಗಳು, ಆಸಕ್ತ ಜನರಿಗೆ ವೇದಾಂತ ಸಾರವನ್ನು ಬೋಧೆ ಮಾಡಿ, ಅವರ ಮನ್ನಣೆಯನ್ನು ಗಳಿಸಿದರು. ಬೆಂಗಳೂರಿನ 'ಶಂಕರಭಾಸ್ಕರ' ಪತ್ರಿಕೆಗೆ 2002ರಲ್ಲಿ ರಚಿತವಾದ ಸಂಪಾದಕ ಮಂಡಲಿಯ ಹಿರಿಯ ಸದಸ್ಯರೂ, ಕಾರ್ಯಾಲಯ ಶಾಖೆಯ ವಿಚಾರದಲ್ಲಿ ಸಲಹೆಗಾರರೂ ಆಗಿದ್ದರು. 7.1.04ರಂದು ದೈವಾಧೀನರಾದರು.

ಶ್ರೀ ಬೊಂಬಾಯಿ ಎಂ. ವೆಂಕಟರಾಮಯ್ಯನವರು : ಶ್ರೀಶ್ರೀಗಳವರನ್ನು ಸಂದರ್ಶಿಸಿದಾಗಿನಿಂದ ಕಾರ್ಯಾಲಯದ ಚಟುವಟಿಕೆಗಳಿಗೂ ಕೆಲಸಗಳಿಗೂ ಕಾಲಾನುಗುಣವಾಗಿ ಸಲಹೆ ಗಳನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೇ ಬಂದರು. ಕಾರ್ಯಾಲಯದಲ್ಲಿದ್ದ ಗ್ರಂಥಗಳ ರಾಶಿಯನ್ನು ನೋಡಿ ಇದನ್ನು ಹೇಗಾದರೂ ಜನರಲ್ಲಿ ಪ್ರಚಾರಮಾಡಬೇಕೆಂಬ ಸದಿಚ್ಛೆಯಿಂದ ಬ್ರಹ್ಮವಿದ್ಯಾದಾನ, ಹಬ್ಬಹರಿದಿನ ಗಳಲ್ಲಿ ಅಧ್ಯಾತ್ಮಗ್ರಂಥಗಳ ಪಾರಿತೋಷಿಕ ಮತ್ತು ವಿಶೇಷವಿನಿಯೋಗ ಎಂಬ ಮೂರು ಯೋಜನೆಗಳನ್ನು ತೆರೆದರು. ಇವುಗಳಿಗೆಲ್ಲ ತಾವೇ ಪ್ರೋತ್ಸಾಹವನ್ನೂ ಕೊಟ್ಟರು. ಸುಮಾರು ನಾಲ್ಕುನೂರು ರೂಪಾಯಿಗಳಷ್ಟು ಅಧ್ಯಾತ್ಮಗ್ರಂಥಗಳನ್ನು ಕೊಂಡು ಯೋಗ್ಯರಲ್ಲಿ ಹಂಚಿದರು. ಮಾತಾಪಿತೃಗಳ ಶ್ರಾದ್ಧಸಮಯದಲ್ಲಿ ಬ್ರಾಹ್ಮಣ ರಿಗೆ ಒಂದೊಂದು ಅಧ್ಯಾತ್ಮಗ್ರಂಥವನ್ನು ದಾನಮಾಡುವಂತೆ ಏರ್ಪಡಿಸಲು 'ವಿಶೇಷ ವಿನಿಯೋಗ'ವೆಂಬ ನಿಧಿಯನ್ನು ಸಲ್ಲಿಸಿ ಇತರರೂ ಹಾಗೆ ಮಾಡಬೇಕೆಂದು ಕೇಳಿ ಕೊಂಡರು. ರಾಮನವಮಿ, ಶಂಕರಜಯಂತಿ, ಕೃಷ್ಣಜನ್ಮಾಷ್ಟಮಿ, ಗಣೇಶ ಚತುರ್ಥಿ - ಇಂಥ ದಿನಗಳಲ್ಲಿ ಆಯಾ ಸಮಯಕ್ಕೆ ತಕ್ಕಂತೆ ಚಿಕ್ಕ ಪುಸ್ತಕಗಳನ್ನು ಒಟ್ಟಾಗಿ ಕೊಂಡು ಭಕ್ತರಲ್ಲಿ ಹಂಚಿದರು, ಮತ್ತು ಕಾರ್ಯಾಲಯದ ಮೂಲಕವೂ ಹಂಚಿಸುವ ಏರ್ಪಾಡು ಮಾಡಿದರು. ಕಾರ್ಯಾಲಯದ ಪಂಡಿತರಿಂದ ತ್ಯಾಗರಾಜರ ಜೀವನ ಚರಿತ್ರೆಯ ಒಂದು ಗ್ರಂಥವನ್ನು ಬರೆಯಿಸಿ ಮುದ್ರಿಸಿ ಧರ್ಮವಾಗಿ ಹಂಚಿದರು. ತ್ಯಾಗರಾಜರ ಸಮಾಧಿಯಿರುವ ಸ್ಥಳವಾದ ತಿರುವೈಯಾರ್‌ನಲ್ಲಿ ಕೆಲವು ಉಪಯುಕ್ತ ಯೋಜನೆಗಳನ್ನು ಕೈಗೊಂಡರು. ಕಾರ್ಯಾಲಯದಲ್ಲಿ ಶ್ರೀರಾಮರಿಗೆ ವಿಶೇಷ ಪೂಜೆಗಳು, ಲಕ್ಷ್ಮೀದೇವಿಯ ವಿಗ್ರಹ, ವಸ್ತ್ರಾದಿಗಳ ಸಮರ್ಪಣೆ, ಕೆಲವು ವಿಶೇಷಾನು ಷ್ಠಾನಗಳು ಇಂಥವುಗಳನ್ನೂ ನಡೆಯಿಸಿದರು. ಅಂತೂ ಬಹಳ ಉತ್ಸಾಹಶೀಲರೂ ಧರ್ಮಾತ್ಮರೂ ಅಧ್ಯಾತ್ಮವಿಚಾರಪ್ರಚಾರಪ್ರಿಯರೂ ಆಗಿದ್ದರು.

ಮಹಿಳಾಭಕ್ತರು : ಶ್ರೀಗಳ ಸೇವೆಯಲ್ಲಿ ನಿರತರಾದವರು ಮಹಿಳಾ ಭಕ್ತರ ಕೆಲವರಲ್ಲಿ ಭಾವಿಯನ್ನು ತೋಡಿಸಿದ ಎಡತೊರೆ ಕಾವೇರಮ್ಮನವರು, ಆಗಂತುಕ ಗೃಹ ಕಟ್ಟಿಸಿದ ಸಾಲಗ್ರಾಮದ ಕಾವೇರಮ್ಮನವರು, ಕಾರ್ಯಾಲಯದಲ್ಲಿ ನಿಲ್ಲದೆ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ ಕಳೆಯುವ ತನಕ ಅತಿಶಯ ಸೇವೆ ಸಲ್ಲಿಸಿದ ಅಗ್ರಹಾರದ ಶೇಷಮ್ಮನವರು, ಚಿಕ್ಕಮಗಳೂರು ಸುಬ್ಬಮ್ಮನವರು, ಬೆಳವಾಡಿ ಸಾವಿತ್ರಮ್ಮ ಹೀಗೆ ಕೆಲವಾರು ಮಹಿಳೆಯರು ಪುಣ್ಯವಂತರಾದರು. ಇವರು ಸೇವೆ ಯಷ್ಟೇ ಅಲ್ಲದೆ, ಅಧ್ಯಾತ್ಮವಿಚಾರ, ಪರಮಾತ್ಮ ವಿಚಾರಗಳಲ್ಲೂ ಪ್ರೇಮವುಳ್ಳವ ರಾಗಿದ್ದರು.

**ದಿ|| ಅಗ್ರಹಾರದ ಶೇಷಮ್ಮನವರು :** (ಬಿ.ಎನ್. ಶ್ರೀನಿವಾಸ ಭಟ್ಟರ ತಾಯಿ) ಕಾರ್ಯಾಲಯದಲ್ಲಿರುವ ವಿದ್ಯಾರ್ಥಿಗಳಿಗೂ ಉದ್ಯೋಗ ಶಾಖೆಯವರಿಗೂ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ನೆರವಾಗುತ್ತಿದ್ದ ಮತ್ತು ಅನುಷ್ಠಾನಾದಿ ಕಾಲದಲ್ಲಿ ಕಾರ್ಯಭಾಗವನ್ನು ವಹಿಸಿ ನೆರವಾಗುತ್ತಿದ್ದ ಶೇಷಮ್ಮನವರು **3.1.49** ನೆಯ ಸೋಮವಾರ ಬೆಳಿಗ್ಗೆ ಸುಮಾರು 9 ಘಂಟೆಯ ಹೊತ್ತಿಗೆ ಈಶ್ವರನು ಅನುಗ್ರಹಿಸಿದ ಸದ್ಗತಿಯನ್ನು ಪಡೆದು ಕೀರ್ತಿಶೇಷರಾದರು. ಅವರ ವಿಯೋಗದಿಂದ ಆಶ್ರಮದವರೆಲ್ಲರೂ ಅತ್ಯಂತ ದುಃಖಿತರಾಗಿರುತ್ತಾರೆ. ಆ ಮಾತೃಶ್ರೀಯವರು ದೇಹವನ್ನು ಬಿಡುವವರೆಗೂ ಭಗವನ್ನಾಮ ಸ್ಮರಣೆಯನ್ನು ಮಾಡುತ್ತಾ ಎಚ್ಚರದಿಂದಲೇ ಇದ್ದು ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರಿಂದ ಕಮಂಡಲು ತೀರ್ಥವನ್ನು ಸ್ವೀಕರಿಸಿ ಹೋಗಿಬಿಡುತ್ತೇನೆಂದು ಸನ್ನೆಯನ್ನು ಮಾಡಿ ಮೌನವನ್ನು ಧರಿಸಿದರು. ಭಕ್ತಿವರ್ಧನ ಕ್ಷೇತ್ರವಾದ ಹೊಳೆನರಸೀಪುರದಲ್ಲಿ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ಸೋಮವಾರದ ದಿನ ಅವರು ಇಂಥ ಪುಣ್ಯತಮವಾದ ಗತಿಯನ್ನು ಪಡೆದದ್ದು ಎಲ್ಲರನ್ನೂ ತಲೆದೂಗಿಸಿದೆ.

ತಾವೇ ಬಂದು ನಿಂತು, ಅಧ್ಯಾತ್ಮ ವಿಚಾರವನ್ನು ತಿಳಿಯುವ ಹಂಬಲದ ಶ್ರೀ ಎ.ವಿ. ಕೃಷ್ಣಸ್ವಾಮಿಯವರು, ತಮ್ಮ ವಿದ್ವತ್ತು ಶಾಸ್ತ್ರ ಪರಿಚಯಗಳಿಂದ ಕಾರ್ಯಾಲಯಕ್ಕೆ ಸೇವೆ ಮಾಡುವದಾಗಿ ಉದ್ದೇಶಿಸಿದ ತುರುವೇಕೆರೆ ವೇ|| ಬ್ರ|| ಶ್ರೀ ವಿಶ್ವೇಶ್ವರ ದೀಕ್ಷಿತರು, ತಮ್ಮ ಉದ್ದೇಶ ಸಾಧನೆಯಾಗದಿದ್ದರೂ, ಅವರು ಕಟ್ಟಿಸಿದ ಕಟ್ಟಡಗಳಿಂದ ಕಾರ್ಯಾಲಯಕ್ಕೆ ಹೆಚ್ಚಿನ ನೆರವು ನೀಡಿದ ಅಧ್ಯಾತ್ಮ ಬಂಧುಗಳು.

ಇವರೆಲ್ಲರ ಸೇವೆಯನ್ನು ಕಾರ್ಯಾಲಯಕ್ಕೆ ಉಪಕಾರ ಮಾಡಿದ, ಮಾಡುವ ಎಲ್ಲಾ ಭಕ್ತರಿಗೂ ಕಾರ್ಯಾಲಯವು ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸುತ್ತದೆ.

★★★★

***ಸೇರ್ಪಡೆ:*** *ಶ್ರೀಶ್ರೀಗಳು ಸಂನ್ಯಾಸ ದೀಕ್ಷೆ ಪಡೆಯಲು ಹೆಬ್ಬೂರು ಮಠಾಧಿಪತಿಗಳನ್ನು ಪ್ರಾರ್ಥಿಸಿದಾಗ, ಪೀಠಕ್ಕೆ ಹಕ್ಕುದಾರರಲ್ಲದವರಿಗೆ ದೀಕ್ಷೆ ಕೊಡುವದು ಉಚಿತವಲ್ಲ ವೆಂದು ಅದು ಆಗಲಿಲ್ಲ, ಹರಿಹರವಾಸಿಗಳನ್ನು ಕರೆಸುವ ವಿಷಯವೂ ಅಲ್ಲಿಗೇ ನಿಂತಿತು. ಶ್ರೀಶ್ರೀಗಳವರು ಶ್ರೀ ಶಂಕರರ ಚಿತ್ರಪಠದ ಮುಂದೆಯೇ ದೀಕ್ಷೆ ತೆಗೆದುಕೊಳ್ಳುವ ನಿರ್ಧಾರ ಮಾಡಿದ್ದರು. ಆಗ ಮತ್ತೂರಿನ ಶ್ರೀ ಸುಬ್ರಾಯಾವಧಾನಿಗಳು ಸಕಾಲಕ್ಕೆ ಕರೆತಂದ, ಉತ್ತರದ ಕಡೆಯ ಬಿಡಿ ಸಂನ್ಯಾಸಿಗಳು ಶ್ರೀ ಬೋಧಾನಂದೇಂದ್ರರು ಶ್ರೀಗಳಿಗೆ (ರಾಯರಿಗೆ) ದೀಕ್ಷೆ ನೀಡಿದರು. ಆ ತರುಣದಲ್ಲೇ ಬಿಡಿ ಸಂನ್ಯಾಸಿಗಳ ಕ್ರಮದಂತೆ ಅವರು ಪರ್ಯಟನೆ ಹೊರಟರು, ಅವರ ಪೂರ್ವದ - ಅನಂತರದ ವಿಚಾರಗಳು ತಿಳಿಯಲಿಲ್ಲ.*

# ಪರಿಶಿಷ್ಟ - 2

## 1-4-1996 ರಿಂದ 14-12-2006 (10 ವರ್ಷಗಳು)ರ ವರೆಗೆ ಕಾರ್ಯಾಲಯದ ಮೂಲಕ ಮುದ್ರಿತವಾದ ಗ್ರಂಥಗಳ ವಿವರ

| ಕ್ರಮ ಸಂಖ್ಯೆ | ಪುಸ್ತಕದ ಹೆಸರು | ಪುಟಗಳು / ಮುದ್ರಣ ಸಂಖ್ಯೆ | ವೆಚ್ಚ ರೂ. | ಪ್ರಕಾಶನದ ದಿನಾಂಕ | ಬೆಲೆ ರೂ. |
|---|---|---|---|---|---|
| 1) | Introductions (Sanskrit & English books) | 228 (I) | 31,000 | 20-05-96 | 40/- |
| 2) | Shankara's Clarifications | 96 (II) | 11,500 | 20-06-96 | 25/- |
| 3) | Basic Tenets of Shankara Vedaanta | 200 (I) | 21,000 | 22-08-96 | 30/- |
| 4) | ಸಂಸ್ಕೃತ ಭಾಷಾಭ್ಯಾಸ ಭಾಗ - 3 | 184 (III) | 18,000 | 22-08-96 | 35/- |
| 5) | ಅಧ್ಯಾತ್ಮಗೀತಾವಳಿ | 124 (IV) | 14,000 | 22-08-96 | 20/- |
| 6) | ಸರ್ವೇಷ್ಟಸಿದ್ಧಿ | 48 (V) | 7,500 | 22-08-96 | 6/- |
| 7) | ಸದ್ಗುರುಚರಿತಾಮೃತ (ಕಾರ್‍ಯಾಲಯದ ಇತಿಹಾಸ) | 234 (II) | 36,500 | 05-01-97 | 30/- |
| 8) | ಧಮ್ಮಪದ (ಬೌದ್ಧದರ್ಶನದ ವಿಮರ್ಶೆ) | 151 (II) | 14,800 | 01-01-97 | 30/- |
| 9) | ಈಶಾವಾಸ್ಯ ಉಪನಿಷದ್ಭಾಷ್ಯ | 68 (V) | 12,000 | 05-01-97 | 15/- |
| 10) | Sri Sri Sachidanandendra Saraswathi Swamigal (Life sketch) | 56 (I) | 6,500 | 01-01-97 | 15/- |
| 11) | Narada's Aphorisms on Bhakti | 32 (II) | 4,200 | 01-01-97 | 10/- |
| 12) | The Scientific Approach to Sankara Vedanta | 124 (I) | 22,300 | 05-01-97 | 30/- |
| 13) | ಸಂಸ್ಕೃತ ಭಾಷಾಭ್ಯಾಸ, ಭಾಗ-1 | 88 (V) | 16,250 | 01-01-97 | 15/- |
| 14) | ಶ್ರೀಮದ್ಭಗವದ್ಗೀತಾಭಾಷ್ಯ I & II | 1208 (VI) | 1,60,000 | 20-02-97 | 400/- |
| 15) | ಅಧ್ಯಾತ್ಮವೆಂದರೇನು ? | 24 (II) | 7,505 | 05-05-97 | 5/- |
| 16) | Upanishadic Approach to Reality | 80 (II) | 8,191 | 11-05-97 | 20/- |
| 17) | ಗೃಹಪ್ರವೇಶ | 42 (III) | 4,250 | 15-05-97 | 5/- |
| 18) | ಮೋಹಮುದ್ಗರ | 16 (VI) | 5,435 | 01-08-97 | 6/- |
| 19) | ಶಿವಾಪರಾಧಕ್ಷಮಾಪಣ ಸ್ತೋತ್ರ | 40 (III) | 8,660 | 01-08-97 | 8/- |
| 20) | ಪ್ರಶ್ನೋಪನ್ಯಾಸಮಂಜರಿ | 100 (II) | 15,700 | 01-10-97 | 20/- |
| 21) | ಮಹಾನಾರಾಯಣೋಪನಿಷತ್ತು | 219 (II) | 32,500 | 01-10-97 | 40/- |
| 22) | ಮುಮುಕ್ಷುಹಿತಬೋಧ | 180 (II) | 10,200 | 02-02-98 | 20/- |
| 23) | ಮುಂಡಕೋಪನ್ಯಾಸಮಂಜರಿ | 92 (III) | 9,350 | 01-03-98 | 20/- |
| 24) | ದೃಗ್‌ದೃಶ್ಯವಿವೇಕ | 56 (III) | 5,050 | 15-03-98 | 10/- |

| | | | | | |
|---|---|---|---|---|---|
| 25) | ರಸನಿಮಿಷಗಳು | 52 (V) | 7,160 | 15-03-98 | 5/- |
| 26) | ಬ್ರಹ್ಮಸೂತ್ರ ಭಾಷ್ಯಗಳು (5 ಅಧಿಕರಣಗಳು + 2 ಪರಿಶಿಷ್ಟಗಳು) | 424 (II) | 22,900 | 18-04-98 | 80/- |
| 27) | ಸಂಸ್ಕೃತ ಭಾಷಾಭ್ಯಾಸ, ಭಾಗ - 2 | 158 (IV) | 24,611 | 18-04-98 | 30/- |
| 28) | ತೈತ್ತಿರೀಯೋಪನಿಷದ್ಭಾಷ್ಯ | 356 (III) | 28,500 | 18-04-98 | 65/- |
| 29) | ಬ್ರಹ್ಮಸೂತ್ರಭಾಷ್ಯ ಸಂಪುಟ - 1<br>ಬ್ರಹ್ಮಸೂತ್ರಭಾಷ್ಯ ಸಂಪುಟ - 2 | 1174<br>1190 (III) | 3,12,330 | 21-7-98 | 600/- |
| 30) | ವೇದಾಂತವಿಚಾರದಇತಿಹಾಸ | 308 (II) | 35,000 | 09-09-98 | 60/- |
| 31) | ಗಣೇಶಾಷ್ಟಕ | 33 (III) | 4,500 | 13-11-98 | 5/- |
| 32) | ಅಧ್ಯಾತ್ಮ ಶಂಕರವಿಜಯ | 186 (II) | 40,075 | 13-11-98 | 30/- |
| 33) | ಅಧ್ಯಾಸಭಾಷ್ಯಾರ್ಥವಿಮರ್ಶೆ | 95 (II) | 10,500 | 23-12-98 | 25/- |
| 34) | Misconception about Saŋ kara | 126 (II) | 8,700 | 23-12-98 | 25/- |
| 35) | ಸಚ್ಚಿದಾನಂದಸೂಕ್ತಿಗಳು | 76 (I) | 7,650 | 12-01-99 | 20/- |
| 36) | ಸ್ತೋತ್ರಮಾಲಾ, ಭಾಗ -1 | 104 (II) | 9,000 | 20-01-99 | 20/- |
| 37) | Minor Works of Sankara | 68 (II) | 6,100 | 18-03-99 | 15/- |
| 38) | ಸದ್ಗುರುವಿನ ಅನುಗ್ರಹ | 24 (IV) | 4,500 | 25-04-99 | 5/- |
| 39) | ಭಗವದ್ಗೀತೆಯ ಉಪನ್ಯಾಸಗಳು-1<br>ಭಗವದ್ಗೀತೆಯ ಉಪನ್ಯಾಸಗಳು-2 | 612<br>578 (III) | 1,15,000 | 25-04-99 | 250/- |
| 40) | ಸ್ತುತಿಪುಷ್ಪಾಂಜಲಿ | 72 (IV) | 9,000 | 07-07-99 | 10/- |
| 41) | ಶಿವಕವಚ | 60 (V) | 9,235 | 07-07-99 | 10/- |
| 42) | ಬೃಹದಾರಣ್ಯಕೋಪನ್ಯಾಸಮಂಜರಿ | 340 (I) | 27,377 | 09-08-99 | 60/- |
| 43) | ಛಾಂದೋಗ್ಯೋಪನ್ಯಾಸಮಂಜರಿ | 338 (I) | 27,628 | 09-08-99 | 60/- |
| 44) | ಭಕ್ತಿಚಂದ್ರಿಕಾ (ಸಂಸ್ಕೃತ)<br>(ಶ್ರೀ ಶ್ರೀಗಳವರ ಭಕ್ತಿಚಂದ್ರಿಕೆ ಕನ್ನಡ ಗ್ರಂಥದ ಅನುವಾದ) | 222 (I) | 17,250 | 09-08-99 | 50/- |
| 45) | ಮುಂಡಕೋಪನಿಷದ್ಭಾಷ್ಯ | 187 (IV) | 35,000 | 16-09-99 | 30/- |
| 46) | ಶಂಕರವೇದಾಂತದ ಮೂಲತತ್ತ್ವಗಳು | 118 (III) | 11,952 | 16-09-99 | 20/- |
| 47) | ಮೂಲರಾಮಾಯಣ | 26 (IV) | 6,075 | 16-09-99 | 5/- |
| 48) | ಶ್ವೇತಾಶ್ವತರೋಪನ್ಯಾಸಮಂಜರಿ | 354 (I) | 29,920 | 31-12-99 | 60/- |
| 49) | ಸ್ತೋತ್ರಮಾಲಾ, ಭಾಗ - 2 | 84 (II) | 11,479 | 31-12-99 | 20/- |
| 50) | ಪ್ರಬೋಧಸುಧಾಕರ (ಪ್ರಕರಣ 8) | 112 (II) | 10,050 | 31-12-99 | 20/- |
| 51) | ಶ್ರೀರಾಮಗೀತೆ ಮತ್ತು<br>ವಾಗ್ದೇವೀ ಸ್ತೋತ್ರ | 40<br>14 (III) | 9,500 | 31-12-99 | 10/- |
| 52) | ಸುಗಮಾ (ಸಂಸ್ಕೃತ) | 136 (II) | 13,440 | 31-12-99 | 20/- |
| 53) | ವಿಷ್ಣುಸಹಸ್ರನಾಮಸ್ತೋತ್ರಮ್ (ಪ್ರ. 6) | 302 (III) | 37,504 | 05-04-00 | 50/- |
| 54) | ಭಾಗವತಸಂಪ್ರದಾಯ | 126 (II) | 13,180 | 05-04-00 | 25/- |
| 55) | ವಿಷ್ಣುಸೂಕ್ತಭಾಷ್ಯ (ನಾರಾಯಣ ಉ/ಸಹಿತ) | 103 (II) | 15,806 | 05-04-00 | 15/- |

| | | | | | |
|---|---|---|---|---|---|
| 56) | ಅಧ್ಯಾತ್ಮ ರಾಮಾಯಣ | 622 (II) | 74,000 | 07-07-00 | 150/- |
| 57) | ಪರಮಾರ್ಥ ಚಿಂತಾಮಣಿ - 1 } ಒಂದೇ<br>ಪರಮಾರ್ಥ ಚಿಂತಾಮಣಿ - 2 } ಪುಸ್ತಕ | 300 (IV)<br>432 (I) | 1,00,000 | 07-07-00 | 150/- |
| 58) | ಶಾಂಕರವೇದಾಂತಸಾರ | 302 (III) | 36,000 | 29-07-00 | 60/- |
| 59) | ತೈತ್ತಿರೀಯೋಪನ್ಯಾಸಮಂಜರಿ | 83 (I) | 9,800 | 29-07-00 | 15/- |
| 60) | ಗೀತಾಶಾಸ್ತ್ರಾರ್ಥವಿವೇಕ (ಕನ್ನಡ) | 52 (I) | 13,700 | 29-07-00 | 10/- |
| 61) | ಶಂಕರಭಗವತ್ಪಾದರ<br>ಸರ್ವಸಮ್ಮತೋಪದೇಶಗಳು | 400 (III) | 38,429 | 08-10-00 | 60/- |
| 62) | ಪುಸ್ತಕಗಳ ಬೆಲೆಪಟ್ಟಿ (ಕನ್ನಡ) | 28 (III) | 2,230 | 08-10-00 | 2/- |
| | ಪುಸ್ತಕಗಳ ಬೆಲೆಪಟ್ಟಿ (ಇಂಗ್ಲೀಷ್-ಸಂಸ್ಕೃತ) | 16 (I) | 525 | 08-10-00 | 2/- |
| 63) | ಬ್ರಹ್ಮಸೂತ್ರ ಭಾಷ್ಯದ ಉಪನ್ಯಾಸಗಳ<br>ಧ್ವನಿಸುರುಳಿಗಳ ಕೈಪಿಡಿ | 20 (I) | 2,500 | 28-10-00 | 10/- |
| 64) | ಚಮಕಾಧ್ಯಾಯ ಭಾಷ್ಯ | 80 (IV) | 11,975 | 18-12-00 | 15/- |
| 65) | ಸಂಸ್ಕೃತ ಪ್ರಥಮ ಪುಸ್ತಕಮ್<br>(ಸ್ವಯಂಬೋಧಿನೀ) | 102 (III) | 18,370 | 18-12-00 | 20/- |
| 66) | ಸವಾರ್ತಿಕ ಪಂಚೀಕರಣ | 60 (III) | 5,852 | 18-12-00 | 10/- |
| 67) | ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ | 46 (III) | 5,000 | 18-12-00 | 10/- |
| 68) | ಸ್ವಾತ್ಮಪ್ರಕಾಶಿಕಾ | 38 (II) | 4,500 | 18-12-00 | 5/- |
| 69) | ಗುರುಭಕ್ತಿಸಾರ | 52 (II) | 8,803 | 18-12-00 | 10/- |
| 70) | ಐತರೇಯೋಪನ್ಯಾಸಮಂಜರಿ | 36 (I) | 8,726 | 18-12-00 | 10/- |
| 71) | ವೇದಾಂತದರ್ಶನ | 48(III) | 8,941 | 25-03-01 | 10/- |
| 72) | ವೇದಾಂತಕಥಾವಳಿ | 56 (VI) | 9,944 | 25-03-01 | 10/- |
| 73) | ದಕ್ಷಿಣಾಮೂರ್ತಿಸ್ತೋತ್ರ | 76 (IV) | 17,850 | 25-03-01 | 20/- |
| 74) | ವೇದಾಂತಸಾರ (ರಾಮಾನುಜ ವಿರಚಿತ) | 84 (II) | 10,542 | 13-05-01 | 25/- |
| 75) | ಆತ್ಮಪ್ರತಿಬೋಧ | 48 (III) | 10,738 | 13-05-01 | 10/- |
| 76) | ಉಪದೇಶಸಾಹಸ್ರಿ (ಗದ್ಯ) | 196 (III) | 21,936 | 13-05-01 | 40/- |
| 77) | Suddha Shaŋkara<br>Prakriya Bhaaskara<br>(original 3 parts combined now) | 246 (II) | 26,525 | 18-07-01 | 50/- |
| 78) | ಉಪನಿಷತ್ತುಗಳ ಮೊದಲನೆಯ ಪರಿಚಯ | 60 (IV) | 10,506 | 18-07-01 | 10/- |
| 79) | ಸಂಸ್ಕೃತ ಭಾಷಾಭ್ಯಾಸ, ಭಾಗ - 3 | 184 (IV) | 30,152 | 23-10-01 | 35/- |
| 80) | ಶಂಕರ ಸಂಸ್ಮರಣ<br>(ದೇವರಾಯ ಕುಲಕರ್ಣಿ) | 192 (II) | 35,161 | 23-12-01 | 40/- |
| 81) | ರುದ್ರಭಾಷ್ಯ | 155 (IV) | 24,028 | 11-01-02 | 25/- |
| 82) | ಕಾಠಕೋಪನಿಷದ್ಭಾಷ್ಯ | 222 (IV) | 35,652 | 11-01-02 | 40/- |
| 83) | ಪುರುಷಸೂಕ್ತ ಭಾಷ್ಯ | 90 (IV) | 12,592 | 15-02-02 | 15/- |

| | | | | | |
|---|---|---|---|---|---|
| 84) | ಸೌರಸೂಕ್ತ ಭಾಷ್ಯ | 86 (II) | 12,040 | 15-02-02 | 15/- |
| 85) | ಈಶಾವಾಸ್ಯೋಪನ್ಯಾಸಮಂಜರಿ | 38 (II) | 10,608 | 15-02-02 | 10/- |
| 86) | ಭಗವದ್ಗೀತೆಯಸಾರ ಮತ್ತು ಪ್ರಧಾನೋಪದೇಶಗಳು | 60 (III) | 11,548 | 15-02-02 | 10/- |
| 87) | ಗೀತಾಮನನ | 50 (III) | 10,659 | 15-02-02 | 10/- |
| 88) | ಕಾರ್ಯಾಲಯದ ಚಟುವಟಿಕೆಗಳು (Folders) | 8 (I) | 3,500 | 15-02-02 | Free |
| 89) | ಪರಮಾರ್ಥ ಚಿಂತಾಮಣಿ, ಭಾಗ-1-2 (ಎರಡನೆಯ ಮುದ್ರಣ -ಒಂದೇ ಪುಸ್ತಕ) | 732 (II) | 63,160 | 15-02-02 | 150/- |
| 90) | ಸ್ವಾತ್ಮ ನಿರೂಪಣ.... (ಪ್ರ. 2) | 136 (II) | 12,000 | 15-02-02 | 30/- |
| 91) | ದಶೋಪನಿಷತ್ತುಗಳಸಾರ (10 ಉ॥ಗಳ ಪೀಠಿಕೆಗಳ ಸಂಕಲನ) | 375 (I) | 67,420 | 19-05-02 | 100/- |
| 92) | ಮಾಂಡೂಕ್ಯೋಪನಿಷತ್ತು | 432 (V) | 45,060 | 19-05-02 | 100/- |
| 93) | ಸಚ್ಚಿದಾನಂದಮನನ | 96 (I) | 12,000 | 06-08-02 | 20/- |
| 94) | ಭಗವದ್ಗೀತೆಯಸಾರವಿಚಾರ (ಹೊಸಕೆರೆ ಚಿದಂಬರಯ್ಯ ವಿರಚಿತ) | 224 (IV) | 28,000 | 06-08-02 | 40/- |
| 95) | ಈಶಾವಾಸ್ಯೋಪನಿಷತ್ತು (ಸಂಸ್ಕೃತ) | 68 (II) | 9,000 | 06-08-02 | 20/- |
| 96) | ಬೃಹದಾರಣ್ಯಕೋಪನಿಷತ್ತು Vol. I | 772 (III) | 80,757 | 27-12-02 | 500/- |
| | ಬೃಹದಾರಣ್ಯಕೋಪನಿಷತ್ತು Vol. II | 1062 (III) | 1,08.485 | 27-12-02 | Set |
| 97) | ಜೀವನ್ಮುಕ್ತಾನಂದಲಹರಿ.... (ಪ್ರ. 4) | 182 (II) | 17,224 | 27-12-02 | 40/- |
| 98) | ಕಾಠಕೋಪನ್ಯಾಸಮಂಜರಿ | 280 (III) | 25,517 | 27-12-02 | 60/- |
| 99) | ವೇದಾಂತಮೀಮಾಂಸಾ ಶಾಸ್ತ್ರಾರ್ಥಸರ್ವಸ್ವ(ಕನ್ನಡ) | 106 (I) | 16,500 | 27-12-02 | 25/- |
| 100) | ವೇದಾಂತ ಡಿಂಡಿಮಾ (ಸಂಸ್ಕೃತ) | 76 (II) | 9,250 | 27-12-02 | 20/- |
| | **(1.4.2005 ರಿಂದ)** | | | | |
| 101) | ಸರ್ವವೇದಾಂತ....ಸಂಗ್ರಹ (ಪ್ರ. 5) | 251 (II) | 25,500 | 28-05-03 | 50/- |
| 102) | ಸಚ್ಚಿದಾನಂದಸೂಕ್ತಿಗಳು | 83 (II) | 18,000 | 26-07-03 | 20/- |
| 103) | ಪಾರಿಭಾಷಿಕ ಶಬ್ದಕೋಶ | 346 (I) | 56,081 | 16-11-03 | 120/- |
| 104) | ಲಕ್ಷ್ಮೀನರಸಿಂಹಸ್ತೋತ್ರ | 48 (IV) | 10,000 | 16-11-03 | 10/- |
| 105) | ಬೆಲೆಪಟ್ಟಿ | 24 (I) | 6,400 | 15-01-04 | 5/- |
| 106) | ಸ್ತುತಿಪುಷ್ಪಾಂಜಲಿ | 72 (V) | 11,091 | 25-01-04 | 10/- |
| 107) | ಗೀತಾಸಾರ್ಥ (ಪಾರಾಯಣಕ್ಕೆ) | 375 (VI) | 44,956 | 11-04-04 | 20/- |
| 108) | ಶಾಂಕರವೇದಾಂತಸೌರಭ (ದೇವರಾಯ ಕುಲಕರ್ಣಿ) | 688 (II) | 80,000 | 11-04-04 | 160/- |
| 109) | ರಸನಿಮಿಷಗಳು | 52 (VI) | 11,318 | 11-04-04 | 10/- |

| | | | | | |
|---|---|---|---|---|---|
| 110) | ಶ್ರೀ ಸೂಕ್ತಭಾಷ್ಯ | 64 (IV) | 13,570 | 11-04-04 | 15/- |
| 111) | The Science of Being | 108 (II) | 13,184 | 11-04-04 | 25/- |
| 112) | ಭಗವದ್ಗೀತಾಭಾಷ್ಯ ಭಾಗ -1<br>ಭಗವದ್ಗೀತಾಭಾಷ್ಯ ಭಾಗ - 2 | 603 (VII)<br>626 (VII) | 1,50,000 | 15-07-04 | 400/- |
| 113) | ಪರಿಶುದ್ಧ ವೇದಾಂತಸಾರ | 50 (III) | 5,709 | 15-07-04 | 10/- |
| 114) | ಸಂಸ್ಕೃತಭಾಷಾಭ್ಯಾಸ ಭಾಗ - 1 | 82 (VI) | 26,520 | 06-10-04 | 20/- |
| 115) | ಕೇನೋಪನಿಷದ್ಭಾಷ್ಯ | 197 (VI) | 23,160 | 06-10-04 | 40/- |
| 116) | ಪ್ರಶ್ನೋಪನಿಷದ್ಭಾಷ್ಯ | 194 (V) | 20,450 | 06-10-04 | 40/- |
| 117) | ಶಿವಾನಂದಲಹರೀ | 82 (III) | 20,113 | 13-11-04 | 20/- |
| 118) | ವೇದಾಂತ ಡಿಂಡಿಮ (ಕನ್ನಡ) | 96 (V) | 20,727 | 12-12-04 | 25/- |
| 119) | ವಿವೇಕಾನಂದರ ಭಕ್ತಿಯೋಗ<br>(ಶ್ರೀ ಶ್ರೀಗಳವರ ಅನುವಾದ) | 128 (iii) | 18,000 | 16-12-04 | 40/- |
| 120) | ಭಗವಾನ್ ಶ್ರೀರಮಣಮಹರ್ಷಿ<br>(ಡಾ॥ ಎ.ಎಸ್. ವೇಣುಗೋಪಾಲರಾವ್) | 82 (I) | 12,608 | 03-01-05 | 20/- |
| 121) | ಸರಸ್ವತೀ ರಹಸ್ಯೋಪನಿಷಚ್ಚಂದ್ರಿಕೆ | 74 (II) | 10,568 | 08-01-05 | 20/- |
| 122) | ಮೂಲರಾಮಾಯಣ | 28 (V) | 15,200 | 29-01-05 | 5/- |
| 123) | ಅಧ್ಯಾತ್ಮವಿದ್ಯೆ | 173 (III) | 20,000 | 08-03-05 | 40/- |
| 124) | ಮಾಂಡೂಕ್ಯೋಪನ್ಯಾಸಮಂಜರಿ | 104 (III) | 20,257 | 01-05-05 | 20/- |
| 125) | ಕೇನೋಪನ್ಯಾಸಮಂಜರಿ | 54 (IV) | 13,200 | 01-05-05 | 15/- |
| 126) | ಬ್ರಹ್ಮವಿದ್ಯೆ | 54 (III) | 15,000 | 01-05-05 | 10/- |
| 127) | ಐತರೇಯೋಪನಿಷತ್ (ಕನ್ನಡ) | 150 (IV) | 35,000 | 01-05-05 | 40/- |
| 128) | ಕ್ಲೇಶಾಪಹಾರಿಣೀ (ಸಂಸ್ಕೃತ)<br>(ನೈಷ್ಕರ್ಮ್ಯಸಿದ್ಧಿ ಸಮೇತ) | 604 (II) | 95,770 | 01-05-05 | 200/- |
| 129) | ಸಮುದ್ರಮಥನ | 68 (IV) | 15,660 | 02-08-05 | 15/- |
| 130) | ವೇದಾರ್ಥಸಂಗ್ರಹ<br>(ಶ್ರೀ ರಾಮಾನುಜಾಚಾರ್ಯ ವಿರಚಿತ) | 266 (II) | 22,050 | 02-08-05 | 50/- |
| 131) | ಛಾಂದೋಗ್ಯೋಪನಿಷತ್ | 597 Vol. 1 (III)<br>643 Vol. 2 (III) | 1,65,350 | 02-08-05 | (Set)400/- |
| 132) | ಗೀತಾರ್ಥಚಂದ್ರಿಕೆ<br>(ಹೊಸಕೆರೆ ಚಿದಂಬರಯ್ಯ) | 407 (V) | 58,320 | 02-08-05 | 100/- |
| 133) | ವೇದಾಂತಬಾಲಬೋಧೆ | 48 (V) | 13,000 | 07-09-05 | 10/- |
| 134) | ವೇದಾಂತ ಪ್ರವೇಶಿಕೆ | 70 (IV) | 16,000 | 07-09-05 | 10/- |
| 135) | ಆತ್ಮವಿದ್ಯಾ ವಿಲಾಸ<br>(ಸದಾಶಿವ ಬ್ರಹ್ಮೇಂದ್ರಸ್ತುತಿ) | 56 (IV) | 5,780 | 17-10-05 | 10/- |
| 136) | ಭಗವಾನ್ ರಮಣಮಹರ್ಷಿಗಳು | 84 (II) | 9,500 | 24-12-05 | 20/- |
| 137) | ವಿವೇಕ ಚೂಡಾಮಣಿ | 224 (IV) | 28,000 | 24-12-05 | 50/- |
| 138) | ಅಧ್ಯಾತ್ಮ ಎಂದರೇನು ? | 24 (VI) | 11,500 | 24-12-05 | 5/- |

| | | | | | |
|---|---|---|---|---|---|
| 139) | ಮುಕುಂದಮಾಲಾ | 28 (VI) | 12,500 | 24-12-05 | 10/- |
| 140) | ನೈಷ್ಕರ್ಮ್ಯಸಿದ್ಧಿ (ಕನ್ನಡ) | 414 (III) | 60,000 | 24-12-05 | 100/- |
| 141) | ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಾಶನಗೊಂಡ ಪುಸ್ತಕಗಳ ಕೈಪಿಡಿ | 32 (I) | 2,510 | 24-12-05 | 10/- |
| 142) | ತೈತ್ತಿರೀಯೋಪನಿಷತ್ತು (ಕನ್ನಡ) | 356 (IV) | 85,340 | 23-07-06 | 80/- |
| 143) | Collected works of K.A. Krishna Swamy Iyer | 330 (II) | 19,500 | 23.9.06 | 60/- |
| 144) | ವಿವೇಕಾನಂದರ ಜ್ಞಾನಯೋಗ (ಇಂಗ್ಲೀಷ್) (ಶ್ರೀಶ್ರೀಗಳವರಿಂದ ಕನ್ನಡಕ್ಕೆ ಅನುವಾದ) | 244 (II) | 27,530 | 19.11.06 | 30/- |
| 145) | ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ-ಭಾಗ 1 | 511 (I) | 91,400 | 14.12.06 | 300/- |
| 146) | ಅನುಭವಪರ್ಯಂತವಾದ ಆತ್ಮವಿಚಾರ | 78 (III) | 9,200 | 14.12.06 | 12/- |
| 147) | Avasthatraya | 20 (III) | 5,288 | 14.12.06 | 10/- |
| | **31.12.2006ರ ವರೆಗೆ** | **30990** | **40,18,425** | | |

## ಮುದ್ರಣದಲ್ಲಿರುವ ಗ್ರಂಥಗಳು

| | | | |
|---|---|---|---|
| 1) | ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ಆತ್ಮಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ (ಭಾಗ-2) | 350 (I) | ರೂ. 60,000 |
| 2) | ಅವಸ್ಥಾತ್ರಯ ಚಂದ್ರಿಕೆ (ಅ.ಪ್ರ. ಮಾಸಪತ್ರಿಕೆಯಲ್ಲಿ ಸಂಪುಟ 3 ರಿಂದ ಸಂ. 8ರ ವರೆಗೆ ಶ್ರೀಶ್ರೀಗಳವರು ಪ್ರಕಟಿಸಿದ್ದ 57 ಲೇಖನಗಳ ಸಂಗ್ರಹ) | 320 (I) | ರೂ. 65,000 |
| 3) | ಅಧ್ಯಾತ್ಮ ಗೀತಾವಳಿ | 120 (V) | ರೂ. 30,000 |
| 4) | ಐತರೇಯೋಪನಿಷತ್ತು (ಸಂಸ್ಕೃತ) | 165 (I) | ರೂ. 35,000 |
| 5) | ಮಾಂಡೂಕ್ಯರಹಸ್ಯ ವಿವೃತಿಃ (ಸಂಸ್ಕೃತ) | 620 (II) | ರೂ. 1,00,000 |
| 6) | ಮೂಲಾವಿದ್ಯಾ ನಿರಾಸ (ಸಂಸ್ಕೃತ) | 275 (II) | ರೂ. 50,000 |

ಶ್ರೀಶ್ರೀಗಳವರ ಗ್ರಂಥಗಳು ಯಾವಾಗಲೂ ಅಧ್ಯಾತ್ಮಪ್ರೇಮಿಗಳಿಗೆ ದೊರಕಬೇಕೆಂಬ ಉದ್ದೇಶದಿಂದ ಪುಸ್ತಕಗಳು ಮಾರಾಟವಾದಾಗಲೆಲ್ಲ ಮರುಮುದ್ರಣ ನಡೆಯುತ್ತಿದೆ. ಕೆಲವು ಪುಸ್ತಕಗಳು 5-6 ಬಾರಿ ಮುದ್ರಣವಾಗಿವೆ.

ಪವಿತ್ರ ಗ್ರಂಥಗಳ ಮುದ್ರಣವೆಲ್ಲವೂ ಮಹಾಜನರ ಔದಾರ್ಯದಿಂದ ದಾನದಿಂದ ಆಗಿದೆ. ಮುದ್ರಣವಾಗುವ ಗ್ರಂಥಗಳಿಂದ ಅಧ್ಯಾತ್ಮ ಬಂಧುಗಳೆಲ್ಲರಿಗೂ ಉಪಕಾರವಾಗಲಿ, ಅದಕ್ಕಾಗಿ ಉದಾರಶೀಲರು ಮುಂದಾಗಲಿ ಎಂದು ಪ್ರಾರ್ಥನೆ.

# ಪರಿಶಿಷ್ಟ-3

## 19.3.1995 ರಿಂದ 18.12.2006ರ ವರೆಗೆ ಹೊಳೆನರಸೀಪುರ ಮತ್ತು ಇತರ ಸ್ಥಳಗಳಲ್ಲಿ ನಡೆದ ವೇದಾಂತಸಪ್ತಾಹ ಮತ್ತು ವೇದಾಂತ ಶಿಬಿರಗಳ ವಿವರ

| ಕ್ರಮ ಸಂಖ್ಯೆ | ಇಂದ | ಗೆ | ಸ್ಥಳ | ಊರು |
|---|---|---|---|---|
| 1 | 19.3.95 | 25.3.95 | ಅಧ್ಯಾತ್ಮ ಮಂದಿರ, ವಿ.ವಿ. ಪುರ | ಬೆಂಗಳೂರು |
| 2. | 2.7.95 | 9.7.95 | ಅಧ್ಯಾತ್ಮ ಮಂದಿರ, ವಿ.ವಿ. ಪುರ | ಬೆಂಗಳೂರು |
| 3. | 10.7.95 | 12.7.95 | ಗೀತಾಮಂದಿರ | ಕೋಲಾರ |
| 4. | 14.8.95 | 16.8.95 | ವಾಸವಿ ಸಮಾಜ | ತಿಪಟೂರು |
| | | (6.8.95 ಅತಿಥಿಗೃಹ ಕಟ್ಟಡದ ಗುದ್ದಲಿ ಪೂಜೆ) | | |
| 5. | 10.9.95 | 16.9.95 | ಕ.ಪ. ದೇವಸ್ಥಾನ | ತುಮಕೂರು |
| 6. | 29.10.95 | 5.11.95 | ರಾಮಮಂದಿರ | ಮೈಸೂರು |
| 7. | 17.11.95 | 23.11.95 | ಶಂಕರಮಠ | ಹಾಸನ |
| 8. | 28.12.95 | 3.1.95 | ಚಿನ್ಮಯಮಿಷನ್ | ಶಿವಮೊಗ್ಗ |
| 9. | 4.1.96 | 6.1.96 | ಹೊಸಹಳ್ಳಿ, ಮತ್ತೂರು | ಶಿವಮೊಗ್ಗ |
| 10. | 3.3.96 | 15.3.96 | ಶಿವಾನಂದ ಜ್ಞಾನಾಲಯ | ಮೈಸೂರು |
| 11. | 8.4.96 | 15.4.96 | ಅ. ಮಂದಿರ, ಬ್ರ.ಚೈ. ಮಂದಿರ | ಬೆಂಗಳೂರು |
| 12. | 19.5.96 | 25.5.96 | ಅ.ಪ್ರ.ಕಾ. | ಹೊ.ನ. ಪುರ |
| | | (19.5.96 - ಅತಿಥಿಗೃಹ ಪ್ರಾರಂಭೋತ್ಸವ) | | |
| 13. | 20.6.96 | 26.6.96 | ಗಣಪತಿ ದೇವಸ್ಥಾನ | ಮಂಡ್ಯ |
| 14. | 5.7.96 | 13.7.96 | ರಾಮಕೃಷ್ಣಾಶ್ರಮ | ದಾವಣಗೆರೆ |
| 15. | 19.7.96 | 25.7.96 | ಗೀತಾಮಂದಿರ | ಕೋಲಾರ |
| 16. | 27.9.96 | 5.10.96 | ರಾಮಕೃಷ್ಣಾಶ್ರಮ | ಬಳ್ಳಾರಿ |
| 17. | 6.10.96 | 9.10.96 | ಛತ್ರ | ಹೊಸಪೇಟೆ |
| 18. | 27.10.96 | 3.11.96 | ರಾಮಕೃಷ್ಣಾಶ್ರಮ | ದಾವಣಗೆರೆ |
| 19. | 13.11.96 | 20.11.96 | ಈಶ್ವರ ದೇವಸ್ಥಾನ | ಮೈಸೂರು |
| 20. | 6.1.97 | 13.1.97 | ದೇವಸ್ಥಾನ ಛತ್ರ | ತುಮಕೂರು |
| 21. | 30.1.97 | 5.2.97 | ನಗರೇಶ್ವರ ಛತ್ರ | ಬಳ್ಳಾರಿ |

| | | | | |
|---|---|---|---|---|
| 22. | 19.2.97 | 25.2.97 | ಬ್ರ.ಸೂ. ಶಿಬಿರ I | ಹೊ.ನ. ಪುರ |
| 23. | 27.4.97 | 3.5.97 | ಅ.ಪ್ರ.ಕಾ. | ಹೊ.ನ. ಪುರ |
| 24. | 28.5.97 | 3.6.97 | ಪ್ರವಚನ ಮಂದಿರ., ರಾಗಿಗುಡ್ಡ | ಬೆಂಗಳೂರು |
| 25. | 16.6.97 | 20.6.97 | ಗೀತಾಮಂದಿರ | ಕೋಲಾರ |
| 26. | 25.6.97 | 1.7.97 | ಶಂಕರಮಠ, ವಾಸವೀಸಮಾಜ | ತಿಪಟೂರು |
| 27. | 7.7.97 | 13.7.97 | ಛತ್ರ | ಬಳ್ಳಾರಿ |
| 28. | 19.9.97 | 25.9.97 | ಮಾಳಮಡ್ಡಿ ರಾಮಮಂದಿರ | ಧಾರವಾಡ |
| 29. | 5.11.97 | 12.11.97 | ಜ್ಞಾನಾಲಯ (ಶಿವಾನಂದ) | ಮೈಸೂರು |
| 30. | 13.12.97 | 15.12.97 | ಶಂಕರಮಠ, ರಾ. ಆಶ್ರಮ | ದೊಡ್ಡಬಳ್ಳಾಪುರ |
| 31. | 17.1.98 | 23.1.98 | ಗುರುಶಾಂತಾಶ್ರಮ | ದಾವಣಗೆರೆ |
| 32. | 1.2.98 | 8.2.98 | ಅ.ಪ್ರ.ಕಾ. | ಹೊ.ನ. ಪುರ |
| | 1.2.98 | "ಶುಭಾರಾಮ" ಕೊಠಡಿ ಉದ್ಘಾಟನೆ | | |
| 33. | 18.3.98 | 25.3.98 | ಶಂಕರಮಠ, ಶಂಕರಕೃಪ | ಬೆಂಗಳೂರು |
| 34. | 30.3.98 | 3.4.98 | ರಾಮಮಂದಿರ, ಮಾಳಮಡ್ಡಿ | ಧಾರವಾಡ |
| 35. | 22.5.98 | 28.5.98 | ದೇವಸ್ಥಾನ | ಬೇಗೂರು |
| 36. | 2.6.98 | 9.6.98 | ಅ.ಪ್ರ.ಕಾ. | ಹೊ.ನ. ಪುರ |
| | | 70ನೆಯ ಹುಟ್ಟುಹಬ್ಬ (ಲ. ನ. ಮೂರ್ತಿ) ಸನ್ಮಾನ | | |
| 37. | 5.7.98 | 11.7.98 | ದೇವಸ್ಥಾನ, ವಿಜಯನಗರ | ಬೆಂಗಳೂರು |
| 38. | 9.9.98 | 16.9.98 | ಬ್ರ.ಸೂ. ಶಿಬಿರ II | ಹೊ.ನ. ಪುರ |
| 39. | 1.12.98 | 3.12.98 | ದತ್ತಮಂದಿರ | ಹಾವೇರಿ |
| 40. | 22.12.98 | 28.12.98 | ಶಂಕರಮಠ | ದೊಡ್ಡಬಳ್ಳಾಪುರ |
| 41. | 3.1.99 | 12.1.99 | ಬ್ರ.ಸೂ. ಶಿಬಿರ III | ಹೊ.ನ. ಪುರ |
| 42. | 4.3.99 | 10.3.99 | ರಾಮಮಂದಿರ, ಬ್ರ.ಚೈ. ಮಂದಿರ | ಬೆಂಗಳೂರು |
| 43. | 5.5.99 | 11.5.99 | ಅ.ಪ್ರ.ಕಾ. | ಹೊ.ನ. ಪುರ |
| 44. | 17.5.99 | 26.5.99 | ಬ್ರ.ಸೂ. ಶಿಬಿರ IV | ಹೊ.ನ. ಪುರ |
| 45. | 3.6.99 | 9.6.99 | ಸೀತಾರಾಮಮಂದಿರ | ಹಾಸನ |
| 46. | 30.7.99 | 8.8.99 | ಬ್ರ.ಸೂ. ಶಿಬಿರ V | ಹೊ.ನ. ಪುರ |
| 47. | 26.9.99 | 2.10.99 | ವಾಸವೀಸಮಾಜ | ತಿಪಟೂರು |
| 48. | 30.10.99 | 4.11.99 | ಛತ್ರ, ಹೊಸಹಳ್ಳಿ | ಮತ್ತೂರು |
| 49. | 16.11.99 | 22.11.99 | ಶಂಕರಕೃಪ, ರಾಜಾರಾವ್ ಮನೆ | ಬೆಂಗಳೂರು |

| | | | | |
|---|---|---|---|---|
| 50. | 30.12.99 | 5.1.00 | ಜಯಂತಿ ಸಪ್ತಾಹ ಪ್ರಾರಂಭ - I | ಹೊ.ನ. ಪುರ |
| 51. | 17.1.00 | 23.1.00 | ಸೀತಾರಾಮಮಂದಿರ | ಅರಸೀಕೆರೆ |
| 52. | 13.2.00 | 19.2.00 | ವಿಘ್ನೇಶ್ವರ ದೇವಸ್ಥಾನ ಬಿ.ಟಿ.ಎಂ. ಲೇಔಟ್ | ಬೆಂಗಳೂರು |
| 53. | 19.3.00 | 26.3.00 | ಕೋದಂಡಾಶ್ರಮ | ಹೆಬ್ಬೂರು |
| 54. | 21.5.00 | 26.5.00 | ಅ.ಪ್ರ.ಕಾ. ಸಪ್ತಾಹ | ಹೊ.ನ. ಪುರ |
| 55. | 25.7.00 | 29.7.00 | ಮತ್ತೂರು ವಿದ್ಯಾರ್ಥಿಗಳಿಗೆ | ಹೊ.ನ. ಪುರ |
| 56. | 14.10.00 | 20.10.00 | ಶಂ.ತತ್ತ್ವಪ್ರಚಾರ ಸಂಘ, ಶಂ.ಕೃಪ | ಬೆಂಗಳೂರು |
| 57. | 16.11.00 | 22.11.00 | ಶಂಕರಕೃಪ, ಜಯನಗರ | ಬೆಂಗಳೂರು |
| 58. | 17.12.00 | 23.12.00 | ಜಯಂತಿ ಸಪ್ತಾಹ II | ಬೆಂಗಳೂರು |
| 59. | 17.1.01 | 26.1.01 | ಭ.ಗೀ. ಪ್ರವಚನ ಶಿಬಿರ I | ಹೊ.ನ. ಪುರ |
| 60. | 13.5.01 | 19.5.01 | ವೇದಾಂತಸಪ್ತಾಹ | ಹೊ.ನ. ಪುರ |
| 61. | 22.5.01 | 29.5.01 | ಗುರುಶಾಂತಾಶ್ರಮ | ದಾವಣಗೆರೆ |
| 62. | 8.7.01 | 17.7.01 | ಭ.ಗೀ. ಪ್ರವಚನ ಶಿಬಿರ II | ಹೊ.ನ. ಪುರ |
| 63. | 20.9.01 | 27.9.01 | ಪಿ.ಇ.ಎಸ್. ಕಾಲೇಜು, ಹ. ನಗರ | ಬೆಂಗಳೂರು |
| 64. | 8.10.01 | 14.10.01 | ಶಂಕರಕೃಪ, ಅ.ಪ್ರ.ಕಾ. | ಬೆಂಗಳೂರು |
| 65. | 5.11.01 | 13.11.01 | ಭ.ಗೀ. ಪ್ರವಚನ ಶಿಬಿರ III | ಹೊ.ನ. ಪುರ |
| 66. | 25.11.01 | 2.12.01 | ಭಾಗವತ ಸಪ್ತಾಹ, ಗಾಯತ್ರಿನಗರ | ಬೆಂಗಳೂರು |
| 67. | 4.1.02 | 10.1.02 | ಜಯಂತಿ ಸಪ್ತಾಹ III | ಹೊ.ನ. ಪುರ |
| 68. | 20.1.02 | 26.1.02 | ಮಾಡಲ್‌ಹೌಸ್ ಬ್ಲಾಕ್ | ಬೆಂಗಳೂರು |
| 69. | 15.4.02 | 21.4.02 | ಕಮ್ಯುನಿಟಿ ಹಾಲ್ | ಕುದುರೆಮುಖ |
| 70. | 23.4.02 | 7.5.02 | ಭ.ಗೀ. ಪ್ರವಚನ ಶಿಬಿರ IV | ಹೊ.ನ. ಪುರ |
| 71. | 25.5.02 | 31.5.02 | ಅ.ಪ್ರ.ಕಾ. | ಹೊ.ನ. ಪುರ |
| 72. | 19.7.02 | 25.7.02 | ಶಂಕರಮಠ, ವಾಸವೀಸಮಾಜ | ತಿಪಟೂರು |
| 73. | 29.7.02 | 4.8.02 | ಯಾಜ್ಞವಲ್ಕ್ಯಾಶ್ರಮ, ಬ್ರ.ಚೈ. ಮಂ. | ಬೆಂಗಳೂರು |
| 74. | 28.9.02 | 4.10.02 | ತೈತ್ತಿರೀಯ ಶಿಬಿರ X | ಹೊ.ನ. ಪುರ |
| 75. | 27.11.02 | 4.12.02 | ಶಂಕರಕೃಪಾ, ದೇವಗಿರಿ ದೇವಸ್ಥಾನ | ಬೆಂಗಳೂರು |
| 76. | 25.12.02 | 3.1.03 | ಜಯಂತಿ ಸಪ್ತಾಹ IV | ಹೊ.ನ. ಪುರ |
| | 10.2.03 | (ವೇ॥ ಚಂದ್ರಮೌಳಿ ಅವಧಾನಿಗಳು ಶಿಷ್ಯರೊಡನೆ ಹೊಳೆನರಸೀಪುರಕ್ಕೆ ಬಂದು ಗುರುಕುಲ ಪುನರಾರಂಭ) | | |

| | | | | |
|---|---|---|---|---|
| 77. | 6.5.03 | 12.5.03 | ಚಿನ್ಮಯಮಿಷನ್, ಶಂಕರಮಠ | ತುಮಕೂರು |
| 78. | 22.5.03 | 28.5.03 | ಅ.ಪ್ರ.ಕಾ. | ಹೊ.ನ. ಪುರ |
| | 18.5.03 | ಬೆಂಗಳೂರಿನಲ್ಲಿ ಗುರಕುಲ ಪ್ರಾರಂಭೋತ್ಸವ ಸಮಾರಂಭ | | |
| 79. | 20.7.03 | 27.7.03 | ಕಾಠಕ ಉ.ತು - ಶಿಬಿರ X | ಹೊ.ನ. ಪುರ |
| | 28.10.03 | ವಿದ್ಯಾನಿಲಯ - ಗುದ್ದಲಿಪೂಜೆ | | |
| 80. | 13.11.03 | 19.11.03 | ಕಾಠಕ ಉ.ತು - ಶಿಬಿರ XI | ಹೊ.ನ. ಪುರ |
| 81. | 15.12.03 | 21.12.03 | ಜಯಂತಿಸಪ್ತಾಹ V | ಹೊ.ನ. ಪುರ |
| 82. | 11.4.04 | 18.4.04 | ಮುಂಡಕ - ಶಿಬಿರ XII | ಹೊ.ನ. ಪುರ |
| | 18.4.04 | (ವಿದ್ಯಾನಿಲಯ ಕಟ್ಟಡ-ಶ್ರೀಶ್ರೀಶಂಕರಭಾರತೀ ಸ್ವಾಮಿಗಳಿಂದ ಉದ್ಘಾಟನೆ) | | |
| 83. | 24.6.04 | 31.6.04 | ಯಾಜ್ಞವಲ್ಕ್ಯಾಶ್ರಮ- ಬ್ರ.ಚೈ.ಮಂ. | ಬೆಂಗಳೂರು |
| 84. | 8.7.04 | 15.7.04 | ಅ.ಪ್ರ.ಕಾ. | ಹೊ.ನ. ಪುರ |
| 85. | 6.10.04 | 12.10.04 | ಕೇನ-ಪ್ರಶ್ನ-ಉ.ತು.-ಶಿಬಿರ XIV | ಮತ್ತೂರು |
| 86. | 3.1.05 | 9.1.05 | ಜಯಂತಿ ಸಪ್ತಾಹ VI | ಹೊ.ನ. ಪುರ |
| 87. | 23.1.05 | 29.1.05 | ಮ.ಸು.ಶೆಟ್ಟಿ ಛತ್ರ - ಶಿಬಿರ XV | ಬೆಂಗಳೂರು |
| 88. | 30.4.05 | 6.5.05 | ಐತರೇಯ-ಶಿಬಿರ XVI | ಹೊ.ನ. ಪುರ |
| 89. | 27.7.05 | 2.8.05 | ಅ.ಪ್ರ.ಕಾ. | ಹೊ.ನ. ಪುರ |
| 90. | 17.10.05 | 23.10.05 | ತೈತ್ತಿರೀಯ ಶಿಬಿರ XVII | ಹೊ.ನ. ಪುರ |
| 91. | 23.12.05 | 29.12.05 | ಜಯಂತಿ ಸಪ್ತಾಹ VII | ಹೊ.ನ. ಪುರ |
| 92. | 10.2.06 | 12.2.06 | ಮುಂ. ಉ.ತು. ಶಿಬಿರ XVIIII | ಶ್ರೀಧರಾಶ್ರಮ, ವರದಹಳ್ಳಿ, ಸಾಗರ |
| 93. | 10.5.06 | 16.5.06 | ಮಾ. ಉ.ತು. ಶಿಬಿರ XIX | ಹೊ.ನ. ಪುರ |
| 94. | 23.7.06 | 29.7.06 | ಸಪ್ತಾಹ, ಅ.ಪ್ರ.ಕಾ. | ಹೊ.ನ. ಪುರ |
| 95. | 12.12.06 | 18.12.06 | ವೇದಾಂತ ಸಪ್ತಾಹ, ಅ.ಪ್ರ.ಕಾ. | ಹೊ.ನ. ಪುರ |

(14.12.2006ರಂದು ಶ್ರೀಶ್ರೀಗಳವರ ಆತ್ಮ ಚರಿತ್ರೆ ಮತ್ತು
ಕಾರ್ಯಾಲಯದ ಇತಿಹಾಸ ಭಾಗ-1 ಗ್ರಂಥ ಪ್ರಕಾಶನ ಸಮಾರಂಭ)


ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ


ಅಧ್ಯಾತ್ಮಪ್ರಕಾಶ ಶಾಖಾಕಾರ್ಯಾಲಯ
ADHYATMA PRAKASHA KARYALAYA
BANGALORE BRANCH
ಅಧ್ಯಾತ್ಮಪ್ರಕಾಶ ಕಾರ್ಯಾಲಯ